

ಯಕ್ಷಚಿಂತನೆ

ಡಾ. ಆನಂದರಾಮ ಉಪಾಧ್ಯ

4

ಯಕ್ಷ ಚಿಂತನೆ

ಡಾ॥ ಆನಂದರಾಮ ಉಪಾಧ್ಯ

ಗೀತಾಂಜಲಿ ಪಬ್ಲಿಕೇಷನ್ಸ್
ನಂ. 60, 2ನೇ 'ಡಿ' ಅಡ್ಡರಸ್ತೆ, 2ನೇ ಹಂತ, 3ನೇ ಬ್ಲಾಕ್,
ನಾಗರಬಾವಿ, ಬೆಂಗಳೂರು–560 072.

YAKSHA CHINTHANE - A Collection of Articles by **Dr. Anandarama Upadhya** & Published by **Smt. Susheela** on behalf of **M/s. Geetanjali Publications**, No.60, 2 'D' Cross, 2nd Stage, 3rd Block, Nagarabhavi, Bangalore - 560 072.

ಯಕ್ಷಗಾನ ಕುರಿತ ಲೇಖನಗಳು

1st Edition : 2015 **Price :** Rs. 200.00 **Pages :** xii+240=252
Paper Used : 70 GSM White Maplitho

ಪ್ರಥಮ ಮುದ್ರಣ : 2015

ಬೆಲೆ : ರೂ. 200.00

ಪುಸ್ತಕ ಮಾರಾಟದ ಹಕ್ಕು : ಪ್ರಕಾಶಕರದ್ದು

ಮುಖಪುಟ : ಡಿ.ಎಸ್. ಗೋದಾವರಿ

ಗೌರವ ಸಂಪಾದಕರು : ನಿಡಸಾಲೆ ಪುಟ್ಟಸ್ವಾಮಯ್ಯ

ಪ್ರತಿಗಳು : 1000

ಪ್ರಕಾಶಕರು :
ಗೀತಾಂಜಲಿ ಪಬ್ಲಿಕೇಷನ್ಸ್
ನಂ. 60, 2ನೇ 'ಡಿ' ಅಡ್ಡರಸ್ತೆ, 2ನೇ ಹಂತ,
3ನೇ ಬ್ಲಾಕ್, ನಾಗರಬಾವಿ, ಬೆಂಗಳೂರು-560 072.

ಒಳಪುಟ ವಿನ್ಯಾಸ / ಮುದ್ರಣ :
ಜಾಗೃತಿ ಪ್ರಿಂಟರ್ಸ್
ನಂ.56/1-6, ನರಸಿಂಹಯ್ಯ ಗಾರ್ಡನ್,
ಕೊಟ್ಟಿಗೆಪಾಳ್ಯ, ಮಾಗಡಿ ಮುಖ್ಯರಸ್ತೆ,
ಬೆಂಗಳೂರು-560 091.
ಫೋನ್ : 080-23583850

ಮುನ್ನುಡಿ

ಯಕ್ಷಗಾನದ ಕುರಿತು ಆಗಾಗ್ಗೆ ಬರೆದ ಲೇಖನಗಳ ಸಂಕಲನವಿದು. ಡಾ. ಆನಂದರಾಮ ಉಪಾಧ್ಯ ಅವರು ಬ್ಯಾಂಕಿಂಗ್ ವೃತ್ತಿಯಲ್ಲಿದ್ದುಕೊಂಡು ಯಕ್ಷಗಾನ ಪ್ರಸಂಗಗಳ ಬಗ್ಗೆ ಎಂ.ಫಿಲ್. ಮತ್ತು ಪಿಹೆಚ್.ಡಿ. ಅಧ್ಯಯನವನ್ನು ಕೈಗೊಂಡವರು. ಈಗ ವೃತ್ತಿಯಿಂದ ನಿವೃತ್ತರಾದ ಮೇಲಂತೂ ಮತ್ತಷ್ಟು ಗಂಭೀರವಾಗಿ ಯಕ್ಷಗಾನ ಚಿಂತನೆಯಲ್ಲಿ ಮುಳುಗಿದ್ದಾರೆ. ಅವರ ಚಿಂತನೆಯಲ್ಲಿ ಯಕ್ಷಗಾನದ ನಿನ್ನೆ, ಇಂದು ಮತ್ತು ನಾಳೆಗಳಿವೆ. ಯಕ್ಷಗಾನದ ಶಬ್ದ–ಸ್ಪರ್ಶ–ರೂಪ–ರಸ–ಗಂಧಗಳನ್ನು ಗ್ರಹಿಸುವ ಪಂಚೇಂದ್ರಿಯ ಪ್ರಜ್ಞೆ ಅವರಿಗೆ ಸಿದ್ಧಿಸಿದೆ. ಕಳೆದ ಸುಮಾರು ಅರ್ಧಶತಮಾನದಲ್ಲಿ ಕಂಡುಬಂದ ಯಕ್ಷಗಾನ ಕಲೆಯ ಇತಿಚಿತ್ರ–ಗತಿಚಿತ್ರಗಳನ್ನು ಅವರು ಈ ಸಂಕಲನದಲ್ಲಿ ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ಕಲಾಮೀಮಾಂಸೆಯಿಂದ ತೊಡಗಿ, ರಂಗದಲ್ಲಿ ಅದರ ನಿರ್ವಹಣೆಯ ತೊಡಕು, ಸಂಶೋಧನೆಯ ವಿವಿಧ ಮಜಲುಗಳು, ಪರಂಪರೆ ಮತ್ತು ಪ್ರಯೋಗ, ಕಲಾವಿದರ ತಪಸ್ಸು, ಹೊರಗಿನವರ ಪ್ರತಿಕ್ರಿಯೆ ಮುಂತಾದ ವಿಭಿನ್ನ ಪಾತಳಿಗಳಿಂದ ಯಕ್ಷಗಾನವನ್ನು ವಿಶ್ಲೇಷಿಸುವ ಧ್ಯಾನಸ್ಥ ಬರೆಹಗಳು ಇಲ್ಲಿ ಸಮಾಹಿತಗೊಂಡಿವೆ. ಈ ಕಾರಣದಿಂದಾಗಿ ಇದೊಂದು ಸಂಗ್ರಹಯೋಗ್ಯವಾದ ಕೃತಿ ; ಸಮಸಾಮಯಿಕ ಚಿಂತನೆಯ ಫಲಶ್ರುತಿ.

'ಸ್ವಾತಂತ್ರ್ಯೋತ್ತರ ಯಕ್ಷಗಾನ ರಂಗಭೂಮಿ' ಎಂಬ ಮೊದಲ ಲೇಖನ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಊಳಿಗಮಾನ್ಯ ವ್ಯವಸ್ಥೆಯ ಶಿಥಿಲತೆ ಮತ್ತು ಶೈಕ್ಷಣಿಕ ಪ್ರಗತಿಗಳಿಂದಾಗಿ ಕರಾವಳಿ ಜಿಲ್ಲೆಗಳಲ್ಲಿ ಬದಲಾವಣೆಯ ಗಾಳಿ ಬೀಸಿತೆಂಬುದನ್ನು ಗ್ರಹಿಸಿದ ಲೇಖಕರು ತತ್ಫಲವಾಗಿ ಯಕ್ಷಗಾನವೂ ಪರಿವರ್ತನೆಗೆ ಒಳಗಾಯಿತೆಂಬುದನ್ನು ವಿಶ್ಲೇಷಿಸಿದ್ದಾರೆ. ವಾಣಿಜ್ಯೀಕರಣದಿಂದಾಗಿ ಡೇರೆಮೇಳಗಳ ಉದಯ, ನೂತನ ಪ್ರಸಂಗಗಳ ರಚನೆ, ಡಾ. ಶಿವರಾಮ ಕಾರಂತರ ಪ್ರಯೋಗ, ತರಬೇತಿ ಕೇಂದ್ರಗಳ ಸ್ಥಾಪನೆ, ಕಾಲಮಿತಿ ಪ್ರದರ್ಶನ, ವಿಚಾರ ಸಂಕಿರಣ, ವಿಮರ್ಶೆ, ಸಂಶೋಧನೆ ಮುಂತಾದ ಅನೇಕ ಗಮನಾರ್ಹ ಬೆಳವಣಿಗೆಗಳು ಈ ಕಾಲಘಟ್ಟದಲ್ಲಿ

ಕಂಡುಬಂದವು. ಯಕ್ಷಗಾನದ ಕಡೆಗೆ ವಿದ್ಯಾವಂತರ ಕಣ್ಣು ಹರಿಯಿತು. ಹೊಸ ರಂಗ ಸಾಧ್ಯತೆಗಳ ಕಡೆಗೆ ಕವಿ–ಕಲಾವಿದರು ಆಲೋಚಿಸುವಂತಾಯಿತು. ವಿಶ್ವ ವಿದ್ಯಾನಿಲಯಗಳಲ್ಲಿ ಹಲವಾರು ವಿಷಯಗಳ ಕುರಿತು ಸಂಶೋಧನೆಗಳು ನಡೆದವು. ಅನೇಕ ಕಲಾವಿದರು ಕಲಾಸ್ವರೂಪಕ್ಕೆ ಹೊಸಕಾಂತಿಯನ್ನು ತಂದುಕೊಟ್ಟರು. ಮಕ್ಕಳ ಮೇಳ, ಮಹಿಳೆಯರ ತಂಡ, ಏಕವ್ಯಕ್ತಿ ಪ್ರದರ್ಶನ, ಅವಧಾನ ಪಾಟವ ಮುಂತಾದ ಪ್ರಯೋಗಗಳು ಯಕ್ಷಗಾನಕ್ಕೆ ಸೃಜನಶೀಲ ಆಯಾಮಗಳನ್ನು ತಂದುಕೊಟ್ಟವು. ಈ ಬೆಳವಣಿಗೆಗಳ ನಡುವೆ ಯಕ್ಷಗಾನದ ಪಾರಂಪರಿಕ ಚೆಲುವಿಗೆ ಅಲ್ಲಲ್ಲಿ ಒಂದಷ್ಟು ಆಘಾತವೂ ಉಂಟಾಗಿದ್ದು ಸತ್ಯ. ಹೊಸತನದ ಹುಚ್ಚಿನಲ್ಲಿ ಅನೇಕ ವಿಕೃತಿಗಳೂ ಯಕ್ಷಗಾನದ ಅಂದವನ್ನು ಕೆಡಿಸಿವೆ. ಈ ಎಲ್ಲ ಧನಾತ್ಮಕ–ಋಣಾತ್ಮಕ ಬದಲಾವಣೆ ಗಳನ್ನು ಒಂದೊಂದಾಗಿ ನಮ್ಮ ಕಣ್ಣಮುಂದೆ ತಂದು, ಯಕ್ಷಗಾನದ ಹೆಜ್ಜೆ ಗುರುತುಗಳು ಮೂಡಿದ ಹಾದಿಯನ್ನು ಅವಲೋಕಿಸುವಂತೆ ಮಾಡುವ ಈ ಲೇಖನ ಔಚಿತ್ಯ ಪೂರ್ಣವಾಗಿದೆ.

ಯಕ್ಷಗಾನದ ಸಂಶೋಧನೆಯ ಮಜಲುಗಳನ್ನು ತಿಳಿಸುವ ಲೇಖನವೂ ಗಮನಾರ್ಹ. ಬಿ.ಎಲ್. ರೈಸ್ ಅವರು 'ಕರ್ನಾಟಕ ಶಬ್ದಾನುಶಾಸನ'ದ ಪೀಠಿಕೆಯಲ್ಲಿ ಮಾಡಿದ ಉಲ್ಲೇಖ (1860), ಐರೋಡಿ ಶಿವರಾಮಯ್ಯನವರು ಕವಿ ಹಟ್ಟಿಯಂಗಡಿ ರಾಮಭಟ್ಟನ ಕುರಿತು ಬರೆದ ಲೇಖನ (1924), ಸೇಡಿಯಾಪು ಕೃಷ್ಣಭಟ್ಟರು ತಾಳಮದ್ದಳೆಯ ಕುರಿತು ಬರೆದ ಲೇಖನ (1930), ಡಾ. ವಿ. ರಾಘವನ್ ಅವರು ಮದರಾಸಿನ ತ್ರಿವೇಣಿ ಪತ್ರಿಕೆಯಲ್ಲಿ ಬರೆದ ಲೇಖನ (1934), ಮುಳಿಯ ತಿಮ್ಮಪ್ಪಯ್ಯ ನವರ 'ಪಾರ್ತಿಸುಬ್ಬ' ಕೃತಿ (1945), ಜಿ.ಆರ್. ಪಾಂಡೇಶ್ವರ ಅವರು ಶಿರಸಿಯಲ್ಲಿ ಮಾಡಿದ ಸಮ್ಮೇಳನಾಧ್ಯಕ್ಷ ಭಾಷಣ (1949), ಡಾ. ಶಿವರಾಮ ಕಾರಂತರು ಬರೆದ 'ಯಕ್ಷಗಾನ ಬಯಲಾಟ' ಗ್ರಂಥ (1957) – ಹೀಗೆ ಮೊದಲಾದ ಯಕ್ಷಗಾನ ಅಧ್ಯಯನ ಅನಂತರದ ಕಾಲಘಟ್ಟದಲ್ಲಿ ಅಭಿನಂದನ ಗ್ರಂಥಗಳು, ಪಿಹೆಚ್.ಡಿ. ಪ್ರಬಂಧಗಳು, ಆತ್ಮಕಥನಗಳು, ಪ್ರಸಂಗ ಸಂಪುಟಗಳು ಮುಂತಾದ ವಿಸ್ತಾರವನ್ನು ಪಡೆದಿದೆ. ಯಕ್ಷಗಾನ ಕಲೆಯ ವಿವಿಧಾಂಗಗಳು ವಿದ್ವಜ್ಜನರ ಆಸಕ್ತಿಯ ಕ್ಷೇತ್ರಗಳಾಗಿ ಗಂಭೀರವಾದ ಚರ್ಚೆಗಳನ್ನು ಹುಟ್ಟು ಹಾಕಿದ್ದು ಕನ್ನಡ ಸಾಹಿತ್ಯೇತಿಹಾಸದ ಗಮನಾರ್ಹ ಸಂಗತಿಗಳೆನ್ನುವುದನ್ನು ಮರೆಯಬಾರದು. ಯಕ್ಷಗಾನ ಶಬ್ದದ ವ್ಯುತ್ಪತ್ತಿ, ಅದರ ಶಾಸ್ತ್ರೀಯ – ಜಾನಪದ ಚರ್ಚೆ, ಪಾರ್ತಿಸುಬ್ಬನ ವಿಚಾರವಾಗಿ ನಡೆದ ವಾಗ್ವಾದಗಳು ಕನ್ನಡ ಸಂಸ್ಕೃತಿಯ ಅನುಸಂಧಾನದಲ್ಲಿ ಮಹತ್ವಪೂರ್ಣ ಸಂವಾದಗಳೆನಿಸಿವೆ.

'ಯಕ್ಷಗಾನದ ಇಬ್ಬರು ಶ್ರೇಷ್ಠ ಹಿರಿಯರು' ಲೇಖನದಲ್ಲಿ ತೆಂಕುತಿಟ್ಟಿನ ಕುರಿಯ ವಿಠಲಶಾಸ್ತ್ರಿ ಮತ್ತು ಬಡಗುತಿಟ್ಟಿನ ಕರ್ಕಿ ಪರಮಯ್ಯ ಹಾಸ್ಯಗಾರ ಇವರ ಕೊಡುಗೆಗಳನ್ನು ಇಲ್ಲಿ ದಾಖಲಿಸಲಾಗಿದೆ. ಯಕ್ಷಗಾನ ಪ್ರಯೋಗ ಪರಂಪರೆಯಲ್ಲಿ ಮುಖ್ಯವಾದ ಡಾ. ಶಿವರಾಮ ಕಾರಂತರ ಬ್ಯಾಲೆ, ಅದರ ಪುನರವತರಣ, ಮಂಟಪ

ಪ್ರಭಾಕರ ಉಪಾಧ್ಯರ ಏಕವ್ಯಕ್ತಿ ಪ್ರದರ್ಶನ ಇವುಗಳ ಕುರಿತಾದ ವಿಶ್ಲೇಷಣೆಗಳೂ ಈ ಕೃತಿಯ ಸಾರಭಾಗವೆನಿಸಿವೆ. ಡಾ. ಕಾರಂತರ ಬ್ಯಾಲೆಗಳ ಸತ್ತ್ವಸಿದ್ಧಿಯಿಂದಾಗಿ ಯಕ್ಷಗಾನವು ಅಂತಾರಾಷ್ಟ್ರೀಯ ಮಟ್ಟದ ವಿದ್ವಾಂಸರ ಗಮನವನ್ನು ಸೆಳೆಯು ವಂತಾಗಿದ್ದು ಈಗ ಇತಿಹಾಸ. ಆದರೆ ಡಾ. ಕಾರಂತರ ನಿಧನಾನಂತರ ಅದು ತೆರೆಮರೆಗೆ ಸರಿದಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು. ಈಗ ಅದು ಮತ್ತೆ ರಂಗವೇರಿರುವುದು ಸ್ವಾಗತಾರ್ಹ ಎನ್ನುವುದರಲ್ಲಿ ಎರಡು ಮಾತಿಲ್ಲ. ಬೆಂಗಳೂರಿನ ಶ್ರೀನಿವಾಸ ಸಾಸ್ತಾನರ 'ಕರ್ನಾಟಕ ಕಲಾದರ್ಶಿನಿ'ಯಿಂದ ಅದು ಸಾಧ್ಯವಾಗಿರುವುದು ಸಂಸ್ಕೃತಿ ಪ್ರಿಯರಿಗೆ ಹರ್ಷದಾಯಕ ಸಂಗತಿಯೇ ಸರಿ. (ಈ ಬೆಳವಣಿಗೆಗೆ ಈ ಮುನ್ನುಡಿಕಾರನೂ ಅಳಿಲು ಸೇವೆ ಮಾಡಿದ್ದಾನೆಂಬುದನ್ನು ಇಲ್ಲಿ ಸ್ಮರಿಸಬಹುದು. ಬೆಂಗಳೂರಿನಲ್ಲಿ ನಡೆದ ಡಾ. ಶಿವರಾಮ ಕಾರಂತ ಸಂಸ್ಮರಣ ಕಾರ್ಯಕ್ರಮವೊಂದ ರಲ್ಲಿ (2012) ಉದ್ಘಾಟನಾ ಭಾಷಣ ಮಾಡುತ್ತಾ ನಾನು 'ಡಾ. ಕಾರಂತರ ಕೃತಿಸ್ವಾಮ್ಯ ಹೊಂದಿದವರು ಅವರ ಬ್ಯಾಲೆಯನ್ನು ಹೊಸ ಪೀಳಿಗೆಗೆ ಪರಿಚಯಿಸುವ ಕಡೆಗೆ ಉದಾಸೀನ ತೋರಬಾರದು' ಎಂದು ಹೇಳಿದ್ದೆ. ಶ್ರೀಮತಿ ಮಾಲಿನಿ ಮಲ್ಯರು ಕರ್ನಾಟಕ ಕಲಾದರ್ಶಿನಿ ತಂಡಕ್ಕೆ ಕಾರಂತ ಬ್ಯಾಲೆಯನ್ನು ಪ್ರದರ್ಶಿಸಲು ಅನುಮತಿ ನೀಡಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾದರು. ಅವರಿಗೆ ನನ್ನ ಅಭಿನಂದನೆಗಳು) ಅಂತೆಯೇ ಮಂಟಪ ಪ್ರಭಾಕರ ಉಪಾಧ್ಯರ 'ಏಕವ್ಯಕ್ತಿ ಪ್ರದರ್ಶನ'ದ ಹಿನ್ನೆಲೆಯ ಸೂತ್ರಧಾರ ಡಾ.ಆರ್. ಗಣೇಶ್ ಅವರೊಂದಿಗಿನ ಸಂದರ್ಶನ, ಸ್ತ್ರೀಪಾತ್ರದ ವಿಭಿನ್ನ ಸಾಧ್ಯತೆಗಳ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸಿದ ಮಂಟಪ ಅವರ ಸಂದರ್ಶನ ಇತ್ಯಾದಿಗಳು ಯಕ್ಷಗಾನ ಚಿಂತನೆಯ ಅನೇಕ ಅಂಶಗಳನ್ನು ಒಳಗೊಂಡಿವೆ. ಕನ್ನಡದ ಸುಪ್ರಸಿದ್ಧ ಕವಿ – ನಾಟಕಕಾರ ಡಾ. ಎಚ್.ಎಸ್. ವೆಂಕಟೇಶಮೂರ್ತಿ ಅವರು ಯಕ್ಷಲೋಕಕ್ಕೆ ಪ್ರತಿಕ್ರಿಯಿಸಿದ ರೀತಿಯೂ ಅನನ್ಯವಾಗಿದೆ. ಗಮಕ ಮತ್ತು ಯಕ್ಷಗಾನದ ಸಂಬಂಧ, ಕನ್ನಡ ನಾಟಕದ ಮೇಲೆ ಯಕ್ಷಗಾನದ ಪ್ರಭಾವ, ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದಿಂದ ದೊರೆತ ಪ್ರೇರಣೆ ಮುಂತಾದ ಮಹತ್ತ್ವದ ಅಂಶಗಳನ್ನು ಅವರೊಂದಿಗಿನ ಮಾತುಕತೆ ದಾಖಲಿಸಿದೆ. ಯಕ್ಷಗಾನ ವಲಯದ ಹೊರಗಿನ ಧೀಮಂತರೊಬ್ಬರು ನುಡಿದ ಈ ಮುತ್ತಿನ ಮಾತುಗಳು ನಮಗೆ ಹೆಮ್ಮೆಯನ್ನುಂಟುಮಾಡುತ್ತವೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅವಜ್ಞೆಗೆ ಗುರಿಯಾದ ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಕುರಿತು ಬರೆದ ಲೇಖನಗಳೂ ಗಂಭೀರ ಅಧ್ಯಯನದ ಫಲಶ್ರುತಿಗಳು. 'ಪ್ರಸಂಗ ಸಾಹಿತ್ಯದಲ್ಲಿ ಕೌಟುಂಬಿಕ ಚಿತ್ರಣ' ಎಂಬ ಲೇಖನದಲ್ಲಿ ಸಂಬಂಧ ಸಾಮರಸ್ಯ, ಕೌಟುಂಬಿಕ ಮೌಲ್ಯ, ಹೆಣ್ಣಿನ ಸ್ಥಾನಮಾನ, ಸಂಸ್ಕೃತಿ ಚಿತ್ರಣಗಳು ಮುಂತಾದ ಅಂಶಗಳು ಹೃದಯಂಗಮವಾಗಿವೆ. ಸಾಹಿತ್ಯದ ಮೂಲಕ ಜನಸಮುದಾಯಕ್ಕೆ ಪ್ರವಹಿಸುವ 'ಅಂತಃಪ್ರವಾಹ ಕ್ರಿಯೆ'ಯನ್ನು ಯಕ್ಷಗಾನದ ಮೂಲಕ ಇಲ್ಲಿ ಗುರುತಿಸ ಲಾಗಿದೆ. ನೂತನ ಪ್ರಸಂಗಗಳನ್ನು ರಚಿಸುವ ಕವಿಗಳು ಇದನ್ನು ಗಮನಿಸಬೇಕು.

ರಂಗಪಠ್ಯದ ಆಯ್ಕೆಯಿಂದಾಗಿ ಇಂತಹ ಸಾಂಸ್ಕೃತಿಕ ಮೌಲ್ಯದ ಅನೇಕ ಪದ್ಯಗಳು ಇಂದು ಮರೆಯಾಗುತ್ತಿರುವುದು ವಿಷಾದಕರ. ಈ ಹಿನ್ನೆಲೆಯಲ್ಲಿ ಹಳೆಯ ಪ್ರಸಂಗಗಳ ಶಾಸ್ತ್ರೀಯ ಸಂಪಾದನೆ ಆಗಬೇಕೆಂಬ ಲೇಖಕರ ಕಳಕಳಿ ಸ್ವಾಗತಾರ್ಹವಾದುದು.

ಹಾಸ್ಯಕ್ಕೆ ಮನ್ನಣೆ ತಂದ ಕುಂಜಾಲು, ಕಲಾಪ್ರಸರಣಕ್ಕೆ ಕಟಿಬದ್ಧರಾದ ಬೇಗಾರು ಶಿವಕುಮಾರ, ಏಕವ್ಯಕ್ತಿ ಪ್ರದರ್ಶನದ ಹಿಮ್ಮೇಳ ಕಲಾವಿದರಾದ ಭಾಗವತ ವಿದ್ವಾನ್ ಗಣಪತಿ ಭಟ್, ಅನಂತ ಪದ್ಮನಾಭ ಪಾಠಕ್, ಕೃಷ್ಣಯಾಜಿ ಮುಂತಾದವರ ಕುರಿತಾದ ವ್ಯಕ್ತಿಚಿತ್ರಗಳು ಆಪ್ತವಾಗಿವೆ. ಜೊತೆಗೆ 'ಒಡ್ಡೋಲಗ', 'ಕೆರೆಮನೆ ಶಂಭುಹೆಗಡೆ ಅಧ್ಯಯನ' ಕೃತಿ ವಿಮರ್ಶೆಗಳೂ ಮೌಲಿಕವಾಗಿವೆ.

ಗ್ರಂಥದ ಉತ್ತರಾರ್ಧದಲ್ಲಿರುವ ಸೇಡಿಯಾಪು ಅವರ ಕಾವ್ಯ, ಗೋಕಾಕರ ಸಾಹಿತ್ಯ, ಕನ್ನಡ ಸಾಹಿತ್ಯ ಹಾಗೂ ಕರ್ನಾಟಕ ಸಂಸ್ಕೃತಿ, ಸೂರ್ಯನಾರಾಯಣ ಅಡಿಗರ ನೂರರ ನೆನಪು – ಈ ನಾಲ್ಕು ಲೇಖನಗಳೂ ಯಕ್ಷಗಾನಕ್ಕೆ ದೂರ ವೆನಿಸಿದರೂ ಯಕ್ಷಗಾನ ಪ್ರಿಯರಿಗೆ ಹತ್ತಿರವಾಗುವಂತಹುವುಗಳೇ ಆಗಿವೆ. ಸೇಡಿಯಾಪು ಮತ್ತು ಗೋಕಾಕರ ಕಾವ್ಯಪಂಕ್ತಿಗಳು ಯಕ್ಷಗಾನದ ವಾಗರ್ಥವೈಭವಕ್ಕೆ ಪೂರಕವಾಗಿವೆ. ಕನ್ನಡ ಸಂಸ್ಕೃತಿಯನ್ನು ಬಿತ್ತರಿಸುವ ಶ್ರೀ ವಿಜಯ, ಪಂಪ, ಬಸವಣ್ಣ, ಕನಕಪುರಂದರರ ನುಡಿಮುತ್ತುಗಳು ಯಕ್ಷಗಾನ ಕವಿಗಳಿಗೂ ಸ್ಫೂರ್ತಿ ನೀಡಿವೆ. ಸೂರ್ಯನಾರಾಯಣ ಅಡಿಗರಂತೂ ಕರಾವಳಿ ಭಾಗದ ಜನರಿಗೆ ಪ್ರಾತಃಸ್ಮರಣೀಯರು. ಯಕ್ಷಗಾನ ತಪಸ್ವಿಗಳಾದ ಕಾರಂತ, ಕುಶಿಯಂತಹವರ ಆತ್ಮೀಯರು. ಹಾಗಾಗಿ ಪೂರ್ವೋತ್ತರ ಭಾಗಗಳಲ್ಲಿ ಅಂತರವಿದೆಯೆಂದು ತೋರುವುದಿಲ್ಲ. ಪೂರ್ವಕ್ಕೆ ಪಶ್ಚಿಮ ಮಾತ್ರ ದೂರ ; ಉತ್ತರ ಹತ್ತಿರವೇ !

ಡಾ. ಆನಂದರಾಮ ಉಪಾಧ್ಯರಲ್ಲಿ ಯಕ್ಷಗಾನವು ಊರಿನ ಕಲೆಯೆಂಬ ಪ್ರೀತಿ ಮಾತ್ರವಲ್ಲ ; ಅದು ನಾಡಿನ ಕಲೆಯಾಗಬೇಕೆಂಬ ಕಳಕಳಿ ಗಾಢವಾಗಿದೆ. ಈ ಗ್ರಂಥದ ಪುಟಪುಟಗಳೂ ಅದಕ್ಕೆ ಸಾಕ್ಷಿಯಾಗಿವೆ. ಇಂತಹ ಅಧ್ಯಯನಪೂರ್ಣ ಕೃತಿಯನ್ನು ನೀಡಿದುದಕ್ಕಾಗಿ ಅವರಿಗೆ ಕನ್ನಡಿಗರೆಲ್ಲರ ಅಭಿನಂದನೆ ಸಲ್ಲಬೇಕು.

10–08–2015

– ಕಬ್ಬಿನಾಲೆ ವಸಂತ ಭಾರದ್ವಾಜ

ಅರಿಕೆ

ಕಳೆದ ಹದಿನೈದು ವರ್ಷಗಳ ಅವಧಿಯಲ್ಲಿ ಯಕ್ಷಗಾನ ಕುರಿತ ನನ್ನ ಯೋಚನೆಗಳು, ವಿಚಾರಗಳು ಇದೀಗ 'ಯಕ್ಷ ಚಿಂತನೆ' ಎಂಬ ಹೆಸರಿನಲ್ಲಿ ನಿಮ್ಮ ಕೈ ಸೇರುತ್ತಿದೆ. ಇಲ್ಲಿ ಯಕ್ಷಗಾನ ರಂಗಭೂಮಿಗೆ ಸಂಬಂಧಿಸಿದಂತೆ ಇಪ್ಪತ್ತು ಲೇಖನಗಳಿದ್ದರೆ ಉಳಿದಂತೆಲ್ಲ ಯಕ್ಷಗಾನ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಬರೆಹಗಳಾಗಿವೆ. ಭಾರತದ ಅರವತ್ತನೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಕರ್ನಾಟಕ ಸರಕಾರ ಉದ್ದೇಶಿಸಿದ ಎಲ್ಲಾ ರಂಗಗಳ ಸಮೀಕ್ಷೆ ರೂಪದ ಸಂಕಲನದಲ್ಲಿ ಯಕ್ಷಗಾನವನ್ನು ಪ್ರತಿನಿಧಿಸುವ ಲೇಖನ ಮೊತ್ತ ಮೊದಲಿಗೆ ಬಂದಿದೆ. ಇಲ್ಲಿನ ಹೆಚ್ಚಿನ ಬರೆಹಗಳು ಯಕ್ಷಗಾನ ಕುರಿತಾದ ವಿಚಾರಸಂಕಿರಣಗಳಿಗಾಗಿ ಬರೆದವುಗಳಾಗಿವೆ. ಕೆಲವು ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟವಾದವು. 'ಏಕವ್ಯಕ್ತಿ ಯಕ್ಷಗಾನ' ಕುರಿತಾದ ನಾಲ್ಕು ಲೇಖನಗಳು 'ಯಕ್ಷರಂಗ' ಮಾಸಪತ್ರಿಕೆಯ ವಿಶೇಷ ಸಂಚಿಕೆಗಾಗಿ ರಚಿತಗೊಂಡವು. ಹೀಗೆ ವಿಭಿನ್ನ ನೆಲೆಗಳಲ್ಲಿ ರೂಪು ತಳೆದ ಬರೆಹಗಳನ್ನು ಒಂದೆಡೆ ಕಲೆಹಾಕುವ ಪ್ರಯತ್ನ ಇದಾಗಿದೆ.

ಇಲ್ಲಿನ ಲೇಖನಗಳ ರಚನೆಗೆ ಅಸಂಖ್ಯರು ಕಾರಣರಾಗಿದ್ದಾರೆ. ಇವರಲ್ಲಿ ಎಂ.ಎನ್. ವ್ಯಾಸರಾವ್, ತಾಳ್ತಜೆ ವಸಂತಕುಮಾರ್, ಎಂ. ಜಯರಾಮ ಅಡಿಗ, ಅರ್ತಿಕಜೆ ಕೃಷ್ಣಭಟ್, ಕೆರೆಮನೆ ಶಿವಾನಂದ ಹೆಗಡೆ, ಎಚ್.ಬಿ.ಎನ್. ರಾವ್, ಶ್ರೀಧರ ಹಂದೆ, ಎಸ್.ಎನ್. ಪಂಜಾಜೆ, ಶ್ರೀನಿವಾಸ ಸಾಸ್ತಾನ, ಪಾ. ಚಂದ್ರಶೇಖರ ಚಡಗ, ಆನಂದ ಸಭಾಪತಿ, ಕೆ.ಎಲ್. ರವಿಶಂಕರ ಉಪಾಧ್ಯ, ಬೇಗಾರ್ ಶಿವಕುಮಾರ್, ರಾಧಾಕೃಷ್ಣ ಉರಾಳ ಮುಂತಾದವರು ಮುಖ್ಯರು. ಇವರೆಲ್ಲರಿಗೆ ನನ್ನ ಕೃತಜ್ಞತೆಯ ನೆನಕೆಗಳು. ಅದೇ ರೀತಿ ವಿಜಯವಾಣಿ, ಪ್ರಜಾವಾಣಿ, ಯಕ್ಷರಂಗ, ಹರ್ಷವಾಣಿ, ಇಷುಧಿ ಮುಂತಾದ ಪತ್ರಿಕೆಗಳು ಮತ್ತು ಮದ್ರಾಸ್ ವಿಶ್ವವಿದ್ಯಾಲಯ, ಮುಂಬಯಿಯ ಯಕ್ಷಗಾನ ಪದವೀಧರ ಸಮಿತಿ, ಮಧುರೈ ವಿಶ್ವವಿದ್ಯಾಲಯ, ಸುಚಿತ್ರ ಕಲಾಕೇಂದ್ರ, ಶಿವರಾಮ ಕಾರಂತ ವೇದಿಕೆ, ಭಾರತೀಯ ವಿದ್ಯಾಭವನ ಮುಂತಾದ ಸಂಸ್ಥೆಗಳು ನೀಡಿದ ಪ್ರೋತ್ಸಾಹಕ್ಕೆ ವಂದನೆಗಳು.

ಯಕ್ಷಗಾನದ ಅಂಗೋಪಾಂಗಗಳಿಗೆ ಸಂಬಂಧಿಸಿದ ಇಲ್ಲಿನ ಲೇಖನಗಳು ವಿಭಿನ್ನ ಕಾಲಘಟ್ಟದಲ್ಲಿ, ವಿಭಿನ್ನ ಸಂದರ್ಭಕ್ಕೆ, ವಿಭಿನ್ನ ಉದ್ದೇಶಗಳಿಗಾಗಿ ಬರೆದವುಗಳಾಗಿವೆ. ಈ ಕಾರಣ ಕೆಲವು ಅಭಿಪ್ರಾಯಗಳ ಪುನರುಕ್ತಿ ಅನಿವಾರ್ಯವಾಗಿದೆ. ಲೇಖನಗಳ ಹರವು ಹದಿನೈರ್ಷಗಳಾದ್ದರಿಂದ ಇದು ಘಟಿಸಿದೆ. ಕಲಾವಿದರನ್ನು, ಮೇಳಗಳನ್ನು, ಸಂಸ್ಥೆಗಳನ್ನು ಹೆಸರಿಸುವಾಗ ಕೆಲವೊಮ್ಮೆ ಕೆಲವು ಹೆಸರುಗಳು ಬಾರದಿರುವ ಸಾಧ್ಯತೆ ಇದೆ. ಇದಕ್ಕೆ ವಿಸ್ತಾರವೇ ಕಾರಣ ಹೊರತು ಅನ್ಯವಿಲ್ಲ.

ಈ 'ಯಕ್ಷಗಾನ ಚಿಂತನೆ' ಹೊರಬರಲು ಕಾರಣರಾದವರು ನನ್ನ ಇಬ್ಬರು ಆತ್ಮೀಯ ಗೆಳೆಯರಾದ ಪ್ರಸಿದ್ಧ ಕವಿ ಡಾ॥ ಎಚ್.ಎಸ್. ವೆಂಕಟೇಶಮೂರ್ತಿ ಹಾಗೂ ಪ್ರಖ್ಯಾತ ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ. ನನ್ನ ಬರವಣಿಗೆಯ ಪ್ರೇರಕ ಶಕ್ತಿಯಾಗಿರುವ ಇವರಿಬ್ಬರನ್ನೂ ಪ್ರೀತಿಯಿಂದ ನೆನಸಿಕೊಳ್ಳುತ್ತೇನೆ. ಈ ಕೃತಿಯನ್ನು ಅಂದವಾಗಿ ಸಿದ್ಧಪಡಿಸಿದವರು ನನ್ನ ಮತ್ತೊಬ್ಬ ಗೆಳೆಯರಾದ ಆರ್. ಚಂದ್ರಶೇಖರ್. ಅವರಿಗೆ ನಾನು ಆಭಾರಿ. ಈ ಪುಸ್ತಕವನ್ನು ಪ್ರಕಟಿಸುತ್ತಿರುವ ಗೀತಾಂಜಲಿ ಪಬ್ಲಿಕೇಶನ್ ಅವರಿಗೆ ನನ್ನ ಕೃತಜ್ಞತೆಗಳು. ಮುಖಪುಟ ವಿನ್ಯಾಸಕರಾದ .... ಅವರಿಗೂ ಭಾವಚಿತ್ರ ಒದಗಿಸಿದ ಗೋವಿಂದ ಸಾಮ್ರಾಟರಿಗೂ ಕೃತಜ್ಞ.

ಯಕ್ಷಗಾನಕ್ಕೆ ಸಂಬಂಧಿಸಿದ ಈ ಹೊತ್ತಿಗೆಗೆ ಮುನ್ನುಡಿಯನ್ನು ಬರೆದುಕೊಡಬೇಕೆಂದು ಖ್ಯಾತ ಯಕ್ಷಗಾನ ವಿದ್ವಾಂಸರು, ಚಿಂತಕರು, ಕವಿಗಳು, ಅರ್ಥಧಾರಿಗಳು ಆಗಿರುವ ಡಾ॥ ಕಬ್ಬಿನಾಲೆ ವಸಂತ ಭಾರಧ್ವಾಜರನ್ನು ಕೋರಿಕೊಂಡಾಗ ಸಂತೋಷದಿಂದ ಒಪ್ಪಿ ಮುನ್ನುಡಿಯನ್ನು ಕೊಟ್ಟು ಸಹಕರಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತಾ ಪೂರ್ವಕ ವಂದನೆಗಳು.

ನನ್ನ ಬಾಳ ಸಂಗಾತಿಯಾದ 'ಪ್ರೇಮಾ' ಕಳೆದ ಮೂವತ್ತೇಳು ವರ್ಷಗಳಿಂದ ನನ್ನ ಬರವಣಿಗೆಗೆ ಸದಾ ಸಹಾಯ ಹಸ್ತವನ್ನು ನೀಡುತ್ತ ಬಂದಿದ್ದಾಳೆ. ಅವಳಿಗೆ ಈ ಪುಸ್ತಕವನ್ನು ಪ್ರೀತಿಯ ದ್ಯೋತಕವಾಗಿ ಅರ್ಪಿಸುತ್ತಿದ್ದೇನೆ. ನನ್ನ ಮಗಳು ಸೀಮಂತಿನಿ, ಅಳಿಯ ವೆಂಕಟೇಶ್, ಮೊಮ್ಮಗ ಆರ್ಣವ ಇವರೆಲ್ಲರಿಗೆ ನನ್ನ ಪ್ರೀತಿಯ ನೆನಕೆಗಳು.

15.08.2015
ಬೆಂಗಳೂರು

ಡಾ॥ ಆನಂದರಾಮ ಉಪಾಧ್ಯ

ಅರ್ಪಣೆ

ಬಾಳಸಂಗಾತಿಯಾಗಿ

ನನ್ನ ಎಲ್ಲಾ ಸಾಧನಗೆಳ ಹಿಂದಿನ ಶಕ್ತಿಯಾದ

ಪ್ರೀತಿಯ ಮಡದಿ

ಪ್ರೇಮಾಳಿಗೆ.

ಪರಿವಿಡಿ

ಭಾಗ–1

ಭಾಗ–2

ಭಾಗ–1

ಭಾಗ–2

ಸ್ವಾತಂತ್ರ್ಯೋತ್ತರ ಯಕ್ಷಗಾನ ರಂಗಭೂಮಿ

ಯಕ್ಷಗಾನ ಕರ್ನಾಟಕದ ಗಂಡುಕಲೆ. ಭಾರತದ ದಕ್ಷಿಣಾಪಥದಲ್ಲಿ ನೆಲೆಸಿರುವ ದ್ರಾವಿಡ ವರ್ಗದ ಒಂದು ಸೀಳಾದ ಕನ್ನಡಿಗರು ಪರಂಪರಾಗತವಾದ ಕಲೆಗಳನ್ನೆಲ್ಲ ಪೋಷಿಸಿಕೊಂಡು ಬಂದವರು. ಯಕ್ಷಗಾನ ಕನ್ನಡಿಗರ ಹೆಮ್ಮೆಯ ಕಲೆಗಳಲ್ಲಿ ಒಂದು. ಈ ನಾಡಿನ ಜನಪ್ರಿಯ ಕಲಾಪ್ರಕಾರಗಳಲ್ಲಿ "ಯಕ್ಷಗಾನ ರಂಗಭೂಮಿ"ಗೆ ಮಹತ್ವದ ಸ್ಥಾನವಿದೆ. ಜನಪದ ರಂಗಭೂಮಿಯ ಎಲ್ಲ ಲಕ್ಷಣಗಳನ್ನೂ ಒಳಗೊಂಡಿರುವ "ಯಕ್ಷಗಾನ" ಸಂಪ್ರದಾಯದ ಚೌಕಟ್ಟಿನಲ್ಲೇ ಬೆಳೆದು ಬಂದಿದೆ. ಸಾಹಿತ್ಯ, ಸಂಗೀತ, ಬಣ್ಣಗಾರಿಕೆ, ಅಭಿನಯ, ನರ್ತನಗಳು ಇಲ್ಲಿ ಏಕತ್ರ ಸಂಧಿಸಿ ಶ್ರೀಮಂತ, ಸುಂದರ ಕಲೆ ಎಂದೇ ಗುರುತಿಸಿಕೊಂಡಿದೆ. ಕರ್ನಾಟಕ ಸಂಸ್ಕೃತಿಯ ಪಡಿನೆಳಲನ್ನು ಇಲ್ಲಿ ಕಾಣಬಹುದು.

ಇತಿಹಾಸ :

ಮೂಲತಃ ದೇಸೀ ಶೈಲಿಯ ಕಲೆಯಾದ ಯಕ್ಷಗಾನ ಜನಪದರ ಉತ್ಕೃಷ್ಟ ಸೃಜನಶೀಲತೆಗೆ ಸಾಕ್ಷಿಯಾಗಿದೆ. ಯಕ್ಷಗಾನದ ಪ್ರಾಚೀನತೆಯನ್ನು ಕುಣಿತ, ವೇಷಗಾರಿಕೆ, ಹಾಡಿನ ಮಟ್ಟುಗಳು ಎತ್ತಿಹಿಡಿಯುತ್ತವೆ. ಕರ್ನಾಟಕದ ಹೊರಗೂ ಇದೇ ಬಗೆಯ ಕಲಾಪ್ರಕಾರಗಳು ಈ ಕಾಲಮಾನದ ಆಸುಪಾಸಿನಲ್ಲಿ ಅಸ್ತಿತ್ವದಲ್ಲಿರುವುದು ಕಂಡುಬರುತ್ತದೆ. ಕಥಕ್ಕಳಿ, ಕೂಚುಪುಡಿ, ತೆರಕ್ಕೂತು, ವೀಧಿನಾಟಕಂ, ಕೊಡಿಯಾಟ್ಟಂ ಮುಂತಾದವುಗಳೆಲ್ಲ ಒಂದಿಲ್ಲೊಂದು ಬಗೆಯಿಂದ ಯಕ್ಷಗಾನದೊಂದಿಗೆ ಸಮೀಕರಿಸಿಕೊಳ್ಳುತ್ತವೆ. ಕರ್ನಾಟಕದಲ್ಲೂ

ಯಕ್ಷಗಾನ ನಾನಾ ಪ್ರಭೇದಗಳೊಂದಿಗೆ ಕಾಣಿಸಿಕೊಳ್ಳುತ್ತಿದೆ. ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಸಣ್ಣಾಟ, ದೊಡ್ಡಾಟ, ದಾಸರಾಟ, ಗೊಂಬೆಯಾಟ; ಹಳೆ ಮೈಸೂರು ಪ್ರದೇಶದಲ್ಲಿ ಕಾಣಿಸಿಕೊಳ್ಳುವ ಘಟ್ಟದಕೋರೆ, ಮೂಡಲಪಾಯ ಹಾಗೂ ಕರಾವಳಿ ಮತ್ತು ಮಲೆನಾಡಿನಲ್ಲಿ ಖ್ಯಾತವಾಗಿರುವ ಯಕ್ಷಗಾನ ಬಯಲಾಟ (ವಿದ್ವತ್ ವಲಯದಲ್ಲಿ "ಪಡುವಲಪಾಯ" ಎಂದೇ ಗುರುತಿಸಿಕೊಂಡಿದೆ), ತಾಳಮದ್ದಳೆ, ಹೂವಿನ ಕೋಲುಗಳು ಈ ಕಲೆಯ ವ್ಯಾಪಕತೆಯನ್ನು ಬಿತ್ತರಿಸುತ್ತದೆ. ಯಕ್ಷಗಾನ ರಂಗಭೂಮಿಗೆ ಕನಿಷ್ಠ 500 ವರ್ಷಗಳ ಇತಿಹಾಸವಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ಕಲಾಪ್ರಕಾರದ ಬೇರನ್ನು ಕಾಣಬಹುದು. ಬಳ್ಳಾರಿ ಜಿಲ್ಲೆಯ ಸೋಮಸಮುದ್ರದಲ್ಲಿ ದೊರೆತಿರುವ ದಾನಶಾಸನ (ಕ್ರಿ.ಶ. 1556)ದಲ್ಲಿ ಬಂದಿರುವ "ತಾಳಮದ್ದಲೆ" ಸೇವೆಯ ಉಲ್ಲೇಖ ಯಕ್ಷಗಾನದ ಒಂದು ಪ್ರಭೇದವಾದ "ತಾಳಮದ್ದಲೆ"ಗೆ ಸಂಬಂಧಿಸಿದ್ದಿರಬೇಕು. ವಿಜಯನಗರ ಅರಸರು ಕನ್ನಡ ಮತ್ತು ತೆಲುಗು ಸಂಸ್ಕೃತಿಯನ್ನು ಪೋಷಿಸಿದವರು. ರಾಮಾಯಣ, ಮಹಾಭಾರತ, ಭಾಗವತಾದಿಗಳಿಂದ ಆಯ್ದುಕೊಂಡ ಕಿರುಕಥನಗಳನ್ನು ಆಧರಿಸಿ ಬರೆದ ಯಕ್ಷಗಾನ ಪ್ರಸಂಗಗಳ ರಚನೆ ಕನ್ನಡ ಹಾಗೂ ತೆಲುಗಿನಲ್ಲಿ ಈ ಕಾಲದಲ್ಲೇ ಕಾಣಿಸಿಕೊಳ್ಳುತ್ತವೆ. ಇದೇ ಸಂದರ್ಭದಲ್ಲಿ ಕಾಣಿಸಿಕೊಂಡ ದಾಸಸಾಹಿತ್ಯದ ಪ್ರಭಾವಕ್ಕೂ ಒಳಗಾಗಿ ಪ್ರಸಂಗಗಳು ಭಕ್ತಿಸಾಹಿತ್ಯದ ಅಂಶವನ್ನು ಮೈಗೂಡಿಸಿಕೊಂಡವು. ಇಂತಹ ಪ್ರಸಂಗಗಳನ್ನು ಆಧರಿಸಿ ರಂಗಭೂಮಿಯಲ್ಲಿ ಪ್ರದರ್ಶಿಸುವ ಕಲೆಯಾಗಿ "ಯಕ್ಷಗಾನ" ಖ್ಯಾತವಾಯಿತು. ಯಕ್ಷಗಾನದ ಮೇಳಗಳಿಗೆ ದೇವಸ್ಥಾನಗಳು ಆಶ್ರಯ ನೀಡುವುದು ಹಾಗೂ ಜನತೆ ಹರಕೆ ಹೊತ್ತು ಆಟ ಆಡಿಸುವುದು ಮತ್ತು ಪ್ರದರ್ಶನದ ವಿಧಿವಿಧಾನಗಳೆಲ್ಲಾ ಧಾರ್ಮಿಕ ಉದ್ದೇಶಗಳನ್ನು ಸಾರುತ್ತವೆ.

ಹಿಂದಿನ ಸ್ವರೂಪ:

ಬಯಲಾಟ ಸಂಪ್ರದಾಯದಲ್ಲಿ ಧಾರ್ಮಿಕ ಉದ್ದೇಶದಿಂದ ಪ್ರದರ್ಶಿತವಾಗುತ್ತಿದ್ದವನ್ನು ಹರಕೆ ಆಟಗಳೆಂದು ಕರೆಯುತ್ತಿದ್ದರು. ಆಗಿನ ಯಕ್ಷಗಾನ ಮೇಳಗಳು ಹೆಚ್ಚಾಗಿ ಪ್ರಸಿದ್ಧ ದೇವಸ್ಥಾನದ ಹೆಸರಿನಲ್ಲಿ ನಡೆಯುತ್ತಿದ್ದುವು. ಮಧೂರು, ಕಟೀಲು, ಕದ್ರಿ, ಕುಂಡಾವು, ಧರ್ಮಸ್ಥಳ ದೇವಸ್ಥಾನದ ಮೇಳಗಳು ದಕ್ಷಿಣ ಕನ್ನಡ ಜಿಲ್ಲೆಯ ತೆಂಕುಭಾಗದಲ್ಲಿ ಪ್ರಸಿದ್ಧವಾಗಿದ್ದರೆ, ಪೆರ್ಡೂರು, ಮಂದಾರ್ತಿ, ಸೌಕೂರು ಹಾಗೂ ಮಾರಣಕಟ್ಟೆ ಮೇಳಗಳು ಉತ್ತರ ಭಾಗದಲ್ಲಿ ಖ್ಯಾತವಾಗಿದ್ದವು. ಆಣಿಗುಡ್ಡೆ ದೇವಸ್ಥಾನಕ್ಕೂ ಮೇಳವಿತ್ತೆಂಬುದು ಪ್ರಸಂಗವೊಂದರ ಪದ್ಯದಲ್ಲಿ ಬಂದಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಗುಂಡಬಾಳೆ ಮೇಳವು ಹರಕೆ ಆಟ ನಡೆಸುವ ಮೇಳವಾಗಿದೆ. ಹಳ್ಳಿಯ ಜನರು ಜಡ ಜಾಪತ್ತು ಬಂದಾಗ, ಕಷ್ಟ ಸಂಕಷ್ಟಗಳು ಎದುರಾದಾಗ ಅದರ ನಿವಾರಣೆಗೆ ಖ್ಯಾತ ದೇವಸ್ಥಾನದ ಮೇಳಗಳ ಆಟವಾಡಿಸುವುದಾಗಿ ಹರಕೆ ಹೊರುತ್ತಿದ್ದರು. ದೇವಸ್ಥಾನದವರು ಮಳೆಗಾಲದಲ್ಲಿ ಕಲಾವಿದರನ್ನೆಲ್ಲ ಕಲೆಹಾಕಿ, ವೇಷಭೂಷಣಗಳನ್ನು

ದುರಸ್ತಿ ಮಾಡಿ ಸರಿಪಡಿಸಿಕೊಂಡು ಕೊಡಿ ತಿಂಗಳಲ್ಲಿ (ನವೆಂಬರ್ ಸುಮಾರಿಗೆ) ಮೇಳಗಳನ್ನು ಹೊರಡಿಸುತ್ತಿದ್ದರು. ವೈಶಾಖದ ಅಂತ್ಯದವರೆಗೆ ಅಂದರೆ, ಹಗ್ಗಿನ (ಮೇ ಅಂತ್ಯಕ್ಕೆ) ತಿಂಗಳವರೆಗೆ ಮೇಳದ ಸಂಚಾರವಿರುತ್ತಿತ್ತು. ಸರಿಕಟ್ಟುವ ಕಲಾವಿದರನ್ನು ಕಲೆಹಾಕುವುದು, ಅಗತ್ಯವುಳ್ಳ ವಸ್ತುಗಳನ್ನು ಸರಿಹೊಂದಿಸುವುದು, ಹರಕೆ ಹೊತ್ತವರಿಂದ ವೀಳ್ಯ ಪಡೆದು ದಿನಾಂಕ ನಿಶ್ಚಯಿಸುವುದು, ಆ ದಿನದಲ್ಲಿ ಮೇಳದವರು ಅಲ್ಲಿರುವಂತೆ ನೋಡಿಕೊಳ್ಳುವುದು, ಹರಕೆ ಆಟ ಇಲ್ಲದ ದಿನ ಯಾವುದಾದರೂ ಗ್ರಾಮದ ಮುಖ್ಯಸ್ಥರನ್ನು ಹಿಡಿದು ಆಟವಾಡಿಸುವುದು, ಇವೆಲ್ಲಾ ಸಂಘಟಕರಾದವರ ಜವಾಬ್ದಾರಿ ಯಾಗಿತ್ತು. ದೊಡ್ಡ ದೇವಸ್ಥಾನಗಳ ಜಾತ್ರೆಯ ಸಂದರ್ಭದಲ್ಲಿ ಕೆಲವು ಮೇಳದವರು "ದೇವರ ಸೇವೆ" ಆಟಗಳನ್ನು ನಡೆಸುವ ಪರಿಯೂ ಇದೆ. "ವೀಳ್ಯ"ಕ್ಕೆ ಇಂತಿಷ್ಟು ಎಂದು ಹಣ ನಿಗದಿ ಇರಲಿಲ್ಲ. ಸಾಧಾರಣ ಆಯಾಯ ಕಾಲಕ್ಕೆ ಅನುಗುಣವಾಗಿ, ಕೆಲವೊಮ್ಮೆ ಆಟವಾಡಿಸುವವರ ಚೈತನ್ಯವನ್ನು ಅವಲಂಬಿಸಿ "ವೀಳ್ಯ" ನಿರ್ಧಾರವಾಗು ತ್ತಿತ್ತು. ಇದರೊಂದಿಗೆ "ಪಡಿಯಕ್ಕಿ" ಕೊಡುವ ಸಂಪ್ರದಾಯವೂ ಇರುತ್ತಿತ್ತು. ಮೇಳ ದಲ್ಲಿರುವವರೆಲ್ಲರ ಒಂದು ದಿನದ ಊಟಕ್ಕೆ ಬೇಕಾಗುವ ಸಾಮಾನುಗಳನ್ನು ಹಾಗೂ ರಾತ್ರಿಯಿಡೀ ಆಟದ ಪ್ರದರ್ಶನದಲ್ಲಿ ಉರಿಯುವ ದೀಪಕ್ಕೆ ಬೇಕಾಗುವ ಎಣ್ಣೆಯನ್ನು ಕೂಡ ಹರಕೆ ಹೊತ್ತವ ಕೊಡಬೇಕಾಗುತಿತ್ತು.

ಆಟವಾಡುವ ಮೇಳದ ವಿಚಾರ, ಆಟವಾಡುವ ದಿನ, ಸ್ಥಳ ಮುಂತಾದುವೆಲ್ಲ ಬಾಯಿಂದ ಬಾಯಿಗೆ ಪ್ರಚಾರಗೊಂಡು ಸುತ್ತಮುತ್ತಲ ಹಳ್ಳಿಯವರೆಲ್ಲ ಆಟವಾಡುವ ದಿನ ಹೊತ್ತಿಗೆ ಸರಿಯಾಗಿ ಹಾಜರಾಗಿ ಸಂಭ್ರಮಿಸುತ್ತಿದ್ದರು. ಮೇಳದವರು ಕೂಡ ಆಟವಾಡಿಸುವವನ ಮನೆಯನ್ನು ಬೆಳಿಗ್ಗೆ ಬಂದು ಸೇರಿದ ನಂತರ ಸುಮಾರು 12 ಗಂಟೆಯ ಹೊತ್ತಿನಲ್ಲಿ ಅಕ್ಕಪಕ್ಕದ ಗ್ರಾಮಸ್ಥರಿಗೆ ಕೇಳಿಸುವಂತೆ ಏರುದನಿಯಿಂದ "ಅಬ್ಬರಬಡ್ತಿಗೆ" (ಚಂಡೆ ಮದ್ದಲೆಗಳನ್ನು ಒಟ್ಟಿಗೆ ಬಾರಿಸುವುದು) ನುಡಿಸುತ್ತಿದ್ದರು. ಈ "ಅಬ್ಬರಬಡ್ತಿಗೆ"ಯೇ ಒಂದು ರೀತಿಯಲ್ಲಿ ಯಕ್ಷಗಾನದ ಪ್ರದರ್ಶನದ ಅಧಿಕೃತ ಪ್ರಕಟಣೆ ಇದ್ದಂತೆ. ಸೂರ್ಯಾಸ್ತವಾದೊಡನೆ ಇನ್ನೊಮ್ಮೆ "ಅಬ್ಬರಬಡ್ತಿಗೆ" ಆಗುತ್ತಿತ್ತು. (ತೆಂಕುತಿಟ್ಟಿನಲ್ಲಿ ಇದನ್ನು ಕೇಳಿ ಹೊಡೆಯುವುದು ಎನ್ನುತ್ತಾರೆ). ಇದನ್ನು ಕೇಳಿದೊಡನೆ ಸುತ್ತಮುತ್ತಲ ಹಳ್ಳಿಯವರು, ಗ್ರಾಮಸ್ಥರು ಊಟ ಮುಗಿಸಿ, ಕೈಯಲ್ಲಿ ಚಾಪೆ ಹಿಡಿದು, ತೆಂಗಿನಗರಿಯ ದೊಂದಿಯೊಂದಿಗೆ ಆಟ ನಡೆಯುವ ಸ್ಥಳಕ್ಕೆ ಬಂದು ತಮ್ಮ ಜಾಗ ಹಿಡಿದು ಕೂತರೆ ಮಾರನೇ ದಿನ ಬೆಳಿಗ್ಗೆಯೇ ತಮ್ಮ ಮನೆಯನ್ನು ಸೇರುತ್ತಿದ್ದುದು. ಹೆಚ್ಚಾಗಿ ಗದ್ದೆಯಲ್ಲಿ, ಇಲ್ಲವೇ ಮೈದಾನ ಪ್ರದೇಶದಲ್ಲಿ ಆಟಗಳು ನಡೆಯುತ್ತಿದ್ದವು. 20' x 20' ಜಾಗದಲ್ಲಿ ಒಂದು ಯಾ ಎರಡಡಿ ಎತ್ತರದಲ್ಲಿ ರಂಗಸ್ಥಳ ನಿರ್ಮಾಣವಾಗು ತ್ತಿತ್ತು. ರಂಗದ ಹಿಂಭಾಗದಲ್ಲಿ ಒಂದು "ಹೊಡೆ ಮಂಚ"ವಿದ್ದು ಅದರ ಮೇಲೆ ಜಮಖಾನ ಹಾಸಿ ಭಾಗವತರು, ಮದ್ದಲೆಯವರು, ಶ್ರುತಿಯವರು ಕೂರಲು ವ್ಯವಸ್ಥೆ ಆಗುತಿತ್ತು. ಉಳಿದ ಮೂರುಕಡೆ ಪ್ರೇಕ್ಷಕರು ಕೂರಬಹುದಾಗಿತ್ತು. ನಾಲ್ಕು ಮೂಲೆಗೆ

ನಾಲ್ಕು ಕಂಬಗಳನ್ನು ನೆಟ್ಟು, ಅದಕ್ಕೆ ಮಾವಿನ ಸೊಪ್ಪಿನ ಅಲಂಕಾರ ಮಾಡಿ ತೋರಣ ಕಟ್ಟುತ್ತಿದ್ದರು. ದಪ್ಪದ ಬಟ್ಟೆಯ ಬತ್ತಿಯಿಂದ ಉರಿಯುವ "ದೀವಟಿಗೆ"ಗಳೇ ಆಗ ರಂಗಸ್ಥಳಕ್ಕೆ ಬೆಳಕನ್ನು ನೀಡುತ್ತಿದ್ದವು. ಹಿಂದೆ ಅದನ್ನು ಹೊರೆಯಾಳುಗಳು ಹಿಡಿದು ನಿಲ್ಲುತ್ತಿದ್ದರು. ಮುಂದೆ ಅದನ್ನು ಎರಡು ಕಡೆ ಕಟ್ಟಿ ನಿಲ್ಲಿಸುತ್ತಿದ್ದರು. ಈ ದೀವಟಿಗೆ ಬೆಳಕಿನಲ್ಲಿ ಮಣಿ, ಬೇಗಡೆಗಳಿಂದ ತಯಾರಾದ ವಸ್ತ್ರಾಭರಣಗಳು ಮಿಂಚಿನಂತೆ ಹೊಳೆಯುತ್ತಿದ್ದವು. ಮಂದವಾದ ಹಳದಿ ಬಣ್ಣದ ಬೆಳಕಿನಲ್ಲಿ ಕೇದಗೆ ಮುಂದಲೆ, ಭುಜಕೀರ್ತಿ, ಎದೆಕಟ್ಟುಗಳೆಲ್ಲ ಶೋಭಾಯಮಾನವಾಗಿ ಕಾಣುತ್ತಿದ್ದವು. ಅದಕ್ಕೆ ಸರಿಯಾಗಿ ಕೆಂಪು ಮತ್ತು ಹಳದಿಯ ಬಟ್ಟೆಯನ್ನೇ ಹೆಚ್ಚಾಗಿ ಬಳಸುತ್ತಿದ್ದರು. ಬಣ್ಣದ ವೇಷ, ರಾಕ್ಷಸ ವೇಷಗಳು ರಂಗಕ್ಕೆ ಬರುವಾಗ ದೀವಟಿಗೆಯವರು ಅವುಗಳ ಮುಖಕ್ಕೆ ಅದನ್ನು ಹಿಡಿದು, ಕೆಲವೊಮ್ಮೆ ರಾಳದ ಪುಡಿಯನ್ನು ಬೆಂಕಿಗೆ ಎರಚಿ ಇನ್ನಷ್ಟು ಬೆಳಕು ಸೃಷ್ಟಿಸಿ, ಅದರ ಭೀಕರತೆಯನ್ನು ಪ್ರಸ್ತುತಪಡಿಸುತ್ತಿದ್ದರು. ಕೆಲವು ವೇಷದವರು ತೆರೆಯೊಳಗೆ ಕುಣಿಯುವಾಗ ದೀವಟಿಗೆಗಳನ್ನು ಎರಡು ಕೈಯಲ್ಲಿ ಹಿಡಿದು ಕುಣಿಯುತ್ತಿದ್ದುದುಂಟು. ಇವೆಲ್ಲಾ ಮುಂದೆ ಪೆಟ್ರೋಮ್ಯಾಕ್ಸ್‌ನ ಬೆಳಕಿನಿಂದಾಗಿ ಮೂಲೆ ಸರಿದವು. ಆದರೂ ದೀವಟಿಗೆಯನ್ನು ಹಚ್ಚಿಡುವ ಸಂಪ್ರದಾಯ ಹರಕೆ ಆಟಗಳಲ್ಲಿ ಕಂಡುಬರುತ್ತದೆ.

ಹಿಂದೆಲ್ಲ ಮೇಳದವರು ಒಂದೂರಿನಿಂದ ಇನ್ನೊಂದೂರಿಗೆ ಕಾಲ್ನಡಿಗೆಯಲ್ಲೇ ನಡೆದು ಹೋಗುತ್ತಿದ್ದರು. ಮೇಳದ ಸಾಮಾನುಗಳನ್ನು ಬೆತ್ತದ ಪೆಟ್ಟಿಗೆಗಳಲ್ಲಿಟ್ಟು 'ಹೊರೆಯಾಳು'ಗಳು ತಲೆಮೇಲೆ ಹೊತ್ತು ಸಾಗಿಸುತ್ತಿದ್ದರು. ಈ ಪೆಟ್ಟಿಗೆಗಳಲ್ಲೆಲ್ಲಾ "ಗಣಪತಿ ಪೆಟ್ಟಿಗೆ"ಗೆ ಅಗ್ರಸ್ಥಾನ. ಇದರಲ್ಲಿ ಗಣಪತಿಯ ಮೂರ್ತಿ, ನಿತ್ಯಪೂಜೆಗೆ ಬೇಕಾಗುವ ಸಾಮಗ್ರಿಗಳು, ಹಿಮ್ಮೇಳದವರ ಸಾಮಗ್ರಿಗಳು ಇರುತ್ತಿದ್ದವು. 'ಅಡ್ಡೆ ಪೆಟ್ಟಿಗೆ' ಎಂದು ಕರೆಸಿಕೊಳ್ಳುವ ಪೆಟ್ಟಿಗೆಯಲ್ಲಿ ಅಡುಗೆ ಸಾಮಗ್ರಿಗಳು ಇರುತ್ತಿದ್ದವು. ಮೊದಲಿಗೆ ಈ ಎರಡೂ ಪೆಟ್ಟಿಗೆಗಳು ಬಿಡಾರದ ಮನೆಯನ್ನು ತಲುಪಿ ಮೇಳದವರಿಗೆ ಮಧ್ಯಾಹ್ನದ ಊಟಕ್ಕೆ ತಯಾರಿ ಮಾಡುತ್ತಿದ್ದರು. 'ಶ್ರುತಿ ಪೆಟ್ಟಿಗೆ' ಎಂಬುದರಲ್ಲಿ ಚಂಡೆಮದ್ದಲೆ, ಶ್ರುತಿಬುರುಡೆ, ತಾಳ ಮುಂತಾದುವು ಇರುತ್ತಿದ್ದವು. ಉಳಿದ 8–10 ಪೆಟ್ಟಿಗೆಗಳಲ್ಲಿ ವೇಷಭೂಷಣ, ಆಯುಧಗಳು, ವಸ್ತ್ರ ಒಡವೆಗಳು ಇರುತ್ತಿದ್ದವು. ಪೆಟ್ಟಿಗೆ ಹೊರುವವರ ಹಿಂದೆ ಕಲಾವಿದರು ನಡೆದುಹೋಗುತ್ತಾ ಕಿರಿಯ ಕಲಾವಿದರಿಗೆ ತಿಳುವಳಿಕೆ ನೀಡುತ್ತಾ ನಡೆಯುತ್ತಿದ್ದರು. ಮಧ್ಯಾಹ್ನದ ಊಟವಾದೊಡನೆ ಕಲಾವಿದರೆಲ್ಲ ಸಾಲಾಗಿ ಮಲಗಿರುತ್ತಿದ್ದರು. ಅಕ್ಕಪಕ್ಕದ ಮನೆಯ ಮಕ್ಕಳಿಗೆಲ್ಲ ಆಟದವರ ಬಿಡಾರಕ್ಕೆ ಮುತ್ತಿ ಅವರನ್ನೆಲ್ಲ ನೋಡುವುದೇ ಕಣ್ಣಿಗೆ ಹಬ್ಬ. ಸಂಜೆಯ ಬಿಡುವಿನಲ್ಲಿ ಕಿರಿಯ ಕಲಾವಿದರಿಗೆ ಹಿರಿಯರ ಮಾರ್ಗದರ್ಶನ ದೊರೆಯುತ್ತಿತ್ತು.

ರಂಗಸ್ಥಳದ ಸನಿಹದಲ್ಲೇ ಚೌಕಿಯ ನಿರ್ಮಾಣವಾಗಿರುತ್ತಿತ್ತು. ಚೌಕಿಯೆಂದರೆ ಮರೆ ಮಾಡಿದ ಬಣ್ಣದ ಮನೆ (ಗ್ರೀನ್‌ರೂಮ್ ಇದ್ದಂತೆ). ಇಲ್ಲಿ ಗಣಪತಿಯ

ಮೂರ್ತಿಯನ್ನು ಮತ್ತು ಆಯುಧಗಳನ್ನು ಜೋಡಿಸಿ ಇಡುತ್ತಾರೆ. ಚೌಕಿಯಲ್ಲಿ ಸಾಲು ಸಾಲಾಗಿ ವೇಷದ ಪೆಟ್ಟಿಗೆಗಳನ್ನು ಇಡುತ್ತಾರೆ. ಗಣಪತಿಯ ಮೂರ್ತಿಯ ಎದುರಿಗೆ ಎರಡನೇ ವೇಷ (ಮುಖ್ಯ ವೇಷ), ಪುರುಷ ವೇಷ ಹಾಗೂ ಸ್ತ್ರೀ ವೇಷದವರ ಪೆಟ್ಟಿಗೆಗಳನ್ನು ಇಡುತ್ತಾರೆ. ಎಡಸಾಲಿನಲ್ಲಿ ಮೊದಲಿಗೆ 'ಬಣ್ಣದ ವೇಷಧಾರಿ'ಯ ಪೆಟ್ಟಿಗೆ ಇರುತ್ತದೆ. ಪ್ರತಿಯೊಬ್ಬ ಕಲಾವಿದರು ಚೌಕಿಯಲ್ಲಿ ನಡೆಯುವ ಪೂಜೆಗೆ ಹಾಜರಿರಬೇಕು. ಆಮೇಲೆ ತಮ್ಮ ತಮ್ಮ ಪೆಟ್ಟಿಗೆ ಮುಂದೆ ಕುಳಿತು ದೀವಟಿಗೆಯ ಬೆಳಕಿನಲ್ಲಿ ತಮ್ಮ ವೇಷವನ್ನು ತಾವೇ ಕಟ್ಟಿಕೊಳ್ಳುತ್ತಿದ್ದರು. ಮುಖವರ್ಣಿಕೆಯನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಬಣ್ಣದ ವೇಷದ ಮುಖವರ್ಣಿಕೆಗೆ 2–3 ತಾಸುಗಳು ಹಿಡಿಯುತ್ತದೆ. ಆಗಾಗ ಪಾನೀಯಗಳ ಸರಬರಾಜು, ಮಧ್ಯೆ ಮಧ್ಯೆ ಹಾಸ್ಯದ ಚಟಾಕಿಗಳು ಅಲ್ಲಿ ನಡೆಯುತ್ತದೆ. ಮಕ್ಕಳಿಗೆ ಕೆಲವೊಮ್ಮೆ ರಂಗಸ್ಥಳಕ್ಕಿಂತ ಈ ಚೌಕಿಯೇ ಬೆರಗನ್ನು ಮೂಡಿಸುವ ತಾಣವಾಗಿರುತ್ತದೆ. ಮಡಲ ಸಂದಿಯಲ್ಲಿ ಕಣ್ಣಿಟ್ಟು ಅಲ್ಲಿನ ವಿದ್ಯಮಾನಗಳನ್ನು ನೋಡುವ ಜನ ಸಾಕಷ್ಟಿರುತ್ತಾರೆ. ಸ್ತ್ರೀಪಾತ್ರಗಳನ್ನು ಪುರುಷರೇ ಧರಿಸುತ್ತಾರೆ.

ಚೌಕಿಯಲ್ಲಿ ದೇವತಾ ಪ್ರಾರ್ಥನೆ ಆದೊಡನೆ ಸಂಗೀತಗಾರ (ಎರಡನೇ ಭಾಗವತ) ಮದ್ದಲೆಯವರು, ಶ್ರುತಿಯವರೆಲ್ಲ ಸೇರಿ ರಂಗಸ್ಥಳಕ್ಕೆ ಬರುತ್ತಾರೆ. ದೇವತಾ ಪ್ರಾರ್ಥನೆಗಳನ್ನು ಒಳಗೊಂಡಿರುವ 'ಪೂರ್ವರಂಗ' ಅಥವಾ 'ಸಭಾಲಕ್ಷಣ' ಪ್ರಾರಂಭವಾಗುತ್ತದೆ. ಇದೊಂದು ರೀತಿಯಲ್ಲಿ ಕಿರಿಯರಿಗೆ ತರಬೇತಿಗೆ ಇದ್ದಂತೆ. ಪ್ರೇಕ್ಷಕರು ಊಟ ಮುಗಿಸಿ ಎಲ್ಲರೂ ಬಂದು ಸೇರಲು ಕೂಡ ಕಾಲಾವಕಾಶವಿದ್ದಂತೆ. ಸುಮಾರು 2 ತಾಸುಗಳಷ್ಟಿರುವ ಈ ಕಾಲಾವಧಿಯಲ್ಲಿ ಹುಡುಗರು 'ಕೋಡಂಗಿ'ಗಳಾಗಿ ಕಾಣಿಸಿಕೊಳ್ಳುತ್ತಾರೆ. ಇವರ ಮುಖ್ಯಸ್ಥನಾಗಿ ಹನುಮನಾಯಕ ಕಾಣಿಸಿಕೊಳ್ಳುತ್ತಾನೆ.

"ಮುದದಿಂದ ನಿನ್ನ ಕೊಂಡಾಡುವೆನು ।
ಮದವೂರ ವಿಘ್ನೇಶ ದೇವ ಜಗದೀಶ" ॥

ಎಂದು ಪ್ರಾರಂಭವಾಗಿ ಬೇರೆ ಬೇರೆ ದೇವತೆಗಳ ಸ್ತುತಿ, ನರ್ತನಗಳು ನಡೆಯುತ್ತವೆ. ಎರಡು ಬಾಲ ಗೋಪಾಲರ ವೇಷ ಹಾಗೂ ಎರಡು ಸ್ತ್ರೀವೇಷಗಳು ಸಿದ್ಧರಾಗಿ ಬರುತ್ತಾರೆ. ಬಾಲ ಗೋಪಾಲರ ಕುಣಿತ ಅತ್ಯಂತ ಸುಂದರವಾಗಿದ್ದು, ಆಕರ್ಷಕವಾಗಿರುತ್ತದೆ. ನಂತರ ಬರುವ ಸ್ತ್ರೀ ವೇಷಗಳವರು ನಾನಾ ಬಗೆಯ ಶೃಂಗಾರ ಗೀತೆಗಳಿಗೆ ಲಾಸ್ಯಪ್ರಧಾನ ನರ್ತನಗಳನ್ನು ನೀಡಿ ಮನರಂಜಿಸುತ್ತಾರೆ. ಅವರ ಅಂಗ ಭಂಗಿಗೆ, ಪದಗತಿಗೆ, ಚಲನವಲನಗಳಿಗೆ ಅಗತ್ಯವಾಗುವ ಛಿದ್ತಿಗೆಗಳನ್ನೇ ಮದ್ದಲೆ ಗಾರನು ನುಡಿಸಿದಾಗ ಇಡೀ ರಂಗಸ್ಥಳವೇ ಅತ್ಯಂತ ಶೃಂಗಾರದ, ಲಾಸ್ಯದ ಆಡುಂಬೊಲವಾಗುತ್ತದೆ. ಸ್ತ್ರೀವೇಷದ ಕುಣಿತದ ನಂತರ ನಡೆಯುವುದೇ ಒಡ್ಡೋಲಗ. ಆಯಾಯಾ ದಿನ ಆಡುವ ಪ್ರಸಂಗವನ್ನು ಆಡಿಸುವವರ ಅನುಮತಿಯೊಂದಿಗೆ

ಅಂದೇ ನಿರ್ಧರಿಸುತ್ತಾರೆ. ಅದಕ್ಕೆ ತಕ್ಕಂತೆ ಚೌಕಿಯಲ್ಲಿ ಪಾತ್ರಧಾರಿಗಳು ಸಿದ್ಧರಾಗುತ್ತಾರೆ. ರಾಮಾಯಣಕ್ಕೆ ಸಂಬಂಧಿಸಿದ್ದಾದರೆ ರಾಮ ಲಕ್ಷ್ಮಣರದ್ದೊ, ಮಹಾಭಾರತಕ್ಕೆ ಸಂಬಂಧಿಸಿದ್ದಾದರೆ ಪಾಂಡವರದ್ದೊ, ಬೇರೆ ಬೇರೆ ಪ್ರಸಂಗಗಳಾದರೆ ಆ ಪ್ರಸಂಗದಲ್ಲಿ ಬರುವ ಮುಖ್ಯ ಪಾತ್ರದ್ದೋ ಒಡ್ಡೋಲಗವಿರುತ್ತದೆ. ಒಡ್ಡೋಲಗದ ಭಾಗವು ಕಟ್ಟುನಿಟ್ಟಿನಿಂದ ಕೂಡಿದ್ದು, ಹೆಚ್ಚು ಪಾತ್ರಗಳಿದ್ದಷ್ಟು ಸೊಗಸೂ ಹೆಚ್ಚು. ಪ್ರಸಂಗದ ನಡುವೆ ಕೂಡ ಒಮ್ಮೊಮ್ಮೆ ಒಡ್ಡೋಲಗ ಬರುವ ಕ್ರಮ ಉಂಟು. ಕಿರಾತ, ಕೀಚಕನಂತಹ, ಖಳನಾಯಕ, ಯಾವುದೋ ಇನ್ನೊಬ್ಬ ಅರಸನು ಕೂಡ ಒಡ್ಡೋಲಗ ನೀಡಬಹುದು. ಈ ಪಾತ್ರಗಳೆಲ್ಲ ತೆರೆಯೊಂದಿಗೆ ಬಂದಾಗಲೇ ಸೊಗಸು. ಹಿಂದೆಲ್ಲ ಒಡ್ಡೋಲಗವನ್ನು ತೆರೆಯೊಂದಿಗೆ ತೋರಿಸಿ, ಅದನ್ನು ವೈಭವೋಪೇತವಾಗಿ ನಿರೂಪಿಸುತ್ತಿದ್ದರು. ರಾಕ್ಷಸ ಪಾತ್ರಗಳ ಒಡ್ಡೋಲಗವಂತೂ ಬಹು ಆಕರ್ಷಕವಾದುದು. ಒಡ್ಡೋಲಗ ಮುಗಿಯಿತೆಂದರೆ ಮತ್ತೆ ಕಥಾಭಾಗ ಪ್ರಾರಂಭವಾಗುತ್ತದೆ. 100-150 ಹಾಡುಗಳನ್ನು ಹಾಡಿ ಅದಕ್ಕೆ ತಕ್ಕಂತೆ ಕುಣಿದು, ಮಾತನಾಡಿ ಕಥಾನಕವನ್ನು ಪ್ರೇಕ್ಷಕರ ಎದೆಯಾಳದಲ್ಲಿ ನಿರೂಪಿಸುತ್ತಾರೆ. ಬೆಳಗಿನ ಹೊತ್ತಿಗೆ ಒಂದು ಅಥವಾ ಎರಡು ಕಥಾನಕಗಳು ಮುಗಿದಿರುತ್ತವೆ. ಸುಖಾಂತವಾಗಿ ಮುಗಿದು ಮಂಗಳ ಹಾಡಿದ ನಂತರ ಆಟ ಆಡಿಸಿದವನು ಹರಿವಾಣದಲ್ಲಿ ಗೊತ್ತು ಮಾಡಿದ ಹಣವನ್ನು ಇಟ್ಟು ಅಡಿಕೆ ಮತ್ತು ವೀಳ್ಯದೆಲೆಯ ಜೊತೆಯಲ್ಲಿ ಭಾಗವತನಿಗೆ ನೀಡುತ್ತಾನೆ. ಅನಂತರ ಹಿಮ್ಮೇಳದವರು ಹಾಗೂ ಸ್ತ್ರೀ ವೇಷದವರು ದೇವತಾಸ್ತುತಿ ಮಾಡಿ ಬಣ್ಣದ ಚೌಕಿಗೆ ಮರಳುತ್ತಾರೆ. ಚೌಕಿಯಲ್ಲಿ,

ರಾಮಕೃಷ್ಣರು ಮನೆಗೆ ಬಂದರು । ಬಾಗಿಲು ತೆರೆಯಿರೊ ।
ಕಾಮಧೇನು ಬಂದಂತಾಯ್ತು । ಸುಖವ ಪಡೆಯಿರೋ ॥

ಎಂದು ಹಾಡಿ ಮಂಗಳಾರತಿಯನ್ನು ಬೆಳಗಿ ಅಂದಿನ ಆಟವನ್ನು ಮುಗಿಸುತ್ತಾರೆ. ಹೀಗೆ ಹಿಂದೆಲ್ಲಾ ಪ್ರದರ್ಶನಗೊಳ್ಳುತ್ತಿದ್ದ ಬಯಲಾಟದಲ್ಲೆಲ್ಲ ಮನರಂಜನೆಯೊಂದಿಗೆ ತಾವು ನಂಬಿಕೊಂಡು ಬಂದ ದೇವರ ಆರಾಧನೆಯನ್ನು ನಡೆಸಿದ ಬಗೆ ಕಂಡು ಬರುತ್ತದೆ. ಆ ಕಾಲದಲ್ಲೆಲ್ಲ ಪ್ರದರ್ಶನಗೊಳ್ಳುತ್ತಿದ್ದ ಬಯಲಾಟಗಳು ನಿಶ್ಚಿತವಾದ ರೂಪದಲ್ಲೇ ನಡೆದು ಆರಾಧನೆಯ ಅಂಗವಾಗಿಯೇ ಬೆಳೆದು ಬಂದದ್ದು ಗೋಚರವಾಗುತ್ತದೆ.

ಹೀಗೆ ಸ್ವಾತಂತ್ರ್ಯಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಪಡುವಣದ ಯಕ್ಷಗಾನ ರಂಗಭೂಮಿಯಲ್ಲಿ ಕಲಾವಿದರ ಬದುಕು ಅಸಹನೀಯವಾಗಿತ್ತು. ಆಟ ಆಡಿಸುವವರ ಸಂಖ್ಯೆಯು ಕಡಿಮೆ. ಕೊಡುವ ವೀಳ್ಯವೂ ಹೆಚ್ಚಿನದಾಗಿರಲಿಲ್ಲ. ಇದರಿಂದಾಗಿ ದೇವಸ್ಥಾನದವರು ಕೊಡುವ ಕಲಾವಿದರ ಸಂಭಾವನೆ ಹೇಳಿಕೊಳ್ಳುವಂಥದಾಗಿರಲಿಲ್ಲ. ಕಿರಿಯ ಕಲಾವಿದರಿಗಂತೂ ಸಂಭಾವನೆ ಅಷ್ಟಕ್ಕಷ್ಟೇ ಆಗಿತ್ತು. ಮಳೆಗಾಲದ ದಿನಗಳಲ್ಲಿ ಊರಿ

ನಲ್ಲಿದ್ದು ಚೂರುಪಾರು ವ್ಯವಸಾಯ ನಡೆಸುವುದು, ಬೇಸಿಗೆ ದಿನಗಳಿಗಾಗಿ ಕಾಯುವುದೇ ಆಗಿತ್ತು. ಭಾರತಕ್ಕೆ ಸ್ವಾತಂತ್ರ್ಯ ಬಂದುದರೊಂದಿಗೆ ಯಕ್ಷಗಾನದಲ್ಲೂ ಬದಲಾವಣೆಯ ಬಿರುಗಾಳಿ ಬೀಸಿತು.

ಬದಲಾವಣೆಯ ಗಾಳಿ:

1947. ಭಾರತಕ್ಕೆ ಸ್ವಾತಂತ್ರ್ಯ ಬಂದ ವರ್ಷ. ಸ್ವಾತಂತ್ರ್ಯ ಸಂಭ್ರಮದ ಗಾಳಿ ಹಳ್ಳಿ ಹಳ್ಳಿಗಳಿಗೂ ವ್ಯಾಪಿಸಿತು. ಈ ಹಿಂದೆ ಇದ್ದ ಊಳಿಗಮಾನ್ಯ ವ್ಯವಸ್ಥೆಯ ಹಿಡಿತ ಸಡಿಲವಾಗುತ್ತಾ ಬಂದಂತೆ, ಜನತೆಯಲ್ಲಿ ಶಿಕ್ಷಣದ ಪ್ರಸಾರ ಹೆಚ್ಚಿದಂತೆ, ವೃತ್ತಿರಂಗ ಭೂಮಿಯ ನಾಟಕಗಳು ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರದರ್ಶನಗೊಳ್ಳುತ್ತಾ ಹೋದಂತೆ, ಯಕ್ಷಗಾನ ರಂಗದಲ್ಲೂ ಹೊಸ ಚಿಂತನೆಗಳು ಹುಟ್ಟಿಕೊಂಡವು. ದೇವಸ್ಥಾನದ ಮೇಳಗಳನ್ನು ವಹಿಸಿಕೊಂಡ ಸಂಘಟಕರು 1940ರ ನಂತರ ಅನೇಕ ಕಷ್ಟ ಸಂಕಷ್ಟಗಳಿಗೆ ಗುರಿಯಾಗಬೇಕಾಯಿತು. ಹರಕೆಹೊತ್ತವರ ಕೊರತೆ, ಆಟವಾಡಿಸಲು ಮುಂದೆ ಬರುವ ಗ್ರಾಮ ಮುಖಂಡರ ಹಿಂಜರಿತ, ಏರಿದ ಬೆಲೆಗಳಿಂದಾಗಿ ಕಲಾವಿದರನ್ನು ಸೇರಿಸುವಲ್ಲಿನ ಪ್ರಯಾಸದಿಂದಾಗಿ ಮೇಳದ 'ಯಜಮಾನ'ನಾದವನು ಸಾಲದ ಹೊರೆ ಹೊರಬೇಕಾಯಿತು. 1940ರಿಂದ 1948ರವರೆಗೆ ಕಟೀಲು ಮೇಳ ಹಾಗೂ ಕುಂಡಾವು (ಇರಾಸೋಮನಾಥೇಶ್ವರ) ಮೇಳದ 'ಯಜಮಾನ'ರಾಗಿದ್ದ ಕಲ್ಲಾಡಿ ಕೊರಗ ಶೆಟ್ಟರು ಮೊದಲಬಾರಿಗೆ 1947-48ರ ತಿರುಗಾಟಕ್ಕಾಗಿ ಕುಂಡಾವು ಮೇಳವನ್ನು "ಶ್ರೀ ಇರಾಸೋಮನಾಥೇಶ್ವರ ಯಕ್ಷಗಾನ ನಾಟಕ ಮಂಡಳಿ" ಎಂಬ ಹೆಸರಿನಿಂದ ಡೇರೆಯ ಮೇಳವಾಗಿ ಪರಿವರ್ತಿಸಿದರು. ಅದೇ ರೀತಿ ಕದ್ರಿ ಮೇಳವು ಶ್ರೀ ಕದ್ರಿ ಮಂಜುನಾಥೇಶ್ವರ ಯಕ್ಷಗಾನ ಮೇಳವಾಗಿ, ಹಾಗೇ ಶ್ರೀ ಕೆ. ವಿಠಲ ಶೆಟ್ಟಿಯವರ ನೇತೃತ್ವದಲ್ಲಿ "ಕರ್ನಾಟಕ ಯಕ್ಷಗಾನ ನಾಟಕ ಮಂಡಳಿ" ಇವೆಲ್ಲಾ ಡೇರೆ ಮೇಳಗಳಾಗಿ ಪರಿವರ್ತನೆಗೊಂಡವು.

ಡೇರೆ ಮೇಳವೆಂದರೆ 50-60 ಮಂದಿಗಳ ಒಂದು ಸಂಸ್ಥೆಯಾಗಿದ್ದು, ವೃತ್ತಿ ನಾಟಕ ರಂಗಭೂಮಿಯುವರಂತೆ ಟಿಕೀಟಿನೊಂದಿಗೆ ಪ್ರವೇಶವಿರುವ ಪ್ರದರ್ಶನಗಳು ಚಾಲ್ತಿಗೆ ಬಂದುವು. ಮೊದಲಿಗೆ ತೆಂಕುತಿಟ್ಟಿನಲ್ಲಿ ಅಸ್ತಿತ್ವಕ್ಕೆ ಬಂದ ಈ ಮೇಳಗಳು ಕ್ರಮೇಣ ಉತ್ತರಕ್ಕೂ ವ್ಯಾಪಿಸಿ 40-50 ವರ್ಷಗಳಲ್ಲಿ ಯಕ್ಷಗಾನ ರಂಗದಲ್ಲಿ ತಮ್ಮ ಅನಿವಾರ್ಯತೆಯನ್ನು ಸಾಬೀತುಪಡಿಸಿದವು. ಆರಾಮ ಕುರ್ಚಿಯ ಆಸನ ವ್ಯವಸ್ಥೆಯಿಂದಾಗಿ ರಾತ್ರಿಯಿಡೀ ಪ್ರೇಕ್ಷಕ ನೆಲದಲ್ಲಿ ಕುಳಿತಿರಬೇಕಾದ ಪರಿಸ್ಥಿತಿ ಇಲ್ಲವಾಯಿತು. ಜನರೇಟರುಗಳ ಬಳಕೆಯಿಂದ ವಿದ್ಯುದ್ದೀಪಾಲಂಕೃತವಾದ ರಂಗಮಂಟಪದ ನಿರ್ಮಾಣ, ಝುಗಮಗಿಸುವ ವೇಷಭೂಷಣಗಳು ರೂಢಿಗೆ ಬಂದುವು. ಜನರನ್ನು ಸೆಳೆಯಲು ಧ್ವನಿವರ್ಧಕ ಹಾಗೂ ಕರಪತ್ರಗಳ ಮೂಲಕ ಪ್ರಚಾರ, ಭಿತ್ತಿಪತ್ರಗಳಿಂದ ಮೊದಲೇ ಜನರಿಗೆ ಆಟದ ದಿನದ ಬಗ್ಗೆ ಅರಿವು ಮೂಡಿಸುವ ಪ್ರಯತ್ನಗಳು

ನಡೆದವು. ಟೆಂಟ್‌ಗಳ ನಿರ್ಮಾಣದಲ್ಲೂ ಸುಧಾರಣೆಗಳಾದುವು. ಅರೆಪಟ್ಟಣ ಪ್ರದೇಶ ಇಲ್ಲವೇ ಪಟ್ಟಣ ಪ್ರದೇಶಗಳಲ್ಲೇ ಹೆಚ್ಚಾಗಿ ಯಕ್ಷಗಾನ ಪ್ರದರ್ಶಿಸುವಂತಾಯಿತು. ಕಲಾವಿದರು ದಿನಕ್ಕೆ 10–15 ಕಿಲೋಮೀಟರು ನಡೆಯುವ ಪ್ರಯಾಸ ತಪ್ಪಿತು. ಲಾರಿಗಳಲ್ಲಿ ವೇಷಭೂಷಣಗಳನ್ನು, ಡೇರೆ ಸಾಮಗ್ರಿಗಳನ್ನು, ಅಡುಗೆ ಸಾಮಗ್ರಿಗಳನ್ನು ಸಾಗಿಸುವ ಪರಿಪಾಠ ಬಂತು.

ಈ ಬಗೆಯ ಡೇರೆ ಆಟ ಪ್ರಾರಂಭವಾದ ಕೆಲವೇ ವರ್ಷಗಳಲ್ಲಿ ವಾಣಿಜ್ಯೀಕರಣದ ಎಲ್ಲ ಅಂಶಗಳು ಯಕ್ಷಗಾನ ಪ್ರದರ್ಶನದಲ್ಲಿ ದಾಂಗುಡಿ ಇಟ್ಟವು. ಪ್ರದರ್ಶನಗಳು ಕಲಾತ್ಮಕತೆಗೆ ಧಕ್ಕೆ ತರಬಲ್ಲಷ್ಟು ಕಮರ್ಷಿಯಲ್ ಆದವು. ಪೂರ್ವರಂಗ ಅಥವಾ ಸಭಾಲಕ್ಷಣದ ಭಾಗ ಕೆಲವು ಮೇಳದಲ್ಲಿ ನಿಂತೇಹೋದುವು. ರಂಗದಲ್ಲಿ ರಥದ ಬದಲು ಸಿಂಹಾಸನ, ಬಾಲಗೋಪಾಲರ ಕುಣಿತದ ಬದಲು ಭರತನಾಟ್ಯ, ಪೂರ್ವರಂಗದ ಹಾಡುಗಾರಿಕೆ ಬದಲು ಗೊಂಬೆಯಾಟವೆಲ್ಲ ಈ ಡೇರೆ ಮೇಳಗಳಲ್ಲಿ ಕಾಣಿಸಿಕೊಂಡವು. ಪೈಪೋಟಿ ಎಷ್ಟು ಹೆಚ್ಚಿತೆಂದರೆ ಹೊಸ ಆವಿಷ್ಕಾರಗಳನ್ನು ಮಾಡುವಲ್ಲಿ ಒಬ್ಬರು ಇನ್ನೊಬ್ಬರನ್ನು ಮೀರಿಸಲು ಹೊರಟರು. ಇದರಿಂದ ಹಿಂದೆ ಇದ್ದ 'ಆರಾಧನೆಯ ಅಂಗ'ದಂತಿದ್ದ ಯಕ್ಷಗಾನ ಕಲೆ 'ಜನಮನವನ್ನು ರಂಜಿಸಹೊರಟ ವೃತ್ತಿ ನಾಟಕದ ತದ್ರೂಪವಾಗಲು ಹೊರಟಿತು. ಯಕ್ಷಗಾನದ ಮೇಲೆ ಚಲನಚಿತ್ರದ ಪ್ರಭಾವ ಸಾಕಷ್ಟಾಯಿತು. ಮೊದಲ ವರ್ಷಗಳಲ್ಲಿ ಬೆರಳೆಣಿಕೆಯಷ್ಟಿದ್ದ ಡೇರೆ ಮೇಳಗಳ ಸಂಖ್ಯೆ ಕ್ರಮೇಣ ಹೆಚ್ಚಿದವು. ಮೇಳದವರಿಗೆ 'ಆಟದವರು' ಎಂಬ ಪದ ಹೋಗಿ 'ಕಲಾವಿದ'ರೆಂಬ ಗೌರವ ಬಂದಿತು. ಇದರಿಂದಾಗಿ ಕಲಾವಿದರಿಗೂ ಬೇಡಿಕೆ ಬಂದಿತು. ಯಕ್ಷಗಾನ ಕಲಾವಿದರ ಸಂಬಳಸಾರಿಗೆಗಳಲ್ಲಿ ಏರುಮುಖವಾಯಿತು. ಕಲಾವಿದರ ಆರ್ಥಿಕ ವ್ಯವಸ್ಥೆ ಸುಧಾರಿಸಿತು. ಮನರಂಜನೆಯನ್ನೇ ಗುರಿ ಮಾಡಿಕೊಂಡ ಕೆಲವು ಡೇರೆ ಮೇಳಗಳು ಹಣ ಮಾಡುವುದನ್ನೇ ಗುರಿಯಾಗಿಸಿಕೊಂಡವು. ಮೇಳಗಳಿಗೆ ದೇವಸ್ಥಾನದ ಆಶ್ರಯ ತಪ್ಪಿ ವ್ಯಕ್ತಿಗತವಾದ ಒಡೆತನ ರೂಢಿಗೆ ಬಂತು. ಹಿಂದೆಲ್ಲಾ ಧರ್ಮಾರ್ಥವಾಗಿ 'ಆಟ' ನೋಡುತ್ತಿದ್ದ ಅಸಹಾಯಕರು ಈಗ ಹಣ ತೆತ್ತು ಆಟ ನೋಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಬಯಲಾಟ ಪ್ರದರ್ಶನಕ್ಕಾಗಿ ಯಾರು ಯಾರದೋ ಕೈಕಾಲು ಕಟ್ಟುವ ಅವಸ್ಥೆ ಯಜಮಾನರುಗಳಿಗೆ ತಪ್ಪಿತು. ಕೇವಲ ರಾತ್ರಿ ಬೆಳಗು ಮುಖ್ಯವಾಗದೆ, ನಿಮಿಷ ನಿಮಿಷವೂ ಜನಾಕರ್ಷಕವಾಗುವಂತೆ ಮಾಡುವ ಯೋಜನೆಗಳು ಹೆಚ್ಚಾದುವು.

ಡೇರೆ ಮೇಳಗಳಿಂದಾಗಿ ಪ್ರದರ್ಶನದ ಸ್ವರೂಪದಲ್ಲೂ ಬದಲಾವಣೆಗಳಾದುವು. ಪೌರಾಣಿಕ ಪ್ರಸಂಗಗಳು ಮೂಲೆಗೆ ಸರಿದು ಸಿನಿಮೀಯ ಕಥೆಗಳಿರುವ ಪ್ರಸಂಗಗಳು ಜನಪ್ರಿಯವಾದುವು. ವರ್ಷವರ್ಷಕ್ಕೆ ಈ ಟೆಂಟ್‌ಮೇಳದವರು 'ನೂತನ ಪ್ರಸಂಗ'ಗಳನ್ನು ಪ್ರದರ್ಶಿಸಲು ಹೊರಟರು. ಇದರಿಂದಾಗಿ ನೂತನ ಪ್ರಸಂಗಕಾರರು ಜನರಂಜನೆಯನ್ನೇ ಗುರಿಯಾಗಿಸಿದ ಪ್ರಸಂಗಗಳನ್ನು ರಚಿಸಹೊರಟರು. ರಾಮಾಯಣ,

ಭಾರತ, ಪುರಾಣಗಳ ಆಶ್ರಯ ತಪ್ಪಿ ಕಲ್ಪಿತ ಕತೆಗಳು, ಬೇತಾಳ ಪಂಚವಿಂಶತಿ ಕಥೆಗಳು ಪ್ರಚಾರಕ್ಕೆ ಬಂದುವು. ಕೆಲವು ಪ್ರಸಂಗಗಳಿಗಂತೂ ಸಿನಿಮಾ ಕಥೆಗಳೇ ವಸ್ತುವಾದುವು. ಸಿನಿಮೀಯ ಘಟನೆಗಳು, ಕುತೂಹಲಭರಿತ ತಿರುವುಗಳು, ಜನಪ್ರಿಯ ಧಾಟಿಯ ಹಾಡುಗಳು ಚಲಾವಣೆಗೆ ಬಂದುವು. ಕಲಾವಿದರ ವೇಷಭೂಷಣದಲ್ಲೂ ಬದಲಾವಣೆಗಳಾದವು. ಸಾಮಾಜಿಕ ಪ್ರಸಂಗಗಳು ಬಂದಾಗ ಕಿರೀಟವಿಲ್ಲದ ಪಾತ್ರಗಳು ರಂಗವನ್ನು ಪ್ರವೇಶಿಸಿ ಯಕ್ಷಗಾನದ ಮೂಲ ಸ್ವರೂಪಕ್ಕೆ ಧಕ್ಕೆ ತಂದವು. ಹಿಂದೆಲ್ಲ ಇದ್ದ ಸ್ವಯಂ ಸ್ಫೂರ್ತಿಯ ಮಾತುಗಾರಿಕೆಯಾಗಲಿ, ಮೌಲ್ಯ ಪ್ರತಿಪಾದನೆಯಾಗಲಿ ಕಾಣದೆ ಜನರಿಗೆ ಏನು ಇಷ್ಟವೋ ಅಂತಹ ಮಾತುಗಳನ್ನು ಕಲಾವಿದರು ಆಡಲು ಪ್ರಾರಂಭಿಸಿದರು. ಪೌರಾಣಿಕ ಪ್ರಸಂಗಗಳಲ್ಲಿ ಕಾಣಿಸುವ ನವನವೀನತೆ ಇವತ್ತಿನ ಡೇರೆ ಮೇಳದವರ ಪ್ರದರ್ಶನದಲ್ಲಿ ಕಾಣುತ್ತಿಲ್ಲ. ಇದರಿಂದಾಗಿ ಕಲಾತ್ಮಕತೆಗೆ ಧಕ್ಕೆ ಬಂದಿತು. ಆದರೆ ವಾಣಿಜ್ಯೀಕರಣದಿಂದಾಗಿ ಕಲಾವಿದರಲ್ಲಿ ತಾರಾಮೌಲ್ಯಗಳು ಹುಟ್ಟಿ ಕೊಂಡವು. ಜನತೆ ಕಲಾವಿದರನ್ನು ಆರಾಧಿಸುವ ಪ್ರವೃತ್ತಿ ಬೆಳೆಯಿತು. ಮುಂಬಯಿಯಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಮಂಗಳೂರಿಗೆ ವಿಮಾನದಲ್ಲಿ ಹಾರಾಡುವ ಯೋಗಗಳು ಯಕ್ಷಗಾನ ಕಲಾವಿದರಿಗೆ ಲಭಿಸಲು ಪ್ರಾರಂಭವಾದವು.

ಟೆಂಟ್ ಆಟದ ಪ್ರಾರಂಭ ಹಾಗೂ ಯಕ್ಷಗಾನ ರಂಗ ಸಂಪ್ರದಾಯದಲ್ಲಿನ ಸ್ಥಿತ್ಯಂತರ ಒಂದಕ್ಕೊಂದು ತಾಳೆ ಆಗುತ್ತದೆ. ಟೆಂಟ್ ಆಟಗಳು ಬರುವ ಮುನ್ನವೇ ಕೆಲವು ವೇಷಗಾರಿಕೆಯಲ್ಲಿ ಸಣ್ಣ ಪ್ರಮಾಣದ ಬದಲಾವಣೆ ಬಂದಿತ್ತು. ಮುಖ್ಯವಾಗಿ ನಾಟಕ ಕಂಪೆನಿಯಲ್ಲಿ ಕಂಡುಬರುವ ರಾಜಾ ಪಾರ್ಟುಗಳ ಪ್ರಭಾವ ಕೆಲವರ ವೇಷಗಾರಿಕೆಯಲ್ಲಿ ಕಾಣಿಸಿಕೊಂಡಿತ್ತು. ಮಾತುಗಾರಿಕೆಗೆ ಹೆಚ್ಚಿನ ಒತ್ತು ಬಂದಿತ್ತು. ಜನ ಬಯಸಿದರೆಂದು ಬದಲಾವಣೆ ಬಂತೋ ಅಥವಾ ಜನಜೀವನದಲ್ಲೇ ವ್ಯಾಪಾರಿ ಭಾವನೆ ಹೆಚುತ್ತಿರುವುದರ ಫಲವೋ ಅಂತು ಸಂಸ್ಕೃತಿಯ ಅಂಗವಾದ ಯಕ್ಷಗಾನವು ವ್ಯಾಪಾರೀ ಧೋರಣೆಯನ್ನು ತಳೆಯಿತು. ಇದರಿಂದಾಗಿಯೆ, ವೇಷಗಾರಿಕೆ, ಕುಣಿತ, ಅಭಿನಯ, ಸಾಹಿತ್ಯ, ತಾಂತ್ರಿಕ ಅಂಶ ಎಲ್ಲ ಅಂಗದಲ್ಲೂ ಬದಲಾವಣೆ ಬಂದಿತು. ಈ ಡೇರೆಯುಗವು ಯಕ್ಷಗಾನ ಕಲೆಯ ದೃಷ್ಟಿಯಿಂದ ಒಂದು ಸಂಕ್ರಮಣಾವಸ್ಥೆ ಯಂತಾದ್ದೆನ್ನಬಹುದು. ಟೆಂಟ್ ಮೇಳಗಳಲ್ಲದೆ ಅಲ್ಲಿ ಉಳಿದಿರುವ ಹರಕೆ ಆಟದ ಮೇಳಗಳು ಕೂಡ (ಕಟೀಲು, ಮಂದಾರ್ತಿ, ಮಾರಣಕಟ್ಟೆ ಇತ್ಯಾದಿ) ಸಾಂಪ್ರದಾಯಿಕ ಅಂಶವನ್ನು ಬಿಡುತ್ತಿವೆ. ಈ ರೀತಿ ವ್ಯಾಪಾರೀಕರಣದ ಮೊದಲ ಬಲಿಯೆಂದರೆ 'ಸಭಾಲಕ್ಷಣ' ಅಥವಾ ಪೂರ್ವರಂಗದ ಭಾಗ. ಕೇವಲ ಆಚರಣೆಗೋ ಎಂಬಂತೆ ಬಾಲಗೋಪಾಲ ಹಾಗೂ ಸ್ತ್ರೀವೇಷಗಳು ಬಂದು ಹೋಗುತ್ತವೆ. ಅವುಗಳ ಪ್ರದರ್ಶನ ಅತ್ಯಂತ ಸೀಮಿತ ಹಾಗೂ ಉದ್ದೇಶ ರಹಿತವಾದದ್ದಾಗಿದೆ. ಹಿಂದೆಲ್ಲ ಕಂಡುಬರುತ್ತಿದ್ದ ಶಿಸ್ತು, ಸಂಯಮ, ಹಾಸ್ಯ, ಕಲಿಕೆಯ ಅಂಗವಾಗಿ ಬರುತ್ತಿದ್ದ ರೀತಿ ಎಲ್ಲವೂ ಮಾಯ ವಾಗಿದೆ. ಟೆಂಟ್ ಮೇಳಗಳ ಪ್ರಭಾವವೂ ಹರಕೆ ಆಟ ಆಡುವ ಮೇಳಗಳ ಮೇಲೂ

ಆಗಿವೆ. ಕಿರಿಯ ಕಲಾವಿದರಿಗೆ ಹಿರಿಯರಿಂದ ಮಾರ್ಗದರ್ಶನವೂ ಲಭ್ಯವಾಗುತ್ತಿಲ್ಲ. ಪ್ರತಿಯೊಬ್ಬ ಕಲಾವಿದರು ತನ್ನ ಪಾತ್ರವೇ ಹೆಚ್ಚು ಶೋಭಿಸಬೇಕೆಂದು ಹೊರಟಾಗ ಇಡೀ ಪ್ರದರ್ಶನದ ಒಟ್ಟು ನಿರ್ಧರಿತ ಪರಿಣಾಮ ಇಲ್ಲವಾಗುತ್ತಿದೆ. ಪ್ರದರ್ಶನದಲ್ಲಿ ಹಿಂದೆ ಇದ್ದ ನಯ ನಾಜೂಕು ಹೋಗಿ ಅಬ್ಬರ, ಅತಿರೇಕದ ಅಭಿನಯ, ವಿಪರೀತ ಮಾತುಗಾರಿಕೆ ತುಂಬಿಕೊಂಡಿತು. ಇದರಿಂದಾಗಿ ಪದ್ಯ ಸಾಹಿತ್ಯಕ್ಕೆ, ಭಾವಶ್ರೀಮಂತಿಕೆಗೆ ಇದ್ದ ಬೆಲೆ ಹೊಸ ವಾತಾವರಣದಲ್ಲಿ ಇಲ್ಲವಾಯಿತು.

ಟೆಂಟ್ ಮೇಳಗಳಿಂದಾಗಿ ಯಕ್ಷಗಾನ ರಂಗಭೂಮಿಯಲ್ಲಿ ನೃತ್ಯದ ಭಾಗ ಸೊರಗುತ್ತಿದೆ. ಉತ್ತಮ ಕುಣಿತ ಪ್ರದರ್ಶಿಸಿ ತಮ್ಮದೇ ಶೈಲಿ ಸ್ಥಾಪಿಸಿದ ಕಲಾವಿದರು ಕಣ್ಮರೆಯಾಗಿದ್ದಾರೆ. ಹೊಸ ಕಲಾವಿದರಾದವರು ಸುಲಭದ ಮಾರ್ಗ ಹಿಡಿದದ್ದರಿಂದ ಪರಂಪರೆಯ ಕಲಿಕೆ ಲುಪ್ತವಾಗಿ ಆಟಗಳನ್ನು ಮಾತುಗಾರಿಕೆ ತುಂಬಿಕೊಳ್ಳುತ್ತಿದೆ. ಕಂಪನ ನಾಟಕ, ಚಲನಚಿತ್ರದಿಂದ ಪ್ರಭಾವಿತವಾಗಿಯೇ ಏನೋ ಜಲಕೇಳಿ, ವನ ವಿಹಾರ, ಪ್ರಿಯ ಪ್ರೇಯಸಿಯರ ಪ್ರಣಯಾಂಕುರ ಇತ್ಯಾದಿ ದೃಶ್ಯಗಳು ಯಕ್ಷಗಾನ ರಂಗದಲ್ಲಿ ಬರುತ್ತಿದೆ. ಪ್ರಯೋಗದಲ್ಲಿ ಇಂಥವಕ್ಕೆ ಹೆಚ್ಚು ಹೆಚ್ಚು ಅವಕಾಶವನ್ನು ನೀಡಲಾಗುತ್ತಿದೆ. ನೃತ್ಯದ ಲಾಸ್ಯದ ಮೂಲಕ ಚೊಕ್ಕವಾಗಿ ಶೃಂಗಾರ ನಿರೂಪಣೆ ಮಾಡುತ್ತಿದ್ದ ಕಾಲ ಹೋಗಿ, ಪ್ರಣಯ ಚೇಷ್ಟೆ, ಆಂಗಿಕ ಅಭಿನಯಗಳು ಹೆಚ್ಚಿದವು.

ತುಳು ಪ್ರಸಂಗಗಳು :

ತೆಂಕುತಿಟ್ಟಿನ ಡೇರೆಮೇಳಗಳವರು ಜನಾಕರ್ಷಣೆಗೆ ಇನ್ನೊಂದು ದಾರಿಯನ್ನು ಹಿಡಿದರು. ಮೊದಲಿಗೆ 'ಕೋಟಿ ಚೆನ್ನಯ'ವನ್ನು ಆಡುವಾಗ ತುಳು ಮತ್ತು ಕನ್ನಡ ಎರಡೂ ಭಾಷೆಗಳ ಮಿಶ್ರಣದಿಂದ ಪ್ರದರ್ಶನ ರೂಪುಗೊಂಡು ಜನಾಕರ್ಷಣೆ ಗೊಂಡದ್ದರಿಂದ ಮುಂದೆ ಇದೇ ನಾಂದಿಯಾಗಿ ಸಂಪೂರ್ಣ ತುಳು ಪ್ರದರ್ಶನಗಳನ್ನೇ ಆಡುವ ಪರಿಪಾಠ ಬಂತು. ಸಿರಿಮಹಾತ್ಮೆ, ದೇವಪುಂಜ ಪ್ರತಾಪ, ಕೋರ್ದಬ್ಬ ಬಾರಗ, ಕಾಡಮಲ್ಲಿಗೆ, ಬೊಳ್ಳಿದ ಗಿಂಡಿ, ಪಟ್ಟದ ಪದ್ಮಲೆ, ಬಿರ್ದ್‌ರ ಬೈರವೆರ್, ಸೊರ್ಕುದ ಸಿರಿಗಿಂಡೆ, ಬೆಂಗ್‌ದಬಾಲೆನಾಗಿ, ಸತ್ಯದಪ್ಪೆ ಚೆನ್ನಮ್ಮ ಇತ್ಯಾದಿ ಹೊಸ ಹೊಸ ತುಳು ಪ್ರಸಂಗಗಳು ಬೆಳಕು ಕಂಡವು. ಹೆಚ್ಚಾಗಿ ತುಳುನಾಡಿನ ಅರಸು ಬಲ್ಲಾಳರ, ಕಟ್ಟಾಳುಗಳ, ದೈವಗಳ ಕಥೆಯೇ ವಸ್ತುವಾಗಿರುವುದು ಇಲ್ಲಿನ ವಿಶೇಷ. ಇವತ್ತಿನ ತುಳು ಪ್ರಸಂಗಗಳ ಪ್ರದರ್ಶನಗಳ ಬಗ್ಗೆ ಅಲ್ಲಿನ ಸಂಭಾಷಣೆಯ ಶೀಲ-ಅಶ್ಲೀಲತೆಯ ಬಗ್ಗೆ ಸಾಕಷ್ಟು ವಾದ ವಿವಾದವಿದೆ. ಅನಂತರಾಮ ಬಂಗಾಡಿ, ಸೀತಾನದಿ ಗಣಪಯ್ಯ ಶೆಟ್ಟಿ, ನಾರಂಬಾಡಿ ಸುಬ್ಬಯ್ಯ ಶೆಟ್ಟಿ, ಶಿಮಂತೂರು ನಾರಾಯಣ ಶೆಟ್ಟಿ ಮುಂತಾದ ಹೊಸ ಪ್ರಸಂಗಕಾರರು ಈ ಕಾಲಮಾನದಲ್ಲಿ ಬೆಳಕಿಗೆ ಬಂದರು.

ಟೆಂಟ್ ಮೇಳಗಳಿಂದ ಅನೇಕ ಹೊಸ ಬಗೆಯ ಪ್ರಯೋಗಗಳು ನಡೆದವು. ಶ್ರೀ ವಿಠಲಶೆಟ್ಟರ ನೇತೃತ್ವದಲ್ಲಿ ಒಂದೇ ಮೇಳದಲ್ಲಿ ಅರ್ಧರಾತ್ರಿ ಬಡಗುತಿಟ್ಟಿನ

ಪ್ರದರ್ಶನ, ಇನ್ನರ್ಥ ತೆಂಕುತಿಟ್ಟಿನ ಪ್ರದರ್ಶನಗಳಾದುವು. ಮಳೆಗಾಲದ ಸಂದರ್ಭದಲ್ಲಿ ಪೌರಾಣಿಕ ಪ್ರಸಂಗಗಳಿಗೆ ಕಾಯಂ ಥಿಯೇಟರ್ ಕಟ್ಟಿ ಸೀನರಿಗಳನ್ನು ಬಳಸಿ ದೃಶ್ಯಾವಳಿಗಳನ್ನು ಸೃಷ್ಟಿಸಿ ತಿಂಗಳುಗಟ್ಟಲೆ ಪ್ರದರ್ಶನ ನೀಡುವ ಪ್ರಯೋಗವೂ ಮಂಗಳೂರಿನಲ್ಲಿ ನಡೆಯಿತು. 1965ರಲ್ಲಿ ನಡೆದ ಈ ಬಗೆಯ ಪ್ರಯೋಗಗಳಿಂದ ಹಿಂದೆಲ್ಲ ಕೇವಲ ಬೇಸಗೆ ಕಾಲಕ್ಕೆ ಮಾತ್ರ ಲಭ್ಯವಾಗುತ್ತಿದ್ದ ಯಕ್ಷಗಾನದ ಪ್ರದರ್ಶನ ಮಳೆಗಾಲದಲ್ಲೂ ನೋಡುವಂತಾಯಿತು. ಕರಾವಳಿ ಹಾಗೂ ಮಲೆನಾಡಿನಲ್ಲಿ ಕಂಡು ಬರುವ ಯಕ್ಷಗಾನ ಪ್ರದರ್ಶನಗಳಲ್ಲಿ ಮೂರು ಪ್ರಧಾನ ಸೀಳುಗಳು ಕಂಡು ಬರುತ್ತವೆ. ಅದನ್ನೆ ತೆಂಕುತಿಟ್ಟು, ಬಡಗುತಿಟ್ಟು ಹಾಗೂ ಉತ್ತರ ಕನ್ನಡ ಮೇಳಗಳೆಂದು ಕರೆಯುತ್ತಾರೆ.

ತೆಂಕುತಿಟ್ಟು:

ಉಡುಪಿಯಿಂದ ದಕ್ಷಿಣಕ್ಕೆ ಕಾಸರಗೋಡಿನವರೆಗಿನ ಕರಾವಳಿ ಭಾಗ ಹಾಗೂ ಅದಕ್ಕೆ ಹೊಂದಿಕೊಂಡ ಮಲೆನಾಡ ಭಾಗದಲ್ಲಿ ಈ ತಿಟ್ಟಿನ ಪ್ರಾಬಲ್ಯವಿದೆ. ರಾಮಾಯಣದ ಪ್ರಸಂಗಗಳು ಇಲ್ಲಿ ಹಿಂದೆ ಸಾಕಷ್ಟು ಪ್ರದರ್ಶನಗೊಳ್ಳುತ್ತಿದ್ದವು. ಕುಣಿತಕ್ಕೆ ತಕ್ಕಂತೆ ಕಥೆ ಹಾಗೂ ಮಾತುಗಾರಿಕೆಗೆ ಇಲ್ಲಿ ಹೆಚ್ಚಿನ ಪ್ರಾಧಾನ್ಯವಿದೆ. ಹಿಂದೆಲ್ಲ ಕೂಡ್ಲು ಕಟೀಲು, ಇಚ್ಲಂಪಾಡಿ, ಕೋರಕೂಡು, ಧರ್ಮಸ್ಥಳ, ಕುಂಡಾವು, ಮೂಲ್ಕಿ ಮೇಳಗಳು ಹರಕೆ ಹಾಗೂ ಬಯಲಾಟದ ಆಟಗಳನ್ನು ಆಡುತ್ತಿದ್ದವು. ಈಗ ಕಟೀಲು ದೇವಸ್ಥಾನವೊಂದರಲ್ಲೇ ನಾಲ್ಕು ಹರಕೆ ಆಟದ ಮೇಳಗಳಿವೆ. ವಿಠಲ ಶೆಟ್ಟರ ವ್ಯವಸ್ಥಿತವಾದ 'ಯಜಮಾನಿಕೆ'ಯಲ್ಲಿ 250 ಕಲಾವಿದರ, ಕಾರ್ಮಿಕರ ಸಂಘಟನೆ ಇಲ್ಲಿದೆ. ಸಾವಿರಾರು ಆಟಗಳು ಈಗಾಗಲೇ ನೋಂದಾಯಿತಗೊಂಡಿದ್ದು, ಮುಂದಿನ ದಿನಗಳಿಗಾಗಿ ಕಾಯುತ್ತಿವೆ. ಈ ತಿಟ್ಟಿನಲ್ಲಿ ಅಸಂಖ್ಯ ಟೆಂಟ್ ಮೇಳಗಳಿವೆ. ಕುತ್ಯಾಳ ಗೋಪಾಲಕೃಷ್ಣ ಯಕ್ಷಗಾನ ಸಭಾ, ಇರಾ ಸೋಮನಾಥೇಶ್ವರ ಯಕ್ಷಗಾನ ನಾಟಕ ಮಂಡಳಿ, ಶ್ರೀ ಕರ್ನಾಟಕ ಯಕ್ಷಗಾನ ಸಭಾ, ಮಂಗಳೂರು, ಶ್ರೀ ಮಹಾಮ್ಮಾಯಿ ಯಕ್ಷಗಾನ ಕಲಾಮಂಡಳಿ, ಸುರತ್ಕಲ್, ಶ್ರೀ ಕದ್ರಿ ಮಂಜುನಾಥೇಶ್ವರ ಯಕ್ಷಗಾನ ಕಲಾಮಂಡಳಿ, ಮಂಗಳೂರು, ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ಕೃಪಾಪೋಷಿತ ಯಕ್ಷಗಾನ ಮಂಡಳಿ, ಶ್ರೀಕ್ಷೇತ್ರ ಧರ್ಮಸ್ಥಳ, ಸುಬ್ರಹ್ಮಣ್ಯ ಮೇಳ ಮುಂತಾದುವು ಖ್ಯಾತಗೊಂಡವುಗಳಾಗಿವೆ. ಧರ್ಮಸ್ಥಳ ಮೇಳ ಬಯಲಾಟ ಹಾಗೂ ಟೆಂಟ್ ಆಟಗಳೆರಡನ್ನೂ ಆಡುತ್ತವೆ.

ತೆಂಕುತಿಟ್ಟಿನಲ್ಲಿ ಭಾಗವತರು ಜಾಗಟೆ ಬಾರಿಸುತ್ತಾರೆ. ಚಂಡೆವಾದಕರು ನಿಂತೇ ಚಂಡೆ ನುಡಿಸುತ್ತಾರೆ. ಇಲ್ಲಿನ ಮದ್ದಲೆಗೆ 'ಕರ್ನ' ಇರುತ್ತದೆ. ಈಗೀಗ ಮೃದಂಗ ಹಾಗೂ ಅರೆ ಮೃದಂಗದ ಬಳಕೆ ಇಲ್ಲಿ ಕಂಡುಬರುತ್ತದೆ. ಗಾಜಿನ ಮಣಿಗಳಿಂದ ಮಾಡಿದ ಅಲಂಕಾರವಿರುವ ಕಿರೀಟದ ಬಳಕೆಯೇ ಇಲ್ಲಿ ಹೆಚ್ಚು. ಸಿದ್ಧಪಡಿಸಿದ

ಕಾಯಂ ಮುಂಡಾಸಗಳನ್ನು ಇಲ್ಲಿನ ಪಾತ್ರಧಾರಿಗಳು ಧರಿಸುತ್ತಾರೆ. ಗಿರಿಕೆ ಕುಣಿತಕ್ಕೆ ಅನುಕೂಲವಾಗುವ 'ಬಾಲಮುಂಡು' ಅಥವಾ 'ತಿರುಗಣಿ' ಎಂಬ ವಿನ್ಯಾಸವಿದೆ. ಕಥಕ್ಕಳಿಯ ವೇಷಗಾರಿಕೆಯ ಪ್ರಭಾವ ಇಲ್ಲಿ ಕಂಡುಬರುತ್ತದೆ. ತೆಂಕುತಿಟ್ಟುವಿನಲ್ಲಿ ಬಣ್ಣದ ವೇಷಕ್ಕೆ ಹೆಚ್ಚಿನ ಗೌರವವಿದೆ. ಅತ್ಯಂತ ಆಕರ್ಷಕವಾಗಿ ಇಲ್ಲಿ ಬಣ್ಣದ ವೇಷವನ್ನು ಕಟ್ಟಿಕೊಳ್ಳುತ್ತಾರೆ. ಮಯಖವರ್ಣಿಕೆಯಲ್ಲಿ ಕಂಡುಬರುವ 'ಚುಟ್ಟಿ'ಯ ಕೆಲಸವಂತೂ ವಿಶಿಷ್ಟವಾದುದಾಗಿದೆ. ಈ ವೇಷ ಅಡಿಯಿಂದ ಮುಡಿಯವರೆಗೆ ಭವ್ಯ ವಾಗಿರುತ್ತದೆ. ನೃತ್ಯದ ಹೆಜ್ಜೆಗಳು ದೊಡ್ಡದಾಗಿದ್ದು ದಾಪುಗಾಲಿನ ಕುಣಿತ ಕಂಡು ಬರುತ್ತದೆ. ಗಿರಿಕೆ ಹೊಡೆದು ಕುಣಿಯುವುದು, ಮೈನೆಗೆದು ತಿರುಗುವುದು ಇಲ್ಲಿನ ವಿಶೇಷವಾಗಿದೆ. ಪ್ರತಿ ಪದ್ಯದ ಮೊದಲ ಚರಣದ ನಂತರ ಬಾರಿಸುವ ಬಡ್ತಿಗೆ ಎಂಬ ಕ್ರಮ ಇಲ್ಲಿನ ವಿಶೇಷವಾಗಿದೆ. ಅಯ್ಯಪ್ಪ, ಕೋಲುಡಿ ಸುಬ್ಬ, ಪುತ್ತೂರು ಕೃಷ್ಣಭಟ್, ಕುಂಬಳೆ ತಿಮ್ಮಪ್ಪ, ಐತಪ್ಪ, ಮುಳಿಯಾಳ ಕೇಚಣ್ಣ ಭಟ್ಟ, ಕುಂಜಲ ಹಾಸ್ಯಗಾರ, ಅಳಿಕೆ ರಾಮಯ್ಯ, ದಿ॥ ಕುರಿಯ ವಿಠಳ ಶಾಸ್ತ್ರಿ, ಮದವೂರು ನಾರಾಯಣ ಹಾಸ್ಯಗಾರ, ಬಣ್ಣದ ಮಾಲಿಂಗ, ಕುಂಬಳೆ ಕುಟ್ಟಪ್ಪ, ಶೇಣಿ ಗೋಪಾಲಕೃಷ್ಣ ಭಟ್ಟ, ಕೆ. ಗೋವಿಂದ ಭಟ್ಟ, ಕುಂಬಳೆ ಸುಂದರರಾವ್, ಐತಪ್ಪ ಶೆಟ್ಟಿ, ಮುಂಕುಡೆ ಸಂಜೀವ ಶೆಟ್ಟಿ, ಕೊಳ್ಯೂರು ರಾಮಚಂದ್ರರಾವ್, ಶಂಕರನಾರಾಯಣ ಸಾಮಗ, ರಾಮದಾಸ ಸಾಮಗ, ವಿಟ್ಲ ಗೋಪಾಲಕೃಷ್ಣ ಜೋಷಿ, ಕೇತಗಡಿ ಗುಡ್ಡಪ್ಪಗೌಡ, ಚಂದ್ರಗಿರಿ ಅಂಬು, ಅಡ್ಕಸ್ಥಳ ನಾರಾಯಣ ಶೆಟ್ಟಿ, ಮಾಧವ ಶೆಟ್ಟಿ, ವೇಣೂರು ವೆಂಕಟರಮಣ ಭಟ್ಟ, ಕೊಳ್ಯೂರು ನಾರಾಯಣ ಭಟ್ಟ ಮುಂತಾದ ಅಸಂಖ್ಯ ಕಲಾವಿದರು ಇಲ್ಲಿನ ಪ್ರದರ್ಶನಗಳನ್ನು ಶ್ರೀಮಂತಗೊಳಿಸಿದ್ದಾರೆ. ಅಂತೆಯೇ ಕೊರಗಟ್ಟ ಶೆಟ್ಟಿ, ವಿಠಲ ಶೆಟ್ಟಿ, ಶಂಭು ಹೆಗಡೆ, ಕುರಿಯ ವಿಠಲ ಶಾಸ್ತ್ರಿ ಮುಂತಾದವರು ಈ ತಿಟ್ಟಿನ ಬೆಳವಣಿಗೆ ಯಲ್ಲಿ, ಬದಲಾವಣೆಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ತೆಂಕುತಿಟ್ಟಿನವರು ಹಾಗೂ ಬಡಗು ತಿಟ್ಟಿನವರು ಒಂದೇ ಪ್ರಸಂಗವನ್ನು ಪ್ರದರ್ಶಿಸುತ್ತಿದ್ದರೂ ಮೇಲು ನೋಟಕ್ಕೆ ವ್ಯತ್ಯಾಸಗಳು ಎದ್ದು ಕಾಣುತ್ತವೆ. ವಾದ್ಯಗಳ ಸ್ವರೂಪದಲ್ಲಿ, ಹಿಮ್ಮೇಳದ ಸ್ಥಾನಕ್ರಮದಲ್ಲಿ, ತಾಳ ಬಾರಿಸು ವುದರಲ್ಲಿ, ನರ್ತನ ವಿಧಾನದಲ್ಲಿ, ನಟರ ವೇಷಭೂಷಣಗಳಲ್ಲಿ ಸ್ಪಷ್ಟವಾಗಿ ವ್ಯತ್ಯಾಸ ಕಂಡುಬರುತ್ತದೆ. ಆದರೆ, ಈ ಎರಡೂ ತಿಟ್ಟಿನವರ ಪ್ರದರ್ಶನಗಳು ಜಿಲ್ಲೆಯಾದ್ಯಂತ ನಡೆದು ಎಲ್ಲರ ಮೆಚ್ಚುಗೆ ಗಳಿಸುವುದು ವಿಶೇಷವಾಗಿದೆ. ತೆಂಕುತಿಟ್ಟಿನಲ್ಲಿ ಬಲಿಪ ನಾರಾಯಣ ಭಾಗವತ, ಮಪ್ಪಾರು ಕೇಚಣ್ಣ ಭಾಗವತ, ದಾಮೋದರ ಮಂಡೆಚ್ಚ, ಕಡತೋಕ ಮಂಜುನಾಥ ಭಾಗವತ, ಮಾಂಬಾಡಿ ನಾರಾಯಣ ಭಟ್, ಅಗರಿ ಶ್ರೀನಿವಾಸ ಭಾಗವತರು ಖ್ಯಾತಿ ಗಳಿಸಿದವರಾಗಿದ್ದಾರೆ.

ಬಡಗುತಿಟ್ಟು:

ಉಡುಪಿಯಿಂದ ಉತ್ತರ ಹಾಗೂ ಹೊನ್ನಾವರ ತಾಲ್ಲೂಕಿನಿಂದ ದಕ್ಷಿಣ ಭಾಗ ಹಾಗೂ ಅದಕ್ಕೆ ಹೊಂದಿಕೊಂಡಿರುವಂತಹ ಮಲೆನಾಡ ಪ್ರದೇಶದಲ್ಲಿ ಈ

ತಿಟ್ಟಿನ ಬಾಹುಳ್ಯವಿದೆ. ಕುಣಿತ ಹಾಗೂ ಗತ್ತುಗಳಿಗೆ ಇಲ್ಲಿ ಪ್ರಾಧಾನ್ಯ. ಮಂದಾರ್ತಿ, ಪೆರ್ಡೂರು, ಸೌಕೂರು, ಮಾರಣಕಟ್ಟೆ, ಕಮಲಶಿಲೆ, ಹಾಲಾಡಿ ಮೇಳಗಳು ಇಲ್ಲಿ ಹರಕೆ ಆಟವಾಡುವ ಮೇಳಗಳಾಗಿವೆ. ಘಟ್ಟದ ಪ್ರದೇಶಗಳಲ್ಲಿರುವ ರಂಜದ ಕಟ್ಟೆ, ಸಾಗರ ಪ್ರಾಂತ್ಯದ ಶೆಡ್ತಿಕೆರೆ, ತೀರ್ಥಹಳ್ಳಿಯ ಮಹಿಷೆ ಮುಂತಾದವುಗಳು ಕೂಡ ಕೆಲವು ಕಾಲ ಅಸ್ತಿತ್ವದಲ್ಲಿದ್ದ ಮೇಳಗಳಾಗಿವೆ. ಅದೇ ರೀತಿ, ಗುರುಪ್ರಸಾದಿತ ಯಕ್ಷಗಾನ ಮಂಡಳಿ ಸಾಲಿಗ್ರಾಮ, ಅಮೃತೇಶ್ವರಿ ಮೇಳ, ಕೋಟ, ಲಕ್ಷ್ಮೀವೆಂಕಟರಮಣಸ್ವಾಮಿ ಕೃಪಾಪೋಷಿತ ಯಕ್ಷಗಾನ ಮಂಡಳಿ, ಮೂಲ್ಕಿ, ಪೆರ್ಡೂರು ಮೇಳಗಳು ಡೇರೆ ಆಟಗಳನ್ನು ಆಡುವ ಮೇಳಗಳಾಗಿವೆ. ಇಲ್ಲಿನ ಭಾಗವತರು ತಾಳವನ್ನು ಬಳಸುತ್ತಾರೆ. ಚಂಡೆಯವರು ರಂಗದ ಬಲಭಾಗದಲ್ಲಿ ಕುಳಿತು ಚಂಡೆ ಬಾರಿಸುತ್ತಾರೆ. ಚಿಕ್ಕದಾದ 'ಏರುಮದ್ದಲೆ'ಯ ಬಳಕೆ ಕಂಡುಬರುತ್ತದೆ. ಕರ್ಣದ ಬದಲು ಬೋನವನ್ನು ಮದ್ದಲೆಗೆ ಬಳಸುತ್ತಾರೆ. ಇಲ್ಲಿನ ಪದ್ಧತಿಯಲ್ಲಿ ಬಿಡಿತ ಮುಕ್ತಾಯಗಳು ಆಯಾ ಪದಗಳೊಂದಿಗೆ ಕೊನೆಗೊಳ್ಳುವುದರಿಂದ ತಾಳದ ಬಳಕೆ ಸಾಕಾಗುತ್ತದೆ. ಕುಣಿತದ ಗತಿಯಲ್ಲೂ ನಾನಾ ತರದ ಹೆಜ್ಜೆ ವಿನ್ಯಾಸಗಳಿವೆ. ತೆಂಕುತಿಟ್ಟಿನ ಕುಣಿತದಲ್ಲಿ ತಾಂಡವ ರೀತಿಯ ವೀರ, ಭಯಾನಕ, ರೌದ್ರಗಳಿಗೆ ಪ್ರಾಧಾನ್ಯವಿರುವ ಅಂಶಗಳು ಕಂಡುಬಂದರೆ ಬಡಗುತಿಟ್ಟಿನಲ್ಲಿ ಲಾಸ್ಯಕ್ಕೆ ಹೆಚ್ಚು ಒತ್ತಿದೆ. ಮಂಡಿಯಲ್ಲಿ ತಿರುಗುವುದು ಇಲ್ಲಿನ ವಿಶೇಷವಾಗಿದೆ. ನಾಟ್ಯ ಮೃದುವಾಗಿದ್ದು ಶೃಂಗಾರ, ಕರುಣ ರಸಗಳಿಗೆ ಹೆಚ್ಚು ಒಪ್ಪುವ ಅಂಗಚಲನೆ ಅಭಿನಯ ಪ್ರಧಾನವಾಗಿ ಕಂಡುಬರುತ್ತದೆ. ಹಾರಾಡಿ ಶೈಲಿ ಹಾಗೂ ಮಟ್ಪಾಡಿ ಶೈಲಿಯ ಕುಣಿತ ಗಳೆರಡೂ ರೂಢಿಯಲ್ಲಿ ಕಂಡುಬರುತ್ತದೆ. ಭಾಗವತರ ಹಾಡುಗಾರಿಕೆಯಲ್ಲಿ ಪಾತ್ರಧಾರಿ ಯನ್ನು ಕುಣಿಸುವ ಅಂಶಕ್ಕೆ ಹೆಚ್ಚಿನ ಒತ್ತು ಇರುತ್ತದೆ. ಇಲ್ಲಿ ರಾಜವೇಷಕ್ಕೆ ಮಾತ್ರ ಕಿರೀಟವಿರುತ್ತದೆ. ಉಳಿದಂತೆಲ್ಲ ಮುಂಡಾಸಿನ ಬಳಕೆ ಹೆಚ್ಚು. ಮುಂಡಾಸನ್ನು ಪಾತ್ರಧಾರಿ ಯಾದವನು ತಾನೆ ಕಟ್ಟಿಕೊಳ್ಳುತ್ತಾನೆ. ಅಶ್ವತ್ಥ ಎಲೆಯ ಆಕಾರದ ಕೇದಗೆ ಮುಂದಲೆ ಇರುವ ಮುಂಡಾಸನ್ನು ಕಟ್ಟಿಕೊಳ್ಳುವುದು ಈ ತಿಟ್ಟಿನ ವೈಶಿಷ್ಟ್ಯವಾಗಿದೆ. ಕೋರೆ ಮುಂಡಾಸು, ಕೆಂಪು ಮುಂಡಾಸು, 8–10 ಅಟ್ಟೆಗಳ ದೊಡ್ಡಮುಂಡಾಸು ಮುಂತಾದ ವಿವಿಧ ಪ್ರಕಾರಗಳಿವೆ.

ಬಡಗುತಿಟ್ಟಿನಲ್ಲಿ ಅನೇಕ ಖ್ಯಾತಿ ಪಡೆದ ಕಲಾವಿದರು ಈ ತಿಟ್ಟಿಗೊಂದು ವಿಶಿಷ್ಟ ಸ್ಥಾನ ಗಳಿಸಿಕೊಟ್ಟಿದ್ದಾರೆ. ರಾಷ್ಟ್ರಪ್ರಶಸ್ತಿ ವಿಜೇತ ದಿ॥ ಹಾರಾಡಿ ರಾಮಗಾಣಿಗ, ದಿ॥ ಗಣಪತಿ ಪ್ರಭು, ಮಾರ್ವಿ ರಾಮಕೃಷ್ಣ ಹೆಬ್ಬಾರ, ಗುರು ವೀರಭದ್ರನಾಯಕ, ಹಾರಾಡಿ ಕೃಷ್ಣ ಗಾಣಿಗ, ಪಾಂಡೇಶ್ವರ ಪುಟ್ಟಯ್ಯ, (ದಿ॥ ಪಿ. ಕಾಳಿಂಗರಾಯರ ತಂದೆ), ಬಡಾಕೆರೆ ರಾಮಪ್ಪ ಅಡಿಗ, ಕಿಸ್ಮತಿ ಪರಮೇಶ್ವರ ಹೆಬ್ಬಾರ್, ಸಾಂತಾವರ ನಾಗಪ್ಪ ಶೇರಿಗಾರ, ಬಣ್ಣದ ವೇಷದ ಉಪ್ರಳ್ಳಿ ಶೇಷ, ಬಣ್ಣದ ಕುಷ್ಠ, ಸಕ್ಕಟ್ಟು ಲಕ್ಷ್ಮೀನಾರಾಯಣ, ಕೊಕ್ಕರ್ಣೆ ನರಸಿಂಹ, ಕೊಳ್ಗೆಬೈಲು ಶೀನ, ಹಾರಾಡಿ ನಾರಾಯಣ, ಕೋಟ ವೈಕುಂಠ, ಅರಾಟೆ ಮಂಜು, ಮಂಟಪ ಪ್ರಭಾಕರ ಉಪಾಧ್ಯ, ರಾಮನಾಯರಿ,

ಸಾಲಿಗ್ರಾಮ ಮಂಜುನಾಥಯ್ಯ, ಮುಖ್ಯಪ್ರಾಣ ಕಿನ್ನಿಗೋಳಿ, ಕುಂಜಾಲು ರಾಮ ಕೃಷ್ಣಯ್ಯ ಮುಂತಾದವರು ಪ್ರಸಿದ್ಧ ವೇಷಧಾರಿಗಳಾಗಿದ್ದಾರೆ. ಗುಂಡ್ಮಿ ರಾಮಚಂದ್ರ ನಾವಡ, ಕುಂಜಾಲು ಶೇಷಗಿರಿ ಕಿಣಿ, ಮಾರ್ವಿ ಶ್ರೀನಿವಾಸ ಉಪ್ಪೂರ, ನಾರಣಪ್ಪ ಉಪ್ಪೂರ, ದಿ॥ ಕಾಳಿಂಗ ನಾವಡ, ಕೋಟ ಶ್ರೀನಿವಾಸ ನಾಯಕ, ಜಾನುವಾರಕಟ್ಟೆ ಗೋಪಾಲಕೃಷ್ಣ ಕಮ್ತಿ, ಸುಬ್ರಹ್ಮಣ್ಯ ಧಾರೇಶ್ವರ ಮುಂತಾದವರು ಖ್ಯಾತ ಭಾಗವತರಾಗಿ ಬಡಗುತಿಟ್ಟಿನಲ್ಲಿ ಕಾಣಿಸಿಕೊಂಡಿದ್ದಾರೆ. ಬಡಗುತಿಟ್ಟಿನ ಯಕ್ಷಗಾನದಲ್ಲಿ 1970ರ ದಶಕ ಬಹು ಮಹತ್ವವಾದುದು. ಶ್ರೀಧರ ಹಂದೆಯವರ ನೇತೃತ್ವದಲ್ಲಿ ಬಡಗುತಿಟ್ಟಿನ ಮೇಳಕ್ಕೆ ಉತ್ತರ ಕನ್ನಡದ ಕಲಾವಿದರಾದ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ ಹಾಗೂ ಗಜಾನನ ಹೆಗಡೆಯವರ ಪ್ರವೇಶದೊಂದಿಗೆ ಟೆಂಟ್‌ಮೇಳದ ಆಟ ಪ್ರಾರಂಭವಾಯಿತು. ಅಲ್ಲಿಂದ ಮುಂದೆ ಹೆಚ್ಚು ಹೆಚ್ಚು ಉತ್ತರ ಕನ್ನಡದ ಕಲಾವಿದರು ಈ ಮೇಳಗಳಲ್ಲಿ ಭಾಗವಹಿಸಿ ಇಲ್ಲಿನ ಆಟಗಳನ್ನು ಶ್ರೀಮಂತಗೊಳಿಸಿದರು. ಅಮೃತೇಶ್ವರಿ ಮೇಳ, ಸಾಲಿಗ್ರಾಮ ಮೇಳಗಳು ಯಶಸ್ವೀ ಪ್ರದರ್ಶನಗಳನ್ನು ನೀಡುವ ಮೇಳಗಳೆಂಬ ಖ್ಯಾತಿಯನ್ನು ಇದರಿಂದ ಗಳಿಸಿದವು.

ಉತ್ತರ ಕನ್ನಡ ತಿಟ್ಟು:

ತೀರಾ ಬಡಗುತಿಟ್ಟೆಂದೆ ಕರೆಸಿಕೊಳ್ಳುವ ಇಲ್ಲಿ ಮೇಳಗಳ ಸಂಖ್ಯೆ ಕಡಿಮೆ ಯಾದರೂ, ಸಮರ್ಥ ಕಲಾವಿದರು ಸಾಕಷ್ಟಿದ್ದಾರೆ. ಹೊನ್ನಾವರದಿಂದ ಉತ್ತರಕ್ಕಿರುವ ಉತ್ತರ ಕನ್ನಡ ಜಿಲ್ಲೆ ಹಾಗೂ ಅದಕ್ಕೆ ಹೊಂದಿಕೊಂಡಿರುವ ಮಲೆನಾಡಿನ ಭಾಗದಲ್ಲಿ ಪ್ರಚುರವಿದೆ. ಹಿಂದೆ ಹಾಸ್ಯಗಾರ ಮೇಳ, ಕರ್ಕಿಮೇಳ, ಇಡಗುಂಜಿ ಮೇಳ ಕೆರೆಮನೆ, ಮೂಕೂರು ಕಲ್ಲಟ್ಟಿ ಮೇಳ, ಗುಂಡಬಾಳೆ ದೇವಸ್ಥಾನದ ಮೇಳಗಳು ಪ್ರಸಿದ್ಧಿಗೊಂಡಿದ್ದವು. ಗುಂಡಬಾಳೆ ಮೇಳವು ಒಂದೇ ಸ್ಥಳದಲ್ಲಿದ್ದು ಹರಕೆ ಆಟವಾಡುತ್ತಿದೆ. ಇಡಗುಂಜಿ ಮೇಳವು ಕೆಲವೊಮ್ಮೆ ಟೆಂಟ್ ಮೇಳವಾಗಿ ತಿರುಗಾಟವಾಡಿದೆ. ಈಚೆಗೆ ಕಾಲಮಿತಿಯ ಪ್ರದರ್ಶನ ನೀಡುವ ಮೇಳವಾಗಿ ಸಂಚರಿಸುತ್ತಿದೆ. ಬಡಗುತಿಟ್ಟಿನಂತೆ ಇಲ್ಲೂ ಮುಂಡಾಸಿನ ಬಳಕೆ ಹೆಚ್ಚು. ಹಿಂದಿನ ವೇಷಗಾರಿಕೆಯಲ್ಲಿ ಮುಂಡಾಸಿನ ಎತ್ತರ ಬಹಳ ಕಡಿಮೆ ಇರುತ್ತಿತ್ತು. ಬಡಗುತಿಟ್ಟಿನಂತೆ ಕುಣಿತಕ್ಕೆ ಒಪ್ಪುವ ಚೌಕುಳಿ ಬಟ್ಟೆಯನ್ನೇ ಉಡುತ್ತಾರೆ. ಇಲ್ಲೂ ಕಿರೀಟದಿಂದ ಶಲ್ಲೆಯನ್ನು ಇಳಿಬಿಡುವ ಕ್ರಮವಿದೆ. ಈ ತಿಟ್ಟಿನಲ್ಲಿ ಅಭಿನಯವೇ ಪ್ರಧಾನವಾದದ್ದು. ಕುಣಿತದಲ್ಲೂ ನಾನಾ ಬಗೆಯ ಅಭಿನಯಗಳು ವ್ಯಕ್ತವಾಗುತ್ತವೆ. ಕಾಲು ಅಗಲ ಮಾಡಿ ಕುಳಿತಂತೆ ನರ್ತಿಸುವುದು ಇಲ್ಲಿನ ವಿಶೇಷ. ಬಡಗುತಿಟ್ಟು ಹಾಗೂ ತೀರಾ ಬಡಗುತಿಟ್ಟಿನಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಈಚೆಗಂತೂ ಎರಡೂ ಕಡೆಯ ಕಲಾವಿದರು ಕಲೆತು ಪ್ರದರ್ಶಿಸುತ್ತಿರುವದರಿಂದ ಇವೆರಡು ತಿಟ್ಟು ಒಂದೇ ಎಂಬಂತಾಗಿದೆ. ಮೂಡ್ಕಣಿ ನಾರಾಯಣ ಹೆಗಡೆ, ರಾಷ್ಟ್ರಪ್ರಶಸ್ತಿ ವಿಜೇತ ಕೆರೆಮನೆ ಶಿವರಾಮ ಹೆಗಡೆ, ರಾಮ ಹೆಗಡೆ, ಲಕ್ಷ್ಮಣ ಹೆಗಡೆ, ಮೂರೂರು ದೇವರ ಹೆಗಡೆ, ಪರಮಯ್ಯ ಹಾಸ್ಯಗಾರ, ಕೆರೆಮನೆ ಮಹಾಬಲ ಹೆಗಡೆ, ಶಂಭು ಹೆಗಡೆ,

ಗಜಾನನ ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಜಲವಳ್ಳಿ ವೆಂಕಟೇಶರಾವ್, ಗೋಡೆ ನಾರಾಯಣ ಹೆಗಡೆ, ಕೂಳಗಿ ಅನಂತಯ್ಯ ಹೆಗಡೆ, ಮೂರೂರು ಈಶ್ವರ ಹೆಗಡೆ, ಗಣಪತಿ ಹೆಗಡೆ ಸಾಲ್ಕೋಡು, ಆಕ್ಟರ್ ಜೋಷಿ, ಹಾಸ್ಯಗಾರ ಮೇಳದ ಕರ್ಕಿ ಪರಮಯ್ಯ ಹಾಸ್ಯಗಾರರು ಮುಂತಾದವರೆಲ್ಲ ಇಲ್ಲಿನ ಪ್ರಸಿದ್ಧ ಕಲಾವಿದರಾಗಿದ್ದಾರೆ. ಈ ತಿಟ್ಟಿನಲ್ಲಿ ಭಾಗವತರಾಗಿ ಗಮನಾರ್ಹರಾಗಿರುವವರೆಂದರೆ ಕೆಪ್ಪೆಕೆರೆ ಸುಬ್ರಾಯ ಭಾಗವತ, ಇಡಗುಂಜಿಯ ಯಾಜಿ ಭಾಗವತರು, ಕಡತೋಕ ಲಕ್ಷ್ಮೀನಾರಾಯಣ ಭಾಗವತರು, ಕೃಷ್ಣ ಭಾಗವತರು, ನೆಬ್ಬೂರು ನಾರಾಯಣ ಭಾಗವತರು, ಅಂಪಾರು ಕೃಷ್ಣವೈದ್ಯರು ಮುಂತಾದವರು.

ಈ ಎಲ್ಲ ತಿಟ್ಟುಗಳಲ್ಲಿ ಮದ್ದಲೆಗಾರರಾಗಿ ಹಾಗೂ ಚಂಡೆ ವಾದಕರಾಗಿ ಕೆಲವರು ತಮ್ಮಛಾಪನ್ನು ಜನಮನದ ಮೇಲೆ ಒತ್ತಿದ್ದಾರೆ. ತೆಂಕಿನಲ್ಲಿ ನಾರಣಪ್ಪಯ್ಯ, ರಾಮಭಟ್ಟ, ನಿಡ್ಲೆ ನರಸಿಂಹ ಭಟ್ಟ, ದಿವಾಣ ಭೀಮಭಟ್ಟರು, ಚಿಪ್ಪಾರು ಕೃಷ್ಣಯ್ಯ ಬಲ್ಲಾಳು ಖ್ಯಾತಿ ಪಡೆದರೆ ಬಡಗು ಹಾಗೂ ತೀರಾ ಬಡಗು ತಿಟ್ಟಿನಲ್ಲಿ ವಾಸುದೇವ ಉಪ್ಪೂರ, ಹಿರಿಯಡ್ಕ ಗೋಪಾಲರಾವ್, ತಿಮ್ಮಯ್ಯ, ಸಾಲಿಗ್ರಾಮ ಮಂಜುನಾಥಯ್ಯ, ದುರ್ಗಪ್ಪ ಗುಡಿಗಾರರು ಖ್ಯಾತಿ ಗಳಿಸಿದ್ದಾರೆ.

ಹೀಗೆ ಈ ಮೂರು ತಿಟ್ಟುಗಳಲ್ಲಿ ಕಳೆದ 50 ವರ್ಷಗಳಲ್ಲಿ ಅಸಂಖ್ಯ ಕಲಾವಿದರು ತಮ್ಮ ಕಲಾಪ್ರದರ್ಶನಗಳನ್ನು ಬೇರೆ ಬೇರೆ ಮೇಳಗಳ ಮೂಲಕ ನೀಡಿ ಜನಮನವನ್ನು ಸೂರೆಗೊಂಡಿದ್ದಾರೆ.

ಮೂಡಲಪಾಯ:

500 ವರ್ಷಗಳಷ್ಟು ಪುರಾತನವಾದ ಮೂಡಲಪಾಯ ಯಕ್ಷಗಾನ ಕರ್ನಾಟಕದ ದಕ್ಷಿಣ ಭಾಗದಲ್ಲಿ ಪ್ರಚಲಿತವಿದ್ದ ಜಾನಪದ ರಂಗಭೂಮಿ. ಹೆಚ್ಚಾಗಿ ದಾವಣಗೆರೆಯಿಂದ ಕೆಳಗೆ ಚಾಮರಾಜನಗರದವರೆಗಿರುವ ಬಯಲುಸೀಮೆಯಲ್ಲಿ ಈ ಪ್ರಕಾರ ಪ್ರಚಲಿತವಿದೆ. ಇಲ್ಲಿ ಪಾತ್ರಗಳಿಗೆ ಆ ಭಾಗದಲ್ಲಿ ಸಿದ್ಧಪಡಿಸಿದ ಸಂಭಾಷಣೆಗಳನ್ನು ಪಾತ್ರಗಳು ಕಂಠಪಾಠ ಮಾಡಿ ರಂಗದಲ್ಲಿ ಪಡಿಮೂಡಿಸುತ್ತವೆ. ಇಲ್ಲಿ ಬರುವ ಸಾರಥಿ ಪಾತ್ರ (ಹನುಮನಾಯಕ, ಕೋಡಂಗಿ ಇದ್ದಂತೆ) ಎರಡನೆಯ ಭಾಗವತನಿದ್ದಂತೆ. ಆತ ಪ್ರೇಕ್ಷಕರಿಗೂ ಮತ್ತು ಪಾತ್ರಕ್ಕೂ ಸಂಬಂಧ ಕಲ್ಪಿಸಿಕೊಡುತ್ತಾನೆ. ಅಂತೆಯೇ ಭಾಗವತ ಮತ್ತು ಪಾತ್ರಗಳ ಮಧ್ಯೆ ಕೊಂಡಿ ಕೂಡ ಆಗುತ್ತಾನೆ. ಘೋರ ಪಾತ್ರಗಳು ಕುಣಿದು ಕುಪ್ಪಳಿಸಿ ಸುಸ್ತಾದಾಗ ಇವನ ಹಾಸ್ಯದ ಚಟಾಕಿ ಪ್ರಾರಂಭವಾಗುತ್ತದೆ. ಪಾತ್ರಗಳ ಆಯಾಸವು ಪರಿಹಾರವಾಗುತ್ತದೆ. ಆಕರ್ಷಕ ನುಡಿಕಟ್ಟುಗಳಿಂದ ಕೂಡಿದ ವಿಡಂಬನಾ ಪೂರಿತ ಸಂಭಾಷಣೆ ಪ್ರೇಕ್ಷಕರಿಗೆ ಮುದವನ್ನು ತರುತ್ತದೆ. ಮೂಡಲ ಪಾಯದ ವೇಷಭೂಷಣಗಳು ಪಡುವಲಪಾಯಕ್ಕಿಂತ ಭಿನ್ನ. ಇಲ್ಲಿ ಮರದಿಂದ ಮಾಡಿದ ಕಿರೀಟ, ಆಭರಣಗಳು ಇರುತ್ತವೆ. ಇದನ್ನು ಹೆಚ್ಚಾಗಿ ಹಗುರವಾಗಿರುವ

ಮರದಿಂದ ಮಾಡಿರುತ್ತಾರೆ. ಹೆಣ್ಣು ಪಾತ್ರಗಳಿಗೆ ಕೂಡ ಸಣ್ಣ ಕಿರೀಟವಿರುತ್ತದೆ. ರಾಕ್ಷಸ ಪಾತ್ರ, ರಾಜಪಾತ್ರ ಹಾಗೂ ಹಾಸ್ಯ ಪಾತ್ರಗಳಲ್ಲಿ ಭಿನ್ನತೆ ಇರುತ್ತದೆ. ಘೋರ ಪಾತ್ರಗಳು ಪ್ರವೇಶಿಸುವಾಗ ಹಿಲಾಲದ ಬೆಳಕಿನಲ್ಲಿ ಪ್ರೇಕ್ಷಕರ ಮಧ್ಯದಿಂದ ಬಂದು ಅಟ್ಟ ಏರುತ್ತವೆ. ಹಿಂದೆಲ್ಲ ರಂಗದ ಎದುರುಬದಿಗೆ ಹಿಲಾಲುಗಳನ್ನು ನೆಟ್ಟು ಅವುಗಳ ಬೆಳಕಿನಲ್ಲಿ ಪ್ರದರ್ಶನ ಮಾಡುತ್ತಿದ್ದರು. ಈಗ ಪೆಟ್ರೋಮ್ಯಾಕ್ಸ್‌ಇಲ್ಲವೆ ವಿದ್ಯುತ್ ದೀಪ ಈ ಸ್ಥಾನವನ್ನು ತುಂಬಿದೆ. ಬೇರೆ ಬೇರೆ ಹಬ್ಬಕ್ಕೆ ಬೇರೆ ಬೇರೆ ಪ್ರದರ್ಶನಗಳನ್ನು ನೀಡುವ ಪರಿಪಾಠವೂ ಇದೆ. ಹೆಚ್ಚಾಗಿ ಮೂಡಲಪಾಯ ಹವ್ಯಾಸಿಯಾಗಿಯೇ ಬೆಳೆಯಿತೆ ಹೊರತು ವೃತ್ತಿ ಮೇಳವಾಗಿ ಹೊರಹೊಮ್ಮಲಿಲ್ಲ.

ಮೂಡಲಪಾಯದಲ್ಲಿ ವಸ್ತು ಹೆಚ್ಚಾಗಿ ಪೌರಾಣಿಕವಾದದ್ದು. ಇಲ್ಲಿಯೂ ಕೂಡ ಕಾಳಗ ಇಲ್ಲವೇ ಕಲ್ಯಾಣವೇ ಪ್ರಧಾನವಾದದ್ದು. ಯುದ್ಧ ಹಾಗೂ ವೀರಾವೇಶಕ್ಕೆ ಇಲ್ಲಿ ಅಗ್ರಪಟ್ಟ. ಸಾಹಿತ್ಯಕೃತಿಗೂ ಹಾಗೂ ರಂಗಕೃತಿಗೂ ಹೆಚ್ಚಿನ ವ್ಯತ್ಯಾಸವಿಲ್ಲ. ರಾಮಾಯಣ, ಭಾಗವತ, ಮಹಾಭಾರತದಿಂದ ಆಯ್ದ ಪ್ರಸಂಗಗಳನ್ನು ಆಡುವುದೇ ಅಲ್ಲದೆ ಶಿವರಾತ್ರಿ ದಿನ 'ಭಕ್ತಮಾರ್ಕಂಡೇಯ' ಅಥವಾ 'ಶಿವಜಲಂಧರ' ಆಟ, ಕೆಲವೊಮ್ಮೆ 'ಶನಿಮಹಾತ್ಮೆ' ಮುಂತಾದ ಪ್ರಸಂಗಗಳನ್ನು ಆಡುವುದು ಉಂಟು. ಕ್ರಿ.ಶ. 1480ರ ಸುಮಾರಿಗೆ ರಚಿತವಾದ 'ಕರಿಬಂಟನ ಕಾಳಗ' ಪ್ರಾಚೀನವಾದ ಪ್ರಸಂಗಗಳಲ್ಲಿ ಒಂದು. ಗ್ರಾಂಥಿಕ ಭಾಷೆ, ಪ್ರಾಸ ಅನುಪ್ರಾಸಗಳಿಂದ ಹೆಚ್ಚಿನ ಮಾತುಗಾರಿಕೆ, ದೀರ್ಘವಾದ ಸಂಭಾಷಣೆಗಳಿದ್ದು ಪುನರಾವರ್ತನೆ ಒಮ್ಮೊಮ್ಮೆ ಅತಿಯಾಗುತ್ತದೆ. ಮೂಡಲಪಾಯದಲ್ಲಿ ಹಾಡುವ ಸಂಗೀತದ ಶೈಲಿ ವಿಶಿಷ್ಟವಾದುದು. ದಕ್ಷಿಣಾದಿಗಿಂತ ಭಿನ್ನವಾಗಿದೆ. ಶುದ್ಧತೆ ಕಡಿಮೆಯಾದರೂ ಹಾಡಿನಲ್ಲಿ ರಸಾಭಿವ್ಯಕ್ತಿ ಮುಖ್ಯವಾಗಿದ್ದು ರಂಜನೆಗೆ ಒತ್ತು ಇರುತ್ತದೆ. ಅನುಕರಣೆಯೇ ಪ್ರಧಾನವಾದ್ದರಿಂದ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುತ್ತ ಹೋಗಿದೆ. ಪ್ರದರ್ಶನ ನಾಟಿ ರಾಗದಿಂದ ಪ್ರಾರಂಭವಾಗಿ ಸಾವೇರಿ ರಾಗದಲ್ಲಿ ಕೊನೆಗೊಳ್ಳುತ್ತದೆ. ಡಾ|| ಜೀ.ಶಂ. ಪರಮಶಿವಯ್ಯನವರುಕೊನೇಹಳ್ಳಿಯಲ್ಲಿ ಭಾಗವತರ ಶಿಬಿರ ನಡೆಸಿ 32 ರಾಗಗಳನ್ನು ಗುರುತಿಸಿ ದಾಖಲಿಸಿದ್ದಾರೆ. ತಿಪಟೂರು ತಾಲ್ಲೂಕಿನ ಕೊನೇಹಳ್ಳಿಯಲ್ಲಿ ಮೂಡಲಪಾಯ ಯಕ್ಷಗಾನದ ಟ್ರಸ್ಟ್ ಒಂದನ್ನು ಸ್ಥಾಪಿಸಿ ಅಲ್ಲಿ ಈ ಕಲಾಪ್ರಕಾರದ ಬೆಳವಣಿಗೆಗಾಗಿ ಒಂದು ಕಲಾಶಾಲೆಯನ್ನು ಪ್ರಾರಂಭಿಸಿದ್ದಾರೆ. ಪಡೇಲು ಭಾಗವತ ನಾರಸಪ್ಪನವರು ಇವರ ಹೆಗಲೆಣೆಯಾಗಿ ದುಡಿದು ಈ 'ಮೂಡಲಪಾಯ ಯಕ್ಷಗಾನ' ಉಳಿದು ಬರಲು ಕಾರಣರಾಗಿದ್ದಾರೆ. ಈ ಪ್ರಕಾರ ಈಚೆಗೆ ಪುನರುಜ್ಜೀವನಗೊಳ್ಳುತ್ತಿದೆ.

ರಂಗಪ್ರಯೋಗ ದೃಷ್ಟಿಯಿಂದ ಮೂಡಲಪಾಯ ಕೂಡ ಕೆಲವು ವೈಶಿಷ್ಟ್ಯಗಳನ್ನು ಹೊಂದಿದೆ. ಇಲ್ಲಿ ರಂಗಸ್ಥಳ ದೊಡ್ಡದಾಗಿದ್ದು ಗಟ್ಟಿಮುಟ್ಟಾಗಿರುತ್ತದೆ. ಹಿಂದೆಲ್ಲ ಪರದೆಗಾಗಿ ಗುಡಾರಗಳನ್ನು ಕಟ್ಟಿಸಿದ್ದರೆ ಈಗ ವೃತ್ತಿನಾಟಕಗಳಲ್ಲಿ ಬಳಸುವ ಸೀನರಿಗಳನ್ನು ತಂದು ಪರದೆಯಾಗಿ ಕಟ್ಟುತ್ತಾರೆ. ಪಾತ್ರಗಳನ್ನು ಅಟ್ಟಕ್ಕೆ ಕರೆತರುವಾಗ

ವೈಭವ ಹಾಗೂ ಉತ್ಸಾಹದಿಂದ ಕರೆತರುತ್ತಾರೆ. ತಮ್ಮಟೆಯ ಸದ್ದು ಮುಗಿಲು ಮುಟ್ಟುವಂತಿರುತ್ತದೆ. ಹಿಂದೆಲ್ಲ ಅಟ್ಟಗಳನ್ನು ಕಟ್ಟುತ್ತಿದ್ದರು. ಈಗ ಎರಡೂವರೆ ಅಡಿ ಎತ್ತರಕ್ಕೆ ಹಲಗೆ ಹಾಸಿ ರಂಗರಚನೆ ಮಾಡುತ್ತಾರೆ. ಮೊದಲಿಗೆ ಇಲ್ಲಿ ಕೂಡ ಗಣಪತಿ ಸ್ತುತಿ ಇರುತ್ತದೆ. ಗಣಪತಿ ರಂಗಕ್ಕೆ ಬಂದು ಭಾಗವತನಿಗೆ ಆಶೀರ್ವದಿಸುವುದು ಉಂಟು. ಆಟ ಮುಗಿದಾಗ ಎಲ್ಲ ಪಾತ್ರಗಳು ದೇವಸ್ಥಾನಕ್ಕೆ ತೆರಳಿ ನಮಸ್ಕರಿಸಿ ಬಂದು ಬಣ್ಣ ತೆಗೆಯುತ್ತಾರೆ.

ಘಟ್ಟದಕೋರೆ:

ಯಕ್ಷಗಾನದ ಇನ್ನೊಂದು ಪ್ರಾಕಾರವಾದ 'ಘಟ್ಟದಕೋರೆ' ಹೆಗ್ಗಡದೇವನ ಕೋಟೆ, 'ಕೋಳಗಾಲ'ದಲ್ಲಿ ಕಂಡುಬರುತ್ತದೆ. ಇದು ಪಡುವಲಪಾಯ ಯಕ್ಷಗಾನ ಪ್ರಭಾವಕ್ಕೆ ಹೆಚ್ಚು ಒಳಗಾಗಿದ್ದು ವೇಷಭೂಷಣದಲ್ಲಿ ಮಾತ್ರ ಮೂಡಲಪಾಯಕ್ಕೆ ಸಮೀಪವಿರುವಂತಿದೆ. ಇದನ್ನು ಪೋಷಿಸಿದವರು 'ಕೋಳಗಾಲ'ದ ಶ್ರೀ ಬಸವರಾಜು ಅರಸು ಮನೆತನದವರು. ಪ್ರಾಯಶಃ 17ನೇ ಶತಮಾನದ ಹೊತ್ತಿಗೆ ಈ ಸಂಪ್ರದಾಯದ ಪ್ರಾದುರ್ಭಾವ ಕಂಡುಬರುತ್ತದೆ. ಇಲ್ಲಿನ ಹಿಮ್ಮೇಳದ ವ್ಯವಸ್ಥೆ ಪಡುವಲಪಾಯ ದಂತೇ ಇದೆ. ಭಾವಪೂರ್ಣವಾದ ಹಾಡುಗಾರಿಕೆ ಹಾಗೂ ಗ್ರಾಂಥಿಕವಾದ ಅರ್ಥ ವತ್ತಾದ ಸಂಭಾಷಣೆ ಇಲ್ಲಿನ ಪ್ರದರ್ಶನಗಳಲ್ಲಿ ಕಾಣುತ್ತದೆ. ಘಟ್ಟದ ಪ್ರದೇಶದಲ್ಲಿ ಇದು ಬೆಳೆದು ಬಂದದ್ದರಿಂದ ಇದಕ್ಕೆ 'ಘಟ್ಟದಕೋರೆ' ಎಂಬ ಹೆಸರು ಬಂದಿರಬೇಕು. ಕೋರೆ ಎಂದರೆ ಒಂದು ವಿಧ ಎನ್ನುವ ಅರ್ಥವಿದೆ. ಇಲ್ಲೂ ಕೂಡ ರಾತ್ರಿಯಿಡೀ ಪ್ರದರ್ಶನ ಇರುತ್ತದೆ. ಮೂಡಲಪಾಯದಂತೆ ಇಲ್ಲೂ ಸಾರಥಿ (ಹನುಮನಾಯಕ) ಮುಖ್ಯ ನಾಗಿರುತ್ತಾನೆ. ಈತನ ಮಾತುಗಾರಿಕೆಯಲ್ಲಿ ಹಾಸ್ಯಕ್ಕೆ ಪ್ರಧಾನ ಪಟ್ಟ. ಇಲ್ಲಿನ ರಂಗಸ್ಥಳದ ಸುತ್ತ ನಾಲ್ಕು ಗಾಲಿಗಳನ್ನು ನೆಟ್ಟ ನಾಲ್ಕು ಕಂಬಗಳ ಮೇಲೆ 30 ಅಡಿ x25 ಅಡಿ ರಂಗಸ್ಥಳವನ್ನು ನಿರ್ಮಿಸುತ್ತಾರೆ. ಹಿಂಭಾಗದಲ್ಲಿ ಗುಡಾರ ಕಟ್ಟಿರುತ್ತಾರೆ ರಂಗಸ್ಥಳಕ್ಕೆ ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ಎಡಬಲದಲ್ಲಿ ಬಾಳೆಕಂಬ ನೆಟ್ಟು ಅದರ ಮೇಲೆ ದೀಪ ಬೆಳಗುತ್ತಾರೆ. ಹಿಮ್ಮೇಳದಲ್ಲಿ ಭಾಗವತರೊಂದಿಗೆ ಸಹಕರಿಸಲು 3–4 ಜನ ತಾಳಗಳನ್ನು ಹಿಡಿದಿರುತ್ತಾರೆ. ಮುಖವೀಣೆ, ಮೃದಂಗ, ಚಿಕ್ಕತಾಳಗಳ ಬಳಕೆ ಇಲ್ಲಿದೆ. ಈ ಪ್ರಭೇದದ ವೈಶಿಷ್ಟ್ಯವೆಂದರೆ ಪಡುವಲಪಾಯದ ರಸಾತ್ಮಕ ಅಂಶಗಳನ್ನು ಹಾಗೂ ಮೂಡಲಪಾಯದ ಭವ್ಯಾತ್ಮಕ ಅಂಶಗಳನ್ನು ಸೇರಿಸಿ ವಿಶಿಷ್ಟವಾದ ನೂತನ ರೀತಿಯ ಯಕ್ಷಗಾನ ಬಯಲಾಟ ಪ್ರದರ್ಶನ ನೀಡು ವುದೇ ಆಗಿದೆ.

ಪಾರ್ತಿಸುಬ್ಬನಿಂದ ರಚಿತವಾದದ್ದೆಂದು ಹೇಳಲಾದ ರಾಮಾಯಣ ಪ್ರಸಂಗ ಗಳು ಮತ್ತು ಐರಾವತದ ಪ್ರಸಂಗಗಳನ್ನು ಆಡುವುದೇ ಅಲ್ಲದೆ ಮಹಾಭಾರತದ ಬಬ್ರುವಾಹನ ಕಾಳಗ, ಕರ್ಣಾರ್ಜುನರ ಕಾಳಗ, ಅಭಿಮನ್ಯು ಕಾಳಗ ಮತ್ತು ಪೌರಾಣಿಕ

ಪ್ರಸಂಗಗಳಾದ ಪ್ರಹ್ಲಾದ ಚರಿತೆ, ಹರಿಶ್ಚಂದ್ರ ಮುಂತಾದವುಗಳನ್ನು ಇವರು ಆಡುತ್ತಾರೆ. ಮೈಸೂರು ಜಿಲ್ಲೆಯ ಒಳಭಾಗಗಳಲ್ಲಿ ಈ ಪ್ರಭೇದವು ಹೆಚ್ಚು ಪ್ರಚಲಿತವಿದೆ.

ದೊಡ್ಡಾಟ:

ಉತ್ತರ ಕರ್ನಾಟಕದ ಬಯಲಾಟಗಳ ಪ್ರಕಾರದಲ್ಲಿ ದೊಡ್ಡಾಟಕ್ಕೆ ಹಿರಿಯ ಸ್ಥಾನವಿದೆ. ಇಲ್ಲಿ ಕೂಡ ಗ್ರಂಥಸ್ಥವಾದ ಸಂಭಾಷಣೆ ಇರುತ್ತದೆ. ಬಾಯಿಪಾಠ ಮಾಡಿ ನಟರು ಇದನ್ನು ಪ್ರಯೋಗದಲ್ಲಿ ಒಪ್ಪಿಸುತ್ತಾರೆ. ಪ್ರಾಸ, ಅನುಪ್ರಾಸಗಳನ್ನೆಲ್ಲ ಗಟ್ಟಿಯಾಗಿ ಪಾತ್ರಧಾರಿಗಳು ಹೇಳುತ್ತಾರೆ. ಕೆಲವೊಮ್ಮೆ ಅತ್ಯಂತ ಕೃತಕವಾಗಿ ಕಾಣುತ್ತದೆ. ವೀರ ಪೂರ್ಣವಾದ ಸಂಭಾಷಣೆ ಕೆಲವೊಮ್ಮೆ ಅಸಂಗತವಾಗಿಯೂ ಕಾಣಿಸುತ್ತದೆ. ಇಲ್ಲಿನ ಕುಣಿತಗಳು ಕೂಡ ಅತ್ಯಂತ ವೀರ್ಯವತ್ತಾದುದು. ಕಥಾವಸ್ತುಗಳಲ್ಲಿ ಒಂದಲ್ಲ ಒಂದು ರೀತಿಯ ಯುದ್ಧದ ಸನ್ನಿವೇಶಗಳು ಬರುತ್ತವೆ. ಇಲ್ಲೂ ಕೂಡ ಮೂಡಲ ಪಾಯದಂತೆ ಸಾರಥಿ ಇರುತ್ತಾನೆ. ಆತನೇ ಪಾತ್ರಗಳನ್ನು ಪ್ರೇಕ್ಷಕರಿಗೆ ಪರಿಚಯಿಸುತ್ತಾನೆ. ಈ ಬಗೆಯ ಪ್ರಕ್ರಿಯೆಯನ್ನು 'ನಾಮಾಂಕಿತ'ದ ಮಾತೆಂದು ಜನ ಗುರುತಿಸುತ್ತಾರೆ. ಈ ಬಗೆಯ ಪೀಠಿಕಾರೂಪದ ಮಾತುಗಳು ದೀರ್ಘವಾಗಿದ್ದು ಅತ್ಯಂತ ತಾರಕ ಸ್ವರದಲ್ಲಿ ಬರುತ್ತವೆ. ಇಲ್ಲಿನ ಮಾತುಗಾರಿಕೆಯಲ್ಲಿ ಭಾವಾಭಿವ್ಯಕ್ತಿಗಿಂತ ಶಬ್ದಾಡಂಬರಕ್ಕೆ ಹೆಚ್ಚಿನ ಒತ್ತಿದೆ. ಸಾರಥಿ ಇಲ್ಲೂ ಕೂಡ ಹಾಸ್ಯ ಪಾತ್ರದ ಕೆಲಸವನ್ನು ನಿರ್ವಹಿಸುತ್ತಾನೆ. ಆತನಗೆ ಯಾವುದೇ ನಿರ್ಬಂಧಗಳಿರುವುದಿಲ್ಲ. ಅವನ ವಿಡಂಬನೆಗಳಲ್ಲಿ ಸ್ಥಳೀಯ ಅಂಶಗಳು, ಗಾದೆ, ನುಡಿಗಟ್ಟುಗಳು ಬರುವುದು ಉಂಟು. ಅವನ ಕುಣಿತದ ವಿಧಾನವು ಕೂಡ ನಗೆಯನ್ನು ಉಕ್ಕಿಸುವಂತಹದು.

ಪ್ರದರ್ಶನದ ದೃಷ್ಟಿಯಿಂದ ಮೂಡಲಪಾಯಕ್ಕೂ ಹಾಗೂ ದೊಡ್ಡಾಟಕ್ಕೂ ಅಂತಹ ವ್ಯತ್ಯಾಸಗಳಿಲ್ಲ. ಇಲ್ಲಿ ಆಡುವ ಪ್ರಸಂಗಗಳು ಕೂಡ ರಾಮಾಯಣ, ಮಹಾಭಾರತ, ಭಾಗವತಾದಿ ಪುರಾಣಗಳಿಂದ ಆರಿಸಿಕೊಂಡವುಗಳಾಗಿವೆ. ರಾತ್ರಿ ಯಿಡೀ ನಡೆಯುವ ಈ ಪ್ರದರ್ಶನಗಳನ್ನು ಹವ್ಯಾಸಿಗಳೇ ಹೆಚ್ಚಾಗಿ ಆಡುತ್ತಾರೆ. ಇಲ್ಲಿನ ಕುಣಿತ, ವೇಷಭೂಷಣ, ವಾದ್ಯವಿಶೇಷಗಳಲ್ಲೆಲ್ಲ ಒಂದು ಬಗೆಯ ಒರಟುತನ ಕಾಣುತ್ತದೆ. ಉತ್ತರ ಕರ್ನಾಟಕದ ಸೊಗಡು ಇಲ್ಲಿನ ಪ್ರದರ್ಶನಗಳಲ್ಲಿ ವ್ಯಕ್ತವಾಗುತ್ತದೆ. ಗ್ರಾಮೀಣರೇ ಸೇರಿ ಕಲಿತು ಪ್ರದರ್ಶಿಸುವುದರಿಂದ ಯಕ್ಷಗಾನದ ವೃತ್ತಿ ಮೇಳಗಳಲ್ಲಿ ಕಾಣುವ ಪರಿಪಕ್ವತೆಯಾಗಲಿ, ನಾಜೂಕಾಗಲಿ ಗೋಚರವಾಗುವುದಿಲ್ಲ. ವೃತ್ತಿ ನಾಟಕ ರಂಗಭೂಮಿ ಹಾಗೂ ಸಿನಮಾ ಮಾಧ್ಯಮದ ಪ್ರಭಾವದಿಂದಾಗಿ ಮತ್ತು ಕಲಿತು ಆಡುವುದು ಕೂಡ ಬಹಳ ಕಷ್ಟವಾದ್ದರಿಂದ ಈ ಕಲೆ ಮೂಲೆಗುಂಪಾಗುತ್ತಿದೆ ಹಾಗೂ ಅವಸಾನದ ಅಂಚಿನಲ್ಲಿದೆ. ಹಳ್ಳಿಯ ಜನರೇ ಸೇರಿ, ಕಷ್ಟಪಟ್ಟು ಕಲಿತು, ದೀರ್ಘಕಾಲ ದುಡಿದಾಗ ಮಾತ್ರ ಈ ದೊಡ್ಡಾಟ ಉಳಿಯಲು ಸಾಧ್ಯ. ಡಾ॥ ಶಿವರಾಮ ಕಾರಂತರು ತಿಳಿಸಿದಂತೆ "ಈ ಕಲೆಯ ಪುನರುಜ್ಜೀವನಕ್ಕಾಗಿ ದುಡಿಯುವ ವ್ಯಕ್ತಿಗಳಿಗೆ ಇದರ

ಅಂಗಗಳಾದ ನೃತ್ಯ, ವೇಷಭೂಷಣ, ಗೀತ, ನೃತ್ಯಗಳ ಪರಿಚಯವಿರಬೇಕು. ಮಾತ್ರವಲ್ಲ, ಈ ಮಾಧ್ಯಮದ ಹಿನ್ನೆಲೆಯನ್ನು ತಿಳಿಯುವುದಕ್ಕೆ ಬೇಕಾದ ಶಿಲ್ಪ, ಚಿತ್ರಕಲೆಗಳ ಅರಿವೂ ಬೇಕಾಗುತ್ತದೆ. ಅಂಥವರು ಈ ಕಾರ್ಯದಲ್ಲಿ ತೊಡಗಿದರೆ ಮಾತ್ರ ಇವು ಒಳ್ಳೆಯ ದಿನಗಳನ್ನು ಕಾಣಬಹುದು" ಎಂಬುದು ಅಕ್ಷರಶಃ ಸತ್ಯ.

ಸಣ್ಣಾಟ:

ಇದೇರೀತಿ ಪ್ರದರ್ಶನಗೊಳ್ಳುವ, ಆದರೆ ಕಿರುಕತೆಗಳನ್ನು ಮಾತ್ರ ರಂಗದಲ್ಲಿ ತೋರುವಂತಹವನ್ನು ಸಣ್ಣಾಟ, ಡಪ್ಪಿನಾಟ ಎಂದೆಲ್ಲ ಕರೆದಿದ್ದಾರೆ. ಇದು ಕೂಡ ರಾತ್ರಿಯೆಲ್ಲ ನಡೆಯುತ್ತದೆ. ಆದರೆ, ದೊಡ್ಡಾಟದಷ್ಟು ದೊಡ್ಡ ಕುಣಿತವಾಗಲಿ, ವೀರಾವೇಶದ ಕುಣಿತ ಗತ್ತುಗಳಾಗಲಿ, ಆರ್ಭಟದ ಸದ್ದಾಗಲಿ ಇಲ್ಲಿ ಇಲ್ಲ. ದೊಡ್ಡಾಟದ ವೇಷಭೂಷಣಗಳು ಭವ್ಯವಾಗಿದ್ದು, ಕಾಳಗವೇ ಪ್ರಧಾನವಾಗಿದ್ದು, ಸಂಭಾಷಣೆ ಹಾಗೂ ಹಾವಭಾವಗಳಲ್ಲಿ, ನಡೆಗಳಲ್ಲೆಲ್ಲ ಕುಳಿತವರನ್ನು ನಡುಗಿಸುವಂತಹ ಶಕ್ತಿಯನ್ನು ಹೊಂದಿದೆ. ಆದರೆ, ಸಣ್ಣಾಟದಲ್ಲಿ ಹಿತಮಿತವಾದ ಕುಣಿತ, ಮೃದುವಾದ ಮಾತುಗಳು, ಸಣ್ಣದಾದ ಅಟ್ಟದಲ್ಲಿ (ರಂಗದಲ್ಲಿ) ಊರ ಹಿರಿಯರ ಮನೆಯ ಮುಂಭಾಗದಲ್ಲೋ, ಗುಡಿಯ ಜಗಲಿಯಲ್ಲೋ ಆಡುವಂತಹದ್ದು. ಹೆಚ್ಚಾಗಿ ಬೆಳಗಾವಿ, ಬಾಗಲಕೋಟೆ, ಧಾರವಾಡ, ಬಿಜಾಪುರ, ರಾಯಚೂರು, ಬೀದರ್, ಗುಲ್ಬರ್ಗ, ಬಳ್ಳಾರಿ ಮುಂತಾದ ಕಡೆಯಲ್ಲಿ ಸಣ್ಣಾಟದ ಮೇಳಗಳನ್ನು ಕಾಣಬಹುದು. ಈ ತಂಡಗಳು ವೃತ್ತಿಪರವಾಗಿದ್ದು ಈಗಲೂ ಪ್ರದರ್ಶನಗಳನ್ನು ನೀಡುತ್ತಿವೆ. ಈ ವೃತ್ತಿಪರ ತಂಡಗಳು ಆಕರ್ಷಕವಾದ ಸಂಗೀತ ಗಳೊಂದಿಗೆ, ಹೆಚ್ಚಿನ ಶ್ರಮವಿಲ್ಲದೆ ಬದುಕಿಗೆ ಹತ್ತಿರವಾಗುವ ರೀತಿಯಲ್ಲಿ ಪ್ರದರ್ಶನ ಗಳನ್ನು ನೀಡುತ್ತಿವೆ. ಕೆಲವು ಪ್ರದರ್ಶನಗಳಲ್ಲಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಜಾನಪದದ ಕತೆಗಳು ಬರುತ್ತವೆ. ಇಲ್ಲೂ ಸೂತ್ರಧಾರನೇ ಹಾಡನ್ನು ಹಾಡುತ್ತಾನೆ. ಭಕ್ತಿ ಸಿದ್ಧಾಂತವನ್ನು ಹೆಚ್ಚಾಗಿ ನಂಬಿಕೊಂಡು ಬಂದಿರುವ ಈ ತಂಡಗಳು ಕೆಲವೊಮ್ಮೆ ಆರಾಧ್ಯ ದೇವರುಗಳ ಬಗ್ಗೆ ಸಣ್ಣಾಟಗಳನ್ನು ರಚಿಸಿ ಆಡುವುದುಂಟು. ಆಟದ ಆರಂಭದಲ್ಲಿ ಗೊಲ್ಲತಿ ಬರುವುದು ಸಣ್ಣಾಟದ ವೈಶಿಷ್ಟ್ಯವಾಗಿದೆ. ವೈವಿಧ್ಯಮಯವಾದ ಪ್ರದರ್ಶನಗಳೇ ಸಣ್ಣಾಟದ ಜೀವಾಳವಾಗಿದೆ. ಇಲ್ಲಿ ಕಲಾವಿದರ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ಮತ್ತು ಇವರೆಲ್ಲ ಹೆಚ್ಚಾಗಿ ವೃತ್ತಿಪರರಾದ್ದರಿಂದ ತಮ್ಮದೇ ಆದ ಛಾಪನ್ನು ಈ ರಂಗದಲ್ಲಿ ಮೂಡಿಸಿದ್ದಾರೆ. ಅಥಣಿ ಮಲ್ಲಯ್ಯ, ಲೋಕಾಪುರ ದೇಶಪಾಂಡೆ, ತಳೇವಾಡ ನಬಿ ಮುಂತಾದವರು ಸಣ್ಣಾಟಗಳಲ್ಲಿ ಖ್ಯಾತಿ ಗಳಿಸಿದವರು. ರಾಮಾಯಣ, ಮಹಾಭಾರತ, ಭಾಗವತದಿಂದ ಆರಿಸಿರುವ ಪ್ರಸಂಗಗಳಲ್ಲಿ ವಿಷ್ಣು ಪಾರಮ್ಯವಿದ್ದರೆ, ಶಿವಪುರಾಣದಿಂದ ಆರಿಸಿದ ಕಥೆಗಳಲ್ಲಿ ಶೈವಭಕ್ತಿ ಪಂಥದ ಹಿರಿಮೆ ಅಡಗಿದೆ. ಅರವತ್ತಮೂರು ಪುರಾತನರ ಕತೆ, ಸ್ಥಳೀಯ ದೇವರುಗಳ ಲೀಲಾ ವಿನೋದದ, ಪವಾಡಗಳ ಕಥೆಗಳು ವಸ್ತುವಾಗಿವೆ. ಜನಪರ

ಹಾಗೂ ಸಾಮಾಜಿಕ ಸಣ್ಣಾಟಗಳು ಬಂದಿವೆ. ರಾಜಾನಾಟ, ಸಂಗ್ಯಾ ಬಾಳ್ಯ, ಕಡ್ಲಿಯಟ್ಟಿ ಕಾಶೀಬಾಯಿ, ಸೋಮಶೇಖರ ಚಿತ್ರಶೇಖರ ಮುಂತಾದುವೆಲ್ಲ ಖ್ಯಾತಿಗೊಂಡ ಪ್ರಸಂಗಗಳಾಗಿವೆ. ಬೇಡರ ಕಣ್ಣಪ್ಪ, ತಿರು ನೀಲಕಂಠ, ರಾಧಾನಾಟ, ಶಿವ ಪಾರಿಜಾತ, ಹೇಮರೆಡ್ಡಿ ಮಲ್ಲಮ್ಮ ಮುಂತಾದುವು ಖ್ಯಾತ ಸಣ್ಣಾಟದ ಆಟಗಳಾಗಿವೆ. ಸಣ್ಣಾಟದಲ್ಲಿ ಡಪ್ಪಿನ ಬಳಕೆ ಯಾವಾಗಲೂ ಇರುತ್ತದೆ. ದಾಸರು ಆಡುವ ಸಣ್ಣಾಟವನ್ನು ದಾಸರಾಟ ವೆಂತಲೂ ಕರೆಯುತ್ತಾರೆ. ವಿಷ್ಣುಪಾರಮ್ಯದ ಪ್ರಸಂಗದಲ್ಲಿ ರಾಧನಾಟ ಹಾಗೂ ಶ್ರೀಕೃಷ್ಣ ಪಾರಿಜಾತಕ್ಕೆ ಅಗ್ರಸ್ಥಾನ. ಕೃಷ್ಣ ಪಾರಿಜಾತ ಒಂದು ಪ್ರಭೇದವೆಂಬ ರೀತಿಯಲ್ಲಿ ಹೊರಹೊಮ್ಮಿದೆ.

ಕೃಷ್ಣ ಪಾರಿಜಾತ:

ಕರ್ನಾಟಕದ ಉತ್ತರ ಭಾಗದಲ್ಲಿರುವ ಅನೇಕ ಜನಪದ ಕಲಾಪ್ರಕಾರದಲ್ಲಿ ಕೃಷ್ಣ ಪಾರಿಜಾತಕ್ಕೆ ವಿಶಿಷ್ಟ ಸ್ಥಾನವಿದೆ. ಇದರ ಸಂಗೀತದ ವಿಧಾನ ಹಾಗೂ ಸಂಭಾಷಣೆಯ ಕ್ರಮ ಭಿನ್ನವಾಗಿದೆ. ಅದರಿಂದಾಗಿಯೇ ಕೆಲವರು ಇದನ್ನು ಸಣ್ಣಾಟದ ಗುಂಪಿಗೆ ಸೇರಿಸಲು ಬಯಸುವುದಿಲ್ಲ. ಇದರ ಸಂಗೀತವನ್ನು ಮಾರ್ಗಶೈಲಿ ಎಂದು ಕರೆಯುವ ಇವರು ಇಲ್ಲಿ ಸೂತ್ರಧಾರ ಹಾಡದೇ ಪಾತ್ರಗಳೇ ಹಾಡುತ್ತಾರೆ. ಈ ಕಾರಣ ಇದು ಭಿನ್ನಕಲೆ ಎನ್ನುತ್ತಾರೆ. ಆದರೆ ಕೆಲವರು ಇದನ್ನು 'ಸಣ್ಣಾಟಗಳ ರಾಜ' ಎಂದು ಕರೆಯುತ್ತಾರೆ. ಇವರು ಕೊಡುವ ಕಾರಣ ಅದರ ರಂಗಪ್ರಯೋಗವಾಗಿದೆ. ಇಲ್ಲೂ ಕೂಡ ಗೊಲ್ಲತಿ ಬರುತ್ತಾಳೆ. ರಂಗ ನಡೆಯುವ ಕ್ರಮದಲ್ಲಿ ಅಂತಹ ವ್ಯತ್ಯಾಸವಿಲ್ಲ. ಆದುದರಿಂದ ಇದು ಒಂದು ಸಣ್ಣಾಟವೇ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಮೊದಲಿಗೆ ಅಪರಾಳ ತಮ್ಮಣ್ಣನು ಯಕ್ಷಗಾನ ರೂಪದಲ್ಲಿ ಬರೆದ ಹಾಡುಗಬ್ಬವನ್ನು ಮುಂದೆ ಕುಲಗೋಡ ತಮ್ಮಣ್ಣನು ರಂಗಪ್ರದರ್ಶನಕ್ಕೆ ಅಳವಡಿಸಿ ಇದು ಖ್ಯಾತಿಗೊಳ್ಳಲು ಕಾರಣನಾದನು. ಶ್ರೀಕೃಷ್ಣನ ಮೇಲಿನ ಭಕ್ತಿಯೇ ಇಲ್ಲಿ ಪ್ರಧಾನ ಅಂಗ. ಕೃಷ್ಣ, ಸತ್ಯಭಾಮ, ರುಕ್ಮಿಣಿ ಪಾತ್ರಗಳು ಇಲ್ಲಿ ಮುಖ್ಯ. ವೇಷಭೂಷಣಗಳಲ್ಲಿ ದೊಡ್ಡಾಟ, ಯಕ್ಷಗಾನ ಗಳಲ್ಲಿರುವಂತೆ ಪೌರಾಣಿಕವಾಗಿರುವುದಿಲ್ಲ. ಧೋತರ, ಜುಬ್ಬಾ ಹಾಗೂ ತಲೆಗೆ ಜರಿಯ ಮುಂಡಾಸಿನೊಂದಿಗೆ ಕೃಷ್ಣ ಬಂದರೆ, ರುಕ್ಮಿಣಿ ಸತ್ಯಭಾಮೆಯರು ಸ್ತ್ರೀಯರ ಸಾಮಾನ್ಯ ಅಲಂಕಾರದೊಂದಿಗೆ ರಂಗಕ್ಕೆ ಬರುತ್ತಾರೆ. ಕೊರವಂಜಿ ಮಾತ್ರ ಕರಿ ಸೀರೆ ಉಟ್ಟು ಬರುತ್ತಾಳೆ. ಇಲ್ಲಿನ ರಂಗಮಂಟಪವು ಸಣ್ಣಾಟದಂತೆ ಸರಳ ವಾದದ್ದು.

ಇಲ್ಲಿ ಭಾಗವತನು ಪ್ರಧಾನ ಪಾತ್ರದಂತೆ ಇರುತ್ತಾನೆ. ಅವನನ್ನು ಉಳಿದ ಪಾತ್ರಗಳು 'ದೂತಿ' ಎಂದು ಕರೆಯುತ್ತಾರೆ. ಆತ ಮೊದಲಿನಿಂದ ಕಡೆಯವರೆಗೂ ರಂಗದ ಮೇಲೆ ಇರುತ್ತಾನೆ. ಮೊದಲಿಗೆ ಬರುವ ದೇವತಾ ಪ್ರಾರ್ಥನೆಗಳನ್ನು ಕಥಾ ನಿರೂಪಣೆಯ ಹಾಡುಗಳನ್ನು ಹಾಡುವವನು ಇವನೇ. ಮುಂದೆಲ್ಲ ಉಳಿದ ಪಾತ್ರಗಳು

ಹಾಡುವಾಗ ಹಿಮ್ಮೇಳದ ಅಗತ್ಯಗಳನ್ನು ಈತ ನೀಡುತ್ತಾನೆ. ಕೆಲವೊಮ್ಮೆ ಇವನಿಗೆ ಸಹಾಯಕನಾಗಿ 'ಮರಿಭಾಗವತ' ಬರುವುದು ಉಂಟು. ಹಾಡಿನ ಸಂದರ್ಭದಲ್ಲಿ ಸ್ತ್ರೀಪಾತ್ರಗಳು ರಂಗಸ್ಥಳದಲ್ಲಿ ಕುಣಿದು ಪ್ರೇಕ್ಷಕರನ್ನು ರಂಜಿಸುವುದು ಉಂಟು. ಹಾಸ್ಯ ಪ್ರಸಂಗಗಳು ಕೂಡ ಪಾರಿಜಾತದಲ್ಲಿ ಸಾಕಷ್ಟು ಬಂದಿವೆ. ಗ್ರಾಮೀಣ ಪ್ರೇಕ್ಷಕರಿಗೆ ಇವು ರಂಜನೆಯನ್ನು ಒದಗಿಸುತ್ತವೆ. ಅದೇ ರೀತಿ ಆಧ್ಯಾತ್ಮವು ಕೂಡ ಈ ಕೃಷ್ಣ ಪಾರಿಜಾತದಲ್ಲಿ ಸೇರಿಕೊಂಡು ಬಂದಿದೆ. ಮಾತಿನ ಚಮತ್ಕಾರಗಳು ಗೂಢವಾಗಿರುವ ಆಧ್ಯಾತ್ಮ ವಿಚಾರಗಳು ಕೃಷ್ಣ ಪಾರಿಜಾತವನ್ನು ಜೀವಂತಗೊಳಿಸಿವೆ. ವಿಶಿಷ್ಟವಾದ ಇಲ್ಲಿನ ಸಂಗೀತ ಶೈಲಿ ಈ ಪ್ರಕಾರವನ್ನು ಜನಪ್ರಿಯಗೊಳಿಸಿದೆ. ತಂಡ ತಂಡಗಳ ಮಧ್ಯೆ ಇರುವ ಪ್ರದರ್ಶನಗಳಲ್ಲಿ ವ್ಯತ್ಯಾಸವಿದ್ದರೂ ವಸ್ತು ವಿಚಾರವು ಹಾಗೂ ನಿರೂಪಣೆಯ ವಿಭಾಗವು ಒಂದೇ ಆಗಿದೆ. ಕಲಾವಿದರ ಹಾಡುಗಾರಿಕೆಯ ಸಾಮರ್ಥ್ಯ ಹಾಗೂ ಚುರುಕಾದ ಸಂಭಾಷಣೆಯ ಪ್ರದರ್ಶನದ ಮೂಲಕ ಆಯಾಯ ತಂಡದ 'ಶ್ರೀಕೃಷ್ಣ ಪಾರಿಜಾತ'ದ ಪ್ರಸಿದ್ಧಿ ನಿರ್ಧಾರವಾಗುತ್ತದೆ. ಇಲ್ಲಿ ಆಶು ಸಂಭಾಷಣೆಗೆ ಹೆಚ್ಚಿನ ಬೆಲೆ. 'ಕೃಷ್ಣ ಪಾರಿಜಾತ' ತನ್ನ ಅಂತಃಸತ್ವದಿಂದಾಗಿ ಇಂದಿಗೂ ಜೀವಂತ ಕಲೆಯಾಗಿ ಬದುಕಿರುವುದು ಕನ್ನಡಿಗರ ಸೌಭಾಗ್ಯ. ಹಳ್ಳಿ, ಅರೆಪಟ್ಟಣಗಳಲ್ಲಿ ನಡೆಯುವ ಹಬ್ಬ ಹರಿದಿನ, ಜಾತ್ರೆಗಳಲ್ಲೆಲ್ಲ ಕೃಷ್ಣಪಾರಿಜಾತಗಳನ್ನು ಹಲವು ತಂಡಗಳು ಉತ್ತರ ಕರ್ನಾಟಕದುದ್ದಕ್ಕೂ ಆಡುತ್ತಿವೆ.

ಮೊದಲಿಗೆ ಕುಲಗೋಡ ತಮ್ಮಣ್ಣನಿಂದ ಪ್ರಾರಂಭವಾದ ಈ ಬಯಲಾಟವನ್ನು ಮುಂದೆ ಇನ್ನಷ್ಟು ಖ್ಯಾತಿಗೊಳಿಸಿದವರೆಂದರೆ ಕೌಜಲಗಿ ನಿಂಗವ್ವ, ಇವಳ ಮೇಳಕ್ಕೂ ಅಪಾರ ಜನಪ್ರಿಯತೆ ಲಭಿಸಿತ್ತು. ಸ್ವತಃ ಅದ್ವಿತೀಯ ಕಲಾವಿದೆಯಾದ ಆಕೆ ತನ್ನ 12ನೇ ವಯಸ್ಸಿನಿಂದ ಕೊನೆಯ ಉಸಿರಿರುವವರೆಗೂ ಈ ರಂಗಸಂಪ್ರದಾಯದಲ್ಲಿ ತೊಡಗಿಕೊಂಡವಳು. ಇವಳ ಸತ್ಯಭಾಮೆಯ ಪಾತ್ರ ಉತ್ತರ ಕರ್ನಾಟಕದುದ್ದಕ್ಕೂ ಜನ ನೆನೆಸಿಕೊಳ್ಳುತ್ತಾರೆ. ಈಚೆಗೆ 50 ವರ್ಷಗಳಲ್ಲಿ ಅನೇಕ ಹೊಸ ಮೇಳಗಳು ಹುಟ್ಟಿಕೊಂಡಿವೆ. ಮಹಾಲಿಂಗಪುರದವರ ಸಂಸ್ಥೆ, ಟಕ್ಕಳಕಿ ವಿಠಲರ ಕಂಪೆನಿ, ಜಮಖಂಡಿ ಅಪ್ಪಾಲಾಲರ ಕಂಪೆನಿ, ಬೈಲಹೊಂಗಲದ ಮಲ್ಲವ್ವನ ಮೇಳ, ಸಾರೋಟಗಿ ಮೇಳ ಮುಂತಾದವು ಈ ಕೃಷ್ಣಪಾರಿಜಾತವನ್ನು ಉಳಿಸಿ ಬೆಳೆಸಿದ ಮೇಳಗಳಾಗಿವೆ.

ಕೃಷ್ಣ ಪಾರಿಜಾತ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಮೊದಲಿಗೆ ಹಾಡುಗಬ್ಬವಾಗಿದ್ದ ಈ ಪ್ರಕಾರ ರಂಗಸಂಪ್ರದಾಯವಾಗಿ ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಮೊದಲಿಗೆ ಕಥೆಯೇ ಮುಖ್ಯವಾಗಿದ್ದರೆ. ಈಚೆಗೆ ಹಾಸ್ಯ ಹಾಗೂ ಆಧ್ಯಾತ್ಮ ವಿಚಾರಗಳು ಪ್ರಧಾನ ಅಂಶವಾಗಿವೆ. ಪೂರ್ವರಂಗದಲ್ಲಿ ಬರುತ್ತಿದ್ದ ಗಣಪತಿ ಪೂಜೆ, ನಾರದನ ಪಾತ್ರಕ್ಕಿದ್ದ ಮಹತ್ವವೆಲ್ಲ ಈಗ ಕಮ್ಮಿಯಾಗಿದೆ. ಕೆಲವು ತಂಡಗಳವರು ಈಚಿನ ರಾಜಕೀಯ, ಸಾಮಾಜಿಕ ವಿಚಾರಗಳನ್ನು ಕೂಡ ಪ್ರದರ್ಶನದಲ್ಲಿ ತರುತ್ತಿದ್ದಾರೆ. ಹೀಗೆ ಬದಲಾವಣೆಯನ್ನು ಸ್ವೀಕರಿಸಿದ್ದರಿಂದ ಹಾಗೂ ವೃತ್ತಿ ಕಲಾವಿದರ ಪಾರಮ್ಯದಿಂದ

ಈ ರಂಗಕಲೆ ಉಳಿದುಬಂದಿದೆ. ಇಲ್ಲಿನ ಕಲಾವಿದರು ತಾವು ಆನಂದಪಟ್ಟು ಪ್ರೇಕ್ಷಕರನ್ನು ಆನಂದಗೊಳಿಸುವ ಮೂಲಕ 'ಕೃಷ್ಣ ಪಾರಿಜಾತ' ಮನೆ ಮಾತಾಗುವಂತೆ ಮಾಡಿದ್ದಾರೆ.

ಡಾ॥ ಶಿವರಾಮ ಕಾರಂತರು ಮತ್ತು ಯಕ್ಷಗಾನ:

ಕನ್ನಡದ ಖ್ಯಾತ ಸಾಹಿತಿ ಡಾ॥ ಶಿವರಾಮ ಕಾರಂತರು ಯಕ್ಷಗಾನರಂಗವನ್ನು ಪ್ರವೇಶಿಸಿದ್ದು 1930ರ ಆಸುಪಾಸಿನಲ್ಲಿ. ಕಳೆದ 75 ವರ್ಷಗಳಲ್ಲಿ ಯಕ್ಷಗಾನದ ಶಬ್ದದೊಂದಿಗೆ ಡಾ॥ ಕಾರಂತರ ಹೆಸರು ತಳುಕು ಹಾಕಿಕೊಂಡಿದೆ. 50-60 ವರ್ಷಗಳ ಕಾಲ ಅವರು ನಡೆಸಿದ ನಿರಂತರ ಪ್ರಯೋಗ, ಸಮಗ್ರ ಚಿಂತನೆ, ಮಾಡಿದ ಸಾಧನೆಗಳಿಂದ ಯಕ್ಷಗಾನಕ್ಕೊಂದು ಅಂತಾರಾಷ್ಟ್ರೀಯ ಮನ್ನಣೆ ದೊರೆಯಿತು. ಸಾಂಪ್ರದಾಯಿಕ ಯಕ್ಷಗಾನದ ಬಗ್ಗೆ, ಪ್ರಸಂಗ ಸಾಹಿತ್ಯದ ಬಗ್ಗೆ, ಪ್ರಸಂಗಕಾರರ ಬಗ್ಗೆ ಆಳವಾದ ಅಧ್ಯಯನ ನಡೆಸಿದ ಅವರು 1957ರಲ್ಲಿ 'ಯಕ್ಷಗಾನ ಬಯಲಾಟ' ಕೃತಿಯನ್ನು ಬರೆದು ಪ್ರಕಟಿಸಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದರು. ಅತ್ಯಂತ ತಲಸ್ಪರ್ಶಿ ಅಧ್ಯಯನವಾಗಿರುವ ಈ ಕೃತಿಯಲ್ಲಿ ಕಾರಂತರ ಸಮಗ್ರ ಚಿಂತನೆ, ವಿಶಾಲವಾದ ತಳಹದಿಯಲ್ಲಿ ಯಕ್ಷಗಾನವನ್ನಿರಿಸಿ ನೋಡುವ ಪರಿ ವಿಶಿಷ್ಟವಾದುದು. 20-30 ವರ್ಷಗಳ ಕಾಲ ಕಲಾವಿದರೊಂದಿಗೆ ತಾವು ಸೇರಿಕೊಂಡು ಪ್ರಯೋಗಗಳನ್ನು ನಡೆಸಿದರು. ಈ ಕಾಲವನ್ನು ಬಡಗುತಿಟ್ಟಿನ ಸುವರ್ಣಯುಗವೆಂದು ಕರೆಯಬಹುದು. ಯುವ ಕಲಾವಿದರಿಗೆ ತರಬೇತಿ ನೀಡಿದರು. ಕುಣಿತ ಹಾಗೂ ಅಭಿನಯದಲ್ಲಿ ಪದ್ಯದ ಭಾವವನ್ನು ಮಿಂಚಿಸುವ ಪರಿಯನ್ನು ಹಾಡುವಿಕೆಯಲ್ಲಿ ಭಾವಗಳನ್ನು ಮೇಳೈಸುವ ವಿಧಾನವನ್ನು ತೋರಿಸಿಕೊಟ್ಟರು. ಇದರಿಂದಾಗಿ ಕಲಾವಿದರು ಸೂಕ್ಷಜ್ಞರಾದರು. ಜಡ ಸಂಪ್ರದಾಯದ ಅಂಧಾನುಕರಣೆಯನ್ನು ನಿರಾಕರಿಸಿ ಯಕ್ಷ ಗಾನ ಕಲೆಯ ಮೂಲ ಆಶಯಗಳನ್ನು ಅರಿತು ಅಳವಡಿಸಲು ಪ್ರಯತ್ನಿಸಿದರು. ವಿದೇಶಗಳಲ್ಲಿ ಸಂಚರಿಸಿ ಬ್ಯಾಲೆಗಳ ಸವಿಯನ್ನು ಸವಿದ ಅವರು ಕನ್ನಡ ಅರಿಯದ ಪ್ರೇಕ್ಷಕರಿಗಾಗಿ ಯಕ್ಷಗಾನ ಬ್ಯಾಲೆಗಳನ್ನು ಬಳಕೆಗೆ ತಂದರು. 'ಯಕ್ಷರಂಗ'ದ ಮೂಲಕ ಕಾರಂತರು ಅಭಿಮನ್ಯುವಧೆ, ಕನಕಾಂಗಿ ಕಲ್ಯಾಣ, ಭೀಷ್ಮ ವಿಜಯ, ಕೃಷ್ಣಾರ್ಜುನ ಕಾಳಗ, ನಳದಮಯಂತಿ, ಪಂಚವಟಿ ಮುಂತಾದ ಕಿರು ಪ್ರಸಂಗಗಳನ್ನು ಬ್ಯಾಲೆ ರೂಪದಲ್ಲಿ ನಿರ್ದೇಶಿಸಿ ಪ್ರಯೋಗಿಸಿದರು. ಕಾರಂತರ ಪ್ರಯೋಗಗಳಲ್ಲಿ ರಂಗದಲ್ಲಿನ ಪದಗತಿಗೆ, ಅಂಗಭಂಗಿಗಳಿಗೆ, ಸನ್ನಿವೇಶಕ್ಕೆ ತಕ್ಕ ಚಲನೆಗೆ ಆದ್ಯತೆ. ಸಮೂಹ ನೃತ್ಯ, ಯುದ್ಧನೃತ್ಯ, ಜಲಕೇಳಿ ಮುಂತಾದವುಗಳಲ್ಲಿ ಅವರ ಸೃಜನಶೀಲತೆ ಗೋಚರವಾಗು ತ್ತದೆ. ನೃತ್ಯಗತಿಯ ವೈಶಿಷ್ಟ್ಯವನ್ನು, ಬಣ್ಣಗಾರಿಕೆಯ ಹಿರಿಮೆಯನ್ನು ವೇಷಗಾರಿಕೆಯ ಹಿನ್ನೆಲೆಯನ್ನು ಕಲಾಸಕ್ತರಿಗೆ ಕಾರಂತರು ಪರಿಚಯಿಸಿದರು. ಮಾತಿಲ್ಲದ ಈ ಕಲಾಪ್ರಕಾರ ದಲ್ಲಿ ನೃತ್ಯ ಹಾಗೂ ಅಭಿನಯಗಳೇ ಕಥೆಯನ್ನು ನಡೆಸಿಕೊಂಡು ಹೋಗುತ್ತವೆ. ಯಕ್ಷಗಾನದ ವೇಷಭೂಷಣಗಳಲ್ಲೂ ಕಾರಂತರು ಚಿಂತನೆ ನಡೆಸಿ ಸಾಕಷ್ಟು ಬದಲಾವಣೆ

ಗಳನ್ನು ತಂದಿದ್ದಾರೆ. ರಂಗದ ಬೆಳಕಿಗೆ ಸರಿಹೊಂದುವ ಬಣ್ಣದ ಬಟ್ಟೆಗಳು, ಆಭರಣಗಳು ಇವರ ಪ್ರಯೋಗದಲ್ಲಿವೆ. ವೇಷಭೂಷಣಗಳ ಭಾರವನ್ನು ಕಡಿಮೆ ಮಾಡಿ ಕುಣಿತಕ್ಕೆ ಸಹಾಯ ಆಗುವಂತೆ ನೋಡಿಕೊಂಡರು. ಬ್ಯಾಲೆಗಳಲ್ಲಿ ಹಾಡುಗಳು ಒಂದಾದ ನಂತರ ಒಂದು ಬರುವುದರಿಂದ ಇಬ್ಬರು ಭಾಗವತರನ್ನಿರಿಸಿಕೊಂಡರು. ಪಿಟೀಲು, ಸ್ಯಾಕ್ಸೊಫೋನ್, ಕ್ಲಾರಿಯೊನೆಟ್ಟಗಳ ಬಳಕೆಯನ್ನು ಹಿನ್ನೆಲೆ ಸಂಗೀತಕ್ಕೆ ಬಳಸಿದರು. ಹಾಡಿನಲ್ಲಿ ಭಾವ ಸ್ಫುರಿಸುವಂತೆ ನೋಡಿಕೊಂಡರು. ಅವರ 'ಯಕ್ಷರಂಗ' ಪ್ರಯೋಗಕ್ಕೆ ಸಂಪ್ರದಾಯವಾದಿಗಳ ತೀರಾ ವಿರೋಧ ಬಂದರೂ ಲೆಕ್ಕಿಸದೆ ಕನ್ನಡ ಅರಿಯದವರಿಗೆ ಅದು ಅಗತ್ಯ ಎಂಬುದನ್ನೇ ನಂಬಿ ಅದನ್ನು ಪ್ರದರ್ಶಿಸುತ್ತಾ ಬಂದರು. ಅವರ ಪ್ರಯೋಗಗಳ ಪ್ರಭಾವ ಒಂದಿಲ್ಲೊಂದು ರೀತಿಯಿಂದ ವೃತ್ತಿರಂಗದ ಮೇಲೆ ಆಗಿದೆ. ಅನೇಕ ಬಡಗುತಿಟ್ಟಿನ ಕಲಾವಿದರು ಅವರನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ನಾರಣಪ್ಪ ಉಪ್ಪೂರ, ರಾಮಚಂದ್ರ ನಾವಡ, ಹಿರಿಯಡ್ಕ ಗೋಪಾಲರಾವ್, ಕೋಟ ವೈಕುಂಠ, ಸಕ್ಕಟ್ಟು ಲಕ್ಷ್ಮೀನರಾಯಣಯ್ಯ, ಕೆರೆಮನೆ ಮಹಾಬಲ ಹೆಗಡೆ ಮುಂತಾದವರೆಲ್ಲ ಅವರ ತರಬೇತಿಯ ಉಪಯೋಗ ಪಡೆದವರು. ಕಾರಂತರ ಪ್ರತಿಭೆ ಯಕ್ಷಗಾನಕ್ಕೆ ನೆರವಾಯಿತೆಂಬುದರ ಬಗ್ಗೆ ಎರಡು ಮಾತಿಲ್ಲ. ಸಂಶೋಧಕರಾಗಿ ಬಂದ ಕಾರಂತರು ಯಕ್ಷಗಾನದ ಸುಧಾರಕರಾದರು. ಸಾಂಪ್ರದಾಯಿಕ ವಿಶೇಷತೆಯನ್ನು ವಿಶ್ಲೇಷಣಾತ್ಮಕ ದೃಷ್ಟಿಯಿಂದ ಚರ್ಚಿಸಿದರು. ವಿದ್ಯಾವಂತರಲ್ಲಿ ಹವ್ಯಾಸಿಗಳಲ್ಲಿ ಈ ಕಲೆಯ ಬಗೆಗೆ ಎಚ್ಚರ (awareness) ಬರುವಂತಾಯಿತು. ಕನ್ನಡಿಗರೆಲ್ಲರಿಗೂ ಯಕ್ಷಗಾನ ಕರ್ನಾಟಕದ ಹೆಮ್ಮೆಯ ಕಲೆ ಎಂಬ ಭಾವನೆ ಬರಲು ಕಾರಂತರು ಕಾರಣರಾದರು. ಉಡುಪಿಯ ಯಕ್ಷಗಾನ ಕಲಾಕೇಂದ್ರದ ಮೊದಲ ನಿರ್ದೇಶಕರಾಗಿ ಯಕ್ಷಗಾನದ ಶುದ್ಧಸ್ವರೂಪದ ರಕ್ಷಣೆಗೆ ಶ್ರಮಿಸಿ, ಆ ಕೇಂದ್ರಕ್ಕೊಂದು ಭದ್ರ ಅಡಿಪಾಯ ಹಾಕಿಕೊಟ್ಟರು. ಅವರು ಶುದ್ಧವಾಗಿ ಹಾಡುವ ಭಾಗವತ ಹಾಗೂ ಮದ್ದಲೆಗಾರರನ್ನು ಸಂಘಟಿಸಿ ಅನೇಕ ರಾಗಗಳನ್ನು ಗುರುತಿಸಿ ಸಂರಕ್ಷಿಸಿದರು. ಸಮ್ಮೇಳನ ಶಿಬಿರಗಳನ್ನು 50 ವರ್ಷಗಳ ಕೆಳಗೆ ಸಂಘಟಿಸಿ ಎಷ್ಟೋ ಅಮೂಲ್ಯ ವಿಚಾರಗಳನ್ನು ಬೆಳಕಿಗೆ ತಂದರು. ಹೀಗೆ ಯಕ್ಷಗಾನಕ್ಕೆ ಕಳೆದ 50-60 ವರ್ಷಗಳಲ್ಲಿ ಡಾ॥ ಕಾರಂತರು ನೀಡಿದ ಕೊಡುಗೆ, ಕಲಾವಿದರಿಗೆ ತೋರಿದ ದಾರಿ ಅನನ್ಯವಾದುದು.

ಯಕ್ಷಗಾನ ಹವ್ಯಾಸಿ ರಂಗಭೂಮಿ:

ಬಹಳಷ್ಟು ವರ್ಷಗಳಿಂದ ಯಕ್ಷಗಾನ ವೃತ್ತಿಯಾಗಿ ಕಾಣಿಸಿಕೊಂಡಿರುವುದು ಹೆಚ್ಚಾಗಿ ದಕ್ಷಿಣ ಕನ್ನಡದಲ್ಲಿ. ಮಲೆನಾಡು ಹಾಗೂ ಉತ್ತರ ಕನ್ನಡದಲ್ಲಿ ಹವ್ಯಾಸಿಗಳು ಮೊದಲಿನಿಂದಲೂ ಒಟ್ಟಾಗಿ ಸೇರಿ ಯಕ್ಷಗಾನವನ್ನು ಅಭ್ಯಾಸ ಮಾಡಿ ಆಸುಪಾಸುಗಳಲ್ಲಿ ಹತ್ತೆಂಟು ಪ್ರದರ್ಶನಗಳನ್ನು ನೀಡುತ್ತಿದ್ದರು. ಇವೇ ಮುಂದೆ ವೃತ್ತಿಮೇಳದ ಅಸ್ತಿತ್ವಕ್ಕೆ ಕಾರಣವಾದದ್ದುಂಟು.

ಈಚಿನ ವರ್ಷಗಳಲ್ಲಿ ಯಕ್ಷಗಾನ ಕಲೆಯಲ್ಲಿ ಹವ್ಯಾಸಿಗಳ ಪಾತ್ರ ಮಹತ್ತರ ವಾದುದು. ಜೀವನ ನಿರ್ವಹಣೆಗೆ ವೃತ್ತಿಯೊಂದನ್ನು ಆಯ್ದುಕೊಂಡು ಯಕ್ಷಗಾನದ ಬಗ್ಗೆ ಅಪಾರ ಅಭಿಮಾನವುಳ್ಳ, ಅಸಂಖ್ಯರು ದಕ್ಷಿಣೋತ್ತರ ಕನ್ನಡ ಜಿಲ್ಲೆ ಹಾಗೂ ಬೆಂಗಳೂರು ಮುಂಬಯಿಯಂತಹ ನಗರಗಳಲ್ಲಿದ್ದಾರೆ. ಬಾಲ್ಯದ ದಿನಗಳಲ್ಲಿ ಯಕ್ಷ ಗಾನದ ಪ್ರಭಾವಕ್ಕೆ ಒಳಗಾಗಿ ಅದನ್ನೆ ಮೈಗೂಡಿಸಿಕೊಂಡ ಈ ಹವ್ಯಾಸಿಗಳು ಅಲ್ಲಿ ಸೇರಿ ತಮ್ಮದೇ ಆದ ತಂಡ ಕಟ್ಟಿಕೊಂಡು ಕಷ್ಟಪಟ್ಟು ಕಲಿತು ಪ್ರದರ್ಶನ ನೀಡುತ್ತಿದ್ದಾರೆ. ಇಂತಹ ಹವ್ಯಾಸಿಗಳ ಕೊಡುಗೆ ಯಕ್ಷಗಾನ ರಂಗದಲ್ಲಿ ಅಳಿಸಲಾರದ್ದು. ಪ್ರೇಕ್ಷಕರ ಸಂಖ್ಯೆ ಇವರಿಂದಾಗಿ ಹೆಚ್ಚುತ್ತಿದೆ. ಯಕ್ಷಗಾನದ ವ್ಯಾಪ್ತಿ ಇವರಿಂದಾಗಿ ಹೆಚ್ಚು ವಿಸ್ತಾರ ವಾಗುತ್ತಿದೆ. ಕೆಲವೊಮ್ಮೆ ಹಿರಿಯ ಕಲಾವಿದರನ್ನು ಅತಿಥಿ ಕಲಾವಿದರಾಗಿ ಕರೆಸಿಕೊಂಡು ಉತ್ತಮ ಪ್ರದರ್ಶನಗಳನ್ನು ನೀಡುತ್ತಿದ್ದಾರೆ. ಈ ಹವ್ಯಾಸಿಗಳು ಹೆಚ್ಚಾಗಿ ವಿದ್ಯಾವಂತ ರಾಗಿದ್ದು ಬೇರೆ ಕಲಾಪ್ರಕಾರಗಳನ್ನು ನೋಡಿ, ಸಂಪರ್ಕ ಉಳ್ಳವರಾಗಿದ್ದು, ಒಮ್ಮೊಮ್ಮೆ ವೃತ್ತಿಕಲಾವಿದರಿಗೂ ಅನೇಕ ಹೊಳಹುಗಳನ್ನು ನೀಡಬಲ್ಲ ಸಾಮರ್ಥ್ಯವುಳ್ಳವರಾಗಿರು ತ್ತಾರೆ. ಯಕ್ಷಗಾನ ಕಲೆಯ ಆರೋಗ್ಯಕರ ಬೆಳವಣಿಗೆಗೆ ಇವರು ಸಹಕಾರಿಯಾಗುತ್ತಿದ್ದಾರೆ. ದೂರದ ಊರುಗಳಲ್ಲಿರುವ ಹವ್ಯಾಸಿಗಳ ಸಹಕಾರದಿಂದ ಅನೇಕ ವೃತ್ತಿ ಮೇಳಗಳೂ ಕೂಡ ಅಲ್ಲಿ ಪ್ರದರ್ಶನ ನೀಡುವಂತಾಗಿದೆ. ಶಾಲಾ ಕಾಲೇಜುಗಳ ವಾರ್ಷಿಕೋತ್ಸವಗಳಿ ಗೆಂದು ರೂಪುಗೊಳ್ಳುವ ಯಕ್ಷಗಾನಗಳು ಕೆಲವೊಮ್ಮೆ ಈ ಹವ್ಯಾಸಿಗಳ ಸಹಾಯ ದಿಂದಲೇ ನಡೆಯುತ್ತವೆ. ಯಕ್ಷಗಾನ ಹವ್ಯಾಸಿ ಸಂಘಗಳು ಆಗಾಗ ಕಿರು ಕಾಲ ಮಿತಿಯ ಪ್ರದರ್ಶನ ನೀಡುವುದರೊಂದಿಗೆ ಹಿರಿಯ ಕಲಾವಿದರಿಗೆ ಸನ್ಮಾನ, ಯಕ್ಷ ಗಾನ ಕಲೆಯ ಕುರಿತಾದ ಗೋಷ್ಠಿ ಸಮ್ಮೇಳನಗಳನ್ನು ನಡೆಸುವುದು, ಅಶಕ್ತ ಕಲಾವಿದ ರಿಗೆ ಧನ ಸಮರ್ಪಣೆ ಮಾಡುವುದು ಮುಂತಾದ ಚಟುವಟಿಕೆಗಳನ್ನು ಹಮ್ಮಿ ಕೊಳ್ಳುತ್ತಿದ್ದಾರೆ.

ಬೆಂಗಳೂರು ಮಹಾನಗರದಲ್ಲಿ 1950ರ ದಶಕದಲ್ಲೇ ಹೋಟೇಲುಗಳವರು ಸೇರಿ ಗಜಾನನ ಯಕ್ಷಗಾನ ಮಿತ್ರಮಂಡಳಿಯನ್ನು ಪ್ರಾರಂಭಿಸಿ ರೇಡಿಯೋದಲ್ಲಿ ಯಕ್ಷಗಾನ ಪ್ರಸಾರ, ಪುರಭವನದಲ್ಲಿ ಯಕ್ಷಗಾನ ಪ್ರದರ್ಶನ ವ್ಯವಸ್ಥೆ ಮುಂತಾದುವನ್ನು ನಡೆಸಿದ ದಾಖಲೆಗಳಿವೆ. ಶ್ರೀ ಪಡುಕೆರೆ ಶ್ರೀಧರ ಹಂದೆ, ಪಿ.ಕೆ. ಮಧ್ಯಸ್ಥ, ಕೆ.ಎಲ್. ಐತಾಳ, ಕೊಡೇರಿ ಶಿವರಾಮ ಕಾರಂತ, ಕೊಡೇರಿ ಮಾಧವ ಕಾರಂತ ಇವರು ಪ್ರಮುಖರಾಗಿದ್ದಾರೆ. ಶ್ರೀಮತಿ ಅಕ್ಕಾಣಿಯಮ್ಮ 'ಮಹಿಳಾ ಯಕ್ಷಗಾನ ಮಂಡಳಿ' ಎಂಬ ಮಹಿಳೆಯರ ಕೂಟವನ್ನು ರಚಿಸಿ ಶ್ರೀ ಗುಂಡ್ಮಿ ಸದಾನಂದ ಐತಾಳರ ಮಾರ್ಗದರ್ಶನದಲ್ಲಿ ಮಹಿಳೆಯರೇ ಯಕ್ಷಗಾನ ಪ್ರದರ್ಶನ ನೀಡಲು ಪ್ರಾರಂಭಿಸಿ ದರು. 80ರ ದಶಕದಿಂದ ಅನೇಕ ಹವ್ಯಾಸಿ ತಂಡಗಳು ಬೆಂಗಳೂರಿನಲ್ಲಿ ಕಾಣಿಸಿ ಕೊಂಡಿವೆ. ಇವುಗಳಲ್ಲಿ ಯಕ್ಷದೇಗುಲವು ಕೆ. ಮೋಹನ್ ಹೊಳ್ಳ ಅವರ ನೇತೃತ್ವದಲ್ಲಿ ಖ್ಯಾತಗೊಂಡಿತು. ಅನೇಕ ಪೌರಾಣಿಕ ಪ್ರಸಂಗಗಳನ್ನು, ಸಾಕ್ಷರತೆ ಬಗ್ಗೆ, ನಿಸರ್ಗದ

ಉಳಿವಿನ ಬಗ್ಗೆ ಪ್ರದರ್ಶನಗಳನ್ನು ಈ ತಂಡ ನೀಡಿತು. ಯಕ್ಷರಂಜಿನಿಯನ್ನು ಶ್ರೀ ಗುಂಡ್ಮಿ ರಘುರಾಂ ಅವರು ಸ್ಥಾಪಿಸಿ ಯಕ್ಷಗಾನ, ತಾಳಮದ್ದಲೆ ಹಾಗೂ ಬಯಲಾಟ ಪ್ರದರ್ಶನಗಳನ್ನು ನೀಡಿದಲ್ಲದೆ ದೂರದರ್ಶನ ಹಾಗೂ ಬಾನುಲಿಗಳಲ್ಲೂ ಯಕ್ಷಗಾನ ಬೆಳಕುಗೊಂಡಿತು. ಯಕ್ಷಸಂಪದದ ರೂವಾರಿಗಳೆಂದರೆ ಎ. ಶ್ರೀನಿವಾಸ ಅಲ್ಸೆ ಅವರು. ಕರ್ನಾಟಕ ಕಲಾದರ್ಶಿನಿ ತಂಡದ ಸ್ಥಾಪಕರು ಶ್ರೀ ಶ್ರೀನಿವಾಸ ಸಾಸ್ಥಾನ ಇವರು. ಬಡಗು ಹಾಗೂ ತೆಂಕುಗಳೆರಡರಲ್ಲೂ ಪ್ರದರ್ಶನ ನೀಡುವ ಸಾಮರ್ಥ್ಯ ಹೊಂದಿದೆ. ತಮ್ಮದೇ ಆದ ವೇಷಭೂಷಣವನ್ನು ಹೊಂದಿರುವ ಈ ಸಂಸ್ಥೆ ಸ್ತ್ರೀಯರಿಂದಲೂ ಕೂಡ ಯಕ್ಷಗಾನವನ್ನು ಪ್ರದರ್ಶಿಸುತ್ತಿದೆ. ಶ್ರೀ ಮಿತ್ತೂರು ಈಶ್ವರಭಟ್ಟರು ಪ್ರಾರಂಭಿಸಿದ ಯಕ್ಷಕಲಾ ರಂಜಿನಿ ತೆಂಕುತಿಟ್ಟಿನ ಪ್ರದರ್ಶನ ನೀಡಿದ್ದೇ ಅಲ್ಲದೆ, ಅನೇಕ ಗೋಷ್ಠಿ ಗಳನ್ನು, ಯಕ್ಷೋತ್ಸವದಂತಹ ಕಾರ್ಯಕ್ರಮಗಳನ್ನು ನಡೆಸಿದೆ. ಚೈತನ್ಯ ಯಕ್ಷಗಾನ ಮಂಡಳಿ, ಕರಾವಳಿ ಯಕ್ಷಗಾನ ಕಲಾವಿದರು, ಯಕ್ಷ ಮಿತ್ರಮಂಡಳಿ, ಯಕ್ಷಾಂಗಣ ಬೆಂಗಳೂರು, ಯಕ್ಷ ಕರ್ದಮ, ತುಳು ಕೂಟದವರ ಯಕ್ಷಗಾನ ಚಟುವಟಿಕೆಗಳು, ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನ ಮುಂತಾದವುಗಳು ಯಕ್ಷಗಾನದ ಮುಖ್ಯವಾಹಿನಿ ಯೊಂದಿಗೆ ನೇರ ಸಂಪರ್ಕವನ್ನಿರಿಸಿಕೊಂಡಿವೆ. ಕೋಲಾರ (ಕೆ.ಜಿ.ಎಫ್)ದಲ್ಲೂ ಕೂಡ ಯಕ್ಷಗಾನ ಹವ್ಯಾಸಿ ಸಂಘಗಳಿದ್ದು ಕಿರುಪ್ರದರ್ಶನಗಳನ್ನು ನೀಡುತ್ತಿವೆ. ಮುಂಬಯಿ ನಗರದಲ್ಲೂ ಅನೇಕ ಹವ್ಯಾಸಿ ಯಕ್ಷಗಾನ ತಂಡಗಳಿದ್ದು ಮಳೆಗಾಲದಲ್ಲಿ ಪ್ರದರ್ಶನಗಳನ್ನು ವ್ಯವಸ್ಥೆ ಮಾಡುತ್ತಾ ತಾವೂ ಪ್ರದರ್ಶನದಲ್ಲಿ ಭಾಗಿಗಳಾಗುತ್ತಾ ಬಂದಿವೆ. ಮುಂಬಯಿ ಯಕ್ಷಗಾನ ರಂಗಭೂಮಿಯನ್ನು ಉಳಿಸುವಲ್ಲಿ, ಬೆಳೆಸುವಲ್ಲಿ ತುಳು ಸಮಾಜದವರ ಪರಿಶ್ರಮ ಹೆಚ್ಚಿದೆ. ದೂರದ ದುಬೈ, ಅಬುದಾಬಿ, ಬೆಹರಿನ್ ಗಳಲ್ಲೂ ಹವ್ಯಾಸಿ ತಂಡಗಳು ಹುಟ್ಟಿಕೊಂಡು ವೇಷಭೂಷಣಗಳನ್ನು ಸಿದ್ಧಪಡಿಸಿಕೊಂಡು ಕಲಾವಿದರನ್ನು ಕರೆಸಿ ಆ ದೇಶಗಳಲ್ಲೂ ಪ್ರದರ್ಶನ ಏರ್ಪಡಿಸುತ್ತಿವೆ.

ದಕ್ಷಿಣೋತ್ತರ ಕನ್ನಡಜಿಲ್ಲೆ ಹಾಗೂ ಮಲೆನಾಡುಗಳಲ್ಲಿ ಹವ್ಯಾಸಿಗಳು ಗಣನೀಯ ಸಂಖ್ಯೆಯಲ್ಲಿದ್ದಾರೆ. ಮೇಳದ ಕಲಾವಿದರೊಂದಿಗೆ ನೇರ ಸಂಪರ್ಕವುಳ್ಳ ಇವರು, ಕೆಲವೊಮ್ಮೆ ಟೆಂಟ್‌ಮೇಳಗಳನ್ನು ಗುತ್ತಿಗೆಗೆ ಪಡೆದು ಪ್ರದರ್ಶನ ನೀಡುತ್ತಾರೆ. ಊರುಗಳಲ್ಲಿ ನಡೆಯುವ ಜಾತ್ರೆ, ಮಹೋತ್ಸವದಂತಹ ಸಂದರ್ಭದಲ್ಲಿ ಯಕ್ಷಗಾನ ವನ್ನು ಕಲಿತು ಆಡುತ್ತಾರೆ. ಶಾಲೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕ ರಾಗಿ ಅವರನ್ನು ತಿದ್ದುತ್ತಾರೆ. ವೃತ್ತಿಕಲಾವಿದರಿಂದ ದೂರ ಉಳಿಯುವ ಗೋಷ್ಠಿಗಳು ಸಮ್ಮೇಳನಗಳನ್ನು ನಡೆಸುವುದು, ಅದರಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಹವ್ಯಾಸಿ ಕಲಾವಿದರ ಹೆಗ್ಗಳಿಕೆಯಾಗಿದೆ. ಕೆಲವು ಹವ್ಯಾಸಿ ತಂಡಗಲು ಇಂಗ್ಲಿಷ್ ಹಿಂದಿ ಮೊದಲಾದ ಭಾಷೆಗಳಲ್ಲಿ ಯಕ್ಷಗಾನ ಪ್ರದರ್ಶನವನ್ನು ದೇಶದಾದ್ಯಂತ ನೀಡುತ್ತಿವೆ. ಇದರಿಂದಾಗಿ ಯಕ್ಷಗಾನಕ್ಕೆ ಹೆಚ್ಚು ವ್ಯಾಪಕತೆ ಬರುವಂತಾಗಿದೆ. ಪ್ರಬುದ್ಧ ಪ್ರೇಕ್ಷಕರ ನಿರ್ಮಾಣವಾಗುವುದರೊಂದಿಗೆ ಶ್ರದ್ಧೆಯಿಂದ ಪಡೆಯುವ ತರಬೇತಿಯಿಂದಾಗಿ

ಯಕ್ಷಗಾನದಲ್ಲಿ ರುಚಿಶುದ್ಧಿ ಬೆಳೆಯಲು ಕಾರಣವಾಗುತ್ತದೆ. ಹೀಗೆ ಇಂದಿನ ಯಕ್ಷಗಾನ ರಂಗಭೂಮಿಯಲ್ಲಿ ಹವ್ಯಾಸಿಗಳ ಪಾತ್ರ ಅಗಣಿತವಾದದ್ದು.

ತರಬೇತಿ ಕೇಂದ್ರಗಳು:

ಹಿಂದೆಲ್ಲಾ ಯಕ್ಷಗಾನಗಳಲ್ಲಿ ಪಾರಂಪರಿಕವಾದ ಶಿಕ್ಷಣ ವಿಧಾನವಿರುತ್ತಿತ್ತು. ಎಳವೆಯಲ್ಲೇ ಮೇಳವನ್ನು ಸೇರಿದ ಕಲಾವಿದರು ಹಿರಿಯ ಕಲಾವಿದರ ಒಡನಾಟದಿಂದ ಈ ಕಲೆಯನ್ನು ಕಲಿಯುತ್ತಿದ್ದರು. ರಾತ್ರಿಯಿಡೀ ಪ್ರದರ್ಶನ ನೋಡುತ್ತಾ ಬೆಳೆಯುತ್ತಿದ್ದರು. 'ಸಭಾವಂದನೆ' ಯಾ "ಸಭಾಲಕ್ಷಣ"ದ ಭಾಗದಲ್ಲಿ ಈ ಎಳೆಯರ ಕಲಿಕೆಗೆ ಪ್ರಾಶಸ್ತ್ಯವಿತ್ತು. ಅವರ ಕುಣಿತ ಹಾವವಭಾವಗಳನ್ನು ತಿದ್ದಿ ತೀಡಲು, ರಂಗದಲ್ಲಿ ನರ್ತಿಸುತ್ತಾ ಪ್ರೇಕ್ಷಕರ ಎದುರು ಧೈರ್ಯದಿಂದ ನಿಲ್ಲಲು ಅವಕಾಶವಾಗುತ್ತಿತ್ತು. ರಾತ್ರಿಯೆಲ್ಲ ಎಚ್ಚರವಾಗಿದ್ದು ಹಿರಿಯ ಕಲಾವಿದರ ಕುಣಿತ ಹಾವಭಾವ, ಮಾತುಗಾರಿಕೆ, ವೇಷಭೂಷಣ, ಹೆಜ್ಜೆಗಾರಿಕೆಗಳನ್ನೆಲ್ಲಾ ಹತ್ತಿರದಿಂದ ನೋಡುತ್ತಿರುತ್ತಾರೆ. ಹಗಲುಹೊತ್ತಿನಲ್ಲಿ ಒಂದೂ ರಿಂದ ಇನ್ನೊಂದೂರಿಗೆ ಪ್ರಯಾಣ ಮಾಡುವಾಗ ಕಲಾವಿದರ ಮಾತುಕತೆಗಳಲ್ಲಿ ಬೆರೆತು ಅನೇಕ ಸೂಕ್ಷ್ಮ ವಿಚಾರಗಳನ್ನು ಮನನ ಮಾಡಿಕೊಳ್ಳಲು ಸಾಧ್ಯ. ಟೆಂಟ್ ಮೇಳಗಳ ಅಸ್ತಿತ್ವದೊಂದಿಗೆ ಸಭಾಲಕ್ಷಣದ ಭಾಗ ನಶಿಸಿಹೋದುವು. ಎಳೆ ಕಲಾವಿದರ ಅಗತ್ಯವೇ ಇಲ್ಲವಾದಾಗ ಕಲಿಯುವ ಬಗೆ ಇಲ್ಲವಾಯಿತು. ಕಾರು ಬಸ್ಸುಗಳಲ್ಲೇ ಓಡಾಡುವುದರಿಂದ ಹಿರಿಯ ಕಲಾವಿದರ ಸಾಹಚರ್ಯವು ತಪ್ಪಿತು. ಹೀಗಾಗಿ ತರಬೇತಿ ಕೇಂದ್ರಗಳು ಅಗತ್ಯವಾದುವು. ಡಾ॥ ಕಾರಂತರು 1955ರ ಸುಮಾರಿಗೆ ವೃತ್ತಿಮೇಳದ ಕಲಾವಿದರಿಗೆಂದು ಬ್ರಹ್ಮಾವರದಲ್ಲಿ ತರಬೇತಿ ಕೇಂದ್ರ ಪ್ರಾರಂಭಿಸಿದ್ದರು. ಮುಂದೆ ಉಡುಪಿಯಲ್ಲಿ ಪೂರ್ಣಪ್ರಮಾಣದ ತರಬೇತಿ ಕೇಂದ್ರ ಅಸ್ತಿತ್ವಕ್ಕೆ ಬಂತು. ಇದೇ ಮಾದರಿಯಲ್ಲಿ ಮುಂದೆ ಗುರು ನಾರಣಪ್ಪ ಉಪ್ಪೂರರ ಹಿರಿತನದಲ್ಲಿ ಹಂಗಾರಕಟ್ಟೆ ಯಕ್ಷಗಾನ ಕೇಂದ್ರ ಜನ್ಮ ತಳೆಯಿತು. ದಿ॥ ಕಾಳಿಂಗ ನಾವಡ, ಸುಬ್ರಹ್ಮಣ್ಯ ಧಾರೇಶ್ವರ ಮುಂತಾದವರೆಲ್ಲ ಇಲ್ಲಿನ ಕೊಡುಗೆಗಳಾಗಿವೆ. ತೆಂಕಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಯಕ್ಷ ಗಾನ ತರಬೇತಿ ಕೇಂದ್ರ ಪ್ರಾರಂಭವಾಯಿತು. ಅದೇರೀತಿ ಉತ್ತರ ಕನ್ನಡ ಜಿಲ್ಲೆಯ ಕೆರೆಮನೆಯವರ ಆಶ್ರಯದಲ್ಲಿ ಇಡಗುಂಜಿ ಯಕ್ಷಗಾನ ತರಬೇತಿ ಕೇಂದ್ರ ಅಸ್ತಿತ್ವಕ್ಕೆ ಬಂದಿದೆ. ಕರ್ಕಿ, ತಾಳಗುಪ್ಪಗಳಲ್ಲೂ ಎಳೆಯರು ತರಬೇತುಗೊಳ್ಳುತ್ತಿದ್ದಾರೆ. ಉಡುಪಿಯದಂತೂ ಮೊದಲ ಬಾರಿಗೆ ಪೂರ್ಣ ಪ್ರಮಾಣದ ಸ್ಟೈಪೆಂಡರಿ ವ್ಯವಸ್ಥೆಯ ಕಲಾಕೇಂದ್ರವಾಗಿ ಜನ್ಮ ತಳೆದಿದ್ದು, ಕಳೆದ 30 ವರ್ಷಗಳಲ್ಲಿ ಇಲ್ಲಿ ತರಬೇತಾದ ಅನೇಕರು ವೃತ್ತಿಮೇಳಗಳ ಸಂಪತ್ತಾಗಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಾಯೋಜಕತ್ವವೂ ಈ ಸಂಸ್ಥೆಗೆ ಲಭಿಸಿದೆ. ಹಿಂದೆ ಕೇಂದ್ರದ ನಿರ್ದೇಶಕರಾಗಿದ್ದ ದಿ॥ ಕು.ಶಿ. ಹರಿದಾಸಭಟ್ಟರ ನೇತೃತ್ವದಲ್ಲಿ ಡಾ॥ ಕಾರಂತರ ಮಾರ್ಗದರ್ಶನದಲ್ಲಿ ಈ ಸಂಸ್ಥೆ ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿಕೊಂಡಿತು. ಗುರು ವೀರಭದ್ರ ನಾಯಕ,

ಹಿರಿಯಡ್ಕ ಗೋಪಾಲರಾವ್, ನೀಲಾವರ ರಾಮಕೃಷ್ಣಯ್ಯ, ಮಣೂರು ಮಹಾಬಲ ಕಾರಂತ ಮುಂತಾದವರು ಇಲ್ಲಿ ಗುರುಗಳಾಗಿ ಸೇವೆ ಸಲ್ಲಿಸಿ ಖ್ಯಾತರಾಗಿದ್ದರು. ಈ ಬಗೆಯ ತರಬೇತಿ ಕೇಂದ್ರಗಳ ಅಗತ್ಯಗಳು ಮುಂದಿನ ದಿನಗಳಲ್ಲಿ ಹೆಚ್ಚಬಹುದು. ಆಧುನಿಕ ವಿದ್ಯಾಭ್ಯಾಸ ಹಾಗೂ ದೃಷ್ಟಿಕೋನಗಳು ಇದರ ಅಗತ್ಯವನ್ನು ಸಾರುತ್ತವೆ. ಹಾಗಾಗಿಯೇ ಉಳಿದ ಕೇಂದ್ರಗಳು ಕೂಡ ಈಗ ಹೆಚ್ಚು ಹೆಚ್ಚು ಪ್ರಚಾರಗೊಳ್ಳುತ್ತಿವೆ ಹಾಗೂ ಉತ್ತಮ ಕಾರ್ಯನಿರ್ವಹಿಸುತ್ತಿವೆ. ಹಳೆಯ ತಲೆಮಾರಿನ ಕಲಾವಿದರನ್ನು ಕರೆಸಿ ಅವರಿಂದ ಪರಂಪರಾಗತವಾದ ಪೀಠಿಕೆಯ ವೇಷದ ಸಭಾಕ್ಲಾಸ್, ಹನುಮಂತನ ತೆರೆ ಕುಣಿತ, ವೈವಿಧ್ಯಮಯ ಒಡ್ಡೋಲಗಗಳ ಅಭ್ಯಾಸ, ಪರಂಪರೆಯ ವೇಷಗಳಾದ ಕಿರಾತ, ಈಶ್ವರ, ಸ್ತ್ರೀವೇಷಗಳ ಮುಖವರ್ಣಿಕೆಯ ಬಗೆಯೆಲ್ಲ ಇಲ್ಲಿ ಕಲಿಸಲಾಗುತ್ತದೆ. ಇದರಿಂದಾಗಿ ಸಾಂಪ್ರದಾಯಕ ಕಲೆಯಾದ ಯಕ್ಷಗಾನದ ಉಳಿವು ಸಾಧ್ಯ.

ಕಾಲಮಿತಿ ಪ್ರದರ್ಶನಗಳು:

ಯಕ್ಷಗಾನ ಪ್ರದರ್ಶನ ರಾತ್ರಿ ಎಂಟು ಒಂಬತ್ತು ಗಂಟೆಗೆ ಪ್ರಾರಂಭವಾಗಿ ಮಾರನೇ ದಿನ ಬೆಳಿಗ್ಗೆ ಸೂರ್ಯೋದಯದವರೆಗೆ ನಡೆಯುವ ಕ್ರಮ ಮಾತ್ರ ಇಂದಿಗೂ ಇದೆ. ಹಿಂದೆಲ್ಲ ಬಯಲಾಟದ ಮೇಳಗಳಿರಲಿ, ಟೆಂಟ್ ಮೇಳವಿರಲಿ ರಾತ್ರಿಯಿಡೀ ಆಟ ನೋಡಲು ಪ್ರೇಕ್ಷಕರು ಸಿದ್ಧರಿರುತ್ತಿದ್ದರು. ಈ ಕ್ರಮ ಉಳಿದು ಬರಲು ಸಂಚಾರ ವ್ಯವಸ್ಥೆಯ ಅಭಾವವೂ ಪೂರಕವಾಗಿತ್ತು. ಆದರೆ ಕಳೆದ 10–20 ವರ್ಷಗಳಲ್ಲಿ ಉಂಟಾದ ಸಂಚಾರ ವ್ಯವಸ್ಥೆಯ ಕ್ರಾಂತಿಯಿಂದಾಗಿ ಮತ್ತು ಜನರ ದೈನಂದಿನ ಜೀವನ ವ್ಯವಸ್ಥೆಯಲ್ಲಾದ ಏರುಪೇರಿನಿಂದಾಗಿ ಈ ವ್ಯವಸ್ಥೆ ಕುಸಿಯಲು ಪ್ರಾರಂಭವಾಗಿದೆ. ಹವ್ಯಾಸಿಗಳ ಪ್ರದರ್ಶನಗಳು ಮತ್ತು ವಿಶೇಷ ಪ್ರದರ್ಶನಗಳು ಮೂರು ಗಂಟೆಯ ಕಾಲಮಿತಿಗೆ ಒಳಪಡುತ್ತವೆ. 25 ವರ್ಷಗಳ ಕೆಳಗೆ ಕೆರೆಮನೆ ಮಹಾಬಲ ಹೆಗಡೆಯವರ ಸಂಚಾಲಕತ್ವದಲ್ಲಿ ಕಮಲಶಿಲೆ ಮೇಳ ಒಂದು ತಿರುಗಾಟದಲ್ಲಿ 'ಕಾಲ ಮಿತಿ' ಪ್ರದರ್ಶನಗಳನ್ನು ಅಳವಡಿಸಿತ್ತು. ಆದರೆ ಅದು ಮುಂದೆ ಬೆಳೆದುಬರಲಿಲ್ಲ. ಆದರೆ, ಈಚೆಗೆ ಕೆರೆಮನೆ ಶಂಭು ಹೆಗಡೆಯವರ ಇಡಗುಂಜಿ ಮೇಳದವರು ಇದನ್ನೆ ಪ್ರಚುರಪಡಿಸಿ ಯಶಸ್ವಿಯಾಗಿದ್ದಾರೆ. ಹೆಚ್ಚುತ್ತಿರುವ ನಗರೀಕರಣ, ಕಡಿಮೆಯಾಗುತ್ತಿರುವ ಕಲಾವಿದರ ದೇಹಸಾಮರ್ಥ್ಯ, ಈ ಬಗೆಯ ಪ್ರದರ್ಶನಗಳ ಅಗತ್ಯವನ್ನು ಸಾರುತ್ತಿವೆ. ಈಚೆಗಂತೂ ವೃತ್ತಿಮೇಳಗಳ ಆಟಕ್ಕೆ ಬರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಬಯಲಾಟದ ಪ್ರದರ್ಶನದಲ್ಲಂತು ಮಧ್ಯರಾತ್ರಿಯ ನಂತರ ಬೆರಳೆಣಿಕೆಯ ಪ್ರೇಕ್ಷಕರು ಉಳಿದಿರುತ್ತಾರೆ. ಆಸನದ ವ್ಯವಸ್ಥೆ ಇರುವ ಡೇರೆ ಮೇಳಗಳು ಇದಕ್ಕೆ ಹೊರತಾಗಿಲ್ಲ. ಹಿಂದೆಲ್ಲ ರಾತ್ರಿಯೆಲ್ಲ ನಿದ್ದೆಗೆಟ್ಟು ನೋಡಿ ಮಾರನೇ ದಿನವೆಲ್ಲ ಅದನ್ನೇ ಮೆಲಕುಹಾಕುತ್ತಿದ್ದ ಜನವರ್ಗವೇ ಕಾಣೆಸದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದನ್ನು ಗಮನಿಸಿದಾಗ ಹಿಂದೆಲ್ಲ ಕೆರೆಮನೆ ಮಹಾಬಲ ಹೆಗಡೆಯವರು ಹೇಳುತ್ತಿದ್ದ 'ರಾತ್ರಿ ಬೆಳಗು' ಮಾಡುವ ಪ್ರದರ್ಶನ ರೇಜಿಗೆ ಉಂಟುಮಾಡುತ್ತದೆ.

ರಸಾವಿಷ್ಕಾರಕ್ಕೆ ದೀರ್ಘ ಅವಧಿ ಬೇಕಿಲ್ಲ ಎನ್ನುವುದು ಸತ್ಯ ಎನಿಸುತ್ತದೆ. ಯಕ್ಷಗಾನ ಕರಾವಳಿಗಿಂತ ಈಗೀಗ ಹೊರಗಿನ ಪ್ರದೇಶದಲ್ಲೇ ಹೆಚ್ಚು ಜನಪ್ರಿಯವಾಗುತ್ತಿದೆ ಎಂಬ ಭಾವ ಕಲಾವಿದರಲ್ಲಿ ಬಲಿಯುತ್ತಿದೆ. ಈ ಕಾರಣ ನಿಶ್ಚಿತ ಅವಧಿಯ ರಸೋತ್ಕೃಷ್ಟವಾದ ಯಕ್ಷಗಾನ ಪ್ರಸಂಗಗಳೇ ಮುಂದೆ ಪ್ರದರ್ಶನಗೊಳ್ಳುವ ಸಾಧ್ಯತೆ ಇದೆ.

ಯಕ್ಷಗಾನ ವಿಮರ್ಶೆ:

ನಾಟಕ ಸಿನಿಮಾಗಳಿಗಿರುವಂತೆ ಇಂದು ಯಕ್ಷಗಾನ ಪ್ರದರ್ಶನಗಳ ಬಗ್ಗೂ ಅಲ್ಲಿ ವಿಮರ್ಶೆ ನಡೆಯುತ್ತಿರುತ್ತದೆ. ಹಿಂದೆಲ್ಲ ಯಕ್ಷಗಾನದ ಬಗ್ಗೆ ಮಾತನಾಡುವವರೆಂದರೆ ಗ್ರಾಮದ ಮುಖ್ಯಸ್ಥರು ಅಥವಾ ಯಕ್ಷಗಾನ ಕಲೆಯನ್ನು ಆರಾಧಿಸುತ್ತಿದ್ದ ಮಂದಿ. ಈ ಪಾರಂಪರಿಕ ವಿಮರ್ಶಾ ದೃಷ್ಟಿಯನ್ನು ಅಥೆಂಟಿಕ್ ಎಂದೇ ಜನ ನಂಬುತ್ತಿದ್ದರು. ಆದರೆ ಈಗ ಓದಿರುವ ವಿದ್ಯಾವಂತ ವರ್ಗ ಯಕ್ಷಗಾನವನ್ನು ನೋಡಿ ಇತರೆ ಕಲೆಯೊಂದಿಗೆ ತೂಗಿ ನೋಡಿ ಬೆಲೆ ಕಟ್ಟುತ್ತಾರೆ. ಆದರೆ ಯಕ್ಷಗಾನ ಕಲಾವಿದರು ಈ ಬಗ್ಗೆ ಆಸಕ್ತಿ ತಳೆಯದಿರುವುದು ಒಂದು ದೌರ್ಭಾಗ್ಯವೇ ಸರಿ. ಕಲಾವಿದರಿಗೆ ಓದಿನ ಬಗೆಗಿನ ಅನಾಸಕ್ತಿ, ತಿದ್ದಿಕೊಳ್ಳುವ ಶಿಸ್ತಿನ ಅಭಾವದಿಂದಾಗಿ ಇಂತಹ ವಿಮರ್ಶೆಗಳು ಕಲಾರಂಗದಲ್ಲಿ ಅಂತಹ ಪ್ರಭಾವ ಬೀರುತ್ತಿಲ್ಲ. ಆದರೆ ಹವ್ಯಾಸಿ ತಂಡಗಳು ಈ ಬಗ್ಗೆ ಗಮನ ನೀಡುತ್ತಿವೆ. ವಿದ್ಯಾವಂತ ಪ್ರೇಕ್ಷಕ ಏನನ್ನು ಬಯಸುತ್ತಾನೆ ಎಂಬುದನ್ನು ತಿಳಿದುಕೊಳ್ಳಲು ಯುವ ಕಲಾವಿದರಿಗೆ ಮಾರ್ಗದರ್ಶಕವಾಗಲು ಇಂತಹ ವಿಮರ್ಶೆಗಳು ಅಗತ್ಯ. ಇದರಿಂದ ಯಕ್ಷಗಾನ ಪ್ರದರ್ಶನ ಉತ್ತಮಗೊಳ್ಳಲು ಸಾಧ್ಯ. ಯಕ್ಷಗಾನ ಕುರಿತಾದ 'ಯಕ್ಷರಂಗ' ಪತ್ರಿಕೆಯನ್ನು ಮೊತ್ತಮೊದಲಿಗೆ ಪ್ರಾರಂಭಿಸಿದವರು ಕಡತೋಕ ಮಂಜುನಾಥ ಭಾಗವತರು. ಮುಂದೆ ಅವರು ಧರ್ಮಸ್ಥಳ ಮೇಳದ ಭಾಗವತರಾದ ನಂತರ ಅದರ ಪ್ರಸಾರ ನಿಂತು ಹೋಯಿತು. ಮತ್ತೆ ಇದೀಗ ಅವರ ಮಗನಾದ ಗೋಪಾಲಕೃಷ್ಣ ಭಾಗವತರು ಅದರ ಮರು ಪ್ರಕಟಣೆಯನ್ನು ಪ್ರಾರಂಭಿಸಿರುತ್ತಾರೆ. ಯಕ್ಷಗಾನ ಕಲೆ ಕಲಾವಿದರ ಕುರಿತಾದ ವಿಮರ್ಶೆಗಳು ಇಲ್ಲಿ ಬೆಳಕು ಕಾಣುತ್ತಿವೆ. ಇದೇ ರೀತಿ ಇನ್ನೂ 3 ಯಕ್ಷಗಾನಕ್ಕೆ ಸಂಬಂಧಿಸಿದ ಪತ್ರಿಕೆಗಳಿವೆ.

ಯಕ್ಷಗಾನ ತಾಳಮದ್ದಲೆ:

ಕರಾವಳಿ ಹಾಗೂ ಮಲೆನಾಡಿನ ಪ್ರದೇಶದಲ್ಲಿ ಯಕ್ಷಗಾನ ಬಯಲಾಟದಷ್ಟೇ ಯಕ್ಷಗಾನ ತಾಳಮದ್ದಲೆಯೂ ಹೆಸರು ಪಡೆದ ಕಲಾಪ್ರಕಾರ. ಪ್ರಸಂಗಗಳ ಆಧಾರದ ಮೇಲೆ ಸಂಗೀತ ಮತ್ತು ಮಾತುಗಾರಿಕೆಗಳ ಸಂಯೋಜನೆಯೊಂದಿಗೆ ಕಲಾರಸ ಸೃಷ್ಟಿಯಾಗಿ ಜನರಂಜನೆಯನ್ನು ಉಂಟುಮಾಡುತ್ತದೆ. ಬಯಲಾಟದಲ್ಲಿ ಬರುವ ಕುಣಿತ ಮತ್ತು ವೇಷಗಾರಿಕೆ ಇಲ್ಲಿರುವುದಿಲ್ಲ. ಈ ತಾಳಮದ್ದಲೆಗೆ ಸ್ಥಳೀಯವಾಗಿ

ಕೆಲವೆಡೆ ಬೈಠಕ್, ಜಾಗರಣೆ, ಯಕ್ಷಗಾನ ಕೂಟ ಎಂಬೆಲ್ಲ ಬೇರೆ ಹೆಸರುಗಳಿವೆ. ತಾಳಮದ್ದಲೆಯ ಬಗೆಗಿನ ಉಲ್ಲೇಖ ನಾನೂರು ವರ್ಷಗಳ ಹಿಂದೆಯೇ ಬಂದಿದೆ. ಹದಿನಾರು ಹದಿನೇಳನೇ ಶತಮಾನದ ಪ್ರಸಂಗಗಳನ್ನು ಗಮನಸಿದಾಗ ತಾಳಮದ್ದಲೆಗೆ ಪೂರಕವಾಗುವ ವಾದ ವಿವಾದದ ಅಂಶಗಳಿಗೆ ಪ್ರಸಂಗಕಾರರು ಗಮನವಿತ್ತಿರುವುದು ಕಾಣಿಸುತ್ತದೆ. ಅಲ್ಲದೆ ತಾಳಮದ್ದಲೆಯಲ್ಲಿ ಹೆಚ್ಚು ಪ್ರಸಿದ್ಧವಾದ ಭೀಷ್ಮಪರ್ವ, ಕೃಷ್ಣ ಸಂಧಾನ, ಪಂಚವಟಿ, ವಾಲಿ ಸುಗ್ರೀವ ಕಾಳಗ ಮುಂತಾದ ಪ್ರಸಂಗಳೆಲ್ಲ ಈ ಕಾಲಾವಧಿಯಲ್ಲಿ ರಚಿತವಾಗಿವೆ. ಕೆಳದಿ ನಾಯಕರ ಅನೇಕ ಶಾಸನಗಳಲ್ಲಿ ತಾಳಮದ್ದಲೆ ಪದದ ಬಳಕೆ ಕಂಡುಬರುತ್ತದೆ.

ಇದೊಂದು ಬಹು ಸರಳವಾದ ಕಲಾಮಾಧ್ಯಮವಾಗಿದೆ. ಯಕ್ಷಗಾನ ಪ್ರಚುರವಿರುವ ಭೌಗೋಳಿಕ ಪ್ರದೇಶದಲ್ಲಿ ಯಕ್ಷಗಾನ ಬಯಲಾಟ ಲಭ್ಯವಿಲ್ಲದ ಮಳೆಗಾಲದ ಸಂದರ್ಭದಲ್ಲಿ ಹಿಂದೆಲ್ಲ ತಾಳಮದ್ದಲೆ ಹೆಚ್ಚು ಬಳಕೆಯಲ್ಲಿತ್ತು. ಆಂತೆಯೇ ಯಕ್ಷಗಾನದ ಸಂಪರ್ಕದಿಂದ ತಪ್ಪಿಸಿಕೊಳ್ಳದಂತೆ ಮಾಡುವಲ್ಲಿ ತಾಳಮದ್ದಲೆ ಸಹಕಾರಿ ಯಾಗಿತ್ತು. ನಿಶ್ಚಿತವಾದ ದಿನದಂದು ಹಿಮ್ಮೇಳದವರು, ಅರ್ಥಧಾರಿಗಳು ಸೇರುತ್ತಾರೆ. ದೇವಸ್ಥಾನದಲ್ಲೋ, ಸಾರ್ವಜನಿಕ ಕಟ್ಟಡದಲ್ಲೋ, ಇಲ್ಲವೇ ಊರಿನ ದೊಡ್ಡ ಕಲಾಪ್ರೇಮಿಗಳ ಮನೆಯಲ್ಲೋ ಇದು ನಡೆಯುತ್ತದೆ. ಒಂದು ಭಾಗದಲ್ಲಿ ಹಿಮ್ಮೇಳದವರು ಕೂತರೆ ಅವರ ಮುಂದುಗಡೆ ಅರ್ಥಧಾರಿಗಳು ತಮ್ಮ ದಿನನಿತ್ಯದ ಉಡುಗೆಯಲ್ಲೇ ಕುಳಿತುಕೊಳ್ಳುತ್ತಾರೆ. ಇವರ ಮುಂದೆ ಅರ್ಧಚಂದ್ರಾಕೃತಿಯ ರೀತಿಯಲ್ಲಿ ಪ್ರೇಕ್ಷಕರು ಕುಳಿತೋ, ನಿಂತೋ ತಾಳಮದ್ದಲೆಯ ಸವಿಯನ್ನು ಸವಿಯುತ್ತಾರೆ. ಭಾಗವತರು ಮೊದಲಿಗೆ ಕೆಲವು ದೇವತಾ ಸ್ತುತಿಗಳನ್ನು ಹಾಡಿ ನೇರ ಪ್ರಸಂಗದ ಪದ್ಯಕ್ಕೆ ಬರುತ್ತಾರೆ. ಇಲ್ಲಿ ಆಟದಷ್ಟು ಹಾಡಿನ ಬಳಕೆ ಇರುವುದಿಲ್ಲ. ಕಥಾಬೆಳವಣಿಗೆ ಮತ್ತು ಮಾತುಗಾರಿಕೆಗೆ ಅಗತ್ಯವಾದ ಪದ್ಯಗಳನ್ನು ಹಾಡುತ್ತಾರೆ. ಮುಖ್ಯ ಪಾತ್ರಗಳಿಗೆ ಹಿರಿಯ ಅರ್ಥಧಾರಿಗಳು ಆಮಂತ್ರಿತರಾಗಿದ್ದರು, ಸಣ್ಣಪುಟ್ಟ ಪಾತ್ರಗಳನ್ನು ಸ್ಥಳೀಯ ಆಸಕ್ತರೋ, ಹವ್ಯಾಸಿ ಗಳೋ ನಡೆಸಿಕೊಡುತ್ತಾರೆ. ಹಿಂದೆಲ್ಲಾ ರಾತ್ರಿ 10 ಗಂಟೆಗೆ ಪ್ರಾರಂಭವಾಗಿ ಬೆಳಿಗ್ಗೆ ಸೂರ್ಯೋದಯಕ್ಕೆ ಮುಗಿಯುವುದು ರೂಢಿ. ಆದರೆ ಇಂದು ಮೂರು ನಾಲ್ಕು ಗಂಟೆಗಳಲ್ಲೇ ಮುಗಿಯುವ ತಾಳಮದ್ದಲೆ ಹೆಚ್ಚು ಚಾಲ್ತಿಯಲ್ಲಿದೆ. ಕಳೆದ ಶತಮಾನದ ಪೂರ್ವಾರ್ಧದಲ್ಲಿ ತಾಳಮದ್ದಲೆ ಅತ್ಯಂತ ಜನಪ್ರಿಯವಾಗಿತ್ತು. ಅರ್ಥಧಾರಿಗಳಿಗೆ ವಿಶೇಷ ಗೌರವವಿರುತ್ತಿತ್ತು. ಹರಿದಾಸರು ತಾಳಮದ್ದಲೆ ರಂಗಕ್ಕೆ ಪ್ರವೇಶಿಸಿದ್ದರಿಂದ ಜ್ಞಾನಯಜ್ಞವೆಂಬ ಭಾವ ಬಲಿಯಲು ಪ್ರಾರಂಭವಾಯಿತು.

ಮುಂದೆ ಕೆಲವೊಮ್ಮೆ ಅರ್ಥಗಾರಿಕೆ ವೃತ್ತಿ ಪ್ರತಿಷ್ಠೆಯ ಕಣವಾಗಿ ಮಾರ್ಪಾಟಾ ದದ್ದೂ ಉಂಟು. ಪಾತ್ರಗೌರವ ಹಾಗೂ ಔಚಿತ್ಯಜ್ಞಾನ ಬದಿಗೆ ಸರಿದು ತಮ್ಮ ಪಾಂಡಿತ್ಯದ ಪ್ರದರ್ಶನ ಮಾಡಹೊರಟಾಗ, ಹಿಮ್ಮೇಳದವರಿಗೆ ಅವಕಾಶವಿಲ್ಲದೆ ತಾಸುಗಟ್ಟಲೆ ಅರ್ಥಧಾರಿಗಳು ಮಾತನಾಡಹೊರಟಾಗ, ತಾಳಮದ್ದಲೆಗೆ ಮೊದಲಿದ್ದ ಘನತೆ ಕುಂದುವ

ಪರಿಸ್ಥಿತಿ ಬಂತು. ರಾತ್ರಿ ಬೆಳಗು ಮಾಡುವ ಪರಿಸ್ಥಿತಿ ಹೋಗಿ ಚುಟುಕಾದ, ಸಮಯ ಮಿತಿಯ ತಾಳಮದ್ದಲೆಗಳ ಪ್ರವೇಶದಿಂದಾಗಿ ಈ ಅಂಶಗಳು ಕಡಿಮೆಯಾಗಿ ತಾಳ ಮದ್ದಲೆ ಪ್ರಕಾರಕ್ಕೆ ಖಚಿತ ರೂಪ ಬಂತು. ಚುಟುಕಾದ ಅರ್ಥಗಾರಿಕೆ, ರಸದೃಷ್ಟಿ, ಸ್ವಾರಸ್ಯಕರ ಸಂವಾದಗಳು, ಹಿತವಾದ ವೈಚಾರಿಕತೆ, ತಕ್ಕಷ್ಟೆ ಹಾಸ್ಯ, ಪ್ರಸಂಗದ ಕಥಾ ಓಘಕ್ಕೆ ನಿಷ್ಠೆ, ಹಿಮ್ಮೇಳಕ್ಕೆ ಸೂಕ್ತ ಮಹತ್ವ ಇವು ಈಚಿನ ಅರ್ಥಗಾರಿಕೆಯ ವೈಶಿಷ್ಟ್ಯಗಳಾಗಿವೆ. ತಾಳಮದ್ದಲೆ ಯಕ್ಷಗಾನ ಬಯಲಾಟದಂತೆ ಒಂದು ವೃತ್ತಿಯಾಗಿ ಬೆಳೆದಿಲ್ಲ. ಇಲ್ಲಿ ಹವ್ಯಾಸಿಗಳಿಗೆ ಒಳ್ಳೆಯ ಬೆಲೆ ಇದೆ. ತಾಳಮದ್ದಲೆಯಲ್ಲಿ ಹಾಡುಗಾರಿಕೆ ಹಾಗೂ ಸಂಭಾಷಣೆಗಳು ಯಕ್ಷಗಾನದ ಉಳಿದ ಅಂಗಗಳ ಕಾರ್ಯವನ್ನು ನಿರ್ವಹಿಸ ಬೇಕಾಗಿರುವುದರಿಂದ ಪದ್ಯಗಳಲ್ಲಿ ಅರ್ಥಗಾರಿಕೆಗೆ ಚಾಲನೆ ಕೊಡುವ ಅಂಶಗಳಿರಬೇಕು. ಹಾಡುಗಾರಿಕೆಗೆ ವಿಫುಲ ಅವಕಾಶಗಳಿರಬೇಕು. ಸುಧನ್ವ ಕಾಳಗ, ಮಾಗಧವಧೆ, ಪಂಚವಟಿ, ವಾಲಿ ಸುಗ್ರೀವ ಕಾಳಗ, ಕರ್ಣಾರ್ಜುನರ ಕಾಳಗ, ಕೃಷ್ಣ ಸಂಧಾನ, ಭೀಷ್ಮ ಪರ್ವ ಮುಂತಾದ ಪ್ರಸಂಗಗಳೆಲ್ಲ ತಾಲಮದ್ದಲೆಯಲ್ಲಿ ಮಿಂಚುವ ಪ್ರಸಂಗಗಳಾಗಿವೆ.

ಕಳೆದ 60 ವರ್ಷಗಳಲ್ಲಿ ಆಕರ್ಷಕ ಅರ್ಥಗಾರಿಕೆಯಿಂದ ಈ ಕಲಾಮಾಧ್ಯಮ ದಲ್ಲಿ ಮಿಂಚಿದ ಅನೇಕ ಅರ್ಥಧಾರಿಗಳಿದ್ದಾರೆ. ದಿ॥ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ದಿ॥ ನಾರಾಯಣ ಕಿಲ್ಲೆ, ದಿ॥ ಕವಿಭೂಷಣ ವೆಂಕಪ್ಪಶೆಟ್ಟಿ, ದಿ॥ ಅರ್ಕುಳ ಸುಬ್ರಾಯಾಚಾರ್ಯ, ದಿ॥ ಅಣ್ಣಪ್ಪ ಕಾರಂತ, ದಿ॥ ತೆಕ್ಕಟ್ಟೆ ಬಾಬಣ್ಣ ಶ್ಯಾನುಭೋಗ, ದಿ॥ ಕುಂಬಳೆ ನಾರಾಯಣ ಅಡಿಗ, ಕೃಷ್ಣ ಕಾರಂತ, ತಾಳ್ತಜೆ ಗೋವಿಂದಭಟ್, ಶೇಣಿ ಗೋಪಾಲಕೃಷ್ಣ ಭಟ್ ಮಲ್ಪೆ ಶಂಕರನಾರಾಯಣ ಸಾಮಗ, ದೇರಾಜೆ ಸೀತಾರಾಮಯ್ಯ, ರಾಮದಾಸ ಸಾಮಗ, ಪೆರ್ಲ ಕೃಷ್ಣಭಟ್, ಎಂ.ಆರ್. ಶಾಸ್ತ್ರಿ, ಕಿರಿಕ್ಕಾಡು ಮಾಸ್ತರ ವಿಷ್ಣುಭಟ್, ಕುಬಣೂರು ಬಾಲಕೃಷ್ಣರಾವ್, ಕುರಿಯ ವಿಠಲಶಾಸ್ತ್ರಿ, ಕೊಳಂಬೆ ಪುಟ್ಟಣ್ಣ ಗೌಡ, ಕಾಂತ ರೈ, ದೇಜಪ್ಪ ಶೆಟ್ಟಿ, ಅಂಬಾತನಯ ಮುದ್ರಾಡಿ, ಕುಂಬಳೆ ಸುಂದರರಾವ್, ಗೋವಿಂದ ಭಟ್, ಕೆರೆಮನೆ ಮಹಾಬಲ ಹೆಗಡೆ, ಶಂಭು ಹೆಗಡೆ, ಮುಳಿಯ ಮಹಾಬಲ ಭಟ್, ಸೀತಾನದಿ ಗಣಪಯ್ಯ ಶೆಟ್ಟಿ, ನಾರಾಯಣ ಕೇಕುಣ್ಣಾಯ ಮುಂತಾದವರು ಈ ತಾಳ ಮದ್ದಲೆ ಪ್ರಕಾರದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಈಚೆಗೆ ಚಿಂತನಶೀಲ ನಡುಹರಯದ ಅರ್ಥ ಧಾರಿಗಳು ಹೆಚ್ಚಿದ್ದು ಅವರಲ್ಲಿ ಕೊಳ್ಯೂರು ರಾಮಚಂದ್ರರಾವ್, ಎಂ. ಪ್ರಭಾಕರ ಜೋಷಿ, ಸುಬ್ಬಪ್ಪಯ್ಯ, ಡಾ॥ ರಮಾನಂದ ಬನಾರಿ, ವಿದ್ವಾನ್ ವೆಂಕಟರಾಜ ಪುಣಿಂಚಿತ್ತಾಯ, ಕರುಣಾಕರ ಹೆಗಡೆ, ಮಹಾಲಿಂಗ ಭಟ್, ನಾರಾಯಣ ಭಟ್, ಲಕ್ಷ್ಮೀಶ ತೊಳ್ಪಾಡಿ, ಚಂದ್ರಶೇಖರ ಭಟ್, ಶ್ರೀಕರ ಭಟ್, ಸತ್ಯಮೂರ್ತಿ ದೇರಾಜೆ, ದೇವರು ನಾರಾಯಣ ಹೆಗಡೆ, ವೆಂಕಟಾಚಲ ಭಟ್, ಸೀಗೆಮನೆ ನಾರಾಯಣ ಹೆಗಡೆ, ಪಿ.ವಿ. ಹಾಸ್ಯಗಾರ್, ಮಹಾಬಲೇಶ್ವರ ಹೆಗಡೆ, ಕೇರೆಸರ ಮಂಜುನಾಥ ಹೆಗಡೆ, ಸೀತಾರಾಮ ಕೆದಿಲಾಯ, ಜಬ್ಬಾರ್ ಸುಮೊ ಸುಣಂಬಳ ವಿಶ್ವೇಶ್ವರ ಭಟ್, ಉಜಿರೆ ಅಶೋಕ ಭಟ್, ಹಿರಣ್ಯ ವೆಂಕಟೇಶ್ವರ ಭಟ್, ಸಿದ್ಧನಕಟ್ಟೆ ವಿಶ್ವನಾಥ ಶೆಟ್ಟಿ,

ವಾಸುದೇವ ರಂಗಭಟ್, ವಿದ್ವಾನ್ ಉಮಾಕಾಂತ್ ಭಟ್ ಮುಂತಾದವರು ಪ್ರಮುಖರಾಗಿದ್ದಾರೆ.

ಯಕ್ಷಗಾನ ಗೊಂಬೆಯಾಟ:

ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಗೊಂಬೆಯಾಟದಲ್ಲೂ ಯಕ್ಷಗಾನದ ಬಳಕೆಯಾಗುತ್ತಿದೆ. ಯಕ್ಷಗಾನ ಪ್ರಸಂಗಗಳನ್ನು ಆಧರಿಸಿ ಸೂತ್ರದ ಗೊಂಬೆಗಳನ್ನು ಕುಣಿಸಿ ಯಕ್ಷಗಾನ ಕಲೆಯ ರಸಾಸ್ವಾದನೆಯನ್ನು ಪ್ರೇಕ್ಷಕರಿಗೆ ಗೊಂಬೆಯಾಟದವರು ಉಣಬಡಿಸುತ್ತಾರೆ. ಪಡುವಲಪಾಯ ಯಕ್ಷಗಾನ ಸಂಪ್ರದಾಯದವೇಷಭೂಷಣಗಳನ್ನು ಹೊಂದಿರುವ ಅನೇಕ ಸೂತ್ರದ ಗೊಂಬೆಯಾಟದ ಸಂಸ್ಥೆಗಳು ಈ ಪ್ರದೇಶದಲ್ಲಿವೆ. ಅವುಗಳಲ್ಲಿ ಉಪ್ಪಿನಕುದ್ರು ಕೊಗ್ಗ ಕಾಮತರ ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟದ ಮೇಳಕ್ಕೆ ಕನಿಷ್ಠ 150–200 ವರ್ಷಗಳ ಇತಿಹಾಸವಿದೆ. ಹಿಂದೆ ತಮ್ಮ ಕುಶಲ ಕಲೆಗಾರಿಕೆಯಿಂದ ರಾಷ್ಟ್ರಪ್ರಶಸ್ತಿ ಪಡೆದವರು ಈ ಮೇಳದಲ್ಲಿ ಖ್ಯಾತರಾಗಿದ್ದ ದಿ॥ ದೇವಣ್ಣ ಕಾಮತರು. ಅವರ ಮಗ ಕೊಗ್ಗ ಕಾಮತರ ಕಾಲದಲ್ಲಿ ಈ ಗೊಂಬೆಯಾಟದ ಮೇಳ ದೇಶವಿದೇಶಗಳಲ್ಲಿ ಸಂಚರಿಸಿ ಹೆಗ್ಗಳಿಕೆಯನ್ನು ಪಡೆಯಿತು.

ಯಕ್ಷಗಾನ ಪ್ರದರ್ಶನದಲ್ಲಿದ್ದಂತೆ ಗೊಂಬೆಯಾಟವೂ ಗಣಪತಿ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಗೊಂಬೆಗಳೇ ಗಣಪತಿಗೆ ಆರತಿ ಎತ್ತುತ್ತವೆ. ಮುಂದೆ ಸ್ತ್ರೀವೇಷದ ಪ್ರವೇಶವಾಗಿ ಅವುಗಳ ನರ್ತನವಿರುತ್ತದೆ. ಕಥೆ ಪ್ರಾರಂಭವಾದೊಡನೆ ಗೊಂಬೆಗಳು ಆಚೆ ಈಚೆ ಸರಿಯುತ್ತಾ ಮನಸ್ಸಿಗೆ ಸಂತೋಷ ನೀಡುತ್ತವೆ. ತೆರೆಯ ಹಿಂದೆ ಹಿಮ್ಮೇಳದವರಿದ್ದು ಹಾಡುತ್ತಾರೆ. ಹಾಡು ನಿಂತೊಡನೆ ಹಿನ್ನೆಲೆಯಲ್ಲಿದ್ದ ಸೂತ್ರಧಾರಿಗಳು ಸಂಭಾಷಣೆಯನ್ನು ಮಾಡಿ ಕಥೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಮಾತಿಗೆ ತಕ್ಕಂತೆ ಗೊಂಬೆಗಳು ಅಭಿನಯಿಸುತ್ತವೆ. ಈ ಮೇಳದಲ್ಲಿ ಭಾಗವತರಾಗಿದ್ದ ರಾಮಗಾಣಿಗರಿಗೆ ಒಳ್ಳೆಯ ಹೆಸರಿತ್ತು. ಗೊಂಬೆಗಳನ್ನು ಕುಣಿಸುತ್ತ ಅರ್ಥ ಹೇಳುವುದರಲ್ಲಿ ಕೊಗ್ಗ ಕಾಮತ, ವಾಮನ ಪೈ, ಪ್ರಭಾಕರ ಆಚಾರಿ ಮುಂತಾದವರು ಖ್ಯಾತರಾಗಿದ್ದರು. ಈ ಮೇಳದವರು ಹೆಚ್ಚಾಗಿ ಚೂಡಾಮಣಿ, ಗರುಡ ಗರ್ವಭಂಗ, ಸೀತಾಕಲ್ಯಾಣ, ಸುಧನ್ವ ಕಾಳಗ ಮುಂತಾದ ಪ್ರಸಂಗಗಳನ್ನು ಆಡುತ್ತಾರೆ. ಇವರ ಪ್ರದರ್ಶನಗಳಲ್ಲಿ ಯಕ್ಷಗಾನ ಕಲೆಯ ಎಲ್ಲ ಶ್ರೀಮಂತಿಕೆ, ವರ್ಣನಾ ವಿಲಾಸ, ಸುಸಂಬದ್ಧ ನಿರೂಪಣೆಗಳೆಲ್ಲ ಸಾಂಗವಾಗಿ ಬರುವುದೇ ವಿಶೇಷವಾಗಿದೆ.

ತೆಂಕುತಿಟ್ಟಿನಲ್ಲೂ ಉತ್ತಮ ಗೊಂಬೆಯಾಟದ ಮೇಳಗಳಿವೆ. ಬೆಳ್ತಂಗಡಿಯಲ್ಲಿನ 'ವಿನಾಯಕ ಯಕ್ಷಗಾನ ಗೊಂಬೆಯಾಟ'ದ ರೂವಾರಿಗಳು ಶ್ರೀ ದಿವಾಕರ ಪಟವರ್ಧನ ಹಾಗೂ ವಿ. ಗೋವಿಂದಭಟ್ಟರು. ಅದೇ ರೀತಿ ಬಿ. ಮಂಡಪ್ಪ ಶೆಟ್ಟಿಯವರ ಶ್ರೀ ಮಹಾಮ್ಮಾಯಿ ಕೃಪಾಪೋಷಿತ ಮಂಜುನಾಥೇಶ್ವರ ಯಕ್ಷಗಾನ ಗೊಂಬೆಯಾಟವು ಖ್ಯಾತಗೊಂಡ ಮೇಳಗಳಲ್ಲಿ ಒಂದಾಗಿದೆ. ಕಾಸರಗೋಡಿನ

ಶ್ರೀ ಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟವು 1981ರಿಂದ ಅಸ್ತಿತ್ವದಲ್ಲಿದ್ದು ಗಡಿನಾಡ ಭಾಗದಲ್ಲಿ ಹೆಸರುಗಳಿಸಿದ ಗೊಂಬೆಯಾಟದ ಮೇಳವಾಗಿದೆ. ಮಲೆನಾಡು ಪ್ರದೇಶದಲ್ಲಿ ಸಾಕಷ್ಟು ಗೊಂಬೆಯಾಟದ ಮೇಳಗಳಿದ್ದು ಕಿರು ಯಕ್ಷಗಾನವನ್ನು ನಿರೂಪಿಸುತ್ತಾ ಈ ಕಲೆಯ ಸ್ವಾದವನ್ನು ಮಲೆನಾಡಿಗರಿಗೆ ಉಣಬಡಿಸುತ್ತಿದೆ.

ಹೂವಿನ ಕೋಲು:

ಹೂವಿನ ಕೋಲು ಕಂಡುಬರುವುದು ನವರಾತ್ರಿಯ ದಿನಗಳಲ್ಲಿ. ಹೂವಿನ ಕೋಲಿನಲ್ಲಿ ಹೆಚ್ಚಾಗಿ 5–6 ಜನರಿರುತ್ತಾರೆ. ಒಬ್ಬ ಭಾಗವತ, ಮದ್ದಲೆಯವ, ಶ್ರುತಿಗಾರ ಹಾಗೂ ಇಬ್ಬರು ಅಥವಾ ಮೂವರು ಕಿರಿಯ ಬಾಲಕರು ಹೂವಿನ ಕೋಲಿನ ತಂಡದ ಸದಸ್ಯರಾಗಿರುತ್ತಾರೆ. ಬಾಲಕರು ಒಂದೇ ಬಣ್ಣದ ಶುಭ್ರ ಬಟ್ಟೆಯನ್ನು ಹಾಕಿದ್ದು ಬೆಂಡಿನಿಂದ ಮಾಡಿದ ಹೂಕುಂಡದ ಆಕಾರದ ಕೋಲನ್ನು ಹಿಡಿದಿರುತ್ತಾರೆ. ನವರಾತ್ರಿಯ ದಿನಗಳಲ್ಲಿ ಮನೆಮನೆಗೂ ತೆರಳಿ 20ರಿಂದ 30 ನಿಮಿಷದವರೆಗೆ ಯಕ್ಷಗಾನದ ಯಾವುದಾದರೂ ಕಿರುಪ್ರಸಂಗದ ಸವಿಯನ್ನು ಉಣಬಡಿಸುತ್ತಾರೆ. ಮೊದಲಿಗೆಹುಡುಗರು ಮಾನವಮಿಯ ಚೌಪದಿಯ ಸಾಲುಗಳನ್ನು ಹಾಡುತ್ತಾರೆ. ಒಬ್ಬ ಒಂದು ಸಾಲನ್ನು ಹಾಡಿದರೆ ಮತ್ತೊಬ್ಬ ಮತ್ತೊಂದು ಸಾಲನ್ನು ಹಾಡುತ್ತಾನೆ. ಇದು ಮುಗಿದ ನಂತರ ಭಾಗವತ ಪ್ರಸಂಗವೊಂದರ ರಸಾಕರ್ಷಕ ಸನ್ನಿವೇಶದ ಪದ್ಯವನ್ನು ಹಾಡುತ್ತಾನೆ. ಹೆಚ್ಚಾಗಿ ಸಂವಾದ ಇರುವಂತಹ ಭಾಗಗಳನ್ನೇ ಆರಿಸಿಕೊಂಡಿರುತ್ತಾರೆ. ಅದಕ್ಕೆ ಹುಡುಗರು ಒಬ್ಬೊಬ್ಬ ಒಂದೊಂದು ಪಾತ್ರವನ್ನು ವಹಿಸಿಕೊಂಡು ಅರ್ಥ ಹೇಳುತ್ತಾರೆ. ಕಥಾಭಾಗ ಮುಗಿದ ನಂತರ ಭಾಗವತರು ಮಂಗಳಪದ ಹಾಡುತ್ತಾರೆ. ಮನೆಯ ಯಜಮಾನನಿಂದ ಬಹುಮಾನ\ಸಂಭಾವನೆ ರೂಪದಲ್ಲಿ ಗೌರವ ಬಂದ ನಂತರ ಮುಂದಿನ ಮನೆಗೆ ತೆರಳುತ್ತಾರೆ.

ಈ ಕಲಾಪ್ರಕಾರದಲ್ಲೂ ಯಕ್ಷಗಾನದ ಬಳಕೆ ಸಾಕಷ್ಟಿರುತ್ತದೆ. ಇದರ ಪ್ರೇಕ್ಷಕರ ಸಂಖ್ಯೆ ಬಹು ಮಿತವಾದದ್ದು. ಹೆಚ್ಚಾಗಿ ಊರಿನ ಪ್ರಮುಖರ ಮನೆಯಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ 25–30 ಜನ ಸೇರುವುದೇ ವಿಶೇಷ. ಹಿಂದೆಲ್ಲ ಮಾನವಮಿ ಚೌಪದಿಗಳನ್ನು ಬಾಲಕರು ಹಾಡುವ ಸಂಪ್ರದಾಯಕ್ಕೆ ಯಕ್ಷಗಾನದ ಸೊಗಡನ್ನು ಸೇರಿಸಿ 'ಹೂವಿನ ಕೋಲು' ಅಸ್ತಿತ್ವಕ್ಕೆ ಬಂದಿರಬೇಕು. ಯಕ್ಷಗಾನದ ಸಂಪರ್ಕ ದಿಂದಾಗಿ ಹೂವಿನ ಕೋಲು ವಿಶಿಷ್ಟವಾದ ಬಗೆಯಾಗಿ ಮಾರ್ಪಟ್ಟಿದೆ. ಹಿಂದೆಲ್ಲ ಬಯಲಾಟ ಮೇಳಗಳ ಭಾಗವತರು ಇಲ್ಲವೇ ಮದ್ದಲೆಗಾರರು ಎಳೆಯ ಮಕ್ಕಳನ್ನು ಆಯ್ದು ಸಿದ್ಧಪಡಿಸಿ ಮಳೆಗಾಲದ 9 ದಿನಗಳ ಕಾಲ ಮತ್ತೆ ಜನರಿಗೆ ಯಕ್ಷಗಾನದ ಸಂಪರ್ಕವನ್ನು ಜೋಡಿಸಿಕೊಡುವಂತೆ ಮಾಡುವಲ್ಲಿ ಈ ಹೂವಿನ ಕೋಲಿನ ಸಾರ್ಥಕ್ಯವಿದೆ. ಎಳೆಯ ಹುಡುಗರಿಗೆ ಯಕ್ಷಗಾನದ ತರಬೇತಿ ಇದರಿಂದ ಆಯಿತು. ಜನರಿಗೆ ಮನರಂಜನೆ ಲಭಿಸಿತು. ಮೇಳದ ಕಲಾವಿದರಿಗೆ ಮಳೆಗಾಲದ ಕಡುಬಡತನ

ನಿವಾರಣೆ ಆದಂತಾಯಿತು. 30-40 ವರ್ಷಗಳ ಕೆಳಗೆ ಹೂವಿನ ಕೋಲು ತಂಡಗಳ ಆಧಿಕ್ಯ ಬಡಗುತಿಟ್ಟಿನಲ್ಲಿ ಕಂಡುಬರುತ್ತಿತ್ತು. ಈಚೆಗೆ ಅವುಗಳ ಸಂಖ್ಯೆ ಕಡಿಮೆ ಆದರೂ ಅದರ ಜನಾಕರ್ಷಣೆ ಹಾಗೇ ಉಳಿದಿದೆ. ಮಕ್ಕಳ ಪಾಲಿಗಂತೂ ಹೂವಿನ ಕೋಲು ಬೆರಗು ಹುಟ್ಟಿಸುವ ಕಲಾಮಾಧ್ಯಮವಾಗಿದೆ. ಬೆಂಗಳೂರಿನಲ್ಲೂ ಕೂಡ ಕರ್ನಾಟಕ ಕಲಾದರ್ಶಿನಿ ತಂಡದವರು ಇದನ್ನು ಬೆಂಗಳೂರಿನಲ್ಲೂ ಕೂಡ ಪ್ರಚುರ ಪಡಿಸುತ್ತಿದ್ದಾರೆ.

ಮಕ್ಕಳ ಯಕ್ಷಗಾನ:

ಕಳೆದ ಮೂರು ದಶಕಗಳಲ್ಲಿ ಯಕ್ಷಗಾನ ರಂಗದಲ್ಲಿ ಮಕ್ಕಳ ಮೇಳಗಳು ಗಳಿಸಿಕೊಂಡ ಆಕರ್ಷಣೆ ದಾಖಲೆಗೆ ಯೋಗ್ಯವಾದುದು. ಹಿಂದೆಲ್ಲ ಶಾಲಾ ವಾರ್ಷಿಕೋತ್ಸವದಲ್ಲಿ ಅಲ್ಲಿನ ಮಕ್ಕಳುಗಳಿಂದ ಆಸಕ್ತ ಅಧ್ಯಾಪಕರು ಒಂದು ಇಲ್ಲವೇ ಎರಡು ತಾಸುಗಳ ಕಿರು ಯಕ್ಷಗಾನ ಪ್ರಸಂಗದ ಭಾಗಗಳನ್ನು ಆಡಿಸುತ್ತಿದ್ದರು. ಹೆಚ್ಚಾಗಿ ಕರಾವಳಿ ಹಾಗೂ ಮಲೆನಾಡಿನ ಆಸಕ್ತ ಅಧ್ಯಾಪಕರಿಂದ ಈ ಬಗೆಯ ಯಕ್ಷಗಾನ ಪ್ರಸಾರದ ಕಾರ್ಯಗಳು ಕಂಡುಬರುತ್ತಿದ್ದವು. ಆದರೆ ಈ ಮಕ್ಕಳನ್ನು ಆಧರಿಸಿ ಮೇಳಗಳನ್ನು ಕಟ್ಟಬಹುದೆಂದು ಮೊಟ್ಟಮೊದಲಿಗೆ ತೋರಿಸಿಕೊಟ್ಟವರು ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರಾದ ದಿ|| ಕಾರ್ಕಡ ಶ್ರೀನಿವಾಸ ಉಡುಪ ಹಾಗೂ ಶ್ರೀ ಎಚ್. ಶ್ರೀಧರ ಹಂದೆಯವರು. ಪಠ್ಯೇತರ ಚಟುವಟಿಕೆಗಳಿಂದ ಮಕ್ಕಳ ಮನಸ್ಸು ಹಿಗ್ಗುತ್ತದೆ. ಅದೇ ರೀತಿ ಅವರು ಏನು ಮಾಡಿದರು ನೋಡಿದವರಿಗೆ ಸದಾ ಕಣ್ಣಿಗೆ ಹಬ್ಬವಾಗುತ್ತದೆ. ಯಕ್ಷಗಾನದಂತಹ ಸುಂದರ ಕಲೆಯನ್ನು ಈ ಸುಂದರ ಬಾಲಕರ ಮೂಲಕ ಸಾಕ್ಷಾತ್ಕರಿಸಿದರೆ ಅದೊಂದು ದೊಡ್ಡ ಸಾಧನೆಯಾಗಬಹುದೆಂಬ ಕನಸಿನಿಂದ ಹೊರಟ ಈ ಶಿಕ್ಷಕದ್ವಯರು 1975ರ ಸುಮಾರಿಗೆ ಎಳೆಯ ಮಕ್ಕಳನ್ನು ಆರಿಸಿ "ಶ್ರೀ ಬಹದ್ದೂರು ಕೃಪಾಪೋಷಿತ ಮಕ್ಕಳ ಮೇಳ, ಸಾಲಿಗ್ರಾಮ" ವೆಂಬ ವ್ಯವಸ್ಥೆ ಯನ್ನು ಹುಟ್ಟುಹಾಕಿದರು. ತಾವು ಹಿಂದೆ ಕಂಡ ಬಡಗುತಿಟ್ಟಿನ ಶ್ರೇಷ್ಠ ಯಕ್ಷಗಾನ ಕಲಾವಿದರಾದ ಹಾರಾಡಿ ರಾಮ, ಹಾರಾಡಿ ಕೃಷ್ಣ, ಗುರು ವೀರಭದ್ರನಾಯಕ ಮುಂತಾದವರ ಮೋಹಕ ಕುಣಿತ, ಆಕರ್ಷಕ ನಿಲುವಿನ ಭಂಗಿ, ರಂಗದಲ್ಲಿ ತೋರುವ ಪ್ರತಿಭಾ ವಿಲಾಸಗಳನ್ನೆಲ್ಲಾ ಈ ಮಕ್ಕಳಲ್ಲಿ ಪಡಿಮೂಡಿಸಲು ಹೆಣಗಿದರು. ಈ ಎಲ್ಲಾ ಹಿರಿಯ ಕಲಾವಿದರ ಕಲಾಪ್ರತಿಮೆಯ ಅಚ್ಚಿನಲ್ಲಿ ಎಳೆಯ ಮಕ್ಕಳನ್ನು ಅದ್ದಿ ತೆಗೆದು ಆ ಮಕ್ಕಳ ಮೂಲಕ ಶ್ರೇಷ್ಠ ಕಲಾವಿದರ ನಾನಾ ಬಗೆಯ ಕಲಾವೈಭವಗಳನ್ನು ರಂಗದಲ್ಲಿ ಮರುಹುಟ್ಟಾಗುವಂತೆ ಮಾಡುವಲ್ಲಿ ಸಫಲರಾದರು. ವರ್ಷ, ಎರಡು ವರ್ಷಗಳಲ್ಲಿ ಎಲ್ಲ ಪತ್ರಿಕೆಗಳು ಈ ಮಕ್ಕಳ ಮೇಳದ ಪ್ರದರ್ಶನವನ್ನು ಮನಸಾರೆ ಹಾಡಿ ಹೊಗಳಿದವು. ಡಾ|| ಕಾರಂತರು ಯಕ್ಷಗಾನಕ್ಕೆ ಹೊಸ ರೂಪ ನೀಡಿದ ನಂತರದ ದೊಡ್ಡ ಬೆಳವಣಿಗೆ – ಎಂಬ ಮುಕ್ತಕಂಠದ ಶ್ಲಾಘನೆ ದೊರೆಯಿತು. ಇದರ ಫಲವಾಗಿ ಈ ಸಾಲಿಗ್ರಾಮ ಮಕ್ಕಳ ಮೇಳ 1978ರಲ್ಲಿ ಪ್ರಥಮ ಬಾರಿಗೆ

ಸೀಮೋಲ್ಲಂಘನ ಮಾಡಿ ಅಮೆರಿಕದ ಸ್ಯಾನ್‌ಚೇಸ್ ಅಂತಾರಾಷ್ಟ್ರೀಯ ಮಕ್ಕಳ ದಿನಾಚರಣೆ ಆರಂಭೋತ್ಸವದಲ್ಲಿ ಪಾಲ್ಗೊಂಡು ಯಕ್ಷಗಾನದ ಕೀರ್ತಿ ಪತಾಕೆಯನ್ನು ವಿದೇಶಿ ನೆಲದಲ್ಲಿ ಹಾರಿಸಿತು. ಈ ಮೇಳದವರ 'ವೀರ ವೃಷಸೇನ' ಅಮೆರಿಕಾದ ಮಕ್ಕಳ ಮನಸ್ಸನ್ನು ಸೂರೆಗೊಂಡ ಪ್ರಸಂಗ.

ಸಾಲಿಗ್ರಾಮ ಮಕ್ಕಳ ಮೇಳದ ಪ್ರದರ್ಶನವೆಂದರೆ ಅದೊಂದು ಚಿಕ್ಕ ಚೊಕ್ಕವಾದ ರಸಘಟ್ಟಿ. ಸವಿದಷ್ಟೂ ಅದರ ಸವಿ ಹೆಚ್ಚು. ಪ್ರೇಕ್ಷಕ ಮೊದಲಿನಿಂದ ಕೊನೆಯವರೆಗೂ ಒಂದೇತೆರನಾದ ರಸಾಸ್ವಾದನೆಯಲ್ಲಿ ಮುಳುಗಿರುತ್ತಾನೆ. ಆಧುನಿಕ ಕಾಲಕ್ಕಂತೂ ಹೇಳಿ ಮಾಡಿಸಿದ್ದು. ವೃತ್ತಿಮೇಳಗಳ ದೀರ್ಘ ಪ್ರದರ್ಶನಗಳಲ್ಲಿ ಕಾಣುವ ಜಾಳುತನವಾಗಲಿ, ಏರುಪೇರುಗಳಾಗಲೀ ಇಲ್ಲಿಲ್ಲ. ನಲವತ್ತು ವರ್ಷಗಳ ಕೆಳಗೆ ಇಂತಹದೊಂದು ಪ್ರಭೇದದ ಕನಸನ್ನು ಕಂಡದ್ದರಲ್ಲೇ ದಿ॥ ಕಾರ್ಕಡ ಶ್ರೀನಿವಾಸ ಉಡುಪ ಹಾಗೂ ಶ್ರೀಧರ ಹಂದೆಯವರ ಹೆಚ್ಚುಗಾರಿಕೆ ಇದೆ. ಅದನ್ನು ಸಾಕಾರಗೊಳಿಸಿದ್ದರಲ್ಲಿ ಸಾರ್ಥಕ್ಯವಿದೆ.

ಸಾಲಿಗ್ರಾಮ ಮಕ್ಕಳ ಮೇಳ "ವೀರ ವೃಷಸೇನ, ದ್ರುಪದ ಬಂಧನ, ಕೃಷ್ಣಾರ್ಜುನ, ಬಭ್ರುವಾಹನ ಕಾಳಗ ಮುಂತಾದ ಪುರಾಣೋಕ್ತವಾದ ಪ್ರಸಂಗಗಳನ್ನು ಮಾತ್ರ ಪ್ರದರ್ಶನಕ್ಕೆ ಆಯ್ದುಕೊಂಡಿದೆ. ಮಕ್ಕಳಿಗೆ ಯೋಗ್ಯವಾಗುವ ಸನ್ನಿವೇಶಗಳು, ಪಾತ್ರ ವೈವಿಧ್ಯಗಳು, ನೇರ ನಿರೂಪಣೆಗಳು ಈ ಪ್ರಸಂಗಗಳಲ್ಲಿವೆ. ಶಾಲಾ ದಿನಗಳ ಬಿಡುವಿನಲ್ಲಿ ಮಕ್ಕಳನ್ನು ಆರಿಸಿ, ಅವರಿಗೆ ಕಲಿಸಿ ರಜಾದಿನಗಳಲ್ಲಿ ಅವುಗಳ ಪ್ರದರ್ಶನ ನೀಡುವ ಕಾಯಕವನ್ನು ಅನೂಚಾನವಾಗಿ ನಡೆಸಿಕೊಂಡು ಬಂದಿದ್ದಾರೆ. ಮಕ್ಕಳಿಗೆ ಸಂಪ್ರದಾಯಬದ್ಧ ಕುಣಿತ ಮಣಿತಗಳನ್ನು ಕಲಿಸಿ, ಭಂಗಿ ಭಾವಗಳನ್ನು ಉಣಿಸಿ, ಸರಳ ಮಾರ್ಮಿಕ ಸಂಭಾಷಣೆಗಳನ್ನು ಧ್ವನಿಸಿ ಆ ಮೂಲಕ ಯಶಸ್ಸನ್ನು ಸಾಧಿಸುವುದೇ ಇಲ್ಲಿ ನಿರ್ದೇಶಕರ ಸಾಮರ್ಥ್ಯದ ಸವಾಲಾಗಿದೆ. ಇದರಲ್ಲೆಲ್ಲ ಜಯಿಸುತ್ತ ಬಂದಿರುವುದೇ ಉಡುಪ, ಹಂದೆಯವರ ಹೆಗ್ಗಳಿಕೆಯಾಗಿದೆ. ಈಚೆಗೆ ಕಾರ್ಕಡ ಶ್ರೀನಿವಾಸ ಉಡುಪರು ಇಲ್ಲವಾದರೂ ಶ್ರೀಧರ ಹಂದೆಯವರು ತಮ್ಮಿಬ್ಬರ ಬದ್ಧತೆಗೆ, ಕನಸಿಗೆ ಚ್ಯುತಿ ಬಾರದಂತೆ ಸಾಲಿಗ್ರಾಮ ಮಕ್ಕಳ ಮೇಳವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ.

ಇದೇ ರೀತಿ ಅನೇಕ ಮಕ್ಕಳ ಮೇಳಗಳು ಇಂದು ಯಕ್ಷಗಾನ ಪ್ರದರ್ಶನವನ್ನು ನೀಡುತ್ತಿವೆ. ಮಣೂರಿನ ರಾಧಾಕೃಷ್ಣ ಉರಾಳ ಹಾಗೂ ನರಸಿಂಹ ಮಧ್ಯಸ್ಥರ ನಿರ್ದೇಶನದಲ್ಲಿರುವ 'ಯಕ್ಷತರಂಗ' ಕೆ. ಮೋಹನರ ನಿರ್ದೇಶನದಲ್ಲಿ ರೂಪಗೊಂಡ ಯಕ್ಷದೇಗುಲದವರ 'ಮಕ್ಕಳ ಮೇಳ' ಉತ್ತರ ಕನ್ನಡ ತಿಟ್ಟು, ತೆಂಕುತಿಟ್ಟಿನಲ್ಲಿ ಆಗಾಗ ಕೆಲವೆಡೆ ಪ್ರದರ್ಶಿಸುತ್ತಿರುವ ಮಕ್ಕಳ ಮೇಳಗಳು ಕೆಲವಿವೆ. ಕುಂದಾಪುರ, ಮಂದಾರ್ತಿ, ತಂತ್ರಾಡಿ, ಇನ್ನಂಜೆ, ಸುಳ್ಯಗಳಲ್ಲಿರುವ ಮಕ್ಕಳ ಮೇಳದ ಪ್ರದರ್ಶನಗಳು ನಡೆದಿವೆ.

ಇವುಗಳಲ್ಲಿ ಈಚೆಗೆ ಬೆಂಗಳೂರು ಹಾಗೂ ಅದರ ಹೊರವಲಯದಲ್ಲಿ ಖ್ಯಾತಿಗೊಂಡಿರುವ 'ಯಕ್ಷದೇಗುಲ'ಕ್ಕೆ ವಿಶಿಷ್ಟ ಸ್ಥಾನವಿದೆ. ಇಲ್ಲಿನ ಬಾಲಕರು ಕೂಡ ಸಾಲಿಗ್ರಾಮ ಮಕ್ಕಳ ಮೇಳದ ಬಾಲ ಕಲಾವಿದರಷ್ಟೆ ಅಚ್ಚುಕಟ್ಟಾಗಿ ಪ್ರದರ್ಶನ ನೀಡುತ್ತಿದ್ದಾರೆ. ಮಕ್ಕಳ ಮೇಳ ಕಟ್ಟುವುದು ಬಹು ಪ್ರಯಾಸದ ಕೆಲಸ. ಮಕ್ಕಳಿಗೆ ವಯಸ್ಸಾದೊಡನೆ ಅವರು ಮೇಳ ಬಿಡುತ್ತಾರೆ. ಅವರ ಬದಲಿಗೆ ಬೇರೆ ಮಕ್ಕಳನ್ನು ಹುಡುಕಬೇಕಾಗುತ್ತದೆ. ಅವರಿಂದ ನಿರೀಕ್ಷಿತ ಫಲ ಪಡೆಯುವುದು ಕೂಡ ಬಹುಪ್ರಯಾಸದ್ದು. ಹವ್ಯಾಸಿ ಮೇಳಗಳಾದ 'ಯಕ್ಷ ಕಲಾದರ್ಶಿನಿ' ಮುಂತಾದವುಗಳು ಕೂಡ ಈ ಪ್ರಯತ್ನದಲ್ಲಿ ಗಮನವಿರಿಸಿದೆ. ಮಕ್ಕಳನ್ನು ಸಿದ್ಧಪಡಿಸುವುದರಲ್ಲಿ ಸಿದ್ಧಹಸ್ತರೆಂದರೆ ಮರೂರು ಶಾಲೆಯ ಅಧ್ಯಾಪಕ ಸೀತಾರಾಮ ಶೆಟ್ಟಿ, ಎಂ.ಎನ್. ಮಧ್ಯಸ್ಥ, ಯಕ್ಷದೇಗುಲದ ಕೃಷ್ಣ ಮೂರ್ತಿ ತುಂ, ತೋನ್ಸೆಯ ಕಾಂತಪ್ಪ ಮಾಸ್ತರರು ಮುಖ್ಯವಾದವರು. ಮಕ್ಕಳ ಮೇಳಕ್ಕೆ ತಯಾರಾಗುವ ವೇಷಭೂಷಣಗಳು ಆಕರ್ಷಕವಾಗಿರುತ್ತವೆ. ಮಕ್ಕಳ ಮುಖಕ್ಕೆ ಅವು ಬಹು ಸೊಗಸಾಗಿ ಒಪ್ಪುತ್ತವೆ. ಅದೇ ರೀತಿ ಈ ಮೇಳಗಳಿಗೆಂದೇ ಬೇರೆ ಬೇರೆ ಕಿರುಪ್ರಸಂಗಗಳು ಬಂದಿವೆ. ಅವುಗಳಲ್ಲಿ ವೀರ ವೃಷಸೇನ, ದ್ರುಪದ ಬಂಧನ, ಅಭಿಮನ್ಯು ಕಾಳಗ, ಬಬ್ರುವಾಹನ ಕಾಳಗ, ಬಾಲ ಘಟೋತ್ಕಚ ಮುಂತಾದವು ಖ್ಯಾತಗೊಂಡವುಗಳಾಗಿವೆ. ಪೌರಾಣಿಕ ಪ್ರಸಂಗಗಳನ್ನು ಆಧರಿಸಿ ಈ ಎಲ್ಲಾ ಪ್ರಸಂಗ ಗಳನ್ನು ರಚಿಸಲಾಗಿದೆ. ಹೀಗೆ ಮಕ್ಕಳ ಮೂಲಕ ಯಕ್ಷಗಾನ ಕಲೆ ಹೊಸ ಆಯಾಮ ವೊಂದನ್ನು ಗಳಿಸಿಕೊಂಡಿರುವುದು ಸ್ವಾತಂತ್ರ್ಯೋತ್ತರ ಕಾಲದ ಒಂದು ವಿಶಿಷ್ಟ ಬೆಳವಣಿಗೆಯಾಗಿದೆ.

ಶಿಬಿರ, ಗೋಷ್ಠಿ, ಸಮ್ಮೇಳನಗಳು:

ಯಕ್ಷಗಾನ ರಂಗದ ಸದ್ಯದ ಪರಿಸ್ಥಿತಿಯ ಕುರಿತು ಇಂದು ಅಲ್ಲಿ ಉಪನ್ಯಾಸ, ಶಿಬಿರ, ಗೋಷ್ಠಿಗಳು ನಡೆಯುತ್ತವೆ. ಕೆಲವು ಹವ್ಯಾಸಿ ಸಂಸ್ಥೆಗಳು ಆಗಾಗ ಯಕ್ಷಗಾನ ಸಮ್ಮೇಳನಗಳನ್ನು ನಡೆಸುತ್ತಿವೆ. ಪ್ರಾಯೋಗಿಕ ಕಮ್ಮಟಗಳು, ವಿಚಾರಸಂಕಿರಣಗಳು, ಉಳಿದ ಕಲೆಗಳೊಂದಿಗೆ ಇರುವ ಸಂಬಂಧಗಳ ಕುರಿತು ಜಿಜ್ಞಾಸೆಗಳು ಕಂಡುಬರುತ್ತಿರು ವುದು ಈಚಿನ ವರ್ಷಗಳಲ್ಲೇ. ಇಂತಹ ಕಾರ್ಯಗಳ ಬಗ್ಗೆ ಕಲಾವಿದರಲ್ಲಿ ಅವಜ್ಞೆ ಇದೆ. ಕೆಲವರಿಗೆ ಇದರ ಸಾರ್ಥಕತೆಯ ಬಗ್ಗೆ ಅನುಮಾನವಿದೆ. ಮುಂಬಯಿಯಲ್ಲಿ ರುವ ಯಕ್ಷಗಾನ ಪದವೀಧರ ಸಂಘ ಹಲವು ವರ್ಷಗಳ ಕಾಲ ಯಕ್ಷಗಾನದ ವಿದ್ವಾಂಸರನ್ನು, ಹಿರಿಯ ಕಲಾವಿದರನ್ನು ಮುಂಬಯಿಗೆ ಕರೆಸಿ 3–4 ದಿನಗಳ ಸಮ್ಮೇಳನವನ್ನು ನಡೆಸಿಕೊಂಡು ಬಂದಿದೆ. ಎಚ್.ಬಿ.ಎಲ್.ರಾವ್ ಈ ಪದವೀಧರ ಸಂಘದ ರೂವಾರಿಗಳಾಗಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯ ಕಳೆದ 20 ವರ್ಷ ಗಳಿಂದ ಕನ್ನಡ ಕಲಿಕೆಯಲ್ಲಿ ಪ್ರಸಂಗ ಸಾಹಿತ್ಯವನ್ನು ಅಳವಡಿಸಿದೆ. ಯಕ್ಷಗಾನ ಕಲೆಯನ್ನೇ ಒಂದು ಪಠ್ಯದ ವಿಷಯವಾಗಿಸಬೇಕೆಂಬ ಆಗ್ರಹವೂ, ಚರ್ಚೆಗಳೂ

ಇಂತಹ ಶಿಬಿರ ಗೋಷ್ಠಿಗಳಲ್ಲಿ ಹೊರಹೊಮ್ಮಿವೆ. ಅದೇ ರೀತಿ ಮರೂರು 'ಯಕ್ಷಗಾನ ಸಂರಕ್ಷನಾ ಸಮಿತಿ' ಎಂಬ ಸಂಘಟನೆಯವರು 1963–64ರಲ್ಲಿ ತುಳುಭಾಷೆಯಲ್ಲಿ ನಡೆಯುವ ಯಕ್ಷಗಾನದ ಪರಂಪರಾಗತ ವೇಷಗಳಿಲ್ಲದ ಆಟಗಳು ನಡೆಯುತ್ತಿರುವಲ್ಲಿಗೆ ತೆರಳಿ ಕಪ್ಪು ಬಾವುಟ ಪ್ರದರ್ಶನ ನಡೆಸಿ ಯಕ್ಷಗಾನದ ರುಚಿಶುದ್ಧಿಯ ಉಳಿವಿಗೆ ಪ್ರಯತ್ನಿಸಿದ ಉಲ್ಲೇಖಗಳು ದೊರೆಯುತ್ತವೆ. ಕರ್ನಾಟಕ ಸಾಂಸ್ಕೃತಿಕ ಕಲಾಪ್ರತಿಷ್ಠಾನವೆಂಬ ಸಂಸ್ಥೆಯವರು ಅಖಿಲಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನಗಳನ್ನು ಬೆಂಗಳೂರುನಗರ, ಉಡುಪಿಗಳಲ್ಲೆಲ್ಲ ನಡೆಸಿ ಕರ್ನಾಟಕದ ಎಲ್ಲಾ ಯಕ್ಷಗಾನ ಸಂಬಂಧಿ ಕಲೆಗಳ ಸಾಹಿತ್ಯ ಹಾಗೂ ಪ್ರದರ್ಶನಗಳ ಕುರಿತು ಗೋಷ್ಠಿಗಳನ್ನು ನಡೆಸಿದ್ದಾರೆ. ಈ ಎಲ್ಲ ಸಮ್ಮೇಳನಗಳಲ್ಲಿ ಯಕ್ಷಗಾನಕ್ಕೊಂದು ಅಕಾಡೆಮಿ ಬೇಕೆಂಬುದು ಒಕ್ಕೊರಲಿನ ಕೂಗಾಗಿತ್ತು.

ಯಕ್ಷಗಾನ ಅಕಾಡೆಮಿ:

ಈ ಸಮ್ಮೇಳನಗಳೆಲ್ಲದರ ನಿರ್ಣಯದ ಫಲವೋ ಎಂಬಂತೆ ಈ ವರ್ಷ (2007) ಯಕ್ಷಗಾನಕ್ಕೆಂದೇ ಸ್ವತಂತ್ರವಾದ ಅಕಾಡೆಮಿಯೊಂದು ಅಸ್ತಿತ್ವಕ್ಕೆ ಬಂದಿದೆ. ಯಕ್ಷಗಾನದಂತಹ ಪಾರಂಪರಿಕ ಕಲೆ ಉಳಿಯಲು, ನಿರ್ದಿಷ್ಟ ಪ್ರಮಾಣದಲ್ಲಿ ಆರೋಗ್ಯಕರವಾಗಿ ಬೆಳೆಯಲು ಯಕ್ಷಗಾನ ಅಕಾಡೆಮಿಯಂತಹ ಸಂಸ್ಥೆಯೊಂದರ ಸ್ಥಾಪನೆಯಾಗಬೇಕೆಂಬ ಕೂಗು ಕಳೆದ 50 ವರ್ಷಗಳಿಂದ ಇದ್ದಿದ್ದೆ. ಅದರ ಫಲವಾಗಿ ಕರ್ನಾಟಕ ಸರಕಾರ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಸ್ಥಾಪಿಸಿತ್ತು. ಈ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೋಷ್ಠಿ, ವಿಚಾರ ಸಂಕಿರಣಗಳನ್ನು ನಡೆಸಲು ಸಂಘಸಂಸ್ಥೆಗಳವರಿಗೆ ಧನಸಹಾಯ ನೀಡುತ್ತಿತ್ತು. ಹಿರಿಯ ಕಲಾವಿದರಿಗೆ ಪ್ರಶಸ್ತಿ, ಗೌರವಧನ, ಅಶಕ್ತ ಕಲಾವಿದರಿಗೆ ಮಾಸಾಶನ ಮುಂತಾದವುಗಳನ್ನು ನೀಡುತ್ತಿತ್ತು. ಈ ಅಕಾಡೆಮಿಗಳಲ್ಲಿ ಒಂದು ಅಥವಾ ಎರಡು ಯಕ್ಷಗಾನಕ್ಕೆ ಸಂಬಂಧಿಸಿದವರು ಸದಸ್ಯರಾಗಿರುತ್ತಿದ್ದರು. ಈಚೆಗಂತೂ ಕೆರೆಮನೆ ಶಂಭು ಹೆಗಡೆಯವರೇ ಅಧ್ಯಕ್ಷರಾಗಿದ್ದರು. ಆದರೆ ಇಲ್ಲಿ ಸಿಂಹಪಾಲು ಜಾನಪದಕ್ಕೆ ಮೀಸಲಾಗುತ್ತಿತ್ತು. ಇದರ ಕಾರ್ಯ ನಿರ್ವಹಣೆಯ ಬಗ್ಗೆ ಕಲಾವಿದರಲ್ಲಿ ಅಸಮಾಧಾನವಿತ್ತು. ಇದನ್ನು ಯಕ್ಷಗಾನಕ್ಕೆ ಸಂಬಂಧಿಸಿದವರೆಲ್ಲ ವಿರೋಧಿಸುತ್ತ ಯಕ್ಷಗಾನಕ್ಕೆಂದೇ ಸ್ವತಂತ್ರವಾದ ಅಕಾಡೆಮಿ ಬೇಕು ಎಂಬ ಕೂಗು ಇದ್ದಿತ್ತು. ಕೇರಳದ ಕಥಕ್ಕಳಿಗೆ ಇರುವಂತೆ ಕರ್ನಾಟಕದ ಯಕ್ಷಗಾನಕ್ಕೂ ಪ್ರತ್ಯೇಕ ಅಕಾಡೆಮಿ ಇದ್ದರೆ ಇಂದು ಪ್ರದರ್ಶನಗಳಲ್ಲಿ ನಡೆಯುತ್ತಿರುವ ಅಸಾಂಗತ್ಯಗಳನ್ನು ನಿಯಂತ್ರಿಸಬಹುದು ಎಂಬುದು ಎಲ್ಲರ ಅಭಿಮತವಾಗಿತ್ತು. ಈ ವರ್ಷ ಅಸ್ತಿತ್ವಕ್ಕೆ ಬಂದ ಸ್ವತಂತ್ರ ಯಕ್ಷಗಾನ ಅಕಾಡೆಮಿ ಯಾವ ರೀತಿ ಕಾರ್ಯ ನಿರ್ವಹಿಸಲಿದೆ ಎಂಬುದನ್ನು ಕಾದು ನೋಡಬೇಕು. ಕೇವಲ ವಿಚಾರಸಂಕಿರಣ, ಮಾಸಾಶನ, ಧನಸಹಾಯ, ಪ್ರಶಸ್ತಿ ವಿತರಣೆ ನಡೆಸದೆ, ಸಮಗ್ರವಾದ ಬೆಳವಣಿಗೆಗೆ

ಇಂತಹ ಅಕಾಡೆಮಿ ಸಹಕಾರಿಯಾಗಬೇಕು. ಹವ್ಯಾಸಿ ಹಾಗೂ ವೃತ್ತಿರಂಗದ ನಡುವೆ ಸೇತುವಾಗಬೇಕು. ಪ್ರದರ್ಶನಗಳ ಮೇಲೆ ನಿಯಂತ್ರಣ, ಕಲಾವಿದರ ಅರ್ಹತೆ ಹಾಗೂ ಅಭಿವ್ಯಕ್ತಿಗಳ ಮೇಲೆ ನಿಗಾ ಇಟ್ಟು ನಿಬಂಧನೆಗಳನ್ನು ತರುವ ಸಾಮರ್ಥ್ಯ ಹೊಂದಿರಬೇಕೆಂಬುದು ಆಸಕ್ತರೆಲ್ಲರ ಆಸೆಯಾಗಿದೆ. ಈಗಿರುವ ವ್ಯಾಪಾರಿ ದೋರಣೆಗಳನ್ನು ಕಡಿಮೆ ಮಾಡಲು ಇಂತಹ ನಿಬಂಧನೆಗಳು ಅಗತ್ಯವಾಗಿದ್ದು ಈ ಪ್ರತ್ಯೇಕವಾದ ಯಕ್ಷಗಾನ ಅಕಾಡೆಮಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಏಕವ್ಯಕ್ತಿ ಯಕ್ಷಗಾನ:

ಕಳೆದ ಹತ್ತು ವರ್ಷಗಳಿಂದ ಯಕ್ಷಗಾನದಲ್ಲಿ ವಿನೂತನ ಪ್ರಯೋಗಗಳು ನಡೆಯುತ್ತಿವೆ. ಇದರಲ್ಲಿ 'ಏಕವ್ಯಕ್ತಿ ಯಕ್ಷಗಾನ'ವು ಒಂದು. ಮಂಟಪ ಪ್ರಭಾಕರ ಉಪಾಧ್ಯ ಹಾಗೂ ಶತಾವಧಾನಿ ಆರ್. ಗಣೇಶ್ ಅವರ ಕನಸಿನ ರೂಪವಾದ ಈ ಬಗೆಯ ಪ್ರದರ್ಶನ ಪಟ್ಟಣ ಪ್ರದೇಶಗಳಲ್ಲಿ ಸಾಕಷ್ಟು ಪ್ರದರ್ಶನಗಳನ್ನು ಕಂಡಿದೆ. ಪ್ರಸಂಗವೊಂದರ ಪದ್ಯಭಾಗವನ್ನು ಆಧರಿಸಿ ಸುಮಾರು ಎರಡು ತಾಸು ನಡೆಯುವ ಈ ಕಿರು ಯಕ್ಷಗಾನ ಭಾಗದಲ್ಲಿ ಒಬ್ಬನೇ ವ್ಯಕ್ತಿ ಯಕ್ಷಗಾನದ ಹಾಡಿಗೆ ತಕ್ಕುದಾಗಿ ನರ್ತಿಸಿ, ಹಾವಭಾವಗಳ ಮೂಲಕ ಕಥೆಯನ್ನು ಜನರಿಗೆ ಮುಟ್ಟಿಸುತ್ತಾನೆ. ಹೆಚ್ಚಾಗಿ ಸ್ತ್ರೀ ಪಾತ್ರವನ್ನೇ ಆಧರಿಸಿ ನಡೆಯುವ ಈ ಬಗೆಯ ನಿರೂಪಣೆಯಲ್ಲಿ ಮೋಹಕತೆಗೆ ಪ್ರಧಾನ ಪಟ್ಟ, ಅಸಂಖ್ಯ ಪ್ರದರ್ಶನಗಳನ್ನು ಕಂಡಿರುವ ಈ ಪ್ರಭೇದ ಅನೇಕ ಹೊಸ ಆವಿಷ್ಕಾರಗಳಿಗೆ ಕಾರಣವಾಗಬಹುದು.

ಈಗಾಗಲೇ ಮಂಟಪ ಪ್ರಭಾಕರ ಉಪಾಧ್ಯರು ಕಳೆದ 7 ವರ್ಷಗಳಲ್ಲಿ 605 ಯಕ್ಷಗಾನ ಪ್ರದರ್ಶನಗಳನ್ನು ನೀಡಿದ್ದಾರೆ. ಭಾಮಿನಿ, ಕೃಷ್ಣಾರ್ಪಣ, ವೇಣು ವಿಪಶ್ಯನ, ಜಾನಕಿ ಜೀವನ, ಪ್ರಣಯ(ವಂ)ಚಿತೆ ಮುಂತಾದವುಗಳನ್ನು ಈ ಮಾಧ್ಯಮಕ್ಕಾಗಿ ರಚಿಸಿದವರು ಶತಾವಧಾನಿ ಆರ್. ಗಣೇಶ್ ಅವರು. ಅದನ್ನು ಯಕ್ಷಗಾನದ ವೇಷ ಭೂಷಣದಲ್ಲೇ, ಅದೇಬಗೆಯ ಹಿಮ್ಮೇಳದಲ್ಲಿ ಮೂಲ ಸಾಂಪ್ರದಾಯಕ ಹೆಜ್ಜೆ ಗತ್ತಿನೊಂದಿಗೆ ಪ್ರದರ್ಶನ ನೀಡಿದವರು ಶ್ರೀ ಮಂಟಪ ಪ್ರಭಾಕರ ಉಪಾಧ್ಯರು. 'ಯಕ್ಷದರ್ಪಣ' ಎನ್ನುವುದು ಸಭಾಲಕ್ಷಣದ ಭಾಗವನ್ನೇ ಆಶ್ರಯಿಸಿದ್ದು ಪರಂಪರಾಗತ ನೃತ್ಯಗತಿಗಳನ್ನು ಪ್ರೇಕ್ಷಕರಿಗೆ ಮನಮುಟ್ಟಿಸುವಲ್ಲಿ ಯಶಸ್ವಿಯಾಗಿದೆ. ಮಂಟಪರ ಎಲ್ಲ ಪ್ರದರ್ಶನಗಳಲ್ಲೂ ಪರಂಪರಾಗತ ನೃತ್ಯಕ್ಕೆ ಪ್ರಾಶಸ್ತ್ಯವಿದ್ದು ಅವರು ಮನೆ ಮನೆಗಳಲ್ಲಿ ಈ ಪ್ರದರ್ಶನ ನೀಡುತ್ತಿರುವುದರಿಂದ ಹೆಚ್ಚು ಆಸಕ್ತರು ತೀರಾ ಹತ್ತಿರದಿಂದ ಈ ಪ್ರದರ್ಶನಗಳನ್ನು ನೋಡುವ ಅವಕಾಶ ಲಭಿಸಿದೆ. ಇವರ ಪ್ರದರ್ಶನಗಳಿಂದ ಯಕ್ಷಗಾನ ಅರಿಯದಂತಹ ಅನೇಕ ಹೊಸ ಪ್ರೇಕ್ಷಕರು ಯಕ್ಷಗಾನದ ಕಡೆ ದೃಷ್ಟಿ ಹೊರಳಿಸುವಂತಾಗಿದೆ.

ಹಾಗೆ ನೋಡಿದರೆ ಗೀತನಾಟಕಗಳಿಂದ ಪ್ರೇರಿತರಾದ ಕಾರಂತರು ಯಕ್ಷಗಾನದ ಹಾಡು ಮಟ್ಟುಗಳನ್ನು ತಮ್ಮ ಗೀತ ನಾಟಕಗಳಲ್ಲಿ ಬಳಸಿದ್ದೂ ಉಂಟು. ಉದ್ಯಾವರ ಮಾಧವ ಆಚಾರ್ಯರವರ ನಿರ್ದೇಶನದಲ್ಲಿ ರಾಜೇಂದ್ರ ಕೆದಿಲಾಯ ಅವರ ಮೂಲಕ 'ಪಾಂಚಾಲಿ'ಯೆಂಬ ಪ್ರದರ್ಶನ ನಡೆದಿದ್ದರು ಅದು ಮುಂದುವರಿಯಲಿಲ್ಲ. ಸಂಜೀವ ಸುವರ್ಣ ಅವರು ಕೂಡ ಈ ಬಗೆಯ ಏಕವ್ಯಕ್ತಿ ಯಕ್ಷಗಾನ ಪ್ರದರ್ಶನವನ್ನು ನೀಡಿರುತ್ತಾರೆ. ಮಂಟಪ ಪ್ರಭಾಕರ ಉಪಾಧ್ಯ ಹಾಗೂ ರಾಮಚಂದ್ರ ಹೆಗಡೆಯವರು 'ವಿಜಯ ವಿಲಾಸ'ವೆಂಬ ವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಪುರುಷ ಹಾಗೂ ಸ್ತ್ರೀ ವೇಷಗಳೆರಡೂ ಇಲ್ಲಿ ಭಾಗವಹಿಸುವುದು ವಿಶೇಷವಾಗಿದೆ. ಶ್ರೀಮತಿ ಸುಂದರಿ ಸಂತಾನಂ ಹಾಗೂ ಮಂಟಪರು ಇನ್ನೊಂದು ಪ್ರಯೋಗ ನಡೆಸಿದ್ದಾರೆ. ನಳ ದಮಯಂತಿ ಕಥೆಯನ್ನು 'ಹಂಸ ಸಂದೇಶ'ದ ಮೂಲಕ ಇಬ್ಬರು ಕಲಾವಿದರು ಪ್ರಕಟಪಡಿಸಿದ್ದಾರೆ. ಪುಣ್ಯಕೋಟಿಯ ಕಥೆ ಕೂಡ ಪ್ರದರ್ಶನವಾಗಿದೆ.

ಯಕ್ಷಗಾನಕ್ಕೊಬ್ಬ ನಿರ್ದೇಶಕ:

ಹವ್ಯಾಸಿ ನಾಟಕಗಳಲ್ಲಿ ಹಾಗೂ ಚಲನಸಿತ್ರಗಳಲ್ಲಿ ನಿರ್ದೇಶಕನ ಮಹತ್ವವನ್ನು ಕಂಡ ವಿಮರ್ಶಕರು ಹಾಗೂ ಆಸಕ್ತರು ಯಕ್ಷಗಾನಕ್ಕೂ ಒಬ್ಬ ನಿರ್ದೇಶಕ ಬೇಕೆಂಬ ಕೂಗನ್ನು ಎಬ್ಬಿಸಿದ್ದಾರೆ. ವ್ಯಾಪಾರಿ ಧೋರಣೆ ಹಾಗೂ ಅಭ್ಯಾಸಗಳ ಕೊರತೆಯಿಂದ ದಿಕ್ಕು ತಪ್ಪುತ್ತಿರುವ ಯಕ್ಷಗಾನಕ್ಕೆ ನುರಿತ ಹಿರಿಯ ಕಲಾವಿದನ ನಿರ್ದೇಶನ ದೊರೆತರೆ ಸುಧಾರಣೆಯಾದೀತೆಂಬ ಹಂಬಲ ಹಲವರಲ್ಲಿದೆ. ಈ ಕೂಗಿನ ಹಿನ್ನೆಲೆಯಲ್ಲಿ ಮಕ್ಕಳ ಮೇಳ, ಸ್ತ್ರೀಯರ ಯಕ್ಷಗಾನ, ಹವ್ಯಾಸಿ ಕಲಾವಿದರ ಪ್ರದರ್ಶನಗಳಿವೆ. ಡಾ॥ ಶಿವರಾಮ ಕಾರಂತರು ಈಗಾಗಲೇ 'ಯಕ್ಷರಂಗ'ಕ್ಕೆ ನಿರ್ದೇಶಕರಾಗಿದ್ದು ಸಮರ್ಥವಾದ ಪ್ರದರ್ಶನಗಳು ಇದರಿಂದ ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದರು. ಆದರೆ ಪಾರಂಪರಿಕವಾಗಿರುವ ವೃತ್ತಿಮೇಳಗಳ ಪ್ರದರ್ಶನದಲ್ಲಿ ಇನ್ನೂ ನಿರ್ದೇಶಕ ಬಂದಿಲ್ಲ. ಭಾಗವತರೇ ಸ್ವಲ್ಪಮಟ್ಟಿಗೆ ಈ ಕಾರ್ಯನಿರ್ವಹಿಸುತ್ತಿರುವುದರಿಂದ ಪ್ರತೇಕ ನಿರ್ದೇಶಕನ ಅಗತ್ಯವಿಲ್ಲ ಎಂಬಂತಾಗಿದೆ. ಹಿರಿಯ ಭಾಗವತರುಗಳೆಲ್ಲ ಪ್ರಸಂಗಗಳನ್ನು ಸಮರ್ಥವಾಗಿ ನಡೆಸುವುದು ಭಾಗವತನಾದವನ ಹೊಣೆಗಾರಿಕೆ ಎಂದೇ ನಂಬಿದ್ದಾರೆ. ಅಲ್ಲದೆ ಮೇಳದ ವ್ಯವಸ್ಥಾಪಕರು ನಿರ್ದೇಶಕ ಪಟ್ಟವೊಂದನ್ನು ಹೊಸದಾಗಿ ನಿರ್ಮಿಸುವ ಮನಃಸ್ಥಿತಿಯಲ್ಲೂ ಇಲ್ಲ. ಕಲಾವಿದರಲ್ಲಿ ಸಮನ್ವಯ ಉಂಟುಮಾಡಲು, ಪ್ರದರ್ಶನಕ್ಕೊಂದು ಪೂರ್ವನಿಶ್ಚಿತ ಸ್ವರೂಪ ಲಭಿಸಲು ಮತ್ತು ಆಟ ಅಚ್ಚುಕಟ್ಟಾಗಲು ಒಬ್ಬ ನಿರ್ದೇಶಕ ಅಗತ್ಯ ಎಂಬ ಭಾವ ಈಚೆಗೆ ಬಲಿಯುತ್ತಿದೆ. ಮುಂದಿನ ದಿನಗಳಲ್ಲಿ ಈ ಒತ್ತಾಸೆ ಯಾವ ಮಟ್ಟವನ್ನು ಮುಟ್ಟುತ್ತದೆ ಕಾದು ನೋಡಬೇಕಾಗಿದೆ.

ಯಕ್ಷಗಾನದಲ್ಲಿ ಸಂಶೋಧನೆ:

ಯಕ್ಷಗಾನವನ್ನೇ ಆಧರಿಸಿ ಅನೇಕ ಸಂಶೋಧನೆಗಳು ನಡೆದಿವೆ. 1955ರಲ್ಲಿ ರಚಿತವಾದ ಡಾ॥ ಶಿವರಾಮ ಕಾರಂತರ 'ಯಕ್ಷಗಾನ ಬಯಲಾಟ' ಎಲ್ಲ ಅರ್ಥದಲ್ಲೂ ಸಂಶೋಧನ ಕೃತಿಯೇ ಸರಿ. ಡಾ॥ ಕಾರಂತರ ಮಾರ್ಗದರ್ಶನದಲ್ಲಿ ಶ್ರೀಮತಿ ಮರ್ಥಾ ಆಸ್ಟಿನ್ ಅವರು ಈ ಕೃತಿಯ ಬಗ್ಗೆ ಆಳವಾದ ಅಭ್ಯಾಸ ಮಾಡಿ ಇಂಗ್ಲಿಷಿನಲ್ಲಿ ಈ ಕುರಿತು ಬರೆದ ಸಂಶೋಧನ ಕೃತಿ ಕೂಡ ಒಂದು ಐತಿಹಾಸಿಕ ದಾಖಲೆಯೇ ಸರಿ. ಪ್ರಸಂಗ ಸಾಹಿತ್ಯದ ಬಗ್ಗೆ ಡಾ॥ ಆನಂದರಾಮ ಉಪಾಧ್ಯರ 'ಯಕ್ಷಗಾನ ಮಹಾಭಾರತ ಪ್ರಸಂಗಗಳು', ಡಾ॥ ಪಾದೇಕಲ್ಲು ವಿಷ್ಣುಭಟ್ ಅವರ 'ಯಕ್ಷಗಾನ ಭಾಗವತ ಪ್ರಸಂಗಗಳು' ಮುಂತಾದುವು ಸಂಶೋಧನಾತ್ಮಕ ಕೃತಿಗಳಾಗಿವೆ. ಈಚೆಗೆ ಡಾ॥ ಎಂ. ಪ್ರಭಾಕರ ಜೋಷಿ, ಡಾ॥ ರಾಘವನ್ ನಂಬಿಯಾರ್, ಡಾ॥ ಜಿ.ಎಸ್. ಹೆಗಡೆ ಮುಂತಾದವರು ಯಕ್ಷಗಾನ ಕಲೆಯ ಕುರಿತು ಪ್ರೌಢ ಪ್ರಬಂಧ ರಚಿಸಿ ಪಿ.ಎಚ್‌ಡಿ. ಪದವಿ ಗಳಿಸಿದ್ದಾರೆ. ಡಾ॥ ಕಬ್ಬಿನಾಲೆ ವಸಂತ ಭಾರದ್ವಾಜ, ಡಾ॥ ಎನ್. ನಾರಾಯಣ ಶೆಟ್ಟಿ, ರಾಮಕೃಷ್ಣ ಜೋಷಿ ಇಡಗುಂಜಿ ಮೇಳದ ಬಗ್ಗೆ ಆಳವಾದ ಅಧ್ಯಯನ ನಡೆಸಿದವರು. ಡಾ॥ ಜಿ.ಎಸ್. ಭಟ್‌ರವರು ಶಂಭು ಹೆಗಡೆಯವರ ಬಗ್ಗೆ ಬರೆದ ಪ್ರೌಢ ಪ್ರಬಂಧ ಕೂಡ ಗಮನಾರ್ಹವಾದುದು. ಶ್ರೀಮತಿ ವಸುಧಾ ವಿವೇಕ್ ಅವರು ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಕೊಡುಗೆ ಬಗ್ಗೆ ಪ್ರೌಢ ಪ್ರಬಂಧ ರಚಿಸಿರುತ್ತಾರೆ. ಇಂದು ಅನೇಕ ಯುವ ವಿದ್ವಾಂಸರು ಪ್ರಸಂಗ ಸಾಹಿತ್ಯ ಹಾಗೂ ಕಲೆಗಳ ಕಡೆಗೆ ಗಮನಹರಿಸಿದ್ದು ಅನೇಕ ಮೌಲಿಕ ಅಂಶಗಳನ್ನು ಹೊರತರುತ್ತಿದ್ದಾರೆ. ಯಕ್ಷಗಾನ ಪ್ರಸಂಗಗಳ ಶಾಸ್ತ್ರೀಯ ಸಂಪಾದನೆಗಳನ್ನು ಅನೇಕ ವಿದ್ವಾಂಸರು ನಡೆಸುತ್ತಿರುವುದು ಕೂಡ ಗಮನಾರ್ಹ. ಇವೆಲ್ಲದರ ಫಲವಾಗಿ ಇಂದು ಯಕ್ಷಗಾನ ರಂಗಭೂಮಿ ಕೇವಲ ಕಲಾವಿದರಿಗಷ್ಟೇ ಸೀಮಿತವಾಗಿರದೆ, ಹತ್ತು ಹಲವು ಪ್ರಯೋಗಗಳನ್ನು ನಡೆಸುವವರ ಆಡುಂಬೊಲ ವಾಗಿರುತ್ತದೆ. ಹಿಂದೆಲ್ಲ ರೇಡಿಯೋಗಳಲ್ಲಿ ಯಕ್ಷಗಾನ ಪ್ರಸಂಗಗಳು ಬಿತ್ತರವಾಗುತ್ತಿ ದ್ದವು. ಈಚಿನ 10–15 ವರ್ಷಗಳಲ್ಲಿ ದೂರದರ್ಶನದ ಚಾನೆಲ್‌ಗಳು ಯಕ್ಷಗಾನದ ಕಾರ್ಯಕ್ರಮಗಳನ್ನು ಕೂಡ ಪ್ರಸಾರ ಮಾಡುತ್ತಿವೆ. ಬೆಂಗಳೂರು ದೂರದರ್ಶನ ವಂತೂ ಹತ್ತು ಹಲವು ಕಾರ್ಯಕ್ರಮಗಳನ್ನು ಆಗಾಗ ನೀಡಿ ಕರ್ನಾಟಕದಾದ್ಯಂತ ಯಕ್ಷಗಾನ ಪ್ರಖ್ಯಾತವಾಗುವಂತೆ ಮಾಡಿದೆ.

ಉಪಸಂಹಾರ:

ಜನತೆಯ ಬದಲಾದ ಜೀವನಶೈಲಿ, ಚಿಂತನ ವಿಚಾರ, ಉಳಿದ ಮಾಧ್ಯಮಗಳ ಪ್ರಭಾವ, ಕಲಾವಿದರ ಬದುಕಿನಲ್ಲಾದ ಏರುಪೇರು, ಹೆಚ್ಚುತ್ತಿರುವ ವ್ಯಾಪಾರೀ ಮನೋಭಾವ, ಅಭಿರುಚಿಯ ಪಲ್ಲಟಗಳೆಲ್ಲ ಯಕ್ಷಗಾನದ ಸ್ಥಿತ್ಯಂತರಕ್ಕೆ ಕಾರಣವಾಗಿದೆ.

ಯಕ್ಷಗಾನ ರಂಗಭೂಮಿ ಹೀಗೆ ಬದಲಾವಣೆಗೆ ಮೈಯೊಡ್ಡುತ್ತಿರುವುದು ಇದೇ ಮೊದಲಬಾರಿಯಲ್ಲ. ಪ್ರಸಂಗಗಳ ಐತಿಹಾಸಿಕ ಅಧ್ಯಯನದಿಂದ ಈ ರಂಗಭೂಮಿಯ ಬೆಳವಣಿಗೆಯ ಹೆಜ್ಜೆ ಗುರುತುಗಳನ್ನು ಕಾಣಬಹುದು. ಮೊದಲ ಕಾಲದ ಪ್ರಸಂಗಗಳಲ್ಲಿ ಕಥಾನಿರೂಪಣೆಯಷ್ಟೇ ಮುಖ್ಯ. ಮುಂದೆ ನಾಟಕೀಯ ಅಂಶಗಳ ಪ್ರಾಧಾನ್ಯ ಪ್ರಸಂಗಗಳಲ್ಲಿ ಕಾಣಿಸುತ್ತವೆ. ಜನಾಕರ್ಷಣೆಗೆ ಬೇಕಾದ ಹಾಸ್ಯಗಳು 100–120 ವರ್ಷಗಳ ಹಿಂದೆ ಬಂದಿರುವ ಪ್ರಸಂಗಗಳಲ್ಲಿವೆ. ಕಳೆದ ಶತಮಾನದ ಮೊದಲ ದಶಕಗಳಲ್ಲಿ ಸೃಷ್ಟಿಯಾದ ಪ್ರಸಂಗಗಳಲ್ಲಿ ಜಲಕೇಳಿ, ಬೇಟೆ, ವನವಿಹಾರವೆಲ್ಲ ಕಂಡುಬರುತ್ತದೆ. ಈಚಿನ 50 ವರ್ಷಗಳಲ್ಲಿ ಅತಿ ಹೆಚ್ಚು ಬದಲಾವಣೆಗಳು ಗೋಚರಿಸುತ್ತಿವೆ. ಅಂತೆಯೇ ಯಕ್ಷಗಾನ ಹೆಚ್ಚುಹೆಚ್ಚು ಜನಸಮ್ಮುಖವಾಗುತ್ತಿದೆ. ಈ ಪ್ರವೃತ್ತಿಯನ್ನು ಅನಿವಾರ್ಯ ಬೆಳವಣಿಗೆ ಎಂದು ಸ್ವಾಗತಿಸುವಷ್ಟೇ ಜನರು ಮೂಲ ಸ್ವರೂಪಕ್ಕೆ ಧಕ್ಕೆ ತರುತ್ತಿದೆ ಎನ್ನುವವರಿದ್ದಾರೆ.

ನೂತನ ಪ್ರಸಂಗಗಳ ಸೃಷ್ಟಿಯೊಂದಿಗೆ ಯಕ್ಷಗಾನದಲ್ಲೂ ಸಾಮಾಜಿಕ ವಿಚಾರಗಳು, ಸಮಸ್ಯೆಗಳು ಪರೋಕ್ಷವಾಗಿ ಹೆಚ್ಚುತ್ತಿವೆ. ಇದರಿಂದ ಪೌರಾಣಿಕ ಆವರಣಕ್ಕೆ ಭಂಗವಾಗುತ್ತಿದೆ. ಕೆಲವು ಮೇಳಗಳ ಪ್ರದರ್ಶನಗಳು ಕಮರ್ಷಿಯಲ್ ಚಿತ್ರದ ವಿಕೃತ ನಕಲುಗಳಾಗುತ್ತಿವೆ. ವಿದ್ಯಾವಂತ ಕಲಾಸಕ್ತರು, ಹವ್ಯಾಸಿಗಳು ಹೆಚ್ಚುವುದರೊಂದಿಗೆ ಯಕ್ಷಗಾನ ಕಲೆಯಲ್ಲಿ ಶುಚಿರುಚಿಯನ್ನು ಬಯಸುವವರ ಸಂಖ್ಯೆ ಹೆಚುತ್ತಿದೆ. ಡೇರೆ ಮೇಳದವರ ಸ್ಥಿತಿ ಕೂಡ ಶೋಚನೀಯವಾಗಿದೆ. ಪ್ರದರ್ಶನಗಳಿಗೆ ಆಕರ್ಷಣೆ ಕಮ್ಮಿಯಾಗಿದೆ. ಆದರೆ ಅಲ್ಲಲ್ಲಿ ಪೌರಾಣಿಕ ಪ್ರಸಂಗಗಳ ಪ್ರದರ್ಶನಕ್ಕೆ ಈಚೆಗೆ ಜನ ಆಕರ್ಷಿತರಾಗುತ್ತಿದ್ದಾರೆ. ಹವ್ಯಾಸಿ ತಂಡಗಳು ನಡೆಸುತ್ತಿರುವ ಅನೇಕ ಕಾರ್ಯಕ್ರಮಗಳು ಜನರನ್ನು ಸೆಳೆಯುತ್ತಿದೆ. ಯಕ್ಷಗಾನ ಕನ್ನಡಿಗರೆಲ್ಲರ ಕಲೆ. ಅದು ಅತ್ತ ಮ್ಯೂಸಿಯಂ ಸೊತ್ತಾಗದಂತೆಯೂ, ಇತ್ತ ವ್ಯಾಪಾರೀ ಸರಕಾಗದಂತೆಯೂ ನೋಡಿಕೊಳ್ಳವುದು ಎಲ್ಲ ಆಸಕ್ತರ ಹೊಣೆಯಾಗಿದೆ. ಕಲೆ ಜನಜೀವನದ ಪ್ರತಿಬಿಂಬ. ನಮ್ಮ ಜೀವನ ದೃಷ್ಟಿ ಶುದ್ಧವಾದಷ್ಟು ನಮ್ಮ ಕಲೆ ಶುದ್ಧವಾಗಬಲ್ಲದು. ನಮ್ಮ ಹಿರಿಯರ ಶ್ರೀಮಂತ ಬದುಕು ಯಕ್ಷಗಾನವನ್ನು ಶ್ರೀಮಂತ ಕಲೆಯಾಗಿಸಿದೆ. ಅದು ಮುಂದುವರಿಯುವಂತೆ ನೋಡಿಕೊಳ್ಳುವ ಹೊಣೆ ನಮ್ಮದಾಗಿದೆ. ಮುಂದಿನ ಪೀಳಿಗೆಗೂ ಈ ಶ್ರೀಮಂತ ಕಲೆ ಮುಂದುವರಿಯಬೇಕು. ಆಗ ಈ ನಾಡು ಧನ್ಯ.

(ರಚನೆ : 2007)

■

ಯಕ್ಷಗಾನ ಸಂಶೋಧನೆಯ ಮಜಲುಗಳು

ಯಕ್ಷಗಾನ ಕಲೆ ನಾಲ್ಕು ಮೊಗದ ಬ್ರಹ್ಮನಿದ್ದಂತೆ. ಇಲ್ಲಿ ಸಾಹಿತ್ಯ, ಸಂಗೀತ, ನೃತ್ಯ ಹಾಗೂ ಬಣ್ಣಗಾರಿಕೆಗಳೆಂಬ ನಾಲ್ಕು ಕಲೆಗಳು ಏಕತ್ರ ಸಂಧಿಸಿವೆ. ಪ್ರಸಂಗಕಾರ ರಚಿಸಿದ ಸಾಹಿತ್ಯವನ್ನು ಭಾಗವತ ಹಾಡುತ್ತಾನೆ. ಭಾಗವತನ ಹಾಡಿಗೆ ವೇಷಧಾರಿ ನರ್ತಿಸುತ್ತಾನೆ. ಅಭಿನಯದ ಮೂಲಕ ಮಾತಿನ ಮೂಲಕ ಪಾತ್ರದ ಭಾವವನ್ನು ಅಭಿವ್ಯಕ್ತಿಗೊಳಿಸುತ್ತಾನೆ. ಪಾತ್ರಧಾರಿಗಳು ಧರಿಸುವ ವೇಷಗಳ ಬಣ್ಣಗಾರಿಕೆಯಂತೂ ನಮ್ಮನ್ನು ಪುರಾಣಲೋಕಕ್ಕೆ ಕೊಂಡೊಯ್ಯುತ್ತವೆ. ಈಗ ಕರಾವಳಿ, ಮಲೆನಾಡಿನಲ್ಲಿ ಜೀವಂತ ವಾಗಿರುವ ಈ ಕಲೆ ಒಂದು ಕಾಲಕ್ಕೆ ಕರ್ನಾಟಕದಾದ್ಯಂತ ಬೇರೆ ಬೇರೆ ಹೆಸರಿನಲ್ಲಿ ಜೀವಂತವಾಗಿತ್ತು. ದೇವಸ್ಥಾನಗಳನ್ನು ಆಶ್ರಯಿಸಿದ ಮೇಳಗಳು ಈ ಕಲೆಯನ್ನು ಆರಾಧನೆಯ ಅಂಗವಾಗಿ ಮಾರ್ಪಡಿಸಿವೆ.

ಯಕ್ಷಗಾನ ಬಯಲಾಟಕ್ಕೆ ಮೂಲವಾಗಿರುವುದು ಪ್ರಸಂಗ ಸಾಹಿತ್ಯ. ಕಳೆದ 500 ವರ್ಷಗಳಿಂದ ಕನ್ನಡ ನಾಡಿನಾದ್ಯಂತ ಯಕ್ಷಗಾನ ಪ್ರಸಂಗ ರಚನೆ ನಡೆದದ್ದು ಕಂಡುಬರುತ್ತದೆ. ಹಾಡುಗಬ್ಬದ ರೂಪದ ಈ ಕನ್ನಡ ಕಿರುಕಾವ್ಯ ಜನತೆಯ ಸಾಂಸ್ಕೃತಿಕ ಬದುಕಿಗೆ ಕಾರಣವಾಗಿದೆ. 19ನೇ ಶತಮಾನದಲ್ಲಿ ಪ್ರಕಟಗೊಂಡ ಕೃತಿಗಳಲ್ಲಿ ಯಕ್ಷಗಾನ ಕೃತಿಗಳು ಸಿಂಹಪಾಲನ್ನು ಪಡೆದಿದ್ದವು ಎಂಬುದು ಬಿ.ಎಲ್. ರೈಸ್‌ರವರ ಮೂಲಕ ತಿಳಿದುಬರುತ್ತದೆ. 1860ರಲ್ಲಿ ಪ್ರಕಟಗೊಂಡ ಕರ್ನಾಟಕ ಶಬ್ದಾನುಶಾಸನಾ ಪೀಠಿಕೆಯಲ್ಲಿ ಬಿ.ಎಲ್.ರೈಸ್ ಅವರು ಹೇಳಿರುವ ಈ ಮಾತುಗಳೇ ಇದಕ್ಕೆ ಸಾಕ್ಷಿ – "It was part of my duty for

several years annually to review the publications of Mysore, the principle country in which kannada works are printed and my experience leads me to the opinion that the Yakshagana stories have been the most popular books of late years". ಹೀಗೆ ಹೊಸಗನ್ನಡ ಸಾಹಿತ್ಯದ ಉದಯದ ಪೂರ್ವದಲ್ಲಿ ಯಕ್ಷಗಾನ ಸಾಹಿತ್ಯ ಜನಾದರಣೀಯವಾಗಿತ್ತೆಂಬುದು ತಿಳಿದುಬರುತ್ತದೆ.

ಯಕ್ಷಗಾನ ಕಲೆಯ ಕುರಿತ ಸಂಶೋಧನೆ ಎಂದರೆ ಅದರ ಉಗಮ ಹಾಗೂ ವಿಕಾಸ ಮತ್ತು 'ಯಕ್ಷಗಾನ' ಹೆಸರಿನ ಕುರಿತಾದ ಮೊದಲ ಘಟ್ಟದ ಸಂಶೋಧನೆಯ ವಸ್ತುವಾಗಿತ್ತು. 1920ರಿಂದ 1970ರ ವರೆಗೆ ಅಂದರೆ ಐವತ್ತು ವರ್ಷಗಳ ಕಾಲ ಈ ಚರ್ಚೆಯೇ ಪ್ರಧಾನವಾಗಿತ್ತು. ಆ ಕಾಲದ ಶ್ರೇಷ್ಠ ವಿದ್ವಾಂಸರೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಬಿಡಿಬಿಡಿ ಲೇಖನಗಳಲ್ಲಿ ಪ್ರಕಟಿಸಿದ್ದರು. ಆ ಕಾಲದ ಪ್ರಮುಖ ಪತ್ರಿಕೆಗಳಾದ ರಾಷ್ಟ್ರಬಂಧು, ಜಯ ಕರ್ನಾಟಕಗಳಲ್ಲಿ ಈ ಕುರಿತ ಲೇಖನಗಳನ್ನು ಕಾಣಬಹುದು. ಮಂಜೇಶ್ವರ ಗೋವಿಂದ ಪೈ, ಸೇಡಿಯಾಪು ಕೃಷ್ಣಭಟ್, ಮುಳಿಯ ತಿಮ್ಮಪ್ಪಯ್ಯ, ಜಿ.ಆರ್.ಪಾಂಡೇಶ್ವರ್, ರಾಮಚಂದ್ರ ಭಟ್ ಹಾಸಣಗಿ, ಭೀಮರಾವ್ ಚಿಟಗುಪ್ಪಿ, ಐ.ಶಿವರಾಮಯ್ಯ, ಕೆ.ಎಂ.ಕೃಷ್ಣರಾವ್, ಕೋಟ ಶಿವರಾಮ ಕಾರಂತ, ಚೊಕ್ಕಾಡಿ ಸೀತಾರಾಮಯ್ಯ ಮುಂತಾದವರೆಲ್ಲ ಸಾಕಷ್ಟು ಸಂಖ್ಯೆಯ ಲೇಖನಗಳನ್ನು ಬರೆದಿದ್ದರು.

ಕ್ರಿ.ಶ.1929ರಲ್ಲಿ ಸೇಡಿಯಾಪು ಕೃಷ್ಣಭಟ್‌ರು ಮುದ್ದಣ ಕವಿಯ 'ಕುಮಾರ ವಿಜಯ'ದ ಬಗ್ಗೆ ಲೇಖನ ಬರೆದಿದ್ದರು. 1930ರಲ್ಲಿ ಯಕ್ಷಗಾನ ತಾಳಮದ್ದಲೆಯ ಕುರಿತಾದ ಸುದೀರ್ಘ ಲೇಖನ ಬರೆದಿದ್ದು ಅದು ಇಂದಿಗೂ ತಾಳಮದ್ದಲೆ ಕುರಿತಾದ ಅಧಿಕೃತವಾದ ಸಂಶೋಧನಾ ಲೇಖನವಾಗಿದೆ. ಇವರೇ 1935ರಲ್ಲಿ 'ಜಯ ಕರ್ನಾಟಕ' ದಲ್ಲಿ ಯಕ್ಷಗಾನ ಕಲೆಯ ಕುರಿತಾದ ಲೇಖನ ಕೂಡ ಬರೆದಿದ್ದು ಅದು ಕೂಡ ಮಹತ್ವದ್ದಾಗಿದೆ. ಸೇಡಿಯಾಪು ಅವರು ಆ ಕಾಲದ ಓರ್ವ ಮಹತ್ವದ ವಿದ್ವಾಂಸ ರಾಗಿದ್ದರು. ಇದೇ ಸುಮಾರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಅಂದಿನ ರಾಜಧಾನಿ ಯಾಗಿದ್ದ 'ಮದ್ರಾಸ್'ನಲ್ಲಿ ಯಕ್ಷಗಾನ ಪ್ರದರ್ಶನ ನಡೆದ ಉಲ್ಲೇಖ ದೊರೆಯುತ್ತದೆ. ಆ ಕಾಲದ ಪ್ರಸಿದ್ಧ ವಿದ್ವಾಂಸರಾದ ಡಾ॥ ವಿ. ರಾಘವನ್ ಅವರು 1934ರಲ್ಲಿ 'ತ್ರಿವೇಣಿ' ಎಂಬ ಆಂಗ್ಲ ಮಾಸಿಕದಲ್ಲಿ ಯಕ್ಷಗಾನ ಕಲೆಯ ಕುರಿತಾದ ದೀರ್ಘ ಲೇಖನ ಬರೆದರು. ಕ್ರಿ.ಶ. 1938ರಲ್ಲಿ ಕೆ.ಎಸ್.ಕಾರಂತ್ ಎಂಬ ಹೆಸರಿನಲ್ಲಿ ಶಿವರಾಮ ಕಾರಂತರು Perl. S. Burk ಅವರ 'Asia' ಎಂಬ ಇಂಗ್ಲೀಷ್ ಮಾಸಿಕದಲ್ಲಿ ಯಕ್ಷಗಾನ ಕುರಿತಾದ ಲೇಖನವನ್ನು ಪ್ರಕಟಿಸಿದರು. ಹೀಗೆ ಬಿಡಿಬಿಡಿಯಾದ ಲೇಖನಗಳು ಯಕ್ಷಗಾನ ಕಲೆಯ ಕುರಿತಾದ ಸಂಶೋಧನಾ ಬರೆಹಗಳಾಗಿ ಪ್ರಕಟಗೊಂಡವು.

ಪುಸ್ತಕ ರೂಪದಲ್ಲಿ ಯಕ್ಷಗಾನದ ಬಗ್ಗೆ ಬಂದ ಮೊದಲ ಕೃತಿಯೆಂದರೆ ಮುಳಿಯ ತಿಮ್ಮಪ್ಪಯ್ಯನವರ 'ಪಾರ್ತಿಸುಬ್ಬ'. ಅದು ಪ್ರಕಟವಾದದ್ದು 1945ರಲ್ಲಿ. ಅಲ್ಲಿ ಅವರು ಈ ಕಲೆಯ ಹೆಸರು ಹಾಗೂ ಹುಟ್ಟಿನ ಬಗ್ಗೆ ತಮ್ಮ ಅನಿಸಿಕೆಗಳನ್ನು ತಿಳಿಸಿದ್ದಾರೆ. ಕ್ರಿ.ಶ.1617ರ ಗೋವಿಂದ ದೀಕ್ಷಿತನ 'ಸಾಹಿತ್ಯ ಸುಧೆ'ಯಲ್ಲಿ ಯಕ್ಷಗಾನ ಪ್ರಬಂಧಗಳ ಉಲ್ಲೇಖವಿದೆ ಎಂದಿರುವ ಅವರು ಕಿನ್ನರಗಾನಕ್ಕೂ ಯಕ್ಷಗಾನಕ್ಕೂ ಸಂಬಂಧ ಕಲ್ಪಿಸುತ್ತಾರೆ. ಯಕ್ಷರು ಎಂಬುದು ಒಂದು ಜನವರ್ಗ. ಯಕ್ಷರಾತ್ರಿ ಯೆಂಬುದು ಅವರ ಆರಾಧನೆಯ ವಿಧಾನ. ಅಲ್ಲಿ ಹಾಡಿ ನರ್ತಿಸುವುದರಿಂದ ಯಕ್ಷಗಾನವಾಯಿತು. ಕವಿರಾಜ ಮಾರ್ಗಕಾರನು ಹೇಳುವ ಬೆದಂಡೆಗಬ್ಬ ಚೆತ್ತಾಣ, ಬಾಜನಗಬ್ಬಗಳೆಲ್ಲ ಯಕ್ಷಗಾನದ ಮಾದರಿಯಂತೆ ಇರುವ ಹಾಡುಗಬ್ಬಗಳೆನ್ನುತ್ತಾರೆ.

ಯಕ್ಷಗಾನ ಕಲೆಯ ಕುರಿತಾಗಿ ಆಳವಾದ ಚಿಂತನೆ ನಡೆಸಿದವರು ಗಣಪತಿರಾವ್ ಪಾಂಡೇಶ್ವರ್ ಅವರು. 1949ರಲ್ಲಿ ನಡೆದ ಶಿರಸಿಯ ಅಖಿಲ ಕರ್ನಾಟಕ ಯಕ್ಷಗಾನ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣ ಮಾಡಿದ್ದ ಪಾಂಡೇಶ್ವರ್‌ರು ಮುಂದೆ 1955ರಲ್ಲಿ ಬದಿಯಡ್ಕದಲ್ಲೂ ನಡೆದ ಸಮ್ಮೇಳನದಲ್ಲಿ ಅನೇಕ ಹೊಸ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಭರತನ ನಾಟ್ಯ ಶಾಸ್ತ್ರಕ್ಕೆ ಜನಪದ ರಂಗಭೂಮಿಯೇ ಮೂಲ ಎಂಬುದು ಇವರ ವಾದ. ಯಕ್ಷಗಾನದ ವೇಷಭೂಷಣ, ಕುಣಿತ ವೈವಿಧ್ಯಗಳಿಗೆಲ್ಲ ಭರತನ ನಾಟ್ಯಶಾಸ್ತ್ರದಲ್ಲಿ ಹೋಲಿಕೆಯಿದೆ ಎನ್ನುವ ಇವರು ಇದೊಂದು ದೇಸಿಕಲೆ. ಮುಂದೆ ಮಾರ್ಗಕಲೆಯಾಗಿ ಪರಿವರ್ತನೆಗೊಂಡಿದೆ ಎನ್ನುತ್ತಾರೆ. ಗುಂಡ್ಮಿ ಚಂದ್ರಶೇಖರ ಐತಾಳರು ಇವರನ್ನು ಬೆಳಕಿನ ಬೀಜ ಎಂದೇ ಕರೆದಿದ್ದಾರೆ. ಮಂಜೇಶ್ವರ ಗೋವಿಂದ ಪೈಗಳು ಕೂಡ ಯಕ್ಷಗಾನ ಕಲೆಯ ಕುರಿತಾಗಿ ಲೇಖನಗಳನ್ನು ಬರೆದಿದ್ದು, ತೆಂಕುತಿಟ್ಟು ಯಕ್ಷಗಾನದ ಮೇಲೆ ಕಥಕ್ಕಳಿಯ ಪ್ರಭಾವವನ್ನು ಉಲ್ಲೇಖಿಸುತ್ತಾರೆ. ಖ್ಯಾತವಿದ್ವಾಂಸರಾದ ಭೀಮರಾವ್ ಚಿಟಗುಪ್ಪಿಯವರು ತಮ್ಮ ಸಂಶೋಧನಾ ಪಂಚದಶಿಯಲ್ಲಿ ಯಕ್ಷಗಾನದ ಉಗಮವನ್ನು ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಕೊಂಡೊಯ್ಯುತ್ತಾರೆ. ಚಂದ್ರಪ್ರಭಾ ಪುರಾಣದಲ್ಲಿ ಬಂದಿರುವ ಏಕ್ಕಲಗಾಣದ ಪ್ರಸ್ತಾಪವೂ ಸಾಕಷ್ಟು ಚರ್ಚಿತವಾಗಿದೆ.

ಯಕ್ಷಗಾನ ಕಲೆಯ ಕುರಿತು ಬಂದ ಎರಡನೆಯ ಕೃತಿಯೆಂದರೆ ರಾಮಚಂದ್ರ ಭಟ್ ಹಾಸಣಗಿಯವರ 'ಯಕ್ಷನಾಟಕಗಳು'. 1950ರಲ್ಲಿ ಧಾರವಾಡದ ಪರ್ಣಕುಟಿ ಗ್ರಂಥಮಾಲೆಯಿಂದ ಹೊರಬಂದ ಈ ಕೃತಿಗೆ ಜಿ.ಆರ್. ಪಾಂಡೇಶ್ವರ್ ಅವರೇ ಮುನ್ನುಡಿ ಬರೆದಿದ್ದಾರೆ. ಸಂಸ್ಕೃತ ನಾಟಕದ ಪ್ರಭಾವ ಯಕ್ಷಗಾನದ ಮೇಲೆ ಇದೆ ಎಂಬುದೇ ಇವರ ಮುಖ್ಯವಾದ. ಅದಕ್ಕಾಗಿಯೇ ಯಕ್ಷನಾಟಕಗಳು ಎಂದು ಕರೆದಿದ್ದಾರೆ. ಕವಿರಾಜಮಾರ್ಗದಲ್ಲಿ ಹೇಳಿರುವ ನಾಳ್ಪಗರಣದ ಬಗ್ಗೆ ಪ್ರಸ್ತಾಪಿಸಿ, ನಾಡಿನ ಪಗರಣವೇ ಯಕ್ಷಗಾನ ಬಯಲಾಟವಾಯಿತು ಎನ್ನುತ್ತಾರೆ. ಯಕ್ಷಗಾನದ ಹುಟ್ಟಿನ ಬಗ್ಗೆ ಇದು ಗೊಂಬೆಯಾಟದ ಮೂಲದಿಂದ ಬಂದದ್ದು ಎಂಬುದು ನೂತನ

ಅಂಶವಾಗಿದೆ. ಇವರ ಪುಸ್ತಕದಲ್ಲಿ ಅಂದಿನ ಕಾಲದ ಯಕ್ಷಗಾನದ ಕಿರು ವಿವರಣೆಯಿದ್ದು, ಸಂಶೋಧನಾತ್ಮಕವಾಗಿದೆ. ಯಕ್ಷಗಾನದ ಹಾಸ್ಯಗಾರನ ಮೇಲೆ ಸಂಸ್ಕೃತ ನಾಟಕದ ಪ್ರಭಾವ ಢಾಳಾಗಿದೆ. ಈ ಕಾರಣ ಪದ್ಯಾನುಯತೆಯಿಂದ ಕೂಡಿದ 'ನಾಟಕ' ಎಂಬ ತೀರ್ಮಾನಕ್ಕೆ ಬರುತ್ತಾರೆ.

ಶಿವರಾಮಕಾರಂತರು ಯಕ್ಷಗಾನದ ಕುರಿತ ತಮ್ಮ ವಿಚಾರವನ್ನು ಮಂಡಿಸುವ ಸರಿಸುಮಾರಿಗೆ ದೇರಾಜೆಸೀತಾರಾಮಯ್ಯನವರು 'ತಾಳಮದ್ದಲೆ' ಕುರಿತಾಗಿ 'ಯಕ್ಷಗಾನ ವಿವೇಚನೆ' ಎಂಬ ಪುಸ್ತಕವನ್ನು ರಚಿಸಿದ್ದರು. ಅದೇ ರೀತಿ ಯಕ್ಷಗಾನ ಸಾಹಿತ್ಯದ ಕುರಿತಾಗಿ ಡಾ॥ ಕೆ.ಎಂ. ಕೃಷ್ಣರಾವ್ ಅವರು ಕಿರುಹೊತ್ತಿಗೆಯನ್ನು ಬರೆದಿದ್ದರು. ಇಲ್ಲಿ ಕೃಷ್ಣರಾವ್ ಅವರು ಯಕ್ಷಗಾನದ ಒಂದು ಅಂಗವಾದ ಸಾಹಿತ್ಯದ ಬಗ್ಗೆ ಚರ್ಚಿಸಿದ್ದಾರೆ. ಯಕ್ಷಗಾನವು ದಾಸಸಾಹಿತ್ಯದ ಒಂದು ಭಾಗ ಎನ್ನುವ ಇವರು ಪುರಂದರ ದಾಸರ ಮಗ ಮಧ್ವಮುನಿಪತಿದಾಸರು ಯಕ್ಷಗಾನ ಪ್ರಬಂಧಗಳನ್ನು ರಚಿಸಿರುವುದನ್ನು ಸಮರ್ಥನೆಗೆ ನೀಡುತ್ತಾರೆ.

ಹೀಗೆ ಕಾರಂತರು 'ಯಕ್ಷಗಾನ ಬಯಲಾಟ' ಕೃತಿ ರಚಿಸುವ ಕಾಲಕ್ಕಾಗಲೇ ಯಕ್ಷಗಾನಕಲೆಯ ಉಗಮ ವಿಕಾಸ ಹಾಗೂ ಸ್ವರೂಪದ ಬಗ್ಗೆ ವಿಭಿನ್ನ ನಿಲುವುಗಳು ವಿದ್ವತ್‌ವಲಯದಲ್ಲಿ ಚರ್ಚೆಗೆ ಒಳಪಟ್ಟಿದ್ದುವು. 1920ರ ಸುಮಾರಿಗೆ ಕಾಲೇಜು ಬಿಟ್ಟು ವೃತ್ತಿ ನಾಟಕ ಕಂಪೆನಿಗಳೊಂದಿಗೆ ಸಂಪರ್ಕವಿಟ್ಟುಕೊಂಡಿದ್ದ ಕಾರಂತರು ಗುಬ್ಬಿ ಕಂಪೆನಿಗೆ ಕಾನಕಾನಹಳ್ಳಿ ವರದಾಚಾರ್ಯರ ಕಂಪೆನಿಗೆ, ಹಲಸಂಗಿ ನಾಟಕ ಕಂಪೆನಿಗೆ ನಾಟಕ ಬರೆದುಕೊಟ್ಟಿದ್ದರು. ಕೆಲವು ಗೀತನಾಟಕಗಳನ್ನು ಆ ಕಾಲಕ್ಕಾಗಲೇ ಬರೆದು ಪ್ರದರ್ಶಿಸಿದ್ದ, ಅವರು 'ಮುಕ್ತದ್ವಾರ' ನಾಟಕಕ್ಕಾಗಿ ನರ್ತನವನ್ನು ಅಭ್ಯಾಸ ಮಾಡಿದ್ದರು. ಹೀಗೆ ಹತ್ತು ಹಲವು ಬಗೆಯ ಶಿಸ್ತಿನ ಅರಿವಿದ್ದ ಕಾರಂತರು ಯಕ್ಷಗಾನ ರಂಗವನ್ನು ಪ್ರವೇಶಿಸಿದ್ದು ವಿಶಿಷ್ಟ ಸಂದರ್ಭದ ಮೂಲಕ. ಪಾರ್ತಿಸುಬ್ಬ ಕವಿಯ ಕಾಲ ವಿಚಾರವೇ ಕಾರಂತರನ್ನು ಯಕ್ಷಗಾನದ ಸುಳಿಗೆ ತರಲು ಕಾರಣವಾಗುತ್ತದೆ. ಕಾರಂತರ ಪ್ರವೇಶವನ್ನು ಜಿ.ಆರ್. ತಾಂಡೇಶ್ವರ್ ಅವರು ಮಾರ್ಮಿಕವಾಗಿ ಹೀಗೆ ವಿಶ್ಲೇಷಿಸಿದ್ದಾರೆ. ಸೂರ್ಯ ಪ್ರವೇಶವಾದೊಡನೆ ತಾರೆಗಳು ಮಂಕಾಗುವಂತೆ ಅನೇಕ ವಿದ್ವಾಂಸರ ವಾದವಿವಾದಗಳು ಕಾರಂತರ ಪ್ರವೇಶದಿಂದ ಮಸುಕಾದವು ಎನ್ನುವುದು ಆ ಕಾಲದ ವಿದ್ವತ್ ವಲಯದಲ್ಲಿ ನಡೆಯುತ್ತಿದ್ದುದರ ಚಿತ್ರಣವಾಗಿದೆ.

ಶಿವರಾಮ ಕಾರಂತರು ಈಗಾಗಲೇ ಪ್ರಸ್ತಾಪಿತವಾದ ವಿಚಾರಗಳನ್ನು ವಿಭಿನ್ನ ಆಯಾಮದಲ್ಲಿ ಪರಿವೀಕ್ಷಿಸಿದರು. ಯಕ್ಷ, ಜಕ್ಕ ಎಂಬೆಲ್ಲ ವಾದಗಳನ್ನು ಒಪ್ಪದ ಕಾರಂತರು ಕರ್ನಾಟಕ ಸಂಗೀತ ಪದ್ಧತಿಯಂತೆ ಯಕ್ಷಗಾನವೂ ಒಂದು ಗಾನಶೈಲಿ ಎನ್ನುತ್ತಾರೆ. ಕರ್ನಾಟಕ ಸಂಗೀತ ಹುಟ್ಟುವ ಆಸುಪಾಸಿನಲ್ಲೇ ಈ ಶೈಲಿ ಇದ್ದಿರಬೇಕು ಎನ್ನುತ್ತಾರೆ. ಇದಕ್ಕೆ ಪೂರಕವಾಗಿ ಗೋವಿಂದ ದೀಕ್ಷಿತನ ಯಕ್ಷಗಾನದ ಉಲ್ಲೇಖವನ್ನು

ಸಮರ್ಥನೆಗೆ ನೀಡುತ್ತಾರೆ. 1957ರಲ್ಲಿ ಪ್ರಕಟಗೊಂಡ ಅವರ 'ಯಕ್ಷಗಾನ ಬಯಲಾಟ'ಕ್ಕೆ 1958ರಲ್ಲಿ ಕೇಂದ್ರ ನಾಟಕ ಅಕಾಡೆಮಿ ಪ್ರಶಸ್ತಿ, ಸ್ವಾಕ್ ಹೋಂನ ಡ್ಯಾನ್ಸ್ ಆರ್ಕೀವ್ಸ್‌ಗೆ ಸಂಬಂಧಿಸಿದ ಕಂಚಿನ ಪದಕ ದೊರೆಯಿತು. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಅವರ ಈ ಕೃತಿ ಸಮಗ್ರವಾಗಿದ್ದು ಇದುವರೆಗೆ ಬಂದದ್ದಕ್ಕಿಂತೆಲ್ಲ ಭಿನ್ನವಾಗಿದೆ. ಅವರ ಮೇರು ಪ್ರತಿಭೆಯ ಫಲ ಈ ಕೃತಿ. ಇವತ್ತು ಯಕ್ಷಗಾನದ ಬಗ್ಗೆ ಮಾತನಾಡಬೇಕಾದರೆ, ಯಾವುದೇ ಎಳೆಯಿಂದ ಚರ್ಚಿಸಬೇಕಾದರೂ ಈ ಕೃತಿಯನ್ನು ಆಧರಿಸಿಯೇ ಪ್ರಾರಂಭಿಸಬೇಕಾದ ಸ್ಥಿತಿಯನ್ನು ಕಾರಂತರು ನಿರ್ಮಿಸಿದ್ದಾರೆ. ಯಕ್ಷಗಾನ ಕಲೆಯ ಉಗಮ ವಿಕಾಸದ ಬಗ್ಗೆ ಹೊಸವಿಚಾರವೊಂದನ್ನು ಕಾರಂತರು ಇಲ್ಲಿ ನೀಡುತ್ತಾರೆ. ಬಳ್ಳಾರಿ ಜಿಲ್ಲೆಯ ಕುರುಗೋಡಿನ ಸೋಮಸಮುದ್ರದ ಲಕ್ಷ್ಮೀನಾರಾಯಣ ದೇವಾಲಯ ದಲ್ಲಿನ ಶಿಲಾಶಾಸನದಲ್ಲಿ ಉಕ್ತವಾದ 'ತಾಳಮದ್ದಲೆಸೇವೆ'ಯನ್ನು ಆಧರಿಸಿ ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾರೆ. ಯಕ್ಷಗಾನವೂ ತಾಳಮದ್ದಲೆಯ ಸೇವೆಯ ಮಾದರಿಯಲ್ಲೇ ಆರಾಧನೆಯ ಅಂಗವಾಗಿ ಬೆಳೆಯಿತು ಎನ್ನುತ್ತಾರೆ. ಯಕ್ಷಗಾನದ ಪ್ರದರ್ಶನದಲ್ಲಿ ಬರುವ 'ರಾಮಕೃಷ್ಣರು ಮನೆಗೆ ಬಂದರು ಬಾಗಿಲು ತೆರೆಯಿರೋ' ಎಂಬ ಪದ್ಯವೂ ಕೂಡ ಲೀಲಾನಾಟಕದ ರಂಗಸ್ಥಳವಿದು ಎಂಬುದನ್ನು ತೋರಿಸುತ್ತದೆ ಎನ್ನುತ್ತಾರೆ. ಯಕ್ಷಗಾನವನ್ನು ಗಾನಶೈಲಿ ಎಂದು ಸಾಧಾರಣವಾಗಿ ಹೇಳಿ ವಿವಿಧ ಭಾಗವತರುಗಳ ಮೂಲಕ ವಿಭಿನ್ನರಾಗಗಳನ್ನು ಗುರುತಿಸಿ ದಾಖಲಿಸಿದ್ದಾರೆ. ಯಕ್ಷಗಾನವು ಜಾನಪದೀಯ ರಂಗಭೂಮಿಯಿಂದ ವಿಕಸಿತವಾದ ಸಾಂಪ್ರದಾಯಿಕ ರಂಗಭೂಮಿ ಎಂಬುದನ್ನು ಸಮರ್ಥಿಸಲು ದೇಶದ ವಿವಿದ ಪಾರಂಪರಿಕ ರಂಗಕಲೆಗಳ ಒಳನೋಟಗಳನ್ನು ನೀಡುತ್ತಾರೆ. ಕೂಚೂಪುಡಿ ಸಾಂಪ್ರದಾಯವೂ ಯಕ್ಷಗಾನದಿಂದ ಪ್ರಭಾವಿತಗೊಂಡಿರಬೇಕೆಂದು ಹೇಳುತ್ತಾ ಸಿದ್ಧೇಂದ್ರಯತಿಯ ಕುರಿತಾದ ಹೊಸ ವಿಚಾರಗಳನ್ನು ತಿಳಿಸುತ್ತಾರೆ. ಯಕ್ಷಗಾನದ ನರ್ತನ ಶೈಲಿಯಲ್ಲಿ ನಾಗಾರಾಧನೆಯ ಪ್ರಭಾವವಿರುವುದನ್ನು ತೋರಿಸಿಕೊಡುತ್ತಾರೆ. ಯಕ್ಷಗಾನದ ವೇಷಭೂಷಣಗಳ ಬಗ್ಗೆ, ಅವುಗಳ ಸುಧಾರಣೆಯ ಬಗ್ಗೆ ಅಧಿಕೃತವಾದ ಮಾಹಿತಿಗಳನ್ನು ಈ ಕೃತಿಯಲ್ಲಿ ಕಾಣಬಹುದು. ಯಕ್ಷಗಾನ ಪ್ರಸಂಗ ಸಾಹಿತ್ಯದ ಬಗ್ಗೆ, ಪ್ರಸಂಗಕಾರರ ಬಗ್ಗೆ ಕೂಡ ಕಾರಂತರ ವಿಚಾರಧಾರೆ ಅವರ ಯಕ್ಷಗಾನ ಬಯಲಾಟದಲ್ಲಿ ಬಂದಿದೆ. ಯಕ್ಷಗಾನದ ಕುರಿತಾದ ಅತ್ಯಂತ ಅಧಿಕೃತ ಆಧಾರ ಗ್ರಂಥವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಯಕ್ಷಗಾನ ಆಸಕ್ತರ ಪಾಲಿಗೆ ಈ ಕೃತಿ 'ಬೈಬಲ್' ಇದ್ದಂತೆ.

ಶಿವರಾಮ ಕಾರಂತರ ಹೆಚ್ಚಿನ ವಿಚಾರಗಳನ್ನು ಅದರಲ್ಲೂ ಪ್ರಮುಖ ಕವಿ ಯೊಬ್ಬನ ಬಗ್ಗೆ ಅವರು ನೀಡಿದ ವಿವರಗಳನ್ನು ಖಡಾಖಂಡಿತವಾಗಿ ವಿರೋಧಿಸಿ ದವರೆಂದರೆ ಖ್ಯಾತ ವಿದ್ವಾಂಸರಾದ ಕುಕ್ಕಿಲಕೃಷ್ಣಭಟರು. ಇವರು ಈ ವಾದವಿವಾದ ರಂಗವನ್ನು ಪ್ರವೇಶಿಸುವ ಕಾಲಕ್ಕಾಗಲೇ ದಕ್ಷಿಣ ಕನ್ನಡ ಜಿಲ್ಲೆಯ ವಿದ್ವಾಂಸರುಗಳಲ್ಲಿ ಕಾರಂತರ ಪರ ವಿರೋಧದ ಎರಡು ಗುಂಪುಗಳು ಹುಟ್ಟಿಕೊಂಡಿದ್ದವು. ಆಗಿನ

ಬರಹಗಳೆಲ್ಲಾ ಪಾರ್ತಿಸುಬ್ಬನ ಪರ–ವಿರೋಧ, ತೆಂಕುತಿಟ್ಟಿನ ಪರ–ವಿರೋಧ ಎಂಬೆಲ್ಲಾ ರೀತಿಯ ಬಣ್ಣಗಳನ್ನು ತುಂಬಿಸಿಕೊಂಡಿದ್ದವು. ಶಿವರಾಮ ಕಾರಂತರು ಪಾರ್ತಿಸುಬ್ಬನ ಬಗ್ಗೆ ಹೇಳಿದ ವಿಚಾರಗಳೇ ಈ ಎಲ್ಲಾ ವಾದವಿವಾದಕ್ಕೆ ಮೂಲ ಕಾರಣವಾಗಿತ್ತು.

ಯಕ್ಷಗಾನದ ಮೂಲವನ್ನು ಶಾಸ್ತ್ರೀಯ ಪರಂಪರೆಯ ಮೂಲಕ ಹುಡುಕ ಹೊರಟ ಕುಕ್ಕಿಲರು ಯಕ್ಷಗಾನವು ಮೂಲತಃ ಒಂದು ಪ್ರಬಂಧವಾಚಿ ಶಬ್ದವೆಂತಲೂ, ಈ ರಂಗಪ್ರಕಾರವು ನಾಟ್ಯ ಶಾಸ್ತ್ರ ಪರಂಪರೆಯ ಮೂಲಕವೇ ಅಸ್ತಿತ್ವಕ್ಕೆ ಬಂತೆಂದು ವಾದಿಸಿದರು. ಕಾರಂತರು ಹೇಳುವ ಯಕ್ಷಗಾನ ಒಂದು ಗಾನಶೈಲಿ ಎಂಬುದನ್ನು ಒಪ್ಪದ ಕೃಷ್ಣಭಟ್‌ರು ಸಭಾಲಕ್ಷಣದ ವಿವರಗಳು ನಾಟ್ಯಶಾಸ್ತ್ರದ ಪರಂಪರೆಗೆ ಹೊಂದಿಕೊಂಡಿದ್ದು ಯಕ್ಷಗಾನ ಒಂದು ಶಾಸ್ತ್ರೀಯವಾದ ಕಲೆ ಎನ್ನುತ್ತಾರೆ. ಯಕ್ಷ ಎಂದರೆ ಪೂಜೆ, ಗಾನ ಎಂದರೆ ರಚನೆ ಎಂದು ಹೇಳಿ ಪೂಜೆಗೆ ಇರುವ ರಚನೆ ಎನ್ನುತ್ತಾ ಮುಳಿಯರ ಏಕ್ಕಲ ಗಾಣ ವಾದವನ್ನೂ ಒಪ್ಪುವುದಿಲ್ಲ. ಯಕ್ಷಗಾನ ಸಾಹಿತ್ಯ ಹಾಗೂ ರಂಗ ರೂಪಗಳೆರಡು ಆಂಧ್ರ ಮೂಲದಿಂದ ಬಂದಿದೆ ಎನ್ನುತ್ತಾ ಬಡಗು ತಿಟ್ಟಿನ ಮೇಲೆ ಆಂಧ್ರದ ಪ್ರಭಾವ, ತೆಂಕುತಿಟ್ಟಿನ ಮೇಲೆ ಮಲೆಯಾಳಂ ರಂಗ ಭೂಮಿಯ ಪ್ರಭಾವವಿರುವುದನ್ನು ಗುರುತಿಸುತ್ತಾರೆ. ಅವರು ಪಾರ್ತಿಸುಬ್ಬನ ಬಗ್ಗೆ ಸಮಗ್ರ ಅಧ್ಯಯನ ನಡೆಸಿ, ಆತನ ಪ್ರಸಂಗಗಳನ್ನು ಸಂಪಾದಿಸಿರುವುದು, ಅದು ಮೈಸೂರು ವಿಶ್ವವಿದ್ಯಾಲಯಗಳ ಮೂಲಕ ಪ್ರಕಟವಾಗಿರುವುದು ಒಂದು ಮೌಲಿಕವಾದ ಕೊಡುಗೆಯಾಗಿದೆ.

ಯಕ್ಷಗಾನ ಉಗಮ ವಿಕಾಸದ ಕುರಿತಾದ ಸಂಶೋಧನಾತ್ಮಕ ಬರಹಗಳಲ್ಲಿ ಇನ್ನೂ ಅನೇಕ ವಿದ್ವಾಂಸರು ಭಾಗವಹಿಸಿದ್ದಾರೆ. ಅವರಲ್ಲಿ ಪ್ರಮುಖರೆಂದರೆ 'ಸಂಶೋಧನಾ ಪಂಚದರ್ಶಿ'ಯನ್ನು ಪ್ರಕಟಿಸಿರುವ ಭೀಮರಾವ್ ಚಿಟಗುಪ್ಪಿಯವರು. ವಿಜಯನಗರ ಸಾಮ್ರಾಜ್ಯದ ಕಾಲದಲಿ ನಡೆದ ಸಾಂಸ್ಕೃತಿಕ ಪುನರುತ್ಥಾನದ ಕಾಲದಲ್ಲೇ ಇಂದಿನ ಯಕ್ಷಗಾನದ ಸ್ವರೂಪ ಅದಕ್ಕೆ ಲಭಿಸಿತು ಎನ್ನುವ ಚಿಟ್ಟಗುಪ್ಪಿಯವರು ಯಕ್ಷ ಎನ್ನುವುದು ತಾಳಕ್ಕೆ ಸಂಬಂಧಿಸಿದ ಪದ ಎನ್ನುತ್ತಾ ಯಕ್ಷಾಂದೋಲನಕ್ಕೆ ಯಕ್ಷಗಾನಕ್ಕೂ ಸಂಬಂಧವನ್ನು ಕಲ್ಪಿಸುತ್ತಾರೆ. ಕುಬುಣೂರು ಬಾಲಕೃಷ್ಣರಾವ್ ಅವರು ಯಕ್ಷಗಾನದ ಪರಿಚಯವನ್ನು ತಮ್ಮ 'ಯಕ್ಷಗಾನ'ದ ಮೂಳಕ ಮಾಡಿಸಿದ್ದರು. ಈಚೆಗೆ ಶತವಧಾನಿ ಡಾ॥ ಆರ್.ಗಣೇಶ್‌ರವರು ದೇಸಿ ಹಾಗೂ ಮಾರ್ಗದ ವಿಚಾರ ವನ್ನು ಎತ್ತಿ ಯಕ್ಷಗಾನದ ಕುರಿತಾದ ಸರ್ವಾಂಗೀಣ ವಿಚಾರಗಳನ್ನು ಚರ್ಚಿಸಿದ್ದಾರೆ. ಇದೇರೀತಿ ಡಾ॥ ಕೆ.ಚಿನ್ನಪ್ಪಗೌಡರು ಭೂತಾರಾಧನೆಯ ಹಿನ್ನೆಲೆಯನ್ನು ಯಕ್ಷಗಾನದಲ್ಲಿ ಕಂಡಿದ್ದಾರೆ. ಶ್ರೀ ಕ.ವೆಂ.ರಾಜಗೋಪಾಲ ಅವರು ಬೌದ್ಧರ ಯಕ್ಷಾರಾಧನೆಯೇ ಯಕ್ಷಗಾನಕ್ಕೆ ಮೂಲ ಎನ್ನುತ್ತಾರೆ. ಡಾ॥ ಜಿ.ಎಸ್.ಹೆಗಡೆಯವರು ತಮ್ಮ ಪ್ರೌಢ ಪ್ರಬಂಧ ವಾದ 'ಯಕ್ಷಗಾನ ಮತ್ತು ಅದರ ಸಂಸ್ಕೃತ ಮೂಲ' ಎನ್ನುವುದರಲ್ಲಿ ಯಕ್ಷಗಾನದ ಮೂಲವನ್ನು ಸಂಸ್ಕೃತದಲ್ಲಿ ಹುಡುಕಿದ್ದಾರೆ. ಡಾ॥ ಮೋಹನ್

ಕುಂಟಾರ್ ಅವರು ಯಕ್ಷಗಾನದ ಪೂರ್ವರಂಗ ಹಾಗೂ ಉತ್ತರ ರಂಗವನ್ನು ಗಮನಿಸಿ ದೇವಸ್ಥಾನದ ಮೂಲದಿಂದ ಮನರಂಜನೆಗಾಗಿ ಪ್ರಚುರವಾಯಿತು ಎನ್ನುತ್ತಾರೆ. ಹೀಗೆ ಯಕ್ಷಗಾನ ಕಲೆಯ ಕುರಿತಾಗಿ ಅಸಂಖ್ಯ ವಿದ್ವಾಂಸರು ಅಸಂಖ್ಯ ವಿಚಾರಗಳನ್ನು ವಿಭಿನ್ನ ಬಗೆಯಲ್ಲಿ ನಮ್ಮ ಮುಂದೆ ಇರಿಸಿದ್ದಾರೆ.

ಯಕ್ಷಗಾನವೆಂಬುದು ಒಂದು ಸಮಷ್ಠಿ ಕಲೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಯಕ್ಷಗಾನದ ಸಂಗೀತದ ಬಗ್ಗೆ, ಅದರ ಪರಂಪರೆಯ ಬಗ್ಗೆ ಚರ್ಚಿಸಿದವರಲ್ಲಿ ಮುಖ್ಯರೆಂದರೆ ವಿದ್ವಾಂಸರಾದ ಎಂ.ರಾಜಗೋಪಾಲ ಆಚಾರ್ಯ, ಶ್ರೀ ಈಶ್ವರಯ್ಯ, ಶ್ರೀನಿವಾಸ ಉಡುಪ, ಡಾ॥ ರಾಘವ ನಂಬಿಯಾರ್, ಡಾ॥ ಆರ್. ಗಣೇಶ್ ಮುಂತಾದವರು ಮುಖ್ಯರು. 1971ರಲ್ಲಿ ಪ್ರಾರಂಭವಾದ ಉಡುಪಿಯ ಯಕ್ಷಗಾನ ಕೇಂದ್ರದ ಮೂಲಕ ಡಾ॥ ಕಾರಂತರು ಯಕ್ಷಗಾನದ ರಾಗಗಳ ಕುರಿತು ಸಾಕಷ್ಟು ಕಮ್ಮಟಗಳನ್ನು ನಡೆಸಿ, ರಾಗಗಳ ಮೂಲ ರೂಪವನ್ನು ಹಿರಿಯ ಭಾಗವತರಿಂದ ಹಾಡಿಸಿ, ದಾಖಲೆ ಮಾಡಿಕೊಂಡಿದ್ದರು. ಇದರ ಮುಂದುವರಿಕೆಯ ಪ್ರಯತ್ನವೆಂಬಂತೆ ಡಾ॥ ರಾಘವ ನಂಬಿಯಾರ್ ಅವರ 'ಹಿಮ್ಮೇಳ' ಎಂಬ ಪ್ರೌಢಪ್ರಬಂಧವು ಹಿಮ್ಮೇಳದ ಕುರಿತಾದ ಎಲ್ಲಾ ವಿಚಾರಗಳನ್ನು ಒಳಗೊಂಡಿದೆ. ಭಾಗವತರುಗಳಾದ ನಾರ್ಣಪ್ಪ ಉಪ್ಪೂರರು ಹಾಗೂ ನೀಲಾವರ ರಾಮಕೃಷ್ಣಯ್ಯ ಮುಂತಾದವರೆಲ್ಲ ಬರೆದ ಪುಸ್ತಕಗಳು ಅಧ್ಯಯನ ಯೋಗ್ಯವಾಗಿದೆ.

ಯಕ್ಷಗಾನದ ವೇಷ, ಭೂಷಣಗಳ ಕುರಿತಾಗಿ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ'ದಲ್ಲಿ ಸಾಕಷ್ಟು ವಿಚಾರಗಳನ್ನು ಚರ್ಚಿಸಿದ್ದಾರೆ. ಇದರ ಮುಂದುವರಿಕೆ ಯೆಂಬಂತೆ ಉದ್ಯಾವರ ಮಾಧವಾಚಾರ್ಯ, ಅಡೂರು ಶ್ರೀಧರರಾವ್, ಮುಳಿಯ ಮಹಾಬಲ ಭಟ್, ಮಂಟಪ ಪ್ರಭಾಕರ ಉಪಾಧ್ಯ, ಡಿ.ಕೆ. ಸುಬ್ಬಣ್ಣ ಭಟ್ಟ, ಹೊಸ್ತೋಟ ಮಂಜುನಾಥ ಭಾಗವತ ಮುಂತಾದವರು ಯಕ್ಷಗಾನದ ವೇಷಗಾರಿಕೆಯ ಬಗ್ಗೆ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ.

ಯಕ್ಷಗಾನದ ಕುಣಿತದ ಶೈಲಿಯ ಕುರಿತು ಕೂಡ ಅನೇಕ ಕೃತಿಗಳು ಬಂದಿವೆ. ಶತಾವಧಾನಿ ಡಾ॥ ಆರ್. ಗಣೇಶರ 'ಯಕ್ಷರಾತ್ರಿ'ಯಲ್ಲಿ ಯಕ್ಷಗಾನದೊಂದಿಗೆ ಇರುವ ಇತರ ಸಂವಾದಿ ಕಲೆಗಳಲ್ಲಿನ ನರ್ತನದೊಂದಿಗಿನ ಹೋಲಿಕೆ ವ್ಯತ್ಯಾಸಗಳು ನಿರೂಪಿತವಾಗಿದೆ. ಕೆರೆಮನೆ ಮಹಾಬಲ ಹೆಗಡೆ, ಹೊಸ್ತೋಟ ಮಂಜುನಾಥ ಭಾಗವತ, ಕೆ.ಗೋವಿಂದ ಭಟ್, ಸಂಜೀವ ಸುವರ್ಣ ಮುಂತಾವರೆಲ್ಲರು ಯಕ್ಷಗಾನದ ಕುಣಿತದ ಬಗ್ಗೆ ತಮ್ಮ ವಿಚಾರಲಹರಿಗಳನ್ನು ಹರಿಯಬಿಟ್ಟಿದ್ದಾರೆ. ಡಾ॥ ಪದ್ಮಾಸುಬ್ರಹ್ಮಣ್ಯ, ಶ್ರೀಮತಿ ಸುಂದರಿ ಸಂತಾನಂ ಮುಂತಾದ ಭರತನಾಟ್ಯದ ನೃತ್ಯಗುರುಗಳು ಕೂಡ ಯಕ್ಷಗಾನದ ನರ್ತನ ವೈಶಿಷ್ಯವನ್ನು ಮೆಚ್ಚಿಕೊಂಡಿದ್ದಾರೆ. ಯಕ್ಷಗಾನ-ನಾಟ್ಯಶಾಸ್ತ್ರದ ತೌಲನಿಕ ಸಮೀಕ್ಷೆಯಾಗಿ ಭಾರತೀಯ ರಂಗಸಂಪ್ರದಾಯವೆಂಬ ಪುಸ್ತಕ ಕೂಡ ಉಡುಪಿಯ ಯಕ್ಷಗಾನ ಕೇಂದ್ರದಿಂದ ಪ್ರಕಟವಾಗಿದೆ.

ಯಕ್ಷಗಾನ ಪ್ರಸಂಗಕಾರರ ಕುರಿತಾಗಿ ಮೊದಲ ಬಂದ ಲೇಖನವೆಂದರೆ 1924ರಲ್ಲಿ ಐರೋಡಿ ಶಿವರಾಮಯ್ಯನವರು ಹಟ್ಟಿಯಂಗಡಿ ರಾಮಭಟ್ಟನ ಕುರಿತಾಗಿ ಬರೆದ ಲೇಖನವಾಗಿದೆ. ಮುಂದೆ ಮುಳಿಯರ 'ಪಾರ್ತಿಸುಬ್ಬ' ಯಕ್ಷಗಾನ ಕವಿಯ ಕುರಿತಾದ ಮೊದಲ ಪುಸ್ತಕವಾಗಿದೆ. ಅಲ್ಲಿ ಬಂದ ಕವಿಯ ಕಾಲವಿಚಾರವೇ ಕಾರಂತರ ಸಂಶೋಧನೆಗೆ ಕಾರಣವಾಗಿ ಮುಂದೆ ಅಸಂಖ್ಯ ಲೇಖನಗಳು ಬಂದವು. ಗೋವಿಂದ ಪೈ, ಡಿ.ವಿ.ಹೊಳ್ಳ, ಬೈಕಾಡಿ ವೆಂಕಟಕೃಷ್ಣರಾವ್, ಸಿರಿಬಾಗಿಲು ವೆಂಕಪ್ಪಯ್ಯ, ಈಶ್ವರ ಶ್ಯಾನುಭಾಗ ಮುಂತಾದವರೆಲ್ಲರು ಕೊಡುಗೆಗಳನ್ನು ನೀಡಿದ್ದಾರೆ. ಯಕ್ಷಗಾನ ಪ್ರಸಂಗ ಸಾಹಿತ್ಯದ ಬಗ್ಗೆ ಬಂದ ಮೊದಲ ಪ್ರೌಢ ಪ್ರಬಂಧವೆಂದರೆ ಡಾ॥ ಆನಂದ ರಾಮ ಉಪಾಧ್ಯರ 'ಯಕ್ಷಗಾನ ಮಹಾಭಾರತ ಪ್ರಸಂಗಗಳು' (1990) ಮುಂದೆ ಡಾ॥ ಪಾದೇಕಲ್ಲು ವಿಷ್ಣುಭಟ್, ಡಾ॥ ಜಿ.ಎಸ್.ಭಟ್, ಡಾ॥ ಪ್ರಭಾಕರ ಜೋಷಿ ಮುಂತಾದವರೆಲ್ಲ ಪ್ರೌಢಪ್ರಬಂಧಗಳನ್ನು ರಚಿಸಿದ್ದಾರೆ. ಯಕ್ಷಗಾನ ಕುರಿತಾದ ಅನೇಕ ವಿಮರ್ಶಾ ಸಂಕಲನಗಳು ಬಂದಿವೆ. ಅಮೃತಸೋಮೇಶ್ವರ, ಕೇಶವ ಭಟ್, ಡಾ॥ ಪುರುಷೋತ್ತಮ ಬಿಳಿಮಲೆ, ಡಾ॥ ಪ್ರಭಾಕರ್ ಜೋಷಿ, ಡಾ॥ ರಾಘವ ನಂಬಿಯಾರ್, ಡಿ.ಎಸ್.ಶ್ರೀಧರ್, ಡಾ॥ ಜಿ.ಎಸ್. ಭಟ್, ಡಾ॥ ಮೋಹನ ಕುಂಟಾರ್, ಉದಯಕುಮಾರ್ ಶೆಟ್ಟಿ, ಚಂದ್ರಶೇಖರ ದಾಮ್ಲೆ, ದೇವುಹನೇಹಳ್ಳಿ, ಗುಂಡ್ಮಿ ಚಂದ್ರಶೇಖರ್ ಐತಾಳ್, ಜಿ.ಕೆ ಐತಾಳ್, ಅ.ಗ. ಅಲ್ಸೆ, ಮು. ಶ್ರೀನಿವಾಸ್ ಭಟ್, ಲಕ್ಷ್ಮೀಶ ತೋಳ್ಪಾಡಿ, ಪ್ರೊ॥ ಬಿ.ಎಚ್.ಶ್ರೀಧರ್, ಕೇಶವ ಉಚ್ಚಿಲ, ಟಿ.ಕೇಶವ ಭಟ್, ಮನೋಹರ ಎಸ್. ಕುಂದರ್ ಮುಂತಾದವರೆಲ್ಲ ಯಕ್ಷಗಾನದ ಕುರಿತಾಗಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ.

ಯಕ್ಷಗಾನ ಕಲಾವಿದರ ಕುರಿತಾದ ಅಭಿನಂದನಾ ಗ್ರಂಥಗಳ ಮಹಾಪೂರವೇ ಬಂದಿದೆ. ಇದರೊಂದಿಗೆ ಕಲಾವಿದರೇ ತಮ್ಮ ಆತ್ಮಕಥನಗಳ ಮೂಲಕ ಯಕ್ಷಗಾನ ಕಲೆಯ ಕುರಿತಾದ ಅಸಂಖ್ಯ ಒಳನೋಟಗಳನ್ನು ನೀಡಿದ್ದಾರೆ. ಯಕ್ಷಗಾನ ಮಕರಂದ (ಪೊಳಲಿ ಶಂಕರ ನಾರಾಯಣ ಶಾಸ್ತ್ರಿ), ಸ್ವರ್ಣಕಮಲ (ಅರ್ಕುಳ ಸುಬ್ರಾಯ ಆಚಾರ್), ರಂಗವೈಖರಿ (ಮಾಂಬಾಡಿ ನಾರಾಯಣ ಭಾಗವತ), ಆಶುವೈಭವ (ಶೇಣಿ ಸಾಮಗ), ಯಕ್ಷಗಾನ ಮತ್ತು ನಾನು (ಶೇಣಿ ಗೋಪಾಲಕೃಷ್ಣಭಟ್) ಒಡ್ಡೋಲಗ (ಸಂಸ್ಮರಣ ಗ್ರಂಥ), ಮದ್ದಳೆಯ ಮಾಯಾಲೋಕ (ಹಿರಿಯಡ್ಕ ಗೋಪಾಲರಾವ್) ಕುರಿಯ ಕುಂದಣ (ಕುರಿಯ ವಿಠಲಶಾಸ್ತ್ರಿ) ಕೆರೆಮನೆ ಶಿವರಾಮ ಹೆಗಡೆ, ಕುಟಣೂರು ಸ್ಮೃತಿ, ಮಂದಾರ ಮುಂತಾದ ಗ್ರಂಥಗಳು ಯಕ್ಷಗಾನ ಸಂಶೋಧನೆಗೆ ಮಹತ್ವದ ಕೊಡುಗೆ ನೀಡಿವೆ.

ಯಕ್ಷಗಾನ ಛಂದಸ್ಸಿನ ಕುರಿತು ಮೊದಲಿಗೆ (1964) ಹೊತ್ತಿಗೆಯೊಂದನ್ನು ತಂದವರು ಕ.ಪು. ಸೀತಾರಾಮ ಕೆದಿಲಾಯರು. ಇವರ ಯಕ್ಷಗಾನ ಛಂದೋ ವಿವೇಕ ಯಕ್ಷಗಾನದಲ್ಲಿ ಬಳಕೆಯಾದ ಛಂದಸ್ಸಿನ ಪ್ರಕಾರಗಳ ವಿವರವಿದೆ. ಮುಂದೆ

ಈ ವಿಭಾಗದಲ್ಲಿ ಉತ್ತಮ ಕೊಡುಗೆಗಳನ್ನು ನೀಡಿದವರು ಸೀಮಂತೂರು ನಾರಾಯಣ ಶೆಟ್ಟಿಯವರು. ಇವರಿಗೆ 1999ರಲ್ಲಿ ಯಕ್ಷಗಾನ ಛಂದಸ್ಸಿಗಾಗಿ ಡಿ.ಲಿಟ್. ಬಂದಿತು. ಡಾ॥ ಕಬ್ಬಿನಾಲೆ ವಸಂತ ಭಾರಧ್ವಾಜರು ಕೂಡ ಯಕ್ಷಗಾನ ಛಂದಸ್ಸಿನಲ್ಲಿ ಡಾಕ್ಟರೇಟ್ ಮಾಡಿದವರು (1996). ಯಕ್ಷಗಾನ ಕೇಂದ್ರ, ಉಡುಪಿಯವರು ಯಕ್ಷಗಾನ ಕುರಿತಾಗಿ ಅಸಂಖ್ಯ ಕೃತಿಗಳನ್ನು ಪ್ರಕಟಿಸಿದ್ದಾರೆ. ಕವಿಕಾವ್ಯವಿಹಾರ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಯಕ್ಷಗಾನಪ್ರಭಾ (ತಾಳ್ತಜೆ ಕೃಷ್ಣಭಟ್) ಇವೆಲ್ಲ ಮುಖ್ಯವಾದವುಗಳು. ಮೈಸೂರು ವಿಶ್ವವಿದ್ಯಾಲಯದ ಪ್ರಕಟಣೆಗಳಾದ ಯಕ್ಷಗಾನ (ಡಾ॥ ಶಿವರಾಮ ಕಾರಂತ), ಪಾರ್ತಿಸುಬ್ಬನ ಯಕ್ಷಗಾನಗಳು (ಕುಕ್ಕಿಲಕೃಷ್ಣಭಟ್), ಐಬಿಎಚ್ ಪ್ರಕಟಣೆ ಯಾದ 'ಯಕ್ಷಗಾನ' (ಸಂ.ವಿ.ಸೀತಾರಾಮಯ್ಯ), ಸಾಲಿಗ್ರಾಮ ಮಕ್ಕಳ ಮೇಳದ ಪ್ರಕಟಣೆಯಾದ 'ಸಿರಿಸಂಪದ', ಮುಂಬಯಿಯ ಪದವೀಧರ ಯಕ್ಷಗಾನ ಸಮಿತಿ ಯವರ ಪ್ರಕಟಣೆಗಳಾದ 'ಸಂಸ್ಮರಣಾ ಪ್ರಸಂಗ ಮಾಲಿಕೆ' (ಕಟೀಲು ಶ್ರೀ ಗೋಪಾಲಕೃಷ್ಣ ಆಸ್ರಣ್ಣನವರ ಸ್ಮೃತಿಯಲ್ಲಿ) ಪುಸ್ತಕಗಳು ಯಕ್ಷಗಾನದ ಕುರಿತಾದ ಸಾಹಿತ್ಯದ ಭಾಗವನ್ನು ಶ್ರೀಮಂತಗೊಳಿಸಿವೆ.

ಈಗ ಯಕ್ಷಗಾನ ಕೇಂದ್ರ, ಉಡುಪಿ ಹಾಗೂ ಮಂಗಳೂರು ವಿಶ್ವ ವಿದ್ಯಾಲಯದ 'ಯಕ್ಷಗಾನ ಅಧ್ಯಯನ ಪೀಠ' ಅಸಂಖ್ಯ ಕೃತಿಗಳನ್ನು ಹೊರತರುತ್ತಿವೆ. ಹವ್ಯಾಸಿ ಸಂಘಸಂಸ್ಥೆಗಳು ಕೂಡ ಹೊಸ ಹೊಸ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಯಕ್ಷರಂಗ, ಕಣಿಪುರ, ಬಲ್ಲಿರೇನಯ್ಯ, ಯಕ್ಷಪ್ರಭಾ ಎಂಬ ವಿಶಿಷ್ಟ ಮಾಸಪತ್ರಿಕೆಗಳು ಪ್ರಕಟಗೊಳ್ಳುತ್ತಿವೆ. ಅಲ್ಲೂ ಯಕ್ಷಗಾನೀಯ ಲೇಖನಗಳು ಸಾಕಷ್ಟು ಪ್ರಕಟವಾಗುತ್ತಿವೆ. ಹೀಗೆ ವೈವಿಧ್ಯಮಯವಾದ, ಆಳವಾದ, ವಿಚಾರಗಳು ಎಲ್ಲ ಕಡೆ ಯಿಂದಲೂ ತೂರಿಬರುತ್ತಿವೆ. ಅಧ್ಯಯನಶೀಲರಿಗೆ 'ಯಕ್ಷ ಗಾನ' ಒಂದು ಆಡುಂಬೊಲ ವಾಗಿದೆ. ಯಕ್ಷಗಾನ ಬಾಳಿ, ಬೆಳೆಯಲು ಇದೆಲ್ಲ ಸಹಕಾರಿಯಾಗಿದೆ.

(ರಚನೆ : 2014)

■

ಯಕ್ಷಗಾನ ಮೂಡಲಪಾಯ

ಯಕ್ಷಗಾನ ದ್ರಾವಿಡಮೂಲದಿಂದ ಹೊರಟ ರಂಗಕಲೆಯಾಗಿದ್ದು ಕರ್ನಾಟಕ ಹಾಗೂ ಆಂಧ್ರದಲ್ಲಿ ಇದೇ ಹೆಸರಿನಿಂದ ಖ್ಯಾತಿಗೊಂಡಿದೆ. ಇದಕ್ಕೆ ಸಂವಾದಿಯಾದ ಕಲೆಗಳು ಸಾಕಷ್ಟಿದ್ದು ಅವುಗಳ ಆಂತರ್ಯದಲ್ಲಿ ಒಂದಿಲ್ಲೊಂದು ಬಗೆಯ ಸಾಮ್ಯತೆಯ ಸರಪಣಿಯನ್ನು ಕಾಣಬಹುದು. ನಮ್ಮ ಕರ್ನಾಟಕದ ಯಕ್ಷಗಾನ, ತಮಿಳುನಾಡಿನ ತೆರಕ್ಕೂತು, ಕೇರಳದ ಕೂಡಿಯಾಟ್ಟಂ, ಗುಜರಾತಿನ ಭವಾಯಿ, ಬಂಗಾಳದ ಜಾತ್ರಾ, ಆಂದ್ರದ ವಿಧಿನಾಟಕಮು, ಅಸ್ಸಾಮಿನ ಅಂಕಿಯಾನೆಟ್ ಮುಂತಾದವೆಲ್ಲಾ ಆಯಾಯ ರಾಜ್ಯದ ವಿಶಿಷ್ಟ ರಂಗ ಪ್ರಕಾರಗಳಾಗಿ ರೂಪುಗೊಂಡಿವೆ. ಭಾಷೆಯ ಮುಸುಕನ್ನು ಸ್ವಲ್ಪ ಸರಿಸಿ, ಒಳಗೆ ಇಣುಕಿದರೆ ಈ ಕಲೆಗಳ ಆಂತರ್ಯದಲ್ಲಿರುವ ರಂಗ\ತಂತ್ರದಲ್ಲಿ ಏಕಸೂತ್ರವಿರುವುದನ್ನು ಕಾಣಬಹುದು. ಯಕ್ಷಗಾನ ಈಗ ನಮ್ಮ ರಾಜ್ಯವನ್ನು ಪ್ರತಿನಿಧಿಸುವ ಸಮರ್ಥ ರಂಗಕವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಸಾಂಸ್ಕೃತಿಕವಾಗಿ ಕರ್ನಾಟಕದ ಯಶಸ್ಸಿನ ಪತಾಕೆಯನ್ನು ಉತ್ತುಂಗದಲ್ಲಿ ಹಾರಿಸಿದ ಕೀರ್ತಿಗೆ ಯಕ್ಷಗಾನ ಭಾಜನವಾಗಿದೆ.

ಕರಾವಳಿ ಹಾಗೂ ಮಲೆನಾಡಿನಲ್ಲಿ ಯಕ್ಷಗಾನವೆಂದು ಕರೆಸಿಕೊಳ್ಳುವ ಈ ಕಲೆ ಬಯಲುಸೀಮೆಯಲ್ಲಿ ಮೂಡಲಪಾಯವೆಂದು ಖ್ಯಾತಗೊಂಡಿದೆ. ಹಾಗೆ ನೋಡಹೋದರೆ ವಿದ್ವತ್‌ವಲಯದಲ್ಲಿ ಕರಾವಳಿ ಹಾಗೂ ಮಲೆನಾಡಿನ ಯಕ್ಷಗಾನವನ್ನು ಪಡುವಲಪಾಯವೆಂದೇ ಗುರುತಿಸುತ್ತಾರೆ. ಸಾಮಾನ್ಯರಲ್ಲಿ ಮತ್ತು ಬಳಕೆಯಲ್ಲಿ ಇಂದಿಗೂ ಅದು ಆಟ, ಬಯಲಾಟ ಎಂದೇ ಕರೆಸಿಕೊಳ್ಳುತ್ತಿದೆ. ಈ

ಪ್ರದೇಶದಲ್ಲಿ ಯಕ್ಷಗಾನದ ವೈವಿಧ್ಯಮಯ ಪ್ರಕಾರಗಳಾದ ಹೂವಿನಕೋಲು, ತಾಳ ಮದ್ದಳೆ, ಚಿಕ್ಕಮೇಳ, ಗೊಂಬೆಯಾಟಗಳೆಲ್ಲಾ ಇಂದಿಗೂ ಜೀವಂತವಾಗಿವೆ. ಭೌಗೋಳಿಕವಾಗಿ ತೆಂಕುತಿಟ್ಟು ಬಡಗುತಿಟ್ಟು, ಬಡಾಬಡಗುತಿಟ್ಟುಗಳೆಂಬ ವ್ಯತ್ಯಾಸ ವಿದ್ದರೂ ಮೂಲ ಸ್ರೋತದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಯಕ್ಷಗಾನ ಕಲೆ ಈ ಭಾಗದ ಜನರ ನರನಾಡಿಗಳಲ್ಲಿ ಹಾಸುಹೊಕ್ಕಾಗಿದೆ. ಇದರಿಂದಲೇ ಈ ಕಲಾಪ್ರಕಾರ ಅದಮ್ಯ ಚೈತನ್ಯದಿಂದ ಈ ಪ್ರದೇಶದ ಜನರನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸುತ್ತಿದೆ. ತಾನು ಬದುಕಿ, ಜನತೆಯ ಬಾಳನ್ನು ಬೆಳಗಿಸುತ್ತಿದೆ.

ಕರ್ನಾಟಕದ ಉಳಿದ ಭಾಗದಲ್ಲಿ ಪ್ರಚಲಿತವಿರುವುದನ್ನು ಯಕ್ಷಗಾನ ಮೂಡಲ ಪಾಯವೆಂದೇ ಕರೆಯುತ್ತಾರೆ. ಪಾಯವೆಂಬುದು ಸಂಗೀತದ ಒಂದು ಸಂಪ್ರದಾಯ ವೆಂಬ ರೀತಿಯಲ್ಲಿ ಬಳಕೆಯಾಗಿದೆ. ಇಲ್ಲೂ ಕೂಡ ಸಾಕಷ್ಟು ಪ್ರಭೇದಗಳನ್ನು ಗುರುತಿಸಬಹುದು. ಉತ್ತರ ಭಾಗದಲ್ಲಿ ಪ್ರಚಲಿತವಿರುವುದನ್ನು ದೊಡ್ಡಾಟವೆಂತ ಕರೆದರೆ ದಕ್ಷಿಣ ಭಾಗದಲ್ಲಿ ಬಳಕೆಯಲ್ಲಿರುವುದನ್ನು ಮೂಡಲಪಾಯ ಯಕ್ಷಗಾನವೆಂದೇ ಕರೆಯುತ್ತಾರೆ. ಹಿಂದೆಲ್ಲಾ ಇಲ್ಲಿ ಬಳಕೆಯಲ್ಲಿ ಇದ್ದದ್ದು ಆಟವೆಂತಲೇ. ಉತ್ತರ ಕರ್ನಾಟಕದಲ್ಲಿ ಸಣ್ಣಾಟದ ಆವಿಷ್ಕಾರವಾದಾಗ ಇದನ್ನು ಜನ ದೊಡ್ಡಾಟವೆಂದು ಕರೆದರು. ಸಣ್ಣಾಟವೂ ಯಕ್ಷಗಾನದ ಒಂದು ಪ್ರಭೇದವಾಗಿದ್ದು ಎಲ್ಲ ವಿಚಾರದಲ್ಲೂ ಕಿರಿದಾಗಿರುತ್ತದೆ. ಇಲ್ಲಿನ ಕಥಾವಸ್ತುಗಳನ್ನು ಶೈವ ಸಂಪ್ರದಾಯ, ವೈಷ್ಣವ ಸಂಪ್ರದಾಯ ಹಾಗೂ ಕಾಲ್ಪನಿಕವೆಂದು ವಿಭಜಿಸಬಹುದು. ಶ್ರೀ ಕೃಷ್ಣ ಪಾರಿಜಾತವು ಸಣ್ಣಾಟದ ಒಂದು ಮಾದರಿಯೇ ಆಗಿದ್ದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ದಕ್ಷಿಣಭಾಗದ ಸಂಪ್ರದಾಯದಲ್ಲಿ ಮೂಡಲಪಾಯ ಮತ್ತು ಘಟ್ಟದ ಕೋರೆಗಳೆಂಬ ಎರಡು ಪ್ರಭೇದಗಳೀವೆ. ಘಟ್ಟದ ಕೋರೆಯಲ್ಲಿ ಕರಾವಳಿ ಯಕ್ಷಗಾನದ ಪ್ರಭಾವ ನಿಚ್ಚಳವಾಗಿದೆ. ಪ್ರಸಂಗಗಳಂತೂ ಹೆಚ್ಚಾಗಿ ಕರಾವಳಿ ಭಾಗದ್ದೇ ಆಗಿದೆ. ಉತ್ತರದ ದೊಡ್ಡಾಟ ಹಾಗೂ ದಕ್ಷಿಣದ ಮೂಡಲಪಾಯ ಹೆಚ್ಚಿನ ಸಾಮ್ಯತೆಯನ್ನು ಹೊಂದಿದ್ದು, ಭೌಗೋಳಿಕ ಕಾರಣದಿಂದ ಪ್ರತ್ಯೇಕವಾಗಿರುವಂತೆ ಗೋಚರಿಸುತ್ತದೆ. ಮೂಡಲ ಪಾಯದಲ್ಲಿ ಅಟ್ಟವೊಂದನ್ನು ಕಟ್ಟಿ ಅದರ ಮೇಲೆ ಆಡುವುದರಿಂದ ಕೆಲವು ಕಡೆ ಅದನ್ನು ಅಟ್ಟದಾಟವೆಂತಲೂ ಕರೆಯುತ್ತಾರೆ.

ಮೂಲತಃ ಯಕ್ಷಗಾನ ಒಂದು ಹಾಡುಗಬ್ಬ. ಸುಮಾರು 800–900 ವರ್ಷಗಳ ಇತಿಹಾಸವಿರುವ ಈ ಕಾವ್ಯಪ್ರಕಾರಕ್ಕೆ ಅಸಂಖ್ಯ ಕವಿಗಳು ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಗಮಕ ವಾಚನದ ಮಾದರಿಯಲ್ಲಿ ಹಾಡಿನ ಮೂಲಕ ಪ್ರಚಾರಗೊಂಡ ಈ ಹಾಡುಗಬ್ಬಗಳು ಕ್ರಮೇಣ ವ್ಯಾಖ್ಯಾನಕ್ಕೆ ಒಳಪಟ್ಟು ಅದೇ ಮುಂದೆ ಬಯಲಾಟದ ಸಂಪ್ರದಾಯಕ್ಕೆ ನಾಂದಿಯಾಗಿರಬೇಕು. ಕರಾವಳಿ ಪ್ರದೇಶದಲ್ಲಿ ಆರಾಧನೆಯ ಅಂಗವಾಗಿ ದೇವಸ್ಥಾನಗಳನ್ನು ಆಶ್ರಯಿಸಿ ಹುಟ್ಟಿಕೊಂಡ ಮೇಳಗಳು ಬಯಲಾಟಕ್ಕೊಂದು ಭದ್ರವಾದ ಸಾಂಸ್ಥಿಕನೆಲೆಯನ್ನು ದೊರಕಿಸಿಕೊಟ್ಟವು. ಮುಂದೆ ಬಂದ ಡೇರೆಮೇಳಗಳು

ಬಯಲಾಟಕ್ಕೊಂದು ಗಟ್ಟಿಯಾದ ವ್ಯಾಪಾರಿ ನೆಲೆಯನ್ನು ಸೃಷ್ಟಿಸಿದವು. ಈ ರಂಗವನ್ನು ಪ್ರವೇಶಿಸಿರುವ ವಿದ್ಯಾವಂತರು, ಸಾಹಿತಿಗಳು ಹಾಗೂ ಹವ್ಯಾಸಿಗಳು ಯಕ್ಷಗಾನ ಕಲೆಗೊಂದು ವ್ಯಾಪಕತೆಯನ್ನು ತಂದುಕೊಟ್ಟರು. ಹೀಗೆ ಕರಾವಳಿ ಹಾಗೂ ಮಲೆನಾಡಿನಲ್ಲಿ ಯಕ್ಷಗಾನದ ಯಶೋಗಾಥೆ ಸಾಗಿ ಬಂದಿದೆ. ಆದರೆ ಇಂತಹ ಯಶಸ್ಸಿನ ಚಿತ್ರಣ ಕರ್ನಾಟಕದ ಉಳಿದ ಭಾಗದಲ್ಲಿ ಪ್ರಚುರಗೊಂಡಿರುವ ಮೂಡಲಪಾಯ ಬಯಲಾಟದಲ್ಲಿ ಕಾಣಸಿಗುತ್ತಿಲ್ಲ. ವೃತ್ತಿಪರತೆಯ ಕೊರತೆ, ಸಂಘಟನೆಯ ಸೋಲು, ಕಲಾವಿದರ ನಡುವೆ ಹಾಗೂ ಕಲಾತಂಡಗಳ ನಡುವೆ ಇರುವ ಅಸಹಕಾರ ಪ್ರವೃತ್ತಿ, ಪ್ರೋತ್ಸಾಹಕರ ನಿರಂತರ ಬರ, ಪ್ರೇಕ್ಷಕರ ನಿರುತ್ಸಾಹ, ವಿದ್ಯಾವಂತರ ಅಸಡ್ಡೆ, ಸರಕಾರದ ಅವಗಣನೆ ಇವೆಲ್ಲವೂ ಈ ರಂಗದಲ್ಲಿ ಕಾಣುತ್ತಿರುವ ಜಾಡ್ಯಗಳಾಗಿವೆ. ಹೀಗಾಗಿ ಬಯಲು ಸೀಮೆಯ ಮೂಡಲಪಾಯ ಕರಾವಳಿ ಮತ್ತು ಮಲೆನಾಡಿನ ಯಕ್ಷಗಾನಕ್ಕೆ ಹೆಗಲೆಣಿಯಾಗುವಲ್ಲಿ ಸೋಲುತ್ತಿದೆ.

ಮೂಡಲಪಾಯದಲ್ಲಿ ಆರಾಧನೆಯ ಅಂಶವಿದ್ದರೂ ಅದಕ್ಕೊಂದು ಕಟ್ಟುಪಾಡು ಇಲ್ಲ. ಶಿಸ್ತುಬದ್ಧ ಪ್ರದರ್ಶನ ಅಲ್ಲಿ ಇಲ್ಲವಾಗಿದೆ. ಸಾಹಿತ್ಯ, ಸಂಗೀತ, ಮುಖವರ್ಣಿಕೆ, ವೇಷ-ಭೂಷಣ, ನೃತ್ಯಗಳೆಂಬ ಪಂಚಾಂಗದ ಮೇಲೆ ನಿಂತಿರುವ ಈ ಕಲೆಯಲ್ಲಿ ಪ್ರದೇಶವಾರು ಬದಲಾವಣೆಗಳಿದ್ದರೂ ಮೂಲ ಆಶಯ ಒಂದೇ ಆಗಿದೆ. ಪ್ರಸಂಗಸಾಹಿತ್ಯ ರಚನೆಯ ದೃಷ್ಟಿಯಿಂದ ಎರಡು ಪಾಯಗಳ ನಡುವೆ ಸ್ವಲ್ಪ ವ್ಯತ್ಯಾಸವಿದೆ. ಮೂಡಲಪಾಯ ಹಾಗೂ ದೊಡ್ಡಾಟಗಳಲ್ಲಿ ಗದ್ಯಪದ್ಯಗಳೆರಡೂ ಕವಿನಿರ್ಮಿತ. ಪ್ರಸಂಗ ಕವಿಯಾದವನು ಹಾಡುವ ಪದ್ಯ ಬರೆಯುವುದರೊಂದಿಗೆ, ಆಡುವ ಮಾತನ್ನು ಗದ್ಯದಲ್ಲಿ ಬರೆಯುತ್ತಾನೆ. ಆದರೆ ಇದು ಮೊದಲಕಾಲದ ಪ್ರಸಂಗಗಳಲ್ಲಿ ಕಾಣುತ್ತಿಲ್ಲ. ಮೂಡಲಪಾಯದ ಮೊದಲ ಪ್ರಸಂಗವೆಂದೇ ಖ್ಯಾತಿಗೊಂಡಿರುವ 'ಕರಿಬಂಟನ ಕಾಳಗ' 15ನೇ ಶತಮಾನದಲ್ಲಿ ರಚಿತವಾಗಿದ್ದು, ಅದನ್ನು ಮುಂದೆ 18ನೇ ಶತಮಾನದಲ್ಲಿ ಮೈಸೂರಿನ ವೀರನಗರೆಯಪುಟ್ಟಣ್ಣನು ನಾಟಕಕೃತಿಯಾಗಿ ಪರಿವರ್ತಿಸುತ್ತಾನೆ. ಈತ ಹಲವಾರು ಯಕ್ಷಗಾನ ಹಾಡುಗಬ್ಬಗಳನ್ನು ರಂಗಕೃತಿಯಾಗಿ ಮಾರ್ಪಡಿಸಿರುವುದು ದಾಖಲಾಗಿದೆ. ಇದೇ ರೀತಿಯಲ್ಲಿ ಶ್ರೀಕೃಷ್ಣ ಪಾರಿಜಾತವೆಂಬ ಅಪರಾಳ ತಮ್ಮಣ್ಣನ ಕಾವ್ಯಕೃತಿಯನ್ನು ನಾಟಕರೂಪಕ್ಕೆ ತಂದು ಅದು ಜಗಜ್ಜಾಹೀರಾಗುವಂತೆ ಮಾಡಿದವನು ಕುಲಗೋಡು ತಮ್ಮಣ್ಣನು. ಮೂಡಲಪಾಯದಲ್ಲಿ ಪಾತ್ರಧಾರಿ ಆಡುವ ಮಾತು ಕಂಠಸ್ಥವಾಗಿರುತ್ತದೆಯೇ ಹೊರತು ಕರಾವಳಿಯ ಪಾತ್ರಧಾರಿಯ ಆಶುಭಾಷಣದಂತಿರುವುದೇ ಇಲ್ಲ. ಮಾತಿನಲ್ಲಿ ಕೂಡ ಪ್ರಾಸ ಹಾಗೂ ಅನುಪ್ರಾಸಕ್ಕೆ ಹೆಚ್ಚಿನ ಒತ್ತು ಇರುತ್ತದೆ. ಪ್ರಸಂಗಕೃತಿಗಳ ಮಧ್ಯೆಯಲ್ಲಿ ಅನೇಕ ನಿರ್ದೇಶನಗಳು ಬಂದಿರುತ್ತವೆ. 'ಭಾಗವತನ ಪ್ರಸ್ತಾಪೂ', 'ಸಭೆಯ ಕಡೆಗೆ ತಿರುಗಿ ಹೇಳತಕ್ಕದ್ದು', 'ಈಗ ನಾಟಿರಾಗದ ಪದ್ಯ ಹಾಡಬೇಕು'. ಈ ಬಗೆಯ ನಿರ್ದೇಶನಗಳು, ಲಕ್ಷಣ ವಿಚಾರಗಳು ಪ್ರಸಂಗದಲ್ಲಿ ಇರುತ್ತವೆ. ಶೈಲೀಕೃತ ಸಂಭಾಷಣೆಯೇ ಮೂಡಲಪಾಯದ ಜೀವಾಳ.

ಮೂಡಲಪಾಯದ ರಂಗಸ್ಥಳ ಕರಾವಳಿಯಲ್ಲಿನ ಯಕ್ಷಗಾನ ರಂಗಸ್ಥಳಕ್ಕಿಂತ ದೊಡ್ಡದಿರುತ್ತದೆ. ಮೂಡಲಪಾಯದಲ್ಲಿ ಕುಣಿತಕ್ಕೆ ಹೆಚ್ಚಿನ ಜಾಗ ಬೇಕಾಗುತ್ತದೆ. ಭಾಗವತನನ್ನು ಒಳಗೊಂಡ ದೊಡ್ಡ ಮೇಳವೇ ಅಲ್ಲಿ ಇರುತ್ತದೆ. ಈ ಹಿಮ್ಮೇಳವೇ ಆಟವನ್ನು ನಡೆಸಿಕೊಂಡು ಹೋಗುತ್ತದೆ. ಇವರು ರಂಗಸ್ಥಳದ ಬಲಭಾಗದಲ್ಲಿ ನಿಂತಿರುತ್ತಾರೆ. ಪಡುವಲ ಪಾಯದಂತೆ ರಂಗದ ಹಿಂಭಾಗದಲ್ಲಿ ಭಾಗವತರು ಮೃದಂಗ ದವರು ಕುಳಿತಿರುವುದಿಲ್ಲ. ಇನ್ನು ತೆರೆಯ ವಿಚಾರದಲ್ಲೂ ಭಿನ್ನತೆಯನ್ನು ಕಾಣಬಹುದು. ಪೂರ್ವದಲ್ಲಿ ಅಲ್ಲಿಯೂ ಕೂಡ ಪಡುವಲಪಾಯದಂತೆ ತೆರೆಹಿಡಿದೆ ಪಾತ್ರ ಪ್ರವೇಶ ವಾಗುತ್ತಿದ್ದವು. ಆದರೆ ಈಗ ಅದು ಲುಪ್ತವಾಗಿ ವೃತ್ತಿ ನಾಟಕದಲ್ಲಿರುವಂತೆ ಎಳೆದುಬಿಡುವ ತೆರೆಯ ವ್ಯವಸ್ಥೆ ಚಾಲ್ತಿಯಲ್ಲಿದೆ. ಹಲಗೆ ಕಟ್ಟಿ ಎತ್ತರವಾದ ರಂಗಸ್ಥಳವಿರುವುದರಿಂದ ವಿಪರೀತ ಕುಣಿತವಾಗುವಾಗ ಶಬ್ದ ಜೋರಾಗಿ ಬರುತ್ತಿರುತ್ತದೆ. ಮೂಡಲಪಾಯದಲ್ಲಿ ಆಂಜನೇಯನ ಪಾತ್ರ ವಿಶೇಷವಾಗಿದ್ದು, ಹಗ್ಗದ ಮೂಲಕ ಮೇಲ್ಭಾಗದಿಂದ ಇಳಿದುಬರುವ ವ್ಯವಸ್ಥೆ ಇರುತ್ತದೆ. ಗಳುವನ್ನು ಎತ್ತರಕ್ಕೆ ಕಟ್ಟಿ ಆತ ಮೇಲೆ ಕುಳಿತಿರುತ್ತಾನೆ. ಪ್ರವೇಶವಾಗುವಾಗ ಇಳಿದುಬಂದು ಕುಣಿದು ಕುಪ್ಪಳಿಸುತ್ತಾನೆ. ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ನಮ್ಮ ಊರಿನ ರಸಿಕರು' ಪ್ರಬಂಧದಲ್ಲಿ ಇದು ಬಹು ಸೊಗಸಾಗಿ ವರ್ಣಿತವಾಗಿದೆ. ರಾಕ್ಷಸ ಪಾತ್ರದ ಪ್ರವೇಶವು ಪಡುವಲಪಾಯದಷ್ಟು ವೈವಿಧ್ಯಮಯವಾಗಿಲ್ಲ, ಒಡ್ಡೋಲಗದ ದೃಶ್ಯ ಕೂಡ ಇಲ್ಲಿಲ್ಲ. ಆದರೆ ಘೋರ ಪಾತ್ರಗಳ ಪ್ರವೇಶ ಬಹು ಆಕರ್ಷಕವಾಗಿರುತ್ತವೆ. ಅವು ರಂಗದ ಮುಂಭಾಗದಿಂದ ಪ್ರವೇಶಿಸುತ್ತವೆ. ಇದರಲ್ಲಿ ಎರಡು ಪಾಯಗಳ ನಡುವೆ ಸಾಮ್ಯತೆ ಇದೆ. ಪಂಜಿನ ಬೆಳಕಿನಲ್ಲಿ ಬರುವ ಈ ಪಾತ್ರಗಳು ರಂಗಕ್ಕೆ ಬರುತ್ತಿರುವಾಗೆಲ್ಲ ಅರದಾಳದ ಪುಡಿಯನ್ನು ಎರಚಿ ಬೆಂಕಿಯ ಬೆಳಕು ಹೆಚ್ಚುವಂತೆ ಮಾಡುತ್ತಾರೆ. ಇದರಿಂದ ಭ್ರಾಮಕ ವಾತಾವರಣ ವೊಂದು ನಿರ್ಮಾಣವಾಗುತ್ತದೆ.

ಮೂಡಲಪಾಯದಲ್ಲಿ ಹನುಮನಾಯಕನ ಕುಣಿತವು ವಿಶೇಷವಾದದ್ದು. ಲಘು ನೃತ್ಯದ ಮಾದರಿಯಲ್ಲಿ ಇರುತ್ತದೆ. ದೊಡ್ಡಾಟದಲ್ಲಿ ಈ ಪಾತ್ರವನ್ನು ಸಾರಥಿ ಎಂದು ಕರೆಯುತ್ತಾರೆ. ಯಕ್ಷಗಾನ ಬಯಲಾಟಗಳಲ್ಲಿ ಬರುವ ಹಾಸ್ಯಗಾರನ ಪಾತ್ರಕ್ಕಿಂತ ಇವು ಭಿನ್ನವಾಗಿವೆ. ಆತ ಪ್ರದರ್ಶನದ ಉದ್ದಕ್ಕೂ ರಂಗದಲ್ಲಿ ಇರುತ್ತಾನೆ. ಎಲ್ಲ ಪಾತ್ರಗಳನ್ನು ಪರಿಚಯಿಸುವವನು ಅವನೇ. ಒಟ್ಟಾರೆ ಹೇಗೋ ಹಾಗೋ ಕುಣಿದರೂ ಒಂದು ಲಯ ಕುಣಿತದಲ್ಲಿ ಇರುತ್ತದೆ. ಆತನ ವೇಷಭೂಷಣದಲ್ಲೂ ಹಾಸ್ಯ ಇಣುಕುತ್ತದೆ. ಪಾತ್ರ ಬರುವುದು ವಿಳಂಬವಾದರೆ ಅಥವಾ ಮುಖ್ಯ ಪಾತ್ರಗಳು ಕುಣಿದು ಸುಸ್ತಾದಾಗ ಈತ ಕುಣಿತದಲ್ಲಿ ತೊಡಗಿ ರಂಗ ತುಂಬುತ್ತಾನೆ. ಇದೂ ಒಂದು ಬಗೆಯ ರಂಗ ತಂತ್ರವೇ ಆಗಿದೆ. ಕೆಲವೊಮ್ಮೆ ಒಂದು ಘಟನೆಯಿಂದ ಇನ್ನೊಂದು ಘಟನೆಗೆ ಕೊಂಡಿಯಾಗಿಯೂ ಹನುಮನಾಯಕ / ಸಾರಥಿ ಕಾರ್ಯ ನಿರ್ವಹಿಸುತ್ತಾನೆ.

ಮೂಡಲಪಾಯ ಪ್ರಸಂಗಗಳು ಹೆಚ್ಚಾಗಿ ವೀರರಸ ಪ್ರಧಾನವಾದವುಗಳು. ಕಾಳಗವೇ ಇಲ್ಲಿ ಹೆಚ್ಚು ವೀರರಸಕ್ಕೆ ಹೊಂದಿಕೊಳ್ಳುವಂತೆ ಹಿಮ್ಮೇಳದಲ್ಲಿ ಮುಖವೀಣೆ ಇದೆ. ಪಡುವಲಪಾಯದ ಚಂಡೆಯ ಸ್ಥಾನವನ್ನು ಈ ಮುಖವೀಣೆ ತುಂಬುತ್ತದೆ. ಶ್ರುತಿಪೆಟ್ಟಿಗೆಯಾಗಿ ಹಾರ್ಮೋನಿಯಂ ಬಳಕೆ ಇಲ್ಲಿ ಈಚೆಗೆ ರೂಢಿಯಾಗಿದೆ. ವೀರರಸದ ಪ್ರತಿಪಾದನೆಗೆ ಅಗತ್ಯವಾಗುವ ರೀತಿಯಲ್ಲಿ ಹಿಮ್ಮೇಳದವರೊಡಗೂಡಿ ಬರುವ ಮುಖವೀಣೆಯು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಹಿಮ್ಮೇಳದಲ್ಲಿ 4–5 ಜನರಿದ್ದು, ಭಾಗವತ ಹಾಡಿಬಿಟ್ಟ ನಂತರ ಆ ರಾಗವನ್ನು ಎತ್ತಿಹಾಡಿ ಏರಿದ ಧ್ವನಿಯಲ್ಲಿ ಎಳೆಯುವ ಬಗೆ ವಿಶಿಷ್ಟವಾದುದು. ಇದರಿಂದಾಗಿ ಜನಪದ ಕುಣಿತದ ವೀರಾವೇಶದ ತರಂಗಿತತೆಯನ್ನು ಮೂಡಲಪಾಯ ಬಯಲಾಟದಲ್ಲಿ ಕಾಣಬಹುದು. ಅನೇಕ ಜನಪದ ಕತೆಗಳು ಪ್ರಸಂಗಗಳಾಗಿ ಜನ್ಮ ತಳೆದು ವೀರ್ಯವತ್ತಾದ ಬಾಳಿನ ಅಗತ್ಯವನ್ನು ಸಾರುತ್ತಿವೆ.

ಭಾವಪ್ರಕಾಶಕ್ಕೆ ಒದಗುವ ಕುಣಿತ ಮೂಡಲಪಾಯದಲ್ಲಿ ಇದೆ. ವೇಷಗಾರಿಕೆಯಲ್ಲೂ ಮೂಡಲಪಾಯ ಪಡುವಲಪಾಯಕ್ಕಿಂತ ಭಿನ್ನವಾಗಿದೆ. ಪಾತ್ರದ ಶಕ್ತಿ–ಸಾಮರ್ಥ್ಯಗಳಿಗೆ ತಕ್ಕಂತೆ ವೇಷಭೂಷಣದ ನಿರ್ಮಾಣ ಅಲ್ಲಿದೆ. ಕಿರೀಟ, ಭುಜಕೀರ್ತಿ, ಎದೆಹಾರ, ವೀರಗಸೆ ಮುಂತಾದವೆಲ್ಲ ಸಮಾನವಾಗಿವೆ. ಆದರೆ ಪಗಡಿ ಸುತ್ತುವ ಕ್ರಮ, ರಾಕ್ಷಸವೇಷದ ಕಿರೀಟ, ಸ್ತ್ರೀಪಾತ್ರಗಳ ಕಿರೀಟ ಮುಂತಾದವುಗಳಲ್ಲಿ ಎರಡು ಪಾಯಗಳ ನಡುವೆ ವ್ಯತ್ಯಾಸವಿದೆ. ಸೌಮ್ಯಪಾತ್ರಗಳ ಕಿರೀಟಗಳು ಅಗಲವಾಗಿದ್ದರೆ, ಸ್ತ್ರೀವೇಷದ ಕಿರೀಟ ಕಿರಿದಾಗಿದ್ದು ತಲೆಯ ಮೇಲೆ ಇರುತ್ತದೆ. ಎಲ್ಲ ಪಾತ್ರಗಳ ತಲೆಗೂ ವಿಗ್‌ನ ಬಳಕೆ ಇಲ್ಲಿದೆ. ರಾಕ್ಷಸಪಾತ್ರಗಳನ್ನುಳಿದು ಇತರೇ ಪಾತ್ರಗಳ ಬಣ್ಣಗಾರಿಕೆಯು ವೃತ್ತಿ ನಾಟಕದ ನಕಲಿನಂತಿದೆ. ವೃತ್ತಿರಂಗಭೂಮಿಯ ಪ್ರಭಾವ ಮೂಡಲಪಾಯದ ಮೇಲೆ ಅಗಾಧವಾಗಿ ಆಗಿದೆ. ಪುರುಷಪಾತ್ರದ ಎದೆ ಹಾರ, ಸೊಂಟದ ಮೇಲೆ ಕಟ್ಟುವ ವೀರಗಾಸೆ ಮುಂತಾದವೆಲ್ಲ ಹಗುರವಾದ ಮರದಿಂದ ಕೂಡಿದ್ದರೂ ಸಾಮಾನ್ಯ ವ್ಯಕ್ತಿ ಅದನ್ನು ಧರಿಸಿ ಕುಣಿಯುವುದು ತ್ರಾಸದಾಯಕ. ಈ ಬಗೆಯ ಆಭರಣಗಳನ್ನೆಲ್ಲಾ ಅವರು 'ಒಡವೆ' ಎಂದು ಕರೆಯುತ್ತಾರೆ. ಹೆಚ್ಚಾಗಿ ಎಲ್ಲಾ ಒಡವೆಗಳು ಭಾರವಾಗಿದ್ದು, ಪ್ರದರ್ಶನ ನೀಡುವಲ್ಲಿ ಹೆಚ್ಚಿನ ದೈಹಿಕ ಸಾಮರ್ಥ್ಯ ಬೇಕಾಗುತ್ತದೆ.

ರಂಗಸ್ಥಳದ ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಮೂಡಲಪಾಯ ಘಟದ ಕೋರೆ, ದೊಡ್ಡಾಟ ಹಾಗೂ ಯಕ್ಷಗಾನ ಬಯಲಾಟದಲ್ಲಿ ಒಂದಿಲ್ಲೊಂದು ರೀತಿಯ ಸಮೀಕರಣ ಕಂಡುಬರುತ್ತದೆ. ನಾಂದಿಪದ, ವಿಘ್ನೇಶನ ಪೂಜೆ, ಸರಸ್ವತಿ ಪೂಜೆ ಮುಂತಾದವೆಲ್ಲಾ ರಂಗ ಸಂಪ್ರದಾಯದ ವೈಶಿಷ್ಟ್ಯಗಳಾಗಿವೆ. 19ನೆಯ ಶತಮಾನದ ಅಂತ್ಯದಲ್ಲಿ ವಿಶಿಷ್ಟ ರೀತಿಯಲ್ಲಿ ವಿಫುಲವಾಗಿ ಯಕ್ಷಗಾನ ಕೃತಿಗಳು ಪ್ರಕಟವಾಗುತ್ತಿದ್ದುವೆಂಬುದನ್ನು 1860ರಲ್ಲಿ ಗಮನಿಸಿದ ಆಗಿನ ಮಹಾನ್ ವಿದ್ವಾಂಸರಾದ ಶ್ರೀ ಬಿ.ಎಲ್.

ರೈಸ್‌ರವರು ತಮ್ಮ ಸಮೀಕ್ಷೆಯಲ್ಲಿ ಯಕ್ಷಗಾನಗಳ ಆಧಿಕ್ಯವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಆ ಕಾಲದಲ್ಲಿ ನಾಡಿನಾದ್ಯಂತ ಯಕ್ಷಗಾನ ಪ್ರದರ್ಶನಗಳು ಅಸಂಖ್ಯವಾಗಿ ಜರಗುತ್ತಿದ್ದು, ಅದಕ್ಕೆ ಪೂರಕವಾಗುವಂತೆ ಪ್ರಸಂಗಗಳ ಪ್ರಕಟಣೆಯಾಗುತ್ತಿತ್ತು. ಆದರೆ 20ನೇ ಶತಮಾನಕ್ಕೆ ಬರುವಾಗ ಮೂಡಲಪಾಯ ಯಕ್ಷಗಾನದ ಆಟಗಳು ಕುಂಠಿತಗೊಂಡವು. ಇದಕ್ಕೆ ಮುಖ್ಯವಾಗಿ ಆಗ ಪ್ರಚಾರಕ್ಕೆ ಬಂದ ವೃತ್ತಿರಂಗಭೂಮಿಯ ನಾಟಕಗಳೇ ಕಾರಣ. ಮುಂದೆ ಬಂದ ಸಿನೇಮಾಗಳು ಕೂಡ ಗ್ರಾಮೀಣ ಭಾಗದಲ್ಲಿ ಈ ಕಲೆ ಸೊರಗಲು ಕಾರಣವಾದವು. ಅಲ್ಲಿನ ವೈಭವಗಳನ್ನು ನಕಲು ಮಾಡ ಹೋದ ಈ ಸರಳ ರಂಗಭೂಮಿ ಸೋಲನ್ನು ಅಪ್ಪಬೇಕಾಯಿತು. ಗ್ರಾಮೀಣ ಕಲಾವಿದರು ಸಮರ್ಥ ಪೈಪೋಟಿ ನೀಡುವಲ್ಲಿ ವಿಫಲರಾದರು. ಈಚೆಗಂತೂ ಟಿ.ವಿ. ಮಾಧ್ಯಮ ಮನೆಮನೆಗೂ ದಾಂಗುಡಿಯಿಟ್ಟು, ಮನರಂಜನೆಯ ಮಹಾ ಪೂರವನ್ನು ಒದಗಿಸುತ್ತಿರುವುದರಿಂದ ಪ್ರೇಕ್ಷಕರ ನಿರುತ್ಸಾಹ, ನಿರಪೇಕ್ಷತೆಗಳು ಮೂಡಲಪಾಯವನ್ನು ಕಾಡುತ್ತಿವೆ. ಈ ಕಲಾಪ್ರಕಾರಕ್ಕೆ ವಿದ್ಯಾವಂತರ ಅದರಲ್ಲೂ ಆಸಕ್ತರಾಗಿರುವ ವಿದ್ವಾಂಸರ ಪ್ರವೇಶವಾಗಬೇಕಾಗಿದೆ. ಅಸ್ಥಿಪಂಜರಕ್ಕೆ ಜೀವ ತುಂಬುವ ಕಾರ್ಯವಾಗಬೇಕಾಗಿದೆ. 1960ರ ದಶಕದಲ್ಲಿ ಡಾ॥ ಶಿವರಾಮ ಕಾರಂತರು ಯಕ್ಷಗಾನ ರಂಗವನ್ನು ಪ್ರವೇಶಿಸಿ ಕ್ರಾಂತಿಯನ್ನು ಉಂಟುಮಾಡಿದರು. ಈ ಮೂಲಕ ಕರಾವಳಿಯಲ್ಲಿ ವಿದ್ಯಾವಂತರ, ಅಧ್ಯಾಪಕರ ಪಡೆಯೇ ಈ ರಂಗದೊಳಗೆ ಬಂದು ಇವತ್ತು ಪಡುವಲ ಪಾಯ ಯಕ್ಷಗಾನ ಬೃಹದಾಕಾರವಾಗಿ ಬೆಳೆದು ನಿಲ್ಲಲು ಕಾರಣವಾದಂತೆ ಮೂಡಲ ಪಾಯಕ್ಕೂ ಈ ಬಗೆಯ ಕಾಯಕಲ್ಪ ಅಗತ್ಯವಾಗಿದೆ. ಡಾ॥ ಜಿ.ಶಂ. ಪರಮಶಿವಯ್ಯನವರು ತಿಪಟೂರು ತಾಲ್ಲೂಕಿನ ಕೊನೆಹಳ್ಳಿಯಲ್ಲಿ ಈ ಪ್ರಯತ್ನಕ್ಕೆ ನಾಂದಿ ಹಾಡಿದರೂ ಅದರ ಮುಂದುವರಿಕೆಯ ಕಾರ್ಯ ಆಗಬೇಕಾಗಿದೆ. ಬಯಲುಸೀಮೆಯಲ್ಲಿರುವ ವಿಶ್ವವಿದ್ಯಾಲಯಗಳು, ಜಾನಪದ ವಿಶ್ವವಿದ್ಯಾಲಯ, ಯಕ್ಷಗಾನ ಬಯಲಾಟ ಅಕಾಡೆಮಿಗಳೆಲ್ಲ ಸೇರಿ ಮೂಡಲಪಾಯ ಸಂಪ್ರದಾಯಕ್ಕೆ ಸೇರಿದ ಎಲ್ಲಾ ಕಲಾಪ್ರಕಾರಗಳನ್ನು ಉಳಿಸಿ, ಬೆಳೆಸುವ ಕಡೆ ಚಿಂತನೆ ನಡೆಸಬೇಕಾಗಿದೆ. ಸಮಗ್ರ ಕಾರ್ಯಸೂಚಿಯೊಂದನ್ನು ಅಳವಡಿಸಿ ಕರ್ನಾಟಕದ ಈ ಹೆಮ್ಮೆಯ ಕಲೆ ಉಳಿದು ಬೆಳೆಯುಂತೆ ಮಾಡಬೇಕು.

■

ಯಕ್ಷಗಾನ ಹಾಗೂ ಕನ್ನಡ ವಿದ್ವತ್ ಪರಂಪರೆ

ಕನ್ನಡ ವಿದ್ವತ್‌ಲೋಕ ಯಕ್ಷಗಾನದೊಂದಿಗೆ ಇರಿಸಿ ಕೊಂಡಿರುವ ನಂಟುಗಳ ಗಂಟನ್ನು ಬಿಚ್ಚಿ ತೋರಿಸುವ ಪ್ರಯತ್ನ ಇದು. ಯಕ್ಷಗಾನ ಕರ್ನಾಟಕದ ಹೆಮ್ಮೆಯ ಗಂಡು ಕಲೆ, ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಹೆಸರು ಈ ಕಲಾ ಪ್ರಕಾರಕ್ಕೆ ಲಭಿಸಿದೆ. ಪ್ರದರ್ಶನದಲ್ಲಿ ಪ್ರಾದೇಶಿಕವಾದ ಭಿನ್ನತೆ ಇದೆ. ಆದರೆ ಮೂಲ ತಿರುಳು ಒಂದೇ. ಯಕ್ಷಗಾನದ ಉಗಮ, ವಿಕಾಸ ಒಂದು ಕುತೂಹಲ ಕಾರಿ ಅಧ್ಯಯನ. ಇದೊಂದು ಚತುರ್ಮುಖ ಕಲೆ. ಸಂಗೀತ, ಸಾಹಿತ್ಯ, ನರ್ತನ ಬಣ್ಣಗಾರಿಕೆಗಳಿಂದ ಸಮಷ್ಠಿ ರೂಪ ಪಡೆದಿದೆ. ಬರೆದ ಸಾಹಿತ್ಯವೆಲ್ಲವೂ ಪದ್ಯರೂಪದಲ್ಲಿದ್ದು ಹಾಡಲು ಅಗತ್ಯವಾದ ರಾಗತಾಳಗಳಲ್ಲಿ ನಿಯೋಜಿತ ವಾಗಿದೆ. ಆರಾಧನೆಯ ಅಂಗವಾಗಿ ಹುಟ್ಟಿಕೊಂಡ ಈ ಕಲೆ ಇಂದು ಜನಮನದಲ್ಲಿ ನೆಲೆಸಿ ಜನಪ್ರಿಯವಾಗಿದೆ. ಇಂತಹ ವೈವಿಧ್ಯಗಳನ್ನು ಒಳಗೊಂಡ ಯಕ್ಷಗಾನ ರಂಗದಲ್ಲಿ ಕನ್ನಡ ವಿದ್ವತ್ ವಲಯ ನಾಲ್ಕು ನೆಲೆ ಹಾಗೂ ನಾಲ್ಕು ನಿಟ್ಟಿನಿಂದ ಕೆಲಸ ಮಾಡಿದೆ. ಆ ಮೂಲಕ ಈ ಪ್ರಕಾರಕ್ಕೆ ಒಂದು ಭದ್ರತೆಯನ್ನು ಒಂದು ಚೌಕಟ್ಟನ್ನು, ಒಂದು ಮಾನ್ಯತೆಯನ್ನು ಗಳಿಸಿಕೊಡುವಲ್ಲಿ ಸಫಲ ವಾಗಿದೆ. ಕನ್ನಡ ವಿದ್ವತ್ ಪರಂಪರೆ ಯಕ್ಷಗಾನದೊಂದಿಗೆ ನಡೆಸಿದ ಕೊಳು ಕೊಡೆಯು ಕನ್ನಡ ಸಾರಸ್ವತಲೋಕದಲ್ಲಿ ದಾಖಲೆಗೆ ಅರ್ಹವಾಗಿದ್ದು ಅದರ ವಿಶ್ಲೇಷಣೆ ಇಲ್ಲಿದೆ.

ಯಕ್ಷಗಾನ ಶಬ್ದದ ನಿಷ್ಪತ್ತಿಯ ಬಗ್ಗೆ ನಮ್ಮ ಕನ್ನಡ ವಿದ್ವಾಂಸರು ನಡೆಸಿದ ಚರ್ಚೆ ವಾದವಿವಾದಗಳು ಚರಿತ್ರಾರ್ಹವಾದುದು. ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಇದಂತು ಎಲ್ಲರ ಗಮನ ಸೆಳೆದಿತ್ತು. ಕೆಲವರು ಈ ಕಲಾಪ್ರಕಾರವನ್ನು ಶುದ್ಧ ಜನಪದವೆಂದು ಕೆಲವರು ಶುದ್ಧ ಶಾಸ್ತ್ರೀಯವೆಂತಲೂ, ಮತ್ತೆ ಕೆಲವರು ಇದನ್ನು ಆರಾಧನೆಯ ಅಂಗವೆಂದರೆ ಇನ್ನು ಕೆಲವು ಭಿನ್ನ ಸಂಪ್ರದಾಯವೆಂತಲೂ ಹೀಗೆ ಭಿನ್ನ ಭಿನ್ನ ನಿಲುವನ್ನು ತಾಳಿದ್ದಾರೆ. ಯಕ್ಷಗಾನ ಪದ ಉತ್ಪತ್ತಿಯ ಬಗ್ಗೆ ಚರ್ಚೆ ಮಾಡಿದವರಲ್ಲಿ ಶ್ರೀಮುಳಿಯ ತಿಮ್ಮಪ್ಪನವರು ಮೊದಲಿಗರು. ತಮ್ಮ 'ಪಾರ್ತಿಸುಬ್ಬ'ದಲ್ಲಿ ಯಕ್ಷಗಾನದ ಮೂಲ ಬೆಳವಣಿಗೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಇದು ಒಂದು ಸಂಗೀತವೆಂತಲೂ, ಗಂಧರ್ವಗಾನವಿದ್ದಂತೆ. ಒಂದು ಗಾನ ಸಂಪ್ರದಾಯ ವೆಂತಲೂ ಅಭಿಪ್ರಾಯಪಟ್ಟಿದ್ದಾರೆ. ಡಾ॥ ಶಿವರಾಮ ಕಾರಂತರು ತಮ್ಮ ಯಕ್ಷಗಾನ ಬಯಲಾಟದಲ್ಲಿ ಇದೊಂದು ಗಾನ ಸಂಪ್ರದಾಯವಾಗಿದ್ದು, ಮುಂದೆ ಕುಣಿತ, ಅಭಿನಯ, ಗದ್ಯಗಳು ಸೇರಿಕೊಂಡವು ಎನ್ನುತ್ತಾರೆ. ಶ್ರೀ ಕುಕ್ಕಿಲಕೃಷ್ಣಭಟ್ಟರು ಯಕ್ಷಗಾನ ವನ್ನು ಆರಾಧನೆಯ ಒಂದು ಅಂಗವೆಂತಲೂ, ಯಕ್ಷಶಬ್ದಕ್ಕೆ ಪೂಜೆ ಅಥವಾ ಆರಾಧನೆ ಎಂಬ ಅರ್ಥ ಪಾಣಿನಿಯ ಕಾಲದಿಂದಲೂ ಇದೆ. ಆದ್ದರಿಂದ ಆರಾಧನೆಯೇ ಇಲ್ಲಿ ಮುಖ್ಯ. ಯಕ್ಷಗಾನವು ಶಾಸ್ತ್ರೀಯ ಸಂಗೀತದಲ್ಲೇ ಹಾಡತಕ್ಕದ್ದು ಎಂಬುದು ರಾಗ ತಾಳಗಳ ನಿರ್ದೇಶನದಿಂದಲೇ ತಿಳಿಯುತ್ತದೆ ಎಂದಿದ್ದಾರೆ. ಮಲ್ಲಿನಾಥ ಪುರಾಣದಲ್ಲಿ ಉಕ್ತವಾದ ಯಕ್ಕಲಗಾಣವೇ ಯಕ್ಕಲಗಾನವಾಗಿ ಯಕ್ಷಗಾನವಾಗಿರಬಹುದು ಎಂಬ ನಿಲುವಿಗೆ ಪ್ರೊ॥ ಟಿ.ಕೇಶವಭಟ್ಟ ಅವರು ಬಂದಿರುತ್ತಾರೆ. ಇದಕ್ಕೆ ಅವರು ಈ ಬಗೆಯ ಗೇಯ ಸಾಹಿತ್ಯ ಪರಂಪರೆ ಕನ್ನಡದಲ್ಲಿ ಇರುವುದನ್ನು ತೋರಿಸಿಕೊಡುತ್ತಾರೆ. ಕವಿರಾಜಮಾರ್ಗದಲ್ಲಿ ಹೇಳಿದ ಬೆದೆಂಡೆ ಚೆತ್ತಾಣ, ಪಗರಣ ಮುಂತಾದವುಗಳನ್ನು ಕೆಲವು ವಿದ್ವಾಂಸರು ಸಮೀಕರಿಸಿದ್ದು ಇದೆ. ಶ್ರೀ ಭೀಮರಾವ್ ಚಿಟಗುಪ್ಪಿಯವರು ತಮ್ಮ ಸಂಶೋಧನಾ ಪಂಚದಶಿಯಲ್ಲಿ ಯಕ್ಷಗಾನದ ಪದದ ಕುರಿತು ಬೇರೊಂದೇ ಅಭಿಪ್ರಾಯವನ್ನು ಕೊಡುತ್ತಾರೆ. ದೇಶೀಯ 'ಜಕ್ಕ' ಶಬ್ದವು ಸಂಸ್ಕೃತದಲ್ಲಿ ಯಕ್ಷವಾಗಿ ಗಾನದೊಡನೆ ಸೇರಿ ಯಕ್ಷಗಾನವಾಗಿರಬೇಕು ಎನ್ನುತ್ತಾರೆ. ಜಾನಪದ ವಿದ್ವಾಂಸರಾದ ಡಾ॥ ಎನ್.ಆರ್.ನಾಯಕ್ ಅವರು 'ಯಕ್ಷ' ಎನ್ನುವ ಶಬ್ದಕ್ಕೆ 'ಭೂತ' ಎಂಬ ಅರ್ಥವು ಇದೆ. ಭೂತಾರಾಧನೆ ಕರಾವಳಿಯ ವೈಶಿಷ್ಟ್ಯ. ಈ ಕಾರಣ ಯಕ್ಷಗಾನ ಭೂತಾರಾಧನೆಯಿಂದ ಪ್ರೇರಣೆ ಪಡೆದಿರಬೇಕು ಎಂದು ಊಹಿಸುತ್ತಾರೆ. ಇನ್ನೋರ್ವ ವಿದ್ವಾಂಸರಾದ ಡಾ॥ ಚಂದ್ರಶೇಖರ ಕಂಬಾರರು ಬಯಲಾಟದ ಹುಟ್ಟು ಆರಾಧನೆ ಯಲ್ಲೇ ಇದೆ, ಆರಾಧನೆಯ ಶುರುವಿನಲ್ಲಿ ದೇವರ ಆವಾಹನೆ ಪ್ರಾರ್ಥನೆ ಮೂಲಕ ನಡೆಯುತ್ತದೆ. ಅಂತ್ಯದಲ್ಲೂ ಕೂಡ ದೇವರ ಗುಣಗಾನದೊಂದಿಗೆ ವಿಸರ್ಜನೆ ಆಗುತ್ತದೆ ಎಂದು ಅಭಿಪ್ರಾಯಿಸುತ್ತಾರೆ. ಹೀಗೆ ಹತ್ತು ಹಲವು ವಿದ್ವಾಂಸರು ಯಕ್ಷಗಾನ ಶಬ್ದದ ನಿಶ್ಪತ್ತಿಯ ಬಗ್ಗೆ ಸಾಕಷ್ಟು ವಿಚಾರ ವಿಮರ್ಶೆಗಳನ್ನು ನಡೆಸಿದ್ದಾರೆ.

ಯಕ್ಷಗಾನದ ಹುಟ್ಟು ಅದು ಪ್ರಚುರಗೊಂಡ ಕಾಲ ಇತ್ಯಾದಿಗಳು ಕೂಡ ವಿದ್ವಾಂಸವಲಯಕ್ಕೆ ಹೆಚ್ಚು ಗ್ರಾಸವನ್ನು ನೀಡಿದೆ. ರಾಷ್ಟ್ರಕವಿ ಗೋವಿಂದ ಪೈ, ಪಂಜೆ ಮಂಗೇಶರಾಯರು, ಮುಳಿಯ ತಿಮ್ಮಪ್ಪಯ್ಯ, ಡಾ॥ ಶಿವರಾಮ ಕಾರಂತ, ಭೀಮರಾವ್ ಚಿಟಗುಪ್ಪಿ, ಡಾ॥ ಕೆ.ಎಂ. ಕೃಷ್ಣರಾವ್, ಡಾ॥ ಡಿ.ಕೆ.ರಾಜೇಂದ್ರ ಮುಂತಾದವರು ಕಾಲಕಾಲಕ್ಕೆ ಯಕ್ಷಗಾನದ ಉಗಮ ವಿಕಾಸದ ಬಗ್ಗೆ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಡಾ॥ ಶಿವರಾಮ ಕಾರಂತರು ಹದಿನೈದನೇ ಶತಮಾನದ ಹೊತ್ತಿಗೆ ಈಗಿರುವ ಯಕ್ಷಗಾನ ಪರಂಪರೆ ಅಸ್ತಿತ್ವಕ್ಕೆ ಬಂದಿರಬೇಕು ಎಂಬ ನಿಲುವಿಗೆ ಬಂದಿರುತ್ತಾರೆ. ಯಕ್ಷಗಾನ ನೃತ್ಯದ ಗತಿಯಲ್ಲಿ ನಾಗನೃತ್ಯದ ಸ್ಫೂರ್ತಿಯನ್ನು ಡಾ॥ ಕಾರಂತರು ತೋರಿಸಿ ಕೊಡುತ್ತಾರೆ. ಭೀಮರಾವ್ ಚಿಟಗುಪ್ಪಿಯವರು ಯಕ್ಷಗಾನದ ಉಗಮವನ್ನು ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ತಳಕು ಹಾಕುತ್ತಾರೆ. ಶ್ರೀ ಕುಕ್ಕಿಲ ಕೃಷ್ಣಭಟ್ಟರು ಯಕ್ಷಗಾನದ ಮೇಲೆ ಆಂಧ್ರದ ಯಕ್ಷಗಾನದ ಪ್ರಭಾವವನ್ನು ಕಂಡು "ಪೂರ್ವದ ವಿಚಾರವೇನೇ ಇರಲಿ ಪುನರ್ ಊರ್ಜಿತಗೊಂಡ ಈಗಿನ ಆಂಧ್ರ ಹಾಗೂ ಕರ್ನಾಟಕ ಯಕ್ಷಗಾನ ಸಂಪ್ರದಾಯಗಳು ಮೂಲತಃ ಆಂಧ್ರ ಪರಂಪರೆಯಿಂದಲೇ ವಿಸ್ತಾರಗೊಂಡಿದೆ ಎಂಬುದರಲ್ಲಿ ನ್ಯಾಯವಿದೆ ಎಂಬ ನಿಲುವಿಗೆ ಬರುತ್ತಾರೆ. ಡಾ॥ ಡಿ.ಕೆ. ರಾಜೇಂದ್ರ ಅವರು "ಯಕ್ಷಗಾನವು ಕಾಲಕ್ರಮದಲ್ಲಿ ಬದಲಾದ ರಂಗಪ್ರಕಾರವಾಗಿದ್ದು, ಯಾವುದೋ ಒಂದು ಮೂಲದಿಂದ ಈ ಕಲೆ ಹುಟ್ಟಿದ್ದು ಆ ಮೂಲ ದ್ರಾವಿಡವೇ ಆಗಿದೆ" ಎಂಬ ವಿಚಾರ ತಿಳಿಸುತ್ತಾರೆ. ಡಾ॥ ಬಿ.ರಾಮಚಂದ್ರರಾವ್ ಅವರು ಕೂಡ ಯಕ್ಷಗಾನಕ್ಕೆ ಆಂಧ್ರದೊಂದಿಗೆ ಇರುವ ನಂಟನ್ನು ಸಮರ್ಥಿಸುತ್ತಾ ಆಂಧ್ರ ಸಾಹಿತ್ಯದಲ್ಲಿ ಯಕ್ಷಗಾನ ಪ್ರಬಂಧಗಳಿಗೆ ಮಹತ್ವವಾದ ಸ್ಥಾನವಿದೆ ಎಂದು ತೋರಿಸಿಕೊಟ್ಟಿದ್ದಾರೆ. ಹೀಗೆ ವಿವಿಧ ವಿದ್ವಾಂಸರು ಯಕ್ಷಗಾನದ ಹುಟ್ಟಿನ ಬಗ್ಗೆ ಹಾಗೂ ಅದರ ವಿಕಾಸದ ಬಗ್ಗೆ ಚರ್ಚಿಸುವ ಮೂಲಕ ನಮ್ಮ ಯಕ್ಷಗಾನ ರಂಗಕ್ಕೆ ತಮ್ಮ ವಿದ್ವತ್ತಿನ ಸ್ಪರ್ಶವನ್ನು ನೀಡಿದ್ದಾರೆ.

ಯಕ್ಷಗಾನ ಶಾಸ್ತ್ರೀಯವೇ, ಜಾನಪದವೇ ಎಂಬುದರ ಬಗ್ಗೆ ಕೂಡ ವ್ಯಾಪಕವಾದ ಚರ್ಚೆ ವಿದ್ವಾಂಸ ವಲಯದಲ್ಲಿ ನಡೆದಿದೆ. ಡಾ॥ ಹೆಚ್.ಕೆ.ರಂಗನಾಥ್ ಅವರಂತಹ ರಂಗಭೂಮಿ ವಿದ್ವಾಂಸರು ಯಕ್ಷಗಾನ ಕಲೆಯನ್ನು ಜಾನಪದದ ರಂಗಭೂಮಿಯ ವ್ಯಾಪ್ತಿಗೆ ಸೇರಿಸುತ್ತಾರೆ. "Yakshagana is a folk art & Typical one. It has been an entertainment essatially for the masses as differentiated from classes. It is typical 'Desi' art in contrast with the marga, for its basis is sampradaya not shastra" ಹೀಗೆಂದು ತಿಳಿಸಿರುವ ಶ್ರೀ ಹೆಚ್.ಕೆ. ರಂಗನಾಥರು ಶಾಸ್ತ್ರದ ನಿಯಮಗಳಿಗಿಂತ ಸಂಪ್ರದಾಯದ ರೂಢಿಯ ನಿಯಮಗಳಿಗೆ ಇಲ್ಲಿ ಹೆಚ್ಚು ಬದ್ಧತೆ ಎನ್ನುತ್ತಾರೆ. ಇದೇ ರೀತಿಯ ವಿಚಾರಗಳನ್ನು ಡಾ॥ ಡಿ.ಕೆ.ರಾಜೇಂದ್ರ ಅವರು, ಡಾ॥ ಚಂದ್ರಶೇಖರ್ ಕಂಬಾರರು, ಡಾ॥ ಎನ್.ಆರ್.ನಾಯಕ್ ಅವರು,

ಡಾ॥ ಹೆಚ್.ಬಿ.ಯಶೋಧರ ಮುಂತಾದವರು ವ್ಯಕ್ತಪಡಿಸಿದ್ದಾರೆ. ಆದರೆ ಶ್ರೀ ಕುಕ್ಕಿಲ ಕೃಷ್ಣಭಟ್ಟರು, ಶ್ರೀ ಕುಬಣೂರು ಬಾಲಕೃಷ್ಣರಾವ್, ಡಾ॥ ಕಬ್ಬಿನಾಲೆ ವಸಂತ ಭಾರದ್ವಾಜ್, ಡಾ॥ ಆರ್.ಗಣೇಶ್ ಮುಂತಾದವರು ಇದು ಶುದ್ಧ ಶಾಸ್ತ್ರೀಯವೇ ಎಂಬ ಧೋರಣೆಯನ್ನು ತಳೆಯುತ್ತಾರೆ. ಯಾವುದೇ ಕಲೆಯ ಉಗಮ ಜಾನಪದವೇ ಆದರೂ ಅದು ವಿಕಾಸಗೊಂಡಾಗ ಅನೇಕ ನಿಯಮ ನಿಬಂಧನೆಗಳ ಸಂಸ್ಕಾರಕ್ಕೆ ಒಳಗಾಗಿ ಶಾಸ್ತ್ರೀಯವೆನಿಸುತ್ತದೆ. ಯಕ್ಷಗಾನವು ಈ ಪ್ರಕ್ರಿಯೆಗೆ ಹೊರತಾದುದದಲ್ಲ ಎಂಬ ನಿಲುವನ್ನು ಈ ವರ್ಗದ ವಿದ್ವಾಂಸರು ವ್ಯಕ್ತಪಡಿಸುತ್ತಾರೆ. ಈ ಬಗೆಯ ಚರ್ಚೆ ಯಕ್ಷಗಾನ ಕಲೆಗೆ ಒಂದು ಮಹತ್ವವನ್ನು ಹಾಗೂ ಅಕಾಡೆಮಿಕ್ ಪ್ರಭಾವಳಿಯನ್ನು ನಿರ್ಮಿಸಿಕೊಟ್ಟಿದೆ. ಈ ಮಾರ್ಗ, ದೇಸೀಯ, ಶಾಸ್ತ್ರೀಯ, ಜಾನಪದ ತಾಕಲಾಟಗಳು ಇಂದಿಗೂ ನಿಂತಿಲ್ಲ. ಆಗಾಗ್ಗೆ ಚರ್ಚೆ ವಿದ್ವಾಂಸವಲಯದಲ್ಲಿ ನಡೆಯುತ್ತಲೇ ಇರುತ್ತದೆ. ಹೀಗೆ ಈ ಎರಡು ವಿಚಾರಗಳಲ್ಲಿ ಕನ್ನಡ ವಿದ್ವತ್‌ವಲಯ ಯಕ್ಷಗಾನವನ್ನು ಆಸಕ್ತಿಯ, ಚರ್ಚೆಯ ಕ್ಷೇತ್ರವಾಗಿ ಬಳಸಿಕೊಂಡಿದೆ.

ಯಕ್ಷಗಾನ ಪ್ರದರ್ಶನ ನಿಂತಿರುವುದು ಪ್ರಸಂಗಗಳ ಆಧಾರದ ಮೇಲೆ ಯಕ್ಷಗಾನ ಪ್ರಸಂಗಗಳು ಕಿರಿದಾಗಿದ್ದು ಕನ್ನಡ ಗೇಯ ಕಾವ್ಯದ ಲಕ್ಷಣಗಳನ್ನು ಒಳಗೊಂಡಿದೆ. ಅತ್ತ ಮಾರ್ಗವು ಅಲ್ಲದ, ಇತ್ತ ಜಾನಪದವು ಅಲ್ಲದ ಒಂದು ವಿಶಿಷ್ಟ ಬಗೆಯ ಹದದಲ್ಲಿ ಈ ಸಾಹಿತ್ಯ ಪ್ರಕಾರ ರೂಪುಗೊಂಡಿದೆ. ಯಕ್ಷಗಾನ ಕೃತಿಗಳ ಕುರಿತು ಮೊದಲಿಗೆ ಉಲ್ಲೇಖಗೊಂಡಿರುವುದು ಬಿ.ಎಲ್.ರೈಸ್ ಅವರ ಮೂಲಕ. 19ನೇ ಶತಮಾನದಲ್ಲಿ ಯಕ್ಷಗಾನ ಪ್ರಸಂಗಗಳ ಪ್ರಕಟಣೆ ಬಹಳಷ್ಟು ಭರಾಟೆಯಿಂದ ನಡೆಯುತ್ತಿತ್ತು ಎಂದು ಅವರು ದಾಖಲಿಸುತ್ತಾರೆ. ಆದರೆ ವಿದ್ವಾಂಸ ವಲಯವು ಅವುಗಳ ಅಧಿಕ್ಯವನ್ನು ಅಷ್ಟಾಗಿ ಗಣನೆಗೆ ತಂದುಕೊಂಡಿರಲಿಲ್ಲ. ಕವಿ ಚರಿತ್ರೆಕಾರರಾದ ಆರ್.ನರಸಿಂಹಾಚಾರ್ ಅವರಾಗಲಿ, ಮುಂದೆ ಸಾಹಿತ್ಯ ಚರಿತ್ರೆಕಾರರಾದ ರಂ.ಶ್ರೀ. ಮುಗುಳಿಯವರಾಗಲೀ ಈ ಕಿರು ಸಾಹಿತ್ಯ ಪ್ರಕಾರಕ್ಕೆ ಸಲ್ಲಬೇಕಾದ ಮನ್ನಣೆಯನ್ನು ಕೊಡದೇ ಇರುವುದೇ ಖೇದದ ಸಂಗತಿಯಾಗಿದೆ. ಕರಾವಳಿ ಪ್ರದೇಶದ ಶಿಕ್ಷಣ ಕ್ರಮದಲ್ಲಿ ಯಕ್ಷಗಾನ ಪ್ರಸಂಗಗಳು ಪಠ್ಯಪುಸ್ತಕದಂತೆ ಬಳಕೆಯಾಗುತ್ತಿದ್ದುದನ್ನು ನೋಡಿದಾಗ ಹಾಗೂ ನಾಡಿನಾದ್ಯಂತ ಅಸಂಖ್ಯ ಕೃತಿಗಳು 19ನೇ ಶತಮಾನದಲ್ಲೇ ಪ್ರಕಟಗೊಂಡಿದ್ದನ್ನು ಗಮನಿಸಿದಾಗ ವಿದ್ವಾಂಸರ ಅವಜ್ಞೆಗೆ ಏಕೆ ಗುರಿಯಾಯಿತು ಎಂಬುದನ್ನು ಯೋಚಿಸಬೇಕಾದ ವಿಷಯವಾಗಿದೆ. ಆದರೆ 20ನೇ ಶತಮಾನದಲ್ಲಿ ಈ ಚಿತ್ರಣ ಬದಲಾದದ್ದೇ ಸಂತೋಷದ, ಸಮಾಧಾನದ ಸಂಗತಿ. ಯಕ್ಷಗಾನ ಪ್ರಸಂಗಗಳ ಬಗ್ಗೆ ನಮ್ಮ ಕನ್ನಡ ವಿದ್ವಾಂಸರು ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಪ್ರಸಂಗ ಗ್ರಂಥ ಸಂಪಾದನೆ ಪ್ರಸಂಗಗಳ ವಿಚಾರ ವಿಮರ್ಶೆ, ಪ್ರಸಂಗಗಳ ಪ್ರದರ್ಶನ ವಿಮರ್ಶೆ, ಪ್ರಸಂಗಕಾರರ ಬದುಕು ಬರಹಗಳ ವಿಚಾರ ಮುಂತಾದವುಗಳ ಮೂಲಕ ಪ್ರಸಂಗ ಸಾಹಿತ್ಯದ ಅಧ್ಯಯನ ಕಳೆದ ಎಪ್ಪತ್ತು ಎಂಭತ್ತು ವರ್ಷಗಳಿಂದ ನಡೆದುಕೊಂಡು

ಬಂದಿದೆ. ಕವಿ ಮುದ್ದಣನು ಎರಡು ಯಕ್ಷಗಾನ ಪ್ರಸಂಗಗಳನ್ನು 19ನೇ ಶತಮಾನದಲ್ಲಿ ರಚಿಸಿದ್ದರೂ, ನಾಡಿಗೆ ಆತ ಕವಿಯಾಗಿಯೇ ಖ್ಯಾತಿಗೊಂಡವನು. ಕುಮಾರ ವಿಜಯದ ಬಗ್ಗೆ ಪಂಜೆ ಮಂಗೇಶರಾಯರು ಮೆಚ್ಚುಗೆ ಮಾತನಾಡಿದ್ದಾರೆ. ಆದರೆ ಅಕಾಡೆಮಿಕ್ ವಿದ್ವತ್ ವಲಯ ಈ ಪ್ರಸಂಗಗಳ ಕುರಿತು ಸಾಹಿತ್ಯಕವಾಗಿ ಪರಿಗಣನೆಗೆ ತೆಗೆದುಕೊಳ್ಳಲಿಲ್ಲ. ಇದೇ ಖೇದದ ಸಂಗತಿ.

ಕರಾವಳಿಯಲ್ಲಿ ಪ್ರಚಲಿತ ಪ್ರಸಂಗ ಸಾಹಿತ್ಯಕ್ಕೆ ವಿದ್ವಾಂಸವಲಯದ ಸಂಪರ್ಕ ಮೊತ್ತಮೊದಲಿಗೆ ಲಭಿಸಿದ್ದು, 1924ರ ಸುಮಾರಿಗೆ ಅದು ಯಕ್ಷಗಾನ ಕವಿಯೊಬ್ಬನ ಕುರಿತಾದ ಪರಿಚಯದ ಸಂಶೋಧನೆಯ ವಿವರವನ್ನು ಒಳಗೊಂಡ ಲೇಖನವಾಗಿದೆ. ಹಟ್ಟಿಯಂಗಡಿ ರಾಮಭಟ್ಟನ ಬಗ್ಗೆ ಐರೋಡಿ ಶಿವರಾಮಯ್ಯನವರು ಬರೆದ ಲೇಖನವೇ ಅದಾಗಿದೆ. ಅಸಮಯದ ಅಸುಪಾಸಿನಲ್ಲಿ ಹೀಗೆ ಬಿಡಿಬಿಡಿಯಾಗಿ ಯಕ್ಷಗಾನ ಕವಿಗಳ ಬಗ್ಗೆ, ಪ್ರಸಂಗಗಳ ಬಗ್ಗೆ ಅಲ್ಲಲ್ಲಿ ಬರಹಗಳು ಬಂದದ್ದನ್ನು ಕಾಣಬಹುದು. ಆದರೆ ಯಕ್ಷಗಾನ ಕವಿಯೊಬ್ಬನ ಕುರಿತಾಗಿ ಪುಸ್ತಕರೂಪದಲ್ಲಿ ಬಂದ ಮೊದಲ ಕೃತಿ ಎಂದರೆ 1942ರಲ್ಲಿ ಬಂದ ದಿ॥ ಮುಳಿಯ ತಿಮ್ಮಪ್ಪಯ್ಯನವರ 'ಪಾರ್ತಿಸುಬ್ಬ' ಮುಂದೆ 1957ರಲ್ಲಿ ಬಂದ ಡಾ॥ ಕಾರಂತರ "ಯಕ್ಷಗಾನ ಬಯಲಾಟ"ದಲ್ಲಿ ಪ್ರಸಂಗಕಾರರ ಹಾಗೂ ಪ್ರಸಂಗಗಳ ಪರಿಚಯ ಲಭಿಸುತ್ತದೆ. ಮುಂದೆ ಶ್ರೀ ಕುಕ್ಕಿಲ ಕೃಷ್ಣಭಟ್ಟರು ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿರುವ "ಪಾರ್ತಿಸುಬ್ಬನ ಯಕ್ಷಗಾನ"ಗಳು ಎಂಬ ಕೃತಿಯಲ್ಲಿ ಸವಿವರವಾದ ವಿಚಾರಗಳು ವಿದ್ವಾಂಸ ವಲಯಕ್ಕೆ ಗ್ರಾಹ್ಯವಾಗುವ ರೀತಿಯಲ್ಲಿ ಬಂದಿದೆ.

ಪ್ರಸಂಗ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕನ್ನಡ ವಿದ್ವಾಂಸ ವಲಯ ಎರಡು ರೀತಿಯ ಕೈಂಕರ್ಯವನ್ನು ನಡೆಸಿಕೊಂಡು ಬಂದಿದೆ. ಮೊದಲನೆಯದು ಯಕ್ಷಗಾನ ಪ್ರಸಂಗಗಳ ಗ್ರಂಥ ಸಂಪಾದನೆಯಾದರೆ, ಎರಡನೆಯದು ಪ್ರಸಂಗಗಳ ಕುರಿತಾದ ವಿಚಾರ ವಿಮರ್ಶೆ ಶ್ರೀಕುಕ್ಕಿಲ ಕೃಷ್ಣಭಟ್ಟರಿಂದ 1975ರಲ್ಲಿ ಪ್ರಾರಂಭವಾದ ಈ ಗ್ರಂಥ ಸಂಪಾದನೆ ಕಾಯಕ ಈಚೆಗೆ ಬೆಳೆಯುತ್ತಿದೆ. ಶ್ರೀ ವಿವೇಕರೈ ಸಂಪಾದಿಸಿರುವ ಮಂಗಳೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಯಕ್ಷಗಾನ ಪ್ರಸಂಗ ಸಂಪುಟದಲ್ಲಿ ಹತ್ತು ಪ್ರಸಂಗಗಳು ಸಮರ್ಪಕವಾಗಿ ಗ್ರಂಥ ಸಂಪಾದನೆಗೊಂಡಿದ್ದು ವಿದ್ವತ್ ವಲಯದ ಗಮನ ಸೆಳೆದಿದ್ದನ್ನು ಕಾಣಬಹುದು. ಹಿಂದೆಲ್ಲಾ ವ್ಯಾವಹಾರಿಕ ದೃಷ್ಟಿಯಿಂದ ಪ್ರಸಂಗಗಳು ಅಚ್ಚಾಗುತ್ತಿದ್ದವೇ ಹೊರತು, ಅದಕ್ಕೊಂದು ಶಾಸ್ತ್ರೀಯ ನೆಲೆಕಟ್ಟು ಇರುತ್ತಿರಲಿಲ್ಲ. ಮುಂದೆ 2006ರಲ್ಲಿ ಅದೇ ವಿಶ್ವವಿದ್ಯಾಲಯ ಡಾ॥ ಪಾದೇಕಲ್ಲು ವಿಷ್ಣುಭಟ್ಟರ ಸಂಪಾದಕತ್ತ್ವದಲ್ಲಿ ನಾಲ್ಕು ಅಪ್ರಕಟಿತ ಪ್ರಸಂಗಗಳ ಪ್ರಕಟಣೆಯನ್ನು ಮಾಡಿದ್ದನ್ನು ಕಾಣಬಹುದು. ಶ್ರೀಕುಕ್ಕಿಲರ ಕೃತಿಯಂತೆ ಇಲ್ಲೆಲ್ಲಾ ಸುದೀರ್ಘವಾದ ವಿವರಣೆಗಳು ಪೀಠಿಕೆಯಲ್ಲಿ ಬಂದಿವೆ. ಮುಂದೆ ಉಡುಪಿಯ ಯಕ್ಷಗಾನ ಕಲಾಕೇಂದ್ರವು ಕೂಡ ಈ ರೀತಿಯ ಪ್ರಕಟಣೆಗೆ ಮುಂದಾಯಿತು. ಇದರ ಫಲವಾಗಿ ಹಟ್ಟಿಯಂಗಡಿ

ರಾಮಭಟ್ಟರ ಯಕ್ಷಗಾನ ಕಲಾಕೃತಿಗಳನ್ನು ಪಾದೇಕಲ್ಲು ಶ್ರೀ ವಿಷ್ಣುಭಟ್ಟರು ಸಂಪಾದಿಸಿ ಕೊಟ್ಟಿದ್ದಾರೆ. ಡಾ|| ಕಬ್ಬಿನಾಲೆ ವಸಂತ ಭಾರದ್ವಾಜರು 'ಯಕ್ಷಗಾನ ಕವಿಕಾವ್ಯ ವಿಹಾರ' ಎಂಬ ಕೃತಿಯ ಮೂಲಕ ಹಳೆಯ ಹಾಗೂ ಆಧುನಿಕ 20 ಕವಿಗಳ ಪರಿಚಯ ಹಾಗೂ ಪ್ರಸಂಗಗಳ ಮಹತ್ವಿಕೆಯನ್ನು ಒಂದೆಡೆ ಕಲೆಹಾಕಿದ್ದಾರೆ. ಉಡುಪಿ ಯಕ್ಷಗಾನ ಕಲಾ ಕೇಂದ್ರದವರೇ ಪ್ರಕಟಿಸಿದ್ದಾರೆ. ಹಸ್ತಪ್ರತಿಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಪ್ರಸಂಗಗಳನ್ನು ಬೆಳಕಿಗೆ ತರುವಲ್ಲಿ ಶ್ರಮಿಸಿದವರಲ್ಲಿ ಹೊಸ್ತೋಟ ಮಂಜುನಾಥ ಭಾಗವತರ ಪ್ರಯತ್ನ ಶ್ಲಾಘನೀಯ. ಅವರು ಸಂಪಾದಿಸಿ ಯಕ್ಷಶಾಲ್ಮಲಾ ಪ್ರತಿಷ್ಠಾನ ಸೊಂದಾ ಇವರಿಂದ ಪ್ರಕಟಗೊಂಡ 'ಯಕ್ಷಗಾನ ರಾಮಾಯಣ', 'ಯಕ್ಷಗಾನ ಶ್ರೀಕೃಷ್ಣ ಮಹಿಮೆ' ಕೂಡ ಇಲ್ಲಿ ಮನನೀಯ.

ಯಕ್ಷಗಾನ ಪ್ರಸಂಗಗಳ ಕುರಿತು ಅನೇಕ ವಿದ್ವಾಂಸರು ಅಧ್ಯಯನ ನಡೆಸಿರುತ್ತಾರೆ. ಇದು ಪಂಜೆ, ಮುಳಿಯರಿಂದ ಪ್ರಾರಂಭವಾದದ್ದು ಇಂದಿಗೂ ನಡೆದುಕೊಂಡು ಬಂದಿದೆ. ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಪ್ರೌಢ ವ್ಯಾಸಂಗಕ್ಕೆ ಆರಿಸಿಕೊಂಡು ಇದೇ ಲೇಖಕನು ಬರೆದ 'ಯಕ್ಷಗಾನ ರಾಮಾಯಣ ಪ್ರಸಂಗಗಳು' ಹಾಗೂ 'ಯಕ್ಷಗಾನ ಮಹಾಭಾರತ ಪ್ರಸಂಗಗಳು' ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ಗಳಿಸಿವೆ. ಕನ್ನಡದಲ್ಲಿ ಅದರಲ್ಲೂ ಕರಾವಳಿ ಭಾಗದಲ್ಲೂ ವಿಪುಲವಾಗಿರುವ ರಾಮಾಯಣ ಹಾಗೂ ಮಹಾಭಾರತಕ್ಕೆ ಸಂಬಂಧಿಸಿದ ಯಕ್ಷಗಾನ ಪ್ರಸಂಗಗಳ ಕುರಿತ ಅಧ್ಯಯನ ಅಲ್ಲಿದೆ. ಡಾ|| ಎಂ. ಪ್ರಭಾಕರ ಜೋಷಿಯವರು ಮಾಡಿರುವ "ಕೃಷ್ಣ–ಸಂಧಾನ ಪ್ರಸಂಗ–ಪ್ರಯೋಗ"ವೆಂಬ ಅಧ್ಯಯನ ಡಾ|| ಪಾದೇಕಲ್ಲು ವಿಷ್ಣುಭಟ್ಟರು ಬರೆದಿರುವ "ಯಕ್ಷಗಾನ ಭಾಗವತ ಪ್ರಸಂಗಗಳು" ಎಂಬ ಸಂಪ್ರಬಂಧ, ಡಾ|| ರಾಘವ ನಂಬಿಯಾರ್ ಅವರ ಪ್ರೌಢ ಪ್ರಬಂಧ "ಯಕ್ಷಗಾನ ಹಿಮ್ಮೇಳ" ಡಾ|| ಕಬ್ಬಿನಾಲೆ ವಸಂತ ಭಾರದ್ವಾಜ್ ಬರೆದಿರುವ ಯಕ್ಷಗಾನ ಛಂದಸ್ಸು - ಒಂದು ಅಧ್ಯಯನ, ರಾಮಕೃಷ್ಣ ಜೋಟ ಅವರು ಕೆರೆಮನೆ ಮೇಳದ ಮೇಲೆ ನಡೆಸಿದ ಅಧ್ಯಯನ, ಶ್ರೀ ಎನ್. ನಾರಾಯಣ ಶೆಟ್ಟಿಯವರ ಛಂದಸ್ಸು ಶಾಸ್ತ್ರ ಸಂಬಂಧಿಸಿದ ಕೃತಿ, ಡಾ|| ಜಿ.ಎಸ್. ಭಟ್ ಅವರು ಶಂಭು ಹೆಗಡೆಯವರ ಕುರಿತು ನಡೆಸಿದ ಅಧ್ಯಯನ, ಹೀಗೆ ಹತ್ತು ಹಲವು ವಿದ್ವಾಂಸರು ಪ್ರಸಂಗಗಳ ಕುರಿತು ನಡೆಸಿದ ಅಧ್ಯಯನಗಳು ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ಗಳಿಸಿವೆ. ಕನ್ನಡ ವಿದ್ವತ್ ಪರಂಪರೆಯೊಂದಿಗೆ ಈ ಕೃತಿಗಳು ಬೆಸೆದುಗೊಂಡಿವೆ.

ಯಕ್ಷಗಾನ ಪ್ರಸಂಗಕಾರರ ಬಗ್ಗೆ ಸಾಕಷ್ಟು ಲೇಖನಗಳು, ಕೃತಿಗಳು ಕನ್ನಡದಲ್ಲಿ ಬಂದಿವೆ. ಕನ್ನಡದ ವಿದ್ವಾಂಸರೇ ಇವುಗಳ ರಚನೆಗೆ ಕಾರಣವಾಗಿದ್ದಾರೆ. ಶ್ರೀ ಅಮೃತ ಸೋಮೇಶ್ವರರಂತಹ ವಿದ್ವಾಂಸರು ಸ್ವತಃ ಪ್ರಸಂಗ ಸೃಷ್ಟಿಸಿರುವುದಲ್ಲದೇ ಅನೇಕ ಪ್ರಸಂಗಕಾರರ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ತಾಳ್ತಜೆ ಶ್ರೀಕೃಷ್ಣಭಟ್ಟರು 'ಯಕ್ಷಗಾನಪ್ರಭ', ಡಾ|| ಕೆ.ಎಂ.ಕೃಷ್ಣರಾವ್ ಅವರ 'ಯಕ್ಷಗಾನ ಸಾಹಿತ್ಯ' (1959ರಲ್ಲಿ ಪ್ರಕಟಗೊಂಡಿದ್ದು)

ಶ್ರೀ ಜಿ.ಆರ್.ಪಾಂಡೇಶ್ವರ್ ಅವರ 'ಯಕ್ಷಗಾನ ಕಲೆ', ಪ್ರೊ॥ ಟಿ.ಕೇಶವಭಟ್ಟರ 'ಯಕ್ಷಗಾನ ಕಲಾದರ್ಶನ', ಪ್ರೊ॥ ಶ್ರೀನಿವಾಸ ಭಟ್ಟರ 'ಯಕ್ಷಗಾನ ಕಲಾವಿದರು', ಶ್ರೀ ಅಮೃತ ಸೋಮೇಶ್ವರರ 'ಪ್ರಸಂಗ ಸಂಪುಟ' ಹೀಗೆ ಹತ್ತು ಹಲವು ವಿದ್ವಾಂಸರು ನಡೆಸಿರುವ ಸಾಹಿತ್ಯಸೇವೆ ಗಮನಾರ್ಹವಾದುದು.

ಯಕ್ಷಗಾನದ ಛಂದಸ್ಸನ್ನು ಕುರಿತು ಸಾಕಷ್ಟು ವಿದ್ವಾಂಸರು ತಮ್ಮ ಕೃತಿಯಲ್ಲಿ ಚರ್ಚಿಸಿದ್ದಾರೆ. ಶ್ರೀ ಕ.ಪು. ಸೀತಾರಾಮ ಕೆದಿಲಾಯ ಅವರ 'ಯಕ್ಷಗಾನ ಛಂದಸ್ಸು' 1964ರಲ್ಲೇ ಪ್ರಕಟಗೊಂಡಿತ್ತು. ಯಕ್ಷಗಾನ ಛಂದಸ್ಸಿನ ಕುರಿತು ದೀರ್ಘವಾಗಿ ಅಧ್ಯಯನ ನಡೆಸಿದವರಲ್ಲಿ ಡಾ॥ ಎನ್.ನಾರಾಯಣಶೆಟ್ಟಿ, ಡಾ॥ ಕಬ್ಬಿನಾಲೆ ವಸಂತ ಭಾರದ್ವಾಜ್ ಪ್ರಮುಖರು. ಯಕ್ಷಗಾನ ಸಂಗೀತಕ್ಕೆ ಸಂಬಂಧಿಸಿದಂತೆ ಪ್ರೊ॥ ರಾಜಗೋಪಾಲಾಚಾರ್, ಗಮಕಕ್ಕೆ ಸಂಬಂಧಿಸಿದಂತೆ ಶ್ರೀ ಟಿ.ಕೇಶವಭಟ್ಟರು ಚಿಂತನೆ ನಡೆಸಿದ್ದಾರೆ. ಹೀಗೆ ಯಕ್ಷಗಾನ ಛಂದಸ್ ಶಾಸ್ತ್ರವು ಕೂಡ ವಿದ್ವತ್‌ವಲಯದ ಗಮನ ಸೆಳೆದಿದೆ.

ಯಕ್ಷಗಾನಕ್ಕೆ ಸಂಬಂಧಿಸಿದಂತೆ ಕನ್ನಡ ವಿದ್ವಾಂಸರು ತಮ್ಮ ವಿಚಾರಗಳನ್ನು ಮಂಡಿಸಿರುವುದು ಹೆಚ್ಚಾಗಿ ಅಭಿನಂದನಾ ಗ್ರಂಥಗಳಲ್ಲಿ ಯಕ್ಷಗಾನ ಕಲಾವಿದರಿಗೆ ಸಂಬಂಧಿಸಿದಂತೆ ಬಂದಿರುವ ಅನೇಕ ಅಭಿನಂದನಾ ಹಾಗೂ ಸಂಸ್ಮರಣ ಗ್ರಂಥಗಳಲ್ಲಿ ನಮ್ಮ ವಿದ್ವತ್‌ವಲಯ ತಮ್ಮ ವಿಚಾರಧಾರೆಯನ್ನು ಹರಿಬಿಟ್ಟಿದ್ದಾರೆ. ಇದರಲ್ಲಿ ಉಲ್ಲೇಖಾರ್ಹವೆಂದರೆ 1980ರಲ್ಲಿ ಪ್ರಕಟಗೊಂಡ ಪೊಳಲಿ ಶ್ರೀಶಂಕರನಾರಾಯಣ ಶಾಸ್ತ್ರಿಗಳ ಸಂಸ್ಮರಣ ಗ್ರಂಥವಾದ 'ಯಕ್ಷಗಾನ ಮಕರಂದ', ಶ್ರೀ ಮುಳಿಯ ಮಹಾಬಲಭಟ್ಟರು ಸಮರ್ಥವಾಗಿ ಸಂಪಾದಿಸಿಕೊಟ್ಟಿದ್ದಾರೆ. ಅದೇ ರೀತಿ 1981ರಲ್ಲಿ ಬಂದ ಮಾಂಬಾಡಿ ನಾರಾಯಣ ಭಾಗವತರ ಅಭಿನಂದನಾ ಗ್ರಂಥವಾದ 'ರಂಗವೈಖರಿಯು ಮೌಲಿಕವಾದ ಲೇಖನಗಳನ್ನು ಒಳಗೊಂಡಿದೆ. ಶೇಣಿಯವರ ಅಭಿನಂದನಾ ಗ್ರಂಥ 'ಆಶುವೈಭವ', ಅರ್ಕುಳ ಸುಬ್ರಾಯ ಆಚಾರರ ಸಂಸ್ಮರಣ ಗ್ರಂಥವಾದ 'ಸ್ವರ್ಣಕಮಲ', ಈಚೆಗೆ ಪ್ರಕಟಗೊಂಡ ಶ್ರೀ ಶ್ರೀಧರ ಹಂದೆಯವರ ಅಭಿನಂದನಾ ಗ್ರಂಥವಾದ 'ಸಿರಿಸಂಪದ' ಮುಂತಾದವೆಲ್ಲಾ ಉಲ್ಲೇಖನಾರ್ಹ. ಇದೇ ರೀತಿ ಅನೇಕ ನೆನಪಿನ ಸಂಚಿಕೆಗಳಲ್ಲೂ ಕೂಡ ಯಕ್ಷಗಾನ ಸಂಬಂಧ ಪ್ರೌಢಲೇಖನಗಳಿವೆ. ಯಕ್ಷಗಾನದ ಕುರಿತು ಅನೇಕ ಹಿರಿಯ ಕಿರಿಯ ವಿದ್ವಾಂಸರ ಲೇಖನಗಳುಳ್ಳ 'ಒಡ್ಡೋಲಗ' (ಬಂಟರ ಯಕ್ಷಗಾನ ಕಲೋತ್ಸವ ಸಮಿತಿಯ ನೆನಪಿಗೆ ಬಂಟರ ಸಂಘದ ಪ್ರಕಟಣೆ) ಯಕ್ಷಗಾನಕ್ಕೆ ಸಂಬಂಧಿಸಿದಂತೆ ಮಹತ್ವದ ವಿದ್ವತ್‌ವಲಯ ಪರಿಗಣಿಸಲೇಬೇಕಾದ ಸಂಗತಿಯನ್ನು ಒಳಗೊಂಡಿದೆ. ಇದೇ ರೀತಿ ಅನೇಕ ಸಂಸ್ಮರಣೆ ಗ್ರಂಥಗಳಲ್ಲಿ ಕರಾವಳಿ ಪ್ರದೇಶದ ವಿದ್ವಾಂಸರ ಪ್ರೌಢಲೇಖನಗಳು ಬಂದಿವೆ. ಯಕ್ಷಗಾನಕ್ಕೆ ಸಂಬಂಧಿಸಿದಂತೆ ನಡೆದ, ನಡೆಯುತ್ತಿರುವ ಅನೇಕ ವಿಚಾರ ಸಂಕೀರ್ಣ, ಶಿಬಿರಗಳಲ್ಲೂ ಕೂಡ ಕನ್ನಡ ವಿದ್ವತ್ ವಲಯ ಭಾಗವಹಿಸಿ ಯಕ್ಷಗಾನ ಕುರಿತಾದ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಿದ್ದಾರೆ. ಈ ಬಗೆಯ ಯಕ್ಷಗಾನ ಕುರಿತಾದ ಮೊದಲ ದಾಖಲೆ ಎಂದರೆ

ಮೈಸೂರು ಸಂಗೀತ ನಾಟಕ ಅಕಾಡೆಮಿ 1969ರಲ್ಲಿ ಪ್ರಕಟಿಸಿದ 'ಯಕ್ಷಗಾನ ವಿವೇಚನೆ' (ಎಂ.ಜಿ.ಎಂ. ಕಾಲೇಜಿನಲ್ಲಿ ನಡೆದ ವಿಚಾರಗೋಷ್ಠಿಯ ಫಲ) ಡಾ॥ ಶಿವರಾಮ ಕಾರಂತರು ನಡೆಸಿದ ಈ ಶಿಬಿರದ ಫಲಶೃತಿಯಾಗಿ ಯಕ್ಷಗಾನಕ್ಕೆ ಸಂಬಂಧಿಸಿದ ಮೌಲಿಕ ವಿಚಾರಗಳು ಈ ಪುಸ್ತಕದಲ್ಲಿದ್ದು ವಿದ್ವತ್ ವಲಯ ಅಧ್ಯಯನಕ್ಕೆ ಆರಿಸಿಕೊಳ್ಳಬಹುದಾದ ವಿಚಾರಗಳ ಬಗ್ಗೆ ಸೂಚನೆ ದೊರೆಯುತ್ತದೆ. ಇದೊಂದು ರೀತಿಯ ದಿಕ್‌ಸೂಚಿ ಕೃತಿಯಾಗಿದೆ.

ಹೀಗೆ ಯಕ್ಷಗಾನಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಂಶೋಧನೆಯ, ಪರಾಮರ್ಶೆಯ ಕಾರ್ಯ ನಡೆದಿದ್ದರೂ ಅಖಿಲ ಕರ್ನಾಟಕ ಮಟ್ಟದಲ್ಲಿ, ವಿದ್ವತ್ ವಲಯದ ಗಮನ ಸೆಳೆಯುವಲ್ಲಿ ಕೊರತೆ ಇದೆ. ಇದಕ್ಕೆ ಮೊದಲನೆಯ ಕಾರಣ ವಿಶ್ವವಿದ್ಯಾಲಯವನ್ನು ಅವಲಂಬಿಸಿರುವ ವಿದ್ವಾಂಸರು ಯಕ್ಷಗಾನ ಕಲೆ ಹಾಗೂ ಇದಕ್ಕೆ ಆಧಾರವಾದ ಪ್ರಸಂಗಗಳ ಬಗ್ಗೆ ತಳೆದ ಅವಜ್ಞೆಯಾಗಿದೆ. ಜಾನಪದ ಸಾಹಿತ್ಯಕ್ಕೆ ಸಿಕ್ಕಷ್ಟು ಮಹತ್ವ ಪ್ರಸಂಗ ಸಾಹಿತ್ಯಕ್ಕೆ ಸಿಕ್ಕಿಲ್ಲ. ಪ್ರಸಂಗಕಾರರ ಬಗ್ಗೆ ಪ್ರಸಂಗಗಳ ಬಗ್ಗೆ ನಡೆದ ಸಂಶೋಧನೆ ಕಡಿಮೆ. ಇದು ಸಮರ್ಪಕವಾಗಿ ನಡೆದಾಗ ಮಾತ್ರ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಯಕ್ಷಗಾನ ಸಾಹಿತ್ಯಕ್ಕೂ ಮಹತ್ವದ ಸ್ಥಾನ ಲಭಿಸಲು ಸಾಧ್ಯ. ಎರಡನೆಯ ಕಾರಣವೆಂದರೆ ಈಗ ಯಕ್ಷಗಾನ ಕಲೆ ಕರಾವಳಿ ಮತ್ತು ಮಲೆನಾಡಿನಲ್ಲಿ ಜೀವಂತವಾಗಿದೆ. ಅಲ್ಲಿನ ವಿದ್ವತ್‌ವಲಯ ಮಾತ್ರ ಯಕ್ಷಗಾನವನ್ನು ಆಸಕ್ತಿಯಿಂದ ಅಧ್ಯಯನ ವಿಷಯವಾಗಿ ಆರಿಸಿಕೊಳ್ಳುತ್ತಿದ್ದಾರೆ. ಕರ್ನಾಟಕದ ಉಳಿದ ಪ್ರದೇಶದಲ್ಲೂ ಬಹಳ ಹಿಂದಿನಿಂದ ಯಕ್ಷಗಾನ ಕೃತಿ ರಚನೆಗಳಿದ್ದರೂ ಅವುಗಳ ಕುರಿತು ಯಾವುದೇ ಅಧ್ಯಯನವಾಗಿಲ್ಲ. 'ಕರಿಬಂಟನಕಾಳಗದ ಕುರಿತು ಮಾತ್ರ ಪ್ರೌಢ ಪ್ರಬಂಧ ಬಂದಿದೆ. ಅಳಿಯ ಲಿಂಗರಾಜ ಅನೇಕ ಯಕ್ಷಗಾನ ಕೃತಿಗಳನ್ನು ಬರೆದಿದ್ದರೂ ಅವು ಹಿಂದೆ ರಂಗದಲ್ಲಿ ಪ್ರಯೋಗಗೊಂಡಿದ್ದರೂ ಅವುಗಳ ಪರಾಮರ್ಶೆ ನಡೆದಿಲ್ಲ. 1959ರಲ್ಲಿ ಬಂದ ಡಾ॥ ಕೆ.ಎಂ.ಕೃಷ್ಣರಾವ್‌ರವರ 'ಯಕ್ಷಗಾನ ಸಾಹಿತ್ಯ' ಕೃತಿಯಲ್ಲಿ ಹಳೆ ಮೈಸೂರು ಹಾಗೂ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಯಕ್ಷಗಾನ ಪ್ರಸಂಗಗಳ ಬಗ್ಗೆ ಸಾಕಷ್ಟು ವಿವರ ದೊರೆಯುತ್ತದೆ. ಪ್ರಸಂಗ ಸಾಹಿತ್ಯ ಕೂಡ ಕನ್ನಡ ಸಾಹಿತ್ಯದ ಒಂದು ಪ್ರಕಾರ ಎಂಬುದರ ಸೂಚನೆ ಮೊದಲ ಬಾರಿಗೆ ಬಂದಿರುತ್ತದೆ. ಹೀಗೆ ಆ ಪ್ರದೇಶದ ಯಕ್ಷಗಾನ ಕೃತಿಗಳ ಬಗ್ಗೆ ಅಲ್ಲಿನ ವಿದ್ವಾಂಸರು ಅಧ್ಯಯನ ನಡೆಸಬೇಕಾದ ಜರೂರಿದೆ.

ಹೀಗೆ ಕನ್ನಡ ವಿದ್ವಾಂಸರು ಯಕ್ಷಗಾನಕ್ಕೆ ಸಂಬಂಧಿಸಿದಂತೆ ಯಕ್ಷಗಾನ ಪ್ರಸಂಗಗಳ ಹಸ್ತಪ್ರತಿ ಸಂಗ್ರಹ, ಸಂಪಾದನೆ, ಪ್ರಸಂಗಕಾರರ ಬಗ್ಗೆ ಮಾಹಿತಿ ಕಲೆ ಹಾಕುವಿಕೆ ಪ್ರಸಂಗ ಸಾಹಿತ್ಯದ ಬಗ್ಗೆ ಅಧ್ಯಯನ, ಯಕ್ಷಗಾನ ಕಲೆಯ ಕುರಿತಾದ ಸಾಂಸ್ಕೃತಿಕ ವಿಚಾರ ಮಂಥನ, ಸಂವಾದಿ ಕಲೆಗಳೊಂದಿಗೆ ಯಕ್ಷಗಾನಕ್ಕಿರುವ ಸಂಬಂಧಗಳ ಪರಿಶೀಲನೆ ರಂಗಭೂಮಿಯ ದೃಷ್ಟಿಯಿಂದ ಯಕ್ಷಗಾನದ ವಿವೇಚನೆ

ಮುಂತಾದ ಕೈಂಕರ್ಯಗಳನ್ನು ಕೈಗೊಂಡಿದ್ದಾರೆ. ಜನಸಾಮಾನ್ಯರ ಮೇಲೆ ಅಸಾಮಾನ್ಯ ಪ್ರಭಾವ ಬೀರಿರುವ ಯಕ್ಷಗಾನ ವಿದ್ವತ್‌ವಲಯದ ಮೇಲೆ ಕೂಡ ತನ್ನ ಛಾಪನ್ನು ಒತ್ತಿದೆ. ಒಟ್ಟಿನಲ್ಲಿ ಯಕ್ಷಗಾನದೊಂದಿಗಿನ ಕನ್ನಡ ವಿದ್ವತ್ ಪರಂಪರೆಯ ನಂಟು ಮಹತ್ವದಾಗಿಲ್ಲವಾದರೂ ಕಡಿಮೆಯಾದ್ದದ್ದೇನಲ್ಲ. ಉಲ್ಲೇಖನಕ್ಕೆ ಅರ್ಹವಾದದ್ದು. ಕನ್ನಡ ವಿದ್ವಾಂಸರು ಈ ಕಡೆಗೆ ಗಮನಹರಿಸಿ ಇನ್ನಷ್ಟು ಕೃಷಿ ಮಾಡಿದರೆ, ಇನ್ನಷ್ಟು ಫಲ ಪಡೆಯಬಹುದು.

■

ತಾಳಮದ್ದಳೆಯ ಒಳಹೊರಗು

ಕರ್ನಾಟಕದ ಯಕ್ಷಗಾನ ರಂಗಭೂಮಿ ಹಲವು ಬಗೆಯಲ್ಲಿ ವಿಶಿಷ್ಟವಾದುದು. ನಾಡಿನಾದ್ಯಂತ ಹರಡಿರುವ ಈ ಯಕ್ಷಗಾನ ಪ್ರದೇಶಾನುಗುಣವಾಗಿ ವೈವಿಧ್ಯ ಹೊಂದಿಂತೆ ಅಭಿವ್ಯಕ್ತಿಯ ನೆಲೆಯಲ್ಲಿ ವಿವಿಧತೆಯನ್ನು ಸಾಧಿಸಿದೆ. ಬಯಲಾಟ, ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತ, ಮೂಡಲತಾಯಿ ಮುಂತಾದವೆಲ್ಲ ಪ್ರದೇಶವಾರು ವೈವಿಧ್ಯವಾದರೆ, ತಾಳಮದ್ದಳೆ, ಹೂವಿನಕೋಲು, ಚಿಕ್ಕಮೇಳ, ಏಕವ್ಯಕ್ತಿ ಯಕ್ಷಗಾನ, ಯಕ್ಷಗಾನ ಬ್ಯಾಲೆ ಮುಂತಾದವೆಲ್ಲಾ ಪ್ರದರ್ಶನಾಭಿವ್ಯಕ್ತಿಯ ಮೂಲಕ ಭಿನ್ನತೆಯನ್ನು ತಾಳಿದ ವೈವಿಧ್ಯಗಳಾಗಿವೆ. ಯಕ್ಷಗಾನ ಮುಖ್ಯವಾಗಿರುವ ಎರಡು ಅಂಗಗಳು ಇಲ್ಲದೆಯೇ ಜನರನ್ನು ತಟ್ಟುವ ಶಕ್ತಿಯನ್ನು ಹೊಂದಿರುವುದರಲ್ಲಿ 'ಯಕ್ಷಗಾನ ತಾಳಮದ್ದಳೆ'ಯ ಹಿರಿಮೆ ಇದೆ. ಬಯಲಾಟದಲ್ಲಿ ಕಾಣುವ ಬಣ್ಣಗಾರಿಕೆ ಹಾಗೂ ನರ್ತನ ತಾಳಮದ್ದಳೆಯಲ್ಲಿ ಇಲ್ಲ. ಹಾಡುಗಾರಿಕೆ, ಮಾತು ಮತ್ತು ಮುಖಾಭಿನಯವೇ ಇಲ್ಲಿ ಪ್ರಧಾನ. ಸಂಗೀತ ಮತ್ತು ಸಾಹಿತ್ಯಗಳೇ ರಸೋತ್ಪತ್ತಿಗೆ ಕಾರಣೀಭೂತವಾಗುವುದರಿಂದ ಭಾಗವಹಿಸುವ ಕಲಾವಿದನ ಮೇಲೆ ಹೆಚ್ಚು ಜವಾಬ್ದಾರಿಯಿದೆ. ಇಪ್ಪತ್ತೊಂದನೇ ಶತಮಾನದ ಬೌದ್ಧಿಕ ಬೆಳವಣಿಗೆಗೆ ಪೂರಕವಾಗಬಲ್ಲ ಅಂಶಗಳನ್ನು ತಾಳಮದ್ದಲೆ ಒಳಗೊಂಡಿರುವುದರಿಂದಲೇ ಅದು ಇಂದು ಹೆಚ್ಚು ಪ್ರಸ್ತುತವಾಗುತ್ತಿದೆ. ನಗರೀಕರಣ, ಔದ್ಯೋಗಿಕರಣದಿಂದ ಜನತೆಯ ಜೀವನ ಕ್ರಮದಲ್ಲಿ ಏರುಪೇರಾಗಿದೆ. ಇಂತಹ ಬದಲಾವಣೆಗೆ ಹೊಂದಿಕೊಳ್ಳಬಲ್ಲ ಗುಣ ಈ ಕಲೆಗೆ ಇದೆ. ಆದ್ದರಿಂದಲೇ ಇಂದು ಹೆಚ್ಚು ಹೆಚ್ಚು ವಿದ್ಯಾವಂತರು, ಅದರಲ್ಲೂ ಯುವಕರು ಈ ಕಲೆಯ

ಸಮೀಪಕ್ಕೆ ಬರುತ್ತಿದ್ದು ಇಂದು ಹವ್ಯಾಸಿ ಕಲಾವಿದರ ಆಧಿಕ್ಯವೇ ಈ ಮಾತನ್ನು ಸಮರ್ಥಿಸುತ್ತದೆ. ಈ ಕಾರಣ ತಾಳಮದ್ದಳೆಯ ಒಳಹೊರಗನ್ನು ಅರಿಯುವುದು ಇಂದು ಹೆಚ್ಚು ಪ್ರಸ್ತುತ.

ಈಗ ಎಲ್ಲೆಡೆ ಕಂಡುಬರುತ್ತಿರುವ ಬೀದಿನಾಟಕಗಳಂತೆ ಯಕ್ಷಗಾನ ತಾಳ ಮದ್ದಳೆಯು ಸರಳ ರಂಗಭೂಮಿಯಾಗಿದೆ. ಹೆಚ್ಚು ವೆಚ್ಚವನ್ನು ಬಯಸದ, ಹೆಚ್ಚು ಸಿದ್ಧತೆಯನ್ನು ಅಪೇಕ್ಷಿಸದ, ಹೆಚ್ಚು ಜನರನ್ನು ನೇರವಾಗಿ ತಲುಪಬಲ್ಲ ಸಾಮರ್ಥ್ಯ ಈ ಕಲಾಪ್ರಕಾರಕ್ಕಿದೆ. ಭಾಗವತ, ಮದ್ದಲೆಗಾರ, ಚಂಡೆವಾದಕರನ್ನೊಳಗೊಂಡ ಹಿಮ್ಮೇಳವಿದ್ದು ಮುಂಭಾಗದಲ್ಲಿ 3–4 ಜನ ಅರ್ಥಧಾರಿಗಳಿದ್ದರೆ ಪ್ರಸಂಗವನ್ನು ನಡೆಸಲು ಸಾಕಾಗುತ್ತದೆ. ದೇವಸ್ಥಾನದ ಪ್ರಾಂಗಣದಲ್ಲೋ, ದೊಡ್ಡವರ ಮನೆಯ ವಿಶಾಲ ಹಜಾರದಲ್ಲೋ, ಬಯಲು ರಂಗಮಂಟಪದಲ್ಲೋ, ಎಲ್ಲೆಂದರಲ್ಲಿ ಪ್ರದರ್ಶನ ನೀಡಬಹುದು. ಹಿಂದೆಲ್ಲಾ ಹೆಚ್ಚಾಗಿ ರಾತ್ರಿಯಿಡಿ ನಡೆಯುತ್ತಿತ್ತು. ಈ ಕಲಾ ಪ್ರಕಾರ. ಬದಲಾದ ಜೀವನಶೈಲಿಗೆ ಅನುಗುಣವಾಗಿ ಇಂದು ಹೆಚ್ಚಾಗಿ 3–4 ತಾಸುಗಳಿಗೆ ಸೀಮಿತಗೊಳ್ಳುತ್ತಿದೆ. ಈ ಬಗೆಯ ಪ್ರದರ್ಶನವನ್ನು ಕೆಲವೆಡೆ ತಾಳಮದ್ದಳೆ ಎಂತಲೂ, ಕೆಲವೆಡೆ ಬೈಠಕ್ ಎಂತಲೂ, ಇನ್ನು ಕೆಲವೆಡೆ ಜಾಗರಣೆ, ಕೂಟ ಎಂತಲೂ ಕರೆಯುವುದುಂಟು.

ತಾಳಮದ್ದಳೆಯ ಹುಟ್ಟಿನ ಬಗ್ಗೆ ಎರಡು ವಿಭಿನ್ನ ಬಗೆಯ ವಾದಗಳಿವೆ. ಬಯಲಾಟದಿಂದ ತಾಳಮದ್ದಳೆ ಬಂತೋ ತಾಳ ಮದ್ದಳೆಯಿಂದ ಯಕ್ಷಗಾನ ಬಯಲಾಟ ರೂಪಗೊಂಡಿತೋ ಎನ್ನುವುದು ಚರ್ಚೆಯ ವಿಷಯವಾಗಿದೆ. ಕರಾವಳಿ ಹಾಗೂ ಮಲೆನಾಡಿನಲ್ಲಿ ಹಿಂದೆಲ್ಲಾ ಹೆಚ್ಚಾಗಿ ಯಕ್ಷಗಾನ ವೇಷಧಾರಿಗಳೇ ಈ ಬಗೆಯ ಕಲಾಪ್ರಕಾರವನ್ನು ನಡೆಸುತ್ತಿದ್ದರು. ಹೂವಿನ ಕೋಲು, ಚಿಕ್ಕಮೇಳದ ರೀತಿಯಲ್ಲಿ ಮಳೆಗಾಲವನ್ನು ದೂಡಲು ಕಲಾವಿದರು ಇದನ್ನು ಬಳಕೆಗೆ ತಂದಿರಬೇಕೆಂಬ ವಾದವಿದೆ. ರಾತ್ರಿಯಿಡಿ ನಡೆಯುವ ಯಕ್ಷಗಾನದ ಅದಮ್ಯ ಸೆಳೆತದಿಂದ ಮಳೆಗಾಲದಲ್ಲಿ ದೂರ ಉಳಿಯುವ ಪ್ರೇಕ್ಷಕನನ್ನು ಹಾಡು ಹಾಗೂ ಮಾತುಗಾರಿಕೆ ಮೂಲಕ ಕಟ್ಟಿ ಹಾಕುವ ಪ್ರಯತ್ನವಾಗಿ ತಾಳಮದ್ದಳೆಯು ಹುಟ್ಟಿರಬೇಕೆಂದು ಹೇಳುವವರು ಅನೇಕ ಮಂದಿ. ದೇವಸ್ಥಾನಗಳನ್ನು ಆಶ್ರಯಿಸಿರುವ ಮೇಳದ ಕಲಾವಿದರಿಗೆ ಮಳೆಗಾಲದಲ್ಲಿ ಪೂರ್ತಿ ವಿರಾಮವಿದ್ದು ಅದನ್ನು ನಿವಾರಿಸಿಕೊಳ್ಳುವ ಸಾಧನವಾಗಿ ಬಳಕೆಗೆ ತಂದರೆಂಬುದೇ ಇವರ ಬಲವಾದ ನಂಬಿಕೆ. ಜಡಿಮಳೆಯ ಏಕತಾನತೆಯಿಂದ ರೋಸಿಹೋದ ಸಹೃದಯಿ ಪ್ರೇಕ್ಷಕನ ಮನಸ್ಸಂತೋಷವಾದದ್ದಂತು ನಿಜ. ಯಕ್ಷಗಾನ ಪ್ರಸಂಗವನ್ನು ಆಧರಿಸಿ ಕಥೆಯ ಓಟವನ್ನು ನಾಟ್ಯವಿಲ್ಲದೆಯೇ ಮಾತಿನ ಮೂಲಕ ಕಟ್ಟಿ ಕೊಡುವ ಈ ಬಗೆಯು 'ಲುಪ್ತನಾಟ್ಯ'ವಿದ್ದಂತೆ ಎಂದು 82 ವರ್ಷಗಳ ಹಿಂದೆಯೇ ಶ್ರೀ ಸೇಡಿಯಾಪು ಕೃಷ್ಣಭಟ್‌ರು ಗುರುತಿಸಿದ್ದಾರೆ. ಇದನ್ನೆಲ್ಲಾ ಗಮನಿಸಿದಾಗ ತಾಳಮದ್ದಳೆ ಯಕ್ಷಗಾನದಿಂದ ಕವಲೊಡೆದಿರಬೇಕು ಎನಿಸುತ್ತದೆ.

ಕೆಲವೊಂದು ವಿದ್ವಾಂಸರು ತಾಳಮದ್ದಳೆಯಿಂದಲೇ ಯಕ್ಷಗಾನ ಸೃಷ್ಟಿ ಹೊಂದಿತು ಎಂಬ ವಾದವನ್ನು ಮಂಡಿಸುತ್ತಾರೆ. ಕರ್ನಾಟಕದಲ್ಲಿ ತಾಳಮದ್ದಲೆಯ ಬಗ್ಗೆ ಮೊದಲು ಉಲ್ಲೇಖ ಸಿಕ್ಕುವುದು ಕ್ರಿ.ಶ.1556ರ ಬಳ್ಳಾರಿ ಜಿಲ್ಲೆಯ ಕುರುಗೋಡು ಪ್ರದೇಶದಲ್ಲಿನ ಸೋಮ ಸಮುದ್ರದ ಶಾಸನವೊಂದರಲ್ಲಿ. ಅಲ್ಲಿನ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ತಾಳಮದ್ದಳೆಯ ಸೇವೆಗಾಗಿ ಉಂಬಳಿ ಬಿಟ್ಟ ವಿಚಾರ ಬರುತ್ತದೆ. ದೇವರ ಪೂಜೆ ನಂತರ ಸಲ್ಲಿಸುವ ವೇದಪಠಣ, ಪುರಾಣಪಠಣ, ಸಂಗೀತ ಸೇವೆಯಂತೆಯೇ ತಾಳಮದ್ದಳೆ ಸೇವೆಯು ಕೂಡ ದೇವಸ್ಥಾನಗಳಲ್ಲಿ ಆ ಕಾಲದಲ್ಲಿ ಬಳಕೆಯಲ್ಲಿದ್ದಿರಬೇಕು. ಬಳ್ಳಾರಿಯ ನೆರೆಯ ಆಂಧ್ರದಲ್ಲಿ ವಿಫುಲ ಯಕ್ಷಗಾನ ಪ್ರಸಂಗಗಳು ಆಕಾಲದಲ್ಲಿ ರಚನೆಗೊಂಡ ಸಾಕ್ಷ್ಯಾಧಾರಗಳು ಸಿಗುತ್ತವೆ. ಹರಿಕಥೆಯ ಮಾದರಿಯಲ್ಲಿ ಯಕ್ಷಗಾನ ಪ್ರಸಂಗ ಕೃತಿಯನ್ನು ಗಮಕ ರೀತಿಯಲ್ಲಿ ವಾಚಿಸಿ ಅದರ ಅರ್ಥವನ್ನು ವಿವರಿಸುವ ಪರಿಪಾಠವಿದ್ದಿರಬೇಕು. ಭಕ್ತಿ ಪ್ರಸಾರದ ಉದ್ದೇಶದಿಂದ ಪ್ರಾರಂಭಗೊಂಡ ಈ ಬಗೆ ಮುಂದೆ ವೇಷಗಾರಿಕೆ ಹಾಗೂ ಕುಣಿತವನ್ನು ಅಳವಡಿಸಿಕೊಂಡು ಯಕ್ಷಗಾನ ಕಲೆಯಾಗಿ ಮೈದಾಳಿರಬೇಕೆಂಬುದೇ ಶ್ರೀ ಎ.ಆರ್.ಕೃಷ್ಣಶಾಸ್ತ್ರಿಗಳಂತಹ ಮೇಧಾವಿಗಳ ವಾದ ವಾಗಿದೆ. ಯಕ್ಷಗಾನ ಕಲೆಯ ವಿಕಾಸದ ಕೊಂಡಿಯಲ್ಲಿ ತಾಳಮದ್ದಲೆಯು ಒಂದು ಎಂಬುದು ಇವರ ನಿಲುವು. ಕರ್ನಾಟಕ ಹಾಗೂ ಆಂಧ್ರಗಳೆರಡರಲ್ಲೂ ಯಕ್ಷಗಾನ ಕಲೆಯು ಒಟ್ಟೊಟ್ಟಿಗೆ ಜನಿಸಿ ಬೆಳೆದು ಪ್ರವರ್ಧಮಾನಕ್ಕೆ ಬಂದಿರಬೇಕೆಂಬುದು ಈ ಬಗೆಯ ವಿದ್ವಾಂಸರ ವಾದವಾಗಿದೆ. ಇವೆರಡೂ ವಾದಗಳಲ್ಲಿ ಯಾವುದು ಸರಿ ಎಂದು ಹೇಳುವುದು ಕಷ್ಟ. ಆದರೆ ಇವೆರಡೂ ಕಲೆಗಳಿಗಿಂತ ಪೂರ್ವದಲ್ಲೇ ಯಕ್ಷ ಗಾನ ಪ್ರಸಂಗ ಕೃತಿಗಳು ಹುಟ್ಟಿ ನಾಡಿನಾದ್ಯಂತ ಬಳಕೆಯಲ್ಲಿದ್ದವೆಂಬುದರಲ್ಲಿ ಸಂದೇಹವಿಲ್ಲ.

ಯಕ್ಷಗಾನ ತಾಳಮದ್ದಳೆಯಲ್ಲಿ ಎರಡು ಪ್ರಮುಖ ಕಲೆಗಳು ಮೇಳೈಸಿವೆ. ಒಂದು ಹಾಡುಗಾರಿಕೆ, ಇನ್ನೊಂದು ಮಾತುಗಾರಿಕೆ. ಅದೇ ಸಂಗೀತ ಮತ್ತು ಸಾಹಿತ್ಯ ಭಾರತೀಯ ಪರಂಪರೆಯಲ್ಲಿ ಭರತನಾಟ್ಯಶಾಸ್ತ್ರಕ್ಕೆ ಪರಮ ಪಟ್ಟವಿದೆ. ವ್ಯಾಕರಣ ಶಾಸ್ತ್ರಕ್ಕೆ ಪಾಣಿನಿ ಮುನಿಯು ಕಟ್ಟುಪಾಡುಗಳನ್ನು ಕೊಟ್ಟಂತೆ ನಾಟ್ಯನರ್ತನಗಳಿಗೆ ನೀತಿನಿಯಮಗಳನ್ನು ರೂಪಿಸಿದ ಪರಮಾಚಾರ್ಯರೇ ಭರತಮುನಿ. ರಸೋತ್ಪತ್ತಿಯೇ ಎಲ್ಲಾ ಕಲೆಯ ಪ್ರಧಾನ ಗುರಿ. ತಾಳಮದ್ದಳೆಯಲ್ಲಿ ರಸೋತ್ಪತ್ತಿಯಾಗುವುದು ಹಿಮ್ಮೇಳದವರ ಹಾಡಿನಲ್ಲಿ ಹಾಗೂ ಮುಮ್ಮೇಳದವರ ವಾಚಿಕಾಭಿನಯದಲ್ಲಿ. ಆಹಾರ್ಯ ಇಲ್ಲದೆಯೂ ರಸ ಒಸರುವಂತೆ ಮಾತನಾಡುವ ಸವಾಲು ತಾಳಮದ್ದಳೆಯ ಅರ್ಥಧಾರಿಯ ಮೇಲೆ ಇರುತ್ತದೆ. ತಾಳಮದ್ದಲೆ ಸಂಸ್ಕೃತದಲ್ಲಿನ ರೂಪಕದಂತೆ ಕಾರ್ಯನಿರ್ವಹಿಸುತ್ತದೆ. ನಾಟ್ಯ ಶಾಸ್ತ್ರಕಾರರ ಪ್ರಕಾರ ಆಂಗೀಕ, ಆಹಾರ್ಯ, ವಾಚಿಕ ಮತ್ತು ಸಾತ್ವಿಕಗಳ ನೆಲೆಯಲ್ಲಿ ರಸೋತ್ಪತ್ತಿಯಾಗುತ್ತದೆ. ತಾಳಮದ್ದಳೆಯಲ್ಲಿ ಮಾತು ದೀರ್ಘವಾಗಿದ್ದು ಸಾತ್ವಿಕಕ್ಕೆ ಪೂರಕವಾಗಿರುತ್ತದೆ. ಕಲಾವಿದ ತಾನೇ ಪಾತ್ರವಾಗಿರುವುದ

ರಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಆತ ಪಾತ್ರದ ಒಳಹೊಕ್ಕು ಪಾತ್ರದ ಶೀಲ ಸ್ವಭಾವವನ್ನು ಅರಿತು ನಿರೂಪಿಸಬೇಕಾಗುತ್ತದೆ.

ತಾಳಮದ್ದಳೆಯ ತಳಹದಿಯೆಂದರೆ ಪ್ರಸಂಗ ಕೃತಿಗಳೇ. ಉತ್ತಮ ಪ್ರಸಂಗದ ಆಯ್ಕೆ ತಾಳಮದ್ದಳೆಯ ಯಶಸ್ಸಿಗೆ ಕಾರಣವಾಗುತ್ತದೆ. ಮಾತಿಗೆ ವಾದವಿವಾದಕ್ಕೆ ಎಡೆಯಿರುವ ಪ್ರಸಂಗಗಳು ತಾಳಮದ್ದಲೆಗೆ ಅವಶ್ಯ. ಕಲಾವಿದ ತನ್ನ ಮಾತಿನ ಸೌಧವನ್ನು ಕಟ್ಟಲು ವಿಪುಲ ಅವಕಾಶವಿರುವ ಭಾಗಗಳು ಪ್ರಸಂಗಗಳಲ್ಲಿ ತುಂಬಿರಬೇಕು. ಸಂವಾದಕ್ಕೆ ಪೂರಕವಾಗುವ ಅಂಶಗಳಿದ್ದಷ್ಟು ಪ್ರಸಂಗ ತಾಳಮದ್ದಳೆಗೆ ಹೆಚ್ಚು ಸನಿಹವಾಗುತ್ತದೆ. ಉತ್ತಮ ಸಾಹಿತ್ಯವುಳ್ಳ ಮತ್ತು ನಾದಮಯವಾಗಿರುವ ಹಾಡುಗಳು ಕೇಳುಗರನ್ನು ಕೂಡಲೇ ತಟ್ಟುತ್ತವೆ. ಕುಣಿತ ಹಾಗೂ ವೇಷಗಾರಿಕೆಯ ಅನುಪಸ್ಥಿತಿಯಲ್ಲಿ ಬರುವ ಹಾಡಿಗೆ ಹೆಚ್ಚು ಸವಾಲುಗಳಿರುತ್ತವೆ. ಕೇಳುಗನ ಹೃದಯಕ್ಕೆ ಹತ್ತಿರವಾಗಬಲ್ಲ ಶಕ್ತಿ ಹಾಡಿಗೆ ಇರಬೇಕಾಗುತ್ತದೆ. ಅದೇರೀತಿ ವಾದವಿವಾದ ಮಾಡಲು ಅನೇಕ ಹೊಳಹುಗಳನ್ನು ಹಾಡುಗಳು ನೀಡಬೇಕಾಗುತ್ತದೆ. ಉತ್ತಮ ಪ್ರಸಂಗದ ಆಯ್ಕೆ ಮಾಡುವಲ್ಲಿ ಸಂಘಟಕರ, ಕಲಾವಿದರ ಜಾಣ್ಮೆ ಅಡಗಿದ್ದು ಅದು ತಾಳಮದ್ದಳೆಯ ಯಶಸ್ಸಿಗೆ ಮೆಟ್ಟಿಲಾಗುತ್ತದೆ. ಪಂಚವಟಿ, ಸುಧನ್ವಾರ್ಜುನ, ಮಾಗಧವಧೆ, ವಾಲಿಸಂಹಾರ, ಭರತಾಗಮನ, ರಾವಣ ವಧೆ, ಕೃಷ್ಣಸಂಧಾನ, ವಾಮನಚರಿತ್ರ, ಕರ್ಣಪರ್ವ, ರಾಜಸೂಯ, ಉತ್ತರನ ಪೌರುಷ, ಅಂಗದ ಸಂಧಾನ, ಅತಿಕಾಯ ತಾಮ್ರಧ್ವಜ ಕಾಳಗ ಮುಂತಾದ ಪ್ರಸಂಗಗಳು ಈ ಕಲಾಪ್ರಕಾರದಲ್ಲಿ ಮಿಂಚುತ್ತಿರಲು ಈ ಅಂಶಗಳೇ ಕಾರಣ. ಭಾವಾಭಿವ್ಯಕ್ತಿಗೆ ಇಲ್ಲೆಲ್ಲ ಹೆಚ್ಚಿನ ಅವಕಾಶವಿದೆ. ಅರ್ಥಧಾರಿ ಆಶುನಾಟಕವೊಂದನ್ನು ಕಟ್ಟಿಕೊಡುವಾಗ ಅವನ ಮಾತಿನ ಬೆಳವಣಿಗೆಗೆ ಈ ಎಲ್ಲಾ ಪ್ರಸಂಗಗಳಲ್ಲಿ ಉತ್ತಮ ಅವಕಾಶವಿದೆ. ತಾಳಮದ್ದಳೆಯಲ್ಲಿ ಮಿಂಚುವ ಪ್ರಸಂಗಗಳು ಸಾಹಿತ್ಯಕವಾಗಿಯೂ ಶ್ರೀಮಂತವಾಗಿವೆ. ಕಾಲದ ಮೂಸೆಯಲ್ಲಿ ಗೆದ್ದುಬಂದಿವೆ.

ಬಯಲಾಟದಂತೆ ತಾಳಮದ್ದಳೆಯಲ್ಲೂ ಭಾಗವತನೇ ಪ್ರಧಾನ. ಅಂದು ಪ್ರದರ್ಶನಕ್ಕೆ ಅಗತ್ಯವಾಗುವ ಪದ್ಯಗಳನ್ನು ಆಯ್ಕೆ ಮಾಡುವಲ್ಲಿ ಭಾಗವತನ ಸಿದ್ಧತೆ ಬಹುಮುಖ್ಯ. ಹಾಡುಗಳ ಆಯ್ಕೆಯ ನಂತರ ಅವುಗಳನ್ನು ಮೆಳೈಸಿಕೊಂಡು ಕಥೆಯ ಓಟವನ್ನು ಸಮಸ್ಥಿತಿಯಲ್ಲಿ ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಆತನ ಹೆಗಲಿಗಿದೆ. ಕೆಲವೊಮ್ಮೆ ಹಿರಿಯ ಅರ್ಥಧಾರಿಗಳ ಸ್ವಪ್ರತಿಷ್ಠೆ, ಅತಿಯಾದ ಮಾತು ಭಾಗವತನ ದಾರಿಯನ್ನು ತಪ್ಪಿಸುವುದು ಉಂಟು. ಅರ್ಥಧಾರಿಗಳ ಮೇಳೈಕೆ ಇಲ್ಲದೆ ಕಥೆ ಎಲ್ಲೆಲ್ಲಿಗೋ ಹೋಗುತ್ತದೆ. ಪಾತ್ರಗಳೆಲ್ಲವಕ್ಕೂ ಯುಕ್ತಾಯುಕ್ತ ಅವಕಾಶ ಲಭಿಸು ವಂತೆ ನೋಡಿಕೊಳ್ಳುವ ಹೊಣೆಗಾರಿಕೆಯು ಭಾಗವತನದ್ದು. ಇವೆಲ್ಲ ಭಾಗವತನೊಬ್ಬನ ಸಾಮರ್ಥ್ಯದ ಒರೆಗಲ್ಲುಗಳು. ಭಾಗವತಿಕೆಯಲ್ಲಿ ಭಾವಾಭಿವ್ಯಕ್ತಿ ಪರಮ ಪ್ರಧಾನ ವಾದದ್ದು. ಕೇಳುಗನ ಹೃದಯದಲ್ಲಿ ಭಾವನೆ ಒಸರುವಂತೆ, ಚಿತ್ರವೊಂದನ್ನು ಕಟ್ಟಿ ಕೊಡುವಂತೆ ಹಾಡುಗಾರಿಕೆ ಇದ್ದರೆ ಚೆಂದ. ಭಾಗವತನ ಮುಖಭಾವ ಕೂಡ

ಬಹುಮುಖ್ಯ. ಆಟದಲ್ಲಿ ಪ್ರೇಕ್ಷಕನ ಕಣ್ಣು ರಂಗಸ್ಥಳದ ಮೇಲಿರುವ ವೇಷಧಾರಿಯ ಮೇಲೆ ಆತನ ಕುಣಿತದ ಮೇಲೆ ಇರುತ್ತದೆ. ಆದರೆ ತಾಳಮದ್ದಳೆಯಲ್ಲಿ ಅದಿಲ್ಲ. ಎಲ್ಲಾ ಕೇಳುಗರು ಭಾಗವತನನ್ನೇ ಗಮನಿಸುತ್ತಿರುತ್ತಾರೆ. ಈ ಕಾರಣ ಆತ ಗಮಕಿಯಂತೆ ಪ್ರಸನ್ನವದನನಾಗಿ, ಭಾವಪೂರ್ಣ ಹಾಗೂ ಅರ್ಥಪೂರ್ಣವಾಗಿ ಹಾಡುವುದು ಮುಖ್ಯ. ಶೃತಿಬದ್ಧವಾದ ಹಾಡುಗಾರಿಕೆ ಮುಂದೆ ಮಾತನಾಡುವವರ ಶೃತಿಗೆ ಹೊಂದಿಕೆಯಾಗಿ ಮುಂದುವರಿಯಬೇಕು. ಭಾಗವತನ ಹಾಡುವಿಕೆ ತುಂಬಿ ಬಂದಾಗ ಮಾತ್ರ ಕೇಳುಗನಿಗೆ ಸಮಾಧಾನವಾಗುತ್ತದೆ. ಅವನು ಕೂಡ ಮುಂದಿನ ಮಾತನ್ನು ಕಲ್ಪಿಸಿಕೊಂಡು ಅರ್ಥಧಾರಿಯೊಂದಿಗೆ ಸಂವಹನಗೊಳ್ಳಲು ಪ್ರಯತ್ನಿಸುತ್ತಾನೆ. ಅರ್ಥಧಾರಿ ತನ್ನ ಕಲ್ಪನೆಗೂ ಮಿಗಿಲಾಗಿ ಮಾತನಾಡಿದಾಗ ಬೆರಗುಗೊಳ್ಳುತ್ತಾನೆ. ತಾಳಮದ್ದಳೆ ಏಕಮುಖವಾಗಿ ಹರಿಯುವ ಕಲೆಯಲ್ಲ. ಪ್ರೇಕ್ಷಕನಾದವನೂ ಈ ಕಲೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾನೆ. ಅವನ ಮನೋರಂಗಭೂಮಿಯು ತಾಳಮದ್ದಳೆಯ ರಂಗಭೂಮಿಯೊಂದಿಗೆ ಸಮಾನಾಂತರವಾಗಿ ಚಲಿಸುತ್ತಾ ಇರುತ್ತದೆ. ತಾಳಮದ್ದಳೆಯಲ್ಲಿ ಭಾಗವತ ನಿರ್ವಾಹಕನ ಪಾತ್ರವನ್ನು ನಿರ್ವಹಿಸುತ್ತಾ ಪ್ರಸಂಗಾವಧಾನತೆಯಿಂದ ಪ್ರಸಂಗವನ್ನು ಸಮರ್ಪಕವಾಗಿ ಮುನ್ನಡೆಸುತ್ತಾನೆ.

ತಾಳಮದ್ದಳೆಯಲ್ಲಿ ಭಾಗವತನ ಜೊತೆಯಲ್ಲಿ ಸಹಕರಿಸುವವರು ಹಿಮ್ಮೇಳದಲ್ಲಿರುವ ಮದ್ದಳೆಗಾರರು ಮತ್ತು ಚಂಡೆವಾದಕರು. ಇವರಲ್ಲಿ ಚಂಡೆವಾದಕರ ಪಾತ್ರ ಗೌಣ. ಬಯಲಾಟದಂತೆ ಕಾಳಗಗಳು, ಪ್ರಯಾಣ, ಯುದ್ಧ ಸಿದ್ಧತೆ, ಬೇಟೆಯಾಡುವ ಪರಿ ಮುಂತಾದ ಅಂಶಗಳು ಕಡಿಮೆ ಇರುವುದರಿಂದ ಚಂಡೆಯವರ ಕಲಾನೈಪುಣ್ಯದ ಪ್ರದರ್ಶನಕ್ಕೆ ಅವಕಾಶ ಕಮ್ಮಿ. ಆದರೆ ಒಟ್ಟು ಪ್ರಭಾವ ಬೀರುವಲ್ಲಿ ಇವರ ಸಹಕಾರ ಅಗತ್ಯ. ಮದ್ದಳೆಗಾರರು ಸದಾ ಭಾಗವತರೊಂದಿಗೆ ಇರಬೇಕಾಗುತ್ತದೆ. ಕುಣಿತದ ಹೆಜ್ಜೆ ಇಲ್ಲಿ ಇಲ್ಲವಾದರೂ ಭಾಗವತನ ಹಾಡು ಸುಂದರವಾಗಿ ಹೊರಹೊಮ್ಮಲು ಮದ್ದಲೆ ವಾದಕರ ಹದವರಿತ ನುಡಿತ ತೀರ ಅಗತ್ಯ. ಮದ್ದಳೆಗಾರರು ಭಾಗವತರ ಭಾವಪೂರ್ಣ ಹಾಡುಗಾರಿಕೆಗೆ ಉತ್ತಮ 'ಸಾಥ್' ನೀಡುತ್ತಾರೆ.

ಅರ್ಥಧಾರಿಯ ಮಾತಿನ ಶಕ್ತಿಯೇ ತಾಳಮದ್ದಳೆಯ ಜೀವಾಳ. ಒಳ್ಳೆಯ ಅರ್ಥಧಾರಿಗಳು ಮಾತ್ರ ಪ್ರದರ್ಶನಕ್ಕೆ ನ್ಯಾಯವನ್ನು ಒದಗಿಸುತ್ತಾರೆ. ಈ ಕಾರಣ ಅರ್ಥಧಾರಿಯಾದವನ ಜವಾಬ್ದಾರಿ ಬಹುದೊಡ್ಡದು. ಮೊದಲಿಗೆ ಪ್ರಸಂಗದ ಒಟ್ಟು ದೃಷ್ಟಿಯ ಅರಿವು ಅರ್ಥಧಾರಿಗೆ ಇರಬೇಕಾಗುತ್ತದೆ. ತಾನು ವಹಿಸುವ ಪಾತ್ರದ ಸ್ವಭಾವದ ಸಂಪೂರ್ಣ ಜ್ಞಾನ ಹೊಂದಿದ್ದು ಆ ಪಾತ್ರ ಪೋಷಣೆಯನ್ನು ತನ್ನ ಮಾತುಗಾರಿಕೆಯಲ್ಲಿ ಅಳವಡಿಸಬೇಕಾಗುತ್ತದೆ. ಎದುರಾಳಿಯ ಮಾತು ಪಾತ್ರದ ಸ್ವಭಾವಕ್ಕೆ ಮಾರಕವಾಗುವಂತಿದ್ದರೆ ಅದು ತನ್ನ ಅರ್ಥದಲ್ಲಿ ನಿವಾರಿಸಿಕೊಳ್ಳುವ ಸಾಮರ್ಥ್ಯ ಇರಬೇಕಾಗುತ್ತದೆ. ಎಲ್ಲೂ ಕೂಡ ಆವರಣ ಭಂಗವಾಗದಂತೆ ಅರ್ಥಧಾರಿ ನೋಡಿಕೊಳ್ಳಬೇಕಾಗುತ್ತದೆ. ತಾನು ಎಂದಿನ ದಿನವಹಿ ದಿರುಸಿನಲ್ಲಿ ಇದ್ದರೂ ತಾನು

ವಹಿಸಿರುವುದು ಆ ಪುರಾಣಲೋಕದ ಪಾತ್ರವೆಂಬ ಎಚ್ಚರಿಕೆ ರಂಗದಲ್ಲಿರುವಷ್ಟು ಕಾಲ ಇಟ್ಟುಕೊಳ್ಳಬೇಕಾಗುತ್ತದೆ. ಉಳಿದ ಪಾತ್ರಗಳ ಶೀಲಸ್ವಭಾವದ ಪರಿಚಯವೂ ಇದ್ದು ಎದುರಾಳಿಯ ಪಾತ್ರದ ಘೋಷಣೆಗೆ ಇವನ ಮಾತು ಸಹಕಾರಿ ಆಗುತ್ತದೆ. ವಾಚಿಕಾಭಿನಯದಲ್ಲಿ ಅರ್ಥಧಾರಿ ಪಳಗಿದಷ್ಟು ಅವನ ಮಾತುಗಾರಿಕೆಗೆ ಒಂದು ತೂಕ ಬರುತ್ತದೆ. ಆತನಾಡುವ ಮಾತು ಶಶಿ ಉದಿಸಿ ಬಂದಂತೆ ಇರಬೇಕು. ಪ್ರೇಕ್ಷಕರ ಎದೆಯಾಳದಲ್ಲಿ ಇಳಿಯುವಂತೆ ಮಾತಿನ ಧಾಟಿ ಇರಬೇಕಾಗುತ್ತದೆ. ಪದ್ಯದಲ್ಲಿ ಅಡಗಿದ್ದ ರಸಭಾವವನ್ನು ಅರಿತು ಅದಕ್ಕೆ ಭಂಗಬಾರದ ರೀತಿಯಲ್ಲಿ ತನ್ನ ಮಾತನ್ನು ಆಡಬೇಕಾಗುತ್ತದೆ. ಈಗಿನ ಕಾಲಮಿತಿಯ ತಾಳಮದ್ದಳೆಗಳಲ್ಲಿ ಒಟ್ಟು ಕಥೆ ಮುಗಿಯಬೇಕಾದ ಅವಧಿ ಅದರಲ್ಲಿ ತನ್ನ ಪಾತ್ರಕ್ಕೆ ಸಿಗಬೇಕಾದ ಕಾಲವನ್ನು ನಿರ್ಧರಿಸಿಕೊಂಡು ಅಷ್ಟೇ ಮಾತನಾಡಬೇಕಾಗುತ್ತದೆ. ತಾನು ಸರ್ವವಿಚಾರ ವಿಶಾರದ ಎಂಬ ಅಹಂಮಿಕೆಯನ್ನು ಕಳೆದು ಪಾತ್ರದ ಪೋಷಣೆಗೆ ಶೀಲಸ್ವಭಾವದ ಅರಿವಿನೊಂದಿಗೆ ಎಷ್ಟುಬೇಕೋ ಅಷ್ಟೇ ಮಾತನಾಡಬೇಕಾಗುತ್ತದೆ. ಈ ಕಾಲಜ್ಞಾನ ಅರ್ಥಧಾರಿಗೆ ಇರಬೇಕಾದ ಇನ್ನೊಂದು ಗುಣ. ಪಾತ್ರದ ಪರಕಾಯ ಪ್ರವೇಶ ಮಾಡಿ ತಾನೇ ಪಾತ್ರವಾಗುವಂತೆ ನೋಡಿಕೊಂಡಾಗ ಮಾತ್ರ ತಾಳಮದ್ದಳೆ ರೈಸುತ್ತದೆ. ಅರ್ಥಧಾರಿಯ ಮಾತಿನಲ್ಲಿ ಗ್ರಂಥಸ್ಥಭಾಷೆಯ ಶುದ್ದತೆ ಇರಬೇಕು. ಹಾಗೆಂದು ಅದು ಗ್ರಾಂಥಿಕವಾಗಬಾರದು. ಆಡುಮಾತಿನ ಲಯ, ಸ್ವರಾನುಕೃತಿ ಇದ್ದರೇ ಮಾತ್ರ ಶೋತೃವನ್ನು ಮುಟ್ಟುತ್ತದೆ. ಹಾವಭಾವಗಳಲ್ಲಿ, ಹಸ್ತಾಭಿನಯಗಳಲ್ಲಿ ಸ್ವರಗಳ ಏರಿಳಿತ ದಲ್ಲಿ ಅವನದೇ ಆದ ಶೈಲಿಯೊಂದನ್ನು ರೂಢಿಸಿಕೊಳ್ಳಬೇಕು. ಉದಾತ್ತ ಪಾತ್ರಗಳಾದರೆ ಅವುಗಳ ಘನತೆಗೆ ಚ್ಯುತಿಯಾಗದಂತೆ ಪಾಂಡಿತ್ಯಪೂರ್ಣ ಮಾತು ಇರಬೇಕು. ಚಾರಕ, ದೂತ, ಕಿರಾತ ಮುಂತಾದ ಪಾತ್ರಗಳಾದರೆ ಪಾಂಡಿತ್ಯದ ಪ್ರದರ್ಶನ ಅಸಮಂಜಸವಾಗುತ್ತದೆ. ಹೀಗೆ ಭಾಷೆಯ ಸಮರ್ಪಕ ಬಳಕೆ ಅರ್ಥಧಾರಿಯಾದವನ ಪಾಲಿಗೆ ನಿಕಷವಿದ್ದಂತೆ.

ಉತ್ತಮ ಅರ್ಥಧಾರಿಗಳಲ್ಲಿ ಪುರಾಣ ಪ್ರಪಂಚದ ಸಮಗ್ರಜ್ಞಾನದೊಂದಿಗೆ ಅನೇಕ ಶಾಸ್ತ್ರವಿಚಾರಗಳ ಅರಿವು ಇರಬೇಕಾಗುತ್ತದೆ. ತನ್ನ ಪ್ರತಿಷ್ಠೆಯನ್ನು ಬದಿಗೊತ್ತಿ ಭಾಗವತನ ಹಾಡಿನ ಜಾಡನ್ನು ಹಿಡಿದು ಪ್ರಸಂಗದ ಪದ್ಯಕ್ಕೆ ಹೊಸ ಹೊಸ ಆಯಾಮಗಳನ್ನು ನೀಡುವಲ್ಲಿ ಆತನ ಪೌರಾಣಿಕ ಜ್ಞಾನ ಹಾಗೂ ಶಾಸ್ತ್ರಗಳ ಪರಿಚಯ ಸಹಕಾರಿ ಆಗುತ್ತದೆ. ಪಾಂಡಿತ್ಯ, ಶಾಸ್ತ್ರಜ್ಞಾನ, ನಿರಂತರ ಓದು ಪಾತ್ರದ ಕುರಿತಾದ ಅರ್ಥಧಾರಿಯೊಬ್ಬನ ದೃಷ್ಟಿಯು ಸದಾ ನವನವೀನಗೊಳಿಸುತ್ತಿರುತ್ತದೆ. ಬಯಲಾಟದ ಅರ್ಥಧಾರಿಗಿಂತಲೂ ಹೆಚ್ಚಿನ ಸ್ವಾತಂತ್ರ್ಯ ತಾಳಮದ್ದಳೆಯ ಅರ್ಥಧಾರಿಗೆ ಇದೆ. ಈ ಸ್ವಾತಂತ್ರ್ಯ ಸ್ವಚಂದವಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಎಲ್ಲ ಅರ್ಥಧಾರಿಗಳ ಮೇಲೆ ಇದೆ. ಶುದ್ಧ ಉಚ್ಚಾರಣೆ, ಉತ್ತಮ ಶಬ್ದಜೋಡಣೆ ಪ್ರಸಂಗಾವಧಾನತೆ, ಮಾತು ಕಳೆಕಟ್ಟಬಲ್ಲ ಉಪಮೆ ರೂಪಕಗಳ ಬಳಕೆ, ಶೃತಿಜ್ಞಾನ, ರಸಜ್ಞತೆಯೇ

ಪರಮಪ್ರಧಾನವೆಂಬ ಎಚ್ಚರಿಕೆ ಅರ್ಥಧಾರಿಗೆ ಇರಬೇಕಾದ ಅರ್ಹತೆಗಳು. ಅಲೌಕಿಕವಾದ ಪಾತ್ರಗಳ ಬಾಯಲ್ಲಿ ಲೌಕಿಕ ತರುವುದು ಎಷ್ಟು ಸಮಂಜಸ ಎನ್ನುವುದು ಜಿಜ್ಞಾಸೆಯ ವಿಷಯ. ಲೋಕಧರ್ಮ ಮಾತಿನಲ್ಲಿ ಬರಬಾರದೆಂದಿನಿಲ್ಲ. ಆದರೆ ಅದು ಪುರಾಣದ ಆವರಣವನ್ನು ಭಂಗಿಸಬಾರದು. ಪರೋಕ್ಷವಾದ ಪ್ರಸ್ತಾಪ ತಪ್ಪೇನಲ್ಲ. ವರ್ತಮಾನದ ವಿಚಾರ ಪ್ರಸಂಗದ ಔಚಿತ್ಯವನ್ನು ಮೀರಬಾರದು. ಮೀಮಾಂಸಕರು ಕಾವ್ಯದಲ್ಲಿ ಔಚಿತ್ಯ ಇರಬೇಕು ಎನ್ನುವ ಹಾಗೆ ತಾಳಮದ್ದಳೆಯಲ್ಲಿ ಕೂಡ ಔಚಿತ್ಯ ಒಂದು ಮಾನದಂಡವಾಗುತ್ತದೆ.

ತಾಳಮದ್ದಳೆಯು ಜನರೊಟ್ಟಿಗೆ ಬೆಳೆದ ರಂಗಕಲೆಯಾದ್ದರಿಂದ ಪ್ರೇಕ್ಷಕರ ಪಾತ್ರವು ಮಹತ್ತರವಾದದ್ದೆ. ಆಟದ ಪ್ರೇಕ್ಷಕನಿಗಿಂತ ತಾಳಮದ್ದಳೆಯ ಪ್ರೇಕ್ಷಕ ಭಿನ್ನವಾಗಿರುತ್ತಾನೆ. ಆತ ಕೆಲವು ಸಿದ್ಧತೆಗಳೊಡನೆ ತಾಳಮದ್ದಳೆಗೆ ಬರಬೇಕಾಗುತ್ತದೆ. ಒಳ್ಳೆಯ ಅರ್ಥಧಾರಿಯ ಅರ್ಥವತ್ತಾದ ಮಾತಿಗೆ ಪ್ರೋತ್ಸಾಹ ಕೊಡುವುದು ಅಗತ್ಯ. ಹಾಡುವ ಪದ್ಯ ಹಾಗೂ ಆಡುವ ಗದ್ಯದ ಬಗ್ಗೆ ಅವನ ಗಮನ ಸದಾ ಇರಬೇಕಾಗುತ್ತದೆ. ತಾಳಮದ್ದಳೆ ಕೇಳುಗನ ಜ್ಞಾನಕ್ಷಿತಿಜವನ್ನು ವಿಸ್ತರಿಸುತ್ತದೆ. ಸುಸಂಸ್ಕೃತನನ್ನಾಗಿ ಮಾಡುತ್ತದೆ. ಅರ್ಥಧಾರಿಯ ದೀರ್ಘ ಮಾತನ್ನು ಸಾವಧಾನದಿಂದ ಆಲಿಸುವ ವ್ಯವಧಾನವೂ ಇರಬೇಕು. ಹೀಗೆ ತಾಳಮದ್ದಳೆಯಲ್ಲಿ ಪ್ರೇಕ್ಷಕನ ಪಾಲ್ಗೊಳ್ಳುವಿಕೆ ಕೂಡ ಮಹತ್ತರ ವಾದುದು.

ಒಂದು ನೂರು ವರ್ಷಗಳ ಅವಧಿಯಲ್ಲಿ ತಾಳಮದ್ದಳೆಯು ಸಮೃದ್ಧವಾಗಿ ಬೆಳೆದಿದೆ. ಈ ಬೆಳವಣಿಗೆಯಲ್ಲಿ ನಾಲ್ಕು ಘಟ್ಟಗಳನ್ನು ಗುರುತಿಸಬಹುದು. ಕಳೆದ ಶತಮಾನದ ಮೊದಲಿನ ದಶಕಗಳಲ್ಲಿ ತಾಳಮದ್ದಳೆ ವಸ್ತುನಿಷ್ಠವಾಗಿತ್ತು. ಪ್ರಸಂಗಗಳ ಪದ್ಯಕ್ಕೆ ಅನುಸಾರವಾಗಿ ಮಾತ್ರ ಮಾತನಾಡುತ್ತಿದ್ದರು. ಹಾಡುಗಳು ಜಾಸ್ತಿ ಇರುತ್ತಿದ್ದವು. ವೇಷಧಾರಿಗಳೇ ಅರ್ಥಧಾರಿಗಳಾದ್ದುದರಿಂದ ಬಯಲಾಟದಲ್ಲಿರುವಷ್ಟೇ ಮಾತಿನ ಬಳಕೆ ಇರುತ್ತಿತ್ತು. ದಿವಂಗತರುಗಳಾದ ಗುರುವೀರಭದ್ರನಾಯಕ, ಮಾರ್ವಿರಾಮ ಕೃಷ್ಣ ಹೆಬ್ಬಾರ್, ಬಪ್ಪನಾಡು ಗೋಪಾಲಕೃಷ್ಣ ಭಟ್, ಪಡ್ರೆಶ್ರೀಪತಿ ಶಾಸ್ತ್ರಿ, ಬಳ್ಳಮಜಲು ರಂಗಪ್ಪಯ್ಯ ಮುಂತಾದವರು ಈ ಕಾಲದಲ್ಲಿ ಅರ್ಥಧಾರಿಗಳಾಗಿ ಮಿಂಚಿದವರು. ಕ್ರಿ.ಶ.1940ರ ನಂತರ ವಿದ್ವಾಂಸರು ಹಾಗೂ ಕವಿಗಳು ತಾಳಮದ್ದಳೆ ರಂಗವನ್ನು ಪ್ರವೇಶಿಸಿದ್ದರಿಂದ ಬದಲಾವಣೆಯ ಗಾಳಿ ಬೀಸಿತು. ಅರ್ಥಗಾರಿಕೆಗೆ ಆಧ್ಯಾತ್ಮಿಕ ವಿಚಾರಗಳು ತಳಕು ಹಾಕಿಕೊಂಡವು. ವಿದ್ವತ್‌ನ ಪ್ರಭೆಯಲ್ಲಿ ಅರ್ಥಗಾರಿಕೆ ಮಿಂಚಿತು. ಭಾರತದಾದ್ಯಂತ ಪುರಾಣಗಳ ಬಗ್ಗೆ, ಸನಾತನ ಧರ್ಮದ ಬಗ್ಗೆ, ನಾಡುನುಡಿಗಳ ಬಗ್ಗೆ ಭಾವನಾತ್ಮಕವಾದ ಆಂದೋಲನ ನಡೆಯಿತು. ತಾಳಮದ್ದಳೆಯ ರಂಗದಲ್ಲೂ ಇದು ಪ್ರತಿಫಲನಗೊಂಡಿತು. ಇದನ್ನು ಎರಡನೆಯ ಕಾಲಘಟ್ಟವೆಂದೇ ಗುರುತಿಸಬಹುದು. ದಿ.ಪೊಳಲಿ ಶಂಕರನಾರಾಯಣ ಶಾಸ್ತ್ರಿ, ದಿ.ನಾರಾಯಣ ಕಿಲ್ಲೆ, ದಿ.ಕೆ.ಪಿ.ವೆಂಕಪ್ಪ ಶೆಟ್ಟಿ, ದಿ.ಅರ್ಕುಳ ಸುಬ್ರಾಯಾಚಾರ್ಯ, ದಿ.ಬಡಕಬೈಲು ಪರಮೇಶ್ವರಯ್ಯ, ದಿ.ಬಡೆಕಿಲ

ವೆಂಕಟರಮಣ ಭಟ್ಟ, ದಿ.ಕುಬಣೂರು ಬಾಲಕೃಷ್ಣರಾವ್, ದಿ. ಕೊಳಂಬೆ ಪುಟ್ಟಣ ಗೌಡ, ದಿ.ರಾಜಾರಾಮ ಮಾಸ್ಟರ್, ದಿ.ಕೋಣಿ ಅಣ್ಣಪ್ಪ ಕಾರಂತ, ದಿ.ಕುಂಜಾಲು ರಾಮಕೃಷ್ಣರಾವ್, ದಿ.ನಾರಾಯಣ ಕೇಕುಣ್ಣಾಯ, ದಿ.ತೆಕ್ಕಟ್ಟೆ ಬಾಬಣ್ಣ ಶ್ಯಾನುಭೋಗ ಮುಂತಾದ ಅನೇಕರು ಯಕ್ಷಗಾನ ಕಲಾಪ್ರಕಾರದಲ್ಲಿ ಒಂದಾದ ತಾಳಮದ್ದಳೆಗೆ ವಿಶಿಷ್ಟ ಸ್ಥಾನ ದೊರಕಿಸಿಕೊಡುವಲ್ಲಿ ಕಾರಣರಾದವರು.

ಮುಂದಿನ ಘಟ್ಟದಲ್ಲಿ ಅನೇಕ ಜನ ವಿದ್ಯಾವಂತರು, ಹರಿದಾಸರು, ಅಧ್ಯಾಪಕರುಗಳು ಈ ರಂಗವನ್ನು ಪ್ರವೇಶಿಸಿದ್ದು, ತಾಳಮದ್ದಳೆಗೆ ಸುವರ್ಣಯುಗವೊಂದನ್ನು ತರಲು ಕಾರಣರಾದರು. ಬೇರೆ ಬೇರೆ ಶಾಸ್ತ್ರಗ್ರಂಥಗಳನ್ನು, ಸಾಹಿತ್ಯಕೃತಿಗಳನ್ನು, ವೈಚಾರಿಕ ವಿಶ್ಲೇಷಣೆಗಳನ್ನು ಓದಿಕೊಂಡ ಇವರು ಪಾತ್ರಗಳನ್ನು ನೋಡುವ, ಸೃಷ್ಟಿಸುವ ವಿಚಾರದಲ್ಲಿ ಹೊಸತನ್ನು ಕಂಡುಕೊಂಡರು. ಕ್ರಿ.ಶ.1960ರ ನಂತರದ ತಾಳಮದ್ದಳೆಗೆ ನೂತನ ಆಯಾಮವನ್ನು ನೀಡಿದವರಲ್ಲಿ ಪ್ರಮುಖರೆಂದರೆ ದಿ. ಶೇಣಿ ಗೋಪಾಲಕೃಷ್ಣಭಟ್, ದಿ.ಶಂಕರನಾರಾಯಣ ಸಾಮಗ, ದಿ.ದೇರಾಜೆ ಸೀತಾರಾಮಯ್ಯ, ಶ್ರೀ ಪೆರ್ಲಕೃಷ್ಣಭಟ್, ವಿದ್ವಾನ್ ಕಾಂತರೈ, ಅಳಿಕೆರಾಮರೈ, ಸೀತಾನದಿ ಗಣಪಯ್ಯ ಶೆಟ್ಟಿ, ಮಂದಾರ ಕೇಶವಭಟ್, ದಿ.ಕುರಿಯ ವಿಠಲಶಾಸ್ತ್ರಿ, ಪ್ರೊ॥ ಎಂ.ಆರ್. ಶಾಸ್ತ್ರಿ, ಮುಳಿಯ ಮಹಾಬಲ ಭಟ್, ಬೈಲಕೇರಿ ಪರಮೇಶ್ವರ ಪುರಾಣಿಕ, ಕಟ್ಟೆ ಪರಮೇಶ್ವರ ಭಟ್, ಹೊಸ್ತೋಟ ಮಂಜುನಾಥಭಟ್, ದಿ.ಎಂ.ಎಂ.ಹೆಗ್ಡೆ, ಕರೆಕೈ ವಿಷ್ಣುಭಟ್, ಕ್ಕಿರಿಕ್ಕಾಡು ಮಾಸ್ತರ್ ವಿಷ್ಣುಭಟ್, ಹರಿದಾಸಮಲ್ಪೆ ರಾಮದಾಸ ಸಾಮಗ, ಕುಂಬಳೆ ಸುಂದರರಾವ್, ಶ್ರೀ ಪ್ರಭಾಕರ್ ಜೋಷಿ, ತೆಕ್ಕಟ್ಟೆ ಆನಂದ ಮಾಸ್ತರ್, ಉಡುವೆ ಕೋಡಿ ಸುಬ್ಬಪ್ಪಯ್ಯ, ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ, ಲಕ್ಷ್ಮೀಶ ತೋಳ್ಪಾಡಿ, ವಾಸುದೇವಸಾಮಗ, ರಘುರಾಮಶೆಟ್ಟಿ, ಕೊಳ್ಯುರುರಾಮಚಂದ್ರ ರಾವ್, ಅಂಬಾತನಯ ಮುದ್ರಾಡಿ, ಸಿದ್ದಕಟ್ಟೆ ವಾಸುಶೆಟ್ಟಿ, ಮೂರುರು ಮಂಜುನಾಥ ಭಂಡಾರಿ, ಕೆ.ಗೋವಿಂದಭಟ್, ಡಾ॥ ರಮಾನಂದ ಬನ್ನಾರಿ, ಕೊರ್ಗಿ ವೆಂಕಟೇಶ ಉಪಾಧ್ಯ, ಎಂ.ಎಲ್.ಸಾಮಗ, ಸತ್ಯಮೂರ್ತಿ ದೇರಾಜೆ, ಕೆರೆಮನೆ ಶಂಭು ಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ಕೆ.ವೆಂಕಟಾಚಲ ಭಟ್, ಕಬ್ಬಿನಾಲೆ ವಸಂತ ಭಾರದ್ವಾಜ, ಕೆ.ಶ್ರೀಕರ ಭಟ್, ಕೇಶವ ಉಚ್ಚಿಲ ಮುಂತಾದ ಅನೇಕ ಮಹನೀಯರು. ಇವರೆಲ್ಲರ ಕೊಡುಗೆಯ ಫಲವಾಗಿ ತಾಳಮದ್ದಳೆಯ ರಂಗ ಶ್ರೀಮಂತವಾಯಿತು.

ಈಚಿನ 15–20 ವರ್ಷಗಳಿಂದ ವಿಫುಲ ಸಂಖ್ಯೆಯ ಹವ್ಯಾಸಿಗಳು ಈ ರಂಗವನ್ನು ಪ್ರವೇಶಿಸುತ್ತಿದ್ದಾರೆ. 7–8 ಗಂಟೆಗಳ ಕಾಲದ ತಾಳಮದ್ದಳೆ 2–3 ತಾಸಿಗೆ ಇಳಿದದ್ದು ಈ ಕಾಲದಲ್ಲೇ. ಆಧುನಿಕ ವಿದ್ಯಾಭ್ಯಾಸ ಪಡೆದು ಬೇರೆ ಬೇರೆ ವೃತ್ತಿಯಲ್ಲಿರುವ ಆದರೆ ಯಕ್ಷಗಾನದ ಸೆಳೆತದಿಂದ ತಪ್ಪಿಸಿಕೊಳ್ಳಲಾರದ ಅನೇಕ ಜನರು ತಾಳಮದ್ದಳೆ ರಂಗವನ್ನು ಪ್ರವೇಶಿಸುತ್ತಿದ್ದಾರೆ. ಇವರಿಗೆ ಮಾರ್ಗದರ್ಶಕರಂತೆ, ಮಾದರಿಯಂತೆ ಕಾಣಿಸಿಕೊಳ್ಳುವ ಪ್ರಮುಖ ಅರ್ಥಧಾರಿಗಳು ಈ ರಂಗವನ್ನು ಮುನ್ನಡೆಸುತ್ತಿದ್ದಾರೆ.

ಸರ್ವಶ್ರೀ ವಿದ್ವಾನ್ ಉಮಾಕಾಂತ್ ಭಟ್, ಜಬ್ಬಾರ್ ಸುಮೊ, ಸುಧನ್ವ ದೇರಾಜೆ, ಪ್ರೊ॥ ಎಂ.ಎ.ಹೆಗಡೆ, ಶ್ರೀ ಸುಣ್ಣಂಬಳ, ಶ್ರೀರಾಘವ ನಂಬಿಯಾರ್, ಜಿವಿ.ಹೆಗಡೆ, ಶ್ರೀಪಾದ ಹೆಗಡೆ, ಸಿದ್ದಕಟ್ಟೆ, ಬೈಪಡಿತ್ತಾಯ, ಶ್ರೀರಂಗಭಟ್ಟ, ಡಾ॥ ಜಿ.ಕೆ.ಹೆಗಡೆ ಹರಿಕೋಡಿ, ಶ್ರೀ ವಿಷ್ಣು ಶರ್ಮ ಮುಂತಾದವರೆಲ್ಲ ಹವ್ಯಾಸಿ ಕಲಾವಿದರಿಗೆ ದಾರಿ ದೀಪವಾಗಿದ್ದಾರೆ.

ಇಂದಿನ ವಿದ್ಯಾವಂತ ಹವ್ಯಾಸಿಗಳಿಗೆ ಇದು ಹೇಳಿ ಮಾಡಿಸಿದ ಕಲೆಯಾಗಿದೆ. ಬಯಲಾಟ ಬಯಸುವ ಶ್ರಮ, ವೆಚ್ಚ ಇಲ್ಲಿ ಅಗತ್ಯವಿಲ್ಲ. ನಿರಂತರ ಓದು, ಚಿಂತನ ಪೌರಾಣಿಕ ಜ್ಞಾನವಿದ್ದರೆ ಸಾಕು. ಇಂದು ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಅನೇಕ ಹವ್ಯಾಸಿ ಸಂಘಸಂಸ್ಥೆಗಳು ತಾಳಮದ್ದಳೆಯ ಅಭ್ಯಾಸದಲ್ಲಿ ನಿರತವಾಗಿವೆ. ಈ ಸಂಸ್ಥೆಗಳು ಹಿರಿಯ ಅರ್ಥಧಾರಿಗಳನ್ನು ಕರೆಸಿ ಪ್ರದರ್ಶನಕ್ಕೆ ವ್ಯವಸ್ಥೆ ಮಾಡುವುದು ಮಾತ್ರವಲ್ಲದೆ, ಅಲ್ಲಿನ ಸದಸ್ಯರು ತಾವು ಸಣ್ಣ ಪ್ರಮಾಣದಲ್ಲಿ ಭಾಗವಹಿಸಿ ಕಲಿಕೆಯ ಎಲ್ಲಾ ಅಂಶಗಳನ್ನು ರೂಢಿ ಮಾಡಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಸುಸಂಸ್ಕೃತ ಪ್ರೇಕ್ಷಕವರ್ಗವೊಂದರ ನಿರ್ಮಾಣವಾಗುತ್ತಿದೆ. ಬೌದ್ಧಿಕ ವಿಕಸನಕ್ಕೆ ನೆರವಾಗುವ ಈ ಕಲೆ ಅವರ ಪಾಲಿಗೆ ಒಂದು ಬೌದ್ಧಿಕ ಕ್ರೀಡೆಯಾಗಿದೆ.

ಹೀಗೆ ಯಕ್ಷಗಾನ ತಾಳಮದ್ದಳೆಯ ವಿಕಸನದ ನಾಲ್ಕನೆಯ ಕಾಲಘಟ್ಟದಲ್ಲಿ ನಾವೀಗ ಇದ್ದೇವೆ. ಕರಾವಳಿ, ಮಲೆನಾಡು, ಬೆಂಗಳೂರು ಮಹಾನಗರವೂ ಸೇರಿದಂತೆ ದೊಡ್ಡ ನಗರಗಳಲ್ಲಿ ಅವಿರತವಾಗಿ ಅಪಾರ ಸಂಖ್ಯೆಯ ತಾಳಮದ್ದಳೆಗಳು ನಡೆಯುತ್ತಿರುತ್ತಿವೆ. ಹಿಂದಿನ ತಾಳಮದ್ದಳೆಯನ್ನು ಸವಿಯಲು ಮಳೆಗಾಲಕ್ಕಾಗಿ ಕಾಯಬೇಕಾಗಿಲ್ಲ. ತಾಳಮದ್ದಳೆ ಸಪ್ತಾಹ, ತಾಳಮದ್ದಳೆ ಸರಣಿ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತಿವೆ. ಅನೇಕ ತಂಡಗಳು ವಾರಕ್ಕೊಮ್ಮೆ ತಿಂಗಳಿಗೊಮ್ಮೆ ತಪ್ಪದೇ ಕಾರ್ಯಕ್ರಮವನ್ನು ನೀಡುತ್ತಿದ್ದಾರೆ. ಇವರಿಗೆ ಹಿರಿಯ ಅರ್ಥಧಾರಿಗಳ ಮಾರ್ಗದರ್ಶನ ಅಗತ್ಯ ಅಂತೆಯೇ ಪ್ರಸಂಗಳ ಪುನರಾವರ್ತನೆಯನ್ನು ತಪ್ಪಿಸಲು ಪೌರಾಣಿಕ ಪ್ರಸಂಗಗಳ ಸಂಪಾದನೆ ಹಾಗೂ ಸಂಕಲನ ಕಾರ್ಯ ನಡೆಯಬೇಕು. ತಾಳಮದ್ದಳೆಗಾಗಿಯೇ ಕೆಲವು ಪ್ರಸಂಗಗಳ ಸಂಪಾದನೆ ಮಾಡುವುದು ಒಳ್ಳೆಯದು. ಹವ್ಯಾಸಿಗಳಿಗೆ ರಂಗಕ್ಕೆ ಬರಬೇಕೆಂಬ ತುಡಿತವಿರುವುದು ಸಹಜ. ಆದರೆ ಪೂರ್ವ ಸಿದ್ಧತೆ ಸಮರ್ಪಕವಾಗಿ ಆದ ನಂತರವೇ ರಂಗಕ್ಕೆ ಬಂದರೆ ಯಶಸ್ಸು ಸಿಗುತ್ತದೆ. ಸಂತೆಗೆ ಮೂರುಮೊಳನೇಯದೇ ನಿರಂತರ ಓದು, ಚಿಂತನೆ, ಪರಿಶ್ರಮ, ಹಿರಿಯ ಅರ್ಥಧಾರಿಗಳ ಮಾರ್ಗದರ್ಶನ ಮತ್ತು ಅನುಸರಣೆಯೊಂದಿಗೆ ಸೈದ್ಧಾಂತಿಕ ನಿಲುವಿನೊಂದಿಗೆ ರಂಗಕ್ಕೆ ಬಂದರೆ ಉತ್ತಮ. ಜೀವನಾನುಭವ ಹಾಗೂ ಬದುಕಿನ ಒಳನೋಟದಿಂದ ಆತ ಸಮೃದ್ಧನಾದಾಗ ಆತನ ಅರ್ಥಗಾರಿಕೆಗೆ ಹೊಳಪು ಬರುತ್ತದೆ. ಇಂತಹ ಅರ್ಥಧಾರಿಗಳ ಪಡೆ ನಿರ್ಮಾಣವಾಗಿ ಈ ಕಲಾಪ್ರಕಾರ ಪರಿಪೂರ್ಣವಾಗಿ ಬೆಳೆಯಲಿ ಎಂದು ಹಾರೈಸೋಣ.

■

ಯಕ್ಷಗಾನದ ಇಬ್ಬರು ಶ್ರೇಷ್ಠ ಹಿರಿಯರು

ನಮ್ಮ ಎಲ್ಲ ಏಳು-ಬೀಳುಗಳಲ್ಲಿ ನಮ್ಮ ಪೂರ್ವಿಕರ ಕೊಡುಗೆ ಅಪಾರ. ಕುಟುಂಬವಿರಲಿ, ಸಮಾಜವಿರಲಿ, ಸಂಸ್ಥೆ ಇರಲಿ, ದೇಶ ವಿರಲಿ ಎಲ್ಲೆಡೆಯೂ ಕೂಡ ಹಿಂದಿನವರ ಅವಿರತ ಶ್ರಮದ ಫಲ ಮುಂದಿನವರ ಏಳಿಗೆಗೆ ದಾರಿದೀಪವಾಗುತ್ತದೆ. ಇವತ್ತು ಈ ಯಕ್ಷಗಾನದ ತವರು ನೆಲದಲ್ಲಿ ನೂರು ವರ್ಷಗಳ ಹಿಂದೆ ಈ ಕಲೆಗೆ ತಮ್ಮ ಪ್ರತಿಭೆ, ಪರಿಶ್ರಮ, ಕನಸುಗಳನ್ನು ಧಾರೆಯೆರೆದವರ ಸ್ಮರಿಸುವುದು ಅಗತ್ಯವಾಗಿದೆ.

ಯಕ್ಷಗಾನದಂತಹ ಸಾಂಪ್ರದಾಯಿಕ ಕಲೆಯಲ್ಲಿ ವರ್ತಮಾನ ಕಾಲದಷ್ಟೇ ಭೂತಕಾಲ ಹಾಗೂ ಭವಿಷ್ಯತ್ ಕಾಲಗಳೂ ಮುಖ್ಯವಾಗುತ್ತವೆ. ಯಕ್ಷಗಾನದ ಇವತ್ತಿನ ಪ್ರಸ್ತುತತೆಗೆ ಹಿಂದಿನವರ ಪರಿಶ್ರಮದ ಸಂಪತ್ತಿದೆ. ಅವರ ಅರಿವಿನ ಹೊಳೆ ಹರಿದು ಬಂದು ಇವತ್ತಿನ ತಿಳುವಳಿಕೆ ತಿಳಿಜಲ ನಿರ್ಮಾಣವಾಗಿದೆ. ಇದೇ ನಾಳಿನ ಯಕ್ಷಗಾನ ರಂಗಭೂಮಿಯ ಹೊಳಹಿಗೆ, ನಡೆಯುವ ದಾರಿಗೆ ಬೆಳಕಾಗಬಲ್ಲದು. ಈ ಕಾರಣ ಇದು ಅರಿವಿನ, ತಿಳಿವಿನ ಹೊಳಹಿನ ಮುಪ್ಪುರಿಯಾಗಿದೆ. ಇತಿಹಾಸದ ಅವಲೋಕನ, ವರ್ತಮಾನದ ಪ್ರಸ್ತುತತೆ ಹಾಗೂ ಭವಿಷ್ಯದ ಯೋಜನೆಗಳಿಗೆ ಇಂತಹ ವಿಚಾರಗಳು ನಾಂದಿಯಾಗಲಿದೆ.

ಇಲ್ಲಿ ಆರಿಸಿಕೊಂಡ ಹಿರಿಯರಲ್ಲಿ ಒಬ್ಬರು ಯಕ್ಷಗಾನದ ತವರಿನ ಉತ್ತರ ತುದಿಯವರು. ಇನ್ನೊಬ್ಬರು ಯಕ್ಷಗಾನ ಆಡುಂಬೊಲದ ದಕ್ಷಿಣ ತುದಿಯವರು. ಇಬ್ಬರು ಮಹನೀಯರು

ತಮ್ಮ ನೆರೆರಾಜ್ಯದ, ನೆರೆಭಾಷೆಗಳ ಸಾಮಿಪ್ಯ ಹೊಂದಿದವರು. ಕರ್ಕಿ ಹಾಸ್ಯಗಾರ ಮೇಳ ಕರ್ನಾಟಕದಲ್ಲಿ ಮಾತ್ರವಲ್ಲದೇ ನೆರೆಯ ಮಹಾರಾಷ್ಟ್ರದಲ್ಲಿ ಖ್ಯಾತಿ ಗಳಿಸಿ, ಐತಿಹಾಸಿಕ ನಂಟಿನ ಗಂಟನ್ನು ಉಳಿಸಿಕೊಟ್ಟ ಮೇಳವಾಗಿದೆ. ಆ ಮೇಳಕ್ಕೊಂದು ಹಿರಿಮೆಯನ್ನು ಗಳಿಸಿಕೊಟ್ಟ ಸಂಪ್ರದಾಯ ಬಿಡದ ಛಲದ ಮೂಲಕ ಖ್ಯಾತರಾದ ಪರಮಯ್ಯ ಹಾಸ್ಯಗಾರರನ್ನು ನಾವು ಇಲ್ಲಿ ನೆನೆಸಿಕೊಂಡಿದ್ದೇವೆ. ಅದೇರೀತಿ ತೆಂಕಣ ತುದಿಯ ಕುರಿಯ ವಿಠಲ ಶಾಸ್ತ್ರಿಗಳು ಈಗ ಕೇರಳಕ್ಕೆ ಸೇರಿದ ಪ್ರದೇಶಗಳಲ್ಲಿ ಆಗ ಯಕ್ಷಗಾನಕ್ಕೊಂದು ಭದ್ರಸ್ಥಾನವನ್ನು ಉಳಿಸಿಕೊಟ್ಟವರು. ನೆರೆಯ ಕೇರಳದ ಸಾಂಸ್ಕೃತಿಕ ಒತ್ತಡದ ನಡುವೆ ಅಚ್ಚ ಕನ್ನಡದ ದನಿಯನ್ನು ಉಳಿಸಲು ಕಾರಣರಾದವರು. ಹೀಗೆ ಯಕ್ಷಗಾನ ಕಲೆ ಮಸುಕು ಮಸುಕಾಗಿದ್ದಾಗ, ಈ ಇಬ್ಬರು ಮಹನೀಯರು ಎರಡು ತುದಿಗಳಲ್ಲಿ ಧ್ರುವತಾರೆಗಳಂತೆ ಬೆಳಗಿ ಈ ಕಲೆಗೆ, ಕಲಾವಿದರಿಗೆ ದಿಕ್ಕು ತೋರಿದವರು. ಇವರಿಬ್ಬರೂ ನೀಡಿದ ಕಾಣ್ಕೆಗಳನ್ನು ಸ್ಮರಿಸುವುದು, ಅರಿಯುವುದು ಇಂದಿನ ಕಲಾಸಕ್ತರೆಲ್ಲರಿಗೆ ಅಗತ್ಯವಾದದ್ದು.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಕಳೆದ ಶತಮಾನದ ಮೊದಲ ದಶಕಗಳು ಕಂಪೆನಿ ನಾಟಕದ ಉಚ್ಛ್ರಾಯವನ್ನು ದಾಖಲಿಸಿದ ಕಾಲ. ಗರೂಢ ಸದಾಶಿವರಾವ್, ಕಾನಕಾನ ಹಳ್ಳಿ ವರದಾಚಾರ್ಯರು, ಗುಬ್ಬಿ ವೀರಣ್ಣ ಮುಂತಾದ ಮಹನೀಯರ ಹೆಸರುಗಳೆಲ್ಲ ಜನರ ನಾಲಿಗೆಯಲ್ಲಿ ನಲಿದಾಡುತ್ತಿದ್ದ ಕಾಲ. ಅದ್ಭುತ ಸಿನರಿಗಳಿಂದ, ಜನಪ್ರಿಯ ಹಾಡುಗಳಿಂದ, ರಂಜನೀಯ ಸಂಭಾಷಣೆಗಳಿಂದ ಅಂದಿನ ವೃತ್ತಿ ನಾಟಕ ಕಂಪೆನಿಗಳು ಜನರಿಗೆ ನಾಟಕದ ಗೀಳನ್ನು ಹುಟ್ಟಿಸಿದ್ದವು. ಬಿ.ವಿ.ಕಾರಂತ, ಜಿ.ವಿ.ಅಯ್ಯರ್ ಅಷ್ಟೇಕೆ ಶಿವರಾಮಕಾರಂತರಂತವರು ಕೂಡ ಈ ನಾಟಕ ರಂಗ ಭೂಮಿಯ ಸಮ್ಮೋಹನಕ್ಕೆ ಒಳಗಾಗಿದ್ದರು. ಅಂದಿನ ನಾಟಕರಂಗಭೂಮಿ ಅನೇಕ ಪ್ರತಿಭಾವಂತರ ಬದುಕಿನ ದಿಸೆಯನ್ನೇ ಬದಲಾಯಿಸಿದ್ದು ಚರಿತ್ರೆಯಲ್ಲಿ ದಾಖಲೆಯಾಗಿದೆ. ಅಂತಹ ಸಂದರ್ಭದಲ್ಲಿ ಗ್ರಾಮೀಣರಿಗೆ ಮನರಂಜನೆಯನ್ನು ಪರೋಕ್ಷ ಶಿಕ್ಷಣವನ್ನು ಒದಗಿಸುತ್ತಿದ್ದ ಯಕ್ಷಗಾನದಂತಹ ಸಾಂಪ್ರದಾಯಿಕ ರಂಗಕಲೆಗಳು ಈ ಕಂಪೆನಿ ನಾಟಕಗಳ ನೇರ ಪ್ರಭಾವಕ್ಕೆ ಒಳಗಾದವು. ಇಂತಹ ಸಂದರ್ಭದಲ್ಲಿ ನಾಟಕದ ಪ್ರಭಾವದಿಂದ ಯಕ್ಷಗಾನವನ್ನು ಉಳಿಸಲು ಶ್ರಮಪಟ್ಟವರಲ್ಲಿ ಕುರಿಯ ವಿಠಲಶಾಸ್ತ್ರಿಗಳ ತಂದೆ ವೆಂಕಟ ರಮಣಶಾಸ್ತ್ರಿಗಳು ಒಬ್ಬರು. ವಿಠಲಶಾಸ್ತ್ರಿಗಳು ಬಾಲ್ಯದಲ್ಲಿದ್ದಾಗ ಅವರ ತಂದೆ "ಕೋಳ್ಯುರು ಶಂಕರನಾರಾಯಣ ಪ್ರಸಾದಿತ ಯಕ್ಷಗಾನ ನಾಟಕ ಮಂಡಳಿ"ಯೆಂಬ ಸಂಸ್ಥೆಯನ್ನು ಸ್ಥಾಪಿಸಿ ಯಕ್ಷಗಾನವನ್ನು ನಾಟಕದ ಪೋಷಾಕಿನಲ್ಲಿ ತೋರಿಸುತ್ತಾ ಪ್ರೇಕ್ಷಕರನ್ನು ಉಳಿಸಿಕೊಳ್ಳಲು ಕಾರಣರಾದರು. ವಿಠಲಶಾಸ್ತ್ರಿಗಳು ಈ ಯಕ್ಷಗಾನ ನಾಟಕ ಮಂಡಳಿಯಲ್ಲಿ ಬಾಲಕಲಾವಿದರಾಗಿ ಲೋಹಿತಾಶ್ವ, ಬಾಲಕೃಷ್ಣ ಮುಂತಾದ ಪಾತ್ರಗಳನ್ನು ಧರಿಸಿದ್ದರು. ಹೀಗೆ ಕುರಿಯರು ಮೊದಲಿಗೆ ಬಣ್ಣ ಹಚ್ಚಿದ್ದು. ತಂದೆಯ ಯಕ್ಷಗಾನ ನಾಟಕ ಮಂಡಳಿಯಲ್ಲಿ ಆದರೆ ಗೆಜ್ಜೆ ಕಟ್ಟಿದ್ದು ಕಟೀಲು

ಮೇಳದಲ್ಲಿ. ಮೇಳದಲ್ಲಿದ್ದಾಗ ನಾಟಕದಲ್ಲಿ ಕಲಿತ ಅಭಿನಯವೊಂದೇ ಸಾಕಾಗುವುದಿಲ್ಲ ಎಂದು ಅರಿತು ಕಾವುಕಣ್ಣನ್‌ರಂತಹ ಯಕ್ಷಗಾನದ ಕುಣಿತದಲ್ಲಿ ಸಿದ್ಧಹಸ್ತರಾಗಿದ್ದವರಲ್ಲಿ ಎರಡು ವರ್ಷಗಳ ಕಾಲ ಕುಣಿತವನ್ನು ಅಭ್ಯಾಸ ಮಾಡಿದರು. ಅಲ್ಲಿಗೂ ವಿರಮಿಸದೇ ತಮ್ಮ ನರ್ತನ ಇನ್ನಷ್ಟು ಪಕ್ವವಾಗಬೇಕೆಂದು ಕೊಚ್ಚಿಯ ಪರಮಶಿವನ್ ಅವರಲ್ಲಿ ಭರತನಾಟ್ಯವನ್ನು ಕೂಡ ಕಲಿತರು. ಇದರಿಂದ ಅವರ ಯಕ್ಷಗಾನ ನರ್ತನಕ್ಕೆ ಹೊಸ ಆಯಾಮ ದೊರೆಯಿತು. ಹೀಗೆ ಎಳೆಯ ಪ್ರಾಯದಲ್ಲೇ ಇವರು ಪ್ರತ್ಯೇಕ ಧಾರೆಯಾಗಿ ಕಾಣಿಸಿಕೊಂಡದ್ದು ಮಾತ್ರವಲ್ಲದೆ ಹೊಸದರ ಆವಿಷ್ಕಾರಕ್ಕೆ ಸದಾ ತುಡಿಯುತ್ತಿದ್ದರು. ಅವರ ವ್ಯಕ್ತಿತ್ವದಲ್ಲಿ ಕಂಡುಬರುವ ಈ ಧೋರಣೆ ನಮ್ಮ ಯಕ್ಷಗಾನ ಕಲಾವಿದರಿಗೆ ಹಾಗೂ ನಾಳಿನ ಯಕ್ಷಗಾನ ಕಲೆಯನ್ನು ಮುನ್ನಡೆಸುವವರಿಗೆ ಮಾದರಿಯಾಗಬಲ್ಲದು. ಕುರಿಯರ ಸ್ಮರಣೆ ಮಾತ್ರ ಸಾಲದು ಅವರ ಧೋರಣೆ ನಮಗೆ ಆದರ್ಶಪ್ರಾಯ ಬೇಕು. ನಾವು ಕೂಡ ಆ ನಿಟ್ಟಿನಲ್ಲಿ ಸಾಗಬೇಕು.

ಕುರಿಯ ವಿಠಲಶಾಸ್ತ್ರಿಗಳು ಎರಡು ದಶಕಗಳ ಕಾಲ ಧರ್ಮಸ್ಥಳ ಮೇಳದ ವ್ಯವಸ್ಥಾಪಕರಾಗಿ ಹಾಗೂ ಮೇರುಕಲಾವಿದರಾಗಿ ಮೆರೆದವರು. ಅಲ್ಲಿದ್ದಾಗ ಯಕ್ಷಗಾನಕ್ಕೆ ಹೊಸತನ್ನು ಸೇರಿಸಬೇಕೆಂಬ ಹಂಬಲದಿಂದ ನಾಟಕದ ಧಿರುಸುಗಳನ್ನು ಯಕ್ಷಗಾನದ ವೇಷಗಾರಿಕೆಯಲ್ಲಿ ಅಳವಡಿಸಿದರು. ತಮ್ಮ ಯಕ್ಷಗಾನ ಕುಣಿತದಲ್ಲಿ ಭರತನಾಟ್ಯದ ಛಾಪನ್ನು ಮೇಳೈಸಿ ಪ್ರದರ್ಶಿಸುತ್ತಿದ್ದು ಅವರ ವಿಶಿಷ್ಟ ಮನೋಧರ್ಮವನ್ನು ತೋರಿಸುತ್ತದೆ. ಆ ಮೇಳವನ್ನು ಡೇರೆ ಮೇಳವಾಗಿ ಪರಿವರ್ತಿಸುವಲ್ಲಿ ಕುರಿಯ ವಿಠಲಶಾಸ್ತ್ರಿಗಳ ದೂರದೃಷ್ಟಿ ಅಡಗಿದೆ. ಕಂಪೆನಿ ನಾಟಕಗಳ ಹೊಡೆತದಿಂದ ಕರ್ನಾಟಕದ ಉಳಿದೆಡೆ ಇದ್ದ ಕೇಳಿಕೆ, ದೊಡ್ಡಾಟ, ಗೊಂಬೆಯಾಟ, ಸಣ್ಣಾಟ ಮುಂತಾದವೆಲ್ಲ ಅವಸಾನದ ಅಂಚು ತಲುಪಿದ್ದನ್ನು ಕಂಡ ಅವರು ಆ ಕಾಲದಲ್ಲಿ ಕೇವಲ ಹರಕೆಯಾಟದಿಂದಲೇ ಯಕ್ಷಗಾನವನ್ನು ಉಳಿಸಲು ಸಾಧ್ಯವಿಲ್ಲವೆಂದು ಬಗೆದು ತೆಂಕುತಿಟ್ಟಿನ ಧರ್ಮಸ್ಥಳ ಮೇಳವನ್ನು ಡೇರೆ ಮೇಳದ ವ್ಯವಸ್ಥೆಗೆ ಒಳಪಡಿಸಿದರು. ಇದರ ಫಲವಾಗಿ ಜನತೆ ಹಣ ಕೊಟ್ಟು ಆಟ ನೋಡಲು ಬಂದರು. ಹಣ ತೆಗೆದುಕೊಳ್ಳುವುದರಿಂದ ವ್ಯವಸ್ಥಾಪಕರ ಹಾಗೂ ಕಲಾವಿದರ ಜವಾಬ್ದಾರಿ ಹೆಚ್ಚಿತು. ಜನರನ್ನು ಸೆಳೆಯುವುದು ಅನಿವಾರ್ಯವಾಯಿತು. ಈ ಮೂಲಕ ನಾಟಕ, ಸಿನಿಮಾಗಳ ಕಡೆಗೆ ಹೊರಳಿದ್ದ ಜನರು ಯಕ್ಷಗಾನದಲ್ಲೇ ಉಳಿಯುವಂತಾಯಿತು. ಇದು ಕುರಿಯರ ಸಾಧನೆ. ಇವತ್ತಿನ ದೃಶ್ಯ ಮಾಧ್ಯಮ ರಂಗಭೂಮಿ ಅನೇಕ ಸವಾಲುಗಳ ನಡುವೆ ನಿಂತಿದೆ. ಕುರಿಯರ ಅಂದಿನ ಪ್ರಯೋಗ ಒಂದು ವಿಶಿಷ್ಟ ಮಾದರಿಯಾಗಿದ್ದು ಇವತ್ತಿನ ಕಲಾವಿದರು, ಮೇಳದ ವ್ಯವಸ್ಥಾಪಕರು, ಆಯೋಜಕರು ಕುರಿಯರ ಸಾಧನೆಯನ್ನು ಚಿಂತನೆಗೆ ಬಳಸಿಕೊಳ್ಳಬೇಕಾಗಿದೆ.

ಶ್ರೀ ಕುರಿಯ ವಿಠಲಶಾಸ್ತ್ರಿಗಳು ತಾವು ಬೆಳೆದದ್ದು ಮಾತ್ರವಲ್ಲದೇ ತಮ್ಮ ಪ್ರಭಾವ ಲಯದೊಳಗೆ ಬಂದ ಇತರೇ ಕಲಾವಿದರನ್ನು ಬೆಳೆಸಿದ್ದಾರೆ. ಕೊಳ್ಯೂರು

ರಾಮಚಂದ್ರರಾವ್, ಪೆರುವೊಡಿ ನಾರಾಯಣ ಹಾಸ್ಯಗಾರರು, ಕುಂಬಳೆ ಸುಂದರ ರಾವ್ ಮುಂತಾದವರೆಲ್ಲರನ್ನು ನಾಟ್ಯಾಭ್ಯಾಸ ಮಾಡಿಸುವಂತೆ ಪ್ರಚೋದಿಸಿದರು. ಇಲ್ಲಿ ಕುರಿಯರ ನಾಯಕತ್ವದ ಗುಣವನ್ನು ಕಾಣಬಹುದು. ತಾವೊಬ್ಬರೇ ಬೆಳೆದರೆ ಸಾಲದು, ಎಲ್ಲಾ ಕಲಾವಿದರು ಬೆಳೆಯಬೇಕು. ಆ ಮೂಲಕ ಯಕ್ಷಗಾನ ಉಳಿದು ಬೆಳೆಯಬೇಕೆಂಬುದು ಅವರ ಅಭಿಪ್ಸೆಯಾಗಿತು. ಅವರ ವೇಷಗಾರಿಕೆ, ನರ್ತನಗಳೆಲ್ಲ ಸಾಂಪ್ರದಾಯಿಕ ಯಕ್ಷಗಾನದಿಂದ ಸ್ವಲ್ಪ ಹೊರಗಿದ್ದರು ಅದನ್ನು ಪ್ರೇಕ್ಷಕರು ಒಪ್ಪಿ ಕೊಂಡದ್ದರಲ್ಲಿ ಅವರ ಕಲಾಪ್ರೌಢಿಮೆಯ ಹಿರಿಮೆ ಅಡಗಿದೆ. 38 ವರ್ಷಗಳ ಕಾಲ ತೆಂಕುತಿಟ್ಟುನ್ನು ಅವರು ಆಳಿದ್ದರು ಎಂದರೆ ತಪ್ಪಾಗಲಾರದು. ಅವರಲ್ಲಿದ್ದ ಮೂರು ಗುಣಗಳೆಂದರೆ ಸದಾ ಉತ್ಸಾಹಪೂರ್ಣರಾಗಿದದ್ದು, ಯಾವಾಗಲೂ ಪರಿಶ್ರಮದಿಂದ ತುಡಿಯುತ್ತಿದ್ದುದು ಮತ್ತು ಲೋಕೋತ್ತರವಾದ ದೃಷ್ಟಿಕೋನವನ್ನು ಹೊಂದಿದ್ದದೇ ಆಗಿದೆ. ಈ ಮೂರು ಗುಣಗಳೇ ಅವರ ಬದುಕಿನ ಸೂತ್ರವಾಗಿದ್ದವು. ಇವುಗಳನ್ನು ಇಂದಿನ ಕಲಾವಿದರು ಅರಿತು ಅಳವಡಿಸಿಕೊಂಡರೆ ಅವರ ಅಭ್ಯುದಯ ಹಾಗೂ ಯಕ್ಷಗಾನದ ಅಭ್ಯುದಯವಾಗುತ್ತದೆ.

ಕಳೆದ ಶತಮಾನದ ಐದು ಹಾಗೂ ಆರನೇ ದಶಕಗಳಲ್ಲಿ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಅಸಂಖ್ಯ ಹೊಳೆಗಳಿಂದ ಸಂಪರ್ಕ ಸಮರ್ಪಕ ವಾಗಿರಲಿಲ್ಲ. ಈಗಿನಂತೆ ಸೇತುವೆಗಳು ಇಲ್ಲದ ಕಾಲ. ಈ ಕಾರಣ ಮೂರುತಿಟ್ಟು ಕೂಡ ದೂರ ದೂರ ಉಳಿದಿದ್ದವು. ಧರ್ಮಸ್ಥಳ ಮೇಳವನ್ನು 1959ರಲ್ಲಿ ಮೊತ್ತಮೊದಲ ಬಾರಿಗೆ ಉತ್ತರಕ್ಕೆ ತಂದು ಯಶಸ್ವಿ ಪ್ರದರ್ಶನ ನೀಡಿದ ಕೀರ್ತಿ ಕುರಿಯರಿಗೆ ಸಲ್ಲುತ್ತದೆ. ಇದರಿಂದಾಗಿ ಅವರು ಬಡಗು ತೆಂಕಿನ ನಡುವೆ ಸೇತುವೆ ಆಗುತ್ತಾರೆ. ಇದು ಅವರ ಜಾಣ್ಮೆ ಹಾಗೂ ಸಂಘಟನಾ ಶಕ್ತಿಯನ್ನು ತೋರಿಸುತ್ತದೆ. ಇಂದಿನ ಯಕ್ಷಗಾನ ಆಯೋಜಕರಿಗೆ ಇದು ಮಾದರಿಯಾಬಲ್ಲದು. ಮೇಳವನ್ನು ಬಡಗುಪ್ರದೇಶಕ್ಕೆ ತರುವ ಮೊದಲೇ ಆ ಪ್ರದೇಶದ ಖ್ಯಾತನಾಮರಾಗಿದ್ದ ಶ್ರೀ ಎಂ.ಎಂ. ಹೆಗಡೆ, ಕೆರೆಮನೆ ಶಿವರಾಮ ಹೆಗಡೆ, ಕಂಬದಕೋಣೆ ಸಂಜೀವರಾವ್ ಮೂರೂರು ದೇವರು ಹೆಗಡೆ ಮುಂತಾದವರನ್ನು ಸಂಪರ್ಕಿಸಿ, ಸೌಹಾರ್ದ ವಾತಾವರಣವನ್ನು ನಿರ್ಮಿಸಿ ಮೇಳದ ಪ್ರದರ್ಶನದ ಏರ್ಪಾಡು ಮಾಡುತ್ತಾರೆ. ಈ ಮೂಲಕ ತಿಟ್ಟಿನ ಭೇದವಿಲ್ಲದೆ ಜನರು ಯಕ್ಷಗಾನವನ್ನು ಸವಿಯುತ್ತಾರೆ. ಶ್ರೀಕ್ಷೇತ್ರದ ಬಗ್ಗೆ ಕೂಡ ಬಡಗಿನಲ್ಲಿ ಪೂಜ್ಯತೆ ಹೆಚ್ಚುತ್ತದೆ. ಅವತ್ತು ಕುರಿಯ ವಿಠಲಶಾಸ್ತ್ರಿಗಳು ಬಿತ್ತಿದ್ದ ಸೌಹಾರ್ದದ ಬೀಜ ಇಂದು ಹೆಮ್ಮರವಾಗಿ ಪ್ರೇಕ್ಷಕರು ತೆಂಕು ಬಡಗೆಂಬ ಭೇದವಿಲ್ಲದೆ ಆಟವನ್ನು ಸವಿಯಲು ಕಾರಣವಾಗಿದೆ. ಇವತ್ತಿನ ಸಂಘಟಕರು ಇದೇ ಮಾದರಿಯನ್ನು ಅನುಸರಿಸಿ ಕರಾವಳಿ, ಮಲೆನಾಡನ್ನು ಹೊರತುಪಡಿಸಿ ಉಳಿದ ಕರ್ನಾಟಕದ ಭಾಗದಲ್ಲಿ ಯಕ್ಷಗಾನವನ್ನು ಪಸರಿಸುವಲ್ಲಿ ಶ್ರಮವಹಿಸಬಹುದು. ಶಿವಮೊಗ್ಗದಲ್ಲಿ ಈಗಾಗಲೇ ಈ ಬಗೆಯ ಕಾರ್ಯನಡೆಯುತ್ತಿದೆ.

ಯಕ್ಷಗಾನದಂತಹ ಸಾಂಪ್ರದಾಯಿಕ ರಂಗಭೂಮಿಯಲ್ಲಿ ಪ್ರೇಕ್ಷಕರು ಪ್ರದರ್ಶನ ದಲ್ಲಿ ಪರೋಕ್ಷವಾಗಿ ಪಾಲ್ಗೊಳ್ಳುವುದು ಸಾಮಾನ್ಯ. ಯಕ್ಷಗಾನ ಪುರಾಣ ಪ್ರಪಂಚವನ್ನೇ ಅವಲಂಬಿಸಿದ್ದರೂ ಸಮಕಾಲೀನ ಅಂಶಗಳು ಪ್ರದರ್ಶನದಲ್ಲಿ ನುಸುಳುವುದನ್ನು ಕಾಣಬಹುದು. ಅದು ಪ್ರೇಕ್ಷಕರ ಅಪೇಕ್ಷೆಯೂ ಆಗಿರುತ್ತದೆ. ಖ್ಯಾತನಾಟಕಕಾರ ಬ್ರೆಕ್ಟ್ ಹೇಳುವ ಎಫಿಕ್ ರಂಗಭೂಮಿಯ ಲಕ್ಷಣವದು. ಯಕ್ಷಗಾನದಲ್ಲೂ ಅನೇಕ ದೈನಿಕ ವಿಚಾರಗಳು ಆವರಣಭಂಗವಾಗದಂತೆ ಬಂದು ನೋಡುವ ಪ್ರೇಕ್ಷಕನು ಅದರಲ್ಲಿ ಭಾಗವಾಗುವಂತಾಗುವ ಮೂಲಕ ಪ್ರಸ್ತುತವಾಗುತ್ತದೆ. ಔಚಿತ್ಯಕ್ಕಿಂತ ಇಲ್ಲಿ ಒಳಗೊಳ್ಳುವಿಕೆಯೇ ಮುಖ್ಯ. ಇಂತಹ ವಿಶಿಷ್ಟ ತಂತ್ರಗಾರಿಕೆಯನ್ನು ಬಹಳ ಹಿಂದೆಯೇ ಕುರಿಯರು ಬಳಕೆಗೆ ತಂದಿದ್ದರು. ಅವರ ಬ್ರಹ್ಮಕಪಾಲದ ಈಶ್ವರ ಪ್ರೇಕ್ಷಕರಲ್ಲಿ ಒಂದು ಭಿಕ್ಷೆ ಬೇಡುವುದು ಅವರಿಗೆ ಬಹಳಷ್ಟು ಜನಪ್ರೀತಿ ಗಳಿಸಿಕೊಟ್ಟಿತ್ತು. ಅದೇ ಮುಂದೆ ಅವರಿಂದಾಗಿ ಚಾಲ್ತಿಯಾಯಿತು. ನಿಜವಾದ ಬಂಡಿಯನ್ನೇ ರಂಗಸ್ಥಳಕ್ಕೆ ತಂದ ಹಿರಿಮೆ ಕೂಡ ಕುರಿಯರದ್ದಾಗಿದೆ. ಈ ಬಗೆಯ ವಿನೂತನತೆಯನ್ನು ಸಾಧಿಸುವ ತಂತ್ರಗಾರಿಕೆ ಕುರಿಯ ವಿಠಲಶಾಸ್ತ್ರಿಗಳಲ್ಲಿ ಮನೆಮಾಡಿತ್ತು. ಇವತ್ತಿನ ಕಲಾವಿದರು, ಸಂಯೋಜಕರು ಈ ಬಗೆಯ ತಂತ್ರಗಾರಿಕೆಯ ಕುರಿತು ಯೋಚಿಸಬೇಕಾಗಿದೆ. ಕುರಿಯರನ್ನು ಆದರ್ಶವಾಗಿರಿಸಿಕೊಳ್ಳಬೇಕಾಗಿದೆ.

ಕರ್ಕಿ ಹಾಸ್ಯಗಾರ ಮೇಳಕ್ಕೆ 400 ವರ್ಷಗಳ ವೈಶಿಷ್ಟ್ಯಮಯ ಇತಿಹಾಸವಿದೆ. ಅದರದೇ ಆದ ಪರಂಪರೆ ಇದೆ. ಒಂದು ಮನೆತನ ತಲೆತಲಾಂತರದಿಂದ ತನ್ನದೇ ಆದ ಮೌಲ್ಯವನ್ನು ಹೇಗೆ ಕಾಯ್ದುಕೊಳ್ಳಬಹುದು. ಕಾಯ್ದುಕೊಳ್ಳಬೇಕೆಂಬುದಕ್ಕೆ ಈ ಮೇಳ ಒಂದು ಮಾದರಿಯಾಗುತ್ತದೆ. ಕರ್ಕಿ ಪರಮಯ್ಯ ಹಾಸ್ಯಗಾರರು ಈ ಮೇಳಕ್ಕೆ ಆ ಮೂಲಕ ಯಕ್ಷಗಾನ ರಂಗಕ್ಕೆ ನೀಡಿದ ಕೊಡುಗೆ ಉಲ್ಲೇಖನಾರ್ಹ. ಅವರೊಬ್ಬರು ಮಹಾನ್ ಕಲಾವಿದರು ಮಾತ್ರವಲ್ಲದೇ ಈ ಕರ್ಕಿ ಮೇಳದ ಕಲಾಪರಂಪರೆಗೆ ಚ್ಯುತಿಬಾರದ ಹಾಗೆ ಕಾಯ್ದುಕೊಂಡು ಬಂದವರು. ಹೇಗೆ ಸಾಲಿಗ್ರಾಮ ಮಕ್ಕಳ ಮೇಳವು ಬಡಗುತಿಟ್ಟಿನ ಮಟ್ಪಾಡಿ ಹಾಗೂ ಹಾರಾಡಿ ಶೈಲಿಯನ್ನು ಉಳಿಸಿಕೊಳ್ಳಲು ಬದ್ಧವಾಗಿದೆಯೋ ಹಾಗೆ ಕರ್ಕಿ ಮೇಳವು ತನ್ನ ಮಟ್ಟನ್ನು ಉಳಿಸಲು ಎಳೆಯರ ದಂಡೊಂದನ್ನು ನಿರ್ಮಿಸುವ ಅಗತ್ಯವಿದೆ.

ಕರ್ಕಿಮೇಳ ಬಡೋದೆ ಸಂಸ್ಥಾನಕ್ಕೆ ತೆರಳಿ ತನ್ನ ವಿಕ್ರಮವನ್ನು ಸಾಧಿಸಿದ್ದು ದಾಖಲಾರ್ಹ. ಅವತ್ತಿನ ಕಾಲಕ್ಕೆ ಕನ್ನಡವಲ್ಲದ ಪ್ರದೇಶವೊಂದಕ್ಕೆ ಹೋಗಿ ಯಕ್ಷ ಗಾನದ ಕೀರ್ತಿ ಪತಾಕೆಯನ್ನು ಹಾರಿಸಿದ್ದು ಹೆಚ್ಚುಗಾರಿಕೆ. ಇದು ಇವತ್ತು ನಮ್ಮ ಮೇಳಗಳಿಗೆ ಮೇಳದ ವ್ಯವಸ್ಥಾಪಕರಿಗೆ ದಾರಿದೀಪವಾಗಬೇಕು. ಹೊರನಾಡಿನಲ್ಲಿ ಕೂಡ ಯಕ್ಷಗಾನದ ಕಂಪನ್ನು ವಿಸ್ತರಿಸಲು ನಮಗೆಲ್ಲರಿಗೆ ಕರ್ಕಿ ಮೇಳ ಸ್ಫೂರ್ತಿದಾಯಕ ವಾಗಿದೆ. ಮರಾಠಿ ಸಂಗೀತ ನಾಟಕ ಪರಂಪರೆಗೆ ಕರ್ಕಿಮೇಳದ ಪ್ರಭಾವ ಪರೋಕ್ಷವಾಗಿ ಆಗಿದೆ.

ಕರ್ಕಿ ಪರಮಯ್ಯ ಹಾಸ್ಯಗಾರರು ಯಾವುದೇ ಸಂದರ್ಭದಲ್ಲಿ ರಾಜಿ ಮಾಡಿಕೊಳ್ಳದೇ ಕಲಾಪ್ರಜ್ಞೆಗೆ ಬದ್ಧರಾಗಿ ಪಾತ್ರ ನಿರ್ವಹಣೆ ಮಾಡುತ್ತಿದ್ದರು. ಕುರಿಯ ವಿಠಲಶಾಸ್ತ್ರಿಗಳಂತೆ ಪರಮಯ್ಯ ಹಾಸ್ಯಗಾರರು ಅದ್ಭುತ ನಾಟ್ಯಾಚಾರ್ಯರು. ಅವರ ನರ್ತನದಲ್ಲಿ ಶುದ್ಧ ಯಕ್ಷಗಾನವನ್ನು ಕಾಣಬಹುದು. ಪಾತ್ರಕ್ಕೆ ಸದಾ ನ್ಯಾಯ ಸಲ್ಲಿಸುವ ರೀತಿಯಲ್ಲಿ ಪಾತ್ರ ಪೋಷಣೆ ಮಾಡುತ್ತಿದ್ದರು. ಯಕ್ಷಗಾನ ರಂಗಭೂಮಿಯಲ್ಲಿ ಅವರದೇ ಆದ ಛಾಪನ್ನು ಒತ್ತಿ ಇಂದಿಗೂ ಕಲಾಭಿಮಾನಿಗಳು ನೆನೆಸಿಕೊಳ್ಳುವ ಪಾತ್ರಗಳೆಂದರೆ ಪಟ್ಟಾಭಿಷೇಕದ ದಶರಥ, ಸುಧನ್ವಕಾಳಗದ ಸುಧನ್ವ ಬಭ್ರುವಾಹನ ಕಾಳಗದ ಬಭ್ರುವಾಹನ, ಕೀಚಕ ವಧೆಯ ಕೀಚಕ ಮುಂತಾದವು. ಪರಮಯ್ಯ ಹಾಸ್ಯಗಾರರು ಪುಂಡುವೇಷ ಹಾಗೂ ಎರಡನೇ ವೇಷಗಳೆರಡರಲ್ಲೂ ಮಿಂಚಿದವರು. ವ್ಯಕ್ತಿಗತವಾಗಿ ಕುರಿಯರಷ್ಟು ಆಕ್ರಮಣಶೀಲರಲ್ಲ. ಮುನ್ನುಗ್ಗುವ ಸ್ವಭಾವದವರಲ್ಲ. ಸಾತ್ವಿಕ ವ್ಯಕ್ತಿತ್ವದ ಸದಾ ಆತ್ಮೀಯತೆ ಅವರಲ್ಲಿತ್ತು. ಕೆರೆಮನೆ ಶಿವರಾಮ ಹೆಗಡೆ, ಕುರಿಯ ವಿಠಲಶಾಸ್ತ್ರಿ, ಪರಮಯ್ಯ ಹಾಸ್ಯಗಾರರು ಕಳೆದ ಶತಮಾನದಲ್ಲಿ ಯಕ್ಷಗಾನದಲ್ಲಿ ಮಿಂಚಿದ ಮೇರು ಸದೃಶ್ಯ ವ್ಯಕ್ತಿಗಳು ಯಕ್ಷಗಾನದ ಕಲಾವಿದರಾಗಿ ರಂಗದಲ್ಲಿ ಮೆರೆದಂತೆ ವೈಯಕ್ತಿಕ ಬದುಕಿನಲ್ಲೂ ಆದರ್ಶಮಯವಾಗಿದ್ದವರು. ಇಂದಿನ ಕಲಾವಿದರಿಗೆ ಇದು ಮಾದರಿಯಾಗಬೇಕು.

ಕರ್ಕಿ ಪರಮಯ್ಯ ಹಾಸ್ಯಗಾರರ ಇನ್ನೊಂದು ಹೆಚ್ಚುಗಾರಿಕೆಯೆಂದರೆ ಸಾಹಿತ್ಯ ಲೋಕದ ಜನರು ಇವರ ಯಕ್ಷಗಾನದ ವೇಷಗಾರಿಕೆಯನ್ನು ಮೆಚ್ಚಿಕೊಂಡಿದ್ದು ಡಾ॥ ಶಿವರಾಮ ಕಾರಂತರಂತು ಇವರ ಶುದ್ಧಾಂಗ ನೃತ್ಯಕ್ಕೆ ಮನಸೋತಿದ್ದರು. ಕಾರಂತರ ಮೂಲಕ ವಿ.ಸೀತಾರಾಮಯ್ಯ (ವಿ.ಸೀ.)ನವರು ಇವರ ವೇಷಗಾರಿಕೆಯನ್ನು, ಕುಣಿತವನ್ನು ನೋಡಿ ಮೆಚ್ಚಿಕೊಂಡು ತಮ್ಮ ಲೇಖನಗಳಲ್ಲಿ ದಾಖಲಿಸಿದ್ದಾರೆ. ಖ್ಯಾತ ಕಾದಂಬರಿಕಾರ ಅ.ನ.ಕೃಷ್ಣರಾಯರು (ಅ.ನ.ಕೃ.) ಕೂಡ ಪರಮಯ್ಯ ಹಾಸ್ಯಗಾರ ಹಾಗೂ ಕೆರೆಮನೆ ಶಿವರಾಮ ಹೆಗಡೆಯವರ ಪಾತ್ರದ ವೈಭವವನ್ನು ಮನಸಾರೆ ಮೆಚ್ಚಿ ಹೊಗಳಿದ್ದಾರೆ. ಹೀಗೆ ಒಂದು ರಂಗದ ಕಲಾವಿದರು ಇನ್ನೊಂದು ರಂಗದವರ ಮೆಚ್ಚುಗೆ ಪಡೆದುಕೊಳ್ಳುವುದು ಬಹು ವಿರಳ. ನಮ್ಮ ಯಕ್ಷಗಾನ ಕಲೆಗೆ ಮಾನ್ಯತೆ ದೊರೆಯಲು ಇಂತಹ ಉಳಿದ ಕಲಾಪ್ರಕಾರದವರ ಮೆಚ್ಚುಗೆ ಅಗತ್ಯವಾಗುತ್ತದೆ. ಇದನ್ನು ನಮ್ಮ ಕಲಾವಿದರು ಸಂಘಟಕರು, ಆಯೋಜಕರು ಮನಗಂಡು ಇವತ್ತು ಉಳಿದ ಕಲಾಪ್ರಕಾರಗಳ ಧೀಮಂತರಗಮನವನ್ನು ಯಕ್ಷಗಾನದೆಡೆಗೆ ಸೆಳೆಯಲು ಪ್ರಯತ್ನಿಸಬೇಕು. ಆಗ ಯಕ್ಷಗಾನದ ಮಾನ್ಯತೆ ಇನ್ನಷ್ಟು ಹೆಚ್ಚುತ್ತದೆ. ಪರಮಯ್ಯ ಹಾಸ್ಯಗಾರರಿಗೆ ಸಲ್ಲಿಸುವ ಉತ್ತಮವಾದ ಶ್ರದ್ಧಾಂಜಲಿ ಇದಾಗುತ್ತದೆ. ಯಕ್ಷಗಾನದ ಶುದ್ಧ ಕಲಾಸ್ವರೂಪಕ್ಕೆ ಆ ಮೂಲಕ ಮಾನ್ಯತೆ ದೊರೆಯುತ್ತದೆ. ಯಕ್ಷಗಾನ ಕಲೆ ಕರಾವಳಿ ಹಾಗೂ ಮಲೆನಾಡಿನ ಪ್ರೀತಿಯ ಕಲೆಯಾಗುವುದರೊಂದಿಗೆ ಉಳಿದ ಜನರೆಡೆಗೆ ಇದರ ಕಂಪನ್ನು ಪಸರಿಸಲು ಬೇರೆ ಮಾಧ್ಯಮದವರು ಬೇಕೆಂಬುದನ್ನು

ಇವತ್ತಿನ ಎಲ್ಲಾ ಯಕ್ಷಗಾನಸಕ್ತರು ಅರಿಯಬೇಕು. ಇದೇ ಪರಮಯ್ಯ ಹಾಸ್ಯಗಾರರಿಂದ ದೊರೆಯುವ ಪಾಠವಾಗಿದೆ.

ಹೀಗೆ ಈ ಇಬ್ಬರು ಪ್ರಾತಃಸ್ಮರಣೀಯರನ್ನು ಇಲ್ಲಿ ಸ್ಮರಿಸುವುದರೊಂದಿಗೆ ಅವರ ಸಾಧನೆಯ ಪಕ್ಷಿನೋಟ ನೋಡಬಹುದು. ಯಕ್ಷಗಾನ ಕಲಾವಿದರು ಹಾಗೂ ಆಸಕ್ತರು ಈ ಇಬ್ಬರು ಮೇರು ಕಲಾವಿದರ ಕೊಡುಗೆಯನ್ನು ಅರಿತರೆ ಮಾತ್ರ ಸಾಲದು ಅದೇ ಬಗೆಯ ಕಾವ್ಯಗಳನ್ನು, ಪ್ರದರ್ಶನಗಳನ್ನು ಆಯೋಜಿಸುವ ಮೂಲಕ ಯಕ್ಷಗಾನದ ಮಿತಿಯನ್ನು ವಿಸ್ತರಿಸಬೇಕು. ಮುಂಬಯಿ, ಹೈದರಾಬಾದ್, ಬೆಂಗಳೂರು, ಧಾರವಾಡ ಮುಂತಾದ ನಗರ ಪ್ರದೇಶಗಳಿಗೆ ಈ ಗ್ರಾಮೀಣ ಕಲೆ ಸಾಗಬೇಕಾಗಿದೆ. ಇನ್ನು 20–25 ವರ್ಷಗಳಲ್ಲಿ ಭಾರತ ಗ್ರಾಮೀಣ ಜನತೆಗಿಂತ ಹೆಚ್ಚು ನಗರ ಜನತೆಯನ್ನು ಹೊಂದುವ ಸಾಧ್ಯತೆ ಇರುವುದರಿಂದ ನಮ್ಮ ಯಕ್ಷಗಾನ ಕಲೆ ಆ ವಾತಾವರಣಕ್ಕೆ ಹೊಂದುವ ಪರಿಯಲ್ಲಿ ಬದಲಾವಣೆ ಹೊಂದಬೇಕಾಗುತ್ತದೆ. ಅಂತಹ ಚಿಂತನೆಗೆ ಇಂತಹ ಲೇಖನಗಳು ಪ್ರೇರಕವಾಗಲಿ.

■

ಯಕ್ಷಗಾನದಲ್ಲಿ ಹೊಸಗಾಳಿ

ಕಳೆದ ನೂರು ವರ್ಷಗಳಲ್ಲಿ ನಮ್ಮ ಈ ಯಕ್ಷಗಾನ ರಂಗ ಭೂಮಿ ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಈ ಬದಲಾವಣೆ ಕೆಲವರ ದೃಷ್ಟಿಯಲ್ಲಿ ಪರಂಪರೆಗೆ ಆದ ಚ್ಯುತಿ. ಇನ್ನು ಕೆಲವರ ದೃಷ್ಟಿಯಲ್ಲಿ ಸ್ವಾಗತಾರ್ಹ ಬದಲಾವಣೆ. ಇದಕ್ಕೆ ಕಾರಣ ಅವರವರ ದೃಷ್ಟಿಕೋನ. ಅದು ಹೇಗೇ ಇರಲಿ ಬದಲಾವಣೆಯಂತೂ ಆಗಿದೆ. ಕಳೆದ ಶತಮಾನದ ಪೂರ್ವಾರ್ಧದಲ್ಲಿ ಅನೇಕ ವಿದ್ಯಾವಂತರು, ಮೇಧಾವಿಗಳು, ಚಿಂತಕರು, ವಕೀಲರು, ಅಧ್ಯಾಪಕರು ಈ ರಂಗವನ್ನು ಪ್ರವೇಶಿಸಿದರು. ಮುಳಿಯ ತಿಮ್ಮಪ್ಪಯ್ಯ, ಜಿ.ಆರ್.ಪಾಂಡೇಶ್ವರ, ಕವಿಭೂಷಣ ಕೆ.ಪಿ.ವೆಂಕಪ್ಪ ಶೆಟ್ಟಿ, ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಕೋಟ ಶಿವರಾಮ ಕಾರಂತ, ಕುರಿಯ ವಿಠಲ ಶಾಸ್ತ್ರಿ, ಕುಬಣೂರು ಬಾಲಕೃಷ್ಣರಾವ್, ಪ್ರೊ.ಕೆ.ಜಿ.ಶಾಸ್ತ್ರಿ ಮುಂತಾದ ಹಿರಿಯರೆಲ್ಲ ಈ ರಂಗದ ಕಡೆಗೆ ದೃಷ್ಟಿಹರಿಸಿದರು. ಇದಕ್ಕೆಲ್ಲ ಕಳಸವಿಟ್ಟಂತೆ ಖ್ಯಾತ ಸಾಹಿತಿಗಳಾದ ಶಿವರಾಮ ಕಾರಂತರಿಂದ 'ಯಕ್ಷಗಾನ ಬಯಲಾಟ'ದಂತಹ ಮೇರುಕೃತಿ ರಚನೆಗೊಂಡು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ್ದಲ್ಲದೇ ರಾಷ್ಟ್ರದ ವಿದ್ವತ್ ವಲಯದ ಗಮನ ಸೆಳೆಯಿತು. ಅವರು ಕೇವಲ ಬದಲಾವಣೆಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳದೇ ಅನೇಕ ಪ್ರಯೋಗಗಳನ್ನೂ ನಡೆಸಿ ಈ ರಂಗದ ಧನ್ಯತೆಯ ಹರವುಗಳನ್ನು ವಿಸ್ತರಿಸಿದರು. ಉತ್ತರಾರ್ಧದಲ್ಲಿ ಮೊದಲಿಗೆ ತೆಂಕು ತಿಟ್ಟಿನಲ್ಲಿ ಡೇರೆ ಮೇಳಗಳು ಪ್ರದರ್ಶನಗಳನ್ನು ಪ್ರಾರಂಭಿಸಿ ಜನಾಕರ್ಷಣೆಯನ್ನು ಗಳಿಸಿದವು. ಅಧ್ಯಾಪಕರಾಗಿದ್ದವರೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಯಕ್ಷಗಾನದಲ್ಲಿ ತೊಡಗಿಸಿ

ಕೊಂಡರು. ಹರಿದಾಸರಾಗಿ ಖ್ಯಾತಿಗೊಂಡವರು ತಾಳಮದ್ದಳೆಯ ಮೂಲಕ ಯಕ್ಷಗಾನದ 'ರಂಗಸ್ಥಳ'ವನ್ನು ಏರಿದರು. ಬಡಗುತಿಟ್ಟು ಹಾಗೂ ಬಡಾಬಡಗು ತಿಟ್ಟಿನ ಕಲಾವಿದರಲ್ಲಿ ಹೊಂದಾಣಿಕೆ ಏರ್ಪಟ್ಟಿತು. ಇದರಿಂದಾಗಿ ವ್ಯಾಹಹಾರಿಕ ಮುನ್ನಡೆ ಅಲ್ಲಿ ಸಾಧ್ಯವಾಯಿತು. ಇವೆಲ್ಲ 30–40 ವರ್ಷಗಳ ಕೆಳಗಿನ ಯಕ್ಷಗಾನ ಕಲಾ ಇತಿಹಾಸಕ್ಕೆ ಸೇರ್ಪಡೆಗೊಂಡ ಅಂಶಗಳು.

ಈಚೆಗೆ ಡೇರೆ ಮೇಳಗಳು ಸೊರಗುತ್ತಿವೆ. ಹರಕೆ ಆಟದ ಮೇಳಗಳೇನೋ ಅಧಿಕವಾಗಿವೆ. ಆದರೆ ನೋಡುವ ಪ್ರೇಕ್ಷಕರ ಸಂಖ್ಯೆ ಮಧ್ಯರಾತ್ರಿಯ ನಂತರ ತೀರಾ ಕಡಿಮೆಯಾಗುತ್ತಿದೆ. ಎಲ್ಲ ಕಡೆಯೂ ಹವ್ಯಾಸಿ ಕಲಾವಿದರು ಮುಂಚೂಣಿಗೆ ಬರುತ್ತಿದ್ದು ವೃತ್ತಿ ನಿರತ ಕಲಾವಿದರ ಸಹಕಾರದೊಂದಿಗೆ ಅಸಂಖ್ಯ ಯಕ್ಷಗಾನ ಪ್ರದರ್ಶನಗಳು ನಡೆಯುತ್ತಿವೆ. ಇದೀಗ ಯಕ್ಷಗಾನಕ್ಕೆ ಪ್ರತ್ಯೇಕ ಅಕಾಡೆಮಿಯೂ ಪ್ರಾರಂಭಗೊಂಡು ಹಲವೆಡೆ ಗೋಷ್ಠಿಗಳು, ಕಮ್ಮಟಗಳು ವಿಚಾರಸಂಕಿರಣಗಳು, ಪ್ರಾತ್ಯಕ್ಷಿಕೆಗಳು, ಪ್ರಯೋಗ ಗಳು ನಡೆಯುತ್ತಲಿವೆ. ಪಾರಂಪರಿಕ ಶಿಕ್ಷಣ ಕ್ರಮ ನಶಿಸಿ ತೆಂಕುತಿಟ್ಟು, ಬಡಗು ತಿಟ್ಟುಗಳೆರಡರಲ್ಲೂ ಯಕ್ಷಗಾನ ತರಬೇತಿ ಕೇಂದ್ರಗಳು ಪ್ರಾರಂಭಗೊಂಡು ಈ ರಂಗಕ್ಕೆ ಬರಲಿಚ್ಛಿಸುವ ಹುಡುಗರಿಗೆ ತರಬೇತಿ ನೀಡುತ್ತಿವೆ. ಮೊದಲೆಲ್ಲ ಶಾಲಾ ವಾರ್ಷಿಕೋತ್ಸವದಲ್ಲಿ ಮಾತ್ರ ಕಾಣುತ್ತಿದ್ದ ಮಕ್ಕಳ ಯಕ್ಷಗಾನ ಪ್ರದರ್ಶನಗಳು ಸಾಲಿಗ್ರಾಮ ಮಕ್ಕಳ ಮೇಳದ ಖ್ಯಾತಿಯಿಂದಾಗಿ ಬಹು ಸಂಖ್ಯೆಯಲ್ಲಿ ಜರುಗುತ್ತಿವೆ. ನಗರ-ಹಳ್ಳಿಗಳೆಂಬ ಬೇಧವಿಲ್ಲದೇ ಮಹಿಳೆಯರು ಯಕ್ಷಗಾನವನ್ನು ಕಲಿತು ಪ್ರದರ್ಶನಗಳಲ್ಲಿ ಭಾಗಿಗಳಾಗುತ್ತಿದ್ದಾರೆ. ಮೊದಮೊದಲು ಮಳೆಗಾಲದಲ್ಲಿ ಮಾತ್ರ ಕಾಣಬರುತ್ತಿದ್ದ ತಾಳಮದ್ದಳೆಗಳು ಈಗ ವರ್ಷವಿಡೀ ನಡೆಯುತ್ತವೆ. ಅದರಲ್ಲೂ ಹವ್ಯಾಸೀ ಅರ್ಥ ಧಾರಿಗಳಿಂದ ನಿರಂತರವಾಗಿ ಕಾಲಮಿತಿಯ ತಾಳಮದ್ದಳೆಗಳು ಎಲ್ಲೆಡೆ, ಎಲ್ಲ ಕಾಲದಲ್ಲಿಯೂ ನಡೆಯುವಂತಾಗಿವೆ. ಐವತ್ತು ವರ್ಷಗಳ ಕೆಳಗೆ ಯಶಸ್ವಿಯಾಗದ ಕಾಲಮಿತಿ ಯಕ್ಷಗಾನ ಪ್ರದರ್ಶನ ಈಗ ಬದಲಾದ ಜನಜೀವನದ ಕಾರಣದಿಂದ ಜನಮನವನ್ನು ಗೆಲ್ಲುತ್ತಾ ಮುಂದಿನ ದಿನಗಳಲ್ಲಿ ಅದೊಂದೇ ಉಳಿಯಬಹುದೆಂಬ ಸೂಚನೆ ಕಂಡುಬರುತ್ತಿದೆ. ಚಿಕ್ಕಮೇಳಗಳು ತಮ್ಮ ಪ್ರದರ್ಶನವನ್ನು ಹೆಚ್ಚಿಸಿಕೊಂಡಿವೆ. ಹಿಂದೆಲ್ಲ ಬೆಂಗಳೂರಿನ ಟೌನ್ ಹಾಲಿನಲ್ಲಿ ಮಳೆಗಾಲದಲ್ಲಿ ಮಾತ್ರ ನಡೆಯುತ್ತಿದ್ದ ಪ್ರದರ್ಶನಗಳು ಈಗ ವರ್ಷವಿಡೀ ನಡೆಯುವಂತಾಗಿದೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಭಾಗವಾಗಿ ನಡೆಯುತ್ತಿದೆ. ಹೆಚ್ಚಿನ ವ್ಯತ್ಯಾಸವಿಲ್ಲದೇ ಅಸಂಖ್ಯ ಹವ್ಯಾಸೀ ಸಂಸ್ಥೆಗಳು ಹುಟ್ಟಿಕೊಂಡಿದ್ದು ತರಬೇತಿ, ಸನ್ಮಾನ, ಗೋಷ್ಠಿ, ಪ್ರಯೋಗ, ವಿಚಾರಸಂಕಿರಣ, ಪ್ರದರ್ಶನಗಳನ್ನು ಏರ್ಪಡಿಸುತ್ತಿವೆ. ಇದು ಇತರ ನಗರಗಳಲ್ಲಿಯೂ ಹಬ್ಬುತ್ತಿದೆ. ಯಕ್ಷಸಂಗೀತ, ಯಕ್ಷರೂಪಕ, ಯಕ್ಷನಾಟ್ಯ, ದೀವಟಿಕೆ ಯಕ್ಷಗಾನ, ಏಕಪಾತ್ರ ಯಕ್ಷಗಾನ, ಏಕವ್ಯಕ್ತಿ ಯಕ್ಷಗಾನ, ಏಕವ್ಯಕ್ತಿ ತಾಳಮದ್ದಳೆ, ಯುಗಳ ಯಕ್ಷಗಾನ, ಮುಂತಾದ ವೈವಿಧ್ಯಮಯ ರೂಪದಲ್ಲಿ ಯಕ್ಷಗಾನ ಮನತಣಿಸುತ್ತಿದೆ. ಹಾಸ್ಯಸರಣಿಯ ಪ್ರದರ್ಶನ,

ಕಾಳಗ ಸರಣಿಯ ಪ್ರದರ್ಶನ, ಕಲ್ಯಾಣ ಸರಣಿಯ ಪ್ರದರ್ಶನ, ಪಾತ್ರದ ಜೀವನ ಘಟ್ಟಗಳನ್ನು ಆಧರಿಸಿದ ಪ್ರದರ್ಶನ, ಎಂತೆಲ್ಲ ಕಸರತ್ತುಗಳು ವ್ಯಾವಹಾರಿಕ ಪ್ರದರ್ಶನ ಗಳಲ್ಲಿ ಅಡಿಯಿಡುತ್ತಿವೆ. ದ್ವಂದ್ವ ಹಾಡುಗಾರಿಕೆ, ದ್ವಂದ್ವ ವಾದನ ಪರಿ, ವಿಶಿಷ್ಟವಾದ ರಂಗಸ್ಥಳದ ಪರಿಚಯ ಹೀಗೆ ಪಟ್ಟಿ ಮಾಡುತ್ತಾ ಹೋದರೆ ಮುಗಿಯಲಾರದಷ್ಟು ವೈವಿಧ್ಯ. ಹೇಳಲಾರದಷ್ಟು ಬಗೆಗಳು ರಸಿಕರ ರಂಜನೆಗಾಗಿ ನಡೆಯುತ್ತಿವೆ. ಹಿಂದೆಲ್ಲಾ ಕರಾವಳಿ ಮತ್ತು ಮಲೆನಾಡಿನಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದ ಯಕ್ಷಗಾನ ಈಗ ರಾಜ್ಯದೆಲ್ಲೆಡೆ ಪ್ರದರ್ಶನಗೊಳ್ಳುತ್ತಾ 'ಯಕ್ಷಗಾನ' ಕರ್ನಾಟಕ ರಾಜ್ಯದ ಪ್ರಾತಿನಿಧಿಕ ಕಲೆಯಾಗಿ ಪ್ರತಿಷ್ಠಾಪನೆಗೊಂಡಿದೆ. ಶ್ರೀಗಂಧ, ಚಿನ್ನ, ಆನೆ ಹಾಗೂ ಯಕ್ಷಗಾನ ಕರ್ನಾಟಕದ ನೈಸರ್ಗಿಕ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಬಾಹ್ಯಪ್ರಪಂಚಕ್ಕೆ ಪರಿಚಯಿಸುವ ಸಂಕೇತಗಳಾಗಿವೆ.

ಹಿಂದೆ ಹೇಳಿದಂತೆ ಇದನ್ನೆಲ್ಲ ಸ್ವಾಗತಿಸುವವರ ದಂಡು ಒಂದೆಡೆಯಾದರೆ ಯಕ್ಷಗಾನದ ಅವಸಾನಕ್ಕೆ ಇದೆಲ್ಲ ದಾರಿ ಎಂಬ ಇನ್ನೊಂದು ದಂಡೂ ಇದೆ. ಇವರಿಬ್ಬರ ನಡುವೆ ಪಾರಂಪರಿಕ ಕಲೆಯಾದ ಯಕ್ಷಗಾನ ತನ್ನ ಹರಹನ್ನು ವಿಸ್ತರಿಸುತ್ತಾ, ಜನಾಕರ್ಷಣೆಗಳಿಸಿಕೊಳ್ಳುವಲ್ಲಿ ಪ್ರಯತ್ನಿಸುತ್ತಾ ಜೀವಂತಿಕೆಯ ತುಡಿತದೊಂದಿಗೆ ಮುನ್ನಡೆಯುತ್ತಿದೆ. ಸಾಹಿತ್ಯ, ಕಲೆಗಳೆಲ್ಲ ಯುಗಧರ್ಮಕ್ಕೆ ಬದ್ಧವಾಗಿರುತ್ತವೆ. ಸಾಮುದಾಯಿಕ ಬದುಕಿನಲ್ಲಾದ ಸ್ಥಿತ್ಯಂತರಗಳು ಕಲೆಯ ಮೇಲೂ ತನ್ನ ಪ್ರಭಾವವನ್ನು ಬೀರುತ್ತವೆ. ಅನೇಕ ಹೊಸ ತೊರೆಗಳನ್ನು ಸೇರಿಸಿಕೊಂಡು ಕಾಲಕ್ಕೆ ಹೊಂದದ ಅಂಶಗಳನ್ನೆಲ್ಲ ಕಳಚಿಕೊಳ್ಳುತ್ತಾ ಕಲೆಯ ವಾಹಿನಿ ಮುಂದುವರಿಯುತ್ತದೆ. ತನ್ನ ಸುತ್ತಲಿನ ಬದುಕಿಗೆ ಸ್ಪಂದಿಸುವಲ್ಲಿ ಕಲೆಯ ಅಳಿವು ಉಳಿವಿನ ಪ್ರಶ್ನೆಯೂ ಅಡಕವಾಗಿದೆ. ಪಾರಂಪರಿಕ ಕಲೆಯಾದ ಯಕ್ಷಗಾನದ ಜೀವಂತಿಕೆಗೂ ಇದೇ ಆಧಾರ ತತ್ವ. ಯಕ್ಷಗಾನದ ಇತರೇ ಪ್ರಕಾರಗಳಾದ ದೊಡ್ಡಾಟ, ಸಣ್ಣಾಟ, ಕೃಷ್ಣ ಪಾರಿಜಾತ, ಮೂಡಲಪಾಯಗಳು ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಯತ್ನಕ್ಕಿಳಿಯದೇಹೋದದ್ದರಿಂದ ಅವುಗಳು ಅಳಿವಿನ ಅಂಚಿನಲ್ಲಿವೆ. ಅದೇ ಕರಾವಳಿ ಹಾಗೂ ಮಲೆನಾಡಿನ ಪ್ರದೇಶದಲ್ಲಿನ ಯಕ್ಷಗಾನ ಇನ್ನೂ ಜೀವಂತಿಕೆಯಿಂದ ನಳನಳಿಸುತ್ತಿರುವದಕ್ಕೆ ಇದೇ ಆಧಾರ ತತ್ವವೂ ಕಾರಣವಾಗಿದೆ. ಹೀಗೆ ಕಳೆದ ನೂರು ವರ್ಷಗಳಲ್ಲಿ ಮೇಲೆ ಕಾಣಿಸಿದ ಎಲ್ಲ ಬದಲಾವಣೆಗಳು ಕಾಲಘಟ್ಟದಲ್ಲಾದ ಮಾರ್ಪಾಡುಗಳಿಗೆ ಸರಿಹೊಂದಿಸಿಕೊಳ್ಳುವ (Social and Cultural Reenginering) ಸಾಂಸ್ಕೃತಿಕ ಪ್ರಯತ್ನಗಳಾಗಿ ರೂಪು ಗೊಂಡಿವೆ.

ಯುಗಧರ್ಮದ ಪರಿಜ್ಞಾನ ನಮ್ಮ ಒಳನೋಟಕ್ಕೆ ಆಳವನ್ನು ಒದಗಿಸಿದರೆ ಸುತ್ತಲಿನ ವಿದ್ಯಮಾನಗಳ ಅರಿವು ನಮ್ಮ ಮಾತಿಗೆ ವೈಶಾಲ್ಯವನ್ನು ಕೊಡುತ್ತದೆ. ಇಂದಿನ ಆರ್ಥಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ ರಂಗಗಳೆಲ್ಲದರ ಮುಂದೆ ಜಾಗತೀಕರಣದ ಪ್ರಭಾವವಿದ್ದು ಇದನ್ನು ಈ ಎಲ್ಲ ರಂಗಗಳೂ ಹೇಗೆ

ಅರಗಿಸಿಕೊಳ್ಳುತ್ತವೆ ಎನ್ನುವುದರ ಮೇಲೆ ಅವುಗಳ ಬಲಾಬಲ ನಿಷ್ಕರ್ಷೆಯಾಗುತ್ತದೆ. ಯಕ್ಷಗಾನದಂತಹ ಸಾಂಪ್ರದಾಯಿಕ ಕಲೆಗಳು ಇದಕ್ಕೆ ಹೊರತಲ್ಲ. ಅಂತರ್ಜಾಲದಂತಹ ತಾಂತ್ರಿಕ ಅವಿಷ್ಕಾರಗಳು ವಿಡಿಯೋ ಆಡಿಯೋದಂತಹ ಸೌಲಭ್ಯಗಳು ಯೂ ಟ್ಯೂಬ್‌ಗಳು ಕೇವಲ ರಂಗಕ್ಕೆ ಸೀಮಿತವಾಗಿದ್ದ ಯಕ್ಷಗಾನಕ್ಕೆ ಹೊಸ ಸವಾಲುಗಳನ್ನು ಒಡ್ಡುತ್ತಿವೆ. ಉತ್ಕೃಷ್ಟ ವಾದದ್ದಕ್ಕೆ ಹೆಚ್ಚಿನ ಅವಕಾಶಗಳು ಲಭಿಸಿದರೆ ಸಾಮರ್ಥ್ಯವಿಲ್ಲದ ಅಸಂಗತವಾದವು ಗಳು ಕಾಲಗರ್ಭಕ್ಕೆ ಸೇರಿಹೋಗುವ ಸಾಧ್ಯತೆಗಳಿವೆ. ಈ ಕಾರಣ ಇನ್ನೂ ಮುಂದಿನ ಐವತ್ತು ವರ್ಷಗಳಲ್ಲಿ ಯಕ್ಷಗಾನ ಯಾವ ಯಾವ ಬದಲಾವಣೆಗೆ ತೆರೆದುಕೊಳ್ಳಲಿದೆ ಎಂಬುದು ಕುತೂಹಲದ ಸಂಗತಿ.

ಯಕ್ಷಗಾನದಲ್ಲಿ ಏಕಪಾತ್ರ ಯಕ್ಷಗಾನದ ಕಲ್ಪನೆ. ಜಿ.ಆರ್.ಪಾಂಡೇಶ್ವರರ 'ಮಾರಾವತಾರ' ಉದ್ಯಾವರ ಮಾಧವಾಚಾರ್ಯರ 'ಪಾಂಚಾಲಿ', ಸಂಜೀವ ಸುವರ್ಣರ 'ಪಂಚವಟಿ' ಮುಂತಾದ ಏಕವ್ಯಕ್ತಿ ಯಕ್ಷಗಾನ ಪ್ರದರ್ಶನಗಳಲ್ಲಿಯೇ ಕಂಡವು. ಸಂಜೀವ ಸುವರ್ಣರೂ ತಮ್ಮ 'ಪಂಚವಟಿ'ಯಲ್ಲಿ ಪಂಚವಟಿ ಪ್ರಸಂಗದ ಪದ್ಯಗಳನ್ನೇ ಆಧರಿಸಿ ಮಾಯಾಮೃಗ, ಸೀತೆ ರಾಮ ಎಲ್ಲವನ್ನೂ ಒಂದೇ ವೇಷದಲ್ಲಿ ಅಭಿನಯಿಸಿದ್ದಾರೆ. ಈ ಪ್ರಕಾರ ಹೆಚ್ಚು ಪ್ರಾಚುರ್ಯಗೊಂಡಿದ್ದು ಈ ಶತಮಾನದ ಮೊದಲ ದಶಕದಲ್ಲಿ. ಇಪ್ಪತ್ತೊಂದನೇ ಶತಮಾನದ ಅರುಣೋದಯದ ಸುಪ್ರಭಾತದ ಉದಯರಾಗವಾಗಿ ಬಂದದ್ದು ಡಾ.ಆರ್. ಗಣೇಶರ 'ಭಾಮಿನಿ' ಇವರ ಏಕವ್ಯಕ್ತಿ ಯಕ್ಷಗಾನದ ಪ್ರದರ್ಶನಗಳು ಸಾವಿರದ ಇನ್ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡು ಯಕ್ಷಗಾನದ ನಾಟ್ಯ ನಿರೂಪಣೆಯಲ್ಲಿ ಹೊಸ ಭಾಷ್ಯವನ್ನು ಬರೆಯುವಂತಾಯಿತು. ಇದರ ಪ್ರದರ್ಶನಗಳ ಮೂಲಕ ಈ ರಂಗಕ್ಕೆ ಅನೇಕ ಹೊಸ ಪ್ರೇಕ್ಷಕರು ಬರುವಂತಾಯಿತು. ಡಾ.ಆರ್.ಗಣೇಶ್ ಅವರ ಈ ರಂಗ ಪ್ರಯೋಗ ಇಪ್ಪತ್ತೊಂದನೇ ಶತಮಾನದಲ್ಲಿ ಮೂಡಿಬಂದ ಮಹತ್ತರ ಕೊಡುಗೆಯಾಗಿದೆ.

■

ಏಕವ್ಯಕ್ತಿಯ ಶತನುಡಿಯ ಸಹಸ್ರಕಿರಣ

ಸದಾ ಓದಿನಲ್ಲಿ ಮುಳುಗಿರುವ ಬಹುಶ್ರುತರಾದ ಡಾ.ಆರ್. ಗಣೇಶ್ ಅವರ ಹೆಸರಿನ ಜೊತೆಯಲ್ಲಿ 'ಶತಾವಧಾನಿ' ಎಂಬ ವಿಶೇಷಣ ಅಂಟಿಕೊಂಡಿದೆ. ಇವರು ಕರ್ನಾಟಕಕ್ಕೆ ಮಾತ್ರವಲ್ಲ ಹೊರ ರಾಜ್ಯಗಳಲ್ಲೂ ಶತಾವಧಾನಿಗಳೆಂದೇ ಖ್ಯಾತರು. ಐವತ್ತರ ಹರೆಯದ (4–12–62) ಗಣೇಶ್‌ರ ಪಾಂಡಿತ್ಯ ಮತ್ತು ಚಿಂತನ ಕ್ರಮ ಅಸಾಧಾರಣವಾದುದು. ವೇದ–ವೇದಾಂತ, ಉಪನಿಷತ್, ಭಗವದ್ಗೀತೆ, ಅಷ್ಟಾದಶ ಪುರಾಣ, ಬೌದ್ಧ ಧರ್ಮ, ಜೈನಧರ್ಮ, ಭರತನ ನಾಟ್ಯ ಶಾಸ್ತ್ರ, ಭಾರತೀಯ ಕಾವ್ಯ ಮೀಮಾಂಸೆ, ಪಾಶ್ಚಾತ್ಯ ಕಾವ್ಯ ಮೀಮಾಂಸೆ, ಸಂಸ್ಕೃತ, ಕನ್ನಡ, ತೆಲಗು, ತಮಿಳು ಮುಂತಾದ ಭಾರತೀಯ ಸಾಹಿತ್ಯ, ಆಂಗ್ಲ ಸಾಹಿತ್ಯ, ದೇಶೀಯ ರಂಗಪದ್ಧತಿ, ಶಂಕರ ಸಿದ್ಧಾಂತ, ಅಲಂಕಾರ ಶಾಸ್ತ್ರ, ಮೆಟಲರ್ಜಿಯೇ ಮುಂತಾದ ಇಂಜಿನಿಯರಿಂಗ್‌ಗೆ ಸಂಬಂಧಿಸಿದ ವಿಚಾರ, ಆಯುರ್ವೇದ ವೈದ್ಯಪದ್ಧತಿ, ಮನಃಶಾಸ್ತ್ರೀಯ ವಿಚಾರಗಳು ಹೀಗೆ ಒಂದೇ ಎರಡೇ ಎಲ್ಲದರ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಶಕ್ತಿ ಹೊಂದಿದವರು. ಪ್ರೌಢವಾದ ಸಂಗೀತ ಜ್ಞಾನ, ನಾಟ್ಯ ಕಲೆಯ ಆಳವಾದ ತಿಳಿವು, ಕುಳಿತಲ್ಲೇ ಕಾವ್ಯ ಕಟ್ಟುವ ಪ್ರತಿಭೆ, ಕಾವ್ಯದ ಅಂತರ್ಯವನ್ನು ಅರ್ಥೈಸಿಕೊಳ್ಳುವ ಅರಿವು, ಅಷ್ಟಾವಧಾನ, ಶತಾವಧಾನಗಳಲ್ಲಿ ಮಿಂಚಬಲ್ಲ ಕ್ಷಮತೆ ಇವೆಲ್ಲ ಜನತೆ ಇವರಲ್ಲಿ ಕಂಡುಕೊಂಡ ವಿಶೇಷ ಶಕ್ತಿಗಳು. ಇದಕ್ಕೆಲ್ಲ ಗರಿ ಮೂಡಿದಂತೆ ಈ ಇಪ್ಪತ್ತೊಂದನೆಯ ಶತಮಾನದಲ್ಲಿ ರಾಜ್ಯದ ಜನತೆ ಇವರನ್ನು ಗುರುತಿಸಿ ಆದರಿಸುತ್ತಿರುವುದು 'ಏಕವ್ಯಕ್ತಿ ಯಕ್ಷಗಾನ'ದ ಪ್ರವರ್ತಕರೆಂದು.

ಇವರ ತಾಯಿ ಅಲವೇಲಮ್ಮ(ನಂದಾ) ಸಂಗೀತದಲ್ಲಿ ಅಪಾರ ಜ್ಞಾನ ಉಳ್ಳವರು. ಗಣೇಶರು ಮೂರನೇ ವಯಸ್ಸಿನಲ್ಲಿ ರಾಗದ ಹೆಸರುಗಳನ್ನು ಹೇಳಿ ರಾಗಗಳನ್ನು ಪರಿಚಯಿಸುತ್ತಿದ್ದರಂತೆ. ತಾಯಿಯ ಮನೆತನದವರು ಕೂಡ ಸಾಹಿತ್ಯ ಸಂಗೀತಕ್ಕೆ ಹೆಸರಾದವರು. ಇವರ ತಂದೆ ಶಂಕರನಾರಾಯಣನ್ ಪಂಡಿತ ಪರಂಪರೆಯವರು. ಕಲಿಕೆಯಲ್ಲಿ ಪರಿಶ್ರಮ, ಶಿಸ್ತು, ಓದಿನಲ್ಲಿ ಶ್ರದ್ಧೆ, ಇವೆಲ್ಲ ತಂದೆಯ ಬಳುವಳಿ. ಎಳೆಯ ಬಾಲಕನ ಹೃದಯಕ್ಕೆ ತಾಯಿಯ ಮಮತೆಯ ಧಾರೆಯೊಂದಿಗೆ ಸಂಗೀತ, ಸಾಹಿತ್ಯ ಇಳಿದು ಬಂದರೆ ಅದೇ ಬಾಲಕನ ಬುದ್ಧಿಯ ಧೀಮಂತಿಕೆ ಹೆಚ್ಚಲು ತಂದೆಯ ಬಿಗು ನಿಲುವು, ಎಲ್ಲೂ ಕ್ರಮ ಮುರಿಯದ ಶಿಸ್ತು, ಬೆಂಗಾವಲಾದ ಮಾರ್ಗದರ್ಶನ ಕಾರಣವಾದವು. ಬಾಲ್ಯದಿಂದಲೂ ಪಾರಂಪರಿಕ ಓದು ಆಸಕ್ತಿಯ ಕ್ಷೇತ್ರವಾದರೂ ಇಂಜಿನಿಯರಿಂಗ್‌ನಲ್ಲಿ ಎಂ.ಎಸ್. ಪದವಿಯ ಉನ್ನತ ಶಿಕ್ಷಣ ಪಡೆದರು. ಎಂ.ಎಸ್. ರಾಮಯ್ಯ ಇಂಜಿನಿಯರಿಂಗ್ ಆರ್.ವಿ.ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ 5 ವರ್ಷ ಸೇವೆ ಸಲ್ಲಿಸಿದರು. ಆರ್.ಗಣೇಶ್ ಅವರು ಪದವಿ ಪಡೆದದ್ದು ವಿಜ್ಞಾನದಲ್ಲಾದರೂ ಅಪಾರ ವಿದ್ವತ್ತನ್ನು ಗಳಿಸಿದ್ದು ಪಾರಂಪರಿಕ ಶಾಸ್ತ್ರದಲ್ಲಿ. ಹಂಪಿ ವಿಶ್ವವಿದ್ಯಾಲಯದಿಂದ 'ಕನ್ನಡದಲ್ಲಿ ಅವಧಾನಕಲೆ' ಗೆ ಡಿ.ಲಿಟ್. ಪದವಿ ಪಡೆದವರು. ಅವರ ಆಸಕ್ತಿಯ ಕ್ಷೇತ್ರ ಅಲಂಕಾರ ಶಾಸ್ತ್ರ , ಸಂಗೀತ ಮತ್ತು ನಾಟ್ಯ. ಅವರ ಓದಿನ ಆಳ ಅಗಲಗಳನ್ನು ಹೇಳುವುದು ಸಾಧ್ಯವಿಲ್ಲ. ಜ್ಞಾನಪೀಪಾಸುವಂತೆ ಕೈಗೆ ಸಿಕ್ಕಿದ್ದನ್ನೆಲ್ಲ ಓದುವುದು, ಅರಗಿಸಿಕೊಳ್ಳುವುದು ಅವರ ಪ್ರವೃತ್ತಿ. ಹೀಗಾಗಿಯೇ ವಿದ್ಯೆಯ ಅಧಿಪತಿಯಾದ ಗಣೇಶನ ಹೆಸರನ್ನು ಅವರು ಸಾರ್ಥಕಗೊಳಿಸಿದರು. ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ ಹಾಗೂ ಭಾರತೀಯ ವಿದ್ಯಾಭವನದಲ್ಲಿ ಕೂಡ ಪ್ರಾಚಾರ್ಯರಾಗಿ ಮಾನ್ಯರಾದವರು.

ಆರ್.ಗಣೇಶ್ ಅವರು ಮೂಲತಃ ಕೋಲಾರದ ದೇವರಾಯನ ಸಮುದ್ರದ ಅಪ್ಪಗ್ರಾಮಕ್ಕೆ ಸೇರಿದವರು. ಪ್ರಾಥಮಿಕ ಓದು ಕೋಲಾರ, ಗೌರೀ ಬಿದನೂರು, ಆಂಧ್ರದ ಹಳ್ಳಿಗಾಡಿನಲ್ಲಾದುದು. ಪ್ರೌಢ ವ್ಯಾಸಂಗ ನಡೆದದ್ದು ಬೆಂಗಳೂರು ನಗರದಲ್ಲಿ. ಅವರ ಮನೆ ಮಾತು ತಮಿಳು. ಕೋಲಾರದ ಸುತ್ತಮುತ್ತಲೇ ಬಾಲ್ಯ ಕಳೆದದ್ದರಿಂದ ಪರಿಸರದ ಭಾಷೆ ತೆಲಗು, ಅವರ ಓದಿನ ವಿದ್ಯಾಭ್ಯಾಸದ ಭಾಷೆ ಕನ್ನಡ, ಅವರು ಪರಿಣತಿ ಪಡೆದುಕೊಂಡ ಭಾಷೆ ಸಂಸ್ಕೃತ, ಅವರಿಗೆ ಜ್ಞಾನದ ಬಾಗಿಲನ್ನು ತೆರೆದ ಭಾಷೆ ಇಂಗ್ಲಿಷ್, ಭಾರತೀಯ ಜ್ಞಾನಮೂಲದ ತಿಳಿವು ನೀಡಿದ ಭಾಷೆ ಪ್ರಾಕೃತ, ಪಾಲಿ ಮುಂತಾದವು. ಹೀಗೆ ಎಂಟು ಭಾಷೆಗಳಲ್ಲಿ ಪರಿಣತಿ. ವೈರುಧ್ಯವೇ ಅವರ ಬಾಳಿನ ವಿಶೇಷತೆ. ಬೆಂಗಳೂರಿನ ಇಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ಅವರು ಮೊದಲಿಗೆ ಖ್ಯಾತರಾದದ್ದು ವಿಜ್ಞಾನದ ವಿಷಯವನ್ನು ಅತ್ಯುತ್ತಮವಾಗಿ 'ಉಚಿತ'ವಾಗಿ ಬೋಧಿಸುತ್ತಾರೆ ಎಂದು. ಬೆಂಗಳೂರಿನ ಜಯನಗರದಲ್ಲಿ ನಡೆಯುತ್ತಿದ್ದ 'ಉಚಿತ ಟ್ಯೂಷನ್'ಗೆ ಬೇರೆ ಬೇರೆ ಭಾಗದ ವಿದ್ಯಾರ್ಥಿಗಳು ಬರುತ್ತಿದ್ದರು. ನಾವೆಲ್ಲರೂ

ಕೂಡ ಅವರ ಹೆಸರನ್ನು ಕೇಳಿದ್ದು ಈ ಮೂಲಕವೇ. ಅವರ ಮೆಟಲರ್ಜಿಯಲ್ಲಿನ ಹೆಚ್ಚಿನ ಜ್ಞಾನವನ್ನು ಇಂದಿಗೂ ಹಲವು ಕಂಪನಿಗಳವರು ಪಡೆದುಕೊಳ್ಳುತ್ತಿದ್ದಾರೆ.

ಮುಂದೆ ಅವರು ಬೆಂಗಳೂರಿನವರಿಗೆ ಹಾಗೂ ಸುತ್ತಮುತ್ತಲಿನವರಿಗೆ ಚಿರಪರಿಚಿತರಾದದ್ದು ತಮ್ಮ ಅಷ್ಟಾವಧಾನದ ಪ್ರತಿಭೆಯ ಮೂಲಕ. ಆಂಧ್ರದಲ್ಲಿ ಈ ಕಲೆ ಪ್ರಸಿದ್ಧಗೊಂಡ ಪ್ರಕಾರ. ಆದರೆ ಕರ್ನಾಟಕದಲ್ಲಿ ಇವರ ಭಾಗವಹಿಸುವಿಕೆಯಿಂದ ಮನೆಮಾತಾಯಿತು. ಮುಂದೆ ಶತಾವಧಾನ ನಡೆಸಿ 'ಶತಾವಧಾನಿ ಆರ್.ಗಣೇಶ್' ಎಂದೇ ಖ್ಯಾತಿ ಪಡೆದರು.

ಕಳೆದ 20–25 ವರ್ಷಗಳಲ್ಲಿ ಅವರು ನಡೆಸಿಕೊಟ್ಟ ಉಪನ್ಯಾಸ ಕಾರ್ಯಕ್ರಮಗಳು ಲೆಕ್ಕವಿಲ್ಲದಷ್ಟು, ವಿಷಯದ ಮೇಲಿನ ಆಳವಾದ ಜ್ಞಾನ, ಪ್ರಖರ ಚಿಂತನಾ ಕ್ರಮ, ವಿಷಯಕ್ಕೆ ಅಮೂಲ್ಯವಾಗುವ ಇತರೆ ವಿಚಾರಗಳ ಸಮರ್ಪಕವಾದ ಮಂಡನೆ, ಇವೆಲ್ಲವನ್ನೂ ಸಂತುಲನಗೊಳಿಸಿಕೊಳ್ಳುವ ಚಾತುರ್ಯ ಇವರ ಭಾಷಣದ ಹೆಚ್ಚುಗಾರಿಕೆ. ಬೆಂಗಳೂರಿಗರಿಗೆ ಮಾತ್ರವಲ್ಲದೇ ರಾಜ್ಯದ ಜನತೆಗೆಲ್ಲ ಇವರ ವಾಗ್ಮಿತನ ಚಿರಪರಿಚಯ. ಇಪ್ಪತ್ತೊಂದನೇ ಶತಮಾನದಲ್ಲಿ ಶತಾವಧಾನಿ ಡಾ.ಆರ್.ಗಣೇಶ್ ಅವರು ನಾಡಿಗೆ ಕೊಟ್ಟ ಅನರ್ಘ್ಯ ಕಾಣಿಕೆಯೆಂದರೆ ಅವರ 'ಏಕವ್ಯಕ್ತಿ ಯಕ್ಷಗಾನ'. ಈ ಶತಮಾನದ ಆದಿಯಲ್ಲಿ ಯಕ್ಷಗಾನ ಪ್ರೇಮಿಗಳ ಎದೆಯ ಕದವನ್ನು ತಟ್ಟಿ ಒಳ ಬಂದವಳು ಅವರ 'ಭಾಮಿನಿ'. ಅಲ್ಲಿಂದ ಸತತವಾಗಿ 1200ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡ ಈ ಕಲಾ ಪ್ರಕಾರ ಯಕ್ಷಗಾನ ಕಲೆಯ ಆಂತರ್ಯವನ್ನು ಶ್ರೀಮಂತಗೊಳಿಸಿದೆ. ಕನ್ನಡಿಗರ ಹೆಮ್ಮೆಯ ಕಲೆಗೆ ಶೃಂಗಾರದ ಕಿರೀಟವನ್ನು ತೊಡಿಸಿದರು. ಈ ಕಾರಣ ಯಕ್ಷಗಾನ ರಂಗದ ಕುರಿತು ಅವರು ಆಡುವ ಮಾತುಗಳು ಮೌಲಿಕವಾಗಿರುತ್ತವೆ. ಅದನ್ನು ಯಕ್ಷಗಾನ ಆಸಕ್ತರ ಅವಗಾಹನೆಗಾಗಿ ಇಲ್ಲಿ ದಾಖಲಿಸಲಾಗಿದೆ. ಯಕ್ಷಗಾನ ರಂಗದಲ್ಲಿ ಪ್ರತಿಷ್ಠಿತವಾದ 'ಶಂಭು ಹೆಗಡೆ ಪ್ರಶಸ್ತಿ'ಯನ್ನು ಗಳಿಸಿರುವ ಡಾ.ಗಣೇಶ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿಗಳು ಬಂದಿರುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಸಂಸ್ಕೃತ ಭಾಷೆಗೆ ಸಲ್ಲಿಸಿರುವ ಸೇವೆಗೆ ರಾಷ್ಟ್ರಪತಿ ಪುರಸ್ಕಾರವನ್ನು ಕೂಡ ಇವರು ಗಳಿಸಿದ್ದಾರೆ. ಹೀಗೆ ಬಹುಮುಖ ವ್ಯಕ್ತಿತ್ವದ ಬಹುಶ್ರುತ ಜ್ಞಾನದ, ಬಹುಪಾಂಡಿತ್ಯದ, ಬಹುಕಲಾಕೋವಿದರಾಗಿರುವ ಶತಾವಧಾನಿಗಳೊಂದಿಗಿನ ಮಾತುಕತೆಯಲ್ಲಿ ಹೊಸ ಅರಿವಿನ ಸಹಸ್ರ ಕಿರಣಗಳು ಹೊರಸೂಸುತ್ತವೆ. ಅವರೊಡನೆಯ ಮಾತುಕತೆ :

◆ **ತಾವು ಯಕ್ಷಗಾನ ವಲಯದಲ್ಲಿ ಹುಟ್ಟಿ ಬೆಳೆದವರಲ್ಲ ಆದರೆ ಕ್ರಮೇಣ ಈ ರಂಗಭೂಮಿಗೆ ಪರಮಾಪ್ತರಾದಿರಿ– ಯಕ್ಷಗಾನದಿಂದ ಹೇಗೆ ಆಕರ್ಷಿತರಾದಿರಿ?**

□ ಬಾಲ್ಯದಿಂದಲೂ ನಾಟ್ಯಶಾಸ್ತ್ರದ ಕುರಿತಾದ ಆಸಕ್ತಿ ಹೊಂದಿದ್ದು ನನಗೆ ಕ್ರಮೇಣ ಭಾರತದ ಸಾಂಪ್ರದಾಯಿಕ ರಂಗಭೂಮಿಯ ಕಡೆಗೆ ಒಲವು ಬೆಳೆಯಿತು.

ಡಾ.ವಿ.ರಾಘವನ್ ಮತ್ತು ಡಾ.ಪದ್ಮಾ ಸುಬ್ರಹ್ಮಣ್ಯಂ ಅವರ ಚಿಂತನ, ಪ್ರದರ್ಶನಗಳಿಂದಾಗಿ ಹೆಚ್ಚಿನ ಬೆಳಕನ್ನು ಕಂಡುಕೊಂಡೆ. ಅವಧಾನ ಕಾರ್ಯಕ್ರಮಗಳ ಮೂಲಕ ದೇಶದಾದ್ಯಂತ ಸಂಚರಿಸುತ್ತಿದ್ದ ನನಗೆ ದಕ್ಷಿಣಕನ್ನಡ ಜಿಲ್ಲೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಾಯಿತು. ಅಲ್ಲಿ ಅನೇಕ ಜನ ವಿದ್ವಾಂಸರ, ಪ್ರಚ್ಛಕರ ಪರಿಚಯವಾಗಿ ಸ್ನೇಹ ಬೆಳೆಯಿತು. 1991ರ ಸುಮಾರಿನಲ್ಲಿ ಡಾ. ಜಿ.ಎಸ್.ಹೆಗಡೆಯವರ ಪ್ರೌಢ ಪ್ರಬಂಧ 'ಯಕ್ಷಗಾನ ಮತ್ತು ಅದರ ಸಂಸ್ಕೃತ ಮೂಲಗಳು' ನನ್ನ ಕುತೂಹಲವನ್ನು ಕೆರಳಿಸಿತು. ಡಾ.ಎಂ.ಪ್ರಭಾಕರ ಜೋಶಿಯವರ ಪುಸ್ತಕಗಳು, ಡಾ.ಅಮೃತ ಸೋಮೇಶ್ವರರ ಪ್ರಬಂಧಗಳು, ಎಂ.ಜಿ.ಎಂ. ಕಾಲೇಜಿನ ಸಂಶೋಧನಾ ಕೇಂದ್ರದ ಪ್ರಕಟಣೆಗಳು, ಅನೇಕ ಹಿರಿಯರ ಅಭಿನಂದನ ಗ್ರಂಥಗಳು ನನ್ನ ಓದಿಗೆ ಆಹಾರವಾದವು. ಯಕ್ಷಗಾನದ ಕುರಿತು ನನ್ನ ಜ್ಞಾನ ಕ್ಷಿತಿಜ ವಿಸ್ತರಿಸಿತು. ಅರ್ಥಧಾರಿಗಳ, ಯಕ್ಷಗಾನ ಕಲಾವಿದರ ಪರಿಚಯವಾಯಿತು. ಬೆಂಗಳೂರಿನಲ್ಲಿಯೂ ಅನೇಕ ಯಕ್ಷಗಾನ ಪ್ರದರ್ಶನಗಳನ್ನು ನೋಡಿದೆ. ಹೆಚ್ಚಾಗಿ ನನ್ನ ಅವಧಾನ ಕಾರ್ಯಕ್ರಮದ ನಂತರ ನಡೆಯುತ್ತಿದ್ದ ತಾಳಮದ್ದಳೆ ಇಲ್ಲಿ ಯಕ್ಷಗಾನ ಕಾರ್ಯಕ್ರಮಗಳೂ ನನ್ನನ್ನು ಆಕರ್ಷಿಸಿದವು. ನನ್ನ ಅವಧಾನ ಕಾರ್ಯಕ್ರಮದ ಮೂಲಕವೇ ಯಕ್ಷಗಾನದ ಬೆಳಕಿನ ಕಿಂಡಿ ನನ್ನ ಪಾಲಿಗೆ ತೆರೆಯಿತು. ಡಾ.ಜಿ.ಎಸ್.ಹೆಗಡೆ, ಡಾ.ಎಂ.ಪ್ರಭಾಕರ ಜೋಶಿ, ಡಾ.ರಾಘವ ನಂಬಿಯಾರ್, ಕೆರೆಮನೆ ಮಹಾಬಲ ಹೆಗಡೆ, ಡಾ.ಪಾದೆಕಲ್ಲು ವಿಷ್ಣು ಭಟ್, ಹೊಸ್ತೋಟ ಮಂಜುನಾಥ ಭಾಗವತ, ಚಂದ್ರಶೇಖರ ದಾಮ್ಲೆ ಮುಂತಾದವರೆಲ್ಲ ಯಕ್ಷಗಾನದ ಕುರಿತು ಚರ್ಚಿಸುವಾಗ ಇನ್ನಷ್ಟು ವಿಚಾರಗಳು ತಿಳಿದವು. ಯಕ್ಷಗಾನದಲ್ಲಿ ಶಾಸ್ತ್ರೀಯ ಅಂಶಗಳು ಇರುವುದರ ಕುರಿತಾದ ಚಿತ್ರಣ ಇನ್ನಷ್ಟು ಮೂಡ ತೊಡಗಿತು. ಇದಕ್ಕಾಗಿಯೇ ಇನ್ನೊಮ್ಮೆ ನಾಟ್ಯಶಾಸ್ತ್ರ ಪರಂಪರೆಯ ಗಂಭೀರ ಅಧ್ಯಯನವನ್ನು ಕೈಗೊಂಡೆ. ಆಗ ಯಕ್ಷಗಾನದ ಆಳ ಅಗಲಗಳು ನಿಚ್ಚಳವಾಗಿ ಕಂಡವು. 'ಕಾವ್ಯಚಿತ್ರ–ಯಕ್ಷನೃತ್ಯ' ಕಾರ್ಯಕ್ರಮಗಳ ಸಂದರ್ಭದಲ್ಲಿ ಯಕ್ಷಗಾನದ ಪ್ರತಿಭಾನ್ವಿತ ಕಲಾವಿದರಾದ ಕೊಂಡದಕುಳಿ, ಹಡಿನಬಾಳ, ಕೃಷ್ಣ ಯಾಜಿ, ಹಳ್ಳಾಡಿ, ಚಪ್ಪರಮನೆ ಮುಂತಾದವರ ಒಡನಾಟ ದೊರೆಯಿತು. ಹಾಗೆಯೇ ಹಿರಿಯ ಕಲಾವಿದರಾದ ಕೆರೆಮನೆ ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೊಳ್ಯೂರು ರಾಮಚಂದ್ರ ರಾವ್, ಪಾತಾಳ ವೆಂಕಟರಮಣ ಭಟ್ ಮುಂತಾದವರ ಪರಿಚಯವಾಯಿತು. ಮಕ್ಕಳ ಮೇಳದ ಶ್ರೀಧರ ಹಂದೆಯವರ ಸ್ನೇಹ, ಬೆಂಗಳೂರಿನ 'ಯಕ್ಷದೇಗುಲ'ದವರ ಬಳಕೆ, ಉಡುಪಿಯ 'ಯಕ್ಷರಂಗ'ದ ಹತ್ತಿರದ ನೋಟ ಇವೆಲ್ಲ ನನ್ನನ್ನು ಯಕ್ಷಗಾನಕ್ಕೆ ಇನ್ನಷ್ಟು ಹತ್ತಿರ ಬರುವಂತೆ ಮಾಡಿತು. ಈ ಮೂಲಕ ತೆಂಕು, ಬಡಗು, ಬಡಬಡಗು ತಿಟ್ಟುಗಳ ಇತಿಮಿತಿಗಳು, ಗುಣದೋಷಗಳು ಸ್ಫುಟವಾದವು. ನಮ್ಮ ನಾಡಿನ ಈ ಕಲೆಯ ಪಾರಂಪರಿಕ ಶ್ರೀಮಂತಿಕೆ ಅರಿವಾಗಿ

ಇತರ ಸಂವಾದಿ ಕಲೆಗಳೊಂದಿಗೆ ಹೋಲಿಸಿ ನೋಡಿದಾಗ ಇದರ ಮೂಲ ಸೌಂದರ್ಯವನ್ನೂ ಎಲ್ಲರಿಗೂ ತೋರ್ಪಡಿಸಬೇಕೆಂಬ ಹೆಬ್ಬಯಕೆಯ ಫಲವೇ 'ಏಕವ್ಯಕ್ತಿ ಯಕ್ಷಗಾನ'ದ ರಸೋದ್ಯಮ. ನಾನು ಹೊರಗಿನವನಾದ್ದರಿಂದ ಯಾವೊಂದೂ ಪೂರ್ವಾಗ್ರಹವಿಲ್ಲದೇ ಯಕ್ಷಗಾನವನ್ನು ನೋಡುವಂತಾಯಿತು.

◆ **ತಾವು ಶಾಸ್ತ್ರೀಯ ಕಲೆಗಳ ಬಗ್ಗೆ ತಮ್ಮದೇ ಆದ ನಿರ್ದಿಷ್ಟ ಧೋರಣೆ ಉಳ್ಳವರು. ಯಕ್ಷಗಾನದ ಸ್ವರೂಪದ ಕುರಿತು ಚರ್ಚೆಯ ಸಂದರ್ಭದಲ್ಲಿ ಇದು ಶಾಸ್ತ್ರೀಯ ಮತ್ತು ಜಾನಪದ ಎಂಬ ಎರಡು ಪಂಥವೇ ಇದೆ ! ತಮ್ಮ ನಿಲುವೇನು?**

□ ಯಕ್ಷಗಾನ ವಲಯದಲ್ಲಿ ಈ ಬಗ್ಗೆ ಬಹಳಷ್ಟು ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಶ್ರೀ ಕುಕ್ಕಿಲ ಕೃಷ್ಣ ಭಟ್, ಪ್ರೊ.ಎಂ.ರಾಜಗೋಪಾಲಾಚಾರ್ಯ, ಡಾ.ಜಿ.ಎಸ್.ಹೆಗಡೆಯವರಂತಹ ವಿದ್ವಾಂಸರ 'ಯಕ್ಷಗಾನ ಶಾಸ್ತ್ರೀಯ' ಎಂಬ ವಾದವನ್ನು ಹೊರಗಿನವರಾದ ಡಾ.ರಾ.ಸತ್ಯನಾರಾಯಣ, ಡಾ.ಪದ್ಮಾ ಸುಬ್ರಹ್ಮಣ್ಯಂ, ಡಾ.ಆರ್.ರಾಘವನ್ ಮುಂತಾದವರು ಸಮರ್ಥಿಸಿದ್ದಾರೆ. ಆದರೆ ಡಾ.ಶಿವರಾಮ ಕಾರಂತರು ಸೇರಿದಂತೆ ಡಾ.ಬಿ.ಎ.ವಿವೇಕ ರೈ, ಡಾ.ಪುರುಷೋತ್ತಮ ಬಿಳಿಮಲೆ, ಡಾ.ಚಂದ್ರಶೇಖರ ಕಂಬಾರ್, ಶ್ರೀ ದೇವು ಹನೇಹಳ್ಳಿ ಮುಂತಾದ ಚಿಂತಕರು ಇದನ್ನು 'ಜಾನಪದಕಲೆ' ಎಂಬುದಾಗಿ ಹೇಳುತ್ತಾರೆ. ಕೆಲಮಟ್ಟಿಗೆ ಮಧ್ಯಮ ಮಾರ್ಗವೆಂಬಂತೆ ಶ್ರೀ ಮುಳಿಯ ಮಹಾಬಲ ಭಟ್, ಶ್ರೀ ಅಮೃತ ಸೋಮೇಶ್ವರ, ಡಾ.ಎಂ.ಪ್ರಭಾಕರ ಜೋಶಿ, ಡಾ.ರಾಘವ ನಂಬಿಯಾರ್, ಶ್ರೀ ಶಂಭು ಹೆಗಡೆ ಮುಂತಾದವರು 'ಶಿಷ್ಟಜಾನಪದ'ವೆಂಬಂತೆ ಅಭಿಪ್ರಾಯಪಡುತ್ತಾರೆ.

ಈ ಸಂದರ್ಭದಲ್ಲಿ ಯಕ್ಷಗಾನ ಶಾಸ್ತ್ರೀಯವೋ ಜಾನಪದವೋ ಎಂಬ ಚರ್ಚೆಗೆ ಹಿನ್ನೆಲೆಯಾದ ಮಾರ್ಗ–ದೇಶಿ ವಿವಾದದ ಬಗ್ಗೆ ಕೂಡ ಪ್ರಸ್ತಾಪಿಸಬೇಕಾಗುತ್ತದೆ. ಈ ವಿಷಯದ ವ್ಯಾಪ್ತಿ ಬಹುಮುಖವಾದದ್ದು ಮತ್ತು ಸಂಕೀರ್ಣವಾದದ್ದು. ಪಾಶ್ಚಾತ್ಯರ 'ಕ್ಲಾಸಿಕಲ್' ಮತ್ತು 'ಫೋಕ್' ಪದಗಳಿಗೆ ಸಂವಾದಿಯಾಗಿ ಮಾರ್ಗ–ದೇಶಿ ಪರಿಕಲ್ಪನೆ ಬಂದದ್ದೇ ಎಲ್ಲವೂ ಗೊಂದಲಗಳ ಬೀಡಾಗಲು ಕಾರಣ. ಶಾಸ್ತ್ರ ಎಂದರೆ ಶಿಸ್ತು ಅಥವಾ ವ್ಯವಸ್ಥೆಗಳನ್ನೊಳಗೊಂಡ ಹೊಸ ಕಾಣ್ಕೆಯಾಗಿರುತ್ತದೆ. ಶಾಸ್ತ್ರವು ಸಾಮಾನ್ಯವಾಗಿ ಲಿಖಿತ ನಿಯಮವಾಗಿ, ಅಲಿಖಿತ ಸಂಪ್ರದಾಯವಾಗಿ, ಸಾಮುದಾಯಿಕ ಪ್ರಜ್ಞೆಯಾಗಿ ಹರಳುಗಟ್ಟುತ್ತದೆ. ಜಾನಪದವಾದರೋ ಲಿಖಿತ ನಿಯಮ ರೂಪಕ್ಕೆ ಒಳಪಡದಿದ್ದರೂ ಅಲಿಖಿತ ಸಂಪ್ರದಾಯ ಮತ್ತು ಸಾಮುದಾಯಿಕ ಪ್ರಜ್ಞೆಗಳ ಮೂಲಕವೇ ಮೈದಾಳುತ್ತದೆ. ಮಾರ್ಗ ಎಂಬುದೆಲ್ಲ ಶಾಸ್ತ್ರೀಯ, 'ದೇಶಿ' ಎಂಬುದೆಲ್ಲ

'ಅಶಾಸ್ತ್ರೀಯ' ಎಂಬ ನಿಲುವು ಸರಿಯಲ್ಲ. ನಮ್ಮ ದೇಶದಲ್ಲಿ ಸರಿಸುಮಾರು ಹದಿನೇಳನೇ ಶತಮಾನದ ವರೆಗೆ ಮಾರ್ಗ ಮತ್ತು ದೇಶಿ ಎರಡೂ ಪ್ರಕಾರಗಳ ಕುರಿತಾದ ವಿಚಾರಗಳನ್ನು ಗ್ರಂಥರೂಪದಲ್ಲಿ ನಿಯಮಬದ್ಧವಾಗಿ ಇರಿಸಲಾಗಿದೆ. ದಶರೂಪಕ ಪ್ರಕಾರವು ಮಾರ್ಗದ ರಂಗಕಲಾ ಸಾಹಿತ್ಯವಾದರೆ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಉಪರೂಪಕಗಳು ದೇಶಿ ರಂಗ ಪ್ರಕಾರಗಳಾಗಿವೆ. ಇವೆರಡನ್ನೂ ಅಭಿನವ ಭಾರತಿ, ಶೃಂಗಾರ ಪ್ರಕಾಶ, ಭಾವಪ್ರಕಾಶ, ಕಾವ್ಯಾನು ಶಾಸನ ಮುಂತಾದ ಕೃತಿಗಳಲ್ಲಿ ಲಕ್ಷಣಬದ್ಧವಾಗಿ ನಿರೂಪಿಸಿರುವುದನ್ನು ಕಾಣಬಹುದು. ಈ ಹೊತ್ತು ಜಾನಪದ ಅಥವಾ ದೇಶಿ ವಾದ್ಯಗಳೆಂದು ಕರೆಯಲ್ಪಡುವ ತಮಟೆ, ನಗಾರಿ, ಡೋಲು, ಡಮರು, ಹಲಗೆ ಮುಂತಾ ದವನ್ನು ಪಣವ, ಅನಕ, ಮುರಜಾ, ಢಕ್ಕ, ಢಕ್ಕುಲಿ ಮುಂತಾದ ಹಳೆಯ ಹೆಸರುಗಳಿಂದ ಸಂಗೀತ ರತ್ನಾಕರ, ಮಾನಸೋಲ್ಲಾಸ ಮುಂತಾದ ಗ್ರಂಥಗಳಲ್ಲಿ ಸಲಕ್ಷಣವಾಗಿ ನಿರೂಪಿತವಾಗಿರುವುದನ್ನು ಕಾಣಬಹುದು. ಇದೇ ಬಗೆಯಾದ ದೇಶಿ ಛಂದಸ್ಸಿನ ವಿವರಗಳು, ದೇಶಿನೃತ್ತಕರಣಗಳ ವಿವರಗಳು, ದೇಶಿರಾಗಗಳ ವಿವರಗಳು, ದೇಶಿತಾಳಗಳ ವಿವರಗಳು ಶಾಸ್ತ್ರ ಗ್ರಂಥಗಳಲ್ಲಿ ದಾಖಲಾಗಿವೆ. ಈ ಎಲ್ಲ ಮಾರ್ಗ ಹಾಗೂ ದೇಶಿ ವಿಚಾರಗಳನ್ನು ಹೇಳುವಾಗ ಎಲ್ಲ ಶಾಸ್ತ್ರಕಾರರು ಎರಡೂ ಬಗೆಯನ್ನೂ ಸರಿಸಮಾನ ದೃಷ್ಟಿಯಲ್ಲಿ ನೋಡಿದ್ದಾರೆ. ಹೀಗಿರುವಾಗ ದೇಶಿಯನ್ನು ಅಶಾಸ್ತ್ರೀಯ ಎನ್ನುವುದಾಗಲೀ ಮತ್ತು ಅವು ಶಾಸ್ತ್ರದ ವಿರುದ್ಧ ನಿಂತ ಬಗೆಗಳು ಎನ್ನುವುದಾಗಲೀ ಸರಿಯಲ್ಲ. ಅದೇ ರೀತಿ 'ದೇಶಿ'ಯಲ್ಲಿರುವುದೆಲ್ಲ ಮಾರ್ಗದ್ದೇ ಹೌದು ಅದು ಶಾಸ್ತ್ರೀಯ ಎನ್ನುವ ವಾದವಾಗಲೀ ಸರಿಯಲ್ಲ. ಇವು ಎರಡೂ ಅತಿರೇಕಗಳಾಗುತ್ತವೆ.

'ಮೃಗ್ಯತ ಇತಿ ಮಾರ್ಗ' ಎಂದರೆ ಹುಡುಕಾಟದಿಂದ, ಶೋಧನೆಯಿಂದ ಸೃಷ್ಟಿಗೊಂಡದ್ದು ಮಾರ್ಗ. 'ದೇಶೇ ದೇಶೇ ಪ್ರಸಿದ್ಧೇತಿ ದೇಶೀ' ಎಂದರೆ ಆಯಾ ಪ್ರಾಂತಗಳಲ್ಲಿ ಪ್ರಸಿದ್ಧಿ ಹೊಂದಿರುವುದೇ ದೇಶಿ ಆಗಿರುತ್ತದೆ. ಮಾರ್ಗವು ಪ್ರಾದೇಶಿಕವಾಗಿ ರಂಗ ಅಭಿವ್ಯಕ್ತಿಗೊಂಡಾಗ ದೇಶಿಯಾಗಿ ಮೈ ದಾಳುತ್ತದೆ. ಅದೇ ರೀತಿ ದೇಶಿಯು ಪ್ರಾಂತಾತೀತವಾಗಿ ಶೋಧನೆಯ ಫಲವಾಗಿ ರೂಪುಗೊಂಡಾಗ ಮಾರ್ಗವಾಗಿರುತ್ತದೆ. ಹೀಗೆ ಪರಸ್ಪರ ಚಲನೆಗೊಳ್ಳಲು ಸಾಧ್ಯ. ಹೀಗಿರುವಾಗ ಜಿದ್ದು ಮಾಡಿಕೊಂಡು ಹಗ್ಗಜಗ್ಗಾಟ ನಡೆಯುವುದೇಕೆ? ಪ್ರಾಯೋಗಿಕ ಕಲೆಯಲ್ಲೂ ಇದು ಮಾರ್ಗ ಇದು ದೇಶಿ ಎಂದು ಗೆರೆ ಎಳೆದಂತೆ ವಿಭಾಗ ಮಾಡುವುದು ಕಷ್ಟ. ಬಾಹ್ಯ ಕಾರಣ ದಿಂದ ಸ್ಥೂಲವರ್ಗೀಕರಣ ಮಾಡಿ ಹೇಳುವುದಾದರೆ ಯಕ್ಷಗಾನದ ವೀರಾದ್ಭುತ ನಿರೂಪಣ ಕ್ರಮ ದಶರೂಪಕಗಳಲ್ಲಿಯ ನಾಟಕಕ್ಕಿಂತ ಡಿಮ, ವ್ಯಾಯೋಗ ಮುಂತಾದಲ್ಲಿನ ನಿರೂಪಣ ಕ್ರಮವನ್ನು ಹೆಚ್ಚು ಹೋಲುತ್ತದೆ. ಸಂಸ್ಕೃತ

ದಲ್ಲಿ ಯಕ್ಷಗಾನದ ಶೈಲಿಯನ್ನು ಹೋಲುವ ದೃಶ್ಯ ಕಾವ್ಯ ಪ್ರಬಂಧಗಳು ಸಾಕಷ್ಟಿವೆ.

ಲೋಕದಲ್ಲಿ ಜನಜನಿತವಾಗಿ ನೆಲೆಯೂರಿದೆ ಎಂಬ ಅರ್ಥದಲ್ಲಿ ಯಕ್ಷಗಾನವು ಜಾನಪದ. ಯಕ್ಷಗಾನಗಳ ರಂಗ ವಿಧಾನಕ್ಕೂ ಸಂಸ್ಕೃತ ರೂಪಕ ಪರಂಪರೆಯ ರಂಗವಿಧಾನಕ್ಕೂ ಸಾಮ್ಯವಿದೆ. ಸಂಸ್ಕೃತ ವಾಙ್ಮಯದಲ್ಲಿ ಮಾರ್ಗವೆನ್ನಬಹುದಾದ ದರ್ಶನ ಶಾಸ್ತ್ರಗಳು ಲೌಕಿಕ ಶಾಸ್ತ್ರಗಳು ಇರುವಂತೆಯೇ ದೇಶಿಯ ಎನ್ನಬಹುದಾದ ಪುರಾಣಗಳು, ತಂತ್ರಗಳು ಕಾವ್ಯನಾಟಕಗಳು ಇದ್ದೇ ಇವೆ. ಎಲ್ಲಿಯೂ ಅನಾರೋಗ್ಯಕರ ಸ್ಪರ್ಧೆಯಿಲ್ಲ. ಅನುಚಿತವಾದ ಆಗ್ರಹ ಅಧಿಕ್ಷೇಪಗಳು ಇಲ್ಲ.

ಇಂಥ ಮನೋಧರ್ಮದಿಂದ ಕಂಡಾಗ ಯಕ್ಷಗಾನವೊಂದು ದೇಶಿ ಪಾರಂಪರಿಕ ಕಲೆಯೆಂದು ತಿಳಿಯದಿರದು. ಪ್ರಾದೇಶಿಕ ಭಾಷೆ–ವೇಷ–ಗೀತ ವೈಶಿಷ್ಟ್ಯವಿರುವ ಕಾರಣ ಅಲ್ಲಿಯ ಜನಗಳ ರುಚಿಗೆ ತಕ್ಕಂತೆ ಕಾಲಕಾಲದ ನೇರ್ಪುಗಳನ್ನು ಅಳವಡಿಸಿಕೊಳ್ಳುತ್ತಿರುವ ಕಾರಣ ಇದು ದೇಶಿ. ಇಲ್ಲಿ ಮಾರ್ಗದ ಆಂತರ್ಯವು ಅಭಿವ್ಯಕ್ತವಾಗುವ ಕ್ರಮವೂ ದೇಶಿಯಷ್ಟೇ. ದೇಶಿ ಎಂಬುದು ಕೂಡ ಶಾಸ್ತ್ರಗ್ರಂಥಗಳಲ್ಲಿ ನಿರೂಪಿತಗೊಂಡಿದೆ ಎಂಬುದನ್ನು ನಾವೀಗ ಕಂಡುಕೊಂಡಿದ್ದೇವೆ. ಸಾಮಾನ್ಯವಾಗಿ ಕಲಾವಿದರೂ ಪ್ರೇಕ್ಷಕರೂ ಸಾಕ್ಷಾತ್ ಪ್ರಯೋಗ ನೋಡಿಯೇ ತಮ್ಮ ಕಲೆಯ ನೆಲೆಬೆಲೆಗಳನ್ನು ಕಂಡುಕೊಳ್ಳುತ್ತಿರುವ ಕಾರಣ ಇದು ಪಾರಂಪರಿಕವಾದುದು. ಜೀವಂತವಾದ ಸಂಪ್ರದಾಯಕ್ಕೆ (ಲಿವಿಂಗ್ ಟ್ರ್ಯಾಡಿಶನ್) ಮಾತ್ರ ಇಂಥಹ ಶಕ್ತಿಯುಂಟು. ನಮ್ಮ ಯಕ್ಷಗಾನ ಈ ರೀತಿಯ ಜೀವಂತಿಕೆಯ ಸಂಪ್ರದಾಯವನ್ನು ಸದಾ ಇಟ್ಟುಕೊಂಡಿದೆ.

◆ **ತಾವು ಯಕ್ಷಗಾನದಲ್ಲಿ ಪ್ರಸಂಗಗಳನ್ನು ರಚಿಸಿದ್ದೀರಿ......?**

□ ಹೌದು. ನನ್ನ 'ಕೃಷ್ಣತುಲಾಭಾರ' ಎಂಬ ರಚನೆಯು ಎಲ್ಲ ರೀತಿಯಲ್ಲೂ ಪ್ರಸಂಗ ರಚನೆಯ ಮಾದರಿಯಲ್ಲಿದೆ. ಇದು ಈಗಾಗಲೇ 3–4 ಪ್ರದರ್ಶನಗಳನ್ನು ಕೂಡ ಕಂಡಿದೆ. ಕೊಳಗಿ ಕೇಶವ ಹೆಗಡೆ, ಕೊಂಡದಕುಳಿ ರಾಮಚಂದ್ರ ಹೆಗಡೆ, ಹಳ್ಳಾಡಿ ಜಯರಾಮ ಶೆಟ್ಟಿ, ಮಂಟಪ ಪ್ರಭಾಕರ ಉಪಾಧ್ಯರೇ ಮುಂತಾದವರು ಅದರಲ್ಲಿ ಭಾಗವಹಿಸಿದ್ದಾರೆ. ಈ ಬಗೆಯ ಇನ್ನಷ್ಟು ಪ್ರಸಂಗ ರಚಿಸುವ ಆಸೆಯಿದೆ. ಆದರೆ ಪ್ರದರ್ಶನಕ್ಕೆ ಕಲಾವಿದರ ಲಭ್ಯತೆ, ಅವರ ತರಬೇತಿಗೆ ವ್ಯವಸ್ಥೆ, ಪ್ರದರ್ಶನಕ್ಕೆ ಬೇಕಾದ ತಯಾರಿ ಎಲ್ಲ ಕಷ್ಟ. ಇದಲ್ಲದೇ ಆರು ಏಕವ್ಯಕ್ತಿ ಯಕ್ಷಗಾನ ಪ್ರಸಂಗಗಳು, ಎರಡು ಯುಗಳ ಯಕ್ಷಗಾನ ಪ್ರಸಂಗಗಳು ಬಂದಿವೆ. ಅವುಗಳನ್ನು ನನ್ನ ನಿರ್ದೇಶನದಲ್ಲೇ ಅಸಂಖ್ಯ ಪ್ರದರ್ಶನಗಳನ್ನು ಕಂಡಿವೆ. ಭಾಮಿನಿ, ಶ್ರೀಕೃಷ್ಣಾರ್ಪಣ, ಜಾನಕೀ ಜೀವನ,

ವೇಣು ವಿಸರ್ಜನ ಮತ್ತು ಯಕ್ಷಕದಂಬ ಈ ಎಲ್ಲ ರಚನೆಗಳೂ ನನ್ನವೇ. ಯಕ್ಷದರ್ಪಣದಲ್ಲಿ 'ಸಭಾಲಕ್ಷಣ'ದ ಹಾಗೂ ಇತರೇ ಪ್ರಸಂಗಗಳ ಪದ್ಯಗಳ ಸಂಕಲನವಿದೆ. 'ಯಕ್ಷನವೋದಯ' ಎಂಬ ಏಕವ್ಯಕ್ತಿ ಯಕ್ಷಗಾನ ಪ್ರಯೋಗದಲ್ಲಿ ನವೋದಯ ಕವಿಗಳಾದ ಡಿ.ವಿ.ಜಿ, ಕುವೆಂಪು, ದ.ರಾ.ಬೇಂದ್ರೆ, ತೀನಂಶ್ರೀ, ಕೆ.ಎಸ್.ನ. ಅವರ ಆಯ್ದ ಕವನಗಳಿವೆ. 'ವಿಜಯ ವಿಲಾಸ' ಹಾಗೂ 'ಹಂಸಸಂದೇಶ'ಗಳೆರಡೂ ಯುಗಳ ಯಕ್ಷಗಾನದ ಪ್ರಸಂಗಗಳಾಗಿವೆ. ಈ ಎಲ್ಲ ಕೃತಿಗಳಲ್ಲಿ ರಾಗ ಮತ್ತು ತಾಳವನ್ನು ನಿರ್ದಿಷ್ಟವಾಗಿ ಹೇಳಿ ಅವನ್ನೇ ಬಳಸಲಾಗಿದೆ. ಹಳಗನ್ನಡ ಛಂದಸ್ಸುಗಳಿಗೆ ಈ ಕೃತಿಗಳಲ್ಲಿ ಹೆಚ್ಚು ಒತ್ತು ಇದೆ. ಅಲಂಕಾರಗಳಿಗೆ ಅದರಲ್ಲೂ ರೂಪಕಾಲಂಕಾರಗಳು ಇಡಿಕಿರಿದಿವೆ. ಪ್ರಾಸಾನುಪ್ರಾಸದ ಸೊಗಸಿದೆ. ಸಂದರ್ಭಕ್ಕೆ ತಕ್ಕಂತಹ ಪದಗಳ ಬಳಕೆ ಇದೆ. ಉದಾಹರಣೆಗೆ ಜಿಂಕೆಯ ಓಟವನ್ನು ವರ್ಣಿಸುವಾಗ ಸಾರಂಗರಾಗವನ್ನು ಬಳಸಿದ್ದು ಮಾತ್ರವಲ್ಲದೇ ಜಿಂಕೆಯ ಓಟಕ್ಕೆ ಅನುಗುಣವಾದ ಶಬ್ದಗಳ ಪ್ರಯೋಗವಿದೆ. ನನ್ನ ಈ ಪ್ರಸಂಗ ಸಾಹಿತ್ಯ ರಚನೆಗಳು ಹೆಚ್ಚು ಅಭಿಜಾತದ ಕಡೆಗೆ ಹೊರಳಿವೆ. ಈಗ ಹೊಸದಾಗಿ ದ್ರೌಪದಿಯ ಬದುಕಿನ ಘಟನೆಗಳನ್ನು ಮುಖ್ಯವಾಗಿ ಇಟ್ಟುಕೊಂಡು 'ಭಾರತನಾರಿ' ಎಂಬ ಏಕವ್ಯಕ್ತಿ ಯಕ್ಷಗಾನ ಪ್ರಸಂಗ ಬರೆದಿದ್ದೇನೆ. ಎರಡು ಗಂಟೆಗಳಲ್ಲಿ ಸಾಕಾರವಾಗುವ ಈ ಪ್ರಸಂಗ ಇನ್ನೂ ಪ್ರದರ್ಶನಗೊಳ್ಳಬೇಕಿದೆ.

◆ **ಕನ್ನಡದ ಒಂದು ಕಾವ್ಯ ಪ್ರಕಾರವಾಗಿ ಶತಮಾನಗಳಿಂದ ಬೆಳೆದುಬಂದ ಯಕ್ಷಗಾನ ಪ್ರಸಂಗ ಸಾಹಿತ್ಯವು ವೈವಿಧ್ಯಮಯವಾದ ಛಂದಸ್ಸುಗಳಿಂದ ಕೂಡಿದ್ದರೂ ಈ ಪ್ರಕಾರದಲ್ಲಿ ಮೌಲಿಕವಾದ ಕೃತಿಗಳು, ಮಹಾಕಾವ್ಯಗಳು ಹೊರಬಂದಿಲ್ಲ. ಇದಕ್ಕೆ ಕಾರಣಗಳೇನಿರಬಹುದು?**

❑ ಯಕ್ಷಗಾನದ ಪ್ರಸಂಗರಚನೆಯು ಕವಿರಾಜಮಾರ್ಗಕಾರನು ಹೇಳುವ ಬೆದಂಡೆಗಬ್ಬಧ ಜಾಡಿನಲ್ಲಿದೆ. ಇದನ್ನು ದಿ.ಮುಳಿಯ ತಿಮ್ಮಪ್ಪಯ್ಯನವರು, ತಾಳ್ತಜೆ ಕೇಶವ ಭಟ್ಟರು ಈಗಾಗಲೇ ಹೇಳಿದ್ದಾರೆ. ಯಕ್ಷಗಾನ ಪ್ರಸಂಗಗಳು ರಂಗಕ್ಕೆ ಒದಗುವಂತೆ ರಚಿತವಾದವು. ಓದುವುದಕ್ಕೆ ಅಲ್ಲ. ಈ ಕಾರಣ ಮೇರುಕೃತಿಗಳಲ್ಲಿ ಇರುವಂತಹ ಶಬ್ದಾಲಂಕಾರಗಳಾಗಲಿ, ಧ್ವನಿಪೂರ್ಣ ವಿಚಾರಗಳಾಗಲಿ ರಸೋತ್ಕರ್ಷ ಸಂಗತಿಗಳಾಗಲಿ ಪ್ರಸಂಗ ಸಾಹಿತ್ಯದಲ್ಲಿ ಮೇಲುಗೈ ಸಾಧಿಸಿಲ್ಲ. ಪ್ರಾಸಾನುಪ್ರಾಸವೊಂದೇ ಇಲ್ಲಿ ಕಾಣುವಂತಹದು. ಕಾಳಿದಾಸನ ನಾಟಕಗಳು, ಷೇಕ್ಸಪಿಯರ್‌ನ ನಾಟಕಗಳು ರಂಗಪ್ರಯೋಗಕ್ಕೆ ಒದಗುವ ರೀತಿಯಲ್ಲಿಯೇ ವ್ಯಾಸಂಗಕ್ಕೂ ಒದಗಿಬರುತ್ತವೆ. ಏಕಕಾಲದಲ್ಲಿ ಅವು ರಂಗದಲ್ಲೂ ಶ್ರೇಷ್ಠತೆಯನ್ನು ಸಾಹಿತ್ಯದಲ್ಲೂ ಶ್ರೇಷ್ಠತೆಯನ್ನು ಹೊಂದಿದ್ದರಿಂದ ಮಹಾಕಾವ್ಯದ ಸಾಲಿನಲ್ಲಿ ನಿಲ್ಲುತ್ತವೆ. ಕನ್ನಡ ವಿದ್ವತ್ ವಲಯದ ಮನ್ನಣೆ

ಗಳಿಸಬೇಕಾದರೆ ಪ್ರಸಂಗಗಳು ರಂಗದಲ್ಲೂ ಯಶಸ್ವಿಯಾಗಬೇಕು ವ್ಯಾಸಂಗದಲ್ಲೂ ಯಶಸ್ವಿಯಾಗಬೇಕು. ಗಮಕ ಮಾತ್ರದಿಂದಲೇ ಕಾವ್ಯ ಮಹತ್ವದ್ದಾಗುವುದಿಲ್ಲ. ಸಾಹಿತ್ಯ ಕೃತಿಯಾಗಿ ಅದು ಗಟ್ಟಿಯಾದರೆ ಮಾತ್ರ ಅದು ವಿಶ್ವಮಾನ್ಯವಾಗುತ್ತದೆ. ಹೆಚ್ಚಿನ ಪ್ರಸಂಗಕಾರರು ರಾಗತಾಳಗಳ ಉಲ್ಲೇಖವನ್ನು ಹಿಂದಿನವರ ಬಳಕೆಯ ಆಧಾರದ ಮೇಲೆ ಬಳಸಿದ್ದಾರೆ. ಭಾಗವತರು ಕೂಡ ಇದನ್ನು ಅನೇಕ ಸಂದರ್ಭದಲ್ಲಿ ಬದಲಾಯಿಸಿಕೊಳ್ಳುತ್ತಾರೆ. ಪ್ರಸಂಗಕಾರನಿಗೆ ಸಾಹಿತ್ಯ ಜ್ಞಾನ, ಛಂದಸ್ಸಿನ ಜ್ಞಾನ, ರಾಗಗಳ ಜ್ಞಾನ ಹಾಗೂ ರಂಗ ಚಲನೆಯ ಜ್ಞಾನ ಇರಬೇಕು.

◆ **ಆಧುನಿಕ ಕಾಲದಲ್ಲಿ ಯಕ್ಷಗಾನದ ಶಿಥಿಲೀಕರಣಕ್ಕೆ ಹೊಸಪ್ರಸಂಗಗಳ ಹಾವಳಿ ಪ್ರಮುಖ ಕಾರಣವೆಂದು ಅನೇಕರ ಕೂಗಿದೆ. ಇದು ನಿಜವೇ? ನಿಮ್ಮ ಅಭಿಪ್ರಾಯ ವೇನು?**

□ ಇದು ಬಹುಮಟ್ಟಿಗೆ ನಿಜ. ಯಾವುದೇ ಒಂದು ಉದ್ದೇಶ ಇಟ್ಟುಕೊಂಡು, ಯವುದೇ ಒಂದು ವರ್ಗವನ್ನು ಗುರಿಯಾಗಿರಿಸಿಕೊಂಡು ಪ್ರಸಂಗರಚನೆ ಮಾಡಲು ಹೊರಟರೆ ಕಲೆ ಸೋಲುತ್ತದೆ. ಬದಲಾವಣೆ ಇರಬಾರದೆಂದಲ್ಲ. ಇಲ್ಲೆಲ್ಲ ಧನಾತ್ಮಕ ಪ್ರಯತ್ನ ಸಾಗಬೇಕು. ಉತ್ತಮವಾದುದನ್ನು ಸೇರ್ಪಡೆಗೊಳಿಸಬೇಕು. ಯಕ್ಷಗಾನದ ಶಿಥಲೀಕರಣದ ನಡುವೆಯೂ ಬನ್ನಂಜೆ ಸುವರ್ಣರವರು ಆಂಗಿಕದಲ್ಲಿ ಮಾಡಿರುವ ಸಾಧನೆ ಮೆಚ್ಚತಕ್ಕದ್ದು. ಹಾರಾಡಿ ರಾಮಗಾಣಿಗ್ರರ, ಗುರು ವೀರಭದ್ರನಾಯಕರ ಶೈಲಿಯನ್ನೆಲ್ಲ ಅವರು ಬಳುವಳಿಯಾಗಿ ಪಡೆದುಕೊಂಡಿದ್ದಾರೆ. ಅದೇ ರೀತಿ ಮಕ್ಕಳ ಮೇಳದ ಶ್ರೀ ಎಚ್. ಶ್ರೀಧರ ಹಂದೆಯವರು ಹಾರಾಡಿ, ಮಟ್ಪಾಡಿ ಶೈಲಿಯನ್ನು ಶಾಲಾ ಮಕ್ಕಳ ಮೂಲಕ ಯಕ್ಷಗಾನದ ಶಿಥಲೀಕರಣದ ಮಧ್ಯೆಯೂ ಉಳಿಸುವ ಪ್ರಯತ್ನ ಮಾಡಿದ್ದಾರೆ.

◆ **ಹಳೆಯ ಪುರಾಣ ಪ್ರಸಂಗಗಳು ವರ್ತಮಾನಕ್ಕೆ ಪ್ರಸ್ತುತವಾಗಲಾರವು. ಅದು ಪ್ರಸಂಗದ ಮಿತಿಯೆಂದು ಕೆಲವು ತಜ್ಞರ ಅಭಿಮತ ನಿಮ್ಮ ವಿಚಾರ ವೇನು?**

□ ಇದಕ್ಕೆ ನನ್ನ ಒಪ್ಪಿಗೆ ಇಲ್ಲ. ಯಕ್ಷಗಾನದ ಪೌರಾಣಿಕ ಪ್ರಸಂಗಗಳು ವರ್ತಮಾನ ಕಾಲಕ್ಕೆ ಕೂಡ ಪ್ರಸ್ತುತವಾಗಬಲ್ಲವು, ಉತ್ತಮ ಕಲೆ ಯಾವಗಲೂ ಕಾಲಾತೀತ ವಾಗಿರುತ್ತದೆ.

◆ **ಇತ್ತೀಚೆಗೆ ವೀರಶೈವಚಿಂತನೆಗಳನ್ನು ಒಳಗೊಂಡ 'ಬಸವಚರಿತ್ರೆ'ಯಂತಹ ಚಾರಿತ್ರಿಕ ಪ್ರಸಂಗಗಳ ರಚನೆಯಾಯಿತು. ಇಂತಹ ಪ್ರಸಂಗಗಳಿಂದ ಸಾಂಪ್ರದಾಯಿಕ ರಂಗಭೂಮಿಗೆ ಪ್ರಯೋಜನವಿದೆಯೇ?**

□ ಯಕ್ಷಗಾನದ ಆವರಣಕ್ಕೆ ಹೊಂದಿ ಯಾವ ಕೃತಿಗಳು ಬಂದರೂ ಅದು ಸ್ವಾಗತಾರ್ಹ. ಐತಿಹಾಸಿಕ ಕೃತಿಗಳು ಬರಬಾರದೆಂದೇನಿಲ್ಲ. ಆದರೆ ಯಕ್ಷಗಾನದಲ್ಲಿ ವೀರರಸ ಹಾಗೂ ಶೃಂಗಾರರಸಕ್ಕೆ ಹೆಚ್ಚಿನ ಮನ್ನಣೆ ಇದೆ. ಯಕ್ಷಗಾನದ ಶೈಲಿ ಈ ಎರಡು ರಸಗಳ ಪರಿಪೋಷಣೆಯನ್ನು ಚೆನ್ನಾಗಿ ಮಾಡುತ್ತದೆ. ಈ ಕಾರಣ ಪ್ರಸಂಗರಚನಾಕಾರರು ಹೊಸ ಬಗೆಯ ವಸ್ತುಗಳನ್ನು ಆಯ್ದು ಕೊಂಡಾಗ ಯಕ್ಷಗಾನದ ಶೈಲಿಗೆ ಗಮನ ಕೊಟ್ಟು ಉಚಿತ ಬದಲಾವಣೆಗಳನ್ನು ವಸ್ತುವಿನಲ್ಲಿ ಮಾಡಿಕೊಳ್ಳಬೇಕಾಗುತ್ತದೆ. ಯಕ್ಷಗಾನದಲ್ಲಿ factಗಿಂತ ಕಲ್ಪನೆಗೆ ಜಾಸ್ತಿ ಅವಕಾಶ. ಈ ಕಾರಣ ಪ್ರಸಂಗಕಾರರು ಅಲೌಕಿಕವಾದ ವಸ್ತುವನ್ನು ತೆಗೆದುಕೊಳ್ಳುವ ಮೂಲಕ ತಮ್ಮ ಕಲ್ಪನಾ ವಿಲಾಸವನ್ನು ತೋರ್ಪಡಿಸುತ್ತಾರೆ. ಪ್ರಸಂಗದಲ್ಲಿ ಭಾವ ಸಾಧ್ಯತೆಗೆ ಅವಕಾಶ ಇರಬೇಕು. ಘಟನೆಗಳು ಆಂಗಿಕವಾದ ಅಭಿನಯಕ್ಕೆ ಪೂರಕವಾಗಿರಬೇಕು.

◆ **ಕನ್ನಡ ಭಾಷೆಗೂ ಯಕ್ಷಗಾನದ ಮೂಲ ಸ್ವರೂಪಕ್ಕೂ ಅನಿವಾರ್ಯವಾದ ಸಂಬಂಧವೇನಾದರೂ ಇದೆಯೇ? ಬೇರೆ ಭಾಷೆಗಳಲ್ಲಿ ಯಕ್ಷಗಾನದ ರಚನೆಯಾದರೆ ಅದು ಇದರ ಸ್ವರೂಪಕ್ಕೆ ಮಾರಕವಾಗಬಹುದೇ?**

□ ಹಾಗೇನೂ ಇಲ್ಲ. ಬೇರೆ ಭಾಷೆಯಲ್ಲಿ ಯಕ್ಷಗಾನ ಪ್ರಸಂಗರಚನೆಯಾದರೆ ತೊಡಕೇನೂ ಇಲ್ಲ. ಹಿಂದಿ, ಸಂಸ್ಕೃತ, ತೆಲುಗು, ಇಂಗ್ಲೀಷಿನಲ್ಲಿ ಯಕ್ಷಗಾನ ಪ್ರಸಂಗ ಬರೆದು ಪ್ರಸ್ತುತಪಡಿಸಬಾರದೆಂದೇನೂ ಇಲ್ಲ. ಇಲ್ಲಿನವರ ಕಿವಿಗೆ ಅದು ಸರಿಹೋಗದೇ ಹೋಗಬಹುದು. ಆದರೆ ಆ ಭಾಷೆಯವರಿಗೆ ಅದು ಪ್ರಸ್ತುತವಾಗುತ್ತದೆ. ಈ ಕಾರಣ ಭಾಷೆಯ ಬಂಧ ಯಕ್ಷಗಾನಕ್ಕೆ ಇಲ್ಲ. ಉತ್ತಮ ಪ್ರಸಂಗಗಳು ಉತ್ತಮವಾಗಿ ಪ್ರದರ್ಶನಗೊಂಡರೆ ಅದು ಜನಮಾನಸದಲ್ಲಿ ಉಳಿಯುತ್ತದೆ.

◆ **ಇಂದು ಜಾಹಿರಾತುಗಳಲ್ಲಿ, ಮೆರವಣಿಗೆಯ ಸ್ಥಬ್ದಚಿತ್ರಗಳಲ್ಲಿ, ಚಲನಚಿತ್ರದ ನೃತ್ಯದ ಹಿನ್ನೆಲೆಯಾಗಿಯೂ ಯಕ್ಷಗಾನದ ವೇಷಗಳನ್ನು ಬಳಸಲಾಗುತ್ತಿದೆ. ಇದೆಲ್ಲ ಯಕ್ಷಗಾನದ ಘನತೆಗೆ ತಕ್ಕುದಲ್ಲ ಎಂದು ಕೆಲವರ ಆಕ್ಷೇಪ. ಇದರ ಬಗ್ಗೆ ನಿಮ್ಮ ವಿಚಾರವೇನು?**

□ ಯಕ್ಷಗಾನವನ್ನು ಈ ರೀತಿ ಬಳಸುವುದು ಅಪರಾಧವೇನಲ್ಲ. ಹಿಂದೆಲ್ಲ ದೇವಸ್ಥಾನದ ಗೋಡೆಯಮೇಲೆ ಭಿತ್ತಿ ಶಿಲ್ಪವಾಗಿ ನರ್ತನದ, ಪುರಾಣಕತೆಗಳ ಚಿತ್ರಗಳು ಬಳಕೆಯಾಗಿವೆಯಲ್ಲ! ತಮ್ಮ ಕಲ್ಪನೆಯಿಂದ ಬರುವ ಆಕ್ಷೇಪಕ್ಕೆ ಅರ್ಥವಿಲ್ಲ. ಇದನ್ನೆಲ್ಲ ನಿಯಂತ್ರಿಸುವುದಾದರೂ ಹೇಗೆ ಸಾಧ್ಯ?

◆ **ಏಡ್ಸ್‌ರೋಗ ನಿಯಂತ್ರಣದ ಪ್ರಚಾರಕ್ಕೆ, ಕುಟುಂಬ ಯೋಜನೆಯ ಪ್ರಚಾರಕ್ಕೆಲ್ಲ ಯಕ್ಷಗಾನ ಪ್ರಸಂಗರಚನೆಯಾಗುವುದು ಸರಿಯೇ?**

□ ಈ ರೀತಿಯಲ್ಲಿ ರಚಿತವಾಗುವ ಪ್ರಸಂಗಗಳು ದೊಡ್ಡ ಕಲಾ ಪ್ರದರ್ಶನವಾಗುವುದಿಲ್ಲ. ಪ್ರಚಾರೋದ್ದೇಶಕ್ಕೆ ಮಾತ್ರ ಅವುಗಳು ಸೀಮಿತವಾಗಿರುತ್ತವೆ. ಇವುಗಳನ್ನು ಕಲಾ ಪ್ರದರ್ಶನವೆಂದು ಕರೆಯಲು ಬರುವುದಿಲ್ಲ. ಕಾರಣ ಕಲೆಗಿಂತ ಬೇರೆ ಉದ್ದೇಶಕ್ಕೆ ಹೆಚ್ಚು ಒತ್ತು ಇರುತ್ತದೆ. ಪ್ರಸಂಗ ರಚನೆ ಮಾಡುವುದನ್ನು ತಪ್ಪು ಎಂದು ಹೇಳಲು ಬರುವುದಿಲ್ಲ.

◆ **ಇನ್ನು ಯಕ್ಷಗಾನದ ಸಂಗೀತಕ್ಕೆ ಬಂದರೆ ಹೆಚ್ಚು ಹೆಚ್ಚು ಸುಧಾರಣೆಯಾಗುತ್ತಿದ್ದಂತೆ ಯಕ್ಷಗಾನ ಹಾಡುಗಳು 'ಯಕ್ಷಗಾನ ಕೇಳಿದಂತೆ ಕೇಳಿಸುವುದಿಲ್ಲ' ಎಂಬ ಆಕ್ಷೇಪವಿದೆ. ಇದಕ್ಕೆ ಕಾರಣವೇನಿರಬಹುದು?**

□ 'ಯಕ್ಷಗಾನ ಕೇಳಿದಂತೆ ಕೇಳುವುದು' ಎಂದರೇನು? ಯಕ್ಷಗಾನದ ಗಾನ ಕ್ರಮವೇನು? ಯಕ್ಷಗಾನೀಯತೆ ಎಂದರೇನು? ಎಂಬುದನ್ನೆಲ್ಲ ಮೊದಲು ಸ್ಪಷ್ಟಪಡಿಸಿಕೊಳ್ಳಬೇಕು. ಯಾವುದೇ ಸಂಗೀತದಲ್ಲೂ ಗಮಕ ಪ್ರಯೋಗ ಹೇಗೆ ಎಂಬುದು ಮುಖ್ಯ. ಯಕ್ಷಗಾನದಲ್ಲಿ ಮೇಲು ಸಂಚಾರಕ್ಕೆ ಪ್ರಾಧಾನ್ಯ. ಬಯಲಿನಲ್ಲಿ ಹಾಡುತ್ತಿದ್ದುದರಿಂದ ಏರುಶೃತಿಯಲ್ಲಿ ಹಾಡುತ್ತಿದ್ದರು. ಇದರಿಂದ ಎಷ್ಟೋ ಬಾರಿ ರಸಾಭಾಸಗಳು ಆಗುವುದು ಉಂಟು. ಸುಧಾರಣೆ ಮಾಡುವವರು ಯಾವ ದೃಷ್ಟಿಯಿಂದ ಮಾಡುತ್ತಿದ್ದಾರೆ ಎಂಬುದು ಮುಖ್ಯ. ಹೆಚ್ಚು ಶಿಸ್ತಿನ ಕಡೆಗೆ, ಖಚಿತವಾದ ರಾಗಜ್ಞಾನದ ಕಡೆಗೆ ಯಕ್ಷಗಾನ ಸಂಗೀತ ಸುಧಾರಣೆಯಾಗುತ್ತಿದ್ದರೆ ಅದು ಉತ್ತಮ ಬೆಳವಣಿಗೆಯಾಗುತ್ತದೆ. ರಚನಾತ್ಮಕವಾಗಿ ಕೆಲಸ ಮಾಡದೇ ವಿರೋಧಕ್ಕಾಗಿ ವಿರೋಧಿಸುವುದು ಸರಿ ಅಲ್ಲ.

◆ **ಯಕ್ಷಗಾನ ಸಂಗೀತಕ್ಕೂ ಹಿಂದೂಸ್ಥಾನೀ ಅಥವಾ ಕರ್ನಾಟಕೀ ಸಂಗೀತಕ್ಕೂ ಇರುವ ಸಂಬಂಧದ ಸೂಕ್ಷ್ಮವೇನು? ಅಂದರೆ ಒಟ್ಟೂ ಭಾಗವತನಿಗೆ ಎಷ್ಟು ಪ್ರಮಾಣದ ಸಂಗೀತದ ಪರಿಣತಿ ಇರಬೇಕು?**

□ ಒಂದು ರಾಗವೆಂದರೆ ಹತ್ತಾರು ಮಟ್ಟುಗಳ ಸಂಗ್ರಹ. ರಾಗದ ಅಭ್ಯಾಸ ಮಾಡಿದಾಗ ಬೇರೆ ಬೇರೆ ಸಾಧ್ಯತೆ ಅರ್ಥವಾಗುತ್ತದೆ. ಭಾಗವತನ ಶಕ್ತಿ ಒಂದು ಲಕ್ಷಣವಾಗಬಾರದು. ತನ್ನ ಪರಿಶ್ರಮದಿಂದ ರಾಗಜ್ಞಾನ ಹೊಂದಿದವನಾಗಿರಬೇಕು. ಕನ್ನಡ ಭಾಷೆಯ ಉಚ್ಚಾರ ಕ್ರಮ ಕರ್ನಾಟಕ ಸಂಗೀತಕ್ಕೆ ಹೆಚ್ಚು ಹತ್ತಿರ. ಈ ಕಾರಣ ಯಕ್ಷಗಾನ ಸಂಗೀತಕ್ಕೆ ಕರ್ನಾಟಕ ಸಂಗೀತದ ಅರಿವು ಇದ್ದರೆ ಹೆಚ್ಚು ಪರಿಪುಷ್ಟವಾಗಲು ಸಾಧ್ಯ. ಹಿಂದೂಸ್ಥಾನೀ ರಾಗದಲ್ಲಿ ಬರುವ ಉಚ್ಚಾರದ ಮಾದರಿ ಕನ್ನಡ ಭಾಷೆಯ ಜಾಯಮಾನಕ್ಕೆ ಅಷ್ಟಾಗಿ ಹೊಂದುತ್ತಿಲ್ಲ. ಹಿಂದುಸ್ಥಾನಿ ರಾಗಜ್ಞಾನವಿದ್ದರೆ ತಪ್ಪೇನಿಲ್ಲ. ಭಾಗವತನಾದವನು ಸ್ವರ ಸಾಧನೆ ಮಾಡಿ ಸಂಗೀತದ ಆಳಜ್ಞಾನವನ್ನು ಹೊಂದಿದಷ್ಟು 'ಯಕ್ಷಗಾನ' ಚೆನ್ನಾಗಿ ಆಗುತ್ತದೆ. ಹೇಗೆ ತಾಳ ಮದ್ದಳೆ ಅರ್ಥಧಾರಿ ಅರ್ಥಸಾಧ್ಯತೆಗಳನ್ನು

ವಿಸ್ತರಿಸುತ್ತಾನೋ ಹಾಗೆ ಭಾಗವತ ಹಾಡಿನ ರಾಗಸಾಧ್ಯತೆಗಳನ್ನು ವಿಸ್ತರಿಸುವ ಶಕ್ತಿ ಸಾಮರ್ಥ್ಯ ಹೊಂದಿರಬೇಕು. ಈ ಕಾರಣ ಮೊದಲು ಭಾಗವತನಲ್ಲಿ ಸುಧಾರಣೆಯಾಗಬೇಕು.

◆ **ಯಕ್ಷಗಾನದಲ್ಲಿ ಮಾತ್ರ ಒಂದು ತಾಳದಿಂದ ಇನ್ನೊಂದು ತಾಳಕ್ಕೆ ಒಂದೇ ಪದ್ಯದಲ್ಲಿ ಜಿಗಿಯುವ ಸಾಧ್ಯತೆ ಇದೆ. ಇದು ಯಕ್ಷಗಾನದ ವೈಶಿಷ್ಟ್ಯ ಕೂಡ. ಇದಕ್ಕೆ ಸಂಗೀತ ಶಾಸ್ತ್ರದ ಅಥವಾ ಛಂದಸ್ಸಿನ ಸಮರ್ಥನೆ ಇದೆಯೇ?**

❑ ಪ್ರಾದೇಶಿಕ ರಂಗಭೂಮಿಗಳಲ್ಲೆಲ್ಲ ಈ ಪದ್ಧತಿ ಇದೆ. ಕಲೆಯಲ್ಲಿ ಶಾಸ್ತ್ರ ಸಮರ್ಥನೆಗಿಂತ ಸೌಂದರ್ಯ ಪ್ರತಿಪಾದನೆ ಮುಖ್ಯ. ಹೀಗೆ ಒಂದೇ ಪದ್ಯದಲ್ಲಿ ತಾಳದಿಂದ ತಾಳಕ್ಕೆ ಜಿಗಿಯುವುದು ಸಾಧು ಮತ್ತು ಯಕ್ಷಗಾನದ ವೈಶಿಷ್ಟ್ಯ. ಪ್ರಾದೇಶಿಕ ರಂಗಕಲೆಯ ಈ ವಿಧಾನಕ್ಕೆ ವಿರೋಧವೇನೂ ಇಲ್ಲ. ರಾಗಭಾವಗಳನ್ನು ತೋರಿಸಬೇಕಾದ್ದು ಭಾಗವತನ ಕರ್ತವ್ಯ. ತಾಳಾವರ್ತ ಸರಿಯಾಗಿ ಬರುವಂತೆ ನೋಡಿಕೊಂಡಾಗ ರಾಗಶುದ್ಧಿಗೆ ಸಹಕಾರಿಯಾಗುತ್ತದೆ.

◆ **ಯಕ್ಷಗಾನದಲ್ಲಿ ಚಂಡೆಯ ಅತಿಯಾದ ಬಳಕೆ ರಸಭಂಜಕವಲ್ಲವೇ?**

❑ ಚಂಡೆಯ ಬಳಕೆ ಇರುವುದು ವೀರರಸದ ಪ್ರತಿಪಾದನೆಗೆ. ವೀರರಸ ಪ್ರಚಾರಗೊಳ್ಳಲು ಘನವಾದ್ಯಗಳು ಅಗತ್ಯ. ಇದರೊಂದಿಗೆ ಮುಖವೀಣೆಯನ್ನು ಬಳಸಬಹುದು. ಯಕ್ಷಗಾನದ ಹಾಡುಗಾರಿಕೆಗೆ ಸ್ವರವಾದ್ಯವೊಂದರ ಅಗತ್ಯವಿದೆ. ಡಾ. ಶಿವರಾಮ ಕಾರಂತರು ವಯಲಿನ್ ಹಾಗೂ ಸ್ಯಾಕ್ಸೋಫೋನ್‌ನ್ನು ಈ ಕಾರಣಕ್ಕಾಗಿಯೇ ತಮ್ಮ ಬ್ಯಾಲೆಯಲ್ಲಿ ಬಳಸಿದ್ದರು. ಈ ಬಗೆಯ ಸ್ವರವಾದ್ಯದಿಂದ ಭಾಗವತನ ಹಾಡುಗಾರಿಕೆಗೆ ಹಿತವೊದಗುತ್ತದೆ. ನಮ್ಮ ಏಕವ್ಯಕ್ತಿ ಯಕ್ಷಗಾನದಲ್ಲಿ ಕೊಳಲಿನ ಬಳಕೆಯಾಗಿದೆ. ಸ್ಯಾಕ್ಸೋಫೋನ್‌ಗಿಂತ ಕೊಳಲು ಈ ರಂಗಕ್ಕೆ ಹೆಚ್ಚು ಸನಿಹ. ಇನ್ನು ತೆಂಕು ತಿಟ್ಟಿನಲ್ಲಿ ಚಕ್ರತಾಳದ ಬಳಕೆಯಿದೆ. ಇದು ಕಥಕ್ಕಳಿಯ ಪ್ರಭಾವದಿಂದ ಬಂದಿರಬಹುದು. ಅಲ್ಲಿನ ಉದ್ದೇಶವೂ ವೀರರಸ ಪ್ರತಿಪಾದನೆಯೇ ಆಗಿದೆ. ಈ ಕಾರಣ ಚಂಡೆ ಅಗತ್ಯ ಆದರೆ ಬಳಸುವ ಪ್ರಮಾಣ ಮುಖ್ಯ.

◆ **ಯಕ್ಷಗಾನದ ತಿಟ್ಟುಗಳ ಕುರಿತು ನಿಮ್ಮ ಒಳನೋಟಗಳೇನು?**

❑ ತೆಂಕುತಿಟ್ಟಿನ ವೇಷಗಾರಿಕೆ ಕುಣಿತಕ್ಕೆ ಅಷ್ಟು ಅನುಕೂಲಕರವಲ್ಲ. ಇದರಿಂದಾಗಿಯೇ ಅಲ್ಲಿ ಗಿರಕಿ ಬಂದಿತು. ಕಾಲನ್ನು ಮುಟ್ಟುವ ದಿರಿಸಿನಿಂದಾಗಿ ಪಾದ ವಿನ್ಯಾಸ ಎದ್ದು ಕಾಣುವುದಿಲ್ಲ. ಇಲ್ಲಿ ವೀರರಸ ಪ್ರತಿಪಾದನೆ ಬಹಳ ಸೊಗಸಾಗಿರುತ್ತದೆ. ಚಕ್ರತಾಳವು ಅದಕ್ಕೆ ಸಹಕರಿಸುತ್ತದೆ. ಹೆಚ್ಚಾಗಿ ದ್ರುತ ಲಯದಲ್ಲಿ ಮೂಡಿಬರುತ್ತದೆ. ಬಣ್ಣದ ವೇಷವಂತೂ ಅದ್ಭುತ. ಬಡಗುತಿಟ್ಟಿನ

ಕುಣಿತದಲಿ ಹೆಜ್ಜೆಗಾರಿಕೆ, ಲಾಸ್ಯಕ್ಕೆ ಹೆಚ್ಚು ಒತ್ತಿದೆ. ಬಡಗಿನ ಪೋಷಾಕುಗಳು ಪಾತ್ರಶುದ್ಧಿಗೆ ಅನುಕೂಲಕರ. ಎದೆಹಾರ ಕತ್ತರಿ ಆಕಾರದಲ್ಲಿದ್ದು ಒಟ್ಟೂ ಪಾತ್ರದ ಕತ್ತರಿ ವಿನ್ಯಾಸಕ್ಕೆ ಸರಿಹೊಂದುತ್ತದೆ. ಭುಜಕೀರ್ತಿಗಳು ಚೂಪಾಗಿದ್ದು ಶೋಭೆ ಹೆಚ್ಚಿಸುತ್ತದೆ. ಕೇದಗೆ ಮುಂದಲೆ ಯಕ್ಷಗಾನದ ಸೊಗಸನ್ನು ಹೆಚ್ಚಿಸುತ್ತದೆ. ಆದರೆ ಇದರಲ್ಲೇ ದೊಡ್ಡ ಮುಂಡಾಸನ್ನು ತೊಟ್ಟು ಬರುವ ಪಾತ್ರಗಳು ಕುಣಿತದಲ್ಲಿ ಕಷ್ಟಪಡುತ್ತವೆ. ಇಲ್ಲಿ, ಗತ್ತು, ಛಾಪು, ನಿಲ್ಲುವ ಭಂಗಿ ಚೆನ್ನಾಗಿದೆ. ಬಡಬಡಗುತಿಟ್ಟಿನಲ್ಲಿನ ಸಾತ್ವಿಕಾಭಿನಯ ಬಹಳ ಚೆನ್ನಾಗಿದೆ. ಹಿಂದೆಲ್ಲಾ ಮುಂಡಾಸು ಚಿಕ್ಕದಾಗಿದ್ದು ಪಾತ್ರದ ಆಕಾರ ಪ್ರಮಾಣಕ್ಕೆ ಸರಿಹೊಂದುವುದಿಲ್ಲ. ಎದೆಹಾರ ವರ್ತುಲಾಕಾರವಿದ್ದು ಗೊಂಡೆಗಳಿಂದ ಕೂಡಿದೆ. ಇದು ಕೂಡ ಸೊಗಸನ್ನು ಹೆಚ್ಚಿಸುವುದಿಲ್ಲ. ನೃತ್ಯದ ವೈವಿಧ್ಯವು ಕಡಿಮೆ. ವಿಳಂಬಗತಿಯೇ ಇಲ್ಲಿ ಪ್ರಾಧಾನ್ಯ. ಈಗೀಗ ತಿಟ್ಟುಗಳ ನಡುವೆ ಬಾಹ್ಯದಲ್ಲಿ ಮಾತ್ರ ವ್ಯತ್ಯಾಸ ಕಾಣುತ್ತದೆಯೇ ಹೊರತು ಆಂತರ್ಯದಲ್ಲಿನ ವ್ಯತ್ಯಾಸ ಕಡಿಮೆಯಾಗುತ್ತಿದೆ. ಸ್ತ್ರೀ ವೇಷದಲ್ಲಿ ವ್ಯತ್ಯಾಸ ಕಾಣುವುದಿಲ್ಲ. ಯಕ್ಷಗಾನ ಒಂದು ಸಂಯುಕ್ತ ಕಲೆಯಾದ್ದರಿಂದ ಮಧ್ಯಮ ಲಯದಲ್ಲಿದ್ದಾಗ ಚೆನ್ನಾಗಿ ಬರುತ್ತದೆ.

◆ **ಬಡಗುತಿಟ್ಟಿನಲ್ಲಿ ಎಲ್ಲ ಪಾತ್ರದ ಎಲ್ಲ ಪದ್ಯಗಳನ್ನೂ ವಿಸ್ತರಿಸುತ್ತಾ ಚಾಲೂ ಕುಣಿತಗಳ ವಿವೇಚನಾರಹಿತ ಪ್ರಸ್ತುತಿ ಅತಿಯಾಗಿದೆಯಲ್ಲವೇ? ಇದನ್ನು ಭಾಗವತರೇ ನಿಯಂತ್ರಿಸಬೇಕಲ್ಲವೇ?**

□ ಇದು ಬಡಗುತಿಟ್ಟಿನಲ್ಲಿ ಒಮ್ಮೊಮ್ಮೆ ಅತಿಯಾಗುತ್ತಿದೆ. ಭಾಗವತನ ನಿಯಂತ್ರಣ ತಪ್ಪಿದಾಗ ಇದೆಲ್ಲ ನಡೆಯುತ್ತದೆ. ಈ ಕಾರಣ ಭಾಗವತನು ರಂಗ ನಿರ್ದೇಶಕನಂತೆ ವರ್ತಿಸಬೇಕಾಗುತ್ತದೆ. ಮುಮ್ಮೇಳದ ಅಭಿನಯ ವಿಸ್ತಾರ ಹಾಗೂ ವೈವಿಧ್ಯ ಸಾಧ್ಯತೆಗಳಿಗೆ ಅನುವು ಮಾಡಿಕೊಡಲು ಹದವಾಗಿ ರೂಪಿಸುವುದು ಒಳಿತು. ತಾಳಗತಿ ವೈವಿಧ್ಯವನ್ನೂ ಬೇಕಾದಲ್ಲಿ ಅಳವಡಿಸಿ ಕೊಳ್ಳಬಹುದು.

◆ **ಆಂಗಿಕ, ಆಹಾರ್ಯ, ವಾಚಿಕಗಳಿಗಿಂತ ಸಾತ್ವಿಕಾಭಿನಯವು ಸಂಕೀರ್ಣವಾಗಿದ್ದು ಅದನ್ನು ಸೋದಾಹರಣವಾಗಿ ಸ್ವಲ್ಪ ವಿವರಿಸಬಹುದೇ?**

□ ಸತ್ವಕ್ಕೆ ಸಂಬಂಧಿಸಿದುದು ಸಾತ್ವಿಕ. ಇದು ರಂಗ ಕಲೆಗಳಲ್ಲಿ ಮುಖ್ಯವಾಗಿ ರಸಭಾವಗಳಿಗೆ ಸಂಬಂಧಿಸಿದ್ದು, ಕಲಾನುಭವವೆಂದರೆ ಸತ್ವೋದ್ರೇಕ ರೂಪದ ರಸಪರಿಸ್ಪಂದನೆಯಾಗಿದೆ. ಇದು ಆಂತರ್ಯಕ್ಕೆ ಸಂಬಂಧಿಸಿದ ವಿಷಯ. ಯಾವುದೇ ರಂಗಕಲೆಯಲ್ಲಿ ಮೊದಲಿಗೆ ಆಹಾರ್ಯ ನಂತರ ಆಂಗಿಕ ನಂತರ ವಾಚಿಕ ಕೊನೆಯಲ್ಲಿ ಬರುವುದೇ ಸಾತ್ವಿಕಾಭಿನಯ.(ಯಕ್ಷಗಾನದ ರೀತಿಯಲ್ಲಿ ಸರಳವಾಗಿ ಹೇಳುವುದಾದರೆ ಮೊದಲಿಗೆ ವೇಷಭೂಷಣಕ್ಕೆ

ಪ್ರೇಕ್ಷಕ ಮನಸೋಲುತ್ತಾನೆ. ನಂತರ ಕುಣಿತವನ್ನು ಮೆಚ್ಚುತ್ತಾನೆ ನಂತರ ಭಾಗವತನ ಹಾಡನ್ನು ಪಾತ್ರಧಾರಿಯ ಮಾತನ್ನು ಆಸ್ವಾದಿಸುತ್ತಾನೆ. ಕೊನೆಯಲ್ಲಿ ಪ್ರೇಕ್ಷಕ ಸ್ಪಂದಿಸುವುದು ಪಾತ್ರಧಾರಿಯ ಅಭಿನಯದಲ್ಲಿ ತಾನು ಒಂದಾಗುತ್ತಾನೆ. ಕೆಲವರು ಮೊದಲ ಮೆಟ್ಟಿಲುಗಳಲ್ಲೇ ನಿಂತುಬಿಡುವ ಪ್ರೇಕ್ಷಕರಿದ್ದಾರೆ, ನಿಜವಾದ ಸಹೃದಯೀ ರಸಿಕ ವಾಚಿಕದ ಮೆಟ್ಟಿಲನ್ನು ದಾಟಿ ಸಾತ್ವಿಕಾಭಿನಯವನ್ನು ನೋಡಿ ಅನುಭವಿಸಿ ರಸಾನಂದವನ್ನು ಪಡೆಯುತ್ತಾನೆ) ಈ ಸಾತ್ವಿಕಾಭಿನಯಕ್ಕೆ ಆಂಗಿಕ ಮತ್ತು ವಾಚಿಕಗಳು ಸಹಕಾರಿ. ಭಾಗವತನಿಂದ ಸಹಜ ಶ್ರುತಿಯಲ್ಲಿ ರಾಗಪೂರ್ಣವಾಗಿ ಹೊರಹೊಮ್ಮುವ ಗಾನ, ಭಾವಪೂರ್ಣವಾದ ಮಾತುಗಾರಿಕೆ, ಚಿತ್ತವೃತ್ತಿಗಳನ್ನು ಮುಖದ ಅಭಿನಯದ ಮೂಲಕ ತೋರಿಸುವುದು ಇವೆಲ್ಲದರ ಸಂಗಮವಾಗಿ ಕಲಾವಿದನಿಂದ ಹೊರಹೊಮ್ಮುವ ರಸಸ್ಯಂದಿಯು ಪ್ರೇಕ್ಷಕರನ್ನು ಮುಟ್ಟಿ ತಟ್ಟುವುದೇ ಸಾತ್ವಿಕಾಭಿನಯ. ಇದಕ್ಕೆ ಕಲಾವಿದನಲ್ಲಿ ಪ್ರತಿಭೆ ಹಾಗೂ ಪ್ರಬುದ್ಧತೆ ಇರಬೇಕಾಗುತ್ತದೆ.

◆ **ತಮ್ಮ 'ಯಕ್ಷರಾತ್ರಿ'ಯಲ್ಲಿ ಉತ್ತರ ಕನ್ನಡದ ಬಡಗುತಿಟ್ಟಿನಲ್ಲಾದರೂ ಅಭಿನಯ, ಸತ್ವಾಭಿನಯವೆಂಬ ಹೆಸರಿನಲ್ಲಿ ರಾಜ್ಯವಾಳುತ್ತಿರುವುದು ಪದಾರ್ಥಾಭಿನಯವೇ ಹೊರತೂ ವಾಕ್ಯಾರ್ಥಾಭಿನಯವಲ್ಲ ಎಂದು ಹೇಳಿದ್ದೀರಿ. ಪದಾರ್ಥಾಭಿನಯಕ್ಕೂ ವಾಕ್ಯಾರ್ಥಾಭಿನಯಕ್ಕೂ ಇರುವ ವ್ಯತ್ಯಾಸವನ್ನು ವಿವರಿಸಬಹುದೇ?**

□ ಸಾತ್ವಿಕಾಭಿನಯದ ಹೃದಯವಿರುವುದು ಇಡೀ ವಾಕ್ಯಾರ್ಥಾಭಿನಯದಲ್ಲಿ. ಬರೇ ಪದಗಳ ಅರ್ಥಗಳನ್ನು ಹೇಳುವ ಅಭಿನಯದಲ್ಲಿ ಸಾತ್ವಿಕಾಭಿನಯವಿರುವುದಿಲ್ಲ. ಉದಾಹರಣೆಗೆ 'ಊಟದಲಿ ನಿಪುಣ' ಎಂಬ ಪದ್ಯದಲ್ಲಿ 'ಊಟ' ಎಂಬ ಪದವೊಂದನ್ನೇ ತೆಗೆದುಕೊಂಡು ನಾನಾ ಬಗೆಯ ಊಟವನ್ನು ತೋರಿಸುತ್ತಾ ಹೋಗುವುದು ಒಂದು ಚಮತ್ಕಾರವೇ(ಗಿಮಿಕ್) ಹೊರತೂ ಸಂಪೂರ್ಣ ಕಲಾನಂದವನ್ನು ನೀಡುವಂತಹುದಲ್ಲ. ಅದರಲ್ಲಿ ಇಡೀ ವಾಕ್ಯದ ಅರ್ಥವನ್ನು ಗಮನಿಸಿ ಭೀಮನ ಬದುಕಿಗೆ ಸಂಬಂಧಿಸಿ ಬರುವ ಊಟದ ಪ್ರಸಂಗಗಳನ್ನು ಬಿಡಿಬಿಡಿಯಾದ ನರ್ತನಗಳಲ್ಲಿ ನಿರೂಪಿಸಿದರೆ ಅದು ವಾಕ್ಯಾರ್ಥಾಭಿನಯವಾಗುತ್ತದೆ. ಸತ್ವಾಭಿನಯಕ್ಕೆ ಈ ಬಗೆಯ ಅರ್ಥ ವಿನ್ಯಾಸವಿದೆ. ನರ್ತನ ವಿಸ್ತಾರ ಮಾಡಿದಾಗ ಹೊಸ ಹೊಸ ಕಲ್ಪನೆಗಳು ಸಮಗ್ರವಾಗಿ ಮೂಡಿಬರಬೇಕು. ಇದು ಉತ್ತರೋತ್ತರವಾಗಿ ಕಲೆಗೂ ಒಂದು ಹಿರಿಮೆಯನ್ನು ತಂದುಕೊಡುತ್ತದೆ.

◆ **ಪುನರಾವರ್ತನೆಯ ಬಗೆಗೆ ವಿಮರ್ಶಕರಲ್ಲಿ ಮತ್ತು ಜನಸಾಮಾನ್ಯರಲ್ಲಿ ಭಿನ್ನ ನಿಲುವಿದೆ. ತಮ್ಮ ಪ್ರಕಾರ ಯಕ್ಷಗಾನದಲ್ಲಿ ಒಂದು ಪದ್ಯದ ಅಭಿನಯದಲ್ಲಿ ಪುನರಾವರ್ತನೆ ಹೇಗಿರಬೇಕು?**

□ ಪುನರಾವರ್ತನೆ ಯಾಂತ್ರಿಕವಾಗಿರಬಾರದು. ಅದರಲ್ಲಿ ಕಲ್ಪನೆಯ ಕೂಸು ಅಡಗಿರಬೇಕು. ಕರ್ನಾಟಕ ಸಂಗೀತದಲ್ಲಿ ಸಂಗತಿಗಳು ಬಂದಂತೆ ಪುನರಾವರ್ತನೆಗಳು ಕಲಾವಿದನ ಪ್ರತಿಭಾ ಸಾಮರ್ಥ್ಯದಿಂದ ಕಲ್ಪನಾ ವಿಲಾಸದಿಂದ ಬಂದರೆ ಚೆನ್ನಾಗಿಯೇ ಇರುತ್ತದೆ. ಆಗ ಅದು ರಸಿಕರಿಗೆ ಸಂತೋಷವನ್ನು ಕೊಡುತ್ತದೆ. ಇಲ್ಲವಾದರೆ ಬರೇ ಕಸರತ್ತು ಆಗುತ್ತದೆ.

◆ **ತಾವು ತಾಳಮದ್ದಳೆಯ ಅರ್ಥವನ್ನು ಹೇಳಿದ್ದೀರೆಂದು ಕೇಳಿದ್ದೇನೆ. ತಾಳಮದ್ದಳೆಯಲ್ಲಿ ಅರ್ಥ ಹೇಳಿದ ಮತ್ತು ಕೇಳಿದ ಅನುಭವವನ್ನು ವಿವರಿಸುತ್ತೀರಾ?**

□ ನಾಟ್ಯಶಾಸ್ತ್ರದ ಮೂಲಕ, ನನ್ನ ಓದಿನ ಮೂಲಕ ಹಾಗೂ ತಿರುಗಾಟದ ಮೂಲಕ ಬಂದ ಅರಿವಿನಿಂದ ಹೇಳುವುದಾದರೆ ಆಶು ಸಂಭಾಷಣೆ ಇರುವ ಏಕೈಕ ಭಾರತೀಯ ರಂಗಕಲೆ ಯಕ್ಷಗಾನ. ಅದರಲ್ಲೂ ತಾಳಮದ್ದಳೆಯ ಆಶುವೈಭವ ಅಸಾಧಾರಣವಾದದ್ದು. ಖ್ಯಾತ ಅರ್ಥಧಾರಿಗಳಾದ ಜಿ.ಎಸ್. ಹೆಗಡೆ, ಮೂಡಂಬೈಲು, ಜೋಶಿ, ಮಹಾಬಲ ಹೆಗಡೆ, ಉಮಾಕಾಂತ ಭಟ್, ದಿವಾಕರ ಹೆಗಡೆ ಮುಂತಾದವರೆಲ್ಲರ ಪರಿಚಯ ಸ್ನೇಹದಿಂದ ನಾನು ತಾಳಮದ್ದಳೆಯಲ್ಲಿ ಭಾಗವಹಿಸುವಂತಾಯಿತು. ತಾಳಮದ್ದಳೆ ಕೇಳಿ ಹಾಗೂ ಅರ್ಥಹೇಳಿ ಎರಡರಲ್ಲೂ ರಸಾನಂದವನ್ನು ಅನುಭವಿಸಿದ್ದೇನೆ. ತಾಳಮದ್ದಳೆಯಲ್ಲಿ ಪಾತ್ರ ಗೆಲ್ಲಬೇಕೆಂಬ ಜಿದ್ದಾಜಿದ್ದಿ ಇರಬಾರದು. ಒಟ್ಟೂ ತಾಳಮದ್ದಳೆ ಗೆಲ್ಲಬೇಕು. ಪಾತ್ರದ ಸಮರ್ಥನೆ ಯುಕ್ತಾಯುಕ್ತ ವಿವೇಚನೆಯಿಂದ ಕೂಡಿರಬೇಕು. ಕೆಲವು ಅರ್ಥಧಾರಿಗಳ ಮಾತಂತೂ ನನಗೆ ಬೆರಗನ್ನು ಹುಟ್ಟಿಸಿದೆ. ಹಿರಿಯರಾದ ಶೇಣಿ ಗೋಪಾಲಕೃಷ್ಣ ಭಟ್, ಪ್ರಭಾಕರ ಜೋಶಿ ಮುಂತಾದವರ ಅರ್ಥ ಮೆಚ್ಚಿಕೊಂಡಿದ್ದೇನೆ. ಹೊಸ ಪೀಳಿಗೆಯವರಲ್ಲಿ ವಿದ್ವಾನ್ ಉಮಾಕಾಂತ ಭಟ್, ದಿವಾಕರ ಹೆಗಡೆ ಇವರನ್ನು ಮೆಚ್ಚಿದ್ದೇನೆ.

◆ **ಯಕ್ಷಗಾನದ ತಾಳಮದ್ದಳೆಯಲ್ಲಿ ಶೇಣಿಯವರಿಗೆ ಅಗ್ರಮಾನ್ಯ ಸ್ಥಾನ. ತಾವು ಅವರ ಅರ್ಥಗಾರಿಕೆಯ ಬಗೆಗೆ ಏನೆನ್ನುತ್ತೀರಿ?**

□ ಶೇಣಿ ಗೋಪಾಲಕೃಷ್ಣ ಭಟ್‌ರ ಅರ್ಥಗಾರಿಕೆ ಮಹತ್ತರವಾದುದು. ಅವರ ಮಾತಿನ ಓಘ, ವಿಚಾರ ವೈಶಾಲ್ಯ, ಆಳವಾದ ಪುರಾಣ ಜ್ಞಾನ, ಮಾತನಾಡುವಾಗ ಮುಖದಲ್ಲಿ ಹೊಮ್ಮುವ ಕಾಂತಿ ಮೆಚ್ಚತಕ್ಕದ್ದು. ನಾನು ಒಂದೆರಡು ಕಡೆ ಅವರೊಂದಿಗೆ ಅರ್ಥವನ್ನೂ ಹೇಳಿದ್ದೇನೆ.

◆ **ತಾಳಮದ್ದಳೆಯಲ್ಲಿಯೂ ಹಸ್ತಾಭಿನಯವನ್ನು ಪ್ರಯೋಗಿಸಬೇಕೆಂಬ ಒಂದು ಪಂಥವಿದೆ. ಹಸ್ತಾಭಿನಯವನ್ನು ಉಪಯೋಗಿಸಿ ತಾಳಮದ್ದಳೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಸಾಧ್ಯವೇ?**

❑ ಉತ್ತರ ಕನ್ನಡದ ಕಡೆ ಈ ಬಗೆಯ ಹಸ್ತಾಭಿನಯದ ಬಳಕೆ ಇದೆ. ಭಾಗವತ ಪದ್ಯ ಹೇಳುವಾಗ ಕುಳಿತಲ್ಲೇ ಹಸ್ತಗಳ ಮೂಲಕ ಅಭಿನಯಿಸಿ ತೋರಿಸುತ್ತಾರೆ. ಉತ್ತರ ಕನ್ನಡದ ಕಲಾವಿದರ ಮಾತುಗಾರಿಕೆಯಲ್ಲಿ ಭಾವುಕತೆ ಪ್ರಧಾನವಾದರೆ ದಕ್ಷಿಣ ಕನ್ನಡದ ಕಲಾವಿದರ ಮಾತುಗಾರಿಕೆಯಲ್ಲಿ ವಿಚಾರವಿಮರ್ಶೆಗಳು ಪ್ರಧಾನವಾಗಿದೆ.

◆ **ತಾಳಮದ್ದಳೆಯಲ್ಲಿ ಆಧುನಿಕ ವೈಚಾರಿಕತೆಯನ್ನು ರಂಗಪ್ರದರ್ಶನಕ್ಕಿಂತ ವಿಸ್ತಾರವಾಗಿ ತರುವುದಕ್ಕೆ ಅವಕಾಶವಿದೆಯೆಂದು ತಮಗೆ ಅನ್ನಿಸುವುದಿಲ್ಲವೇ?**

❑ ರಂಗದಲ್ಲಿ ಮಾತು ಕಡಿಮೆ ಇರುತ್ತದೆ. ಆದರೆ ರಂಗೋಚಿತವಾದ ಕುಣಿತ, ಮಾತಿಗೆ ಪೂರಕವಾದ ಅಭಿನಯಗಳೆಲ್ಲ ಇರುತ್ತವೆ. ಅವೆಲ್ಲವುಗಳಿಂದ ಅಲ್ಲಿ ರಸಸೃಷ್ಟಿಯಾಗುತ್ತದೆ. ಆದರೆ ತಾಳಮದ್ದಳೆಯಲ್ಲಿ ರಸಸೃಷ್ಟಿ ಮಾತಿನ ಮೂಲಕವೇ ಆಗಬೇಕಾಗುತ್ತದೆ. ಭಾಗವತನ ಹಾಡಿನ ಶ್ರುತಿಗೆ ಹೊಂದಿಬರುವ ಭಾವಪೂರಿತ ಮಾತು ಸಹೃದಯನ ಮನಸ್ಸನ್ನು ನಾಟುತ್ತದೆ. ಅಲ್ಲಿ ಬರುವ ವೈಚಾರಿಕತೆ ಸಹೃದಯನ ಬುದ್ಧಿಗೆ ಗ್ರಾಸವನ್ನು ಕೊಡುತ್ತದೆ.

◆ **ನೃತ್ಯಾಭಿನಯವನ್ನೇ ಅರಿಯದ ತಾಳಮದ್ದಳೆ ಅರ್ಥಧಾರಿಗಳು ವೇಷ ಮಾಡಿ ರಂಗಸ್ಥಳವನ್ನು ಏರುತ್ತಿದ್ದಾರೆ. ವ್ಯಾವಹಾರಿಕ ಕಾರಣಕ್ಕಾಗಿ ಮಾಡುವ ಈ ಕ್ರಮ ತಪ್ಪಲ್ಲವೇ?**

❑ ಇದು ತಪ್ಪು. ಮೊದಲಿಗೆ ತೆಂಕು ತಿಟ್ಟಿನಲ್ಲಿ ಪ್ರಾರಂಭವಾದ ಈ ಪರಿ ಬೇರೆ ಕಡೆಗೂ ವ್ಯಾಪಿಸುತ್ತಿದೆ. ಇದರಿಂದ ಪ್ರದರ್ಶನ ಸೊರಗುತ್ತದೆ. ಆಂಗಿಕಾಭಿನಯ ನಾಶವಾಗುತ್ತದೆ. ಮಾತನ್ನು ಕೇಳಲೆಂದೇ ಬರುವ ಪ್ರೇಕ್ಷಕ ವರ್ಗವನ್ನು ಗಮನದಲ್ಲಿಟ್ಟುಕೊಂಡು ಮಾಡುವ ಇಂತಹ ಪ್ರಯತ್ನಗಳು ದೀರ್ಘ ಕಾಲದಲ್ಲಿ ಗೆಲ್ಲಲಾರವು.

◆ **ಇನ್ನು ತಮ್ಮ 'ಏಕವ್ಯಕ್ತಿ ಯಕ್ಷಗಾನ'ದ ಕುರಿತು– 'ಏಕವ್ಯಕ್ತಿ ಯಕ್ಷಗಾನ'ವನ್ನು ಪ್ರಯೋಗಿಸುವ ಪ್ರೇರಣೆ ಹೇಗೆ ಬಂತು?**

❑ ನಾನು ಮೊದಲೇ ತಿಳಿಸಿದಂತೆ ಇಂಜಿನಿಯರಿಂಗ್ ಓದುತ್ತಿರುವ ಸಂದರ್ಭದಲ್ಲಿ ನಾಟ್ಯಶಾಸ್ತ್ರವನ್ನು ಓದಿದ ನನಗೆ ದೇಶೀಯ ಸಾಂಪ್ರದಾಯಿಕ ರಂಗಕಲೆಗಳ ರಹಸ್ಯದ ಅರಿವಾಯಿತು. ಕಥಕ್, ಕೂಚಿಪೂಡಿ, ಮೋಹಿನಿ ಅಟ್ಟಂ, ಸತ್ರೀಯಗಳಂತೆ ನಮ್ಮ ನಾಡಿನ ಯಕ್ಷಗಾನವು ಏಕವ್ಯಕ್ತಿ ಮಾಧ್ಯಮದಲ್ಲಿ ಹಾಯ್ದು ಬಂದರೆ ಹೊಸತಾದ ನರ್ತನ ಪ್ರಕಾರವೊಂದು ಕರ್ನಾಟಕಕ್ಕೆ ದೊರೆಯಬಹುದೆಂಬ ಯೋಚನೆ ಬಂದಿತು. ಆದರೆ ಇದು ಮತ್ತೊಂದು ನೃತ್ಯಪದ್ಧತಿಯಾದರೆ ಯಕ್ಷಗಾನದ ಮೂಲಭೂತ ಸತ್ವವಾದ ನಾಟ್ಯ ಸ್ವರೂಪ,

ಆಶು ವೈಭವ ಮರೆಯಾಗುತ್ತದೆಂಬುದನ್ನು ಗಮನಿಸಿ ನಾನು ಆವಿಷ್ಕರಿಸ ಬೇಕಿರುವ ರೂಪವು ನಾಟ್ಯಪದ್ಧತಿ ಆಗಬೇಕೇ ಹೊರತೂ ನರ್ತನ ವಿಧಾನ ಆಗಬಾರದು ಎಂದು ನಿಶ್ಚಯಿಸಿದೆ. ಈ ಯೋಚನೆ ಬಹಳ ಕಾಲದಿಂದ ನನ್ನನ್ನು ಕಾಡುತ್ತಿದ್ದರೂ ಸರಿಯಾದ ಆಸಕ್ತರಾದ ಕಲಾವಿದರು ದೊರೆಯದೇ ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಹೀಗಿರುವಾಗ 'ಕಾವ್ಯಚಿತ್ರ ಯಕ್ಷಗಾನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪರಿಚಿತರಾದ ಮಂಟಪ ಪ್ರಭಾಕರ ಉಪಾಧ್ಯರು ವಯಸ್ಸಾದರೂ ಸ್ತ್ರೀವೇಷದಲ್ಲೇ ಮುಂದುವರಿಯಬೇಕೆಂಬ ತಮ್ಮ ಮನಸ್ಸಿನ ಬಯಕೆಯನ್ನು ನನ್ನಲ್ಲಿ ಬಿಚ್ಚಿಟ್ಟರು. ಆಗ ನಾನು ಸೂಚಿಸಿದ್ದು ನನ್ನ ಕಲ್ಪನೆಯ ನಾಟ್ಯ ಪದ್ಧತಿಯಾದ 'ಏಕವ್ಯಕ್ತಿ ಯಕ್ಷಗಾನ' – 'ಭಾಮಿನಿ'ಯ ರೂಪ ರೇಖೆಗಳನ್ನು ತಿಳಿಸಿದೆ. ಮಂಟಪರು ಒಪ್ಪಿದ್ದೇ ಆಶ್ಚರ್ಯ. ಯಕ್ಷಗಾನ ಸ್ತ್ರೀ ವೇಷದ ಚತುರ್ವಿಧ ಅಭಿನಯದ ಎಲ್ಲಾ ಸಾಧ್ಯತೆಗಳ ಅನ್ವೇಷಣೆಗೆ ಹೊರಟ ನಮಗೆ ಸಾತ್ವಿಕ ಅಭಿನಯವನ್ನೇ ಅನುರೋಧಿಸಿ ಎಲ್ಲವೂ ಬರಬೇಕು ಎಂಬುದು ಇದ್ದಿತ್ತು. ಶುದ್ಧ ಸತ್ವವೂ ಉಕ್ಕೇರಿ ನೆಲೆನಿಂತ ಮೇಲೆ ಎಲ್ಲವೂ ಬಂದಂತೆ ಎನ್ನುವುದು ನನ್ನ ತತ್ವ ಅದಕ್ಕಾಗಿಯೇ ಅದೇ ರೀತಿ ತಯಾರಿ ಮಾಡಿದೆವು. ನಮ್ಮ ತರಬೇತಿ ಕಾಲದಲ್ಲೇ ಈ ಖಚಿತ ನಿಲುವಿನಿಂದ ಹೊರಟು ಹೊಸ ಸಾಧನೆಯ ಕಡೆಗೆ ಹೆಜ್ಜೆಯನ್ನು ಇರಿಸಿದೆವು.

ಅಂತೂ 2000ದ ಮಾರ್ಚ್ ಹೊತ್ತಿಗೆ 'ಭಾಮಿನೀ' ಏಕವ್ಯಕ್ತಿ ಯಕ್ಷಗಾನ ಕ್ಕೊಂದು ರೂಪ ಬಂದಿತು. ನಾಟ್ಯಶಾಸ್ತ್ರದಲ್ಲಿ ಹೇಳಿದ ಅಷ್ಟನಾಯಿಕೆಯರ ತತ್ವವನ್ನು ಮೊತ್ತಮೊದಲ ಬಾರಿಗೆ ಯಕ್ಷಗಾನದಲ್ಲಿ ಅಳವಡಿಸುವ ಪ್ರಯತ್ನ ಇದರಲ್ಲಿತ್ತು. ರಾಗ ತಾಳಗಳ ನಿರ್ದೇಶನದೊಡನೆ ಸಂಗೀತ ಸಂಯೋಜನೆ ಯನ್ನೂ ಮಾಡಿ ಭಾಗವತಿಕೆ ಹೊಣೆಯನ್ನು ವಿದ್ವಾನ್ ಗಣಪತಿ ಭಟ್ಟರೆದುರು ಹಾಡಿ ತೋರಿಸಿ ಅವರು ಕೂಡ ತಮ್ಮ ವಿದ್ವತ್ತು ಮತ್ತು ಕಲ್ಪನೆಗಳ ಮೂಲಕ ಬಳಸಿ ಬೆಳೆಸಿದರು. ಹೀಗೆ 'ಭಾಮಿನೀ' ಲೋಕಾರ್ಪಣೆ ಆಯಿತು.

◆ **ನಮ್ಮ ಯಕ್ಷಗಾನ ವಲಯದಲ್ಲಿ 'ಯಕ್ಷಗಾನವೆಂದರೆ ಬಹುಜನರಿಂದ ನಡೆಯುವ ಸಮೂಹ ಕಲೆ' ಎಂಬುದಿದೆ. ಆಗ 'ಏಕವ್ಯಕ್ತಿಯಕ್ಷಗಾನ' ಎಂದರೆ ವಿರೋಧಾಭಾಸ ಪೂರ್ಣವಾದ ಹೆಸರೆಂದು ಕೆಲವರ ಆಕ್ಷೇಪ–ಏನೆನ್ನುತ್ತೀರಿ?**

□ ನಮ್ಮ ಏಕವ್ಯಕ್ತಿ ಯಕ್ಷಗಾನದ ಜಾಡು ಏಕಪಾತ್ರಾಭಿನಯಕ್ಕಿಂತ ಭಿನ್ನ. ಈ ಮೊದಲೇ ಪ್ರದರ್ಶನ ಗೊಂಡಿದ್ದು ಜಿ.ಆರ್.ಪಾಂಡೇಶ್ವರ ಅವರ 'ಮಾರಾವತಾರ', ಉದ್ಯಾವರ ಮಾಧವಾಚಾರ್ಯರ 'ಪಾಂಚಾಲಿ', ಗುರು ಸಂಜೀವ ಸುವರ್ಣರು ಆಯ್ದುಕೊಂಡಿರುವ 'ಪಂಚವಟಿ'ಯ ಚೌಕಟ್ಟಿಗೂ ನಾವು ಪ್ರಯೋಗಿಸಿದ ಏಕವ್ಯಕ್ತಿ ಯಕ್ಷಗಾನದ ಚೌಕಟ್ಟಿಗೂ ಭಿನ್ನತೆ ಇದೆ. ಸ್ತ್ರೀ ವೇಷವನ್ನು ಕೇಂದ್ರೀಕರಿಸಿ

ಸಾತ್ವಿಕಾಭಿನಯ ಮತ್ತು ಲಾಸ್ಯದ ರೀತಿಗೆ ಹೆಚ್ಚಿನ ಆದ್ಯತೆ ಕೊಟ್ಟಿದೆ. ಅದೇ ರೀತಿ ಆಂಗಿಕ ಹಾಗೂ ವಾಚಿಕದಲ್ಲೂ ಭಿನ್ನವಾಗಿದೆ. ಇನ್ನು ಹೆಸರಿನ ಬಗ್ಗೆ 'ಏಕವ್ಯಕ್ತಿ ಯಕ್ಷಗಾನ' ಎನ್ನುವುದು ಏಕಾಹಾರ್ಯ ಪ್ರಯೋಗ ಅಥವಾ ಏಕ ಭೂಮಿಕಾ ಪ್ರಯೋಗ (ಮೋನೋ ಕ್ಯಾರೆಕ್ಟರ್ ಪ್ರೊಡಕ್ಷನ್) ಎಂಬ ರೀತಿಯಲ್ಲಿ ಬಂದದ್ದು. ಇಲ್ಲಿ ಒಬ್ಬನೇ ವ್ಯಕ್ತಿ ಒಂದೇ ವೇಷದಲ್ಲಿ ಇರುತ್ತಾನೆ. ಭಾಗವತನ ಪದ್ಯದಲ್ಲಿ ಬೇರೆ ಪಾತ್ರದ ಮಾತುಗಳು ಬಂದರೂ ಇಲ್ಲಿನ ಏಕವ್ಯಕ್ತಿ ಯಕ್ಷಗಾನ ಕಲಾವಿದನು ಆ ಸಾಹಿತ್ಯಕ್ಕೆ ಉಂಟಾಗುವ ಪ್ರತಿಕ್ರಿಯೆಯನ್ನು ಅಭಿನಯಿಸುವ ಮೂಲಕ ತೋರಿಸುತ್ತಾನೆ. ಈ ಕಾರಣ ಇದು 'ಏಕವ್ಯಕ್ತಿ ಯಕ್ಷಗಾನ'. ಹಿಮ್ಮೇಳ ದಲ್ಲಿ ಇಡೀ ತಂಡವೇ ಭಾಗವಹಿಸಿ ಆ ಪಾತ್ರದ ಸಾತ್ವಿಕಾಭಿನಯಕ್ಕೆ ಎಲ್ಲ ಬಗೆಯ ಪೋಷಣೆಯನ್ನೂ ನೀಡುತ್ತದೆ.

◆ **ಏಕವ್ಯಕ್ತಿ ಯಕ್ಷಗಾನ ಎಂದರೆ ಏಕಪಾತ್ರಾಭಿನಯವೆಂದು ಕೆಲವರು ತಪ್ಪು ತಿಳಿದಂತಿದೆ; ಇದು ಏಕಪಾತ್ರಾಭಿನಯ ಹೇಗೆ ಅಲ್ಲ ಎಂದು ಇನ್ನಷ್ಟು ಸ್ಪಷ್ಟಪಡಿಸಬಹುದೇ?**

□ ಇದನ್ನು ಈಗಾಗಲೇ ವಿವರಿಸಿದ್ದೇನೆ. 'ಏಕಪಾತ್ರಾಭಿನಯ' ಎಂದರೆ ಒಬ್ಬನೇ ಹಲವು ಪಾತ್ರಗಳ ಒಂದೇ ವೇದಿಕೆಯ ಮೇಲೆ ಒಂದೇ ವೇಷದಲ್ಲಿದ್ದು ಸಾದರಪಡಿಸುತ್ತಾನೆ. ಆದರೆ 'ಏಕವ್ಯಕ್ತಿ'ಯಲ್ಲಿ ಒಬ್ಬನೇ ವ್ಯಕ್ತಿ ಒಂದೇ ಪಾತ್ರವಾಗಿ ಅಭಿನಯಿಸುತ್ತಾನೆ. ಕಥಾಮುಂದುವರಿಕೆಗೆ ಎದುರು ಪಾತ್ರದ ಸಾಹಿತ್ಯವಿದ್ದರೂ ಅಭಿನಯವಿರುವುದಿಲ್ಲ.

◆ **ತಾವು ಏಕವ್ಯಕ್ತಿ ಯಕ್ಷಗಾನದಲ್ಲಿ ಯಕ್ಷಗಾನೀಯತೆಯನ್ನು ಉಳಿಸಿಕೊಂಡೇ ಸಾಧ್ಯವಾದ ಸುಧಾರಣೆಗಳನ್ನು ಸಾಧಿಸಿದ್ದೀರಿ. ಆದರೂ ಇದು ಶಾಸ್ತ್ರೀಯವಾದ ನಾಟ್ಯ-ಭರತನಾಟ್ಯದ ಪ್ರಭಾವಕ್ಕೆ ಒಳಗಾಗಿದೆ ಎಂದು ಜನ ಹೇಳುತ್ತಾರೆ. ಹೀಗೆ ಭಾಸವಾಗುವುದಕ್ಕೆ ಕಾರಣವೇನಿರಬಹುದು?**

□ ಜನರಿಗೆ ಹೀಗೆ ಭಾಸವಾಗಲು ಮೂಲ ಕಾರಣ ಆಹಾರ್ಯದಲ್ಲಿ ಆಕರ್ಷಕ ವಾಗಿ ನರ್ತನಕ್ಕೊದಗುವ ಕಚ್ಚೆ ಸೀರೆಯ ಪೋಷಾಕು, ಉಜ್ವಲವಾದ ಶಿರೋಭೂಷಣ, ಬಳುಕುವ ಜಡೆ, ಅದಕ್ಕಂಟಿ ಬಂದ ಗೊಂಡೆಗಳ ಬೆಡಗು, ಜಾರದೆ ನಿಂತರೂ ನಡುವಿಗೆ ಸುತ್ತಲ್ಪಡದೇ ವಿಲಾಸವಾಗಿ ತೊನೆದಾಡುವ ಸೆರಗಿನ ಸೊಬಗು, ಚಿಕ್ಕದಾದರೂ ಚೊಕ್ಕದೆನಿಸುವ ಭುಜಕೀರ್ತಿ ಮತ್ತು ಎದೆಯಹಾರ, ಕಂಠಹಾರ ಇತ್ಯಾದಿಗಳನ್ನು ಬಳಸಿದ್ದರಿಂದ ಅವರಿಗೆ ಇದು ಶಾಸ್ತ್ರೀಯ ನರ್ತನದ ಪಾತ್ರದಂತೆ ಕಾಣುತ್ತದೆ. ನಾವು ಈ ಎಲ್ಲ ಸುಧಾರಣೆಯ ಹಿಂದೆ ಯಕ್ಷಗಾನೀಯತೆಯನ್ನು ಗಮನದಲ್ಲಿರಿಸಿಕೊಂಡಿದ್ದೇವೆ. ಆದರೆ ಸೊರಗಿರುವ ಸ್ತ್ರೀವೇಷವನ್ನೇ ನೋಡುತ್ತಾ ಬಂದಿರುವ ನೋಡುತ್ತಿರುವ

ಪ್ರೇಕ್ಷಕರಿಗೆ ನಮ್ಮ ಸ್ತ್ರೀವೇಷ ಕಂಡಾಗ ಇದು ಭರತ ನಾಟ್ಯದ್ದು ಎಂಬ ತಪ್ಪು ತಿಳುವಳಿಕೆ ಮೂಡುತ್ತದೆ. ಇನ್ನು ಕುಣಿತದಲ್ಲಿ ಯಕ್ಷಗಾನದ ಹೆಜ್ಜೆಗಳೇ ಬಂದಿವೆ. ಆದರೆ ಅವು ಶುದ್ಧವಾಗಿವೆ. ಆಂಗಿಕ ಅಭಿನಯಗಳೆಲ್ಲ ಸೂಚ್ಯವಾಗಿ ಬರಲು ಪ್ರಯತ್ನಿಸಲಾಗಿದೆ. ವೈವಿಧ್ಯಮಯವಾದ ಕರಣಗಳ ಬಳಕೆ ಬಡಗುತಿಟ್ಟು ಯಕ್ಷಗಾನದಲ್ಲಿದ್ದರೂ ಶುದ್ಧತೆ ಇರಲಿಲ್ಲ. ಇಲ್ಲಿ ಪ್ರತಿಯೊಂದನ್ನೂ ಅಚ್ಚುಕಟ್ಟಾಗಿ, ಕಲಾತ್ಮಕವಾಗಿ, ಶುದ್ಧವಾಗಿ, ರಸೋತ್ಕರ್ಷಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಭಿವ್ಯಕ್ತಿಸಲಾಗಿದೆ. ಔಚಿತ್ಯಪ್ರಜ್ಞೆಗೆ ಹೆಚ್ಚು ಗಮನವಿರಿಸಿದ್ದು ಅದೇ ನಮಗೆ ಮಾನದಂಡವಾಗಿದೆ. ಇವತ್ತಿನ ಮೇಳಗಳ ಪ್ರದರ್ಶನದ ಸ್ತ್ರೀವೇಷದ ಪರಿ ಪೋಷಣೆಯಲ್ಲಿ ಇವೆಲ್ಲ ಮಸುಕುಮಸುಕಾಗಿದೆ. ಈ ಕಾರಣ ಜನಕ್ಕೆ ಇದು ಭಿನ್ನ ಅನ್ನಿಸುತ್ತದೆ ಅಷ್ಟೇ.

◆ **ನೃತ್ಯ ಪ್ರಕಾರವಾಗಿದ್ದ ಭರತನಾಟ್ಯ, ಕಥಕ್ ಕಲಾವಿದರೂ ಕೂಡ ನಾಟ್ಯದ ಮಹತ್ವವನ್ನು ಅರಿತುಕೊಂಡು ಇತ್ತೀಚೆಗೆ ಒಂದು ಕಥಾನಕವನ್ನು ಒಂದಕ್ಕಿಂತ ಹೆಚ್ಚು ಕಲಾವಿದರು ಕೂಡಿ ಪ್ರದರ್ಶಿಸಲು ತೊಡಗಿದ್ದನ್ನು ಕಾಣಬಹುದು. ಇದಕ್ಕೆ ವಿಲೋಮವಾಗಿ ನಾಟ್ಯ ಪ್ರಕಾರವಾದ ಯಕ್ಷಗಾನವು ಒಂದು ನೃತ್ಯ ಪ್ರಕಾರವಾಗಿ ಬೆಳೆಯುವ ಸಾಧ್ಯತೆ ಇದೆಯೇ?**

□ ಸಾಧ್ಯತೆ ಇದೆ. ಇವತ್ತು ನಾವು ಕಾಣುವ ನೃತ್ಯ ಪ್ರಕಾರಗಳಾದ ಭರತ ನಾಟ್ಯ, ಕಥಕ್, ಕೂಚುಪೂಡಿ, ಒಡಿಸ್ಸಿ, ಮೋಹಿನಿಅಟ್ಟಂ, ಮಣಿಪುರಿ ಮುಂತಾದವೆಲ್ಲ ಒಂದು ಕಾಲದಲ್ಲಿ ಇದೇ ಹೆಸರಿನಲ್ಲಿ ಇಲ್ಲವೇ ಬೇರೆ ಹೆಸರಿನಲ್ಲಿ ನಮ್ಮ ಯಕ್ಷಗಾನದ ರೀತಿಯ ಪ್ರಾದೇಶಿಕ ನಾಟ್ಯ ಪದ್ಧತಿ ಆಗಿದ್ದವು. ಅವೆಲ್ಲವೂ ರಂಗ ಕಲೆಯಿಂದ ಹೊರಬಂದು ನರ್ತನ ಪ್ರಕಾರಗಳಾದವು. ಈ ಕಾರಣ ಯಕ್ಷಗಾನವೂ ಈ ರೀತಿ ಹೊರಳಬಹುದು. ಆದರೆ ಅದರ ಅಗತ್ಯ ಕಾಣಿಸು ವುದಿಲ್ಲ. ಈ ಬಗ್ಗೆ ಉಡುಪಿಯಲ್ಲಿ ಮೂರು ದಿನಗಳ ಕಾಲ ನಡೆದ ಗೋಷ್ಠಿಯಲ್ಲಿ ಡಾ.ಪದ್ಮಾ ಸುಬ್ರಹ್ಮಣ್ಯಂ ಅವರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ.

◆ **ಕೊನೆಯದಾದ ಪ್ರಶ್ನೆ – ಈವರೆಗೆ ಯಕ್ಷಗಾನದ ಕುರಿತು ಚಿಂತಿಸಿದವರೆಲ್ಲ (ಡಾ.ಕಾರಂತ್ ಡಾ.ನಂಬಿಯಾರ್ ಮತ್ತು ಶಂಭು ಹೆಗಡೆಯವರನ್ನು ಹೊರತು ಪಡಿಸಿದರೆ) ಅಕಾಡೆಮಿಕ್ ಬರಹಗಳಿಂದ ತಮ್ಮ ಚಿಂತನೆಗಳನ್ನು ಪ್ರಕಟಿಸಿದರೇ ಹೊರತೂ ಪ್ರಾಯೋಗಿಕವಾಗಿ ತಮ್ಮ ಚಿಂತನೆಗಳನ್ನು ಒರೆಗೆ ಹಚ್ಚುವ ಪ್ರಯತ್ನಕ್ಕಿಳಿಯಲಿಲ್ಲ. ತಾವು ಈ ರಂಗಭೂಮಿಯ ಕುರಿತು ಚಿಂತನೆ ಮಾಡು ವುದರ ಜೊತೆಗೆ ಪ್ರಯೋಗಕ್ಕೂ ಇಳಿಯುವ ಸಾಹಸವನ್ನು ಮಾಡಿದ್ದೀರಿ. ಈ ಸಂದರ್ಭ ದಲ್ಲಿ ಈ ರಂಗಭೂಮಿ ಹಾಗೂ ಯಕ್ಷಗಾನಾಸಕ್ತರ ಸಹಾಯ ಸಹಕಾರ ಹೇಗಿತ್ತು?**

☐ ಯಕ್ಷಗಾನದ ಬಗೆಗೆ ಚಿಂತನೆ ಮಾಡುವ ಅಥವಾ ಅಕಾಡೆಮಿಕ್ ಬರಹಗಳನ್ನು ಸಿದ್ಧಪಡಿಸುವ ಬಗೆಗಿಂತ ಪ್ರಯೋಗಕ್ಕೆ ಇಳಿದಾಗ ಹೆಚ್ಚು ಅಥೆಂಟಿಕ್ ಆಗಿ ವಿಚಾರಗಳನ್ನು ಅರಿತುಕೊಳ್ಳಬಹುದು. 60ರ ದಶಕದಲ್ಲಿ ಶಿವರಾಮ ಕಾರಂತರು ನಡೆಸಿದ ಪ್ರಯೋಗ 'ಯಕ್ಷಗಾನ ಬ್ಯಾಲೆ'ಯ ಸೃಷ್ಟಿಗೆ ಕಾರಣವಾಯಿತು. ಆ ಬಗ್ಗೆ ಸಾಕಷ್ಟು ಚರ್ಚೆಯು ನಡೆದವು. ಅವರ ಪ್ರಯೋಗ ಫಲಿತ ಮುಂದೆ ಯಕ್ಷಗಾನ ರಂಗದ ಮೇಲೆ ಸಾಕಷ್ಟು ಉತ್ತಮವೇ ಆಗಿದೆ. 'ಯಕ್ಷರಂಗ'ದ ಸೃಷ್ಟಿ ಹಾಗೂ ಅದು ಮುಂದೆ ಮುಂದೆ ಅಪ್ಪಿಕೊಂಡ ಬದಲಾವಣೆಗಳು ತುಂಬಾ ಸ್ವಾಗತಾರ್ಹ. ಡಾ.ಕಾರಂತರ ಚಿಂತನೆಯನ್ನು ಕೆಲವು ವೃತ್ತಿರಂಗದ ಕಲಾವಿದರು ತಮ್ಮ ತಿಳಿವಿಗೆ ಅನುಸಾರ ಅಳವಡಿಸಿಕೊಂಡಿದ್ದಾರೆ. ಪರೋಕ್ಷ ವಾಗಿ ಕಾರಂತರಿಂದ ಯಕ್ಷಗಾನ ರಂಗದಲ್ಲಿ ಆತ್ಮವಿಮರ್ಶೆ ಬೆಳೆಯಿತು. ವೇಷಗಾರಿಕೆಯಲ್ಲಿ –ಹೆಚ್ಚಾಗಿ ಬಡಗುತಿಟ್ಟಿನ ಮೇಲೆ, ಅವರ ಸುಧಾರಣೆಯ ಪ್ರಭಾವವಿದೆ. ಯಕ್ಷರಂಗವೂ ಕೂಡ ಈಗ ಒಂದು ಹರವನ್ನು ಗಳಿಸಿಕೊಂಡಿದೆ. ನಮ್ಮ ಏಕವ್ಯಕ್ತಿ ಯಕ್ಷಗಾನ ಪ್ರಯೋಗವು ಅಭಿಜಾತದ ಕಡೆಗೆ ಒಲವನ್ನು ಇರಿಸಿಕೊಂಡಿದ್ದು. ಅದರ ತಳಹದಿ ಬಡಗುತಿಟ್ಟು ಸಂಪ್ರದಾಯಿಕ ಯಕ್ಷಗಾನ ರಂಗವೇ. ನಮ್ಮ ಪ್ರದರ್ಶನದ ಬಗ್ಗೆ ಪರ–ವಿರೋಧಗಳೆರಡೂ ಬಂದಿವೆ; ಚರ್ಚೆಗಳು ಸಾಕಷ್ಟಾಗಿವೆ. ಐದು ಸಾವಿರದಷ್ಟು ಪತ್ರಗಳನ್ನು ನೀಡಿ ಅಭಿಪ್ರಾಯ ಗಳನ್ನು ಕೂಡ ಪಡೆದುಕೊಳ್ಳಲಾಗಿದೆ. ಇವುಗಳಲ್ಲಿ ಸಿಹಿ–ಕಹಿಗಳೆರಡೂ ಇವೆ. ನಮ್ಮ 'ಏಕವ್ಯಕ್ತಿ ಯಕ್ಷಗಾನ'ವನ್ನು 'ಮನೆಯಂಗಳದಿ ಯಕ್ಷನಾಟ್ಯ'ವಾಗಿ ರೂಪಿಸಿದಾಗ ಯಕ್ಷಗಾನಾಸಕ್ತರ ಸಹಾಯ ಸಹಕಾರ ಎರಡೂ ಲಭಿಸಿದೆ. ನಮ್ಮ ಪ್ರಯೋಗ ಸರಣಿ ಒಂದು ಆರಾಧನೆಯಾಗಿ, ಚಾಕ್ಷುಷಿ ಯಾಗದಂತೆ ಪರಿಣಮಿಸಿತು. ಜನರು ಮೈಯೆಲ್ಲ ಕಣ್ಣಾಗಿ ಮನವೆಲ್ಲ ಹಣ್ಣಾಗಿ ಆಸ್ವಾದನೆ ಮಾಡಿದ್ದು ನಮ್ಮ ಆತಂಕವನ್ನು ನಿವಾರಿಸಿದೆ. ಎದಿರು ವೇಷವಿಲ್ಲದ ಕಾರಣ ಯಕ್ಷಗಾನ ಅಲ್ಲ ಎಂದವರೂ ಇದ್ದಾರೆ. ಆದರೆ ಕುಣಿತ, ವೇಷಗಾರಿಕೆಗಳಿಲ್ಲದ ತಾಳಮದ್ದಳೆ ಯಕ್ಷಗಾನದ ಶ್ರೇಷ್ಠ ಪ್ರಭೇದವಾಗಿರುವಾಗ ನಮ್ಮ ಪ್ರಯೋಗಕ್ಕೆ ಯಕ್ಷಗಾನವೇ ಅಲ್ಲ ಎಂಬ ಅಕ್ಷೇಪ ಸಲ್ಲದು ಎಂದವರೂ ಇದ್ದಾರೆ. ಈ ಕಾರಣ ನಮಗೆ ಕಳವಳ ಇಲ್ಲ. ಕೃತ ಕೃತ್ಯತೆ ಇದೆ. ಕೃತಜ್ಞತೆ ಇದೆ.

◆ **ಇಷ್ಟು ಹೊತ್ತಿನ ವರೆಗೆ ತಮ್ಮ ಅಮೂಲ್ಯ ವಿಚಾರ ಧಾರೆಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಕ್ಕೆ ಧನ್ಯವಾದಗಳು.**

☐ ಆಗಲಿ ವಂದನೆಗಳು.

■

ಏಕವ್ಯಕ್ತಿಯ ಮಂಟಪ

ಯಕ್ಷಗಾನ ರಂಗದಲ್ಲಿ ಪುರುಷವೇಷದಷ್ಟೇ ಸ್ತ್ರೀವೇಷವೂ ಪ್ರಧಾನವಾದದ್ದೇ ಸರಿ. ಸಾಂಪ್ರದಾಯಿಕ ಕಲೆಗಳಲ್ಲೆಲ್ಲ ಪುರುಷರೇ ಸ್ತ್ರೀ ವೇಷವನ್ನು ಧರಿಸುವುದು ಸರ್ವಸಾಮಾನ್ಯ. ಯಕ್ಷಗಾನವೂ ಇದಕ್ಕೆ ಹೊರತಲ್ಲ. ಎಳೆಯ ಹರೆಯದಲ್ಲೇ ಮೇಳವನ್ನು ಸೇರಿಕೊಳ್ಳುವ ಮಕ್ಕಳು ಅಲ್ಲಿನ ಎಳೆಯ ಕಲಾವಿದರ ಒಡನಾಟದಲ್ಲಿ ಭಾಗವತರ ಹಾಗೂ ಮದ್ದಳೆಗಾರರ ಮಾರ್ಗದರ್ಶನದಲ್ಲಿ ಮೊದಲಿಗೆ ಕೋಡಂಗಿಯಾಗಿ ಮುಂದೆ ಬಾಲಗೋಪಾಲರಾಗಿ ಮತ್ತೆ ಪೀಠಿಕೆ ಸ್ತ್ರೀವೇಷಧಾರಿಗಳಾಗಿ ಕಾಣಿಸಿಕೊಳ್ಳುವುದು ಕಲಾವಿದನೊಬ್ಬನ ಪ್ರಾರಂಭಿಕ ಹಂತವಾಗಿರುತ್ತದೆ. ಆತ ಸುಂದರಕಾಯನಾಗಿದ್ದರೆ ಸ್ವಲ್ಪಕಾಲ ಸ್ತ್ರೀ ವೇಷದಲ್ಲೇ ಇರುವುದು ಇಲ್ಲವಾದರೆ ಪುಂಡು ವೇಷಕ್ಕೋ ಪುರುಷವೇಷಕ್ಕೋ ಪ್ರವೇಶಿಸುವುದು ಸಾಮಾನ್ಯ. ಹೆಚ್ಚಿನವರಿಗೆ ಇದೇ ಒಂದು ಜಿಗಿಮಣೆಯಾಗಿ ಎರಡನೇ ವೇಷಕ್ಕೆ ರಹದಾರಿಯಾಗುತ್ತದೆ. ಆದರೆ ಕೆಲವೇ ಕೆಲವು ಕಲಾವಿದರಿಗೆ ಈ ಸ್ತ್ರೀ ಪಾತ್ರಗಳೇ ತಮ್ಮ ಕಲಾಜೀವನದ ಸರ್ವಸ್ವವಾಗಿ ಆ ಪಾತ್ರಗಳಿಂದ ಕಲಾಲೋಕದ ಹೆಗ್ಗಳಿಕೆಯನ್ನು ಗಳಿಸಿಕೊಳ್ಳುತ್ತಾರೆ. ಅಂತಹ ಕಲಾವಿದರು ನಿರಂತರ ಪರಿಶ್ರಮದಿಂದ ತನ್ನ ದೇಹದ ಸೌಷ್ಟವ ಕೆಡದಂತೆ ನೋಡಿಕೊಂಡು ವಯಸ್ಸು ಹೆಚ್ಚಿದರೂ ಸ್ತ್ರೀವೇಷ ಆಭಾಸವಾಗದಂತೆ ನೋಡಿಕೊಳ್ಳುತ್ತಾರೆ ಮತ್ತು ಆ ಬಗೆಯ ಸ್ತ್ರೀ ಪಾತ್ರಗಳಲ್ಲಿ ಮಿಂಚುತ್ತಿರುತ್ತಾರೆ. ಹೀಗೆ ಸ್ತ್ರೀ ಪಾತ್ರಗಳ ಎರಕದಲ್ಲೆ ಮಿಂಚಿದ ಕಲಾವಿದರುಗಳಲ್ಲಿ ಪ್ರಮುಖರಾದವರೆಂದರೆ ದಿ. ಹಾರಾಡಿ ನಾರಾಯಣ ಗಾಣಿಗ, ದಿ, ಕೆರೆಮನೆ ಗಜಾನನ ಹೆಗಡೆ, ಕೋಟ

ವೈಕುಂಠ, ಅರಾಟೆ ಮಂಜು, ಕೊಳ್ಳೂರು ರಾಮಚಂದ್ರ ರಾವ್, ಮಂಟಪ ಪ್ರಭಾಕರ ಉಪಾಧ್ಯಾಯ, ಪಾತಾಳ ವೆಂಕಟರಮಣ ಭಟ್ಟ, ರಾಮನಾಯರಿ, ದಯಾನಂದ ನಾಗೂರು, ಶಿವಕುಮಾರ್ ಬೇಗಾರ್ ಮುಂತಾದವರು. ಆದರೆ ಇವರಲ್ಲೆಲ್ಲಾ ಭಿನ್ನರಾಗಿ ತಮ್ಮ ಏಕವ್ಯಕ್ತಿ ಯಕ್ಷಗಾನದ ಮೂಲಕ ಬೆಳವಣಿಗೆಯ ಉತ್ತುಂಗಕ್ಕೆ ಏರಿ ಸ್ತ್ರೀಪಾತ್ರ ನಿರ್ವಹಣೆಯಲ್ಲಿ ಅಪ್ರತಿಮರೆಂಬುದನ್ನು ಸಾಬೀತು ಪಡಿಸಿದವರೆಂದರೆ ಮಂಟಪ ಪ್ರಭಾಕರ ಉಪಾಧ್ಯರು.

ಮಂಟಪ ಉಪಾಧ್ಯರು ಯಕ್ಷಗಾನ ಕಲಾವಿದರ ವಂಶದಲ್ಲಿ ಹುಟ್ಟಿದವರೇನಲ್ಲ. ಆದರೆ ಕಲಾಪರಂಪರೆಯ ಹಿನ್ನೆಲೆಮನೆತನದಿಂದ ಬಂದವರು. ಹಿಂದೆಲ್ಲಾ ಮದುವೆ ಮಂಟಪವನ್ನು ಕಟ್ಟುವುದರಲ್ಲಿ ಖ್ಯಾತರಾದವರು ಇವರ ಅಜ್ಜಂದಿರು. ಇವರ ಅಜ್ಜನ ಸಹೋದರರಾದ ಶ್ರೀನಿವಾಸ ಉಪಾಧ್ಯರು ಆಕಾಲದಲ್ಲೇ ಅನೇಕ ಬಗೆಯ ಚಿತ್ರರಚನೆಗಳನ್ನು ರಥದಮೇಲೆ ಬೆರೆಯುವುರಲ್ಲಿ, ಬಿತ್ತಿ ಚಿತ್ರ ರಚಿಸುವುದರಲ್ಲಿ ಖ್ಯಾತರಾಗಿದ್ದರು. ಇವರ ಅಜ್ಜ ರಾಮ ಉಪಾಧ್ಯರು ಮಂಟಪದ ಕಲಾಗಾರಿಕೆಯೊಂದಿಗೆ ಚಿಕಿತ್ಸಕ ದೃಷ್ಟಿಯುಳ್ಳ ಪ್ರಯೋಗ ಶೀಲರಾಗಿ ಖ್ಯಾತಿಗೊಂಡವರು.

ಸಾಲಿಗ್ರಾಮ ಪೇಟೆಯಲ್ಲಿರುವ ಇವರ ಮಂಟಪದ ಅಂಗಡಿಗೆ ತನ್ನದೇ ಆದ ಅಸ್ಮಿತೆ ಇತ್ತು. ಎಲ್ಲ ವರ್ಗದ ಜನರಿಗೆ ಬೇಕಾದ ಎಲ್ಲ ಬಗೆಯ ವಸ್ತುಗಳು ದೊರೆಯುವುದು ಮಾತ್ರವಲ್ಲದೆ ಅದರ ಉಪಯೋಗಗಳನ್ನು ಮಾಡಿ ತೋರಿಸಿ ಬಳಸುವಂತೆ ಪ್ರೋತ್ಸಾಹಿಸುವ ಪ್ರಯೋಗಶೀಲ ಮನಸ್ಸು ಮಂಟಪ ರಾಮ ಉಪಾಧ್ಯರಲ್ಲಿತ್ತು. ಸಮಾಜದ ಒಟ್ಟಂದದ ಹಿತ ಆ ಮನೆತನದ ಗುರಿಯಾಗಿತ್ತು. ಅವರ ಮಗ ಚಂದ್ರಶೇಖರ ಉಪಾಧ್ಯ ಹಾಗೂ ಸೊಸೆ ಜಾನಕಿಯವರ ಮೊದಲ ಮಗನಾಗಿ ಪ್ರಭಾಕರ ಉಪಾಧ್ಯರು ಜನಿಸಿದ್ದು 3-10-1957 ರಲ್ಲಿ ಅಂಗಡಿ ಪೇಟೆಯಲ್ಲಿ ಇದ್ದರೂ ಇವರ ಬಾಲ್ಯ ಕಳೆದದ್ದೆಲ್ಲ ರಸ್ತೆಯ ಸಂಪರ್ಕ ಇಲ್ಲದ ಕಡಲತಡಿಯ ಪಕ್ಕದ ಪಡುಕೆರೆಯಲ್ಲಿ. ಗ್ರಾಮೀಣ ವಾತಾವರಣದಲ್ಲೇ ಇದ್ದು ಕೋಟ ವಿವೇಕ ಹೈಸ್ಕೂಲಿನಲ್ಲಿ ಓದು ಮುಗಿಸಿದ ನಂತರ ಮತ್ತೆ ಓದನ್ನು ಮುಂದುವರಿಸಲಿಲ್ಲ. ಉಳಿದ ಸಹೋದರರಲ್ಲಿರುವಂತೆ ಇವರಲ್ಲೂ ಬಾಲ್ಯಸಹಜವಾದ ಯಕ್ಷಗಾನದ ಸೆಳೆತವಿತ್ತು. ಅಕ್ಕಪಕ್ಕದಲ್ಲಿ ಎಲ್ಲೇ ಆಟ ನಡೆಯಲಿ ಹೋಗಿ ನೋಡಿ ಅದನ್ನೇ ಮಾರನೇ ದಿನ ಅನುಕರಿಸಿ ತಮ್ಮಂದಿರೊಂದಿಗೆ ಸೇರಿ ಕುಣಿದು ಕುಪ್ಪಳಿಸುವುದು ನಡೆಯುತ್ತಿತ್ತು. ಶಾಲೆಯಿಂದ ವಿಮುಖರಾಗಿ ಎರಡು ವರುಷಗಳ ಕಾಲ ಮನೆ ಅಂಗಡಿಯೆಂದು ಎಡತಾಕುತ್ತಿರುವಾಗಲೇ ಸಾಕಷ್ಟು ಯಕ್ಷಗಾನಗಳನ್ನು ನೋಡಿ ಅದರ ಸೆಳೆತಕ್ಕೆ ಸಿಕ್ಕಿದ್ದರು. ಆ ಸಮಯಕ್ಕಾಗಲೇ ಯಜಮಾನ ಶ್ರೀಧರ ಹಂದೆಯವರ ನೇತೃತ್ವದಲ್ಲಿ ಸಾಲಿಗ್ರಾಮ ಮೇಳವು ಪ್ರಾರಂಭವಾಗಿದ್ದು ಉತ್ತರಕನ್ನಡದ ಕಲಾವಿದರಾದ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಗಜಾನನ ಹೆಗಡೆ, ಕೆರೆಮನೆ ಶಂಭು ಹೆಗಡೆಯವರ ಸೇರ್ಪಡೆಯೊಂದಿಗೆ ಕರಾವಳಿಯಲ್ಲೆಲ್ಲಾ ಜಯಭೇರಿ ಭಾರಿಸಿತ್ತು.

ಬಾಲಕ ಪ್ರಭಾಕರ ಉಪಾಧ್ಯರ ಮೇಲೆ ಕೆರೆಮನೆ ಗಜಾನನ ಹೆಗಡೆಯವರ ಸ್ತ್ರೀ ಪಾತ್ರವು ಇನ್ನಿಲ್ಲದ ಪ್ರಭಾವವನ್ನು ಬೀರಿ ತಾನೂ ಆ ರೀತಿಯ ಪಾತ್ರಧಾರಿಯಾಗ ಬೇಕೆಂಬ ಭಾವ ಬಲಿತು ಅಂತೆಯೇ 1975ರಲ್ಲಿ ಒಂದು ವರ್ಷದ ಅವಧಿಗೆ ತರಬೇತಿಗೆ ಸೇರಿಕೊಂಡರು. ತರಬೇತಿ ಮುಗಿಸುವಷ್ಟರಲ್ಲಿ ಭಾಗವತಿಕೆಗೆ ಗುರುಗಳಾಗಿದ್ದ ನೀಲಾವರ ರಾಮಕೃಷ್ಣಯ್ಯನವರಿಂದ ಸ್ತ್ರೀವೇಷ ಹಿಡಿಸುತ್ತದೆ ಎಂಬ ಮೆಚ್ಚುಗೆಯ ಮಾತುಗಳು ಬಂದವು.

1976ರಲ್ಲಿ ಪುನಃಸಂಘಟನೆಗೊಂಡ ಕಮಲಶಿಲೆ ಮೇಳಕ್ಕೆ ಕೆರೆಮನೆ ಮಹಾಬಲ ಹೆಗಡೆಯವರ ಮಾರ್ಗದರ್ಶನ ಲಭಿಸಿತು. 'ಕಾಲಮಿತಿ ಪ್ರದರ್ಶನ' ಮಹಾಬಲ ಹೆಗಡೆಯವರ ಕನಸಿನ ಕೂಸಾಗಿದ್ದು ಅದಕ್ಕಾಗಿ ಸ್ತ್ರೀ ಪಾತ್ರಧಾರಿಯೊಬ್ಬರ ಹುಡುಕಾಟ ನಡೆಯುತ್ತಿತ್ತು. ತರಬೇತಿ ಮುಗಿಸಿದ್ದ ಪ್ರಭಾಕರ ಉಪಾಧ್ಯರು ಆ ಮೇಳದ ಮುಖ್ಯ ಸ್ತ್ರೀ ವೇಷಧಾರಿಯಾಗಿ ಸೇರಿಕೊಂಡರು. ಅಲ್ಲಿನ ಚಂದ್ರಹಾಸದ ವಿಷಯೆಯೇ ಯಕ್ಷಜೀವನದ ಮೊದಲ ಸ್ತ್ರೀ ವೇಷವಾಗಿತ್ತು. ನೇರ ತರಬೇತಿಯಿಂದ ಬಂದದ್ದರಿಂದ ಸಹಜವಾಗಿ ಬಂದ ಅಳುಕನ್ನು ಕೆಪ್ಪೆಕೆರೆ ಸುಬ್ರಾಯ ಭಾಗವತರು ಹೋಗಲಾಡಿಸಿದರು. ಕೆರೆಮನೆ ಮಹಾಬಲ ಹೆಗಡೆಯವರು ಧೈರ್ಯ ತುಂಬಿದ್ದೇ ಅಲ್ಲದೇ ಮಾತುಗಳನ್ನು ಬರೆದುಕೊಟ್ಟು ಹುರಿದುಂಬಿಸಿದರು. ಸಹಕಲಾವಿದರಾದ ಬಳ್ಕೂರು ಕೃಷ್ಣಯಾಜಿ, ಇಡಗುಂಜಿ ಗಣಪತಿಯಾಜಿ, ಕೆರೆಮನೆ ನರಸಿಂಹ ಹೆಗಡೆ ಮುಂತಾದವರೆಲ್ಲ ಬೆಂಬಲಕ್ಕೆ ನಿಂತರು. ಕಾಲ ಪರಿಪಕ್ವವಾಗದೇ 'ಕಾಲಮಿತಿ'ಗೆಲ್ಲಲಾರದೆ ಮುಂದಿನ ವರ್ಷದ ತಿರುಗಾಟಕ್ಕೆ ಮಹಾಬಲ ಹೆಗಡೆಯವರ ಮಾರ್ಗದರ್ಶನ ನಿಂತು ಹೋಯಿತು. ಮಂಟಪ ಪ್ರಭಾಕರ ಉಪಾಧ್ಯರು ಅಲ್ಲಿ ಉಳಿಯದೇ ಮುಂದಿನ ವರ್ಷ ಕಾಳಿಂಗ ನಾವುಡರ ಭಾಗವತಿಕೆಯಿಂದಾಗಿ ಖ್ಯಾತಿಗೊಂಡಿದ್ದ ಪೆರ್ಡೂರು ಮೇಳಕ್ಕೆ ಸೇರಿ ಕೊಂಡರು. ನಾವುಡರ ರಚನೆಯಾದ 'ವಿಜಯಶ್ರೀ' ಪ್ರಸಂಗದ ವಿಜಯಶ್ರೀಯಾಗಿ ಕಾಣಿಸಿಕೊಂಡರು. ಕೆರೆಮನೆ ಗಜಾನನ ಹೆಗಡೆಯವರ ಅಕಾಲಿಕ ಮರಣದಿಂದ ಶಂಭು ಹೆಗಡೆಯವರ ನಾಯಕತ್ವದಲ್ಲಿದ್ದ ಇಡಗುಂಜಿ ಮೇಳಕ್ಕೆ ಸ್ತ್ರೀವೇಷಧಾರಿಯೊಬ್ಬರ ಅಗತ್ಯವಿತ್ತು. ಆ ಕಾಲಕ್ಕಾಗಲೇ ಇಡಗುಂಜಿ ಮೇಳವು ತನ್ನದೇ ಆದ ಪ್ರಜ್ಞಾವಂತ ಪ್ರೇಕ್ಷಕವರ್ಗವೊಂದನ್ನು ನಿರ್ಮಿಸಿಕೊಂಡಿತ್ತು. ಇದರಿಂದಾಗಿ ಮುಂದಿನ ತಿರುಗಾಟಕ್ಕೆ ಮಂಟಪರು ಇಡಗುಂಜಿ ಮೇಳವನ್ನು ಆಯ್ಕೆ ಮಾಡಿಕೊಂಡರು. ಅಲ್ಲಿ ಶಂಭು ಹೆಗಡೆಯವರ ಮಾರ್ಗದರ್ಶನ, ನೆಬ್ಬೂರು ಭಾಗವತರ ಸಲಹೆ ಸೂಚನೆಗಳು ಸಹಕಾರಿಯಾದವು. ಅಲ್ಲಿನ ಎರಡನೆಯ ವರ್ಷದ ತಿರುಗಾಟದಲ್ಲಿ ಬ್ರಹ್ಮಕಪಾಲ, ಹರಿಶ್ಚಂದ್ರ, ಕೃಷ್ಣಸಂಧಾನ, ನಳದಮಯಂತಿ, ಶ್ವೇತಕುಮಾರ, ಸುಹಾಸಿನಿ ಮುಂತಾದ ಪ್ರಸಂಗಗಳ ಉತ್ತಮ ಸ್ತ್ರೀ ಪಾತ್ರಗಳ ಮೂಲಕ ಅಸಂಖ್ಯ ಅಭಿಮಾನಿಗಳ ಪ್ರೀತಿ ಗಳಿಸಿದರು. ಅವರು ಸಂತೋಷ ಪಟ್ಟರು, ಖ್ಯಾತಿ ಬಂತು. ಆದರೆ ಎರಡನೇ ವರ್ಷದ ತಿರುಗಾಟದ ಅಂತ್ಯದಲ್ಲಿ ನಡೆದ ಕೆಲವು ಘಟನೆಗಳಿಂದ ಬದುಕಿಗಾಗಿ ಕಲೆ

ಬೇಡ ಎಂಬ ಭಾವ ಬಲಿತು ತಿರುಗಾಟಕ್ಕೆ ಹೋಗುವುದಿಲ್ಲ ಎಂಬ ನಿರ್ಧಾರ ಮಾಡಿದರು. ಮೇಳದ ವೃತ್ತಿ ಜೀವನ ಅವರ ಮನೋಧರ್ಮಕ್ಕೆ ಸರಿ ಹೊಂದದೇ ಆಗಲೇ ಮನೆತನಕ್ಕೆ ಖ್ಯಾತಿ ತಂದುಕೊಟ್ಟ 'ಐಸ್‌ಕ್ರೀಮ್' ತಯಾರಿಕೆಯ ಉದ್ಯಮದಲ್ಲಿ ತೊಡಗಿಸಿಕೊಳ್ಳಬೇಕೆಂದು ನಿಶ್ಚಯಿಸಿದರು. ಇದಕ್ಕಾಗಿಯೇ ತಮ್ಮ ಕಾರ್ಯಕ್ಷೇತ್ರವನ್ನು ಸಾಲಿಗ್ರಾಮದಿಂದ ಬೆಂಗಳೂರಿಗೆ ಬದಲಾಯಿಸಿಕೊಂಡರು.

ಬೆಂಗಳೂರಿನಲ್ಲಿ ಐಸ್‌ಕ್ರೀಮ್ ಉದ್ಯಮ ಪ್ರಾರಂಭಿಸಿದ ಮಂಟಪರು ಇನ್ನು ಮೇಳದ ಕಲಾವಿದರಾಗುವುದಿಲ್ಲ ಎಂಬ ಗಟ್ಟಿ ನಿರ್ಧಾರತಳೆದರು. ಹಾಗೆಂದು ಕಲೆಯಲ್ಲಿ ಆಸಕ್ತಿ ಕಳೆದುಕೊಳ್ಳಲಿಲ್ಲ. ವೃತ್ತಿಯೊಂದಿಗೆ ವಿರಾಮಕಾಲದಲ್ಲಿ ಭರತನಾಟ್ಯವನ್ನು 2–3 ವರ್ಷಗಳ ಕಾಲ ಅಭ್ಯಸಿಸಿದರು. ಹೀಗೆ 1980ರಿಂದ 1990ರವರೆಗೆ ಅಪರೂಪಕ್ಕೊಮ್ಮೆ ಅತಿಥಿ ಗೌರವ ಕಲಾವಿದರಾಗಿ ಯಕ್ಷಗಾನದಲ್ಲಿ ಭಾಗವಹಿಸುತ್ತಿದ್ದರು. ಕಲಾಪ್ರದರ್ಶನದಲ್ಲಿ ಯಾವೊಂದು ಸಂಭಾವನೆಯನ್ನೂ ತೆಗೆದುಕೊಳ್ಳುವುದಿಲ್ಲವೆಂದು ದೃಢನಿರ್ಧಾರ ಕೈಗೊಂಡರು. ಹಣದೊಂದಿಗೆ ಕಲೆಯನ್ನು ತಳಕುಹಾಕಲೇ ಇಲ್ಲ. ಇದೇ ಅವರ ಹೆಗ್ಗಳಿಕೆ. 1990ರಲ್ಲಿ ಬಚ್ಚಗಾರು ಮೇಳವು ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಕಲಾಪ್ರದರ್ಶನಕ್ಕಾಗಿ ಅಣಿಗೊಂಡಿತ್ತು. ಹತ್ತು ವರ್ಷದ ವಿರಾಮದ ನಂತರ ವೃತ್ತಿಮೇಳವೊಂದರಲ್ಲಿ ಗೌರವ ಕಲಾವಿದನಾಗಿ ಕಾಣಿಸಿಕೊಳ್ಳುವ ಹಂಬಲಕ್ಕೆ ಹೊರಗಿನವರ ಒತ್ತಾಸೆಯೂ ಸೇರಿಕೊಂಡು 50 ಆಟಗಳಿಗೆ ಬರುವುದಾಗಿ ನಿರ್ಧರಿಸಿದ್ದು ಇವರ ಕಲಾಜೀವನದ ಇನ್ನೊಂದು ತಿರುವಾಗಿದೆ. ಆದರೆ ಮೊದಲ ಆಟದಲ್ಲೇ ಚಿಟ್ಟಾಣಿ ಮಂಟಪರ ಜೋಡಿ ಒಂದು ಅದ್ಭುತ ಭ್ರಮಾಲೋಕವನ್ನು ಸೃಷ್ಟಿಸಿದ್ದು ಇಂದು ಇತಿಹಾಸ. ಚಿಟ್ಟಾಣಿಯಂತಹ ಒಬ್ಬ ಅಭಿಜಾತ ಪ್ರತಿಭಾವಂತ ಕಲಾವಿದರ ಹೆಗಲೆಣೆಯಾಗಿ ಕುಣಿದು ಮಂಟಪರು ತಮ್ಮ ಕಲಾಪ್ರತಿಭೆಯನ್ನು ಮೆರೆದು ಖ್ಯಾತರಾದರು. ಆ ಕಾಲದಲ್ಲಿ ಚಿಟ್ಟಾಣಿಯವರು ತನ್ನ ನಾಟ್ಯದ ಪ್ರದರ್ಶನಕ್ಕೆ ವಿಶಾಲ ಮನಸ್ಸಿನಿಂದ ಅವಕಾಶ ಮಾಡಿಕೊಟ್ಟಿರುವುದನ್ನು ಪ್ರೀತಿಯಿಂದ ನೆನೆಯುತ್ತಾರೆ. ಭೀಷ್ಮವಿಜಯ, ಚಿತ್ರಾಕ್ಷಿಪರಿಣಯ, ಭಸ್ಮಾಸುರ ಮೋಹಿನಿ, ರಾಜಾಉಗ್ರಸೇನ ಮೊದಲಾದ ಜೋಡಿವೇಷಗಳ ಪ್ರಸಂಗ ಯಕ್ಷಗಾನದಲ್ಲಿ ಹೊಸಲೋಕವೊಂದನ್ನು ಸೃಷ್ಟಿಸಿತು. ಭರತನಾಟ್ಯದ ಕಲಿಕೆ ಇವರ ಯಕ್ಷಗಾನ ಕುಣಿತಕ್ಕೆ ಇನ್ನಷ್ಟು ಶಿಸ್ತನ್ನು, ಮೆರಗನ್ನು ನೀಡಿತು. ಜನರು ಅದನ್ನು ಆಪ್ತವಾಗಿ ಸ್ವೀಕರಿಸಿದರು. ಮಂಟಪರಿಗೆ ಅಲ್ಲಿನ ಆಟಗಳು ತಾರಾಮೌಲ್ಯಗಳನ್ನು ತಂದುಕೊಟ್ಟವು. ಆಗಿನ ಎರಡು ವರ್ಷಗಳ ತಿರುಗಾಟದಲ್ಲಿ 200ಕ್ಕೂ ಹೆಚ್ಚಿನ ಪ್ರದರ್ಶನಗಳ ಮೂಲಕ ಮಂಟಪ ಪ್ರಭಾಕರ ಉಪಾಧ್ಯರು ಕೀರ್ತಿಯ ಉತ್ತುಂಗಕ್ಕೇರಿದ್ದಂತೂ ಸತ್ಯ. ಪುನಃ ಮಂಟಪರ ಮನಸ್ಸು ಈ ತಿರುಗಾಟದ ಗುಂಗಿನಿಂದ ಹೊರಬರಲು ತವಕಿಸುತ್ತಿತ್ತು. ಅದಕ್ಕಾಗಿಯೇ ಮತ್ತೆ ಮೂರು ನಾಲ್ಕು ವರ್ಷ ತಿರುಗಾಟಕ್ಕೆ ಹೋಗುವುದಿಲ್ಲ ಎಂಬ ನಿರ್ಧಾರ ತಳೆದರು. ಅಂತೆಯೇ ನಡೆದುಕೊಂಡರು. ಆದರೆ ಮನಸ್ಸಿನೊಳಗೆ ಕಲಾವಿದನೊಬ್ಬ ಬೆಳೆಯುತ್ತಲೇ

ಇದ್ದ. ಅಪರೂಪಕ್ಕೊಮ್ಮೆ ಯಾವ ಫಲಾಪೇಕ್ಷೆಯೂ ಇಲ್ಲದೇ ಯಕ್ಷಗಾನ ಪ್ರದರ್ಶನದಲ್ಲಿ ಅತಿಥಿ ಕಲಾವಿದನಾಗಿ ಭಾಗವಹಿಸಿ ಆಂತರಿಕ ಆಸೆಯನ್ನು ತೀರಿಸಿ ಕೊಳ್ಳುತ್ತಿದ್ದರು. ಮಂಟಪ ಪ್ರಭಾಕರ ಉಪಾಧ್ಯರು ಮುಂದಿನ ಕಲಾ ಪ್ರಯಾಣ ಅತ್ಯಂತ ರಸಮಯ ವಾದದ್ದು. ಒಬ್ಬ ಕಲಾವಿದನ ಆಂತರ್ಯದಲ್ಲಿ ಶಕ್ತಿ ಇದ್ದರೆ ಅದಕ್ಕೆ ತಕ್ಕ ಮಾರ್ಗದರ್ಶನ ದೊರೆತರೆ ಯಾವ ಮಟ್ಟಕ್ಕೂ ಏರಬಲ್ಲರೆಂಬುದಕ್ಕೆ ಜ್ವಲಂತ ನಿದರ್ಶನವಾದರು. ಅಯಾಚಿತವಾಗಿ 'ಕಾವ್ಯ ಚಿತ್ರ ಯಕ್ಷ ನೃತ್ಯ' ವೊಂದಕ್ಕೆ ಭಾಗವಹಿಸುವ ಕರೆ ಬಂದಾಗ ಕುತೂಹಲದಿಂದ ಪಾಲ್ಗೊಂಡ ಅವರಿಗೆ ಅಲ್ಲಿ ಪರಿಚಿತರಾದವರೇ ಶತಾವಧಾನಿ ಡಾ. ಆರ್ ಗಣೇಶ ಅವರು. ಡಾ. ಗಣೇಶ ಅವರಿಗೆ ಕೂಡಾ ಹುಡುಕುವ ಬಳ್ಳಿ ಕಾಲಿಗೆ ತೊಡರಿದಂತೆ ಮಂಟಪರ ಪರಿಚಯವಾಗುತ್ತದೆ. ಹೀಗೆ ಒಬ್ಬರಿಗೊಬ್ಬರು ಸಿಕ್ಕಿದ್ದು ಯೋಗಾಯೋಗ. ವಯಸ್ಸಾದ ಮೇಲೆ ಕೂಡಾ ನಿರಂತರವಾಗಿ ಸ್ತ್ರೀವೇಷ ಧರಿಸುವ ಸಾಧ್ಯತೆ ಇದೆಯೇ ಎಂಬ ಅನುಮಾನದೊಂದಿಗೆ ಇಟ್ಟ ಪ್ರಶ್ನೆಯೇ ಮಂಟಪರ ಪಾಲಿಗೆ ವರದಾನವಾಗುತ್ತದೆ. ಮಂಟಪರ ಆಸಕ್ತಿ ಸಾಮರ್ಥ್ಯವನ್ನು ಮೊದಲ ಪ್ರದರ್ಶನದಲ್ಲೇ ಕಂಡುಕೊಂಡ ಶತಾವಧಾನಿಗಳು ತಮ್ಮ ಕನಸಿನ ಕೂಸಿಗೆ ಮಂಟಪರ ಮೂಲಕ ಕುಲಾವಿತೊಡಿಸಲು ಹೊರಟರು. ಈ ಕಾಲಕ್ಕಾಗಲೇ ಕಥಕ್, ಕೂಚುಪುಡಿ, ಮೋಹಿನಿಅಟ್ಟಂ ಸತ್ರೀಯಗಳಂತೆಯೇ ಕರ್ನಾಟಕದ ಯಕ್ಷಗಾನವೂ ಏಕವ್ಯಕ್ತಿ ಮಾಧ್ಯಮದಲ್ಲಿ ಹಾಯ್ದು ಬಂದರೆ ಹೊಸತಾದ ನರ್ತನ ಪ್ರಕಾರವೊಂದು ಆವಿಷ್ಕಾರ ಗೊಳ್ಳಬಹುದೆಂಬ ಎಣಿಕೆಯಲ್ಲಿ ಗಣೇಶರು ಇದ್ದಿದ್ದರು. ಈ ಮೊದಲೇ ಬರೆದಿದ್ದ ತಮ್ಮ 'ಭಾಮಿನಿ' ಎಂಬ ಏಕವ್ಯಕ್ತಿ ಯಕ್ಷಗಾನ ಪ್ರಸಂಗದ ರೂಪರೇಷೆಗಳನ್ನೂ ಹೇಳಿ ಅದರಲ್ಲಿ ಪಾಲ್ಗೊಳ್ಳುವಂತೆ ಮಂಟಪರನ್ನು ಹುರುದುಂಬಿಸಿದರು. 2000ದ ಮಾರ್ಚನಲ್ಲಿ ವಿದ್ಯುಕ್ತವಾಗಿ ಲೋಕಾರ್ಪಣೆಗೊಂಡ 'ಭಾಮಿನಿ' ಪ್ರಸಂಗವು ಮಂಟಪರ ಒಳಗಿರುವ ಕಲಾವಿದನ ತುಡಿತಕ್ಕೆ ಸವಾಲಾಗಿ ಪರಿಣಮಿಸುತ್ತದೆ. ಅಲ್ಲಿಯವರೆಗಿದ್ದ ಗ್ಲಾಮರ್ ವೇಷದಿಂದ ಹೊರಬಂದು ರಸಸೃಷ್ಟಿಯ ಹೊಸ ನೆಲೆಯೊಂದನ್ನು ಮಂಟಪರು ಕಂಡುಕೊಂಡರು. ಮುಂದೆ ಡಾ. ಗಣೇಶ ಅವರ ನಿರ್ದೇಶನದಲ್ಲಿ ಶ್ರೀ ಕೃಷ್ಣಾರ್ಪಣ, ಯಕ್ಷದರ್ಪಣ, ಜಾನಕಿಜೀವನ, ಯಕ್ಷಕದಂಬ, ಯಕ್ಷನವೋದಯ ಗಳಂತಹ ಏಕವ್ಯಕ್ತಿ ಯಕ್ಷಗಾನದಲ್ಲಿ ತಮ್ಮ ಪ್ರತಿಭಾ ವಿಲಾಸವನ್ನು ನಿರಂತರವಾಗಿ ಪ್ರದರ್ಶಿಸುತ್ತಾ ಬಂದಿದ್ದಾರೆ. ಈ ಬಗೆಯ ಪ್ರದರ್ಶನಗಳು ಕಳೆದ 13 ವರ್ಷಗಳಲ್ಲಿ 1214ರ ಗಡಿಯನ್ನು ದಾಟಿದೆ. ದಿನಾಂಕ 2.04.2010ರಲ್ಲಿ ಮೂಡುಬಿದರೆಯ ವಿದ್ಯಾಗಿರಿಯಲ್ಲಿ ನಡೆದ 1000ನೇ ಪ್ರಯೋಗವು ಐತಿಹಾಸಿಕ ದಾಖಲೆಯಾಗಿದೆ. ಈ ಮಧ್ಯದಲ್ಲೇ ಇದೇ ಪ್ರಸಂಗಗಳನ್ನು 'ನಡುಮನೆಯಲ್ಲಿ ಯಕ್ಷನಾಟ್ಯ' ಎಂಬ ಪರಿಕಲ್ಪನೆಯಲ್ಲಿ ನಿಯಮಿತ ಪ್ರೇಕ್ಷಕರ ಮಧ್ಯೆ ಒಳಾಂಗಣಗಳಲ್ಲೇ ಪ್ರದರ್ಶಿಸುತ್ತಾ ಯಕ್ಷಗಾನವನ್ನು ಮಂದ್ರಸ್ಥಾಯಿಯ ಮೂಲಕವೂ ಅಭಿವ್ಯಕ್ತಿಸಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟದ್ದು ಉಲ್ಲೇಖಾರ್ಹ. ಹೀಗೆ ಯಕ್ಷಗಾನ ರಂಗದಲ್ಲಿ ತಮ್ಮ ವಿಶಿಷ್ಟತೆಯ

ಮೂಲಕ ಮನೆಮಾತಾದ ಮಂಟಪರಲ್ಲಿ ಮಾತಿಗೆ ಇಳಿದಾಗ ಅಲ್ಲೊಬ್ಬ ಆಧ್ಯಾತ್ಮಿಕ ಚಿಂತಕನ ಪರಿಚಯವಾಗುತ್ತದೆ. ಅವರೊಂದಿಗಿನ ಸಂವಾದದ ಕೆಲವೊಂದು ತುಣುಕುಗಳು ಇಲ್ಲಿವೆ.

◆ **ಗ್ಲಾಮರ್ ಲೋಕದಿಂದ ಹೊರಬಂದು ಶುದ್ಧ 'ಭಾಮಿನಿ'ಯಾಗಿ ಪರಿವರ್ತನೆಗೊಂಡಾಗಿನ ನಿಮ್ಮ ಮನಸ್ಥಿತಿ ಮತ್ತು ಅದರ ಹಿನ್ನೆಲೆಗಳನ್ನು ವಿವರಿಸುತ್ತೀರಾ?**

❑ ಬಚ್ಚಗಾರು ಮೇಳದಲ್ಲಿ ಅತಿಥಿ ಕಲಾವಿದನಾಗಿದ್ದಾಗ ನನ್ನ ಅಭಿಮಾನಿ ಬಳಗ ವಿಸ್ತಾರ ಗೊಂಡಿದ್ದಂತೂ ನಿಜ. ಆದರೆ ನನ್ನ ಒಳಗೆ ಒಂದು ಅಸಮಾಧಾನದ ಕಿಡಿ ಹೊಗೆಯಾಡುತ್ತಿತ್ತು. ಮೇಳದೊಂದಿಗಿನ ತಿರುಗಾಟ ನನಗೆ ಹೊಂದಲಾರದೆಂದು ಮನಸ್ಸು ಹೇಳುತ್ತಿತ್ತು. ಶತಾವಧಾನಿ ಡಾ. ಆರ್ ಗಣೇಶರವರ ತೀವ್ರ ಒತ್ತಡದಿಂದ ಅವರ ಪ್ರಯೋಗ ಶಾಲೆಯ ಶಿಲೆಯಾಗಿ ಪರಿವರ್ತನೆಗೊಂಡ ನಾನು ಅವರ ಮಾರ್ಗದರ್ಶನದಲ್ಲಿ ಸಂಪೂರ್ಣ ಬದಲಾಗಿ ಹೋದೆ. ಕಲೆಯ ಆಂತರ್ಯವನ್ನು ಅವರು ನನಗೆ ತೆರೆದು ತೋರಿದರು. ಆದರೂ ಮೊದಮೊದಲು ನನಗೆ ಭಯ ಆವರಿಸಿತ್ತು. ಬೇರೆ ವೇಷಗಳೇ ಇಲ್ಲದ ಒಂದೇ ವ್ಯಕ್ತಿಯಿಂದ ಎದುರು ಪಾತ್ರದ ಪ್ರತಿಕ್ರಿಯಾತ್ಮಕವಾದ ಅಭಿನಯದಿಂದಲೇ ಮನದಾಳವನ್ನು ತೋರಿಸಿ 'ಭಾಮಿನಿ'ಯಾಗಿಯೇ ಎರಡು ಗಂಟೆಗಳ ಕಾಲಕುಣಿಯುವುದು ಬಹು ಸವಾಲಿನದ್ದು. ಅವರ ದೃಷ್ಟಿಯಲ್ಲಿ ಯಕ್ಷಗಾನ ಸ್ತ್ರೀವೇಷದ ಅಭಿನಯ ಸರ್ವಸ್ವವೂ ಸಾತ್ವಿಕಾಭಿನಯಾನುರೋಧಿಯಾಗಿ ಬರಬೇಕೆಂಬುದೇ ಆಗಿತ್ತು. ಅದನ್ನು ನನ್ನಿಂದ ಮಾಡಿಸುವುದೇ ಉದ್ದೇಶವಾಗಿತ್ತು. ಮೊದಮೊದಲು 'ಭಾಮಿನಿ'ಯೊಂದಿಗೆ ನಾನು ಕುಣಿಯಲು ತಡವರಿಸಿದೆ. ಕೊನೆಗೆ 'ಭಾಮಿನಿ'ಯ ಗೆಲುವಿನಲ್ಲಿ ಆರ್. ಗಣೇಶರು ಗೆದ್ದಿದ್ದರು. ಕುಣಿಯುವಲ್ಲಿ ನಾನು ಗೆದ್ದಿದ್ದೆ. ನಮ್ಮ 'ಭಾಮಿನಿ'ಯ ಮೂರನೆಯ ಪ್ರದರ್ಶನದಲ್ಲಿ ಜಡೆಯನ್ನು ಚಿಹ್ನೆಯಾಗಿ ಬಳಸಿಕೊಂಡದ್ದು ಗೆಲುವಿನ ಸಂಕೇತವಾಗಿತ್ತು. ಶ್ರೀ ಗಣೇಶರು ಕೆಲವೊಮ್ಮೆ ಹೊಸಹೊಳವುಗಳಿಗೆ ಅಷ್ಟನಾಯಿಕೆಯರ ಮನಸ್ಸಿನ ಭಾವಗಳನ್ನು ಪೋಣಿಸಿದರು. ಅದರಿಂದ ಮತ್ತಷ್ಟು ಉತ್ತೇಜಿತನಾದೆ. ಎಂಟು ನಾಯಿಕೆಯರೊಂದಿಗೆ ಎಂಟು ವರ್ಣದ ಸೀರೆ ಮುಂತಾದ ಹೊಸ ಹೊಸ ಕಲ್ಪನೆಗಳು ರಂಗದ ಮೇಲೆ ಸೇರುತ್ತಲೇ ಹೋದವು. ಪ್ರದರ್ಶನ ನಿತ್ಯ ನೂತನವಾಯಿತು. ಮಾಧ್ಯಮದ ಗಟ್ಟಿತನದಿಂದ ಮಾಧ್ಯಮವನ್ನು ಮೀರಿ ಹೇಗೆ ಕುಣಿಯಬಹುದೆಂದು ಕಲೆಯ ಎಳೆಯನ್ನು ಹಿಡಿದೆ. ಇಂದಿಗೂ 'ಭಾಮಿನಿ' ನನ್ನ ಪಾಲಿನ ಸುಂದರ ವಿಶ್ರಾಂತಿಧಾಮ-ವಿಹಾರ ಧಾಮ-ಶಾಂತಿಧಾಮ.

◆ **ಏಕವ್ಯಕ್ತಿ ಯಕ್ಷಗಾನಕ್ಕೂ ಯಕ್ಷಗಾನ ಏಕಪಾತ್ರಭಿನಯಕ್ಕೂ ಭಿನ್ನತೆ ಇದೆಯೇ? ಪ್ರಸಂಗದ ಹಿನ್ನೆಲೆಯಲ್ಲಿ ವಿವರಿಸಬಹುದೇ?**

❑ ಏಕವ್ಯಕ್ತಿ ಯಕ್ಷಗಾನವೆಂದರೆ ಎದುರು ಪಾತ್ರ ಅಲ್ಲಿ ಇಲ್ಲದೆಯೇ ಆ ಪಾತ್ರದ ಅಭಿನಯವನ್ನು ತನ್ನ ಪಾತ್ರದ ಒಳಗೆ ಮೂಡುವ ಪ್ರತಿಕ್ರಿಯೆಯನ್ನು ಅಭಿವ್ಯಕ್ತಿಸುವ ಮೂಲಕ ತೋರಿಸುವ ತಂತ್ರಗಾರಿಕೆ ಇದೆ. ಆದರೆ ಯಕ್ಷಗಾನ ಏಕಪಾತ್ರಾಭಿನಯದಲ್ಲಿ ಹಾಗಿಲ್ಲ. ಅಲ್ಲಿ ಪಾತ್ರಧಾರಿ ಎರಡು ಪಾತ್ರಗಳ ಅಭಿನಯವನ್ನು ಒಂದೇ ದಿರಿಸಿನಲ್ಲಿ ನಿರ್ವಹಿಸುತ್ತಾನೆ. ಇದರಿಂದ ಪ್ರೇಕ್ಷಕರಲ್ಲಿ ಗೊಂದಲವಿರುತ್ತದೆ. ಏಕವ್ಯಕ್ತಿಯಲ್ಲಿ ಒಂದೇ ವೇಷ ಒಂದೇ ಪಾತ್ರವಿರುವುದರಿಂದ ಮತ್ತು ಕ್ರಿಯೆಪ್ರತಿಕ್ರಿಯೆಗಳು ಒಟ್ಟಿನಲ್ಲೇ ವ್ಯಕ್ತವಾಗುವುದರಿಂದ ರಸಿಕರಲ್ಲಿ ಗೊಂದಲವಿರುವುದಿಲ್ಲ.

◆ **ಏಕವ್ಯಕ್ತಿ ಯಕ್ಷಗಾನ ಬಂದ ಹೊಸದರಲ್ಲಿ ಯಕ್ಷಗಾನ ಪ್ರೇಕ್ಷಕರನ್ನು ಮುಟ್ಟುವ ನಿಮ್ಮ ಪ್ರಯತ್ನ ಹೇಗಿತ್ತು? ಅದರಲ್ಲಿ ಸಫಲರಾಗಿದ್ದೀರಾ ಹೇಗೆ?**

❑ 'ಏಕವ್ಯಕ್ತಿ' ಪ್ರೇಕ್ಷಕರಿಗೆ ಇಷ್ಟವಾಗುತ್ತೋ ಇಲ್ಲವೋ ಎಂಬ ಅಳುಕಿತ್ತು. ಯಕ್ಷಗಾನ ಆಸಕ್ತರನ್ನು ಸೆಳೆಯಲೆಂದೇ ಡಾ. ಆರ್. ಗಣೇಶ ಅವರಿಗೆ ಇಷ್ಟವಿಲ್ಲದಿದ್ದರೂ ಯಕ್ಷಗಾನದ ಗೌರವ ಸೂಚಕ ಚಿಹ್ನೆಯಾದ ಕೇದಗೆ ಮುಂದಲೆಯನ್ನು ನಮ್ಮ ಬ್ರೋಷರ್‌ಗಳಲ್ಲಿ ಹಾಗೂ ವೇದಿಕೆಯಲ್ಲಿ ಬಳಸಿಕೊಂಡಿದ್ದೆ. ನಮ್ಮ ಈ ಪ್ರಯೋಗವನ್ನು ಯಕ್ಷಗಾನಾಭಿಮಾನಿಗಳು ಒಪ್ಪಿಕೊಳ್ಳಬೇಕೆಂಬ ಆಸೆ ನನಗೆ ಮೊದಲಿನಿಂದಲೂ ಇತ್ತು. ಗಣೇಶರಿಗೆ ಈ ಬಗೆಯ ದ್ವಂದ್ವಗಳಿರಲಿಲ್ಲ. ಸುಂದರ ಕಲೆಯನ್ನು ಔಚಿತ್ಯಪೂರ್ಣವಾಗಿ ರಸವತ್ತಾಗಿ ಕಾಣಿಸಿದೆವೆಂಬ ತೃಪ್ತಿಯೇ ಎಲ್ಲಕ್ಕಿಂತ ದೊಡ್ಡದು ಎನ್ನುತ್ತಿದ್ದರು. ಶತವಧಾನಿ ಡಾ. ಗಣೇಶರ ಮಾರ್ಗದರ್ಶನದಲ್ಲಿ ನನ್ನಲ್ಲಿ ಔಚಿತ್ಯ ಪ್ರಜ್ಞೆ ಹೆಚ್ಚಿತು. ಯಕ್ಷಗಾನದ ಮೂಲ ಸಾಮಗ್ರಿಗಳನ್ನೇ ಹಿಡಿದು ಏಕವ್ಯಕ್ತಿಯಲ್ಲಿ ಪ್ರದರ್ಶಿಸಿದರೆ ನಮ್ಮವರ ಪ್ರತಿಕ್ರಿಯೆ ಹೇಗಿರಬಹುದೆಂಬ ಕುತೂಹಲ ನನಗೆ. ಇದಕ್ಕಾಗಿಯೇ ಯಕ್ಷಗಾನದಲ್ಲಿ ಮರೆಯಾದ ಪೂರ್ವರಂಗ, ಸಭಾಲಕ್ಷಣದ ಕೆಲವು ಪದ್ಯಗಳನ್ನು ಪ್ರದರ್ಶಿಸಿದರೆ ಹೇಗೆ ಎಂಬ ಹೊಳಹು ಬಂದಿತು. ಭೂವಂದನೆ, ಸಭಾವಂದನೆ, ಪೀಠಿಕಾ ಸ್ತ್ರೀವೇಷ, ದಶಾವತಾರ, ಮುಖ್ಯಸ್ತ್ರೀವೇಷದ ಕೆಲವು ಪದ್ಯಗಳು ಹೀಗೆ ವೈವಿಧ್ಯಮಯ ಪದ್ಯಗಳನ್ನೆಲ್ಲ ಆಯ್ದು 'ಯಕ್ಷ ದರ್ಪಣ' ಸಿದ್ಧಗೊಂಡಿತು. ಇದಕ್ಕೆ ಉಡುಪಿಯ ಯಕ್ಷಗಾನ ಕೇಂದ್ರದ ಸಹಕಾರವನ್ನು ಅದರಲ್ಲೂ ಸಂಜೀವ ಸುವರ್ಣರ ಮುಕ್ತ ಮನಸ್ಸಿನ ಸಹಾಯವನ್ನು ಪಡೆದುಕೊಂಡೆವು. ಅಲ್ಲಿನ ಕಲಿಕೆಯಿಂದ ನನ್ನ ಸ್ವತಂತ್ರ ನರ್ತನಗಳಿಗೆ ಇನ್ನಷ್ಟು ಜೀವ ಕಳೆ ಬಂದಿತು. ತೆರೆಮರೆ ಕುಣಿತ ಸೇರಿಸಿಕೊಂಡೆವು. ವೇಷಭೂಷಣಗಳು

ಬದಲಾದವು. ಕಚ್ಚೆಸೀರೆಯೊಂದಿಗೆ ಇತರ ಆಭರಣಗಳು, ಭುಜಕೀರ್ತಿ ಎದೆಹಾರ ಸ್ತನಹಾರ, ವಡ್ಯಾಣ, ಶಿರೋಭೂಷಣಗಳು ಬದಲಾವಣೆ ಯೊಂದಿಗೆ ಸೇರ್ಪಡೆಗೊಂಡವು. ಎಂ.ಜಿ.ಎಂ. ಕಾಲೇಜಿನಲ್ಲಿ ನಡೆದ ಮೊದಲ ಪ್ರದರ್ಶನವೇ ಯಕ್ಷಗಾನದ ಅಧಿಕೃತತೆಯನ್ನು ಇದಕ್ಕೆ ಒತ್ತಿತ್ತು. ಕಾರ್ಕಳ ದಲ್ಲಿ ನಡೆದ ಮೂರನೇ ಪ್ರದರ್ಶನ, ಅದರೊಂದಿಗೆ ಇಬ್ಬರು ಪ್ರಮುಖ ಸ್ತ್ರೀ ವೇಷಧಾರಿಗಳಾದ ಶ್ರೀ ಕೋಳ್ಯೂರು ರಾಮಚಂದ್ರರಾವ್ ಹಾಗೂ ಪಾತಾಳ ವೆಂಕಟರಮಣ ಭಟ್‌ರ ಸನ್ಮಾನ ಕಾರ್ಯಕ್ರಮದಲ್ಲಿನ ನಮ್ಮ ಈ ಪ್ರಯೋಗವನ್ನು ಯಕ್ಷಗಾನ ಆಸಕ್ತರೆಲ್ಲ ಗಂಭೀರವಾಗಿ ಪರಿಗಣಿಸಲು ಉಪಕ್ರಮಿಸಿದರು.

◆ ನಿಮ್ಮ 'ನಡುಮನೆಯಲ್ಲಿ ಯಕ್ಷನಾಟ್ಯ' ಎಂಬ ಪರಿಕಲ್ಪನೆಯ ವಿಶೇಷತೆ ಏನು? ಅದು ಎಷ್ಟರ ಮಟ್ಟಿಗೆ ಸಫಲಗೊಂಡಿದೆ?

❑ ನಮ್ಮ ಏಕವ್ಯಕ್ತಿ ಯಕ್ಷಗಾನವನ್ನು ಸಂಘಟಿಸಿ ಆ ಮೂಲಕ ಸಾರ್ವಜನಿಕವಾಗಿ ಆಯೋಜಿಸುವುದು ಬಹು ಪ್ರಯಾಸದ ಕೆಲಸವಾಗಿತ್ತು. ಪ್ರದರ್ಶನ ಹಳ್ಳಿಗೂ ತಲುಪಬೇಕೆಂಬ ಬಯಕೆ ಇತ್ತು. ರಸಿಕರ ಮನದಂಗಳದಲ್ಲಿ ಸದಾ ಉಳಿಯ ಬೇಕಾದರೆ ಅವರ ಮನೆಯಂಗಳದಲ್ಲೇ ಪ್ರದರ್ಶನ ಮಾಡಿದರೆ ಹೇಗೆ ಆ ಮೂಲಕ ಹಳ್ಳಿ ಹಳ್ಳಿಗಳನ್ನು ತಲುಪಬಹುದಲ್ಲವೇ? ಎಂಬ ಯೋಚನೆಯಿಂದ ಅತ್ಯಂತ ಕಡಿಮೆ ಕರ್ಚಿನಲ್ಲಿ ಆದರೆ ಅತ್ಯಂತ ಪ್ರಭಾವಶಾಲಿಯಾಗಿ ಕಾರ್ಯಕ್ರಮ ನೀಡಬಹುದೆಂಬ ಹುಮ್ಮಸ್ಸಿನಿಂದ ಈ ಪರಿಕಲ್ಪನೆ ಪ್ರಾರಂಭಿಸಿದೆವು, ಈ ನಿಟ್ಟಿನಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ದಯಪಾಲಿಸಿದವರು ರಾಮ ಚಂದ್ರಾಪುರ ಮಠದ ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರು. ಅವರ ಶಿಷ್ಯವೃಂದದ ಮೂಲಕ ಅನೇಕ ಕಡೆಗಳಲ್ಲಿ ಈ ಕಾರ್ಯಕ್ರಮ ನಡೆದು ಬಹುಜನಾದರಣೆ ಪಡೆಯುವಂತಾಯಿತು. ಹಳ್ಳಿ ನಗರಗಳೆಂಬ ಭೇದವಿಲ್ಲದೆ, ಹಿರಿಯ ಕಿರಿಯ ಎಂಬ ವ್ಯತ್ಯಾಸವಿಲ್ಲದೆ, ಮೇಲುವರ್ಗ ಕೆಳವರ್ಗಗಳೆಂಬ ಪದರ ಇಲ್ಲದೆ ಆಸಕ್ತರೆಲ್ಲರ ಮನೆಯ ಇರುವ ಜಾಗದಲ್ಲೇ ನಮ್ಮ ಪ್ರದರ್ಶನ ನೀಡಿದೆವು. ಅವರಿಗೆ, ಅವರ ಬಂಧು ಮಿತ್ರರಿಗೆ ತೀರಾ ಹತ್ತಿರದಿಂದ ನೋಡುವ ಆ ಮೂಲಕ ಆಪ್ತವಾದ ರಸಭಾವಗಳಲ್ಲಿ ಮುಳುಗುವ ಅವಕಾಶ ಲಭಿಸಿತು. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲದೆ ಬೆಂಗಳೂರು, ಧಾರವಾಡ, ತೀರ್ಥಹಳ್ಳೀ, ಶೃಂಗೇರಿ, ಮೈಸೂರು ಮುಂತಾದ ಹಲವು ಕಡೆಗಳಲ್ಲಿನ ಮನೆಗಳಲ್ಲಿ ಇದರ ಪ್ರಯೋಗ ನಡೆದಿದೆ. ಕೆಲವರು ಹಲವು ಬಾರಿ ತಮ್ಮ ನಡುಮನೆಗಳಲ್ಲಿ ನಮ್ಮ ಪ್ರದರ್ಶನಗಳನ್ನು ಇಡಿಸಿದ್ದಾರೆ. ಇದೇ ನಮ್ಮ ಪರಿಕಲ್ಪನೆಯ ಯಶಸ್ಸಿನ ಮಾಪನ. ಮನೆಯವರಿಗೆ ಸಂಭ್ರಮದ ಔತಣವಾದಂತೆ ನಮಗೆ ಕಲಾರಸಿಕರನ್ನು ಹತ್ತಿರದಿಂದ ತಿಳಿಯುವ ಅವಕಾಶ

ಒದಗಿತು. ಶ್ರೇಷ್ಠ ಚಿತ್ರನಟ ಡಾ.ವಿಷ್ಣುವರ್ಧನ ಅವರ ಮನೆಯಲ್ಲಿ ಮೂರು ಬಾರಿ ಪ್ರದರ್ಶನವಾದದ್ದೊಂದು ವಿಶಿಷ್ಟ ಅನುಭವ.

ನಮ್ಮ ಎಲ್ಲಾ ಏಕವ್ಯಕ್ತಿ ಯಕ್ಷಗಾನಗಳ ಸಫಲತೆಯ ಹಿಂದೆ ನಿರ್ದೇಶಕರಾದ ಗಣೇಶರವರ ಮತ್ತು ಹಿಮ್ಮೇಳದವರ ದೊಡ್ಡ ಪಾಲು ಇದೆ. ಇಲ್ಲಿನ ಎಲ್ಲರೂ ತಮ್ಮ ಕೌಶಲ್ಯವನ್ನು ಸಮರ್ಪಣೆಯ ಮೂಲಕ ಕಾಣಿಸಿಕೊಳ್ಳುತ್ತಾರೆ. ರಸಿಕರಿಗೆ ನಾವೆಲ್ಲರೂ ಬೇಕಾಗಿದ್ದೆವು. ಪರಸ್ಪರ ಪೂರಕವಾಗಿ ಎಲ್ಲವೂ ನಡೆಯುವುದೇ ನಮ್ಮ ಯಶಸ್ಸಿನ ಗುಟ್ಟು. ವಿದ್ವಾನ್ ಗಣಪತಿ ಭಟ್ಟರ ಹಾಡು ಕೇಳುವುದೇ ಒಂದು ದಿವ್ಯ ಅನುಭವ. ಅವರ ಭಾವ ಶುದ್ಧಿ, ರಾಗಶುದ್ಧಿ, ಲಯದ ಹಿಡಿತ, ಇಂಪಾದ ಸ್ವರ, ಸಮಯ ಪ್ರಜ್ಞೆ, ಸಾಹಿತ್ಯ ಸ್ಪಷ್ಟತೆ, ಪಾತ್ರಧಾರಿಯ ಮನೋಧರ್ಮ ಅರಿತು ಕುಣಿಸುವ ಪರಿ ಅನನ್ಯವಾದುದು. ಅದೇ ರೀತಿ ಮದ್ದಳೆ ವಾದಕರಾದ ಶ್ರೀ ಅನಂತ ಪದ್ಮನಾಭ ಪಾಠಕರ ವಾದನದ ಮೇಲಿನ ಹಿಡಿತ, ಶಿಸ್ತು, ಸೌಜನ್ಯ, ಮುಖ ನೋಡದೇ ದೇಹಭಾಷೆಯನ್ನರಿತು ಮದ್ದಳೆ ನುಡಿಸುವ ಪರಿ ಅವರ ವೈಶಿಷ್ಟ್ಯವಾಗಿದೆ. ಇಡಗುಂಜಿ ಕೃಷ್ಣಯಾಜಿಯವರ ಚಂಡೆವಾದನ ನಡುಮನೆಯಲ್ಲೂ ಮೋಹಕವಾಗುವ ರೀತಿ ವಿಶೇಷವಾದದ್ದು. ಚಂಡೆಯ ನುಡಿತ ಕಿವಿಗೆ ಹಿತವಾಗುವಂತೆ, ಭಾವಕ್ಕೆ ಮೆರಗು ನೀಡುವಂತೆ ನೋಡಿಕೊಳ್ಳುತ್ತಿದ್ದರು. ಇದಕ್ಕೆಲ್ಲ ಪುಟವಿಟ್ಟಂತೆ ನನಗೆ ವೇಷಭೂಷಣಗಳನ್ನು ಒದಗಿಸುತ್ತಿದ್ದ ರಾಜಶೇಖರ ಹಂದೆಯವರ ಪಾದರಸದಂತಹ ಕಾರ್ಯಕ್ಷಮತೆ ಮೆಚ್ಚುವಂತಹದ್ದು. ಹೀಗೆ ಈ ಪ್ರದರ್ಶನ ಕಳೆಕಟ್ಟುವಲ್ಲಿ ನಮ್ಮೆಲ್ಲರ ಪಾಲು ಸೇರಿಕೊಂಡಿದೆ. ಎಲ್ಲರೂ ಸೌಮ್ಯ, ಶಿಸ್ತು ಸಮಯಪಾಲನೆ, ಪರಸ್ಪರ ಪ್ರೀತಿ ಗೌರವ ಇರಿಸಿಕೊಂಡಿದ್ದರಿಂದಲೇ ನಮ್ಮ ಏಕವ್ಯಕ್ತಿಯಕ್ಷಗಾನ ಹೆಸರಿಗೆ ಏಕವ್ಯಕ್ತಿಯಾದರೂ ಏಕತಂಡದ ಯಕ್ಷಗಾನವಾಗಿ ನಾಡಿನಾದ್ಯಂತ ಯಶಸ್ವಿಯಾಯಿತು. ಈ ನಂಬಿಕೆ, ಹೊಂದಾಣಿಕೆ, ಒಂದೇ ಗುರಿ, ಒಂದೇ ಸಾಧನೆಯೇ ನಮ್ಮೆಲ್ಲರ ಮಂತ್ರವಾಗಿತ್ತು.

◆ **ಯುಗಳ ಯಕ್ಷಗಾನದ ಪರಿಕಲ್ಪನೆ ಹೇಗೆ ಬಂತು? ಆ ಬಗೆಯ ಪ್ರದರ್ಶನಗಳ ಕುರಿತು ನಿಮ್ಮ ಹಾಗೂ ಪ್ರೇಕ್ಷಕರ ಅಭಿಮತಗಳೇನು?**

□ ಏಕವ್ಯಕ್ತಿ ಯಕ್ಷಗಾನ ಪ್ರದರ್ಶನಗಳನ್ನು ಮನಸಾರೆ ಮೆಚ್ಚಿಕೊಂಡ ಯಕ್ಷ ಗಾನ ಕಲಾ ರಸಿಕರು ಕೂಡಾ ಆಗಾಗ ಕಣ್ಣಿಗೆ ಒಪ್ಪುವ ದೃಶ್ಯದ ಕೊರತೆಯ ಬಗ್ಗೆ ಪ್ರಸ್ತಾಪಿಸುತ್ತಿದ್ದರು. ದೃಶ್ಯ ಪ್ರಸ್ತುತತೆಯ ಮೂಲಕ ನಮ್ಮವರ ಹೃದಯಕ್ಕೆ ಹತ್ತಿರವಾಗಬೇಕೆಂಬ ಒಳಮನಸ್ಸಿನ ಬಯಕೆಯಿಂದ ಡಾ. ಆರ್. ಗಣೇಶ ರವರನ್ನು ಒತ್ತಾಯಿಸಿದೆವು. ಅದರ ಫಲವಾಗಿಯೇ ಅವರಿಂದ 'ವಿಜಯ ವಿಲಾಸ' ಮೂಡಿ ಬಂತು. ಆಡುಮಾತುಗಳನ್ನು ಗಮನದಲ್ಲಿರಿಸಿಕೊಂಡು

ಸ್ತ್ರೀ ಪುರುಷ ಪಾತ್ರಗಳ ಸಮನ್ವಯತೆಯ ನೆಲೆಗಟ್ಟಿನಲ್ಲಿ ಯೋಜಿಸಿ ನಿರೂಪಿಸಿದ ಪ್ರಸಂಗ ಅದಾಗಿತ್ತು. ಅರ್ಜುನನ ತೀರ್ಥಯಾತ್ರೆಯಲ್ಲಿ ಬರುವ ಉಲೂಪಿ, ಚಿತ್ರಾಂಗದೆ, ಸುಭದ್ರೆಯರನ್ನು ಆಧಾರವಾಗಿ ಇರಿಸಿಕೊಳ್ಳಲಾಗಿದೆ. ಅರ್ಜುನನ ಪಾತ್ರಧಾರಿಯಾಗಿ ಕೊಂಡದಕುಳಿ ರಾಮಚಂದ್ರ ಹೆಗಡೆ ಪ್ರಯೋಗಕ್ಕೆ ಸಿದ್ಧರಾಗಿ ಒಪ್ಪಿದರು. ಅವರ ಅಚ್ಚುಕಟ್ಟಾದ ಪಾತ್ರ ನಿರ್ವಹಣೆಯಿಂದ ಅದು ಯಶಸ್ವಿಯಾಯಿತು. ಈ ಪ್ರಸಂಗದಲ್ಲಿ ಭಾವಗಳ ಕೊಂಡಿಯಿಂದಲೇ ದೃಶ್ಯವನ್ನು ವೈಭವೀಕರಿಸಬೇಕಾಗುತ್ತಿತ್ತು. ಶ್ರೀ ಗಣೇಶರವರಿಂದ ಕಲಿತ ರಸಾನುಭವದ ಪಾಠ ಇನ್ನೊಮ್ಮೆ ಮನನ ಮಾಡಿಕೊಳ್ಳಬೇಕಾಯಿತು. ರಸವನ್ನು ಅನುಭವಿಸಲು ಹಕ್ಕಿಲ್ಲ, ಹಂಚಲು ಮಾತ್ರ ಅದು ಇರುವುದು ಎಂಬ ಅವರ ವಾಕ್ಯ ಮನಸ್ಸಿನಲ್ಲಿ ಯಾವಾಗಲೂ ಭಯವನ್ನು ಬಿತ್ತುತ್ತಿತ್ತು. ಯುಗಳ ಯಕ್ಷಗಾನ ಪ್ರಸಂಗಗಳಾಗಿ ಪ್ರದರ್ಶನಗೊಂಡ ವಿಜಯ ವಿಲಾಸ, ನಳದಮಯಂತಿ, ಮಂಥರೆಯ ಒಟ್ಟು 150 ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿವೆ ಮಾತ್ರವಲ್ಲ ರಸಿಕರ ಮನ ಸೆಳೆದಿವೆ. ಚಪ್ಪರಮನೆ, ಕೊಂಡದಕುಳಿ ರಾಮಚಂದ್ರ ಹೆಗಡೆ, ಡಾ. ಸುಂದರಿ ಸಂತಾನಂ ಮುಂತಾದವರ ತೆರೆದ ಹೃದಯದವರ ಪಾಲ್ಗೊಳ್ಳುವಿಕೆ ಕೂಡ ಈ ಯಶಸ್ಸಿಗೆ ಕಾರಣ.

◆ **ಡಾ. ಸುಂದರಿ ಸಂತಾನಂ ಅವರು ಯಕ್ಷಗಾನ ರಂಗಭೂಮಿಗೆ ಬಂದ ಬಗೆ ಹೇಗೆ? ಅವರೊಂದಿಗಿನ ಪ್ರದರ್ಶನಗಳಲ್ಲಿ ನೀವು ಕಂಡುಕೊಂಡ ಹೊಸ ಅನುಭವಗಳೇನು?**

□ ಇನ್ನೂರು ಪ್ರದರ್ಶನಗಳ ನಂತರ ನನ್ನ ನೃತ್ಯದಲ್ಲಿ ಬಹಳಷ್ಟು ಮಾರ್ಪಾಡುಗಳಾದವು. ನನ್ನ ಅಜ್ಞಾನದ ಅನುಭವ ನನಗೆ ಆಗಿತ್ತು. ಯಕ್ಷಗಾನದ ಹಿನ್ನೆಲೆಯ ಮೋಹ ಕಮ್ಮಿಯಾಗಿತ್ತು. ಮಾಧ್ಯಮದ ಮಿತಿಯಿಂದ ಹೊರಬರುವ ಮಾರ್ಗದ ಹುಡುಕಾಟದಲ್ಲಿದ್ದೆ. ಖ್ಯಾತ ಭರತನಾಟ್ಯ ಕಲಾವಿದೆ ಡಾ. ಪದ್ಮಾ ಸುಬ್ರಹ್ಮಣ್ಯಂ ಅವರ ಶಿಷ್ಯೆ ಶ್ರೀಮತಿ ಸುಂದರೀ ಸಂತಾನಂ ಅವರ ಪರಿಚಯದಿಂದಾಗಿ ಶ್ರೀ ಆರ್. ಗಣೇಶ ಅವರ ಸೂಚನೆಗೆ ಅನುಸಾರವಾಗಿ ನಾಟ್ಯಶಾಸ್ತ್ರದಲ್ಲಿನ ಚಾರಿಗಳನ್ನು, ಅಂಗವ್ಯಾಯಾಮಗಳನ್ನು, ಹಸ್ತ ಕರಣ, ಮುದ್ರೆಗಳನ್ನು ಅರಿಯುವ ಅವಕಾಶ ದೊರೆಯಿತು. ಶಿಸ್ತಿನಿಂದ ಹೇಳಿಕೊಡುವ, ಸರಳ ವ್ಯಕ್ತಿತ್ವದ ಶ್ರೀಮತಿ ಸುಂದರೀ ಸಂತಾನಂ ಅವರ ಮಾರ್ಗದರ್ಶನದಿಂದಾಗಿ ಈ ಕಲಿಕೆಗಳು ಯಕ್ಷಗಾನದ ರೇಖೆಗಳಲ್ಲಿ ಅದ್ಭುತ ಬದಲಾವಣೆಗಳನ್ನು ತರಬಲ್ಲವು ಮಾತ್ರವಲ್ಲ ಯಕ್ಷಗಾನದ ಶಾಸ್ತ್ರೀಯ ಸೌಂದರ್ಯವನ್ನು ಕಾಣಿಸಲು ಸಾಧ್ಯ ಎಂಬುದು ಮನದಟ್ಟಾಯಿತು. ಅವರಲ್ಲಿ ಪಾಠ ನಡೆಯಿತ್ತಿರುವಾಗಲೇ ಶ್ರೀಮತಿ ಸುಂದರೀ ಸಂತಾನಂ ಅವರಿಗೆ ಯಕ್ಷಗಾನದ ಸತ್ವ, ಅದರ ಆಹಾರ್ಯ ಆಕರ್ಷಿಸಿದವು. ತಾನು ಯಕ್ಷಗಾನದಲ್ಲಿ ಭಾಗವಹಿಸಬೇಕೆಂಬ ಇಚ್ಛೆ ವ್ಯಕ್ತ

ಪಡಿಸಿದರು. ತಾನು ಯಕ್ಷಗಾನದ ಗಂಡುವೇಷ ಮಾಡುತ್ತೇನೆ ಎಂದರು. ತಮ್ಮ ಅನಾರೋಗ್ಯದ ನಡುವೆಯೂ ಹಂಸ ಸಂದೇಶದಲ್ಲಿ ಅವರು ನಳನಾಗಿ ನಾನು ದಮಯಂತಿಯಾಗಿ ಅಭಿನಯಿಸಿದೆವು. ಪ್ರಯಾಣ ಹೆಜ್ಜೆ, ತೆರೆ ಕುಣಿತ, ಕೆಲವು ಮುಖ್ಯ ತಾಳಗಳ ಹೆಜ್ಜೆಗಳನ್ನು ಶ್ರೀ ಕೃಷ್ಣಮೂರ್ತಿ ತುಂಗರ ಮೂಲಕ ಕಲಿತುಕೊಂಡರು. ಅವರ ಉತ್ಸಾಹ, ಅವರ ಶಿಸ್ತು, ಗ್ರಹಿಸುವ ಪರಿ ವಿಶೇಷ ವಾದದ್ದು. ನಾಲ್ಕಾರು ಪ್ರದರ್ಶನಗಳಲ್ಲಿ ಭಾಗವಹಿಸಿ ಎಲ್ಲರ ಮೆಚ್ಚುಗೆಯನ್ನು ಗಳಿಸಿಕೊಂಡರು. ಈಗ ನಮ್ಮ ಮುಂದೆ ಇಲ್ಲದ ಅವರು ಕಡಿಮೆ ಅವಧಿಯಲ್ಲಿ ಮಾಡಿದ ದೊಡ್ಡ ಸಾಧನೆಯನ್ನು ಅವರ ಗುರುಗಳೇ ಆದ ಡಾ. ಪದ್ಮಾ ಸುಬ್ರಹ್ಮಣ್ಯಂ ಅವರು ಮನಸಾರೆ ಮೆಚ್ಚಿಕೊಂಡಿದ್ದಾರೆ. ಡಾ. ಪದ್ಮಾ ಸುಬ್ರಹ್ಮಣ್ಯಂ ಅವರ ಯಕ್ಷಗಾನ ಕುರಿತಾದ ಆಸಕ್ತಿ ನಿಮಗೂ ತಿಳಿದೇ ಇದೆ. ನನ್ನ ಬೆಳವಣಿಗೆ ಯಲ್ಲಿ ಕೂಡ ಶ್ರೀಮತಿ ಸುಂದರಿ ಸಂತಾನಂ ಅವರ ಮಾರ್ಗದರ್ಶನದ ಪಾಲು ಇದೆ.

◆ **ಯಕ್ಷಗಾನ ಸ್ತ್ರೀ ಪಾತ್ರವನ್ನೇ ಮೊದಲಿನಿಂದಲೂ ಆಯ್ಕೆ ಮಾಡುವಲ್ಲಿ ಯಾವುದಾದರೂ ತಾತ್ವಿಕ ಹಿನ್ನೆಲೆ ಇದೆಯೇ? ಸ್ತ್ರೀ ವೇಷದ ಪರಿಪೋಷಣೆಯಲ್ಲಿ ನಿಮ್ಮ ಕಾಣ್ಕೆ ಏನು?**

□ ಚಿಕ್ಕವರಿದ್ದಾಗ ಉತ್ತಮ ಅಂಗಸೌಷ್ಠವ ಇರುವವರು ಸ್ತ್ರೀ ಪಾತ್ರದ ಮೂಲಕವೇ ರಂಗದಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ ಬಹುಕಾಲ ಅಲ್ಲಿಯೇ ಉಳಿಯುವುದಿಲ್ಲ. ಹೆಚ್ಚುಕಾಲ ಸ್ತ್ರೀವೇಷಧಾರಿಯಾಗುವಲ್ಲಿ ಕಲೆಗಾರಿಕೆಯ ಸವಾಲು ಇರುತ್ತದೆ. ಗಂಡಿನ ಸಾಮರ್ಥ್ಯವನ್ನು ಅಲ್ಲಿ ಮರೆಯಬೇಕು. ಹೊರಬದುಕಿನಲ್ಲಿ ಹಾಗೂ ಕಲಾಬದುಕಿನಲ್ಲಿ ಬೇರೆ ಬೇರೆಯಾಗಿ ಕಾಣಿಸಿಕೊಳ್ಳಬೇಕಾಗುತ್ತದೆ. ಅದೊಂದು ರೀತಿಯ ಯೋಗದ ದಾರಿ. ಉತ್ತಮ ಅಂಗಸೌಷ್ಠವವನ್ನು ದೀರ್ಘಕಾಲ ಉಳಿಸಿಕೊಳ್ಳುವುದೇ ಅಲ್ಲದೆ , ಹೆಣ್ಣಿನ ಸೂಕ್ಷ್ಮತೆಯ ಅರಿವು ಇರಬೇಕಾಗುತ್ತದೆ. ಗಂಡುವೇಷದ ಪಾತ್ರಧಾರಿಗೆ ವೇಷಭೂಷಣಗಳ ಅನುಕೂಲವಿರುತ್ತದೆ. ಕುಣಿತವೂ ಜಾಸ್ತಿ ಇರುತ್ತದೆ. ಆದರೆ ಸ್ತ್ರೀ ವೇಷದ ಪಾತ್ರಧಾರಿಗಳಿಗೆ ಈ ಅನುಕೂಲಗಳಿಲ್ಲ. ಆತನ ಕುಣಿತವು ಹೃದಯಕ್ಕೆ ಮುಟ್ಟುವಂತೆ ಲಾಸ್ಯಮಯ ವಾಗಿ ಇರಬೇಕಾಗುತ್ತದೆ. ಇದಕ್ಕಾಗಿಯೇ ಪ್ರಾರಂಭದಿಂದಲೂ ಸ್ತ್ರೀ ಪಾತ್ರವನ್ನೇ ನೆಚ್ಚಿಕೊಂಡೆ. ಕೊನೆಯವರೆಗೂ ಅದರಲ್ಲೇ ಉಳಿಯಬೇಕೆಂಬ ನಿರ್ಧಾರ ಕೈಗೊಂಡೆ. ಯಕ್ಷಗಾನ ಮಾಧ್ಯಮದಲ್ಲಿ ಸ್ತ್ರೀವೇಷವನ್ನು ಪುರುಷರು ಮಾತ್ರಮಾಡಿ ದಕ್ಕಿಸಿಕೊಳ್ಳಬಲ್ಲರು. ಅದೇ ಸ್ತ್ರೀಯೊಬ್ಬಳು ಮಾಡಿದರೆ ಮಾಧ್ಯಮದಲ್ಲಿ ಅದು ತೊಡಕಾಗಿ ಕಾಣುತ್ತದೆ. ಇದೇ ಈ ರಂಗದ ವಿಶೇಷ. ನಾಟಕ ರಂಗದಂತೆ ಸ್ತ್ರೀ ಪಾತ್ರವನ್ನು ಸ್ತ್ರೀಯರೇ ಮಾಡುವ ಪರಿ ಇಲ್ಲ. ಬರಲಾರದು ಎಂದು ಅನ್ನಿಸುತ್ತದೆ. ನಾನು ಸ್ತ್ರೀ ಪಾತ್ರವಹಿಸಲು ಪ್ರಾರಂಭಿಸಿದಂದಿನಿಂದ

ಇಂದಿನವರೆಗೂ ಬೆಳೆಯುತ್ತಾ ಬಂದಿದ್ದೇನೆ. ಸೀರೆ ಉಡುವ ಕ್ರಮದಲ್ಲಿ, ಆಭರಣ ಧರಿಸುವ ವಿಧಾನದಲ್ಲಿ, ಶಿರೋಭೂಷಣ ತೊಡುವ ರೀತಿಯಲ್ಲಿ, ಆಹಾರ್ಯಗಳಲ್ಲಿ ಹೆಚ್ಚಿನ ಬದಲಾವಣೆ ಮಾಡಿಕೊಂಡಿದ್ದೇನೆ. ಅಭಿನಯ, ಕುಣಿತದಲ್ಲಿ ಕೆಲವೊಂದು ಮಾರ್ಪಾಡು ಮಾಡಿಕೊಂಡಿದ್ದೇನೆ. ಇದನ್ನು ಕೆಲವು ಸ್ತ್ರೀಪಾತ್ರಧಾರಿಗಳು ಮೆಚ್ಚಿಕೊಂಡಿ ದ್ದಾರೆ. ಬಹಳ ಹಿಂದೆ ಸ್ತ್ರೀ ವೇಷಕ್ಕೆ ಯಾರೂ ಆದೀತು ಎಂಬ ಭಾವ ಮೇಳದಲ್ಲಿ ಇತ್ತು. ಈಗ ಬದಲಾಗಿದೆ. ಖ್ಯಾತ ಭಾಗವತ ಕಾಳಿಂಗ ನಾವುಡ ರಿಂದ ಪ್ರಾರಂಭಗೊಂಡ ಈ ಬದಲಾವಣೆಯನ್ನು ಅನೇಕ ಹೊಸ ಪ್ರಸಂಗಕಾರರು ಅನುಸರಿಸಿದ್ದಾರೆ. ವೃತ್ತಿ ಮೇಳಗಳ ಪ್ರಸಂಗಗಳಲ್ಲಿ ಈಗ ಸ್ತ್ರೀ ವೇಷಕ್ಕೆ ಸಾಕಷ್ಟು ಅವಕಾಶವಿದೆ. ನನ್ನ ಆಂಗಿಕವಾದ ಕಲಾಶಕ್ತಿ ರಸೋತ್ಪತ್ತಿಗೆ ಕಾರಣವಾಗುವ ಭಾವೋತ್ಕರ್ಷಗಳೆಲ್ಲಾ ಸ್ತ್ರೀ ಪಾತ್ರಕ್ಕೆ ಹೆಚ್ಚು ಹೊಂದುತ್ತದೆ.

◆ **ನಿಮ್ಮ ಏಕವ್ಯಕ್ತಿ ಯಕ್ಷಗಾನದ ಬಗ್ಗೆ ಉಳಿದ ರಂಗದಲ್ಲಿರುವವರ ಅಭಿಪ್ರಾಯ ಗಳೇನು? ನಿಮ್ಮ ಕಲಾ ಬದುಕಿನಲ್ಲಿ ಮರೆಯಲಾರದ ಘಟನೆ ಯಾವುದಾದರೂ ಇದೆಯಾ?**

□ ಯಕ್ಷಗಾನ ರಂಗದಿಂದ ಹೊರಗಿರುವ ಅನೇಕರು ನಮ್ಮ ಈ ಪ್ರದರ್ಶಗಳನ್ನು ಮನಸಾರೆ ಮೆಚ್ಚಿದ್ದಾರೆ. ಸಂಗೀತಕಾರರು, ಸಾಹಿತಿಗಳು, ನೃತ್ಯಕಲಾವಿದರೆಲ್ಲ ನಮ್ಮ ಪ್ರದರ್ಶನದ ಉತ್ತಮ ಅಂಶಗಳನ್ನು ಶ್ಲಾಘಿಸಿದ್ದಾರೆ. ನೃತ್ಯರಂಗದಲ್ಲಿ ಖ್ಯಾತರಾದ ಡಾ. ಪದ್ಮಾಸುಬ್ರಹ್ಮಣ್ಯಂ ನಿರುಪಮಾ ರಾಜೇಂದ್ರ, ಶಮಾ ಸಂಜಯ, ಅನುರಾಧ, ಸಾಹಿತಿಗಳಾದ ಯು.ಆರ್.ಅನಂತಮೂರ್ತಿ, ಎಚ್.ಎಸ್. ವೆಂಕಟೇಶಮೂರ್ತಿ, ಕೆ.ಇ.ರಾಧಾಕೃಷ್ಣ, ಚಿತ್ರಕಲಾವಿದರಾದ ನೀರ್ನಳ್ಳಿ ಗಣಪತಿ, ಖ್ಯಾತ ಸಂಗೀತಗಾರರಾದ ವಿದ್ಯಾಭೂಷಣರು, ಚಿತ್ರ ನಟರಾದ ಡಾ.ವಿಷ್ಣುವರ್ಧನ್, ಶಿವರಾಂ, ಶ್ರೀನಾಥ್, ಚಿಂತಕರಾದ ವೀಣಾ ಬನ್ನಂಜೆ ಮುಂತಾದವರೆಲ್ಲ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ. ಅನೇಕ ಪತ್ರಿಕೆಗಳಲ್ಲಿ ಮುಕ್ತಕಂಠದ ವರದಿ ಪ್ರಕಟವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಮೂರು ವರ್ಷದ ಕೆಳಗೆ ಕೂಚೂಪುಡಿ ಗ್ರಾಮದಲ್ಲಿ ನಡೆದ ಕಲಾ ಉತ್ಸವದಲ್ಲಿ ಭಾಗವಹಿಸಿದ್ದು ಮರೆಯಲಾಗದ್ದು. ಶ್ರೀ ಕೃಷ್ಣಮೂರ್ತಿ ತುಂಗ ಹಾಗೂ ನಾನು ಯಕ್ಷಗಾನವನ್ನು ಪ್ರತಿನಿಧಿಸಿದ್ದೆವು. ಅಲ್ಲಿ 'ವಿಜಯ ವಿಲಾಸ'ವನ್ನು ಆಯ್ದು ಕೊಂಡೆವು. ಕೂಚುಪುಡಿಯ ಪ್ರಸಿದ್ಧ ವಿದ್ವಾಂಸರೂ, ಪದ್ಮಶ್ರೀ ವೇದಾಂತ ಸತ್ಯನಾರಾಯಣ ಶರ್ಮ ಅವರ ಸಮ್ಮುಖದಲ್ಲಿ ವಿಶೇಷವಾಗಿ ಪ್ರದರ್ಶಿ ಸುವ ಅವಕಾಶ ಲಭಿಸಿತು. ಅವರು ಕಣ್ಣು ತುಂಬ ನೋಡಿದ್ದಲ್ಲದೆ, ಅವರ ಕೈಯಿಂದಲೇ ನಮಗೆ ಕನಕಪುಷ್ಪಾಭಿಷೇಕ ಮಾಡಿದ್ದು ಯಕ್ಷಗಾನಕ್ಕೆ ಸಂದ ಗೌರವವಾಗಿದೆ. ಕಲಾ ಉತ್ಸವದಲ್ಲಿ ಕನಕಪುಷ್ಪಾಭಿಷೇಕವೆಂದರೆ ಅತ್ಯುನ್ನತವಾದ

ಗೌರವವಿದ್ದಂತೆ. ಅಲ್ಲಿನ ಪ್ರಕಾಂಡ ಪಂಡಿತರೆಲ್ಲರೂ ಯಕ್ಷಗಾನದ ಶಕ್ತಿಯನ್ನು ಸೌಂದರ್ಯವನ್ನು ಮನಸಾರೆ ಶ್ಲಾಘಿಸಿದ್ದಾರೆ. ಇದು ನನಗೆ ಅತ್ಯಂತ ತೃಪ್ತಿ ಹಾಗೂ ಸಂತೋಷವನ್ನು ಕೊಟ್ಟ ಗಳಿಗೆಯಾಗಿದೆ.

◆ ಧನ್ಯವಾದಗಳು.

■

ಏಕವ್ಯಕ್ತಿಯ ಹಿಮ್ಮೇಳ

ಹೆಸರು ಏಕವ್ಯಕ್ತಿ ಯಕ್ಷಗಾನವೆಂದರೂ ಗೆಲುವು ಏಕ ವ್ಯಕ್ತಿಯದ್ದಲ್ಲ. ಏಕತಂಡದ್ದು ಎಂದು ಹೇಳುವ ಮಂಟಪ ಪ್ರಭಾಕರ ಉಪಾಧ್ಯರ ಮಾತಿನಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಈ ಏಕವ್ಯಕ್ತಿ ಯಕ್ಷಗಾನ ಪ್ರದರ್ಶನಗಳ ಹಿಂದಿನ ಚಿಂತನೆ, ಸಾಹಿತ್ಯ ಮಾರ್ಗ ದರ್ಶನಗಳೆಲ್ಲದರ ಮೂಲಾಧಾರ ಶತಾವಧಾನಿ ಡಾ.ಆರ್.ಗಣೇಶರು. ಅವರ ಹಾಡಿಗೆ ಸಮರ್ಥವಾಗಿ ದನಿಗೂಡಿಸಿದವರು ಭಾಗವತರಾದ ವಿದ್ವಾನ್ ಗಣಪತಿ ಭಟ್ಟರು. ಪದ್ಯದ ಭಾವವನ್ನು ಅರಿತು ಕುಣಿಯುವವರಿಗೆ ಪೂರಕವಾಗುವಂತೆ ಮದ್ದಳೆಯನ್ನು ನುಡಿಸಿದ ಹೆಗ್ಗಳಿಕೆಗೆ ಪಾತ್ರರಾದವರು ಶ್ರೀ ಅನಂತಪದ್ಮನಾಭ ಪಾಠಕರು. ಅದೇ ರೀತಿ ಸ್ತ್ರೀ ವೇಷದ ಲಾಸ್ಯಕ್ಕೆ ಸರಿಹೊಂದುವಂತೆ ಒಳಾಂಗಣ ಪ್ರಯೋಗಕ್ಕೆ ಯುಕ್ತವಾಗುವಂತೆ ಅಬ್ಬರದ ಚಂಡೆಯ ದನಿಯನ್ನು ಹ್ರಸ್ವಗೊಳಿಸಿ ಹೃದ್ಯವಾಗಿ ನುಡಿಸಿದವರು ಹಿರಿಯ ಚಂಡೆವಾದಕರಾದ ಶ್ರೀ ಇಡಗುಂಜಿ ಕೃಷ್ಣ ಯಾಜಿಯವರು. ಹೀಗೆ ಈ ಮೂವರ ಕೊಡುಗೆಗಳು ಉಲ್ಲೇಖಾರ್ಹ.

ವಿದ್ವಾನ್ ಗಣಪತಿ ಭಟ್

ಮೂಲತಃ ಸಂಸ್ಕೃತದ ಅಲಂಕಾರಶಾಸ್ತ್ರ ಹಾಗೂ ಸಾಹಿತ್ಯದಲ್ಲಿ ವಿದ್ವತ್ತನ್ನು ಗಳಿಸಿರುವ ಇವರು ದಿ.20-4-1961ರಲ್ಲಿ ಯಲ್ಲಾಪುರ ತಾಲೂಕಿನ ಮೊಟ್ಟೆಗದ್ದೆಯಲ್ಲಿ ವೆಂಕಟರಮಣ ಭಟ್ ಮತ್ತು ಶ್ರೀಮತಿ ಸರಸ್ವತಿ ಇವರ ಮಗನಾಗಿ ಜನಿಸಿದರು. ಉಡುಪಿಯ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಾ ಸಂಗೀತದ ಸೆಳೆತಕ್ಕೆ ಸಿಕ್ಕಿ

ಉಡುಪಿಯ ಖ್ಯಾತ ಸಂಗೀತ ವಿದ್ವಾಂಸರೂ, ಚಿಂತಕರೂ ಯಕ್ಷಗಾನ ಸಂಗೀತದ ಬಗ್ಗೆ ಆಳವಾದ ಜ್ಞಾನ ಉಳ್ಳವರೂ ಆದ ಪ್ರೊ. ಎಂ.ರಾಜಗೋಪಾಲಾಚಾರ್ಯರಲ್ಲಿ ಕರ್ನಾಟಕ ಸಂಗೀತವನ್ನೂ ಅಭ್ಯಾಸ ಮಾಡಿದರು. ಅದೇ ರೀತಿ ನಾಲ್ಕು ವರ್ಷಕಾಲ ಸಂಜೆ ಹೊತ್ತು ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಭಾಗವತ ನೀಲಾವರ ರಾಮಕೃಷ್ಣಯ್ಯ ಮತ್ತು ಗುರು ಮಹಾಬಲ ಕಾರಂತರಲ್ಲಿ ಭಾಗವತಿಕೆಯಲ್ಲೂ ತರಬೇತಿ ಪಡೆದುಕೊಂಡರು. ಕಳೆದ 33 ವರ್ಷಗಳಿಂದ ಯಕ್ಷಗಾನ ಭಾಗವತಿಕೆಯಲ್ಲಿ ತೊಡಗಿಸಿಕೊಂಡ ಶ್ರೀಯುತರು ಸಂಗೀತದ ನಾನಾ ಮಗ್ಗಲುಗಳ ಆಳವಾದ ಜ್ಞಾನ ಹೊಂದಿದವರು. ಯಕ್ಷಗಾನದ ರಾಗಗಳೊಂದಿಗೆ ಕರ್ನಾಟಕ ಸಂಗೀತದ ರಾಗಗಳ ಹೋಲಿಕೆ ವ್ಯತ್ಯಾಸಗಳ ಬಗ್ಗೆ ಅರಿವನ್ನು ಹೊಂದಿರುವವರು.

1980ರಿಂದ ಶಿರಸಿಯ ಪಂಚಲಿಂಗೇಶ್ವರ ಹಾಗೂ ಸಾಲಿಗ್ರಾಮ ಮೇಳದಲ್ಲಿ ಒಟ್ಟೂ ಆರು ವರ್ಷ ಭಾಗವತರಾಗಿ ದುಡಿದು ವೃತ್ತಿ ಮೇಳದ ಅನುಭವವನ್ನೂ ಹೊಂದಿರುವವರು. ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಎರಡು ವರ್ಷಗಳ ಕಾಲ ಹಾಗೂ ಗುಣವಂತೆಯ ಯಕ್ಷಗಾನ ಕೇಂದ್ರದಲ್ಲಿ ಆರು ವರ್ಷ ಗುರುಗಳಾಗಿ ಸೇವೆ ಸಲ್ಲಿಸಿ ಅನೇಕ ಶಿಷ್ಯರಿಗೆ ಮಾರ್ಗದರ್ಶನ ನೀಡಿದವರು ಇವರು. ಹೀಗೆ ಇವರಿಗಿರುವ ವೈವಿಧ್ಯಮಯ ಅನುಭವ ಏಕವ್ಯಕಿ ಯಕ್ಷಗಾನದ ಪ್ರಸ್ತುತಿಯಲ್ಲಿ ಸಹಕಾರಿಯಾಯಿತು. ಅವರೇ ತಮ್ಮ ಲೇಖನ ಒಂದರಲ್ಲಿ ಏಕವ್ಯಕ್ತಿ ಯಕ್ಷಗಾನದ ಹಾಡುಗಾರಿಕೆಯ ಬಗ್ಗೆ ಹೇಳಿರುವ ಕೆಳಗಿನ ಮಾತುಗಳು ಈ ಕಲಾ ಪ್ರಕಾರದ ಹಾಡುಗಾರಿಕೆಯ ಬಗ್ಗೆ ಕ್ಷಕಿರಣ ಬೀರುವುದಲ್ಲದೇ ಯಕ್ಷಗಾನ ಭಾಗವತಿಕೆಯ ಬಗೆಗೆ ಒಳನೋಟಗಳನ್ನು ಕೊಡುತ್ತವೆ.

* ಏಕವ್ಯಕ್ತಿ ಯಕ್ಷಗಾನದಲ್ಲಿ ಕೇವಲ ಸ್ತ್ರೀವೇಷವೊಂದೇ ರಂಗವನ್ನು ಆಳುವಂತಹುದಾಗಿದೆ. ಆದ್ದರಿಂದ ಹಾಡುಗಾರಿಕೆಯಲ್ಲಿ ಕಿರುಚದೇ ಅತ್ಯಂತ ಮೃದುವಾಗಿ ಹಾಡುವುದು, ರಾಗಭಾವಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುವುದು, ಮಂದ್ರ ಸ್ಥಾಯಿಯಲ್ಲಿಯೇ ಹೆಚ್ಚು ಹಾಡುವುದು, ಪಾತ್ರಪೋಷಣೆಗೆ ಅನುಕೂಲವಾಗುವಂತೆ ರಾಗಗಳನ್ನು ವಿಸ್ತರಿಸುವುದು, ಪದ್ಯಗಳ ಸಾಹಿತ್ಯವನ್ನು ಸ್ಪಷ್ಟವಾಗಿ ಉಚ್ಚರಿಸುವುದು–ಇವೆಲ್ಲ ಏಕವ್ಯಕ್ತಿ ಯಕ್ಷಗಾನದ ಹಾಡುಗಾರಿಕೆಯ ವೈಶಿಷ್ಟ್ಯಗಳು.

* ಉತ್ಕೃಷ್ಟವಾದ ಸಾಹಿತ್ಯವೇ ಹಾಡಿನ ಮೂಲಕ ರಾಗಭಾವವನ್ನು ಸ್ಫುಟಗೊಳಿಸುತ್ತದೆ. ಒಂದೊಂದು ಪದ್ಯದಲ್ಲಿಯೂ ಭಾವಸ್ಫುಟತೆ ಹಾಡುಗಾರನಿಗೆ, ನರ್ತಕನಿಗೆ ಸನ್ಮಾರ್ಗವನ್ನು ತೋರಿಸುತ್ತದೆ. ಇಂತಹ ಉತ್ಕೃಷ್ಟ ಸಾಹಿತ್ಯವನ್ನು ಹಾಡಿರುವುದು ಹಾಡುಗಾರನಾದ ನನ್ನ ಭಾಗ್ಯ ಎಂದು ನಂಬಿರುವೆನು.

* ಓರ್ವ ಸಮರ್ಥ ಕಲಾವಿದನಿಗೆ ಇರಬೇಕಾದ ಎಲ್ಲಾ ಅರ್ಹತೆಗಳೂ ಮಂಟಪರಲ್ಲಿ ಹುದುಗಿದೆ. ಪಾತ್ರಕ್ಕೆ ಭಾವದ ಮೂಲಕ ಜೀವ ತುಂಬುವುದು ಪ್ರತಿಯೊಂದು ಅಂಗಾಂಗಗಳ ಚಲನೆಯಿಂದ ಅಭಿನಯವನ್ನು ಸ್ಫುಟಗೊಳಿಸುವುದು. ಪದ್ಯಗಳಲ್ಲಿ ಇರುವ ಸಾಹಿತ್ಯಕ್ಕೆ ಹೊಸ ಹೊಸ ಕಲ್ಪನೆಗಳ ಮೂಲಕ ಅಭಿನಯಿಸುವುದು, ಮಾಡಿದ ಪಾತ್ರಗಳಲ್ಲಿ ತಾದಾತ್ಮ್ಯ, ನಿಷ್ಠೆ, ಶ್ರದ್ಧೆ ಎಂತಹ ಅನನುಕೂಲತೆಯಲ್ಲಿಯೂ ಪಾತ್ರಕ್ಕೆ ನ್ಯಾಯ ಒದಗಿಸಬೇಕೆನ್ನುವ ಸಮರ್ಪಣಾಭಾವ, ಪಾತ್ರವೇ ತಾನಾಗುವುದು, ಸ್ವಾರ್ಥವಿಲ್ಲದ ಕಲಾ ಸೇವೆ– ಈ ಎಲ್ಲ ಅಂಶಗಳೂ ಮಂಟಪರಲ್ಲಿ ಇವೆ.

ಅನಂತಪದ್ಮನಾಭ ಪಾಠಕ್

ಕಾರ್ಕಳ ಸಮೀಪದ ದುರ್ಗದಲ್ಲಿ 1968ರ ಮೇ ತಿಂಗಳಿನ 11ರಂದು ಜನಿಸಿದ ಅನಂತಪದ್ಮನಾಭ ಪಾಠಕರ ತಂದೆ ಶ್ರೀಕಂಠ ಪಾಠಕ್ ಹಾಗೂ ತಾಯಿ ಗಿರಿಜಾ ಅವರು. ಎಣ್ಣೆಹೊಳೆ ಶ್ರೀನಿವಾಸ ನಾಯಕರಲ್ಲಿ ಪ್ರಾರಂಭಿಕವಾಗಿ ಮದ್ದಳೆಯನ್ನು ಕಲಿತ ಅವರು 1995ರಲ್ಲಿ ಉಡುಪಿಯ ಯಕ್ಷಗಾನ ಕೇಂದ್ರವನ್ನು ಸೇರಿ ಯಕ್ಷಗಾನದ ಎಲ್ಲ ಅಂಗಗಳ ತರಬೇತಿ ಪಡೆದರು. ಅಲ್ಲಿ ಗುರು ಮಹಾಬಲ ಕಾರಂತರ ಮಾರ್ಗದರ್ಶನದಲ್ಲಿ ಮದ್ದಳೆಯಲ್ಲಿ ಸಿದ್ಧಹಸ್ತರಾದರು. ಹೆಗ್ಗೋಡಿನ ನೀನಾಸಂ ನಲ್ಲಿ ಎರಡು ವರ್ಷಗಳ ಕಾಲ ರೆಪರ್ಟರಿ ತಂಡದ ನಾಟಕಗಳಿಗೆ ಸಂಗಿತ ನೀಡುವವರಾಗಿ ವೃತ್ತಿ ಜೀವನ ಪ್ರಾರಂಭಿಸಿದ ಅವರು ಮುಂದೆ ಏಳು ವರ್ಷಗಳ ಕಾಲ ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಮದ್ದಳೆ ಹಾಗೂ ಚಂಡೆಯ ಶಿಕ್ಷಕರಾಗಿ ದುಡಿದರು. ಈ ಸಂದರ್ಭದಲ್ಲಿ 'ಯಕ್ಷರಂಗ'ದ ಪ್ರದರ್ಶನಗಳಲ್ಲಿ ಕೂಡ ತಮ್ಮನ್ನು ತೊಡಗಿಸಿಕೊಂಡವರು. ಗುಣವಂತೆಯ ಶ್ರೀಮಯ ಯಕ್ಷಗಾನ ಕಲಾಕೇಂದ್ರದಲ್ಲಿ 1995ರಿಂದ 2001ರವರೆಗೆ ಕೆರೆಮನೆ ಶಂಭು ಹೆಗಡೆಯಂತಹ ಪ್ರತಿಭಾವಂತರ ಮಾರ್ಗದರ್ಶನದಲ್ಲಿ ಯಕ್ಷಗಾನ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. 2001ರಿಂದ ಇಲ್ಲಿಯವರೆಗೆ ಏಕವ್ಯಕ್ತಿ ಯಕ್ಷಗಾನ ಪ್ರದರ್ಶನಗಳಲ್ಲಿ ಹಾಗೂ ಇತರೇ ಹವ್ಯಾಸೀ ಯಕ್ಷಗಾನ ಪ್ರದರ್ಶನ ಹಾಗೂ ತಾಳಮದ್ದಳೆಗಳಲ್ಲಿ ಮದ್ದಳೆ ವಾದಕರಾಗಿ ಭಾಗವಹಿಸಿ ಖ್ಯಾತರಾಗಿದ್ದಾರೆ. ಪ್ರಕೃತ ಬೆಂಗಳೂರಿನ ಮಾರತಹಳ್ಳಿಯಲ್ಲಿ ನೆಲೆಸಿರುವ ಇವರು ಬೆಂಗಳೂರಿನ ಬಾಲಕರಿಗೆ ಹಾಗೂ ಆಸಕ್ತರಿಗೆ ಹಿಮ್ಮೇಳದಲ್ಲಿ ತರಬೇತಿಯನ್ನು ನೀಡುತ್ತಿದ್ದಾರೆ. ಶ್ರೀ ಪಾಠಕರ ಅನುಭವ ಹಾಗೂ ಅಭಿಪ್ರಾಯಗಳು ಇಂತಿವೆ.

* ಯಶೋಧೆ ಕೃಷ್ಣನಿಗೆ ಕೊಳಲು ಕಲಿಸುವಾಗ ಕೊಳಲಿನ ನಾದವನ್ನು, ರುಕ್ಮಿಣಿಯನ್ನು ಕರೆದೊಯ್ಯುವ ಕೃಷ್ಣನ ಕುದುರೆಯ ಖುರಪುಟವನ್ನು ಮದ್ದಳೆಯಲ್ಲಿ ತರಲು ಪ್ರಯತ್ನಿಸಿದ್ದೇನೆ. ಇದು ಇಂತಹದೇ ಎಂದು ಹೇಳಿ

ಬಂದದ್ದಲ್ಲ. ಯಾವುದು ಉಚಿತ ಯಾವುದು ಅನುಚಿತ ಎಂಬುದನ್ನು ಅರಿತು ಮಾಡಿದ ಪ್ರಯೋಗವಾಗಿದೆ.

* ತೀರಾ ವೃತ್ತಿಪರ ಮೇಳಕ್ಕೆ ಹೋಗಿ ದೊಡ್ಡ ಮದ್ದಳೆಗಾರನಾಗಿ ಬದುಕ ಬಯಸುವ ಮನಸ್ಸು ನನ್ನದಲ್ಲ. 'ಏಕವ್ಯಕ್ತಿ ಯಕ್ಷಗಾನ' ನನಗೆ ಹೊಸ ಬೆಳಕನ್ನು ಬದುಕನ್ನು ಕಲ್ಪಿಸಿದೆ. ಔಚಿತ್ಯಜ್ಞಾನ ಹೆಚ್ಚಿಸಿದೆ.

* ಕಾಲನ್ನೇ ನೋಡಿ ಬಾರಿಸುವುದಾದರೆ ನಾನು ವಿದ್ಯಾರ್ಥಿ ದೆಸೆಯಲ್ಲಿ ಕಲಿತ ಕೆಲವು ಪೆಟ್ಟುಗಳು ಸಾಕು. ಮುಖವನ್ನು ನೋಡಿ ನುಡಿಸುವಾಗ ಅದು ಸಾಲದು. ನನ್ನಲ್ಲಿರುವ ಒಳಗಿನ ಪೆಟ್ಟುಗಳೇ ಭಾವವನ್ನು ಸ್ಫುರಿಸಿ ಅಭಿನಯಕ್ಕೆ ಒದಗಬೇಕು.

ಕೃಷ್ಣಯಾಜಿ ಇಡಗುಂಜಿ

ಏಕವ್ಯಕ್ತಿ ಯಕ್ಷಗಾನಹ ಪ್ರದರ್ಶನಕ್ಕೆ ಪ್ರಾರಂಭದಿಂದಲೂ ಚಂಡೆ ನುಡಿಸಿ ಕೊಂಡು ಬಂದವರು ಇಡಗುಂಜಿ ಕೃಷ್ಣ ಯಾಜಿಯವರು. 66ರ ಹರೆಯದ (1-2-1946) ಶ್ರೀ ಕೃಷ್ಣ ಯಾಜಿಯವರು ಇಡಗುಂಜಿಯಲ್ಲಿ ಜನಿಸಿದರು. ತಂದೆ ಗೋವಿಂದ ಯಾಜಿ ಮತ್ತು ತಾಯಿ ಹೊನ್ನಮ್ಮ ಅವರು. ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಯಾಜಿಯವರು ಗುಂಡಬಾಳೆ ಮೇಳದಲ್ಲಿ 20 ವರ್ಷಗಳ ಕಾಲ ವೇಷಧಾರಿಯಾಗಿ, ಮದ್ದಳೆವಾದಕರಾಗಿ, ಚಂಡೆವಾದಕರಾಗಿ ವೃತ್ತಿ ಪ್ರಾರಂಭಿಸಿದರು. ಬಡಗುತಿಟ್ಟಿನ ಶ್ರೀ ಅಮೃತೇಶ್ವರೀ ಮೇಳ, ಕಮಲಶಿಲೆ ಮೇಳ, ಸಾಲಿಗ್ರಾಮ ಮೇಳ, ಮಾರಣಕಟ್ಟೆ ಮೇಳಗಳಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ಭಾಗವತ ಕಾಳಿಂಗನಾವಡರ ತಂದೆ ರಾಮಚಂದ್ರ ನಾವುಡರಿಗೆ ಹಿಮ್ಮೇಳದ ಕಲಾವಿದರಾಗಿ ನಡೆದುಕೊಂಡ ದಿನಗಳನ್ನು ಆಪ್ತತೆಯಿಂದ ನೆನೆಯುತ್ತಾರೆ. ಹತ್ತು ವರ್ಷಗಳು ಗುಣವಂತೆಯ ಯಕ್ಷಗಾನ ಕೇಂದ್ರದಲ್ಲಿ ತರಬೇತಿದಾರರಾಗಿದ್ದಾಗ ಕೆರೆಮನೆ ಶಂಭು ಹೆಗಡೆಯವರ ಮಾರ್ಗದರ್ಶನದ ಲಾಭವನ್ನು ಗಳಿಸಿದ್ದಾರೆ. ಇದೇ ಕಾಲದಲ್ಲಿ ಇಡಗುಂಜಿ ಮೇಳದವರ ಆಟಗಳಲ್ಲಿ ಭಾಗವಹಿಸುತ್ತಿದರು. ಮುಂದೆ 2000ನೇ ಇಸವಿಯಿಂದ ಸತತವಾಗಿ 'ಏಕವ್ಯಕ್ತಿ ಯಕ್ಷಗಾನ' ಪ್ರದರ್ಶನದಲ್ಲಿ ಚಂಡೆವಾದಕರಾಗಿ ದ್ದಾರೆ. ಮಂಟಪ ಪ್ರಭಾಕರ ಉಪಾಧ್ಯರ ಯಕ್ಷಗಾನ ಜೀವನದ ಮೊದಲ ವರ್ಷದ ತಿರುಗಾಟದಲ್ಲಿಯೂ ಇವರು ಚಂಡೆವಾದಕರಾಗಿದ್ದುದು ಒಂದು ವಿಶೇಷ. ಮೂವರು ಹೆಣ್ಣುಮಕ್ಕಳ ತಂದೆಯಾಗಿರುವ ಕೃಷ್ಣ ಯಾಜಿಯವರ ಪತ್ನಿ ಶ್ರೀಮತಿ ರತ್ನಾವತಿ ಇಡಗುಂಜಿಯಲ್ಲಿದ್ದು ಸಂಸಾರವನ್ನು ತೂಗಿಸಿಕೊಂಡು ಹೋಗುವ ಗೃಹಿಣಿ. ಏಕವ್ಯಕ್ತಿ ಯಕ್ಷಗಾನದ ಅನುಭವದಿಂದ ಕೃಷ್ಣ ಯಾಜಿಯವರು ಆಡಿದ ಮಾತುಗಳ ಸಾರ ಇಂತಿದೆ.

* ಸಾಮಾನ್ಯವಾಗಿ ಯಕ್ಷಗಾನದಲ್ಲಿ ಸ್ತ್ರೀವೇಷದ ಕುಣಿತ ಮತ್ತು ಅಭಿನಯಕ್ಕೆ ಚಂಡೆಯನ್ನು ಬಳಸಿಕೊಳ್ಳುವುದಿಲ್ಲ. ಆದರೆ ಎಲ್ಲ ಪ್ರದರ್ಶನದ ಉದ್ದಕ್ಕೂ ಅಭಿನಯಕ್ಕೆ ತಕ್ಕಂತೆ ಚಂಡೆ ವಾದ್ಯವನ್ನು ತಂದು ಸೂಕ್ತವಾಗಿ ಬಳಸಲಾಗಿದೆ.

* ನನ್ನ ಪಾಲಿಗೆ ಏಕವ್ಯಕ್ತಿ ಯಕ್ಷಗಾನ ತುಂಬಾ ಗೌರವ ತಂದುಕೊಟ್ಟಿದೆ. ಇದು ನನಗೆ ಸವಾಲು ಕೂಡ ಆಗಿತ್ತು. ಆಟದಲ್ಲಿ ಚಂಡೆಯ ನಾದವಲ್ಲ, ಅಬ್ಬರ. ಏಕವ್ಯಕ್ತಿಯಲ್ಲಿ ಸ್ತ್ರೀವೇಷದ ನಾಜೂಕಿಗೆ ತಕ್ಕಂತೆ ಅಬ್ಬರವಿಲ್ಲದೇ ಸನ್ನಿವೇಶಕ್ಕೆ ತಕ್ಕಂತೆ ಇಂಪಾಗಿಯೇ ಬಾರಿಸಬೇಕು.

* ಪ್ರದರ್ಶನದ ಉದ್ದಕ್ಕೂ ಪಾತ್ರಧಾರಿಯ ಅಭಿನಯವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ಚಂಡೆ ಬಾರಿಸುವ ಕೆಲಸ ನನಗಂತೂ ತುಂಬಾ ಖುಷಿ ಕೊಟ್ಟಿದೆ.

* ಈ ಕಾರ್ಯಕ್ರಮ ಕೇವಲ ಯಕ್ಷಗಾನಾಸಕ್ತಿ ಉಳ್ಳವರಿಗಲ್ಲದೆ, ಸಂಗೀತ, ನೃತ್ಯಗಳಂಥ ವಿವಿಧ ಕಲಾಕ್ಷೇತ್ರದಲ್ಲಿರುವವರಿಗೂ ತುಂಬಾ ಇಷ್ಟವಾಗಿದೆ. ಗೌಜು–ಗದ್ದಲಗಳಿಲ್ಲದೆ ಶಾಂತವಾಗಿ ಭಾವಪೂರ್ಣತೆಯಿಂದ ನೋಡುವಂತಹ ಕಾರ್ಯಕ್ರಮ ಇದು.

■

ಯಕ್ಷಲೋಕಕ್ಕೆ ಕಾವ್ಯಲೋಕದ ಪ್ರತಿಕ್ರಿಯೆ – ಹೆಚ್.ಎಸ್.ವಿ. ಅವರಿಂದ

ಕನ್ನಡ ಕಾವ್ಯ ಪರಂಪರೆಯ ಬಗ್ಗೆ ಅಪಾರ ಒಲವು, ಆಸಕ್ತಿ ಹಾಗೂ ಪಾಂಡಿತ್ಯವುಳ್ಳ ಡಾ॥ ಎಚ್.ಎಸ್. ವೆಂಕಟೇಶ್‌ಮೂರ್ತಿಯವರು ಇವತ್ತಿನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮಹತ್ವರ ಕವಿಗಳಾಗಿ, ನಾಟಕಕಾರರಾಗಿ, ವಿಮರ್ಶಕರಾಗಿ ಖ್ಯಾತಿಗಳಿಸಿದ್ದಾರೆ. ಬದುಕಿನ ಮೂರು ದಶಕಗಳನ್ನು ಗ್ರಾಮೀಣ ಭಾಗದಲ್ಲಿ ಬಾಳಿ ಹಳ್ಳಿ ಬದುಕಿನ ಸೊಗಡನ್ನು ಅರಿತವರು. ಯಕ್ಷಗಾನದಂತಹ ಸಾಂಪ್ರದಾಯಿಕ ಕಲೆಯ ಬಗ್ಗೆ ಪ್ರೀತಿ ಹಾಗೂ ಕುತೂಹಲ ಇರುವ ಇವರ ಅಭಿಪ್ರಾಯಗಳಿಗೆ ಹೊರಗಿನವರೆಂಬ ನೆಲೆಯಲ್ಲಿ ವಿಶೇಷ ಬೆಲೆ ಇದೆ. ಕನ್ನಡ ಕಥನಕವನಗಳಿಗೆ ಹೊಸ ಆಯಾಮ ದೊರಕಿಸಿಕೊಟ್ಟ ಕನ್ನಡ ಕಥನ ಪರಂಪರೆಯ ಬಗ್ಗೆ ವಿಶೇಷ ಅಧ್ಯಯನ ನಡೆಸಿದರು ಶ್ರೀಯುತರು ಹೆಚ್.ಎಸ್.ವಿ.ಯೆಂದೇ ಪ್ರಸಿದ್ಧರು. ಪೌರಾಣಿಕವೆಂಬಂತಹ ಪ್ರಸಂಗವೊಂದನ್ನು ಆಯ್ದುಕೊಂಡು ಆಧುನಿಕ ಸಮಸ್ಯೆಗಳನ್ನು, ವಿಚಾರಧಾರೆಗಳನ್ನು ನಿಕಷಕ್ಕೆ ಒಡ್ಡುವ ಇವರ ಪರಿ ವಿನೂತನವಾದದ್ದು. ಈ ಬಗೆಯ ವಸ್ತು ಪ್ರತಿರೂಪ (Obejective Correlative) ವಾಗಿರುವ ಪ್ರಯತ್ನ ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೊಂದು ಹೊಸ ಆಯಾಮವಾಗಬಲ್ಲದು.

ಡಾ॥ ಎಚ್.ಎಸ್.ವೆಂಕಟೇಶ ಮೂರ್ತಿಯವರು ಮಲೆನಾಡ ಸೆರಗಿನ ಚೆನ್ನಗಿರಿ ತಾಲೂಕಿನವರು. ಹೊದಿಗೆರೆಯ ತಮ್ಮ ತಾತನ ಮನೆಯಲ್ಲಿ ಬಾಲ್ಯವನ್ನು ಕಳೆದ ಅವರು ಯಕ್ಷಗಾನ ಗೊಂಬೆಯಾಟದಂತಹ ಪ್ರಕಾರಕ್ಕೆ ಮಾರುಹೋದವರು. ತಾತ ಸ್ವತಃ ಮದ್ದಲೆ

ನುಡಿಸಬಲ್ಲವರಾಗಿದ್ದರು. ಮಲ್ಲಾಡಿಹಳ್ಳಿಯಲ್ಲಿ ವೃತ್ತಿಜೀವನ ಪ್ರಾರಂಭಿಸಿ ಬೆಂಗಳೂರಿನ ಸಂತ ಜೋಸೆಫರ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಮೂರುದಶಕಗಳ ಕಾಲ ಸೇವೆಸಲ್ಲಿಸಿ ನಿವೃತ್ತರಾದವರು. 1968ರಿಂದ ಕಾವ್ಯರಚನೆ ಪ್ರಾರಂಭಿಸಿದ ಹೆಚ್.ಎಸ್.ವಿ. ಯವರು ಈಗಾಗಲೇ 27ಕ್ಕೂ ಹೆಚ್ಚು ಕವನ ಸಂಕಲನವನ್ನು, 14ಕ್ಕೂ ಹೆಚ್ಚು ನಾಟಕಗಳನ್ನು, 16ಕ್ಕೂ ಹೆಚ್ಚು ಕಥೆಕಾದಂಬರಿಗಳನ್ನು, 11ಕ್ಕೂ ಹೆಚ್ಚು ವಿಮರ್ಶಕ ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳ ಸಾಹಿತ್ಯ, ಸುಗಮಸಂಗೀತ ಸಾಹಿತ್ಯ, ಅಂಕಣ ಬರಹ, ಸಿನೇಮಾ, ಟಿವಿ ಧಾರವಾಹಿ ಮೊದಲಾದ ಕ್ಷೇತ್ರಗಳಿಗೆ ತಮ್ಮ ಕೊಡುಗೆ ನೀಡಿದ್ದಾರೆ. ಹೀಗೆ ವೈವಿಧ್ಯಮಯ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಹೆಚ್.ಎಸ್.ವಿ. ಯವರು ಸಮಗ್ರವಾದ ಸಮೃದ್ಧವಾದ ಶ್ರೀಮಂತವಾದ ಸತ್ವಪೂರ್ಣವಾದ, ಕೃತಿಗಳನ್ನು ನಾಡಿಗೆ ಕೊಟ್ಟು ಎಲ್ಲೆಡೆ ಮಾನ್ಯರಾಗಿದ್ದಾರೆ.

ಡಾ॥ ಹೆಚ್.ಎಸ್.ವಿ.ಯವರು ಕನ್ನಡ ಕಾವ್ಯ ಪರಂಪರೆಯೊಂದಿಗೆ ನಿರಂತರ ಅನುಸಂಧಾನ ಮಾಡಿಕೊಂಡು ಬಂದವರು. ಆಡುಮಾತಿನ ಲಯವನ್ನು ಕಥನ ಪ್ರಕಾರಕ್ಕೆ ಬಳಸಿ ಕತೆಗಾರಿಕೆಯ ಜೊತೆಯಲ್ಲಿ ಬರುವ ನಿರೂಪಣೆಯೇ ಒಂದು ಸಂಕೇತ ಚಿತ್ರವಾಗುವಂತೆ ಮಾಡುವ ವಿಶೇಷತೆಯನ್ನು ಸಾಧಿಸಿಕೊಂಡಿದ್ದಾರೆ. ಎಲ್ಲಾ ಅನುಭವಗಳನ್ನು ತಳಮೂಲದಿಂದ ಪಕ್ವತೆಯೊಂದಿಗೆ ಗ್ರಹಿಸುವ ಧಾರಣಶಕ್ತಿ ಉಳ್ಳ ಈ ಮಹತ್ವದ ಕವಿಯ ಮಾತುಗಳು ಯಕ್ಷಗಾನ ರಂಗಕ್ಕೆ ಹೊರಗಿನಿಂದ ನೋಡುವ ಸಹೃದಯಯೊಬ್ಬನ ಮಾತುಗಳಾಗಿದ್ದು ಯಕ್ಷಗಾನ ಕಲಾ ಬೆಳವಣಿಗೆಗೆ ಪೂರಕ ವಾಗಬಲ್ಲದು.

◆ **ಯಕ್ಷಗಾನದ ಕಥನ ಪರಂಪರೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು ? ಕನ್ನಡ ಕಥನ ಕಾವ್ಯಗಳಿಗೆ ಅಪೂರ್ವ ಕೊಡುಗೆ ನೀಡಿರುವ ಹಿನ್ನೆಲೆಯಲ್ಲಿ ವಿವರಿಸಬಹುದೆ?**

□ ಕನ್ನಡ ಸಂಸ್ಕೃತಿಗೆ ಯಕ್ಷಗಾನ ನೀಡಿದ ಕೊಡುಗೆ ವಿಶಿಷ್ಟವಾದುದು. ಮಲೆನಾಡ ಸೆರಗಿನ ಪ್ರದೇಶದ ನನ್ನ ಬಾಲ್ಯದಲ್ಲಿ ಯಕ್ಷಗಾನ, ಗೊಂಬೆಯಾಟಗಳು ನಮ್ಮ ಮನಸ್ಸುಗಳ ಮೇಲೆ ಮಾಡಿರುವ ಪ್ರಭಾವ ಅಪೂರ್ವವಾದುದು. ಆಗೆಲ್ಲ ಮನೆಯಲ್ಲಿ ಜಡಜಾಪತ್ತು ಬಂದಾಗೆಲ್ಲಾ ಗೊಂಬೆಯಾಟ ಆಡಿಸುವ ಹರಕೆ ಹೊತ್ತುಕೊಳ್ಳುತ್ತಿದ್ದರು. ಊರಿನಿಂದ 6–7 ಮೈಲು ದೂರದಲ್ಲಿರುವ ಹೀರೆಗಂಗೂರಿನ ಗೊಂಬೆಯಾಟದ ಮೇಳದವರಿಗೆ 'ವೀಳ್ಯ' ಕೊಟ್ಟು ಆಟದ ದಿನ ನಿಶ್ಚಯಿಸುತ್ತಿದ್ದರು. ಅಲ್ಲಿನ 6–7 ಕಲಾವಿದರು ಬಂಡಿಗಳಲ್ಲಿ ಗೊಂಬೆಗಳನ್ನು ಹೇರಿಕೊಂಡು ಸಂಜೆಯ ಹೊತ್ತಿಗೆ ಊರನ್ನು ಸೇರಿ ಮುಖ್ಯವಾದ ಜಾಗದಲ್ಲಿ ರಂಗಸ್ಥಳವನ್ನು ನಿರ್ಮಾಣ ಮಾಡಿ ರಾತ್ರಿ 9–10 ಗಂಟೆಗೆ ಪ್ರಾರಂಭಿಸಿ ಬೆಳಗಿನ ಜಾವದವರೆಗೆ ಒಂದೆರಡು ಪ್ರಸಂಗಗಳನ್ನು ಪ್ರದರ್ಶಿಸುತ್ತಿದ್ದರು.

ರಾಮಾಯಣ, ಮಹಾಭಾರತ, ಭಾಗವತದ ಕಥೆಗಳು ಅಲ್ಲಿ ಪ್ರಸ್ತುತವಾಗುತ್ತಿದ್ದವು. ಆ ಕಥಾಲೋಕ ಆ ವೇಷಭೂಷಣ, ಆ ರಂಗಸಜ್ಜಿಕೆ, ಗೊಂಬೆಗಳ ಬಣ್ಣಗಾರಿಕೆ ನೋಡುವುದೇ ಕಣ್ಣಿಗೆ ಹಬ್ಬ. ಮನಸ್ಸಿನ ಆಳದಲ್ಲಿ ಆ ಕಥೆಗಳೆಲ್ಲಾ ಹುಗಿದಿವೆ. ಆ ಮೇಳದವರು ಪಾರ್ತಿಸುಬ್ಬನೇ ಮುಂತಾದ ಘಟ್ಟದ ಕೆಳಗಿನಲ್ಲಿ ಬಳಕೆಯಲ್ಲಿರುವ ಪ್ರಸಂಗಗಳನ್ನು ಪ್ರದರ್ಶಿಸುತ್ತಿದ್ದರು. ಪರದೆಯ ಹಿಂದೆ ಕುಣಿಯುವ ಕಲಾವಿದರ ಕುಣಿತ, ಪಕ್ಕದಲ್ಲಿ ಕುಳಿತು ಹಾಡುವ ಭಾಗವತ ಮದ್ದಲೆಯವರ ಪರಿಯೆಲ್ಲಾ ಇವತ್ತು ಕಾಣುವ ಯಕ್ಷಗಾನದ ಮಾದರಿಯಲ್ಲೇ ಇರುತ್ತಿತ್ತು. ಅಲ್ಲಿನ ಅಸಂಖ್ಯ ಕತೆಗಳು ನನ್ನ ಮನಸ್ಸಿನ ಮೇಲೆ ಪ್ರಭಾವ ಬೀರಿವೆ. ಆ ಕಥಾಲೋಕ ನನಗೆ ಅನೇಕ ಹೊಳಹುಗಳನ್ನು ನೀಡಿವೆ. ನನ್ನ ಮನೋಲೋಕದಲ್ಲಿ ಅಚ್ಚೊತ್ತಿರುವ ಅನೇಕ ಕಥನಗಳಿಗೆ ಯಕ್ಷಗಾನದ ಹಾಗೂ ಗಮಕದ ಪ್ರೇರಣೆ ಇದೆ.

◆ **ಗಮಕ ಕಲೆಗೂ ಹಾಗೂ ಯಕ್ಷಗಾನಕ್ಕೂ ನಡುವಿನ ಸಂಬಂಧ ಎಂತಹದು? ನಾಡಿನ ಸಂಸ್ಕೃತಿಯನ್ನು ರೂಪಿಸುವಲ್ಲಿ ಈ ಎರಡು ಕಲೆಗಳ ಪಾತ್ರವೆಂತಹದು?**

□ 1200 ವರ್ಷಗಳ ಹಿರಿಮೆ ಇರುವ ಕನ್ನಡ ಕಾವ್ಯಪರಂಪರೆಯಲ್ಲಿ ಗಮಕಕ್ಕೆ ವಿಶಿಷ್ಟವಾದ ಸ್ಥಾನವಿದೆ. ಕನ್ನಡ ಕಾವ್ಯಗಳ ಶ್ರೀಮಂತಿಕೆಯನ್ನು ಜನಸಾಮಾನ್ಯರಿಗೆ ಮುಟ್ಟಿಸಿದ ಕೀರ್ತಿ ಗಮಕಕ್ಕೆ ಸಲ್ಲುತ್ತದೆ. ಗಮಕವೂ ಒಂದು ಬಗೆಯ ಧಾರ್ಮಿಕ ಆಚರಣೆಯಾಗಿಯೇ ಅಸ್ತಿತ್ವದಲ್ಲಿ ಬಂದದ್ದು. ದೇವತಾಪೂಜೆ, ಮಂಗಳಾರತಿ, ವಾಚನದುದ್ದಕ್ಕೂ ದೀಪ ಹಚ್ಚಿಡುವುದು, ವ್ಯಾಸಪೀಠಕ್ಕೆ ಸಲ್ಲುವ ಗೌರವ ಇವೆಲ್ಲಾ ಧಾರ್ಮಿಕ ಪರಿವೇಷವನ್ನು ನಿರ್ಮಿಸುತ್ತವೆ. ಯಕ್ಷಗಾನದಲ್ಲಿ ಇದೇ ರೀತಿಯ ಆರಾಧನೆಯ ಅಂಶಗಳಿವೆ. ಇನ್ನೂ ಹೆಚ್ಚು ಅಲ್ಲಿ ಆರಾಧನೆಯ ಅಂಗಗಳು ಬೆಳೆದಿವೆ. ಗಮಕದಲ್ಲಿ ಹಾಡಿನ ಜೊತೆ ವ್ಯಾಖ್ಯಾನ ಬಂದಾಗ ಅದು ಏಕಕಾಲಕ್ಕೆ ಪಠ್ಯ ಸಂಪ್ರದಾಯವನ್ನು ಜೊತೆಯಲ್ಲಿ ಮೌಖಿಕ ಸಂಪ್ರದಾಯವನ್ನು ಹೊಂದಿಸಿಕೊಂಡು ಹೋಗುವ ಪರಿಸ್ಥಿತಿಗೆ ಈಡಾಯಿತು. ಅಭಿವ್ಯಕ್ತಿ ಸ್ವಾತಂತ್ರ್ಯದಿಂದಾಗಿ ಅದು ಒಂದೇ ಕಾಲಕ್ಕೆ ಪ್ರಾಚೀನವೂ, ಅರ್ವಾಚೀನವೂ ಆಯಿತು. ನಿಮ್ಮ ಯಕ್ಷಗಾನದಲ್ಲಿ ಪರೋಕ್ಷವಾಗಿ ಈ ಹೊಂದಾಣಿಕೆ ಇದೆ. ಹಾಡುವ ಪದ್ಯ ಪಠ್ಯಕ್ಕೆ ಸೇರಿದ್ದರೆ, ಆಡುವ ಗದ್ಯ ಮೌಖಿಕ ಸಂಪ್ರದಾಯಕ್ಕೆ ಸಲ್ಲುತ್ತದೆ. ಗಮಕ ಯಾವಾಗಲೂ ರಾಗಪ್ರಧಾನ, ತಾಳಪ್ರಧಾನವಲ್ಲ. ಆದರೆ ನಿಮ್ಮ ತಾಳಮದ್ದಳೆಯಲ್ಲಿ ತಾಳ ಹಾಗೂ ಮದ್ದಲೆಯೇ ಪ್ರಧಾನ ಪರಿಕರಗಳಾಗುತ್ತವೆ. ಅಲ್ಲಿನ ಅರ್ಥ ವೈಭವವಂತೂ ವಿಶಿಷ್ಟವಾದದ್ದು. ತಾಳಮದ್ದಳೆಯನ್ನೇ ಹೋಲುವ ಗಮಕರೂಪಕ ಈಚೆಗೆ ಬಳಕೆಗೆ ಬರುತ್ತಿದೆ. ಇಲ್ಲ ಕೆಲವೊಮ್ಮೆ ವಾಚನದಲ್ಲಿ ಒಂದಕ್ಕಿಂತ ಹೆಚ್ಚು ಕಲಾವಿದರಿರುತ್ತಾರೆ. ಅದೇರೀತಿ ವ್ಯಾಖ್ಯಾನದಲ್ಲೂ ಒಂದೊಂದು ಪಾತ್ರವನ್ನು ಒಬ್ಬೊಬ್ಬ

ವ್ಯಾಖ್ಯಾನಕಾರ ವಹಿಸಿಕೊಳ್ಳುತ್ತಾನೆ. ಹೀಗೆ 'ಪಾತ್ರ'ವಾಗಿ ಮಾತನಾಡುವುದೇ ರೂಪಕವಾಗಿ ಕಾಣಿಸಿಕೊಂಡಿದೆ. ಕನ್ನಡಕಾವ್ಯ ಪರಂಪರೆಯಲ್ಲಿ ಕವಿಗಳು ಹಾಗೂ ಗಮಕಿಗಳು ಅನಿವಾರ್ಯವಾದ ತತ್ವಗಳಾಗಿದ್ದಾರೆ. ಇದು ಕನ್ನಡಕ್ಕೆ ವಿಶಿಷ್ಟವಾದ ಕಲಾಪ್ರಕಾರ. ನಿಯಮಿತವಾದ ಶ್ರೋತೃಗಳು ಮತ್ತು ಒಳಾಂಗಣ ದಲ್ಲೇ ಪ್ರಸ್ತುತವಾಗುವುದರಿಂದ ಮಂದ್ರವೇ ಸ್ಥಾಯಿಯಾಗಿದೆ. ಆದರೆ ಯಕ್ಷ ಗಾನ ಬಯಲಾಟ ಅಥವಾ ಗೊಂಬೆಯಾಟಗಳು ಹೀಗಿಲ್ಲ. ಯಕ್ಷಗಾನದ ಭಾಗವತ ಬಯಲಿನಲ್ಲಿ ಹಾಡುವುದರಿಂದ ಏರುಶ್ರುತಿ ಅನಿವಾರ್ಯವಾಯಿತು. ಎತ್ತರದ ಧ್ವನಿಯೇ ಯಕ್ಷಗಾನದ ಸ್ವಭಾವವಾಯಿತು. ಬಹುಸಂಖ್ಯೆಯ ಪ್ರೇಕ್ಷಕ ರನ್ನು ತಲುಪಬೇಕಾದ್ದರಿಂದ ಮತ್ತು ಸುತ್ತಲು ಪ್ರೇಕ್ಷಕರು ಕುಳಿತಿರುವುದರಿಂದ ಪುನರಾವರ್ತನೆಗಳು ಅಲ್ಲಿ ಸಾಮಾನ್ಯವಾಯಿತು. ಗಮಕಿಗಿಂತ ಭಾಗವತನ ಜವಾಬ್ದಾರಿ ಬಹುದೊಡ್ಡದು. ಗಮಕ ಹಾಡುವವನಿಗೆ ಸಂಗೀತದ ಪರಿಜ್ಞಾನ ವಿದ್ದು ರೂಢಿಯಿಂದ ಬಳಕೆಯಲ್ಲಿರುವ ರಾಗಗಳನ್ನು ಭಾವಕ್ಕೆ ಹೊಂದಿಸಿ ಹಾಡಿದರೆ ಸಾಕು. ಗಮಕದಲ್ಲಿ ಭಾವಕ್ಕೆ ಪರಮಪಟ್ಟ, ಕಾವ್ಯದ ಒಳಗಿರುವ ಸೊಗಸನ್ನು ಉಣಬಡಿಸುವುದಷ್ಟೇ ಅವನ ಕೆಲಸ. ಆದರೆ ಭಾಗವತನದ್ದು ಹಾಗಲ್ಲ. ಆತ ಯಕ್ಷಗಾನ ಕವಿಯ ಪದ್ಯದ ಸೊಗಸನ್ನು ಹಾಡುವುದರೊಂದಿಗೆ ತಾಳ ಹಾಕುತ್ತಾ ಎದುರಿಗೆ ನಿಂತಿರುವ ಪಾತ್ರವನ್ನು ಕುಣಿಸುವ ಕಲೆಗಾರಿಕೆಯನ್ನು ಮೈಗೂಡಿಸಿಕೊಂಡಿರಬೇಕಾಗುತ್ತದೆ. ಯಕ್ಷಗಾನ ಪ್ರಸಂಗಗಳು ಕನ್ನಡದ ಹಾಡುಗಬ್ಬಗಳಾಗಿದ್ದು ರಂಗಕ್ಕೆ ಸರಿಹೊಂದುವ ಜಾಯಮಾನದವು. ಇವು ಕನ್ನಡ ಸಾರಸ್ವತ ಲೋಕಕ್ಕೆ ಕಥನಪರಂಪರೆಯನ್ನು ನೀಡುವ ಮೂಲಕ ಶ್ರೀಮಂತಗೊಳಿಸಿವೆ.

◆ **ಕನ್ನಡ ಕಾವ್ಯಪರಂಪರೆಯೊಂದಿಗೆ ಯಕ್ಷಗಾನದ ತಳಕು ಯಾವ ಮಟ್ಟದ್ದು? ನಾಡಿನ ಒಟ್ಟು ಪ್ರಮುಖ ಕವಿಯಾಗಿ ನಿಮ್ಮ ಅಬಿಪ್ರಾಯವೇನು ?**

❑ ಕೀರ್ತನ ಸಾಹಿತ್ಯದಂತೆ ಯಕ್ಷಗಾನ ಕೂಡ ಹೆಚ್ಚಾಗಿ ಭಕ್ತಿಪ್ರಸಾರಕ್ಕೆ ತನ್ನನ್ನು ತೆತ್ತುಕೊಂಡಂತೆ ಕಾಣುತ್ತದೆ. ನಡುಗನ್ನಡ ಕಾಲದಲ್ಲಿ ನಾಡಿನಾದ್ಯಂತ ಹರಿ ಭಕ್ತಿಯ ಪ್ರಸಾರ ಹೆಚ್ಚಿದ ಸಂದರ್ಭದಲ್ಲಿ ಯಕ್ಷಗಾನವು ಕೂಡ ಆ ಕಾರ್ಯದ ವಾಹಕವಾಗಿರಬೇಕು. ಅಂತೆಯೇ ಶಿವ ಪಾರಮ್ಯದ ಶಕ್ತಿ ಪಾರಮ್ಯದ ಪ್ರಸಂಗಗಳು ಬಂದಿವೆ. ಭಾಗವತ cult ಕನ್ನಡ ನೆಲದಲ್ಲಿ ಒಳಬೇರನ್ನು ಬಿಡುತ್ತಾ ಹೋದಂತೆ ಹರಿಕಥೆಗಳು, ಯಕ್ಷಗಾನ ಕೃತಿಗಳು, ಶೋಭಾನೆ ಪದಗಳು ಮುಂತಾದ ಪ್ರಾಕಾರಗಳೆಲ್ಲಾ ಹೆಚ್ಚು ಹೆಚ್ಚು ಬಳಕೆಗೆ ಬಂದಿರಬೇಕು. ಯಕ್ಷಗಾನ, ಸಣ್ಣಾಟ, ಕೃಷ್ಣ ಪಾರಿಜಾತ, ಗೊಂಬೆಯಾಟಗಳಲ್ಲೆಲ್ಲಾ ಭಕ್ತಿ ಪಾರಮ್ಯವೇ ದೊಡ್ಡದಾಯಿತು. ಕರಾವಳಿ ಪ್ರದೇಶದಲ್ಲಿ ಯಕ್ಷಗಾನಕ್ಕೆ ದೇವಸ್ಥಾನಗಳ ಆಶ್ರಯ ದೊರೆತಿದ್ದು ಈ ಕಾಲಘಟ್ಟದಲ್ಲೇ ಇರಬೇಕು. ಭಾಗವತ ಶಬ್ದದ ಬಳಕೆಯೇ ಈ ಅಂಶವನ್ನು

ಎತ್ತಿ ಹಿಡಿಯುತ್ತದೆ. ಮುಂದೆ ಸಾಮಾಜಿಕ ವಿಚಾರಗಳು, ಐತಿಹಾಸಿಕ ಸಂಗತಿಗಳು, ಸಾಮಾಜಿಕ ವಿಘಟನೆಗಳು ಕಲಾತ್ಮಕ ಅಭಿವ್ಯಕ್ತಿಯನ್ನು ಪಡೆದಿರಬೇಕು.

ಇನ್ನು ಕನ್ನಡ ಸಂಸ್ಕೃತಿಯ ದೃಷ್ಟಿಯಿಂದ ಹೇಳುವುದಾದರೆ ಯಕ್ಷಗಾನ ನಾಟಕ ರಂಗಭೂಮಿಯ ಮೇಲೆ ಅಪಾರ ಪ್ರಭಾವ ಬೀರಿದೆ. 'ಮ್ಯಾಕಬೆತ್' ನಂತಹ ನಾಟಕ ಯಕ್ಷಗಾನ ರೂಪದಲ್ಲಿ ಪ್ರಸ್ತುತಿಗೊಂಡಿದೆ. ಕರಾವಳಿ ಪ್ರದೇಶದಲ್ಲಂತೂ ಅನೇಕ ಪ್ರತಿಭಾವಂತರು ಯಕ್ಷಗಾನದ ಸಾಧ್ಯತೆಗಳನ್ನು ಬೇರೆ ಬೇರೆ ಮಾಧ್ಯಮದಲ್ಲಿ ದುಡಿಸಿಕೊಂಡಿದ್ದಾರೆ. 20ನೇ ಶತಮಾನದ ಪ್ರಾರಂಭದಲ್ಲೇ ಯಕ್ಷಗಾನ ಪ್ರಸಂಗಗಳನ್ನು ರಚಿಸಿ ಮುದ್ದಣನು ಹೆಸರು ಮಾಡಿದ್ದಾನೆ. ಕನ್ನಡದ ಶ್ರೇಷ್ಠಕವಿ ಹಾಗೂ ಬಹುಶ್ರುತರಾಗಿರುವ ಡಾ॥ ಪು.ತಿ. ನರಸಿಂಹಚಾರ್ ಅವರು ಕೂಡ ಒಂದು ಯಕ್ಷಗಾನ ಪ್ರಸಂಗವನ್ನು ರಚಿಸಿದ್ದಾರೆಂಬುದು ಐತಿಹಾಸಿಕ ದಾಖಲೆ. ಅವರ ಗೀತನಾಟಕಗಳ ಮೇಲೆ ಯಕ್ಷಗಾನದ ಪ್ರಭಾವ ಇರಬಹುದು. ಕನ್ನಡದ ಶ್ರೇಷ್ಠ ಸಾಹಿತಿಗಳಾದ ಡಾ॥ ಶಿವರಾಮ ಕಾರಂತರು ಯಕ್ಷಗಾನ ಪ್ರಸಂಗ ರಚಿಸದೇ ಇದ್ದರೂ ಯಕ್ಷಗಾನ ರಂಗದಲ್ಲಿ ಪ್ರಯೋಗದಲ್ಲಿ ತೊಡಗಿಸಿಕೊಂಡು ಮಹತ್ತರ 'ಕಾಣ್ಕೆ'ಯನ್ನು ನೀಡಿದ್ದಾರೆ ಎಂಬುದನ್ನು ನೆನಪಿಸಿಕೊಳ್ಳಬೇಕು. ಅವರೂ ಕೆಲವು ಗೀತನಾಟಕಗಳನ್ನು ರಚಿಸಿದ್ದಾರೆ. ಪು.ತಿ.ನ. ಅವರು ತಮ್ಮ 'ಸತ್ಯಾಯನ ಹರಿಶ್ಚಂದ್ರ'ವನ್ನು ಯಕ್ಷಗಾನ ಪ್ರಸಂಗವೆಂದೇ ಕರೆದಿದ್ದಾರೆ. ಬಿ.ವಿ.ಕಾರಂತರ ನಿರ್ದೇಶನದ ಅವರ 'ಗೋಕುಲ ನಿರ್ಗಮನ'ದ ಮೇಲೆ ಯಕ್ಷಗಾನದ ಪ್ರಭಾವ ಢಾಳಾಗಿ ಕಾಣಿಸಿಕೊಂಡಿದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ॥ ಚಂದ್ರಶೇಖರ್ ಕಂಬಾರ ಅವರ ನಾಟಕಗಳ ಮೇಲೆ ಉತ್ತರ ಕರ್ನಾಟಕದ ಯಕ್ಷಗಾನ ರಂಗಭೂಮಿಯ ಪ್ರಭಾವ ಸ್ಪಷ್ಟವಾಗಿದೆ. ಕಂಬಾರರು ತಮ್ಮ ಕಾವ್ಯ, ನಾಟಕಗಳಲ್ಲಿ ಈ ರಂಗಭೂಮಿಯ ಅನೇಕ ಸಾಧ್ಯತೆಗಳನ್ನು ದುಡಿಸಿಕೊಂಡಿದ್ದಾರೆ. ಹೀಗೆ ಕನ್ನಡದ ಅನೇಕ ಮುಖ್ಯ ಕವಿಗಳು, ನಾಟಕಕಾರರು ಯಕ್ಷಗಾನದಲ್ಲಿ ತಮ್ಮ ಆಸಕ್ತಿಯನ್ನು ತೋರಿಸಿದ್ದಾರೆ. ಶ್ರೀ ಚಂದ್ರಶೇಖರ ಕೆದ್ಲಾಯರಂತವರ ಭಾವ ಗೀತೆಗಳ ಗಾಯನದಲ್ಲೂ ಯಕ್ಷಗಾನ ಹಾಡುಗಾರಿಕೆಯ ಪ್ರಭಾವ ಇದೆ. ಅನೇಕ ಗಮಕಿಗಳು, ವ್ಯಾಖ್ಯಾನಕಾರರೂ ಕರಾವಳಿಯಿಂದ ಬಂದಿದ್ದಾರೆ. ಇವರುಗಳು ಯಕ್ಷಗಾನದಿಂದ ಸಾಕಷ್ಟು ಪ್ರಭಾವಿತರಾಗಿದ್ದಾರೆ ಎನ್ನುವುದು ನನಗೆ ಮುಖ್ಯವೆನಿಸುತ್ತಿದೆ.

ಇನ್ನೂ ಕಾವ್ಯದ ಕಡೆಗೆ ಹೊರಳಿದರೆ ಕನ್ನಡಕಾವ್ಯ ಲೋಕಕ್ಕೆ ಹೊಸದಾರಿ ಹಾಕಿಕೊಟ್ಟ ಗೋಪಾಲಕೃಷ್ಣ ಅಡಿಗರ ಕನವಗಳಲ್ಲಿ ಕಾಣುವ ಓಜಸ್ಸೆಲ್ಲ ಯಕ್ಷಗಾನದಿಂದ ಬಂದ ರೀತಿಯಲ್ಲಿದೆ. ಅವರ ಕಾವ್ಯಶಕ್ತಿಯ ಗತ್ತು ಗೈರತ್ತು,

ಪ್ರಖರತೆ, ಮಾತಿನ ಶಕ್ತಿ, ಸಂವಾದ ಕ್ರಮವೆಲ್ಲಾ ಯಕ್ಷಗಾನದ ಕೊಡುಗೆ. ತಮ್ಮ ಕವನ ಸಂಕಲನವೊಂದಕ್ಕೆ 'ಚಂಡೆಮದ್ದಳೆ' ಎಂದೇ ಹೆಸರಿದ್ದಾರೆ. ಕಡೆಂಗೊಡ್ಲು ಶಂಕರಭಟ್ಟರ 'ಮಾದ್ರಿಯಚಿತೆ'ಯ ಹಿರಿಮೆ ಗರಿಮೆಗಳಲ್ಲಿ ಯಕ್ಷಗಾನದ ಪಾಲೂ ಇದೆ. ಕೆ.ವಿ.ತಿರುಮಲೇಶರ 'ಮಹಾಪ್ರಸ್ಥಾನ'ದಲ್ಲಿ ಯಕ್ಷಗಾನದ ಕಸುವು ಹೊಳಹು ಇದೆ. ಲಕ್ಷ್ಮೀಶ ತೋಳ್ಪಾಡಿಯವರ 'ಸಂಪಿಗೆ ಭಾಗವತ'ದ ಚಿಂತನಕ್ರಮ ಯಕ್ಷಗಾನ ಮೂಲದ್ದು. ತಾಳಮದ್ದಳೆ ಅರ್ಥಗಾರಿಕೆ ಯಲ್ಲಿರುವ ಅನ್ವೇಷಣೆಯ ಪ್ರವೃತ್ತಿಯನ್ನು ಅಲ್ಲಿ ಕಾಣಬಹುದು. ಇನ್ನೂ ಭಾರದ್ವಾಜರ ಕವನಗಳಲ್ಲಿ, ಅಮೃತ ಸೋಮೇಶ್ವರರ ಸಾಹಿತ್ಯ ಕೃಷಿಯಲ್ಲಿ ಹೀಗೆ ಅಸಂಖ್ಯಾತ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಯಕ್ಷಗಾನವೂ ಪ್ರಭಾವಳಿಯಂತೆ ಇದ್ದು ಶೋಭೆಯನ್ನು ತಂದುಕೊಟ್ಟಿದೆ. ಕರಾವಳಿ ಮಾತ್ರವಲ್ಲದೇ ಕರ್ನಾಟಕದ ಉಳಿದ ಭಾಗದ ಸಾಹಿತಿಗಳ ಮೇಲೂ ಅಲ್ಲಿನ ಯಕ್ಷಗಾನದ ಪ್ರಭಾವ ಇರುವುದನ್ನು ಗುರುತಿಸಬಹುದು. ಇದೊಂದು ಪ್ರೌಢ ಅಧ್ಯಯನಕ್ಕೆ ವಸ್ತುವಾಗಬಹುದು. ಕನ್ನಡ ಭಾಷೆಗೆ ಅನೇಕ ಹೊಸ ನುಡಿಕಟ್ಟುಗಳನ್ನು ಪ್ರೌಢಿಮೆಯನ್ನು ಯಕ್ಷಗಾನ ತಂದುಕೊಟ್ಟಿದೆ ಎಂಬುದು ನಿಸ್ಸಂದೇಹ.

◆ **ಕನ್ನಡದ ಒಬ್ಬ ಪ್ರಮುಖ ನಾಟಕ ರಚನಕಾರರಾಗಿ ಯಕ್ಷಗಾನ ರಂಗಭೂಮಿಯ ಕುರಿತ ನಿಮ್ಮ ಅನಿಸಿಕೆ ಏನು?**

□ ನಾನು ಮೊದಲೇ ಹೇಳಿದಂತೆ ಅನೇಕ ನಾಟಕಗಳ ಮೇಲೆ ಯಕ್ಷಗಾನದ ಪ್ರಭಾವ ಇದೆ. ತಾಳದ ಬಳಕೆ, ಚಂಡೆಯ ಬಳಕೆ, ಭಾಗವತನೆಂಬ ಪಾತ್ರದ ಸೃಷ್ಟಿ, ಕೆಲವೊಮ್ಮೆ ವೇಷಗಾರಿಕೆಯಲ್ಲಿ ಯಕ್ಷಗಾನದ ವೇಷಗಾರಿಕೆಯ ಬಳಕೆ ಹೀಗೆ ನಾನಾ ರೀತಿಯಲ್ಲಿ ಆಗಿದೆ. ನಿಮ್ಮಲ್ಲಿ ಏಕವ್ಯಕ್ತಿ ಯಕ್ಷಗಾನವಿರುವಂತೆ ನಮ್ಮ ನಾಟಕ ರಂಗಭೂಮಿಯಲ್ಲಿ ಏಕವ್ಯಕ್ತಿ ಪ್ರಯೋಗದ ಬಳಕೆ ಇದೆ. ನನ್ನದೇ ರಚನೆಯಾದ ಊರ್ಮಿಳೆ, ಆಹತ, ಉರಿಯ ಉಯ್ಯಾಲೆಗಳು ರಂಗದಲ್ಲಿ ಸಾಕಷ್ಟು ಯಶಸ್ವಿ ಪ್ರಯೋಗಗಳನ್ನು ಕಂಡಿವೆ. 'ಊರ್ಮಿಳೆ'ಯಲ್ಲಿ ಮಂಗಳ ಅವರು 'ಆಹತ'ದಲ್ಲಿ ನಾಗಾಭರಣ ಅವರು, ಉರಿಯ ಉಯ್ಯಾಲೆ ಯಲ್ಲಿ ಜಯಶ್ರೀಯವರು ಪಾತ್ರವಹಿಸಿ ಈ ಬಗೆಯ ಪ್ರಯೋಗದ ಸಾಧ್ಯತೆ ಯನ್ನು ತೋರಿಸಿಕೊಟ್ಟಿದ್ದಾರೆ. ಸಿ.ಆರ್.ಸಿಂಹ, ಕೃಷ್ಣಮೂರ್ತಿ ಕವತ್ತಾರು, ಲಕ್ಷ್ಮೀಚಂದ್ರಶೇಖರ್, ಸೀತಾಕೋಟೆ ಮುಂತಾದವರೆಲ್ಲಾ ಕೂಡ ಏಕವ್ಯಕ್ತಿ ನಾಟಕಗಳಲ್ಲಿ ಭಾಗಿಗಳಾಗಿದ್ದಾರೆ. ನಿಮ್ಮ ಯಕ್ಷಗಾನ ರಂಗಭೂಮಿಯಲ್ಲಿನ ಏಕವ್ಯಕ್ತಿ ಪ್ರಯೋಗದಲ್ಲಿನ ಮಂಟಪ ಪ್ರಭಾಕರ ಉಪಾಧ್ಯರ ಪಾತ್ರ ನಿರ್ವಹಣೆ ಕೂಡ ಅಮೋಘವಾದುದು. ನನ್ನ 'ಹೆಜ್ಜೆಗಳು' ನಾಟಕ ಯಕ್ಷಗಾನ ರೂಪಕ್ಕೆ ಅಭಿವ್ಯಕ್ತಿಗೆ ಸರಿಹೊಂದುವಂತಹದು. ಅಲ್ಲಿ ಚಂದ್ರ, ಬೃಹಸ್ಪತಿ, ತಾರೆ ಇವರ ಸಂಬಂಧದ ವಿಶ್ವಾತ್ಮಕ ಅಭಿವ್ಯಕ್ತಿ ಇದ್ದು ಯಕ್ಷಗಾನದ ಪ್ರಯೋಗಕ್ಕೆ

ಒಳಪಡಿಸಬೇಕೆಂಬ ಬಯಕೆ ಇದೆ. ನನ್ನ 'ಚಿತ್ರಪಟ ರಾಮಾಯಣ'ದಲ್ಲೂ ಯಕ್ಷಗಾನದ ಅನೇಕ ಪ್ರಯೋಗ ಸಾಧ್ಯತೆಗಳನ್ನು ಬಳಸಿಕೊಂಡಿದ್ದೇನೆ.

◆ **ಕೊನೆಯದಾಗಿ ಯಕ್ಷಗಾನ ರಂಗಭೂಮಿಯ ಈಚಿನ ಬೆಳವಣಿಗೆಯ ಬಗ್ಗೆ ಹಾಗೂ ಅದರ ಮುನ್ನೋಟದ ಬಗ್ಗೆ ನಿಮ್ಮ ಅನಿಸಿಕೆ ಏನು ?**

□ ಯಕ್ಷಗಾನ 500–600 ವರ್ಷಗಳಿಂದ ಜನಸಾಮಾನ್ಯರ ರಂಗಭೂಮಿಯಾಗಿ ಬಾಳಿಕೊಂಡು ಬಂದಿದೆ. ಕರಾವಳಿ ಹಾಗೂ ಮಲೆನಾಡನ್ನು ಉಳಿದು ಬೇರೆ ಕಡೆ ಅದು ಕಳೆದ 50–60 ವರ್ಷಗಳಲ್ಲಿ ಹಿಂದೆ ಸರಿದಿದ್ದರೂ ಪುನಃ ಈಗ ಎಲ್ಲೆಡೆ ಚಿಗುರೊಡೆಯುತ್ತಿದೆ. ಕರಾವಳಿ ಪ್ರದೇಶಗಳಲ್ಲಂತೂ ವಿದ್ಯಾವಂತರ ಪ್ರವೇಶದಿಂದಾಗಿ, ಡಾ॥ ಶಿವರಾಮ ಕಾರಂತರ ಪ್ರಯತ್ನದಿಂದಾಗಿ ಅದು ವಿಶ್ವದ ಗಮನವನ್ನು ಸೆಳೆದಿದೆ. ಅಲ್ಲಿ ಅನೇಕ ಉತ್ತಮ ಕಲಾವಿದರು, ಪ್ರಯೋಗ ಶೀಲರು, ಅರ್ಥಧಾರಿಗಳು ಈ ಕಲೆಯನ್ನು ಬೆಳೆಸುತ್ತಿದ್ದಾರೆ. ಇವರುಗಳೆಲ್ಲರ ಪ್ರಯತ್ನದಿಂದಾಗಿ ಅದು ಗಡಿದಾಟಿ ಇಡೀ ರಾಜ್ಯದ ಪ್ರಾತಿನಿಧಿಕ ಕಲೆಯಾಗಿ ಮಾರ್ಪಟ್ಟಿದೆ. ಉಳಿದ ಭಾಗದವರು ನಿಮ್ಮಲ್ಲಿನ ಯಕ್ಷಗಾನವನ್ನು ಒಪ್ಪಿ ಕೊಳ್ಳುತ್ತಿದ್ದಾರೆ. ಬೆಂಗಳೂರು ನಗರದಲ್ಲೂ ಭದ್ರವಾದ ಸ್ಥಾನವನ್ನು ಈ ಕಲೆ ಪಡೆಯುತ್ತಿದೆ. ಇವತ್ತಿನ ಬದುಕಿಗೆ ಹತ್ತಿರವಾಗಬಲ್ಲ ಕೆಲವು ಬದಲಾವಣೆಗಳು ಅಗತ್ಯ. ಅದನ್ನು ಆ ರಂಗದಲ್ಲಿರುವ ವಿದ್ವಾಂಸರು, ಕಲಾವಿದರು, ಚಿಂತಕರು, ಅಕಾಡೆಮಿಯವರು ಕುಳಿತು ಬಳಕೆಗೆ ತಂದದ್ದೆ ಆದರೆ ಈ ಯಕ್ಷಗಾನ ಕಲೆಯ ಭವಿಷ್ಯ ಇನ್ನೂ ಉಜ್ವಲಮಾನವಾಗುವುದರಲ್ಲಿ ಸಂದೇಹವಿಲ್ಲ ಎಂಬುದು ನನ್ನ ಭಾವನೆ.

■

ಸಾಲಿಗ್ರಾಮ ಮಕ್ಕಳ ಮೇಳ

ಕರ್ನಾಟಕದ ಸುಂದರ ಶ್ರೀಮಂತ ಕಲೆ ಯಕ್ಷಗಾನ. ಅದನ್ನು ಮೊತ್ತಮೊದಲಿಗೆ ಪಾಶ್ಚಾತ್ಯ ರಂಗಭೂಮಿಯಲ್ಲಿ ಪ್ರಸ್ತುತಪಡಿಸಿದವರು ಸಾಲಿಗ್ರಾಮ ಮಕ್ಕಳ ಮೇಳದವರು. ಈ ಕಲೆಯ ಎಲ್ಲಾ ಶ್ರೀಮಂತಿಕೆಯನ್ನು, ಸಾಂಪ್ರದಾಯಿಕ ಅನುಚಾನಗಳನ್ನು, ಹುದುಗಿರುವ ಸೌಂದರ್ಯವನ್ನು ಯಾವೊಂದು ತಪ್ಪುಗಳಿಲ್ಲದೆ ಸಾದರಪಡಿಸಿದ್ದ ರಲ್ಲಿ ಈ ಮೇಳದ ಹೆಗ್ಗಳಿಕೆ ಇದೆ. 1978ರಲ್ಲಿ ಅಮೇರಿಕದ ಸ್ಯಾನಜೋಸ್ ನಗರದಲ್ಲಿ ನಡೆದ ಫೆಸಿಫಿಕ್ ಮಕ್ಕಳ ರಂಗ ಕಲೋತ್ಸವದಲ್ಲಿ ಭಾರತವನ್ನು ಪ್ರತಿನಿಧಿಸಿದ ಈ ಮೇಳ ಈ ಕಲೆಯ ಅಗಾಧ ಸಾಧ್ಯತೆಯ ಬಗ್ಗೆ ಪಾಶ್ಚಾತ್ಯ ವಿಮರ್ಶಕರ ಕಣ್ಣು ತೆರೆಯಿ ಸಿತು. ವಿದೇಶೀ ಪ್ರೇಕ್ಷಕರ ಮುಕ್ತಕಂಠದ ಶ್ಲಾಘನೆಗೆ ಗುರಿಯಾದ ಮಕ್ಕಳ ಮೇಳದ ದಿಗ್ವಿಜಯ ನಡೆದು 30 ವರ್ಷಗಳು ಸಂದಿವೆ. ಅದಕ್ಕಾಗಿಯೇ 2008ರಲ್ಲಿ ಸಂಭ್ರಮಾಚರಣೆಯು ನಡೆಯಿತು.

ಯಕ್ಷಗಾನದ ಬಗ್ಗೆ ಅಪಾರ ಪ್ರೀತಿ ಅಭಿಮಾನವನ್ನು ಇರಿಸಿಕೊಂಡಿದ್ದ ಇಬ್ಬರು ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರಾದ ದಿ॥ ಕಾರ್ಕಡ ಶ್ರೀನಿವಾಸ ಉಡುಪ ಹಾಗೂ ಶ್ರೀ ಎಚ್. ಶ್ರೀಧರ ಹಂದೆಯವರು ಮಕ್ಕಳ ಪ್ರತಿಭಾ ವಿಲಾಸವನ್ನು ಶಾಲಾ ವಾರ್ಷಿಕೋತ್ಸವಕ್ಕೆ ಸೀಮಿತಗೊಳಿಸದೆ ಮಕ್ಕಳನ್ನು ಆಧರಿಸಿ ಮೇಳವೊಂದನ್ನು ಕಟ್ಟಬಹುದೆಂದು ಮೊಟ್ಟಮೊದಲಿಗೆ ತೋರಿಸಿಕೊಟ್ಟರು. ಪಠ್ಯೇತರ ಚಟುವಟಿಕೆಗಳಿಂದ ಮಕ್ಕಳ ಮನಸ್ಸು ಹಿಗ್ಗುತ್ತದೆ. ಅದೇ ರೀತಿ ಅವರು ಏನು ಮಾಡಿದರೂ ನೋಡುವವರ ಕಣ್ಣಿಗೆ ಹಬ್ಬವಾಗುತ್ತದೆ. ಯಕ್ಷಗಾನದಂತಹ ಸುಂದರ

ಕಲೆಯನ್ನು ಸುಂದರ ಬಾಲಕರ ಮೂಲಕ ಸಾಕ್ಷಾತ್ಕರಿಸಿದರೆ ಅದೊಂದು ದೊಡ್ಡ ಸಾಧನೆಯಾಗ ಬಹುದೆಂಬ ಕನಸಿನಿಂದ 1975ರಲ್ಲಿ "ಶ್ರೀ ಜಗದ್ಗುರು ಕೃಪಾಪೋಷಿತ ಮಕ್ಕಳ ಮೇಳ, ಸಾಲಿಗ್ರಾಮ" ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರು. ತಾವು ಹಿಂದೆ ಕಂಡ ಬಡಗುತಿಟ್ಟಿನ ಶ್ರೇಷ್ಠ ಯಕ್ಷಗಾನ ಕಲಾವಿದರಾದ ಹಾರಾಡಿ ರಾಮ, ಕೃಷ್ಣ ಗುರುವೀರಭದ್ರನಾಯಕ ಮುಂತಾದವರ ಮೋಹಕ ಕುಣಿತ, ಆಕರ್ಷಕ ನಿಲುವಿನ ಭಂಗಿ, ರಂಗದಲ್ಲಿ ಮಿಂಚುವ ಮಿಂಚಿನ ಕ್ಷಣಗಳನ್ನು ಈ ಮಕ್ಕಳ ಪ್ರದರ್ಶನದಲ್ಲಿ ಪಡಿಮೂಡಿಸಲು ಹೆಣಗಿದರು. ಈ ಎಲ್ಲ ಹಿರಿಯ ಕಲಾವಿದರ ಕಲಾಪ್ರತಿಮೆಯ ಅಚ್ಚಿನಲ್ಲಿ ಅದ್ದಿ ತೆಗೆದು, ಆ ಮೂಲಕ ಶ್ರೇಷ್ಠ ಕಲಾವಿದರ ಕಲಾವೈಭವಗಳು ರಂಗದಲ್ಲಿ ಮರು ಹುಟ್ಟಾಗುವಂತೆ ಮಾಡುವಲ್ಲಿ ಸಫಲರಾದರು. ಎಲ್ಲಾ ಪತ್ರಿಕೆಗಳು ಮಕ್ಕಳ ಮೇಳದ ಪ್ರದರ್ಶನವನ್ನು ಮನಸಾರೆ ಹಾಡಿ ಹೊಗಳಿದವು. ಈ ಬೆಳವಣಿಗೆಯನ್ನು ಡಾ॥ ಕಾರಂತರು ಯಕ್ಷಗಾನಕ್ಕೆ ಹೊಸರೂಪ ನೀಡಿದ ನಂತರದ ದೊಡ್ಡ ಬೆಳವಣಿಗೆ ಎಂದು ಗುರುತಿಸ ಲಾಯಿತು.

ಸಾಲಿಗ್ರಾಮ ಮಕ್ಕಳ ಮೇಳವೆಂದರೆ ಅದೊಂದು ಚಿಕ್ಕಚೊಕ್ಕದಾದ ರಸಘಟ್ಟ, ಸವಿದಷ್ಟು ಅದರ ಸವಿ ಹೆಚ್ಚು. ಸಾಂಪ್ರದಾಯಿಕ ಸ್ತ್ರೀವೇಷಗಳ ಕುಣಿತ, ಒಡ್ಡೋಲಗ ಗಳ ಪ್ರದರ್ಶನ, ಯುದ್ಧದ ಕುಣಿತಗಳ ಬಿರುಸಿನ ನಾನಾ ನಡೆಗಳೆಲ್ಲ ಒಪ್ಪ ಓರಣ ದೊಂದಿಗೆ ಇಲ್ಲಿ ಇಡಿಕಿರಿದಿವೆ. ಪ್ರೇಕ್ಷಕ ಮೊದಲಿನಿಂದ ಕೊನೆಯವರೆಗೂ ಒಂದೇ ತೆರನಾದ ರಸಾಸ್ವಾದನೆಯಲ್ಲಿ ಮುಳುಗಿರುತ್ತಾನೆ. ಆಧುನಿಕ ಕಾಲಕ್ಕಂತೂ ಹೇಳಿ ಮಾಡಿಸಿದ್ದು. ವೃತ್ತಿಮೇಳಗಳ ದೀರ್ಘ ಪ್ರದರ್ಶನಗಳಲ್ಲಿ ಕಾಣುವ ಜಾಳುತನವಾಗಲಿ, ಏರುಪೇರುಗಳಾಗಲೀ ಇಲ್ಲಿಲ್ಲ. ಈ ಮೇಳ ವೀರ ವೃಷಸೇನ, ದ್ರುಪದ ಬಂಧನ, ಕೃಷ್ಣಾರ್ಜುನ, ಬಬ್ರುವಾಹನ ಮುಂತಾದ ಪುರಾಣೋಕ್ತ ಪ್ರಸಂಗಗಳನ್ನು ಮಾತ್ರ ಪ್ರದರ್ಶನಕ್ಕೆ ಆಯ್ದುಕೊಂಡಿದೆ. ಮಕ್ಕಳಿಗೆ ಯೋಗ್ಯವಾಗುವ ಸನ್ನಿವೇಶಗಳು, ಪಾತ್ರ ವೈವಿಧ್ಯಗಳು, ನೇರ ನಿರೂಪಣೆಗಳು ಈ ಪ್ರಸಂಗಗಳಲ್ಲಿವೆ. ಶಾಲಾ ದಿನಗಳ ಬಿಡುವಿನಲ್ಲಿ ಮಕ್ಕಳನ್ನು ಆರಿಸಿ, ಅವರಿಗೆ ಕಲಿಸಿ ರಜಾದಿನಗಳಲ್ಲಿ ಅವುಗಳ ಪ್ರದರ್ಶನ ನೀಡುವ ಕಾಯಕ ವನ್ನು ಅನೂಚಾನವಾಗಿ ನಡೆಸಿಕೊಂಡು ಬಂದಿದ್ದಾರೆ. ಮಕ್ಕಳಿಗೆ ಸಂಪ್ರದಾಯ ಬದ್ಧ ಕುಣಿತ ಮಣಿತಗಳನ್ನು ಕಲಿಸಿ, ಭಂಗಿಭಾವಗಳನ್ನು ಉಣಿಸಿ, ಸರಳ ಮಾರ್ಮಿಕ ಸಂಭಾಷಣೆಗಳನ್ನು ಧ್ವನಿಸಿ ಆ ಮೂಲಕ ಯಶಸ್ಸನ್ನು ಸಾಧಿಸುವುದೇ ಇಲ್ಲಿ ನಿರ್ದೇಶಕರ ಸಾಮರ್ಥ್ಯದ ಸವಾಲಾಗಿದೆ. ಈ ಸವಾಲನ್ನು ಸ್ವೀಕರಿಸಿ ಜಯಿಸಿದುದ್ದರಲ್ಲೆ ಶಿಕ್ಷಕದ್ವಯರ ಹೆಚ್ಚುಗಾರಿಕೆಯಿದೆ. ಈಚೆಗೆ ಕಾರ್ಕಡ ಶ್ರೀನಿವಾಸ ಉಡುಪರು ಇಲ್ಲವಾದರೂ ಶ್ರೀ ಶ್ರೀಧರ ಹಂದೆಯವರು ಇದೀಗ ಅವರ ಪುತ್ರ ಶ್ರೀ ಸುಜಯೀಂದ್ರ ಹಂದೆಯವರು ಬದ್ಧತೆಗೆ ಕನಸಿಗೆ ಚ್ಯುತಿ ಬರದಂತೆ ಮಕ್ಕಳ ಮೇಳವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

1978 ಅಂತಾರಾಷ್ಟ್ರೀಯ ಮಕ್ಕಳ ವರ್ಷ. ಯಕ್ಷಗಾನಕ್ಕೆ ಅದರಲ್ಲೂ ಮುಖ್ಯವಾಗಿ ಸಾಲಿಗ್ರಾಮ ಮಕ್ಕಳ ಮೇಳಕ್ಕೆ ಇದು ಮಹತ್ವದ ವರ್ಷ. ಯಕ್ಷಗಾನ ಕಲೆ ತನ್ನ ಎಲ್ಲಾ ಬೆಡಗು ಬೆರಗುಗಳೊಂದಿಗೆ ವಿದೇಶಿಯರ ಕಣ್ಣು ತೆರೆಸಿದ ವರ್ಷ. 3ನೇ ಜೋನ್ ಡಿ. ರಾಕ್ ಷೆಲ್ಲರ್‌ನ ಸ್ಮರಣಾರ್ಥ ನಡೆದ ಫೆಸಿಫಿಕ್ ಜನಪದ ರಂಗೋತ್ಸವಕ್ಕೆ ಆಮಂತ್ರಿತರಾದ ವಿವಿಧ ದೇಶಗಳ 18 ನೃತ್ಯ ತಂಡಗಳಲ್ಲಿ ಸಾಲಿಗ್ರಾಮ ಮಕ್ಕಳ ಮೇಳವೂ ಒಂದು. ಅಮೇರಿಕೆಯ ಕ್ಯಾಲಿಫೋರ್ನಿಯ ರಾಜ್ಯದ ಸಾನೊಚೊಸ್ ನಗರದಲ್ಲಿ ಯಕ್ಷಗಾನದ ಶುಭೋದಯವನ್ನು ಈ ತಂಡ ಹಾಡಿತು.

ಈ ಮಕ್ಕಳ ಮೇಳದ ಪ್ರದರ್ಶನವನ್ನು ಅಲ್ಲಿನ ರಂಗವಿಮರ್ಶಕ ಆ್ಯಡ್ರಿಯಸ್ ಫೋರ್ಮನ್ ಪರಿಚಯಿಸಿದ ಬಗ್ಗೆ ವಿನೂತನ. 'ವಿಶ್ವರಂಗಭೂಮಿಗೆ ಯಕ್ಷಗಾನ ವನ್ನು ಪರಿಚಯಿಸಿದ ಬಾಲನರ್ತಕರು" ಎಂದು ಕರೆದ ಆತ ಈ ತಂಡದ ಅಂದಿನ ಪ್ರದರ್ಶನ ವನ್ನು ಮನಸಾರೆ ಹೊಗಳಿದ್ದಾನೆ. "ಕರ್ನಾಟಕ ರಾಜ್ಯದ ಈ ರಂಗ ಪ್ರಕಾರದ ಪಾಶ್ಚಾತ್ಯ ಪರಂಪರೆಯಲ್ಲಿ ಪಳಗಿದ ಒಂದು ಪ್ರೇಕ್ಷಕ ವರ್ಗದ ಮನಸ್ಸನ್ನು ಸೂರೆಗೊಂಡಿದ್ದು ಒಂದು ಆಶ್ಚರ್ಯವೇ ಸರಿ. ಅದಕ್ಕೂ ಹೆಚ್ಚಿನ ಆಶ್ಚರ್ಯ ವೆಂದರೆ ಈ ರೀತಿ ಜನರನ್ನು ಸ್ತಬ್ಧಗೊಳಿಸಿದವರು ಸಣ್ಣಮಕ್ಕಳು" ಎಂದು ಹೇಳಿದ ಆತ ಅಲ್ಲಿ ನಡೆದ ಪ್ರದರ್ಶನ ಉಳಿದ ದೇಶದ ಪ್ರದರ್ಶನಗಳಿಗಿಂದ ಅತ್ಯುತ್ತಮ ವಾಗಿತ್ತು ಎಂದು ತನ್ನ ಲೇಖನದಲ್ಲಿ ತಿಳಿಸಿದ್ದಾನೆ. ಹೀಗೆ ಮೊದಲ ಸೀಮೋಲ್ಲಂಘನ ದಲ್ಲೇ ಜಯಭೇರಿ ಬಾರಿಸಿದ್ದು ಯಕ್ಷಗಾನಕ್ಕೆ ಹಾಗೂ ಮಕ್ಕಳ ಮೇಳಕ್ಕೆ ಸಂದ ಗೌರವವಾಗಿದೆ.

ಸಾಲಿಗ್ರಾಮ ಮಕ್ಕಳ ಮೇಳದ ಈ ದಿಗ್ವಿಜಯಕ್ಕೆ ಕಾರಣಕರ್ತರಾದವರು ಅಂದಿನ ಮುಖ್ಯಮಂತ್ರಿ ಶ್ರೀ ದೇವರಾಜ್ ಅರಸು ಹಾಗೂ ವಾರ್ತಾ ಸಚಿವ ಶ್ರೀ ಕೆ.ಎಚ್. ಶ್ರೀನಿವಾಸ್ ಅವರು ತೆರಳುವ ಮುನ್ನ ಪ್ರದರ್ಶನ ನೋಡಿದ ಮುಖ್ಯಮಂತ್ರಿ ಅರಸು ಅವರು ಹೇಳಿದ ಮಾತು ಸ್ವಾರಸ್ಯಕರವಾಗಿದೆ. "ಅಮೇರಿಕಾಕ್ಕೆ ಈ ಮಕ್ಕಳು ಹೋಗುವುದು ಸಂತೋಷವೇ. ಆದರೆ ನನಗೆ ಸಂದೇಹ. ಅಲ್ಲಿನ ಜನ ಈ ಆಟ ನೋಡಿದ ಮೇಲೆ ಈ ಮಕ್ಕಳನ್ನು ಅಲ್ಲೇ ಇಟ್ಟುಕೊಂಡುಬಿಟ್ಟರೆ ಏನು ಮಾಡೋಣ" ಎಂದ ಅವರ ಮಾರ್ಮಿಕ ಮಾತನ್ನು ಮಕ್ಕಳು ನಿಜ ಮಾಡಿದರು. ಅಂದಿನ ಬೆಂಗಳೂರು ವಿಶ್ವವಿದ್ಯಾಲಯದ ನಾಟಕ, ನೃತ್ಯ, ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದ ಡಾ॥ ಕೆ.ಎಚ್. ರಂಗನಾಥ್‌ರ ನೇತೃತ್ವದಲ್ಲಿ ತೆರಳಿದ 6 ಜನ ಬಾಲ ಕಲಾವಿದರೂ ಸೇರಿ 12 ಜನರಿರುವ ತಂಡ ತಮ್ಮ ಮೊದಲ ಪ್ರಯತ್ನದಲ್ಲೇ ಯಶಸ್ಸನ್ನು ಗಳಿಸಿದರು. 1978ರ ಆಗಸ್ಟ್ 24ರಂದು 4000 ಜನರು ಕಿಕ್ಕಿರಿದಿರುವ ... ಸಭಾಂಗಣದಲ್ಲಿ ತಮ್ಮ ಮಾಂತ್ರಿಕ ಶಕ್ತಿಯಿಂದ ಎಲ್ಲರನ್ನು ಮಂತ್ರಮುಗ್ಧಗೊಳಿಸಿದರು. ಯಕ್ಷಗಾನಕಲೆಯ ನಾಲ್ಕು ಅಂಗಗಳು ಗಾಯನ, ಬಣ್ಣಗಾರಿಕೆ, ಕುಣಿತ, ಅಭಿನಯಗಳ ಮೂಲಕ ಪ್ರೇಕ್ಷಕ ಗಣಕ್ಕೆ ಯಕ್ಷ ಲೋಕವೊಂದನ್ನು ಸೃಷ್ಟಿಸಿಕೊಟ್ಟರು. ಅಮೆರಿಕೆಯ

ಇಬ್ಬರು ಬಾಲಕರಂತೂ ವೃಷಸೇನನ ಸಾವಿಗೆ ದಿಙ್ಮೂಢರಾದದ್ದಲ್ಲದೆ ವ್ಯವಸ್ಥಾಪಕರಲ್ಲಿ ಅಳಲನ್ನು ತೋಡಿಕೊಂಡರು. ಮರುದಿನದ ಪತ್ರಿಕೆ, ಟಿ.ವಿ.ಗಳಲ್ಲಿ ಹೊಗಳಿಕೆಯ ಸುರಿಮಳೆ ಬಂತು. ಇದರಿಂದಾಗಿ ಅಮೇರಿಕೆಯ ಇತರ ಕನ್ನಡಿಗರು ತಮ್ಮ ಪಟ್ಟಣಗಳಿಗೆ ಬರುವಂತೆ ಕರೆನೀಡಿ ಪದ್ರರ್ಶನದ ವ್ಯವಸ್ಥೆ ಮಾಡಿದರು. ಲಂಡನ್ನಿನ ಭಾರತೀಯ ವಿದ್ಯಾಭವನದಲ್ಲೂ ಪ್ರದರ್ಶನ ನಡೆದವು. ಹೀಗೆ ಪ್ರಥಮ ಸೀಮೋಲ್ಲಂಘನದಲ್ಲೇ ದಿಗ್ವಿಜಯ ಸಾಧಿಸಿದ ತೃಪ್ತಿ ಉಡುಪ ಹಾಗೂ ಹಂದೆಯವರಿಗೆ ಲಭಿಸಿತು.

■

ಯಕ್ಷಮಿತ್ರರ ದಕ್ಷ ಸಾಧನೆ – ಹಿರಿಯ ಮಕ್ಕಳ ಕಿರಿಯ ಮೇಳ

ಹಿಂದೆ ಶಾಲೆಯಲ್ಲ ವರ್ಷಂಪ್ರತಿ ನಡೆಯುವ ಶಾಲಾ ವಾರ್ಷಿಕೋತ್ಸವಗಳಲ್ಲಿ ವಿದ್ಯಾರ್ಥಿಗಳಿಂದ ಯಕ್ಷಗಾನವನ್ನು ನೋಡಿ ಪ್ರಚೋದಿತರಾದ ಇಬ್ಬರು ಅಧ್ಯಾಪಕರ ಮನಸ್ಸಿನಲ್ಲಿ ಮೊಳೆದ ಒಂದು ಚಿಂತನೆಯ ಫಲವಾಗಿ ಹುಟ್ಟಿಕೊಂಡಿದ್ದು ಶ್ರೀ ಜಗದ್ಗುರು ಕೃಪಾಪೋಷಿತ ಮಕ್ಕಳ ಮೇಳ, ಸಾಲಿಗ್ರಾಮ (ದ.ಕ.) ಒಂದೇ ಶಾಲೆಯ ಹಂಗಿಲ್ಲದೆ, ಯಕ್ಷಗಾನದಲ್ಲಿ ಮಿಂಚಬಲ್ಲ ಹುಡುಗರನ್ನು ಕೆಲವು ಶಾಲೆಗಳಿಂದ ಆರಿಸಿ ರಜೆಯ ಕಾಲದಲ್ಲಿ ಅವರಿಗೆ ಯಕ್ಷಗಾನವನ್ನು ಕಲಿಸಿ ಅವರ ಮೂಲಕ ತಾವು ಕಂಡು ಉಂಡ ಯಕ್ಷಗಾನದ ವೈಭವವನ್ನು ಸಾಕ್ಷಾತ್ಕರಿಸಿಕೊಳ್ಳಲು ಹೊರಟವರು ದಿ. ಕಾರ್ಕಡ ಶ್ರೀನಿವಾಸ ಉಡುಪ ಹಾಗೂ ಶ್ರೀಧರ ಹಂದೆಯವರು. ಇಬ್ಬರೂ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಅಧ್ಯಾಪಕರು. ಇಬ್ಬರೂ ಹಾರಾಡಿ, ಮಟ್ಪಾಡಿ ಕುಣಿತದ ಒಳ ಹೊರಗನ್ನು ಬಲ್ಲವರು. ಇಬ್ಬರೂ ಮಕ್ಕಳ ಮೂಲಕ ಅದನ್ನು ಮಾರ್ದನಿಸಬೇಕು. ಆ ಮೂಲಕ ಆ ಮಟ್ಟಗಳನ್ನು ಉಳಿಸಬೇಕೆಂಬ ಹಂಬಲದವರು. ಇಬ್ಬರೂ ಯಕ್ಷಗಾನವನ್ನು ತಮ್ಮ ಉಸಿರಾಗಿಸಿಕೊಂಡವರು. ಅವರೀರ್ವರ ಕನಸು ಸಾಕಾರಗೊಂಡದ್ದು 1975ರಲ್ಲಿ. ಆಗ ಹುಟ್ಟಿಕೊಂಡ ಸಾಲಿಗ್ರಾಮ ಮಕ್ಕಳ ಮೇಳ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಮಾತ್ರವಲ್ಲದೆ, ರಾಜ್ಯ ದೇಶಗಳೆಂಬ ಗಡಿಯಿಲ್ಲದೆ ದೂರದ ಅಮೇರಿಕೆಯಲ್ಲಿ ತಮ್ಮ ಕಲಾ

ಪ್ರೌಢಿಮೆಯ ಛಾಪನ್ನು ಮೂಡಿಸಿದ್ದು ಈ ಮಕ್ಕಳ ಮೇಳದ ಹೆಚ್ಚುಗಾರಿಕೆ. ಇದು ಇತಿಹಾಸಕ್ಕೆ ಸಂದ ಸಂಗತಿ.

ಆದರೆ ಇದಕ್ಕೂ ಮಿಗಿಲಾದ ಒಂದು ಹಿರಿಮೆ ಈ ಮಕ್ಕಳ ಮೇಳಕ್ಕೆ ಸಲ್ಲುತ್ತದೆ. ಈ ಮಕ್ಕಳ ಮೇಳದ ಪ್ರದರ್ಶನ ವೈಭವವನ್ನು ನೋಡಿದ ಉಳಿದ ಯಕ್ಷಗಾನ ಕಲಾಸಕ್ತರು, ಕಲಾಸಂಘಗಳು ತಮ್ಮ ತಮ್ಮಲ್ಲೇ ಅನೇಕ ಮಕ್ಕಳ ಮೇಳಗಳನ್ನು ಹುಟ್ಟು ಹಾಕಿದರು. 'ಮಕ್ಕಳ ಯಕ್ಷಗಾನ' ಎಂಬ ಪ್ರಕಾರ ಜನ್ಮ ತಳೆಯಲು ಕಾರಣವಾಯಿತು. ಸುಮಾರು 1.30 – 2.00 ತಾಸುಗಳ ಈ ಯಕ್ಷಗಾನದ ಕಿರು ಪ್ರದರ್ಶನ ಇಂದು ಎಲ್ಲೆಡೆ ಪಸರಿಸಿದೆ. ಬೆಂಗಳೂರಿನಂತಹ ಮಹಾನಗರ ಇಂದು ಅನೇಕ ಯಕ್ಷಗಾನ ಮಕ್ಕಳ ಮೇಳಗಳ ತವರೂರಾಗಿದೆ. ಮಕ್ಕಳಿಗೆ ಯಕ್ಷಗಾನವನ್ನು ಕಲಿಸುವ ಅನೇಕ ಅಧ್ಯಾಪಕರು ಬೆಂಗಳೂರಿನಲ್ಲಿದ್ದಾರೆ. ಅದೇ ರೀತಿ ಮಂಗಳೂರು, ಉಡುಪಿ, ಮೈಸೂರು, ಶಿವಮೊಗ್ಗ ಮುಂತಾದೆಡೆಗಳೆಲ್ಲಲ್ಲಿ ಈ ಪ್ರವೃತ್ತಿಯನ್ನು ಕಾಣಬಹುದು. ಯಕ್ಷಗಾನಕ್ಕೆ ಏನೊಂದು ಸಂಬಂಧವಿಟ್ಟು ಕೊಂಡಿರದ ಶಾಲೆಗಳು ಕೂಡ ಪತ್ಯೇತರವಾಗಿ ಮಕ್ಕಳಿಗೆ ಯಕ್ಷಗಾನವನ್ನು ಕಲಿಸಲು ಆಸಕ್ತಿ ತೋರಿಸುತ್ತಿವೆ. ಉಡುಪಿ, ಮಂಗಳೂರಿನಂತಹ ಕಡೆ ಮಕ್ಕಳ ಮೇಳದ ಆಟಗಳಿಗೆ ಸ್ಪರ್ಧೆಗಳು ನಡೆಯುತ್ತಿವೆ. ಮಕ್ಕಳ ಮೇಳದ ಪ್ರದರ್ಶನಗಳು ಶುದ್ಧಾಂಗ ಯಕ್ಷಗಾನವಾಗಿಲ್ಲದೆ, ಅನೇಕ ವೈಪರೀತ್ಯಗಳಿಂದ ಕೂಡಿವೆ. ಆದರೂ ಒಂದು ವಿಚಾರಕ್ಕೆ ಇವುಗಳನ್ನು ಮೆಚ್ಚಬೇಕಾಗುತ್ತದೆ. ಅದೆಂದರೆ ಇಂದು ಯಕ್ಷಗಾನಕ್ಕೆ ಸಂಬಂಧವಿರದ ಜಿಲ್ಲೆಯ ಅನೇಕ ಪ್ರೇಕ್ಷಕರನ್ನು ಅಭಿಮಾನಿಗಳನ್ನು ಈ ಮಕ್ಕಳ ಮೇಳಗಳು ಎಳೆದು ತಂದುಕೊಟ್ಟಿವೆ. ಅಂತೆಯೇ ಕರಾವಳಿ, ಮಲೆನಾಡಿಗರಲ್ಲದ ಮಕ್ಕಳು ಕೂಡ ಯಕ್ಷಗಾನದಲ್ಲಿ ಭಾಗವಹಿಸುತ್ತಿದ್ದಾರೆ. ಇದು ಯಕ್ಷಗಾನದ ಪರಿಧಿಯನ್ನು ವಿಸ್ತರಿಸುವಲ್ಲಿ ಸಹಾಯಕ ವಾಗಿದೆ. ಹೀಗೆ ಯಕ್ಷಗಾನ ಜನಪ್ರಿಯವಾಗುವಲ್ಲಿ ಮತ್ತು ಮಕ್ಕಳ ಯಕ್ಷಗಾನ ಚಳವಳಿಯಂತೆ ಕಾಣಿಸಿಕೊಳ್ಳುವಲ್ಲಿ ಯಕ್ಷಗಾನದ ಪರಿಧಿ ವಿಸ್ತಾರವಾಗುವಲ್ಲಿ ಸಾಲಿಗ್ರಾಮ ಮಕ್ಕಳ ಮೇಳದ ಕಾಣ್ಕೆಯೇ ಮೂಲವಾದದ್ದು. ಅದಕ್ಕಾಗಿಯೇ ಯಕ್ಷಗಾನದ ಇತಿಹಾಸದಲ್ಲಿ ಸಾಲಿಗ್ರಾಮ ಮಕ್ಕಳ ಮೇಳದ ಹೆಸರು ಸದಾ ಉಳಿಯುವಂತಹದು. ಅಂತಹ ಇನ್ನೊಂದು ಬಗೆಯ ಪ್ರಯೋಗಕ್ಕೆ ಈ ಸಾಲಿಗ್ರಾಮ ಮಕ್ಕಳ ಮೇಳ ಇನ್ನೊಮ್ಮೆ ಹೊರಟಂತಿದೆ. ಅದೇ ಮಕ್ಕಳ ಮೇಳದ ಹಿರಿಯ ಕಲಾವಿದರ ಪ್ರದರ್ಶನವೆಂಬ ಹಣೆಪಟ್ಟಿ ಬಂದಿದೆ.

ನಾಲ್ಕು ದಶಕಗಳ ಕೆಳಗೆ ಮಕ್ಕಳ ಮೂಲಕ ಯಕ್ಷಗಾನ ಬೆಳೆಸಬೇಕೆಂಬ ದಿ.ಕಾರ್ಕಡ ಶ್ರೀನಿವಾಸ ಉಡುಪ ಹಾಗೂ ಶ್ರೀಧರ ಹಂದೆಯವರು ಕಂಡ ಕನಸಿನ ಬೀಜವಾಪನ ಇಂದು ಹೆಮ್ಮರವಾಗಿ ಬೆಳೆದು ಎಲ್ಲೆಡೆ ಅದರ ಶಾಖೋಪಶಾಖೆಗಳು ಹರಡಿ ಅನೇಕ ಎಳೆಯ ಕಲಾಕುಸುಮಗಳು ಅರಳಿ ಜನರನ್ನು ಸೆಳೆಯುತ್ತಿವೆ. ಎಳೆಯ ಯಕ್ಷಗಾನ ಕಲಾವಿದರ ದಂಡೆ ನಿರ್ಮಾಣವಾಗುತ್ತಿದೆ. ಇಂತಹ ಸಂದರ್ಭದಲ್ಲಿ

1975-80ರ ಸುಮಾರಿನಲ್ಲಿ ತಮ್ಮ ಚೆಲುವು ನಲಿವುಗಳ ಮೂಲಕ ನರ್ತಿಸಿ, ತಮ್ಮ ವಿಜೃಂಭಣೆಗಳಿಂದ ಸೆಳೆದು ವಿಶ್ವ ರಂಗಭೂಮಿಯಲ್ಲಿ ಯಕ್ಷಗಾನದ ಮೋಹಕತೆಯನ್ನು ಬಿಂಬಿಸಿದ ಆ ಹಾಡುಗರು ಈಗ ಹೇಗಿದ್ದಿರಬಹುದೆಂಬ ಕೂತುಹಲಕ್ಕೆ ಇದೀಗ ಉತ್ತರ ದೊರೆತಿದೆ. ಯಕ್ಷಗಾನದ ಸೀಮೋಲ್ಲಂಘನಕ್ಕೆ ಕಾರಣೀಭೂತವಾದ ಮಕ್ಕಳ ಮೇಳದ ಅಂದಿನ ಎಳೆಯ ಕಲಾವಿದರು ಇಂದಿಗೂ ತಾವು ಯಕ್ಷಗಾನವನ್ನು ಮರೆತಿಲ್ಲ. ಅದನ್ನು ಸಮರ್ಥವಾಗಿ ಪ್ರಸ್ತುತಪಡಿಸಬಲ್ಲೆವು ಎಂಬುದನ್ನು ಸಾಬೀತು ಪಡಿಸುತ್ತಿದ್ದಾರೆ. ಅವರಲ್ಲಿ ಹುದುಗಿದ್ದ ಯಕ್ಷಗಾನದ ಮೇಲಿನ ಮೋಹದ ಸಾಕ್ಷಾತ್ಕಾರವಾಗುತ್ತಿರುವುದು ಕೂಡ ಸಾಲಿಗ್ರಾಮ ಮಕ್ಕಳ ಮೇಳದ ಮೂಲಕವೇ 'ಯಕ್ಷಮಿತ್ರರು' ಎಂಬ ಹೆಸರಿನಲ್ಲಿ ಇವರು ಸಂಘಟಿತಗೊಂಡಿದ್ದಾರೆ.

ಸಾಲಿಗ್ರಾಮ ಮಕ್ಕಳ ಮೇಳದ ಅಂದಿನ ಬಾಲಕಲಾವಿದರು ಒಂದೆಡೆ ಸೇರಿ ಮತ್ತು ಯಕ್ಷಗಾನವನ್ನು ಅಭ್ಯಾಸ ಮಾಡಿ ಪ್ರದರ್ಶನ ನೀಡುವ ಮೂಲಕ ಆ ಮೇಳಕ್ಕೆ ಹೆಸರು ತರುತ್ತಿದ್ದಾರೆ. ಈಚೆಗೆ ನಡೆದ ಅವರ 'ಕೃಷ್ಣಾರ್ಜುನ' ಮತ್ತು 'ವೀರವೃಷಸೇನ' ಪ್ರಸಂಗಗಳ ಪ್ರದರ್ಶನಗಳಲ್ಲಿ ಭಾಗವಹಿಸಿದವರೆಲ್ಲ ಐವತ್ತರ ಆಸುಪಾಸಿನವರು. ಎಲ್ಲರೂ ಬೇರೆ ಬೇರೆ ವೃತ್ತಿಯಲ್ಲಿ ಇರುವವರು. ಬದುಕನ್ನು ಅರಸಿ ದೂರದೂರದ ಊರಿನಲ್ಲಿ ನೆಲೆಸಿದವರು. ವಿದೇಶದಲ್ಲಿ ನೆಲೆನಿಂತವರೂ ಇದ್ದಾರೆ. ಹೀಗೆ ಎಲ್ಲದರಲ್ಲೂ ಭಿನ್ನತೆಯಿದ್ದವರನ್ನು ಎಳೆದು ತಂದದ್ದು ಸಾಲಿಗ್ರಾಮ ಮಕ್ಕಳ ಮೇಳದವರೆಂಬ ಏಕಸೂತ್ರ ಯಕ್ಷಗಾನದ ಎಳೆತದಿಂದ, ಅದರ ಸೆಳೆತದಿಂದ ಬಂಧಿತರಾದವರಿವರು. ಅಂದು ಗುರುಗಳಾಗಿದ್ದ ದಿ. ಕಾರ್ಕಡ ಶ್ರೀನಿವಾಸ ಉಡುಪ ಹಾಗೂ ಶ್ರೀ ಶ್ರೀಧರ ಹಂದೆ ಅವರಿಂದ ಕ್ರಮವರಿತು ಯಕ್ಷಗಾನ ಕಲಿತು ವಿಕ್ರಮ ಸಾಧಿಸಿದವರು. ಅವರಲ್ಲಿ ಇಂದಿಗೂ ಕೂಡ ಅದೇ ಯಕ್ಷಗಾನದ ಬಗ್ಗೆ ತುಡಿತ, ಅಭಿಮಾನ, ಪ್ರೀತಿ ಇರುವುದೇ ವಿಶೇಷ. ಈ ಯಕ್ಷಗಾನದ ಬಂಧನವೇ ಅವರನ್ನು ಮತ್ತೊಮ್ಮೆ ಒಟ್ಟಿಗೆ ಸೇರುವಂತೆ ಮಾಡಿ ಕಡಿಮೆ ಅವಧಿಯಲ್ಲಿ ಅಭ್ಯಾಸ ಮಾಡಿಸಿ ರಂಗದ ಮೇಲೆ ಚೊಕ್ಕದಾಗಿ ಪ್ರದರ್ಶನ ನೀಡಲು ಪ್ರಯತ್ನಿಸಿ ಯಶಸ್ವಿಯಾದರು. ಅಷ್ಟೇ ಅಲ್ಲದೇ ಗುರುವಂದನೆ ಕಾರ್ಯಕ್ರಮ ನಡೆಸಿ ತಮ್ಮ ಕಲಾಪ್ರಯಾಣಕ್ಕೆ ನೆರವಾದವರನ್ನೆಲ್ಲಾ ಸ್ಮರಿಸಿಕೊಂಡರು. ಈ "ಯಕ್ಷಮಿತ್ರರು".

ಅಂದು ಪ್ರದರ್ಶನಗೊಂಡ 'ಕೃಷ್ಣಾರ್ಜುನ ಕಾಳಗ' ಭೂಮಿಕೆಯಲ್ಲಿ ಅರ್ಜುನನಾಗಿ ಲೆಕ್ಕ ಪರಿಶೋಧಕರಾಗಿರುವ ಸತೀಶ್ ಕಲ್ಕೂರ್ ಅವರು ತಮ್ಮ ಸಹಜ ಅಭಿನಯದ ಮೂಲಕ ಗಮನ ಸೆಳೆದರು. ಕೃಷ್ಣನ ವೇಷಧಾರಿಯಾದ ಮನೋಜ್ ಭಟ್ ಅವರ ವೇಷಗಾರಿಕೆ ಹವ್ಯಾಸಿಗಳದ್ದೆನ್ನುವಂತಿರಲಿಲ್ಲ. ಸುಭದ್ರೆಯಾಗಿ ರಾಮದೇವ ಐತಾಳರ ಹಾವಭಾವ ಮನೋಜ್ಞವಾಗಿತ್ತು. ಗಣೇಶ ಶ್ಯಾನುಭೋಗರ ಅಭಿಮನ್ಯುವಿನ ಪಾತ್ರದಲ್ಲಿ ಅವರು ತೋಡಿಕೊಂಡ ತನ್ನ ದುಃಸ್ಥಿತಿಯ ಬಗ್ಗೆ ಮರುಕ ಹುಟ್ಟಿಸುವಂತಿತ್ತು. ಬಲರಾಮರಾಗಿ ಮಿಂಚಿದ ಡಾ॥ ಸತೀಶ್ ಕಾಮತ್‌ರ ಗತ್ತುಗೈರತ್ತು ಸೊಗಸಾಗಿತ್ತು.

ಅಂದಿನ ಪ್ರದರ್ಶನದಲ್ಲಿ ದಿನೇಶ್ ಉಪ್ಪೂರರು ಈಶ್ವರನಾಗಿ ಪ್ರೇಕ್ಷಕರ ಮನಸೆಳೆದರು. ರುಕ್ಮಿಣಿ (ವಿಶ್ವನಾಥ ಉರಾಳ) ಹಾಗೂ ಸುಭದ್ರ (ರಾಮದೇವ ಐತಾಳ)ಯರ ಸಂವಾದ ಆಕರ್ಷಕವಾಗಿತ್ತು. ಒಟ್ಟು ಇಡೀ ಪ್ರದರ್ಶನ ಪ್ರೇಕ್ಷಕರ ಗಮನ ಸೆಳೆಯಿತು. ಬಹಳ ಕಾಲದ ನಂತರ ಯಕ್ಷಗಾನದಲ್ಲಿ ಭಾಗವಹಿಸಿದ್ದರೂ ಎಲ್ಲೂ ಇವರೂ ಸೋಲದೆ ಅಚ್ಚುಕಟ್ಟಾಗಿ ಪ್ರದರ್ಶನ ನೀಡಿದರು.

ಅಂದಿನ ಪ್ರದರ್ಶನದ ಎರಡನೆಯ ಪ್ರಸಂಗವಾಗಿ ಸಾಲಿಗ್ರಾಮ ಮಕ್ಕಳ ಮೇಳದ 'ಬ್ರಾಂಡ್' ಪ್ರಸಂಗವಾಗಿರುವ ವೀರ ವೃಷಸೇನ ಪ್ರದರ್ಶನಗೊಂಡಿತು. ಅಂದು ವೃಷಸೇನನ ಪಾತ್ರವನ್ನು ಇಬ್ಬರು ಹವ್ಯಾಸಿಗಳಾದ ಮೋಹನ್‌ದಾಸ್ ಶ್ಯಾನುಭೋಗ್ ಹಾಗೂ ಪ್ರಜ್ವಲನಾಯರಿಯವರು ವಹಿಸಿದರು. ಅವರಿಬ್ಬರ ಕುಣಿತ ಮಣಿತಗಳಲ್ಲಿ ಮಕ್ಕಳ ಮೇಳದ 'ಬೆಸಿಕಲ್ ವೃಷಸೇನ' ಆಗಾಗ ಇಣುಕುತ್ತಿದ್ದ. ಹಿಂದೆ ಮಕ್ಕಳ ಮೇಳದಲ್ಲಿದ್ದಾಗ ಅಸಂಖ್ಯ ಬಾರಿ ಪಾತ್ರವಹಿಸಿದ್ದ ಸೋಮಪ್ರಭೆ ಪಾತ್ರ ವನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನ ಸತೀಶ್ ತುಂಗರು ಅಷ್ಟೇ ಅಚ್ಚುಕಟ್ಟಾಗಿ ನಿರ್ವಹಿಸಿದರು. ವೆಂಕಟೇಶ್ ಹಂದೆಯವರು ಕೃಷ್ಣನಾಗಿ, ಪ್ರದೀಪ್ ಶೆಟ್ಟಿಯವರು ಅರ್ಜುನನಾಗಿ ಸೊಗಸಾಗಿ ಅಭಿನಯಿಸಿದರು. ಪ್ರಕೃತ ಲಂಡನ್‌ನಲ್ಲಿರುವ ಡಾ|| ಗುರು ಪ್ರಸಾದ್ ಐತಾಳರು ಈ ಪ್ರದರ್ಶನಕ್ಕಾಗಿ ಸ್ವದೇಶಕ್ಕೆ ಬಂದಿದ್ದು ಭೀಮನ ಪಾತ್ರವನ್ನು ವಹಿಸಿದ್ದರು. ಅವರ ಅಸ್ಖಲಿತ ಮಾತುಗಾರಿಕೆ ಆಕರ್ಷಕವಾಗಿತ್ತು. ಹಿಮ್ಮೇಳದಲ್ಲಿ ಭಾಗವತರಾಗಿ ಶ್ರೀಧರ್ ಹಂದೆ ಹಾಗೂ ಸುಧೀಂದ್ರ ಹಂದೆಯವರು ಸೊಗಸಾಗಿ ಭಾವಪೂರ್ಣವಾಗಿ ಹಾಡಿದ್ದೇ ಅಲ್ಲದೇ ಈ ಹಿರಿಯ 'ಬಾಲಕಲಾವಿದ'ರನ್ನು ಅಚ್ಚುಕಟ್ಟಾಗಿ ಕುಣಿಸಿದರು. ಮೃದಂಗ ವಾದಕರಾಗಿ ಬಾಲಕೃಷ್ಣ ಬ್ರಹ್ಮಾವರ, ಚಂಡೆವಾದಕರಾಗಿ ಕುಮಾರ ಮಾಧವರು ಸಹಕರಿಸಿದರು.

ಅಂದಿನ ಕಾರ್ಯಕ್ರಮದಲ್ಲಿ ಗುರುಗಳಾಗಿ ಸಹಕರಿಸಿದ ಎಲ್ಲಾ ಹಿರಿಯರನ್ನು ಗೌರವಿಸುವ ಮೂಲಕ 'ಗುರುವಂದನೆ' ಕಾರ್ಯಕ್ರಮ ನಡೆಸಲಾಯಿತು. ಇದು ಹಿರಿಯ ಮಕ್ಕಳ ಕಾರ್ಯಕ್ರಮಕ್ಕೆ ಭಾವುಕತೆಯ ಮೆರುಗನ್ನು ನೀಡಿತು. ಈ ಬಗೆಯ ಪ್ರಯೋಗ ವಿಶಿಷ್ಟವಾಗಿದ್ದು ಇದೇ ಚಾಲ್ತಿಯಲ್ಲಿ ಬಂದರೆ ಮುಂದೆ ಅನೇಕ ಮಕ್ಕಳ ಮೇಳಗಳ ಹಿರಿಯ ಮಕ್ಕಳ ಪ್ರದರ್ಶನಗಳು ಸಾಲುಸಾಲಾಗಿ ಬರಬಹುದು. ಇಂತಹ ಪ್ರದರ್ಶನಗಳು ಯಕ್ಷಗಾನದ ಪ್ರಸಾರಕ್ಕೆ, ಆ ಮೂಲಕ ವಿದ್ಯಾವಂತ ಹವ್ಯಾಸಿ ಕಲಾವಿದರ ಬಳಗ ಹೆಚ್ಚಲಿಕ್ಕೆ ಕಾರಣವಾಗಬಹುದು. ಮಕ್ಕಳ ಮೇಳದ ಮಹಾಪೂರ ಬಂದಂತೆ 'ಹಿರಿಯ ಮಕ್ಕಳ' ಮೇಳದ ಪ್ರದರ್ಶನಗಳು ಚಳುವಳಿಯೋಪಾದಿಯಲ್ಲಿ ಬಂದರೆ ಅದು ಯಕ್ಷಗಾನದ ಇತಿಹಾಸದಲ್ಲಿ ಉಲ್ಲೇಖನಾರ್ಹವಾಗಬಹುದು. ಅಂತಹ ಚಳವಳಿ ಹುಟ್ಟಲಿ ಎಂದು ಹಾರೈಸೋಣ.

■

ನಮ್ಮ ಹೆಮ್ಮೆಯ ಕಾರಂತರು ಮತ್ತು ಯಕ್ಷಗಾನ

ಕಡಲನ್ನಾಗಲಿ, ಹಿಮಾಲಯವನ್ನಾಗಲಿ ವರ್ಣಿಸುವುದೆಂದರೆ ಬಲುಕಷ್ಟ. ಇವೆರಡೂ ಅಗಾಧವಾದವು, ವಿಸ್ತಾರವಾದವು, ಪರಿಮಿತಿ ಇಲ್ಲದವು. ಒಂದರ ಆಳ ತಿಳಿಯುವುದಿಲ್ಲ, ಇನ್ನೊಂದರ ಎತ್ತರ ಅರಿಯುವುದಿಲ್ಲ. ಅದೇರೀತಿ ಕೋಟ ಶಿವರಾಮ ಕಾರಂತರ ಬಗ್ಗೆ ಹೇಳುವುದು ಕೂಡ ಅಷ್ಟೇ ಕಷ್ಟ. ವಿಶಿಷ್ಟವಾದ ಸ್ವಭಾವ, ವಿಫುಲವಾದ ಸಾಧನೆ, ವೈವಿಧ್ಯಮಯ ವ್ಯಕ್ತಿತ್ವ, ಪ್ರಖರವಾದ ಚಿಂತನಾಲಹರಿ, ತೀಕ್ಷ್ಣವಾದ ಬುದ್ಧಿಮತ್ತೆಯಿಂದ ಬದುಕಿದ್ದ ಕಾಲದಲ್ಲೇ ದಂತಕಥೆ ಯಾದವರು.

ಕನ್ನಡಿಗರಿಗೆ ಒಂದು ಘನತೆಯು, ಹಿರಿಮೆಯು ಅವರಿಂದಾಗಿ ಬಂದಿದೆ. ಅಪರಿಗ್ರಹಗುಣ, ತಾವು ನಂಬಿದ್ದನ್ನು ಪರಿಪಾಲಿಸುವ ನಿಷ್ಠೆ, ನಿಷ್ಠುರ ನುಡಿ, ನಿಷ್ಕಲ್ಮಶ ನಡೆ ಕಾರಂತರಲ್ಲಿ ಎದ್ದು ಕಾಣುವ ಗುಣ. ಅದಕ್ಕಾಗಿಯೇ ಜನರು ಅವರನ್ನು 'ಖಾರಂತ'ರೆಂದೇ ಗುರುತಿಸಿ ದರು. ಕಾರಂತರ ವ್ಯಕ್ತಿತ್ವದ ವೈವಿಧ್ಯಮಯ ಅಂಶಗಳೆಂದರೆ ಕಷ್ಟ ಸಹಿಷ್ಣುತೆ, ಅವಿರತ ಪರಿಶ್ರಮ, ಯಾರಿಗೂ ತಲೆಬಾಗದ ನಿಲುವು, ಪಟಕ್ಕಿಲ್ಲ ಪ್ರಾಮಾಣಿಕತೆ, ನುಡಿದಂತೆ ನಡೆವ ಗುಣ, ಯಾವ ಮುಲಾಜಿಗೂ ಒಳಗಾಗದ ಭಾವ, ಸದಾಚಿಂತನೆಯಲ್ಲಿ ಮುಳುಗಿರುವ ಮನಸ್ಸು, ಗಾಂಭೀರ್ಯ ಹೊತ್ತ ಮುಖಗಳೇ ಆಗಿವೆ.

ಶಿವರಾಮ ಕಾರಂತರು ಜನ್ಮತಳೆದ ಕಳೆದ ಶತಮಾನದ ಮೊದಲ ದಶಕದಲ್ಲಿ ಭಾರತದ ಉದ್ದಗಲಕ್ಕೂ ಬಡತನ ಹಾಸಿ ಹೊದೆಯುವಷ್ಟಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇಸಾಯವೇ ಮುಖ್ಯ ವೃತ್ತಿ. ಆಗ ತಾನೇ ಬೀಸುತ್ತಿದ್ದ ಇಂಗ್ಲಿಷ್ ವಿದ್ಯಾಭ್ಯಾಸದ ಗಾಳಿಗೆ

ಕೆಲವೇ ಕುಟುಂಬ ದವರು ಮೈಯೊಡ್ಡಿದ್ದರು. ಅಂತಹ ಕುಟುಂಬವೊಂದರಲ್ಲಿ ಕಾರಂತರ ಜನನ (12.10.1902). ಅಣ್ಣಂದಿರಂತೆ ಅವರು ಕೂಡ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಕುಂದಾಪುರದಲ್ಲಿ ಮಾಡಿದರು. ಗಾಂಧೀಜಿಯ ಕರೆಯಂತೆ ಸ್ವಾತಂತ್ರ್ಯ ಚಳುವಳಿಗೆ ದುಮ್ಮುಕ್ಕಿದ್ದರಿಂದ ಕಾಲೇಜು ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲಿಸಿ ಹಳ್ಳಿ ಹಳ್ಳಿಗೆ ತಿರುಗಿ ಜನಜಾಗ್ರತಿಯ ಕಾರ್ಯದಲ್ಲಿ ತೊಡಗಿದರು. ಇದರೊಂದಿಗೆ ಪತ್ರಿಕೆಗಳಲ್ಲಿ ಬರೆಯುವುದನ್ನು ಅಭ್ಯಾಸ ಮಾಡಿಕೊಂಡರು. ಅವರ ಬರವಣಿಗೆಯ ಪ್ರಾರಂಭದ ದಿನದಲ್ಲಿ 'ವಿಚಿತ್ರಕೂಟ'ವೆಂಬ ಪತ್ತೆದಾರಿ ಕಾದಂಬರಿಯನ್ನು ಬರೆದರು. ಉಗ್ರಾಣ ಮಂಗೇಶ ರಾಯರ ಸಲಹೆಯಂತೆ ಸಾಮಾಜಿಕ ಕಾದಂಬರಿ ಬರೆಯಲು ಉಪಕ್ರಮಿಸಿದರು. ಮುಂದೆ ಜೀವನಾನುಭವ ಗಟ್ಟಿಯಾಗುತ್ತಾ ಹೋದಂತೆ ಅನೇಕ ಉತ್ತಮ ಕಾದಂಬರಿ ಗಳನ್ನು ರಚಿಸಿದರು. ಶಿವರಾಮ ಕಾರಂತರ ಕಾದಂಬರಿ ಸಾಹಿತ್ಯ ವಿಫುಲವಾದದ್ದು, ವೈವಿಧ್ಯವಾದದ್ದು. ದೇವದೂತರು, ಸರಸಮ್ಮನ ಸಮಾಧಿ, ಮರಳಿ ಮಣ್ಣಿಗೆ, ಚೋಮನ ದುಡಿ, ಬೆಟ್ಟದ ಜೀವ, ಜಾರುವ ದಾರಿಯಲ್ಲಿ, ಧರ್ಮರಾಯನ ಸಂಸಾರ, ಕರುಳಿನ ಕರೆ, ಕುಡಿಯರ ಕೂಸು, ಮೂರು ಜನ್ಮ, ಅಳಿದ ಮೇಲೆ ಇವೆಲ್ಲವೂ ಚಿರಕಾಲ ಉಳಿಯುವಂತಹ ಕಾದಂಬರಿಗಳು. ಅವರ 'ಮೂಕಜ್ಜಿಯ ಕನಸುಗಳು' ಕಾದಂಬರಿಗೆ 1978ರಲ್ಲಿ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಜೀವನವನ್ನೇ ಪ್ರಯೋಗಶಾಲೆಯಾಗಿ ಸ್ವೀಕರಿಸಿದ ಅವರು ನಾಡಿನ ಉದ್ದಗಲಕ್ಕೆ ಸಂಚರಿಸಿದರು. ನಾಟಕ, ಗೀತ ನಾಟಕ, ಕಾದಂಬರಿ, ಪ್ರಬಂಧ, ಹರಟೆ, ವಿಜ್ಞಾನ ಬರಹ, ಗ್ರಂಥ ಸಂಪಾದನೆ, ಶಬ್ದಕೋಶ ರಚನೆ, ಜಾನಪದ, ವಿಡಂಬನೆ, ಪ್ರವಾಸಿ ಸಾಹಿತ್ಯ, ಸಂಶೋಧನಾ ಬರಹ, ಕಲಾಸಮೀಕ್ಷೆ, ಬಾಲಸಾಹಿತ್ಯ ಹೀಗೆ ಒಂದೇ ಎರಡೇ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೈಯಾಡಿಸಿ ದರು. ಆಡುಮುಟ್ಟದ ಸೊಪ್ಪಿಲ್ಲ, ಕಾರಂತರು ಕೈಯಾಡಿಸದ ಕ್ಷೇತ್ರವಿಲ್ಲ ಎಂಬುದು ನಾಣ್ಣುಡಿಯಾಯಿತು. ಹೀಗೆ ಸಮುದ್ರದ ಆಳ ವಿಸ್ತಾರ ಹಿಮಾಲಯದ ಗಾಂಭೀರ್ಯ ಎತ್ತರ ಇವರ ಸೃಜನಶೀಲತೆಗೆ ರೂಪಕವಾಯಿತು. ಇಂತಹ ಶಿವರಾಮ ಕಾರಂತರ ಹೆಸರಿನೊಂದಿಗೆ ತಳುಕು ಹಾಕಿಕೊಂಡಿರುವ ಇನ್ನೊಂದು ಪದವೆಂದರೆ ಯಕ್ಷಗಾನ. ಡಾ॥ ಕಾರಂತರು ಮತ್ತು ಯಕ್ಷಗಾನ ಎಂಬೆರಡು ಪದಗಳು ಒಂದನ್ನು ಬಿಟ್ಟು ಇನ್ನೊಂದು ಇರಲಾರವು ಎಂಬಷ್ಟು ಸಾಮ್ಯವನ್ನು ಗಳಿಸಿವೆ.

ಶಿವರಾಮ ಕಾರಂತರು ಯಕ್ಷಗಾನದ ಗೀಳು ಅಂಟಿಸಿಕೊಳ್ಳುವ ಮುನ್ನ ಅವರು ನಾಟಕ, ಗೀತನಾಟಕಗಳಲ್ಲಿ ಅಭಿನಯಿಸಿ, ಕುಣಿದು ನಿರ್ದೇಶಿಸಿ ಕಲಾರಂಗದಲ್ಲಿ ತೊಡಗಿಕೊಂಡಿದ್ದರು. ಸಂಗೀತ, ನೃತ್ಯ, ಅಭಿನಯದ ಬಗ್ಗೆ ತಮ್ಮದೇ ಆದ ಚಿಂತನೆಯನ್ನು ರೂಡಿಸಿಕೊಂಡಿದ್ದರು. ಯಕ್ಷಗಾನ ಕವಿಯೊಬ್ಬನ ಕಾಲವಿಚಾರದಲ್ಲಿ ಹುಟ್ಟಿಕೊಂಡ ಕುತೂಹಲ ಯಕ್ಷಗಾನದ ಅಧ್ಯಯನಕ್ಕೆ ಪ್ರೇರಣೆಯಾಯಿತು. ಸದಾ ಅನ್ವೇಷಣೆಯ ಬುದ್ಧಿಯ ಕಾರಂತರು ಯಕ್ಷಗಾನದ ಸಂಶೋಧನೆಯನ್ನು ಸವಾಲಾಗಿ ಸ್ವೀಕರಿಸಿದರು. ಅದರ ಫಲವೇ 'ಯಕ್ಷಗಾನ ಬಯಲಾಟ' ಎಂಬ ಕೃತಿ 1957ರಲ್ಲಿ

ಪ್ರಕಟಗೊಂಡಿತು. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ್ದು ಮಾತ್ರವಲ್ಲದೇ ಸ್ಟಾಕ್‌ಹೋಂನ ಇಂಟರ್ ನ್ಯಾಷನಲ್ ಡ್ಯಾನ್ಸ್ ಆರ್‌ಜೀವ್‌ನ ಕಂಚಿನ ಪದಕ ಲಭಿಸಿ ವಿಶ್ವದ ಗಮನ ಸೆಳೆಯಿತು. ಕೋಟ ಶಿವರಾಮ ಕಾರಂತರ 'ಯಕ್ಷಗಾನ ಬಯಲಾಟ' ಇವತ್ತಿಗೂ ಯಕ್ಷಗಾನ ಆಸಕ್ತರಿಗೆ ಬೈಬಲ್ ಇದ್ದಂತೆ. ಈ ಪ್ರೌಢ ಗ್ರಂಥ ಕಾರಂತರ ಅತ್ಯುನ್ನತ ಪ್ರತಿಭೆಗೆ ಸಾಕ್ಷಿಯಾಗಿದೆ. ಯಕ್ಷಗಾನ ಕಲೆಯ ಕುರಿತು ಎಲ್ಲ ಮಗ್ಗುಲುಗಳ ಪರಿವೀಕ್ಷಣೆ ಇಲ್ಲಿದ್ದು ಕಾರಂತರ ವಿಲಕ್ಷಣ ಹೊಳುಹುಗಳಿಗೆ ಪ್ರತೀಕವಾಗಿದೆ.

ನೆರೆಯ ಕೇರಳದಲ್ಲಿ ವಲ್ಲತ್ತೋಳರ ಶ್ರಮದಿಂದ ಕಥಕ್ಕಳಿ ವಿಶ್ವಮಾನ್ಯತೆ ಗಳಿಸಿಕೊಂಡ ಪರಿಯನ್ನು ಕಂಡ ಕಾರಂತರು ಯಕ್ಷಗಾನವನ್ನು ಆ ಮಟ್ಟಕ್ಕೆ ಏರಿಸಬೇಕೆಂಬ ಕನಸು ಕಂಡರು. ಅದುವರೆಗೆ ಯಾವುದೇ ಕಟ್ಟುಪಾಡಿಗೆ ಒಳಗಾಗದೇ ಕಲಾವಿದರ ಸ್ವೇಚ್ಛೆಯ ಆಡುಂಬೊಲವಾಗಿದ್ದ ಈ ರಂಗಕ್ಕೆ ಸಮರ್ಥ ಮಾರ್ಗದರ್ಶನ ನೀಡಲು ಮುಂದಾದರು. ದೇಶ ವಿದೇಶ ಸುತ್ತಿ ಅನೇಕ ಕಲಾಪ್ರಕಾರಗಳ ಒಳಹೊರಗನ್ನು ಅರಿತಿದ್ದ ಕಾರಂತರು ಯಕ್ಷಗಾನದ ಮೂಲ ಸೆಲೆ ಯಾವುದೆಂಬುದನ್ನು ಕಂಡುಕೊಂಡರು. ಯಕ್ಷಗಾನವನ್ನು ಕಲಾರೂಪವಾಗಿ ಕಂಡು ಅದನ್ನು ಪುನರ್ ಪ್ರತಿಷ್ಠಾಪಿಸುವ ಸಂಕಲ್ಪ ತೊಟ್ಟರು. ಅದಕ್ಕಾಗಿಯೇ ಅನೇಕ ಶಿಬಿರಗಳನ್ನು ಏರ್ಪಡಿಸಿ ಕಲಾವಿದರನ್ನು ತಿದ್ದುವ, ದಾರಿತೋರುವ ಕೈಂಕರ್ಯ ತೊಟ್ಟರು. 1958ರಲ್ಲಿ ಯಕ್ಷಗಾನದ ಕುರಿತಾದ ಮೊದಲ ಗೋಷ್ಠಿಯೊಂದನ್ನು ಏರ್ಪಡಿಸಿದ ಶಿವರಾಮ ಕಾರಂತರು ಕಲಾವಿದ ರನ್ನು, ವಿದ್ಯಾವಂತ ರನ್ನು ಸಾಹಿತ್ಯಾಸಕ್ತರನ್ನು ಇಲ್ಲಿ ಒಟ್ಟುಗೂಡಿಸಿದರು. 1961ರಲ್ಲಿ ಇನ್ನೊಂದು ಅಧ್ಯಯನ ಶಿಬಿರವನ್ನು ಉಡುಪಿಯಲ್ಲಿ ನಡೆಸಿ ಕಲಾವಿದರಿಗೆ ಯಕ್ಷ ಗಾನ ಕಲೆಯ ಒಳನೋಟವನ್ನು ತಿಳಿಸಿಕೊಟ್ಟರು. ವೈವಿಧ್ಯಮಯ ಭಾವಗಳನ್ನು ಕುಣಿತ ಹಾಗೂ ಅಭಿನಯದಲ್ಲಿ ಹೇಗೆ ಪಡಿಮೂಡಿಸಬೇಕೆಂಬುದನ್ನು ತೋರಿಸಿ ಕೊಟ್ಟರು. ಮೇಳದ ಭಾಗವತರಿಗಾಗಿ ರಾಗ ಸಂಶೋಧನಾ ಶಿಬಿರ ಸಂಘಟಿಸಿ ರಾಗ ಪರಿಜ್ಞಾನ ತಿಳಿಸಿಕೊಟ್ಟರು. ಯಕ್ಷಗಾನದ ವಿವಿಧ ರಾಗಗಳ ಅದರಲ್ಲೂ ಅಪೂರ್ವ ರಾಗಗಳನ್ನು ಧ್ವನಿಮುದ್ರಿಸಿ ಅವುಗಳು ದಾಖಲೆಯಾಗಿ ಉಳಿಯುವಂತೆ ನೋಡಿಕೊಂಡರು.

ಯಕ್ಷಗಾನದ ವಿಶಿಷ್ಟ ಶಕ್ತಿಯನ್ನು, ಸಾಂಪ್ರದಾಯಿಕ ಸೌಂದರ್ಯವನ್ನು ನಾಡಿನ ಉದ್ದಗಲಕ್ಕೂ ಪರಿಚಯಿಸಬೇಕೆಂಬ ದೃಷ್ಟಿಯಿಂದ 1962–64ರಲ್ಲಿ ಯಕ್ಷಗಾನ ತಂಡ ವೊಂದನ್ನು ಕಟ್ಟಿ ಕಲಾವಿದರಿಗೆ ತರಬೇತಿ ನೀಡಿ ಉಡುಪಿ, ಮಂಗಳೂರು, ಮುಂಬಯಿ ಮುಂತಾದೆಡೆ ಪ್ರದರ್ಶಿಸಿ ಕಲಾಸಕ್ತರ ಗಮನ ಯಕ್ಷಗಾನದತ್ತ ಹೊರಳುವಂತೆ ಮಾಡಿದರು. ಯಕ್ಷಗಾನ ಉಳಿಯಲು, ಬೆಳೆಯಲು ಕಲಾವಿದರಿಗೆ ಬಾಲ್ಯದಲ್ಲೇ ತರಬೇತಿ ಅಗತ್ಯ ಎಂಬುದನ್ನು ಮನಗಂಡ ಶಿವರಾಮ ಕಾರಂತರು 1968ರಲ್ಲಿ ಯಕ್ಷಗಾನ ಕೇಂದ್ರವೊಂದನ್ನು ಬ್ರಹ್ಮಾವರದಲ್ಲಿ ಪ್ರಾರಂಭಿಸಿದರು. ಮುಂದೆ ಅದೇ

ಕಾರಂತರ ನೇತೃತ್ವದಲ್ಲಿ ಸಂಪೂರ್ಣ ಸಿದ್ಧತೆಯೊಂದಿಗೆ ಉಡುಪಿಯಲ್ಲಿ 1972ರಲ್ಲಿ 'ಯಕ್ಷಗಾನ ಕೇಂದ್ರ'ವೆಂಬ ಹೆಸರಿನಲ್ಲಿ ಪ್ರಾರಂಭವಾಯಿತು. ಕಳೆದ 4 ದಶಕಗಳಲ್ಲಿ ಈ ಕೇಂದ್ರ ಅಸಂಖ್ಯ ಶಿಷ್ಯರನ್ನು ಈ ರಂಗಕ್ಕೆ ನೀಡಿದೆ. ಯಕ್ಷಗಾನದ ಸಮಗ್ರ ಬೆಳವಣಿಗೆಗೆ ಹೇತುವಾಗಿದೆ. ಉಳಿದ ಕಲೆಗಳೊಂದಿಗೆ ಯಕ್ಷಗಾನ ಹೆಗಲೆಣಿಯಾಗಿ ಕಾಣುವಲ್ಲಿ ಕಾರಣವಾಗಿದೆ.

'ಯಕ್ಷಗಾನ ಬ್ಯಾಲೆ' ಕಾರಂತರ ಕನಸಿನ ಕೂಸು. ಕನ್ನಡ ಬಾರದ ಕಲಾರಸಿಕರು ಯಕ್ಷಗಾನದ ಸವಿಯನ್ನು ಸವಿಯುತ್ತಿಲ್ಲ ಎಂಬುದನ್ನು ಕಾರಂತರು ಕಂಡುಕೊಂಡರು. ಕರ್ನಾಟಕದ ಹೊರಗೆ, ಕನ್ನಡ ಬಾರದವರಿಗೆ ಈ ಕಲೆಯ ರುಚಿ ಹತ್ತಬೇಕಾದರೆ ಗದ್ಯದಲ್ಲಿ ಆಡುವ ಸಂಭಾಷಣೆ ಅಗತ್ಯವಿಲ್ಲ ಎಂಬುದು ಅವರ ನಂಬಿಕೆಯಾಗಿತ್ತು. ಈಗಾಗಲೇ ಅವರ ತರಬೇತಿಯಲ್ಲಿ 'ಯಕ್ಷಗಾನ'ದ ಮೂಲಕ ಪ್ರದರ್ಶನಗೊಂಡ ಯಕ್ಷಗಾನ ಕರ್ನಾಟಕದ ಹೊರಗೆ ಖ್ಯಾತಿಗೊಂಡಿರಲಿಲ್ಲ. ಅದಕ್ಕಾಗಿಯೇ ಮಾತಿಲ್ಲದ 'ಯಕ್ಷಗಾನ ಬ್ಯಾಲೆ' ಪ್ರದರ್ಶನ ಬಳಕೆಗೆ ತಂದರು. ಸಾಂಪ್ರದಾಯಿಕರು ಇದನ್ನು ವಿರೋಧಿಸಿದರು ಯಕ್ಷಗಾನದ ಕೊಲೆ ಎಂದರು. ಆನೆ ನಡೆದದ್ದೆ ದಾರಿಯೆಂಬಂತೆ ವಿರೋಧವನ್ನು ಲೆಕ್ಕಿಸದೇ ಮುಂದುವರಿದರು. ಈ ಸಮಯಕ್ಕಾಗಲೇ ಕಾರಂತರು ಪುತ್ತೂರಿನಿಂದ ಸಾಲಿಗ್ರಾಮಕ್ಕೆ ಬಂದಿದ್ದರು. 1975ರಲ್ಲಿ ಪ್ರದರ್ಶನಗೊಂಡ ದಮಯಂತಿ ಕಲ್ಯಾಣ, ಕನಕಾಂಗಿ ಕಲ್ಯಾಣಗಳು ಮುಂಬಯಿಯಲ್ಲಿ ಜಯಭೇರಿ ಬಾರಿಸಿದವು. ಅನೇಕ ಬದಲಾವಣೆಗಳನ್ನು ಡಾ॥ ಕಾರಂತರು ಬ್ಯಾಲೆಯಲ್ಲಿ ಅಳವಡಿಸಿದರು. ಹಿಮ್ಮೇಳದಲ್ಲಿ ಪಿಟಿಲು, ಸ್ಯಾಕ್ಸೋಫೋನ್‌ನ್ನು ಬಳಸಿದರು. ಕೊರಿಯೋಗ್ರಫಿ ಯಲ್ಲೂ ವಿಶಿಷ್ಟತೆ ಮೆರೆದರು. ಸುಮಾರು 25 ವರ್ಷಗಳಲ್ಲಿ ವಿಶ್ವದಾದ್ಯಂತ ಯಕ್ಷಗಾನ ಬ್ಯಾಲೆಯನ್ನು ಪ್ರದರ್ಶಿಸಿ ಯಕ್ಷಗಾನ ಕಲೆಗೆ ವಿಶ್ವಮನ್ನಣೆ ದೊರಕಿಸಿಕೊಟ್ಟರು.

ಕೇಂದ್ರ ಸರಕಾರದ ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದಲ್ಲಿ ಪ್ರಾರಂಭ ವಾದ ಉಡುಪಿಯ ಯಕ್ಷಗಾನ ಕೇಂದ್ರ ಡಾ॥ ಶಿವರಾಮ ಕಾರಂತರ ಮಾರ್ಗದರ್ಶನ ದಲ್ಲಿ ಯಕ್ಷಗಾನದ ಬೆಳವಣಿಗೆಗೆ ಸಾಕಷ್ಟು ಕಾಣಿಕೆ ನೀಡಿದೆ. ಇಲ್ಲಿ ಗುರುಗಳಾಗಿ ವೀರಭದ್ರ ನಾಯಕ, ಹೆರೆಂಜಾಲು ವೆಂಕಟರಮಣ, ನೀಲಾವರ ರಾಮಕೃಷ್ಣಯ್ಯ, ಹಿರಿಯಡ್ಕ ಗೋಪಾಲರಾವ್, ಮಣೂರು ಮಹಾಬಲ ಕಾರಂತ ಮುಂತಾದವರು ಸೇವೆ ಸಲ್ಲಿಸಿದ್ದಾರೆ. ಈಗ ಸಂಜೀವ ಸುವರ್ಣರು ಗುರುಗಳಾಗಿದ್ದಾರೆ. ಡಾ॥ ಕಾರಂತರ ಸಲಹೆ ಸೂಚನೆಗಳಿಂದ ಲಾಭ ಪಡೆದವರು ಹಲವರು. ಭಾಗವತ ನಾರಣಪ್ಪ ಉಪ್ಪೂರ, ಕೆರೆಮನೆ ಮಹಾಬಲ ಹೆಗಡೆ, ಕೆಮ್ಮಣ್ಣು ಆನಂದ, ಸಕ್ಕಟ್ಟು ಲಕ್ಷ್ಮೀ ನಾರಾಯಣಯ್ಯ, ಹಾರಾಡಿ ಮಹಾಬಲ ಗಾಣಿಗ, ಗಜಾನನ ಭಂಡಾರಿ, ದಯಾನಂದ ಬಳೆಗಾರ, ಚೇರ್ಕಾಡಿ ಮಾಧವ ನಾಯಕ್ ಮುಂತಾದವರು ಮುಖ್ಯರು. ಡಾ॥ ಕಾರಂತರ "ಯಕ್ಷರಂಗ" ದೇಶದ ಎಲ್ಲ ಮೂಲೆಗಳಲ್ಲೂ ಪ್ರದರ್ಶನ ನೀಡಿರುವುದು ಉಲ್ಲೇಖನಾರ್ಹ. ಇಷ್ಟೇ ಅಲ್ಲದೇ ರೋಂ, ಇಟಲಿ, ಇಂಗ್ಲೆಂಡ್, ರಷ್ಯಾ, ಟರ್ಕಿ,

ಯುಗೊಸ್ಲೊವಿಯಾ, ದಕ್ಷಿಣ ಅಮೇರಿಕಾ, ಬಲ್ಗೇರಿಯಾ, ಜಪಾನ್ ಮುಂತಾದ ದೇಶಗಳಲ್ಲಿ 'ಯಕ್ಷಗಾನ ಬ್ಯಾಲೆ' ಜಯಭೇರಿ ಬಾರಿಸಿದೆ.

ಡಾ॥ ಶಿವರಾಮ ಕಾರಂತರು ಯಕ್ಷಗಾನ ಕಲಾವಿದರಿಗೆ ಸೌಂದರ್ಯಪ್ರಜ್ಞೆಯನ್ನು ತೋರಿಸಿಕೊಟ್ಟರು. ದೇಹದ ಚಲನೆಯ ಮೂಲಕವೇ ಭಾವದ ಸ್ಪಂದನೆ ಸಾಧ್ಯ ಎಂಬುದನ್ನು ಹೇಳಿಕೊಟ್ಟರು. ಹಾಡುವಿಕೆಯಲ್ಲಿ ಭಾವಸ್ಫುರಣೆಯಾಗುವ ಬಗೆಯನ್ನು ವಿವರಿಸಿದರು. ಇಂದು ಸ್ತ್ರೀ ವೇಷಧಾರಿ ಧರಿಸುತ್ತಿರುವ ಶಿರೋಭೂಷಣ ಕಾರಂತರ ಸೃಜನಶೀಲತೆಗೆ ಸಾಕ್ಷಿ. ಡಾ॥ ಕಾರಂತರು ವೇಷ-ಭೂಷಣಗಳಲ್ಲಿ ಸುಧಾರಣೆ ತಂದರು. ಬಣ್ಣಗಾರಿಕೆಗೆ ಅನೇಕ ಹೊಳಹುಗಳನ್ನು ನೀಡಿದರು. ಕಾಲಮಿತಿ ಪ್ರದರ್ಶನದ ಪ್ರವರ್ತಕರಾದರು. ಚಿತ್ರಾಂಗಧಾ, ಅಭಿಮನ್ಯು ವಧೆ, ಪಂಚವಟಿ, ಗಯಚರಿತೆ, ಭೀಷ್ಮ ವಿಜಯ ಮುಂತಾದ ಪ್ರಸಂಗಗಳನ್ನು ಆಯ್ದು ಪ್ರದರ್ಶನಕ್ಕೆ ಯೋಗ್ಯವಾಗುಂತೆ ಅಡಕ ಮಾಡಿ ತಮ್ಮ 'ಯಕ್ಷರಂಗ'ದ ಮೂಲಕ ಮರುಹುಟ್ಟು ಕೊಟ್ಟರು. ಜಲಕೇಳಿ, ಪ್ರಯಾಣ, ಬೇಟೆ ಮುಂತಾದ ಸಮೂಹ ನೃತ್ಯಗಳಿಗೆ ಚಾಲನೆ ಕೊಟ್ಟರು. ವಿದ್ಯಾವಂತರು ಈ ರಂಗಕ್ಕೆ ಬರಲು ಕಾರಣರಾದರು. ಯಕ್ಷಗಾನವನ್ನು ಕಲಾರೂಪವಾಗಿ ತೋರಿಸಿಕೊಟ್ಟರು. ಬಡಗುತಿಟ್ಟು ಯಕ್ಷಗಾನಕ್ಕೆ 'ಸುವರ್ಣ ಯುಗ'ವನ್ನು ತಂದರು. ಇಂದು ಕಾಣುವ ಹವ್ಯಾಸಿ ಕಲಾವಿದರ ಮಹಾಪೂರಕ್ಕೆ ಕಾರಂತರು ಬೀಜವಾಪನಗೈದರು. ಯಕ್ಷಗಾನವನ್ನು ಕರ್ನಾಟಕದ ಪ್ರಾತಿನಿಧಿಕ ಕಲೆಯಾಗಿ ಮಾರ್ಪಡಿಸಿದರು.

■

ಯಶೋಗಾಥೆಗೆ ಮರುನಿರ್ಮಾಣದ ಕೊಡುಗೆ

ಯಕ್ಷಗಾನ ಎನ್ನುವ ಪದದೊಂದಿಗೆ ತಳುಕು ಹಾಕಿಕೊಂಡಿರುವ ಇನ್ನೊಂದು ಪದವೆಂದರೆ 'ಕಾರಂತರು'. ಕನ್ನಡ ನಾಡಿಗೆ ಮೂರನೇಯ ಜ್ಞಾನಪೀಠ ಪ್ರಶಸ್ತಿಯ ಗರಿಯನ್ನು ಮೂಡಿಸಿದ ಡಾ. ಕೋಟ ಶಿವರಾಮಕಾರಂತರು ಸಾಹಿತ್ಯಲೋಕದ ದಿಗ್ಗಜರಾದಂತೆ ಯಕ್ಷಗಾನ ರಂಗಭೂಮಿಗೆ ಕಾಯಕಲ್ಪ ನೀಡಿದ ಮೇರುವ್ಯಕ್ತಿ. ಸಾಗರದ ಆಳ, ಹಿಮಾಲಯದ ಎತ್ತರಕ್ಕೆ ರೂಪಕವಾಗಬಲ್ಲ ಸೃಜನಶೀಲತೆಯನ್ನು ಹೊಂದಿದ್ದ ಶಿವರಾಮ ಕಾರಂತರು ಯಕ್ಷಗಾನದ ಗೀಳು ಅಂಟಿಸಿಕೊಳ್ಳುವ ಮುನ್ನ ನಾಟಕ ಗೀತನಾಟಕವೇ ಮುಂತಾದ ಕಲಾಪ್ರಕಾರಗಳಲ್ಲಿ ತೊಡಗಿಸಿಕೊಂಡಿದ್ದರು. ಅನ್ವೇಷಣೆಯ ಬುದ್ಧಿಯ ಕಾರಂತರು ಯಕ್ಷಗಾನ ಸಂಶೋಧನೆಯನ್ನು ಸವಾಲಾಗಿ ಸ್ವೀಕರಿಸಿದರು. ಎರಡು ದಶಕಗಳ ಸಾಧನೆಯ ಫಲವಾಗಿ 1957ರಲ್ಲಿ ಹೊರತಂದ ಅವರ ಯಕ್ಷಗಾನ ಬಯಲಾಟಕ್ಕೆ ಕೇಂದ್ರ ನಾಟಕ ಅಕಾಡೆಮಿಯ ಪ್ರಶಸ್ತಿ ಬಂದಿದೆ. ಅಲ್ಲದೆ ಸ್ಟಾಕ್‌ಹೋಂನ ಇಂಟರ್ ನ್ಯಾಷನಲ್ ಆರ್ಚಿವ್ಸ್‌ನ ಕಂಚಿನ ಪದಕ ಲಭಿಸಿ ವಿಶ್ವದ ಗಮನ ಸೆಳೆಯಲು ಕಾರಣವಾಗಿರುತ್ತದೆ. ಯಕ್ಷಗಾನ ಕಲಾವಿದರ ಕುರಿತ ಎಲ್ಲಾ ಮಗ್ಗುಲುಗಳ ಪರಿವೀಕ್ಷಣೆ ಇಲ್ಲಿದ್ದು, ಕಾರಂತರ ವಿಲಕ್ಷಣ ಹೊಳಪುಗಳಿಗೆ ಉಜ್ವಲ ಪ್ರತಿಭೆಗೆ ಸಾಕ್ಷಿಯಾಗಿದೆ.

ದೇಶವಿದೇಶಗಳನ್ನು ಸುತ್ತಿ ಅನೇಕ ಕಲಾಪ್ರಕಾರಗಳ ಒಳ ಹೊರಗನ್ನು ಅರಿತಿದ್ದ ಕಾರಂತರು ಯಕ್ಷಗಾನದ ಮೂಲಸೆಲೆ ಯಾವುದೆಂಬುದನ್ನು ಕಂಡುಕೊಂಡರು. ಅದನ್ನು ಪುನರುಜ್ಜೀವಿಸುವ

ಸಂಕಲ್ಪ ತೊಟ್ಟರು. ಯಕ್ಷಗಾನದ ವಿಶಿಷ್ಟ ಶಕ್ತಿಯನ್ನು ಸಾಂಪ್ರದಾಯಿಕ ಸೌಂದರ್ಯವನ್ನು ನಾಡಿನ ಉದ್ದಗಲಕ್ಕೂ ಪರಿಚಯ ಮಾಡಿಸಬೇಕೆಂಬ ದೃಷ್ಟಿಯಿಂದ 1962 ರಿಂದ 1964ರ ಕಾಲಘಟ್ಟದಲ್ಲಿ ಯಕ್ಷಗಾನ ತಂಡವೊಂದನ್ನು ಕಟ್ಟಿ ಕಲಾವಿದರಿಗೆ ತರಬೇತಿ ನೀಡಿ ವೈವಿಧ್ಯಮಯ ಭಾವಗಳನ್ನು ಕುಣಿತ ಹಾಗೂ ಅಭಿನಯದಲ್ಲಿ ಹೇಗೆ ಮೂಡಿಸಬೇಕೆಂಬುದನ್ನು ತೋರಿಸಿಕೊಟ್ಟರು. ಈ ತಂಡದ ಕಲಾಮಿತಿಯ ಪ್ರದರ್ಶನಗಳನ್ನು ಉಡುಪಿ, ಮಂಗಳೂರು, ಮುಂಬಯಿ ಮುಂತಾದೆಡೆ ಪ್ರದರ್ಶಿಸಿ ಕಲಾಸಕ್ತರ ಗಮನ ಯಕ್ಷಗಾನದತ್ತ ಹೊರಳುವಂತೆ ಮಾಡಿದರು. ಕಲಾವಿದರಿಗೆ ತರಬೇತಿ ಅಗತ್ಯ ಎಂಬುದನ್ನು ಮನಗಂಡು 1968ರಲ್ಲಿ ಯಕ್ಷಗಾನ ಕೇಂದ್ರವೊಂದನ್ನು ಮೊದಲು ಬ್ರಹ್ಮಾವರದಲ್ಲಿ ಪ್ರಾರಂಭಿಸಿದರು. ಅದೇ ಮುಂದೆ ಕಾರಂತರ ನೇತೃತ್ವದೊಂದಿಗೆ 1972ರಲ್ಲಿ ಉಡುಪಿ ಯಕ್ಷಗಾನ ಕೇಂದ್ರವಾಗಿ ಪ್ರಾರಂಭವಾಯಿತು. ಯಕ್ಷಗಾನ ಬ್ಯಾಲೆ ಕಾರಂತರ ಕನಸಿನ ಕೂಸು. ಕನ್ನಡ ಬಾರದ ಕಲಾರಸಿಕರು ಯಕ್ಷಗಾನದ ಸವಿಯನ್ನು ಸವಿಯುತ್ತಿಲ್ಲ ಎಂಬುದನ್ನು ಕಾರಂತರು ಕಂಡುಕೊಂಡರು. ಕರ್ನಾಟಕದ ಹೊರಗೆ ಕನ್ನಡ ಬಾರದೇ ಇರುವವರಿಗೆ ಈ ಕಲೆಯ ರುಚಿ ಹತ್ತಬೇಕಾದರೆ ಗದ್ಯದಲ್ಲಿ ಆಡುವ ಸಂಭಾಷಣೆ ಅಗತ್ಯವಿಲ್ಲ ಅನ್ನುವುದು ಅವರ ನಂಬಿಕೆ ಆಗಿತ್ತು. ಈಗಾಗಲೇ ಅವರ ತರಬೇತಿಯಲ್ಲಿ ಯಕ್ಷರಂಗದ ಮೂಲಕ ಪ್ರದರ್ಶನಗೊಂಡ ಯಕ್ಷಗಾನ ಕರ್ನಾಟಕದ ಹೊರಗೆ ಖ್ಯಾತಿಗೊಂಡಿರಲಿಲ್ಲ. ಅದಕ್ಕಾಗಿಯೇ ಮಾತಿಲ್ಲದ ಯಕ್ಷಗಾನ ಬ್ಯಾಲೆ ಪ್ರದರ್ಶನ ಬಳಕೆಗೆ ತಂದರು. ಸಾಂಪ್ರದಯಕರು ಇದನ್ನು ವಿರೋಧಿಸಿದರು. ಆನೆ ನಡೆದದ್ದೇ ದಾರಿ ಎಂಬಂತೆ ವಿರೋಧವನ್ನು ಲೆಕ್ಕಿಸದೆ ಕಾರಂತರು ಮುಂದುವರೆದರು. ಈ ಸಮಯಕ್ಕಾಗಲೇ ಕಾರಂತರು ಪುತ್ತೂರಿನಿಂದ ಸಾಲಿಗ್ರಾಮಕ್ಕೆ ಬಂದರು. 1975ರಲ್ಲಿ ಪ್ರದರ್ಶನಗೊಂಡ 'ದಮಯಂತಿ ಕಲ್ಯಾಣ', 'ಕನಕಾಂಗಿ ಕಲ್ಯಾಣ'ಗಳು ಮುಂಬಯಿಯಲ್ಲಿ ಜಯಭೇರಿ ಬಾರಿಸಿದವು. ಅನೇಕ ಬದಲಾವಣೆಗಳನ್ನು ಡಾ॥ ಕಾರಂತರು ತಮ್ಮ ಬ್ಯಾಲೆಯಲ್ಲಿ ಅಳವಡಿಸಿದರು. ಹಿಮ್ಮೇಳದಲ್ಲಿ ಪಿಟೀಲು, ಸ್ಯಾಕ್ಸೋಫೋನುಗಳನ್ನು ಬಳಸಿದರು. ಕೊರಿಯೋಗ್ರಫಿಯಲ್ಲಿ ವಿಶಿಷ್ಟತೆ ಮೆರೆದರು. ಕಾರಂತರ ಯಕ್ಷರಂಗ ದೇಶದ ಎಲ್ಲಾ ಮೂಲೆಗಳಲ್ಲಿ ಪ್ರದರ್ಶನ ನೀಡಿರುವುದು ಉಲ್ಲೇಖನಾರ್ಹ. ಇಷ್ಟೇ ಅಲ್ಲದೆ ರೋಂ, ಇಟಲಿ, ಇಂಗ್ಲೆಂಡ್, ರಷ್ಯಾ, ಟರ್ಕಿ, ಯುಗೋಸ್ಲಾವಿಯ, ದಕ್ಷಿಣ ಅಮೇರಿಕಾ, ಬಲ್ಗೇರಿಯಾ, ಜಪಾನ್ ಮುಂತಾದ ದೇಶಗಳಲ್ಲೂ ಯಕ್ಷಗಾನ ಬ್ಯಾಲೆ ಜಯಭೇರಿ ಬಾರಿಸಿದೆ. ಹೀಗೆ ವಿಶ್ವದಾದ್ಯಂತ ಯಕ್ಷಗಾನ ಬ್ಯಾಲೆಯನ್ನು ಪ್ರದರ್ಶಿಸಿ ಯಕ್ಷಗಾನ ಕಲೆಗೆ ವಿಶ್ವಮನ್ನಣೆ ದೊರಕಿಸಿಕೊಟ್ಟವರು ಡಾ॥ ಶಿವರಾಮ ಕಾರಂತರು. ಅವರ ಸೃಷಿಯ ಯಕ್ಷಗಾನ ಬ್ಯಾಲೆಯ ಪ್ರದರ್ಶನ ಈಚೆಗೆ ಕಡಿಮೆಯಾಗುತ್ತಾ ಬಂದು ನಿಂತೇ ಹೋಗಿದೆ ಎನ್ನುವ ಸ್ಥಿತಿ ನಿರ್ಮಾಣವಾಗಿತ್ತು. ಅವರು ನಿಧನಗೊಂಡ ನಂತರ ಈ ಕಲಾ ಶ್ರೀಮಂತಿಕೆಯನ್ನು ಹೊರನಾಡಿಗೆ ಪರಿಚಯಿಸುವ ಕಾಯಕ ಇಲ್ಲವೇ ಆಗಿತ್ತು. ಕಾರಂತರ

ಅಭಿಮಾನಿಗಳ ಪಾಲಿಗೆ ಇದೊಂದು ನುಂಗಲಾರದ ತುತ್ತಾಗಿತ್ತು. ಇಂದಿನ ಯುವ ಜನಾಂಗಕ್ಕೆ ಕನ್ನಡ ಅರಿಯದ ಕಲಾಸಕ್ತರಿಗೆ, ವಿದ್ಯಾವಂತ ಯುವಕರಿಗೆ, ಯಕ್ಷಗಾನ ಸಂಭಾಷಣೆಗಳ ಲಯದ ಬೆನ್ನು ಹತ್ತಲಾಗದವರಿಗೆ, ಆ ರುಚಿಯ ಆಸ್ವಾದನೆ ಅರಿಯದ ಕನ್ನಡಿಗರಿಗೆ, ಅಸಂಖ್ಯ ಯಕ್ಷಗಾನ ಅಭಿಮಾನಿ ವಿದೇಶೀಯರಿಗೆ, ಯಕ್ಷಗಾನದ ಸವಿಯನ್ನು ಉಣ್ಣಿಸಲು ಇಂದು ಯಕ್ಷಗಾನ ಬ್ಯಾಲೆ ತೀರಾ ಅಗತ್ಯ. ಇದೊಂದು ಸಾಂಸ್ಕೃತಿಕ ಜರೂರಿನ ಕೆಲಸ. ಇದಕ್ಕಾಗಿಯೇ ಸಾಕಷ್ಟು ಜನ ಚಿಂತಕರು, ಸಾಹಿತಿಗಳೂ, ಹವ್ಯಾಸಿಗಳು, ಕಾರಂತರ ಅಭಿಮಾನಿಗಳೂ ಹಪಹಪಿಸುತ್ತಿರುವಾಗ ಮೂಡಿದ ಆಶಾಕಿರಣವೆಂದರೆ ಇದೀಗ ತಾನೇ ಕರ್ನಾಟಕ ಕಲಾದರ್ಶಿನಿ (ರಿ) ಬೆಂಗಳೂರು ಸಂಸ್ಥೆಯು ಪ್ರಸ್ತುತಪಡಿಸುತ್ತಿರುವ ಯಕ್ಷಗಾನ ಬ್ಯಾಲೆ. ಶ್ರೀಮತಿ ಮಾಲಿನಿ ಮಲ್ಯ, ಸಂಚಾಲಕಿ, ಡಾ॥ ಶಿವರಾಮ ಕಾರಂತ ಸಂಶೋಧನೆ ಮತ್ತು ಅಧ್ಯಯನ ಕೇಂದ್ರ ಹಾಗೂ ವಿದ್ವಾನ್ ಸುಧೀರ್ ಕೊಡವೂರು ನಿರ್ದೇಶನ ಮತ್ತು ಶ್ರೀನಿವಾಸ ಸಾಸ್ತಾನ ಅವರ ಸಂಯೋಜನೆಯಲ್ಲಿ ಡಾ॥ ಕೋಟ ಶಿವರಾಮಕಾರಂತರು ನಿರ್ದೇಶಿಸಿದ ಯಕ್ಷಗಾನ ಬ್ಯಾಲೆ ಮರುನಿರ್ಮಾಣಗೊಳ್ಳುತ್ತಿರುವುದು ಒಂದು ಶುಭ ಸೂಚನೆಯಾಗಿದೆ. ಯಕ್ಷಗಾನ ಕಲಾ ಪ್ರಕಾರದ ಜಯಭೇರಿ ಇನ್ನೊಮ್ಮೆ ಮೊಳಗಲು ಸಿದ್ಧತೆ ನಡೆದಿದೆ.

ಈಚೆಗೆ ಬೆಂಗಳೂರು ನಗರದಲ್ಲಿ ಮೂರು ಪ್ರದರ್ಶನಗಳನ್ನು ನೀಡಿರುವ ಕರ್ನಾಟಕ ಕಲಾದರ್ಶಿನಿಯವರ ಪ್ರಸ್ತುತಿಯ 'ಅಭಿಮನ್ಯು ವಧೆ'ಯೇ ಈ ನಿಟ್ಟಿನ ಆಶಾಕಿರಣ. ಡಾ॥ ಶಿವರಾಮ ಕಾರಂತರ ಗರಡಿಯಲ್ಲಿ ಪಳಗಿರುವ ವಿದ್ವಾನ್ ಸುಧೀರ್‌ರಾವ್ ಕೊಡವೂರು ಅವರು ಇದೀಗ ಕರ್ನಾಟಕ ಕಲಾದರ್ಶಿನಿಯ ತಂಡದ ಕಲಾವಿದರಿಗೆ ತಾವು ಕಾರಂತರಿಂದ ಪಡೆದ ತರಬೇತಿಯನ್ನು ಹಸ್ತಾಂತರಿಸುತ್ತಿದ್ದಾರೆ. ತರಬೇತಿಯೊಂದಿಗೆ ನಿರ್ದೇಶನದ ಹೊಣೆಯನ್ನೂ ಹೊತ್ತಿರುವ ಶ್ರೀ ಸುಧೀರ್ ರಾವ್ ಅವರು ಮೊದಲಿಗೆ 'ಅಭಿಮನ್ಯು ವಧೆ' ಹಾಗೂ 'ಪಂಚವಟಿ' ಎಂಬ ಎರಡು ಕಾರಂತರ ಬ್ಯಾಲೆಗಳನ್ನು ಮರು ನಿರ್ಮಿಸಲು ಹೊರಟಿದ್ದಾರೆ. ಕಾರಂತರು ಹೇಳಿಕೊಟ್ಟ ಅಂಶಗಳನ್ನೆಲ್ಲಾ ಗಣನೆಯಲ್ಲಿಟ್ಟುಕೊಂಡು, ಅದೇ ಮಾದರಿಯ ತರಬೇತಿಯನ್ನು ಒಂದು ತಿಂಗಳಿಗೂ ಹೆಚ್ಚು ಕಾಲ ರವೀಂದ್ರ ಕಲಾಕ್ಷೇತ್ರದ ಪಕ್ಕದ ರಂಗ ತಾಲೀಮು ಕೊಠಡಿಯಲ್ಲಿ ನಡೆಸಿದ್ದಾರೆ. ಅಭ್ಯಾಸಕ್ಕೆ ಬಂದ ತಂಡದ ಸದಸ್ಯರಲ್ಲಿ ಉತ್ಸಾಹ ಎದ್ದು ಕಾಣುತ್ತಿತ್ತು. ಸುಧೀರ್ ರಾವ್ ಹೇಳುತ್ತಿದ್ದ ಅಂಶಗಳನ್ನೆಲ್ಲ ಕರ್ನಾಟಕ ಕಲಾದರ್ಶಿನಿಯ ಆಯ್ದ ಸದಸ್ಯರು ಆಲಿಸಿ ಅಭಿನಯಿಸುತ್ತಿದ್ದರು. ಅಭಿನಯ ಹಾಗೂ ನರ್ತನದಲ್ಲಿ, ಸಂಭಾಷಣೆಯಲ್ಲಿ ಬರುತ್ತಿದ್ದ ಸಾರವನ್ನು ಹೊರಹೊಮ್ಮಿಸುತ್ತಿದ್ದರು. ಇದಕ್ಕೆಲ್ಲ ಪೂರಕವಾಗಿ ಸಮರ್ಥ ಮೃದಂಗವಾದಕರು ಅತ್ಯುತ್ತಮ ಹಿಮ್ಮೇಳದ ಶಿಕ್ಷಕರು ಆಗಿರುವ ಶ್ರೀ ಅನಂತ ಪದ್ಮನಾಭ ಪಾಠಕ್ ಕೊಡವೂರು ಅವರೊಂದಿಗೆ ಜೊತೆಗೂಡಿದ್ದಾರೆ. ಈ ಮರುಚಾಲನೆಗೆ ಆಶೀರ್ವಾದದ ಮುನ್ನುಡಿಯನ್ನು ಬರೆದವರು

ಡಾ॥ ಶಿವರಾಮ ಕಾರಂತ ಸಂಶೋಧನೆ ಮತ್ತು ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಮಾಲಿನಿ ಮಲ್ಯರವರು. ಈ ಕೆಲಸಕ್ಕೆ ಒತ್ತಾಸೆಯಾಗಿ ನಿಂತು ಶ್ರಮವಹಿಸಿ ಸಂಘಟಿಸುತ್ತಿರುವವರು ಕರ್ನಾಟಕ ಕಲಾದರ್ಶಿನಿಯ ಕನಸುಗಳನ್ನು ಸಾಕಾರ ಗೊಳಿಸುತ್ತಿರುವ ಶ್ರೀನಿವಾಸ ಸಾಸ್ತಾನ ಹಾಗೂ ಗೌರಿ ಸಾಸ್ತಾನ ದಂಪತಿಗಳು.

2014ರ ಆಗಸ್ಟ್ 16, 17, 18ರಂದು ಬೆಂಗಳೂರಿನ ಕಲಾಗ್ರಾಮ, ಕೆ.ಎಚ್. ಕಲಾಸೌಧ ಹಾಗೂ ಮರಾಠ ಹಾಸ್ಟೆಲ್‌ಗಳಲ್ಲಿ ಈ ತಂಡ ಮೊದಲ ಬಾರಿಗೆ 'ಅಭಿಮನ್ಯು ವಧೆ'ಯನ್ನು ಯಕ್ಷಗಾನ ಬ್ಯಾಲೆಯಾಗಿ ಪ್ರದರ್ಶಿಸುವ ಮೂಲಕ ಕಾರಂತರ ಯಕ್ಷಗಾನ ಬ್ಯಾಲೆಯ ಮರುನಿರ್ಮಾಣಕ್ಕೆ ನಾಂದಿಹಾಡಿತು. ಪ್ರದರ್ಶನ ಒಂದೂವರೆ ತಾಸುಗಳಷ್ಟು ನಡೆದು ಮೂರು ಕಡೆಯಲ್ಲೂ ಪ್ರೇಕ್ಷಕರ ಮನತಣಿಸುವಲ್ಲಿ ಯಶಸ್ವಿಯಾಯಿತು. ಮೂರನೆಯ ದಿನದ ಪ್ರದರ್ಶನದಲ್ಲಿ ಸಾಂಪ್ರದಾಯಿಕ ಯಕ್ಷಗಾನ ಪ್ರೇಕ್ಷಕರೇ ತುಂಬಿಕೊಂಡಿದ್ದು, ಅವರು ಕೂಡ ಈ ನೂತನ ಕಲಾಪ್ರಕಾರವನ್ನು ಸ್ವಾಗತಿಸಿದ್ದು ವಿಶೇಷ. ಡಾ॥ ಶಿವರಾಮ ಕಾರಂತರು ಬಳಕೆಗೆ ತಂದಂತೆ ಇಲ್ಲೂ ಹಿಮ್ಮೇಳದಲ್ಲಿ ಸ್ಯಾಕ್ಸೋಫೋನ್ ಹಾಗೂ ವಯೊಲಿನ್‌ಗಳ ಬಳಕೆಯಿತ್ತು. ಏರುಗತಿಯ ಪದ್ಯಕ್ಕೆ, ವೀರರಸಪ್ರಚೋದನೆಗೆ, ಯುದ್ಧಸಂದರ್ಭಕ್ಕೆ, ಪ್ರಯಾಣದ ನಡೆಗೆ ಸ್ಯಾಕ್ಸೋಫೋನ್ ಬಳಕೆಯಿಂದಾಗಿ ರಾಗದಲ್ಲಿ ತೀವ್ರತೆಯ ಸಂಚಲನವಾಗುತ್ತಿತ್ತು. ಅದೇ ಕೃಷ್ಣ ಅರ್ಜುನರ ಸಂಭಾಷಣೆಯಲ್ಲಿ, ಸುಭದ್ರೆಯ ಸಂಕಟದ ಸಮಯದಲ್ಲಿ ವಯೋಲಿನ್ ಬಳಕೆಯಿಂದಾಗಿ ದುಃಖಕರ ಸನ್ನಿವೇಶವನ್ನು ಭಾವನಾತ್ಮಕವಾಗಿ ಪ್ರೇಕ್ಷಕರಿಗೆ ಮುಟ್ಟಿಸುವಲ್ಲಿ ಯಶಸ್ವಿ ಯಾಗಿತ್ತು.

ಭಾಗವತರಾದ ಸುಧೀರ್‌ರಾವ್ ಕೊಡವೂರುರವರ ಹಾಡುಗಾರಿಕೆ ಭಾವಪೂರ್ಣವಾಗಿದ್ದು ರಸಿಕರ ಹೃದಯಕ್ಕೆ ನಾಟುವಂತಿತ್ತು. ಯಾವ ಶಬ್ದಕ್ಕೆ ಎಲ್ಲಿ ಹೆಚ್ಚು ಒತ್ತು ನೀಡಬೇಕೆಂಬುದು ಅವರಿಗೆ ತಿಳಿದಿತ್ತು. ಸುಧೀರ್‌ರಾವ್ ಅವರು ಹಾಡಿದ "ಗೋತ್ರಾರಿಯ ನಂದನಗೆ ಮೊಗವೆತ್ತಲು ಬಿಡೆವೀಕಡೆಗೆ" ಎಂಬುದು ತುಂಬಾ ಸೊಗಸಾಗಿತ್ತು. ವೇಷಧಾರಿಯು ಕೂಡ ಅಷ್ಟೇ ಸೊಗಸಾಗಿ ಅಭಿನಯಿಸಿದರು. ಇದರಿಂದಾಗಿ ಪ್ರಸಂಗದ ಹಾಡು ನೇರವಾಗಿ ಸಂಭಾಷಣೆ ಇಲ್ಲದೆಯೇ ಪ್ರೇಕ್ಷಕರಿಗೆ ಅದರ ಸಾರ ತಿಳಿಸುವಂತಿತ್ತು. ಅನಂತಪದ್ಮನಾಭ ಪಾಠಕ್ ಅವರ ಮದ್ದಳೆಯ ಬಿಡ್ತಿಗೆಗೆ ಸರಿಯಾಗಿ ಪಾತ್ರಧಾರಿಗಳ ಪದಗತಿಯು ರಂಗದಲ್ಲಿ ಮೂಡುತ್ತಿತ್ತು. ಚಂಡೆ, ಮದ್ದಳೆ ಹಾಗೂ ಪಾತ್ರಧಾರಿಗಳ ಕುಣಿತ ಮಣಿತಗಳಲ್ಲಿ ತಾಳಮೇಳವಿತ್ತು. ದುರ್ಯೋಧನ ಒಡ್ಡೋಲಗದ ಸಾಮೂಹಿಕ ನರ್ತನ, ಅದೇ ರೀತಿ ಸಂಸಪ್ತಕ (ಗೌತಮ ಸಾಸ್ತಾನ) ಪ್ರವೇಶ ಬಹು ಚೆನ್ನಾಗಿ ಬಂತು. ಮಾತಿಲ್ಲದೆಯೇ ನಡೆಯುವ ಈ ದೀರ್ಘಕಾಲೀನ ನರ್ತನ ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಅಭಿನಯವೇ ಮಾತಾಗುವ ಬಗೆ ಚಕ್ರವ್ಯೂಹದ ರಚನೆಯಲ್ಲಿ ಅಡಗಿತ್ತು. ದ್ರೋಣನ ಹಿರಿತನದಲ್ಲಿ ನಡೆದ ಈ ವ್ಯೂಹರಚನೆಯ ವಿವರವನ್ನು ಅಭಿನಯದ ಮೂಲಕವೇ ಪಾತ್ರಧಾರಿಗಳು ವಿವರಿಸಿದರು.

ಅದೇ ರೀತಿ ಅಭಿಮನ್ಯು-ಧರ್ಮರಾಯನ ಸಂವಾದದಲ್ಲಿ ಅಭಿಮನ್ಯು ಪಾತ್ರಧಾರಿ (ಸುರೇಂದ್ರ ಗಾಣಿಗ) ಕೃಷ್ಣನನ್ನು ನೆನೆಯುವಾಗ ಕಾಳಿಂಗ ನರ್ತನವನ್ನು ಮಾಡಿ ತೋರಿಸಿದ್ದೂ ಕೂಡ ವಿಶೇಷ.

ಇಡೀ ಪ್ರಸಂಗದ ಪ್ರಮುಖ ಭಾಗವೆಂದರೆ ಸುಭದ್ರ ಹಾಗೂ ಅಭಿಮನ್ಯು ನಡುವಿನ ಮಾತುಕತೆಗಳು. ಸುಭದ್ರೆಯಾಗಿ ರಾಧಾಕೃಷ್ಣ ಉರಾಳರು ಮನೋಜ್ಞವಾದ ಅಭಿನಯವನ್ನು ನೀಡಿದರು. ತಮ್ಮ ನೃತ್ಯಗತಿಯಲ್ಲಿ, ಹಾವಭಾವದಲ್ಲಿ ಪದದ ಒಳಅರ್ಥಗಳನ್ನು ಹೊಮ್ಮಿಸುತ್ತಿದ್ದರು. ದೇವಿದಾಸ (16ನೇ ಶತಮಾನ) ಕವಿಯ ಈ ಪದ್ಯಭಾಗವು ಕೂಡ ಬಹು ಸೊಗಸಾಗಿದೆ. ಇಲ್ಲಿ ಕವಿ ಸುಭದ್ರೆಯ ಮಾತನ್ನು

"ಏತಕಿಂಥ ಬುದ್ಧಿ ಬಂತು । ಕಂದ ಕಂದ । ನಿನಗೆ
ಪ್ರೀತಿಯೇನೋ ಮರಣದೊಸಗೆ । ಕಂದ ಕಂದ ।"

ಎಂಬುದನ್ನು ವಿಲಂಬಿತ ಗತಿಯ ರಾಗ ಕಾಂಭೋಜ ಏಕತಾಳದಲ್ಲಿ ತಂದಿದ್ದಾನೆ. ಅಭಿಮನ್ಯುವಿನ ಮಾತನ್ನು

"ಬಿಡುಬಿಡುತಾಯೇ ಕೇಳ್ಧಡಿಗ ಕರ್ಣಾದ್ಯರ
ಬಡಿವೆನು ನಿಮಿಷದಲಿ"

– ದುಡುಕಿನ ರಾಗ ಕೇದಾರಗೌಳ, ಅಷ್ಟತಾಳದಲ್ಲಿ ತಂದಿದ್ದಾನೆ. ಇಲ್ಲಿ ಎರಡು ಭಾವನೆಗಳನ್ನು ಎರಡು ವಿಭಿನ್ನ ರಾಗಗಳಲ್ಲಿ ಮುಂದುವರೆಸಿಕೊಂಡು ಹೋಗುವ ವಿಶೇಷ ಇಲ್ಲಿದೆ. ಇಲ್ಲಿ ರಾಗಗಳ ಪುನರಾವರ್ತನೆಯೇ ರಸೋತ್ಕರ್ಷವನ್ನೂ ಉಂಟುಮಾಡುತ್ತದೆ. ಇದೇ ವಿಶಿಷ್ಟ ತಂತ್ರಗಾರಿಕೆಯಾಗಿದೆ. ಇಲ್ಲಿನ ಇಬ್ಬರು ಸಮರ್ಥ ಪಾತ್ರಧಾರಿಗಳು ಎರಡು ಬಗೆಯ ನೃತ್ಯಗತಿಯಲ್ಲಿ ಆಕರ್ಷಕವಾಗಿ ಈ ಭಾಗವನ್ನು ಮೂಡಿಸಿದರು.

ಮುಂದೆ ಚಕ್ರವ್ಯೂಹದಲ್ಲಿ ಅಭಿಮನ್ಯು ಹತನಾಗುವ ಚಿತ್ರಣವೂ ಇಷ್ಟೇ ಆಕರ್ಷಕವಾಗಿದೆ. ಆತ ಅವಸಾನದ ಅಂಚಿಗೆ ಹಂತ ಹಂತವಾಗಿ ಜಾರುವುದನ್ನು ನೃತ್ಯಗತಿ ಬಹು ಅಚ್ಚುಕಟ್ಟಾಗಿ ನಿರೂಪಿಸುತ್ತದೆ. ಸನ್ನಿವೇಶದ ಗಂಭೀರತೆಯನ್ನು ಎಲ್ಲ ಪಾತ್ರಧಾರಿಗಳು ಕುಣಿತದ ಮೂಲಕ, ಮುಖಾಭಿನಯದ ಮೂಲಕ ಅಭಿವ್ಯಕ್ತಿಸಿದ್ದಾರೆ. ಕಡೆಯಲ್ಲಂತೂ ಇದು ಪ್ರೇಕ್ಷಕರಲ್ಲಿ ವಿದ್ಯುತ್ ಸಂಚಾರವನ್ನು ಉಂಟುಮಾಡಿತು. ಒಟ್ಟು ಒಂದೂವರೆ ತಾಸು ಕಳೆದದ್ದೇ ತಿಳಿಯಲಿಲ್ಲ.

ಹೀಗೆ ಡಾ ಕಾರಂತರ 'ಯಕ್ಷಗಾನ ಬ್ಯಾಲೆ'ಯ ಮರುನಿರ್ಮಾಣದ ಕಾರ್ಯ ಜಾತಕಪಕ್ಷಿಗೆ ಮಳೆ ಬಂದಂತೆ ಕಾತರದ ಕಾರಂತರ ಅಭಿಮಾನಿಗಳಿಗೆ ತಂಪಿನ ಸಿಂಚನವನ್ನು ಎರಚಿದೆ. ಇದು ಶುಭ ಸೂಚನೆ. ಮುಂದೆ ಇದೇ ರಸವೃಷ್ಟಿಯಾಗಿ ಯಕ್ಷಾಂಗಣದ ಸಸ್ಯಶ್ಯಾಮಲೆಗೆ ಕಾರಣವಾಗಲಿ, ಚಿರಹಸಿರು ಎಲ್ಲೆಡೆ ಮೂಡುವಂತಾಗ

ಬೇಕು. ಈಗ ಕೇವಲ 'ಅಭಿಮನ್ಯುವಧೆ' ಹಾಗೂ 'ಪಂಚವಟಿ'ಯ ತರಬೇತಿ ನಡೆದಿದೆ. ಮುಂದೆ ಉಳಿದ ಕಥಾನಕಗಳು ವೇದಿಕೆಗೆ ಬರಬೇಕು. ಇಷ್ಟೇ ಅಲ್ಲ ಯಕ್ಷಗಾನ ಬ್ಯಾಲೆಯನ್ನು ಉಳಿದ ಸಮರ್ಥ ನಿರ್ದೇಶಕರು ಆರಿಸಿಕೊಂಡು ತಮ್ಮ ತಂಡಗಳ ಮೂಲಕ ಬೇರೆ ಬೇರೆ ಆಖ್ಯಾನಗಳನ್ನು ಅಭ್ಯಸಿಸಿ ತಮ್ಮ ಕಾಣ್ಕೆಯನ್ನು ಅದರಲ್ಲಿ ಸೇರಿಸಿ, ಇದೊಂದು ಅಳಿಯಲಾರದ ಯಕ್ಷಗಾನ ಕಲಾ ಪ್ರಕಾರವಾಗಿ ಉಳಿಯುವಂತೆ ಮಾಡಬೇಕಾಗಿದೆ. ಆಗ ಮಾತ್ರ ಕಾರಂತರ ಶ್ರಮ ಸಾರ್ಥಕವಾಗುತ್ತದೆ. ಅದೇ ಯಕ್ಷಗಾನ ಹವ್ಯಾಸಿಗಳೂ ಕಾರಂತರಿಗೆ ನೀಡಬಹುದಾದ ನಿಜವಾದ ಶ್ರದ್ಧಾಂಜಲಿಯಾಗುತ್ತದೆ. ಮಹಾನಗರದಲ್ಲಿ ಕನ್ನಡದ ಬಳಕೆ ಕಡಿಮೆಯಾಗುತ್ತಿದೆ. ಯಕ್ಷಗಾನದ ಸಂಭಾಷಣೆಯ ಸೌಂದರ್ಯದ ಅರಿವಿಲ್ಲದ ಅಸಂಖ್ಯರು ನಮ್ಮೊಡನಿದ್ದಾರೆ. ಅವರೆಲ್ಲರಿಗೆ ಈ 'ಬ್ಯಾಲೆ' ಖಂಡಿತ ಆಕರ್ಷಕವಾಗುತ್ತದೆ. ಈಗಿನ ತ್ರಿಮೂರ್ತಿಗಳಾದ ಮಾಲಿನಿ ಮಲ್ಯ, ಸುಧೀರ್‌ರಾವ್ ಕೊಡವೂರು ಹಾಗೂ ಶ್ರೀನಿವಾಸ ಸಾಸ್ತಾನ ಅವರು ಯಕ್ಷಗಾನದ ಯಶೋಗಾಥೆಯನ್ನು ಹಾಡಲು ಹೊರಟಿದ್ದಾರೆ. ಅವರ ಸಾಹಸಕ್ಕೆ, ಶ್ರಮಕ್ಕೆ, ಯಕ್ಷಗಾನದ ಮೇಲಿನ ಪ್ರೀತಿಗೆ ಶುಭ ಹಾರೈಸೋಣ.

■

ಕಾರಂತರ ಬ್ಯಾಲೆಗೆ ಸಾರ್ಥಕ ಮರುನಿರ್ಮಾಣ

ಗ್ರಾಮೀಣ ಭಾರತ ನಗರ ಭಾರತದೆಡೆಗೆ ಹೊರಳುತ್ತಿರುವ ಸಂಕ್ರಮಣದ ಕಾಲವಿದು. ನಗರಗಳ ದಾಪುಗಾಲಿನ ನಡಿಗೆಯ ಅಡಿಯಲ್ಲಿ ನಮ್ಮ ಹಳ್ಳಿಗಳು ನಲುಗುತ್ತಿವೆ. ಗ್ರಾಮೀಣರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳೆಲ್ಲ ಕುಸಿಯುತ್ತಿದ್ದು ನಗರಪರ ದನಿಯೇ ಮಾರ್ದನಿಗೊಳ್ಳುತ್ತಿದೆ. ಹಿಂದೆಲ್ಲಾ ಹಳ್ಳಿಗರ ರಾತ್ರಿಯನ್ನೆಲ್ಲ ಬೆಳಗು ಮಾಡಿ, ಅವರ ಬದುಕನ್ನು ಶ್ರೀಮಂತಗೊಳಿಸಿ, ಅವರ ಬೌದ್ಧಿಕ, ನೈತಿಕ, ಪಾರಮಾರ್ಥಿಕ ವಿಕಾಸಕ್ಕೆ ಕಾರಣವಾದ ಯಕ್ಷಗಾನ ಇಂದು ನಲುಗುತ್ತಿರುವ ಹಳ್ಳಿಗಳಿಂದ ಗುಳೆಹೊರಡುವ ಸ್ಥಿತಿ ನಿರ್ಮಾಣ ವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಬೆಂಗಳೂರಿನ ಕರ್ನಾಟಕ ಕಲಾದರ್ಶಿನಿಯಂತಹ ತಂಡಗಳೂ ವಹಿಸುತ್ತಿರುವ ಶ್ರಮ, ನಡೆಸುತ್ತಿರುವ ಕಾರ್ಯಗಳು ಆತಂಕಗೊಂಡ ಮನಸ್ಸಿಗೆ ಸಮಾಧಾನ ತರುವಂತಿವೆ. ಯಕ್ಷಗಾನದಂತಹ ಪಾರಂಪರಿಕ ಕಲೆ ಹೊಸ ವ್ಯವಸ್ಥೆಗೆ ತೆರೆದುಕೊಳ್ಳಬೇಕಾದ ದಾರಿಯನ್ನು, ಗಳಿಸಿಕೊಳ್ಳ ಬೇಕಾದ ರೂಪವನ್ನು ಸೂಚಿಸುವ ಕಾಯಕವನ್ನು ಇಂತಹ ತಂಡ ಗಳು ನೀಡುತ್ತಿವೆ. ಇದಕ್ಕಾಗಿಯೇ ಜನಮನ್ನಣೆಯನ್ನು ಗಳಿಸುತ್ತಿವೆ.

ಯಕ್ಷಗಾನದ ಬಗ್ಗೆ ಅಪಾರ ಅಭಿಮಾನ, ಪ್ರೀತಿ, ಆಸ್ಥೆ ಉಳ್ಳ ಶ್ರೀನಿವಾಸ ಸಾಸ್ತಾನ ಹಾಗೂ ಗೌರಿ ಸಾಸ್ತಾನ ಅವರ ಅವಿರತ ಶ್ರಮದ ಫಲವಾಗಿ ಉದಯಿಸಿದ ಸಂಸ್ಥೆಯೇ 'ಕರ್ನಾಟಕ ಕಲಾ ದರ್ಶಿನಿ'. ಮೂಲತಃ ಯಕ್ಷಗಾನ ಕಲಾವಿದರು, ಗುರುಗಳೂ ಹಾಗೂ

ಹವ್ಯಾಸಿ ತಂಡಗಳನ್ನು ಸಮರ್ಥವಾಗಿ ನಡೆಸಿಕೊಂಡು ಹೋಗಬಲ್ಲ ಸಾಮರ್ಥ್ಯವುಳ್ಳ ಸಾಸ್ತಾನ ದಂಪತಿಗಳ ಸಾಧನೆ ಯಕ್ಷಗಾನ ಕ್ಷೇತ್ರದಲ್ಲಿ ಅಸಾಮಾನ್ಯ ವಾದದ್ದು. ಇವರಿಬ್ಬರೂ ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯರಾಗಿದ್ದು ಯಕ್ಷಗಾನದ ಬೆಳವಣಿಗೆಗೆ ಸಕ್ರಿಯವಾಗಿ ದುಡಿದವರು. ಇವರು ಕಟ್ಟಿ ಬೆಳೆಸಿದ ಕಲಾದರ್ಶಿನಿ ತಂಡ ರಾಷ್ಟ್ರದಾದ್ಯಂತ ಯಕ್ಷಗಾನ ಪ್ರದರ್ಶನ ನೀಡಿರುವುದೇ ಅಲ್ಲದೆ ಹೊರ ದೇಶಗಳಾದ ಅಮೆರಿಕಾ, ಚೀನಾ, ದುಬೈ, ಕುವೈತ್, ಬೆಹರಿನ್, ಜರ್ಮನಿ ಸಿಂಗಾಪುರ, ನೇಪಾಳದಲ್ಲೂ ಪ್ರದರ್ಶನ ನಡೆಸಿ ಅಲ್ಲಿನವರ ಮೆಚ್ಚುಗೆ ಗಳಿಸಿದೆ. ಈಗಾಗಲೇ ಆಕಾಶವಾಣಿ, ದೂರದರ್ಶನ, ಇತರ ಟಿವಿ ಮಾಧ್ಯಮಗಳಲ್ಲೂ ಕೂಡ ನಿರಂತರ ಪ್ರದರ್ಶನ ನೀಡುತ್ತಿರುವ ಇಲ್ಲಿನ ಕಲಾವಿದರು ಆರ್‌ಬಿಐ, ಐಸಿಸಿಆರ್ ಮುಂತಾದ ಸ್ವಾಯತ್ತ ಸಂಸ್ಥೆಗಳ ಕಾರ್ಯಕ್ರಮಗಳಲ್ಲೂ ಭಾಗಿಗಳಾಗಿ ನಾಡಿನ ಉದ್ದಗಲದಲ್ಲೂ ಪರಿಚಿತರಾದವರು. ಭಾರತ ಗಣರಾಜ್ಯ ಉತ್ಸವದಲ್ಲಿ ಎರಡು ಬಾರಿ ರಾಜ್ಯವನ್ನು ಪ್ರತಿನಿಧಿಸಿರುವ ಈ ಕಲಾತಂಡದಲ್ಲಿ ಮಕ್ಕಳ ಮೇಳ, ಮಹಿಳೆಯರ ಮೇಳಗಳಿದ್ದು, ಯಕ್ಷಗಾನದ ಕಾಲಮಿತಿ ಪ್ರದರ್ಶನಗಳನ್ನು ಪ್ರದರ್ಶಿಸುತ್ತಿವೆ. ಸಾಸ್ತಾನ ದಂಪತಿಗಳು ವಿಶ್ವ ಕನ್ನಡ ಸಮ್ಮೇಳನ ಹಾಗೂ ಸುವರ್ಣ ಕರ್ನಾಟಕದ ಉತ್ಸವಗಳಲ್ಲಿ ಅಸಂಖ್ಯ ಜಾನಪದ ಕಲಾವಿದರನ್ನು ನೃತ್ಯ ಸಂಯೋಜನೆಗೆ ಒಳಪಡಿಸಿದ ಹಿರಿಮೆಯನ್ನು ಗಳಿಸಿದ್ದಾರೆ. ಯಕ್ಷಶಿಕ್ಷಣಕ್ಕಾಗಿ ತಮ್ಮದೇ ಆದ 'ಯಕ್ಷಗುರುಕುಲ' ಹೊಂದಿದ್ದು ಮಕ್ಕಳು, ಮಹಿಳೆಯರ ಹಾಗು ಹವ್ಯಾಸಿಗಳಿಗೆ ನಿರಂತರವಾಗಿ ಯಕ್ಷಗಾನ ತರಗತಿ ನಡೆಸಿಕೊಂಡು ಬರುತ್ತಿ ದ್ದಾರೆ. ಹೀಗೆ ವೈವಿಧ್ಯಮಯವಾದ ಕಾರ್ಯಗಳ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯ ಸೇರ್ಪಡೆಯಾದದ್ದು ಈಚೆಗೆ ಪ್ರದರ್ಶನಗೊಳ್ಳುತ್ತಿರುವದವರ "ಯಕ್ಷಗಾನ ಬ್ಯಾಲೆ".

ಯಕ್ಷಗಾನ ಬ್ಯಾಲೆ ಡಾ॥ ಶಿವರಾಮ ಕಾರಂತರ ಕನಸಿನ ಕೂಸು. ಅವರಿದ್ದಷ್ಟು ಕಾಲ ಅದು ದೇಶದಾದ್ಯಂತ ಪ್ರದರ್ಶನಗೊಂಡದ್ದೆ ಅಲ್ಲದೆ ದೇಶದ ಹೊರಗೆ ಟರ್ಕಿ, ರಷ್ಯಾ, ದಕ್ಷಿಣ ಅಮೇರಿಕಾ, ಬಲ್ಗೇರಿಯಾ, ಜಪಾನ್, ಇಂಗ್ಲೆಂಡ್ ಮುಂತಾದ ಕಡೆಯಲ್ಲೂ ಪ್ರದರ್ಶನಗಳ ಮೂಲಕ ಜಯಭೇರಿ ಬಾರಿಸಿದೆ. ಕನ್ನಡ ತಿಳಿಯದ ಹೃದಯಗಳಿಗೆ ಯಕ್ಷಗಾನದ ಸವಿ ಉಣಿಸುವ ಸಂಕಲ್ಪದಿಂದ ಜನ್ಮ ತಳೆದ ಈ ಯಕ್ಷಗಾನ ಪ್ರಕಾರದಲ್ಲಿ ಗದ್ಯದಲ್ಲಿ ಆಡುವ ಸಂಭಾಷಣೆ ಇರುವುದಿಲ್ಲ. ಕೊರಿಯೋಗ್ರಫಿ ಯಲ್ಲಿ ವಿಭಿನ್ನತೆಯನ್ನು ತಂದ ಕಾರಂತರು ಹಿಮ್ಮೇಳದಲ್ಲಿ ಭಾವಸ್ಪಂದನೆಗೆ ಅಗತ್ಯವಾಗುವ ಸುಧಾರಣೆಗಳನ್ನು ಮಾಡಿದರು. ಪಿಟೀಲು, ಸ್ಯಾಕ್ಸೋಫೋನ್‌ಗಳನ್ನು ಬಳಕೆಗೆ ತಂದರು. ವೇಷಭೂಷಣದಲ್ಲಿ ಸಾಂಪ್ರದಾಯಿಕತೆಗೆ ಮನ್ನಣೆ ತರುವುದರೊಂದಿಗೆ ಬೆಳಕಿನ ವಿನ್ಯಾಸಕ್ಕೆ ಒದಗುವ ಸುಧಾರಣೆಗಳನ್ನು ತಂದರು. ಯಕ್ಷಗಾನದ ಸ್ತ್ರೀವೇಷಕ್ಕೆ ಶ್ರೀಮಂತಿಕೆಯ ನೋಟ ಬರುವಂತೆ ಮಾಡಿದರು. ಈ ಬಗೆಯ ಬದಲಾವಣೆಯಿಂದ ರಂಗದಲ್ಲಿ ಪ್ರಚುರಗೊಂಡ ಯಕ್ಷಗಾನ ಬ್ಯಾಲೆ ಡಾ॥ ಕಾರಂತರ ಮರಣಾನಂತರ ಸ್ತಬ್ಧವಾಗಿತ್ತು.

ಇದೀಗ ಬೆಂಗಳೂರಿನ ಕರ್ನಾಟಕ ಕಲಾದರ್ಶಿನಿ ಡಾ॥ ಕಾರಂತರ ಯಕ್ಷಗಾನ ಬ್ಯಾಲೆಯ ಮರುನಿರ್ಮಾಣದ ಸಾಹಸಕ್ಕೆ ಧುಮುಕಿ ಯಶಸ್ವಿಯಾಗಿದೆ.

ಸಾಲಿಗ್ರಾಮದ ಡಾ॥ ಕೆ. ಶಿವರಾಮ ಕಾರಂತ ಸಂಶೋಧನೆ ಮತ್ತು ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಮಾಲಿನಿ ಮಲ್ಯರ ಸಂಚಾಲಕತ್ವದಲ್ಲಿ, ವಿದ್ವಾನ್ ಸುಧೀರ್ ಕೊಡವೂರು ಅವರ ನಿರ್ದೇಶನದಲ್ಲಿ ಹಾಗೂ ಶ್ರೀನಿವಾಸ ಸಾಸ್ತಾನ ಅವರ ಸಂಯೋಜನೆಯಲ್ಲಿ ಇದೀಗ ಡಾ॥ ಕಾರಂತರ "ಯಕ್ಷಗಾನ ಬ್ಯಾಲೆ" ಮರು ಹುಟ್ಟು ಪಡೆದಿದೆ. ವಿದ್ವಾನ್ ಸುಧೀರ್ ಅವರು ಕಾರಂತರ ಗರಡಿಯಲ್ಲಿ ಪಳಗಿರು ವವರು. ಅವರೇ 'ಕರ್ನಾಟಕ ಕಲಾದರ್ಶಿನಿ' ತಂಡದ ಕಲಾವಿದರಿಗೆ ತರಬೇತಿಯನ್ನು ನೀಡಿದ್ದಾರೆ. ಸ್ವತಃ ಭಾಗವತಿಕೆಯನ್ನು ಅವರೇ ನಿರ್ವಹಿಸುತ್ತಿದ್ದಾರೆ. ಈಗಾಗಲೇ 'ಅಭಿಮನ್ಯು ವಧೆ' ಪ್ರಸಂಗವನ್ನು ಯಶಸ್ವಿಯಾಗಿ ಪ್ರದರ್ಶಿಸಲಾಗಿದೆ. ಈಗ 'ಪಂಚವಟಿ' ಬ್ಯಾಲೆ ಮೊದಲ ಬಾರಿಗೆ ಆರ್.ಟಿ.ನಗರದ ತರಳಬಾಳು ಕೇಂದ್ರದಲ್ಲಿ ಇದೇ ಜನವರಿ 18ರಂದು ಪ್ರಯೋಗಗೊಂಡಿದೆ. ಶಿವರಾಮ ಕಾರಂತರ ಕನಸನ್ನು ಉಳಿಸುವ ನಿಟ್ಟಿನಲ್ಲಿ ಈ ತ್ರಿಮೂರ್ತಿಗಳ ಪ್ರಯತ್ನ ಸಾರ್ಥಕವಾಗಿದೆ.

ನಾನೂರು ವರ್ಷಗಳ ಕೆಳಗೆ ಪಾರ್ತಿಸುಬ್ಬ (1590–1620)ನಿಂದ ರಚಿತವಾದ 'ಪಂಚವಟಿ'ಯು ಸಾಹಿತ್ಯ ದೃಷ್ಟಿಯಿಂದ ಉತ್ಕೃಷ್ಟವಾಗಿದೆ. ಶಿವರಾಮ ಕಾರಂತರೇ ತಮ್ಮ 'ಯಕ್ಷಗಾನ ಬಯಲಾಟ'ದಲ್ಲಿ ಇಲ್ಲಿನ ಸುಲಲಿತವಾದ ತರಂಗಿತ ಪದ್ಯರಚನೆ ಹಾಡುವುದಕ್ಕೆ ಹೇಗೋ ಹಾಗೆ ಕುಣಿಯುವುದಕ್ಕೆ ಬೇಕಾದ ಅರ್ಥಪೂರ್ಣ ತರಂಗಿತತೆಯನ್ನು ಸೃಷ್ಟಿಸುತ್ತದೆ ಎಂದು ಹೇಳಿದ್ದಾರೆ. ಈ ಕಾರಣದಿಂದಲೇ ಕಾರಂತರು ಈ ಪ್ರಸಂಗವನ್ನು ಆಯ್ದುಕೊಂಡು ತಮ್ಮ ಯಕ್ಷರಂಗದ ಮೂಲಕ ಪ್ರಸ್ತುತಪಡಿಸಿದ್ದರು. ಇದೀಗ ಅವರ ಪ್ರದರ್ಶನಕ್ಕೆ ಸರಿಸಾಟಿಯೆಂಬಂತೆ 'ಕರ್ನಾಟಕ ಕಲಾದರ್ಶಿನಿ'ಯವರು ಪ್ರಸ್ತುತಪಡಿಸಿದ್ದು ಹೆಚ್ಚುಗಾರಿಕೆಯಾಗಿದೆ.

ಹಿಮ್ಮೇಳದಲ್ಲಿ ಡಾ॥ ಕಾರಂತರ ಸೂಕ್ಷ್ಮ ಕಲಾಪ್ರಜ್ಞೆ ಅರಿವಿರುವ ವಿದ್ವಾನ್ ಸುಧೀರ್ ಕೊಡವೂರು ಅವರೇ ಭಾವಪೂರ್ಣ ಭಾಗವತಿಕೆಯ ಮೂಲಕ ಪ್ರೇಕ್ಷಕರನ್ನು ಎರಡು ತಾಸುಗಳ ಕಾಲ ಸೆರೆಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾದರು. ಇದಕ್ಕೆ ಪೂರಕವಾಗಿ ಇವತ್ತಿನ ಮೃದಂಗವಾದಕರಲ್ಲಿ ಅತ್ಯಂತ ಪ್ರಜ್ಞಾವಂತರೆಂದು ಗುರುತಿಸಿ ಕೊಂಡಿರುವ ವಿದ್ವಾನ್ ಅನಂತಪದ್ಮನಾಭ ಪಾಠಕರಿದ್ದು, ಪಾತ್ರಗಳನ್ನು ಮದ್ದಲೆಯ ಬಿಡ್ತಿಗೆ ಸರಿಯಾಗಿ ಕುಣಿಸುವಲ್ಲಿ ಸಹಕರಿಸುತ್ತಿದ್ದರು. ಮೃದಂಗ ಹಾಗೂ ಚಂಡೆ (ಬಸವ ಮರಕಾಲ ಮತ್ತು ಶ್ರೀರಾಮ ಬಾಯರಿ)ಯ ಪೆಟ್ಟಿಗೆ ಸಾಂಗತ್ಯವಾಗುವಂತೆ ಪಾತ್ರಧಾರಿಗಳ ಹೆಚ್ಚುಗಾರಿಕೆ ಇತ್ತು. ವೀರರಸ ಪ್ರಚುರಕ್ಕೆ ಪೂರಕವಾಗಿ ಹರಿದಾಸ ಡೋಗ್ರಾ ಅವರ ಸ್ಯಾಕ್ಸೋಫೋನ್ ವಾದನ, ವಿಲಂಬಿತ ಗತಿಯ ಪದ್ಯಕ್ಕೆ ಮೈಸೂರು ರವಿಕುಮಾರ್ ಅವರ ವಯಲಿನ್ ಪೂರಕವಾಗಿ ಬಂದಿತ್ತು.

ಮುಮ್ಮೇಳದಲ್ಲಿ ಸ್ವತಃ ಶ್ರೀನಿವಾಸ ಸಾಸ್ತಾನ ಅವರೇ ರಾಮನ ಪಾತ್ರವನ್ನು ವಹಿಸಿದ್ದರು. ಗಾಂಭೀರ್ಯಪೂರ್ಣ ನಡೆ, ರಾಮನ ಪಾತ್ರಕ್ಕೆ ಒಪ್ಪುವ ವೇಷಗಾರಿಕೆ, ದುಃಖದ ಸಂದರ್ಭದಲ್ಲಿ ತೋರಿಸಿದ ಅಭಿನಯ ಎಲ್ಲವೂ ಮನೋಜ್ಞವಾಗಿತ್ತು. ತಮ್ಮ ಚುರುಕು ನಡೆಯಿಂದ, ಮನಮುಟ್ಟುವ ಅಭಿನಯದಿಂದ ಲಕ್ಷ್ಮಣ ಪಾತ್ರಧಾರಿಯಾದ ಕುಮಾರಿ ಮಾನಸಿ ಪ್ರೇಕ್ಷಕರ ಮನಗೆದ್ದರು. ಬಣ್ಣದ ವೇಷವಾಗಿ ರಂಗಪ್ರವೇಶಿಸಿದ ಶೂರ್ಪನಖಿ(ಶ್ರೀಧರ ಕಾಂಚನ)ಯ ಕುಣಿತ, ಅಭಿನಯ ಮುಂದೆ ಆಕೆ ರಾಮನನ್ನು ನೋಡಿ ಮೋಹಗೊಳ್ಳುವ ಬಗೆ, ನಾಸಾ ಚೇದನವಾದಾಗ ಗೋಳಾಡುವ ಪರಿ, ರಾವಣನಲ್ಲಿ ದ್ವೇಷ ಬಿತ್ತುವ ರೀತಿಯೆಲ್ಲವನ್ನು ಸಮರ್ಪಕವಾಗಿ ಸಂವಹನ ಮಾಡಿದರು. ಎಲ್ಲಕ್ಕೆ ಕಳಶವಿಟ್ಟಂತೆ ಪ್ರದರ್ಶನದಲ್ಲಿ ಮೂಡಿಬಂದದ್ದು ಖ್ಯಾತ ಸ್ತ್ರೀ ವೇಷಧಾರಿ, ರಾಧಾಕೃಷ್ಣ ಉರಾಳರ ಮಾಯಾ ಶೂರ್ಪನಖಿಯ ಭಾಗ. 'ರಾಘವ ನರಪತೇ ಕೇಳೆನ್ನ ಮಾತ' ಎಂಬ ಸುಧೀರ್‌ರ ಹಾಡುಗಾರಿಕೆಗೆ ಅವರು ನೀಡಿದ ಅಭಿನಯ, ಮಾಡಿದ ಹಾವಭಾವ ಆಕರ್ಷಕವಾಗಿತ್ತು. ಮುಂದೆ ಪ್ರಣಯಭಿಕ್ಷೆ ಬೇಡುವ ಶೂರ್ಪನಖಿಯನ್ನು ರಾಮ ನಡೆಸಿಕೊಂಡ ಪರಿ ಅದೇ ಹೇತುವಾಗಿ ಮುಂದಿನ ದುರಂತಗಳಿಗೆ ಮುನ್ನುಡಿಯಾಗುತ್ತದೆ. ಇಲ್ಲೆಲ್ಲಾ ಉರಾಳರು ತಮ್ಮ ನರ್ತನದ ಮೂಲಕ ಮಾತು ಸಾಧಿಸಲಾರದ್ದನ್ನು ಸಾಧಿಸಿ ತೋರಿಸಿದರು. ಕಪ್ಪುದೊಗಲೆಯಲ್ಲಿ ಕಾಣಿಸಿಕೊಂಡ ರಾವಣ (ವಿಠಲ ಆಚಾರ್) 'ಅಂಥಾ ಚೆಲುವೆಯೇನೆ ಜಾನಕಿದೇವಿ' ಎಂಬ ಪದ್ಯಕ್ಕೆ ಪ್ರಶ್ನಾರ್ಥಕವಾಗಿ ನರ್ತಿಸುತ್ತಾ ಸೀತೆ ತರುವ ಸಂಕಲ್ಪ ಮಾಡುತ್ತಾನೆ. ಮಾರೀಚ (ರಾಜು ಪೂಜಾರಿ) ಜಿಂಕೆಯಾಗಿ ಮಾರ್ಪಟ್ಟು 'ಪಂಚವಟಿ'ಯಲ್ಲಿ ಕಾಣಿಸಿಕೊಳ್ಳುತ್ತಾನೆ. ಜಿಂಕೆಯು ಸುಳಿದಾಡುವ ನರ್ತನವನ್ನು ಶಿವಕುಮಾರ ಶಿರಳಗಿ ನಡೆಸಿದಾಗ ಸೀತೇ (ಶೃತಿ ಸೋಮಯಾಜಿ) ಜಿಂಕೆಯ ಸೆಳೆತಕ್ಕೆ ಒಳಗಾಗುವ ಬಗೆಯನ್ನು, ರಾಮನ ಮಾತನ್ನು ವಿರೋಧಿಸಿ ಹಠಗೊಳ್ಳುತ್ತಾಳೆ. ಜಿಂಕೆ ತರಲು ಹೇಳಿದ ರಾಮ, ಅವನನ್ನು ಹುಡುಕಿಕೊಂಡು ಹೊರಟ ಲಕ್ಷ್ಮಣ, ಸನ್ಯಾಸಿಯಾಗಿ (ಗೌತಮ ಸಾಸ್ತಾನ) ಕಾಣಿಸಿಕೊಂಡ ರಾವಣ, ಲಕ್ಷ್ಮಣರೇಖೆ ದಾಟಲು ಅಂಜುವ ಸೀತೆ ಇವೆಲ್ಲ ಭಾಗ ನಾಟಕೀಯವಾಗಿ ಬಂದು ಚುರುಕಾಗಿ ಸಾಗಿದೆ. ರಮೇಶ ಆಡುಕಟ್ಟೆಯವರ ಜಟಾಯುವಿನ ವೇಷವಂತು ಬಹಳ ಸೊಗಸಾಗಿತ್ತು. ಜಟಾಯು ರಾವಣರ ಯುದ್ಧ ನಡೆದು ರೆಕ್ಕೆ ಕಳಚಿ ಬೀಳುವ ಭಾಗ ಹೃದಯ ಕನಕುವಂತಿತ್ತು. ಮುಂದೆ ಜಟಾಯು ಮೋಕ್ಷದೊಂದಿಗೆ ಪ್ರಸಂಗ ಕೊನೆಗೊಳ್ಳುತ್ತದೆ. ವಿಶೇಷ ಭಾಗವತರಾಗಿ ಸುಬ್ರಾಯ ಹೆಬ್ಬಾರರಿದ್ದು ಇಡೀ ರಂಗದ ನಡೆಯಲ್ಲಿ ಎಲ್ಲೂ ಸಪ್ಪೆ ಎನಿಸಲಿಲ್ಲ. ಅಚ್ಚುಕಟ್ಟಾದ ನಿರೂಪಣೆ, ಭಾವಪೂರ್ಣವಾದ ಅಭಿನಯ ಕುಣಿತಗಳೇ ಇಡೀ ಪ್ರಸಂಗದ ಜೀವಾಳವಾಗಿತ್ತು.

ಹೀಗೆ ಮೊದಲ ಬಾರಿಗೆ ಪ್ರಸ್ತುತಿಗೊಂಡ 'ಪಂಚವಟಿ' ಶಿವರಾಮ ಕಾರಂತ ವೇದಿಕೆಯ ವಾರ್ಷಿಕೋತ್ಸವದಲ್ಲಿ ನಡೆದದ್ದು ಕೂಡ ಒಂದು ಯೋಗಾಯೋಗ.

ಕಾರಂತರಿಗೆ ಸಂದ ನಿಜವಾದ ಶ್ರದ್ಧಾಂಜಲಿ. ಕರ್ನಾಟಕ ಕಲಾದರ್ಶಿನಿ ತಂಡ ಮುಂದಿನ ತಿಂಗಳು ಹಾಸನ, ಮಂಗಳೂರು, ಮೈಸೂರು, ಕುಂದಾಪುರ, ಉಡುಪಿಗಳಲ್ಲಿ 'ಅಭಿಮನ್ಯು ವಧೆ' ಹಾಗೂ 'ಪಂಚವಟಿ' ಪ್ರಸಂಗಗಳನ್ನು ಕಾರಂತೋತ್ಸವದ ಅಂಗವಾಗಿ ಪ್ರದರ್ಶಿಸಲಿದ್ದಾರೆ. ಈ ಎರಡು ಬ್ಯಾಲೆಗಳು ಇನ್ನಷ್ಟು ಪ್ರದರ್ಶನಗೊಂಡು ನಾಡಿನ ಹೊರಗೆ, ಕನ್ನಡಿಗರಲ್ಲದವರ ಮುಂದೆ ನಡೆದಾಗ ಮಾತ್ರ 'ಬ್ಯಾಲೆ' ಎಂಬ ಪ್ರಕಾರದ ಆವಿಷ್ಕಾರಕ್ಕೆ ನಿಜವಾದ ಧನ್ಯತೆ ದೊರೆಯುತ್ತದೆ. ಹಾಗೆ ಆಗಲೆಂಬುದೇ ಯಕ್ಷಗಾನ ಆಸಕ್ತರ ಅಭಿಲಾಷೆ.

■

ಯಕ್ಷಗಾನ ಸಾಹಿತ್ಯ ಆವಿಷ್ಕಾರ ಚಿಂತನೆ

ಯಕ್ಷಗಾನ ಒಂದು ಸಮಷ್ಟಿಕಲೆ. ಸಾಹಿತ್ಯ, ಸಂಗೀತ, ನರ್ತನ, ಅಭಿನಯ, ಬಣ್ಣಗಾರಿಕೆಗಳೆಂಬ ವಿಭಿನ್ನ ಕಲಾಪ್ರಕಾರಗಳು ಇಲ್ಲಿ ಮೇಳೈಸಿ ಒಂದು ಶ್ರೀಮಂತ, ಸೌಂದರ್ಯಪೂರ್ಣ ಕಲಾಪ್ರಕಾರ ರೂಪುಗೊಂಡಿದೆ. ಇವೆಲ್ಲವೂ ಒಂದು ಹದದಲ್ಲಿ ಮೇಳೈಸಿದೆ. ಈ ಹದ ಆರಕ್ಕೆ ಹೆಚ್ಚದೆ ಮೂರಕ್ಕೆ ಇಳಿಯದೇ ಸಾಗಿರುವುದರಲ್ಲಿ ಯಕ್ಷಗಾನದ ಹೆಚ್ಚುಗಾರಿಕೆಯಿದೆ. ಕೆಲವೊಮ್ಮೆ ಕಲಾವಿದರನ್ನು ಅವಲಂಬಿಸಿ ಒಂದೆರಡು ಅಂಗ ಅತಿಯಾಗಿ ಒಂದೆರಡು ಅಂಗ ಸೊರಗಿ ವಿಕೃತಿ ನಿರ್ಮಾಣವಾದದ್ದು ಇದೆ. ವ್ಯಾಪಾರೀಕರಣದಿಂದಾಗಿ ಉಂಟಾದ ಏರುಪೇರುಗಳಂತೂ ಬೆಳೆಗಿಂತ ಕಳೆಯೇ ಜಾಸ್ತಿಯಾದ ಪರಿಯನ್ನು ನಿರ್ಮಿಸಿದ್ದು ಇದೆ. ಹೀಗೆ ಆಗುವ ನೂತನ ಆವಿಷ್ಕಾರಗಳು ಅಗತ್ಯವೇ ಅನಗತ್ಯವೇ? ಯೋಗ್ಯವೇ ಅಯೋಗ್ಯವೇ? ಎಂಬ ಚಿಂತನೆಗಳು ಬಹುಕಾಲದಿಂದ ನಡೆಯುತ್ತಿದೆ. ಹೀಗೆಲ್ಲಾ ಇದ್ದು ಯಕ್ಷಗಾನ ತನ್ನ ಎಲ್ಲಾ ಭವ್ಯ ಶ್ರೀಮಂತಿಕೆಯೊಂದಿಗೆ ಆಸಕ್ತರ ಜನಮಾನಸದಲ್ಲಿ ಭದ್ರವಾಗಿ ನೆಲೆಯೂರಿದೆ. ಪ್ರಸಂಗಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಾಲದಿಂದ ಕಾಲಕ್ಕೆ ಯಾವ ಬಗೆಯ ನೂತನ ಆವಿಷ್ಕಾರಗಳಾಗಿವೆ? ಅವು ಎಷ್ಟರಮಟ್ಟಿಗೆ ಪರಂಪರಾಗತ ರಂಗ ಸಂಪ್ರದಾಯಕ್ಕೆ ಪೂರಕವಾಗಿವೆ? ಎಂಬುದು ಅಧ್ಯಯನ ಯೋಗ್ಯ. ಇಂತಹ ಅಧ್ಯಯನದಿಂದ ಪ್ರಸಂಗ ಸಾಹಿತ್ಯದ ಆಶಯ ಹಾಗೂ ಉದ್ದೇಶಗಳ ಪರಿವೀಕ್ಷಣೆಯ ನೋಟ ಲಭಿಸುತ್ತದೆ.

ಪ್ರಸಂಗ ಎಂದರೆ ಮೂಲಕಥೆಯಿಂದ ಆಯ್ದುಕೊಂಡ ಒಂದು ಸನ್ನಿವೇಶ, ಒಂದು ಕಥಾಭಾಗ ಅಥವಾ ಹರಿಕತೆಯ ಮಧ್ಯೆ

ಹಾಡಿನೊಂದಿಗೆ ಹೇಳುವ ಉಪಕಥೆ ಎಂಬೆಲ್ಲಾ ಅರ್ಥಗಳಿವೆ. ಬಯಲಾಟದಲ್ಲಿ ಉಪಯೋಗವಾಗುವ ಒಂದು ಕಥಾಭಾಗವನ್ನು ಹಾಡುಗಳ ಮೂಲಕ ಸೃಷ್ಟಿಸಿ ಹಾಡುಗಬ್ಬವಾಗಿ ಪ್ರಸಂಗ ಪ್ರಚಾರಕ್ಕೆ ಬಂತು. ಈ ಬಗೆಯ ಉದ್ದೇಶದಿಂದಲೇ ಕವಿಗಳು ನಿರ್ಮಿಸಿದ ಸಾಹಿತ್ಯ ಪ್ರತ್ಯೇಕ ವಲಯವಾಗಿ ಪ್ರಸಂಗಸಾಹಿತ್ಯವೆಂಬ ಪ್ರತ್ಯೇಕ ಪ್ರಕಾರವೇ ಆಯಿತು. ಕನ್ನಡದಲ್ಲಿ ಸಾವಿರಕ್ಕೂ ಹೆಚ್ಚು ಪ್ರಸಂಗಗಳಿವೆ. ಕಳೆದ ಐದು ದಶಕಗಳಿಂದ ಈ ಬಗೆಯ ಕಿರುರಚನೆಯ ಬಾಹುಳ್ಯವನ್ನು ಕಾಣಬಹುದು. ಇಂತಹ ರಚನೆಗಳ ಮೂಲ ಉದ್ದೇಶ ರಂಗದಲ್ಲಿ ಪ್ರದರ್ಶನಕ್ಕೆ ಅನುಕೂಲವಾಗಲಿಕ್ಕೆ ಇರುವುದೇ ಹೊರತು ಪ್ರೌಢಕಾವ್ಯದಂತೆ ಧ್ವನಿಪೂರ್ಣವೋ, ರಸಪೂರ್ಣವೋ ಆಗಿರಲೇಬೇಕೆಂದಿಲ್ಲ. ಭಾವೋತ್ಕರ್ಷಕ್ಕೆ ಒದಗುವಂತಹ ಹಾಡುಗಳನ್ನು ಪ್ರಸಂಗಕಾರರು ರಚಿಸಿರುತ್ತಾರೆ. ಭಾಗವತರು ಅದನ್ನು ಭಾವಪೂರಿತವಾಗಿ ಹಾಡುತ್ತಾರೆ. ವೇಷಧಾರಿ ತನ್ನ ಹೆಜ್ಜೆ ಗಾರಿಕೆಯ ಮೂಲಕ ಮತ್ತು ಅಭಿನಯದ ಮೂಲಕ ಆ ಭಾವವನ್ನು ಸ್ಫುರಿಸುವಂತೆ ಕುಣಿಯುತ್ತಾನೆ, ಮುಂದೆ ಮಾತಿನಲ್ಲಿ ಆ ಭಾವಕೋಶವನ್ನು ಕಟ್ಟಿಕೊಡುತ್ತಾನೆ. ಇದು ಮೂಲ ಚೌಕಟ್ಟು. ಪ್ರಸಂಗಕಾರ ಕಥೆಯ ಆಶಯಕ್ಕೆ ಹೊಂದಿಕೊಂಡಂತೆ ಅಸಂಖ್ಯ ಹಾಡುಗಳನ್ನು ಬರೆದಿದ್ದರೂ ಭಾಗವತ ಪ್ರದರ್ಶನಕ್ಕೆ ಹಾಗೂ ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಈ ರಂಗ ಪರಂಪರೆಯಲ್ಲಿದೆ. ಅದೇರೀತಿ ಕೆಲವೊಮ್ಮೆ ಪ್ರದರ್ಶನ ಕಳೆಗಟ್ಟಲು ಬೇರೆ ಪ್ರಸಂಗದ, ಬೇರೆ ಕಾವ್ಯದ ಹಾಡುಗಳನ್ನು ಆಮದು ಮಾಡಿಕೊಳ್ಳುವ ಬಗೆಯು ಉಂಟು. ಈ ಸ್ವಾತಂತ್ರ್ಯವೇ ಜಿಜ್ಞಾಸೆಗೆ ಕಾರಣವಾಗುತ್ತಿದೆ. ಸ್ವಾತಂತ್ರ್ಯದ ದುರುಪಯೋಗವೇ ಇವತ್ತಿನ ಯಕ್ಷಗಾನದ ದುರವಸ್ಥೆಗೆ ಕಾರಣವಾಗುತ್ತಿದೆ. ಆಯ್ಕೆಯ ಸಂದರ್ಭದಲ್ಲಿ ಉತ್ತಮ ಹಾಡುಗಳನ್ನು ಕೈಬಿಡುವುದು, ಮೂಲ ಕವಿಯ ಆಶಯಕ್ಕೆ ವಿರುದ್ಧವಾಗಿರುತ್ತದೆ. ಅದೇರೀತಿ ಅನವಶ್ಯಕವಾದ ಜನಪ್ರಿಯ ಹಾಡುಗಳನ್ನು ಪ್ರದರ್ಶನದಲ್ಲಿ ತುರುಕುವುದು ಒಮ್ಮೊಮ್ಮೆ ಅತಿಯಾಗುತ್ತದೆ. ಜಲಕೇಳಿಯ ಪದ್ಯಗಳು, ಸಖಿಯರೊಂದಿಗಿನ ಸರಸ ಸಲ್ಲಾಪದ ಪದ್ಯಗಳು ಹೂವಕೀಳುವ, ಪದ್ಯಗಳು, ನಿಸರ್ಗವನ್ನು ಸವಿದು ಹಾಡಿಹೊಗಳುವ ಪದ್ಯಗಳು, ಪ್ರಣಯಪೂರಿತ ಪದ್ಯಗಳು ಕೆಲವೊಮ್ಮೆ ಅಗತ್ಯವಿಲ್ಲದೆಯೂ ಪ್ರದರ್ಶನದಲ್ಲಿ ಬರುತ್ತಿರುತ್ತವೆ.

ಇಲ್ಲೆಲ್ಲಾ ಪಾತ್ರಧಾರಿಗೆ ಹಾಗೂ ಭಾಗವತನಿಗೆ ಪ್ರೇಕ್ಷಕರ ಕರತಾಡನ ಹಾಗೂ ಶಿಳ್ಳೆಯೇ ಮುಖ್ಯ ಹೊರತು, ಪ್ರದರ್ಶನದ ಒಟ್ಟು ಶಿಲ್ಪದ ದೃಷ್ಟಿಯಿಂದ ಬಂದುದುದಲ್ಲ. ಹೀಗಾಗಿ ಇಡೀ ಪ್ರದರ್ಶನಕ್ಕೆ ಇದು ಅಸಂಗತವಾಗುತ್ತದೆ. ಒಟ್ಟು ಪ್ರಸಂಗವನ್ನು ನೋಡಿದಾಗ ಪ್ರದರ್ಶನ ಸೋಲುತ್ತದೆ. ಇಂತಹ ಆವಿಷ್ಕಾರಗಳು ಯಕ್ಷಗಾನಕ್ಕೆ ಮಾರಕ.

ಯಕ್ಷಗಾನ ಪ್ರಸಂಗಗಳಲ್ಲಿ ಒಂದು ಬಗೆಯ ಸಮತೋಲನ ವ್ಯವಸ್ಥೆ ಇರುತ್ತದೆ. ಆದರೆ ಇಂದು ಹಿರಿಯ ಪಾತ್ರಧಾರಿಗಳು ತಮ್ಮ ಅತಿಯಾದ ಪ್ರತಿಭೆಯನ್ನು ಪ್ರದರ್ಶಿಸಲು

ಹೋಗಿ ಈ ಸಮತೋಲನವನ್ನು ಹಾಳುಗೆಡವುತ್ತಾರೆ. ಅದೇ ರೀತಿ ಒಮ್ಮೊಮ್ಮೆ ಒಂದು ಪದ್ಯಕ್ಕೆ ತಾಸುಗಟ್ಟಲೆ ಮಾತಾಡಿ, ಕವಿಯ ಆಶಯಕ್ಕೆ ಭಂಗ ತರುವುದು ಉಂಟು. ಭಾಗವತರಾದವರು ಕೂಡ ಕೆಲವೊಮ್ಮೆ ತಮ್ಮ ಹಾಡುಗಾರಿಕೆಯ ಪ್ರಾವೀಣ್ಯ ವನ್ನು ಮೆರೆಯಲು ಸಾಲುಗಳನ್ನು ಕೆಲವೊಮ್ಮೆ ಪದವೊಂದನ್ನೇ ಬಾರಿ ಬಾರಿಗೆ ಹಾಡಿ ಶಿಳ್ಳೆಗಿಟ್ಟಿಸಿಕೊಳ್ಳುತ್ತಾರೆ. ಆದರೆ ನಿಜವಾದ ಅರ್ಥದಲ್ಲಿ ಪ್ರದರ್ಶನವನ್ನು ಸೋಲಿಸುತ್ತಾರೆ. ಈ ಮಟ್ಟಿನ ಹೊಸತನಗಳನ್ನು ತಮ್ಮದೇ ಸೃಷ್ಟಿಯೆಂದು ತೋರಿಸಿ ಕೊಳ್ಳುವ ಹಿರಿಯ ಕಲಾವಿದರು, ಕಿರಿಯರಿಗೆ ಮಾದರಿಯಾಗಿ ಪರಂಪರೆಗೆ ವಿರುದ್ಧ ವಾಗಿ ನಡೆದುಕೊಳ್ಳುತ್ತಾರೆ. ಯಕ್ಷಗಾನದ ರಚನಾ ವಿಧಾನವು ಸಾಂಪ್ರದಾಯಿಕವಾಗಿರು ವುದರಿಂದ ಪರಿವರ್ತನೆಯ ಅಂಶ ಬಹುಕಡಿಮೆ ಇರುತ್ತದೆ. ಹೊಸತು ಬೆಳಕಾಗಿ ಬರಬೇಕು ಹೊರತು, ಅದೇ ಮಾದರಿಯಾಗಿ, ಮೂಲವನ್ನು ಅಳಿಸಿಹಾಕಬಾರದು. ಈ ದೃಷ್ಟಿಯಿಂದ ಕಲಾವಿದರು, ಕಲಾವಿಮರ್ಶಕರು, ವ್ಯವಸಾಯಿ ಮೇಳದ ಯಜಮಾನರುಗಳು ಹಾಗೂ ಕಲೆಯನ್ನು ಗಾಢವಾಗಿ ಪ್ರೀತಿಸುವ ಹಾಗೂ ಸಮರ್ಥ ವಾಗಿ ವಿವರಿಸಬಲ್ಲ ಶಕ್ತಿಯುಳ್ಳ ಪ್ರೇಕ್ಷಕರು, ಎಚ್ಚೆತ್ತುಕೊಳ್ಳಬೇಕಾದ, ಚಿಂತನೆ ಮಾಡ ಬೇಕಾದ ಕಾಲ ಬಂದಿದೆ.

ಕಾಲಕ್ಕೆ ತಕ್ಕಂತೆ ಎಲ್ಲವೂ ಬದಲಾಗುತ್ತದೆ. ಯಕ್ಷಗಾನವು ಬದಲಾಗಬೇಕು ಎಂಬ ಕೂಗು ಕೆಲವೆಡೆ ಇದೆ. ಪ್ರಸಂಗಗಳ ದೃಷ್ಟಿಯಿಂದ ಕೂಡ ಕೆಲವೊಂದು ಆವಿಷ್ಕಾರಗಳು ಆಗಬೇಕಾಗುತ್ತದೆ. 5 ಶತಕಗಳ ಇತಿಹಾಸವಿರುವ ಪ್ರಸಂಗ ಸಾಹಿತ್ಯವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅವುಗಳು ಕಾಲಕ್ಕೆ ತಕ್ಕಂತೆ ಕೆಲವೊಮ್ಮೆ ಹೊಸ ಹೊಸ ಆವಿಷ್ಕಾರಗಳನ್ನು ಸೇರ್ಪಡಿಸಿಕೊಂಡಿರುವುದು ಗೋಚರವಾಗುತ್ತದೆ. ಪ್ರಾರಂಭದ ಕಾಲದ ಪ್ರಸಂಗಗಳು ಹೆಚ್ಚಾಗಿ ಮೂಲ ಕಥಾವಸ್ತುವಿನಷ್ಟೆ ನಿಬದ್ಧವಾಗಿದ್ದವು. ಮುಂದೆ ಮುಂದೆ ಕಾಳಗಕ್ಕೆ ಸಂಬಂಧಿಸಿದ ಹಾಡುಗಳು ಬಂದಿರುವುದನ್ನು ಕಾಣಬಹುದು. ಮತ್ತು ಈಚಿನ 100-120 ವರ್ಷಗಳ ಹಿಂದಿನ ಪ್ರಸಂಗಗಳಲ್ಲಿ ಬೇಟೆ, ವನವಿಹಾರ ಮತ್ತು ಹಾಸ್ಯಗಾರನಿಗೆ ಸಂಬಂಧಿಸಿದ ಪದ್ಯಗಳು ಬಂದಿರುವುದನ್ನು ಕಾಣಬಹುದು. ಈಚೆಗಿನ ಹೊಸ ಪ್ರಸಂಗಗಳಲ್ಲಿ ಪ್ರಣಯಕ್ಕೆ, ಒಲವಿಗೆ ಸಂಬಂಧಪಟ್ಟ ಪದ್ಯಗಳು ಕಂಡುಬರುತ್ತವೆ. ಇಲ್ಲೆಲ್ಲಾ ಪ್ರಸಂಗಕಾರರು ಆಯಾಯ ಕಾಲಕ್ಕೆ ಸ್ಪಂದಿಸಿರುವುದನ್ನು ಕಾಣಬಹುದು. ಇನ್ನು ವಸ್ತು ವಿಚಾರದಲ್ಲೂ ಕೂಡ ಯಕ್ಷಗಾನದಲ್ಲಿ ಹೊಸ ಹೊಸ ಆವಿಷ್ಕಾರಗಳು ಆಗುತ್ತಿವೆ. ಹಿಂದೆಲ್ಲಾ ರಾಮಾಯಣ, ಮಹಾಭಾರತ, ಭಾಗವತ ಹಾಗೂ ಪುರಾಣಗಳಿಗೆ ಹಾಗೂ ವರ್ತಮಾನಿಕ ಘಟನೆಗಳಿಗೆ ಸಂಬಂಧಿಸಿದ ಪ್ರಸಂಗಗಳ ಆಧಿಕ್ಯವನ್ನು ಕಂಡರೆ ಈಚೆಗೆ ಸಾಮಾಜಿಕ, ಐತಿಹಾಸಿಕ ವಿಚಾರಗಳನ್ನು ಒಳಗೊಂಡ ಪ್ರಸಂಗಗಳು ಬಂದಿರುವುದನ್ನು ಕಾಣುತ್ತೇವೆ. ಪ್ರಸಂಗಕಾರರಾದವರು ಕೂಡ ಕೆಲವೊಮ್ಮೆ ಯಕ್ಷಗಾನದ ಮೂಲ ಚೌಕಟ್ಟಿಗೆ ಹೊರತಾದಂತಹ ಪ್ರಸಂಗಗಳನ್ನು ರಚಿಸಿ, ಇದು ವರ್ತಮಾನದ ತುರ್ತು ಎಂಬ ರೀತಿಯಲ್ಲಿ ಬಿಂಬಿಸುತ್ತಾರೆ. ಆದರೆ

ಯಕ್ಷಗಾನದ ವೇಷ, ಸಂಗೀತ, ತಂತ್ರಗಾರಿಕೆಗಳೆಲ್ಲಾ ಪೌರಾಣಿಕ ಚೌಕಟ್ಟಿನಲ್ಲೇ ಮಿಂಚಬಲ್ಲವು. ವರ್ತಮಾನದ ಪಾತ್ರಗಳ ಮೂಲಕ ಆ ಬಗೆಯ ವಿಜೃಂಭಣೆಯನ್ನು ರಂಗಸ್ಥಳದಲ್ಲಿ ಮೂಡಿಸಲು ಸಾಧ್ಯವಿಲ್ಲ. ಕಲ್ಪಿತಕಥೆ ಇದ್ದರೂ ಅದಕ್ಕೆ ಪೌರಾಣಿಕ ಪರಿವೇಷವನ್ನು ತೊಡಿಸುವ ಜವಾಬ್ದಾರಿಯನ್ನು ಪ್ರಸಂಗಕಾರ ಹೊತ್ತುಕೊಳ್ಳಬೇಕು. ಪೌರಾಣಿಕ ಪರಿವೇಕ್ಷ ಹಾಗೂ ಆವರಣಕ್ಕೆ ಭಂಗಬಾರದ ರೀತಿಯಲ್ಲಿ ಹೊಸ ವಿಚಾರಧಾರೆಗಳನ್ನು, ಹೊಸ ಚಿಂತನೆಗಳನ್ನು ತರುವುದರಲ್ಲಿ ತಪ್ಪಿಲ್ಲ. ಅದೇ ರೀತಿ ಪೌರಾಣಿಕ ಪ್ರಸಂಗಗಳಿಗೂ ಕೂಡ ಹೊಸ ಅರ್ಥ ನೀಡುವ ರೀತಿಯಲ್ಲಿ, ಪುನಾರಚನೆ ಮಾಡುವುದು ಕೂಡ ಇವತ್ತಿನ ಅಗತ್ಯವಾಗಿದೆ. ಈಗಾಗಲೇ ಅಮೃತಸೋಮೇಶ್ವರ, ರಾಘವ ನಂಬಿಯಾರ್, ಡಿ.ಎಸ್. ಶ್ರೀಧರ್ ಮುಂತಾದವರು ಈ ಬಗೆ ಪ್ರಯೋಗ ನಡೆಸಿ ಯಶಸ್ವಿಯಾಗಿದ್ದಾರೆ. ಹಿಂದೆಲ್ಲಾ ರಾತ್ರಿಯಿಡೀ ಪ್ರದರ್ಶನ ನಡೆಯುತ್ತಿದ್ದು ಪ್ರಸಂಗ ಎಷ್ಟೇ ದೊಡ್ಡದಾಗಿದ್ದರು ತೊಂದರೆ ಇರುತ್ತಿರಲಿಲ್ಲ. ಇವತ್ತಿನ ಪರಿಸ್ಥಿತಿ ನೋಡಿದರೆ ದೀರ್ಘಕಾಲೀನ ಪ್ರದರ್ಶನಗಳ ಕಾಲ ಮುಗಿಯುವ ಸೂಚನೆ ಕಾಣುತ್ತಿದೆ. ಕಾಲಮಿತಿಯ ಪ್ರದರ್ಶನಗಳು ಇಂದಲ್ಲಾ ನಾಳೆ ಯಕ್ಷಗಾನದ ಅನಿವಾರ್ಯ ಅಂಗ ವಾಗಲಿದೆ. ಹೊಸ ಪ್ರಸಂಗಕಾರರಾದವರು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೃತಿ ರಚನೆ ಮಾಡಬೇಕಾಗುತ್ತದೆ. ಅದೇ ರೀತಿ ಮೇಳಗಳ ಬಾಹುಳ್ಯದಿಂದ ಹಾಗೂ ಕಲಾವಿದರ ಕೊರತೆಯಿಂದ ಪ್ರದರ್ಶನಗಳಲ್ಲಿ ಸಮಸ್ಯೆಗಳು ಎದುರಾಗುತ್ತಿವೆ. ಹೊಸ ಪ್ರಸಂಗಕಾರರು ಕಡಿಮೆ ಪಾತ್ರಗಳುಳ್ಳ ಪ್ರಸಂಗಗಳ ರಚನೆಗೆ ಮೊದಲಾಗಬೇಕಾಗುತ್ತದೆ. ಒಟ್ಟಂದಕ್ಕೆ ಭಂಗ ಬಾರದ ರೀತಿಯಲ್ಲಿ ಕಡಿಮೆ ಕಲಾವಿದರನ್ನು ಇಟ್ಟುಕೊಂಡು ಯಕ್ಷಗಾನವನ್ನು ಪ್ರದರ್ಶಿಸಬೇಕಾದ ಸ್ಥಿತಿ ಇರುವುದರಿಂದ, ಪ್ರಸಂಗ ಕಾರರು ಅದಕ್ಕೆ ಅನುವು ಮಾಡಿಕೊಡಲು ಸಿದ್ಧರಾಗಬೇಕು. ಇವೆಲ್ಲಾ ಇವತ್ತಿನ ಯಕ್ಷಗಾನ ಕವಿಗಳ ಮುಂದಿರುವ ಸವಾಲುಗಳಾಗಿವೆ. ಪ್ರಸಂಗಕಾರರಾದವರು ಈ ಅಂಶಗಳನ್ನು ದೃಷ್ಟಿಯನ್ನಿಟ್ಟುಕೊಂಡು ನೂತನ ಪ್ರಸಂಗಗಳ ರಚನೆ ಮಾಡುವುದು ಒಳಿತು. ಅದೇರೀತಿ ಹಳೆಯ ಪ್ರಸಂಗಗಳ ಸಂಪಾದನಾ ಕಾರ್ಯ ನಡೆಯಬೇಕಾಗಿದೆ. ಈಗಾಗಲೇ ಮಂಗಳೂರು ವಿಶ್ವವಿದ್ಯಾಲಯ ಹಾಗೂ ಉಡುಪಿಯ ಯಕ್ಷಗಾನ ಕೇಂದ್ರದವರು ಈ ನಿಟ್ಟಿನಲ್ಲಿ ಕಾರ್ಯ ಪ್ರಾರಂಭಿಸಿದ್ದಾರೆ. ಹಳೆಯ ಪ್ರಸಂಗಗಳ ಶಾಸ್ತ್ರೀಯ ಸಂಪಾದನೆಯಿಂದ ಒಂದು ಪ್ರಾಮಾಣಿಕ ಚೌಕಟ್ಟು ಲಭಿಸಿದಂತಾಗುತ್ತದೆ. ಇದೇರೀತಿಯಲ್ಲಿ ಇವತ್ತಿನ ಕಾಲಕ್ಕೆ ಹೊಂದುವಂತೆ ಅವುಗಳ ಸಂಕಲನ ಮಾಡಿ ಸಂಕಲಿತ ಪ್ರಸಂಗಗಳ ಪ್ರಕಟಣೆಯಾದರೆ ಭಾಗವತರಿಗೆ ಹಾಗೂ ಕಲಾವಿದರಿಗೆ ಅನುಕೂಲವಾಗುತ್ತದೆ.

ಯಕ್ಷಗಾನಕ್ಕೆ ಇಂದು ಮಕ್ಕಳು ಮತ್ತು ಮಹಿಳೆಯರು ಪಾದಾರ್ಪಣೆ ಮಾಡಿದ್ದಾರೆ. ಮಕ್ಕಳ ಮೇಳಗಳು ಮತ್ತು ಸ್ತ್ರೀಯರ ಹವ್ಯಾಸಿ ಮೇಳಗಳು ಹುಟ್ಟಿಕೊಂಡಿವೆ. ಇಲ್ಲಿ ಪ್ರಸಂಗಗಳ ಆಯ್ಕೆ ವಿಭಿನ್ನವಾಗಿರುತ್ತದೆ. ಇವತ್ತಿನ ಪ್ರಸಂಗರಚನೆಯಲ್ಲಿ ಈ ಎರಡು ತೆರದ ಪ್ರದರ್ಶನಗಳಿಗೆ ಅನುಕೂಲವಾಗುವ ಪ್ರಸಂಗಗಳ ರಚನೆಯ ಅವಶ್ಯವಿದೆ.

ಮಕ್ಕಳ ಮೇಳಕ್ಕೆ ಕಡಿಮೆಯ ಅವಧಿಯ ಮತ್ತು ಹೆಚ್ಚಾಗಿ ಮುಖ್ಯಪಾತ್ರ ಹುಡುಗ ವೇಷವೇ ಇರುವಂತಹ ಪ್ರಸಂಗಗಳು ಬೇಕಾಗುತ್ತವೆ. ಈಗ ವೀರವೃಷಸೇನ, ದ್ರುಪದ ಬಂಧನ, ಅಭಿಮನ್ಯು ಕಾಳಗ ಮುಂತಾದ ಪ್ರಸಂಗಗಳು ಮಕ್ಕಳ ಮೇಳಗಳ ಮೂಲಕ ಪ್ರದರ್ಶನಗೊಳ್ಳುತ್ತಿವೆ. ಮಾರ್ಗದರ್ಶಕರು / ನಿರ್ದೇಶಕರು ಮಕ್ಕಳಿಗೆ ಅಗತ್ಯವುಳ್ಳ ಪದ್ಯಗಳನ್ನು ಆಯ್ದು ಪ್ರಸಂಗವನ್ನು ಮೊಟಕುಗೊಳಿಸಿ ಪ್ರದರ್ಶನ ನೀಡುತ್ತಿದ್ದಾರೆ. ಪೌರಾಣಿಕವಾದ, ಮಕ್ಕಳ ಕಥೆಗಳನ್ನು ಆಧರಿಸಿದ ಪ್ರಸಂಗಗಳು ಅದರಲ್ಲೂ ಮಕ್ಕಳಿಗೆ ಪ್ರಿಯವಾಗುವಂತ ಕಲ್ಪನಾಶಕ್ತಿಯನ್ನು ವೃದ್ಧಿಸುವಂತಹ ಪ್ರಸಂಗಗಳ ರಚನೆ ಆಗಬೇಕಾಗಿದೆ. ಇದೇ ರೀತಿ ಸ್ತ್ರೀಪಾತ್ರಗಳು ಹೆಚ್ಚಿರುವ ಸ್ತ್ರೀಯರಿಗೆ ಅನುಕೂಲ ವಾಗುವ ಹಾಸ್ಯ ಪ್ರಧಾನ ಪ್ರಸಂಗಗಳ ರಚನೆ ಮಹಿಳಾ ಕಲಾವಿದರಿಗೆ ಅನುಕೂಲ ವಾಗುತ್ತದೆ. ನಗರ ಪ್ರದೇಶದಲ್ಲಿ ಮಾತ್ರವಲ್ಲದೆ ಗ್ರಾಮೀಣ ಪ್ರದೇಶದಲ್ಲೂ ಮಹಿಳಾ ತಂಡಗಳು ಯಕ್ಷಗಾನ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುತ್ತಿರುವುದು ಪ್ರಸಂಗಕಾರರಿಗೆ ಯಕ್ಷಗಾನ ಕವಿಗಳಿಗೆ ನೂತನ ಆವಿಷ್ಕಾರದ ಸವಾಲಾಗಿದೆ. ಪುರಾಣ ಪ್ರಪಂಚ ದಲ್ಲಿ ಅನೇಕ ಮಹಿಳೆಯರ ಭಾವವಿಲಾಸಕ್ಕೆ ಒಗ್ಗುವ ಸಂಗತಿಗಳಿವೆ. ಅವುಗಳನ್ನು ಪ್ರಸಂಗಕಾರರು ಕೈಗೆತ್ತಿಕೊಂಡು ಈ ರಂಗಪ್ರಕಾರವನ್ನು ಶ್ರೀಮಂತಗೊಳಿಸ ಬಹುದು. ಹೊಸ್ತೋಟ ಮಂಜುನಾಥ ಭಾಗವತರು ಈಗಾಗಲೇ ಸಾಕಷ್ಟು ಕೃಷಿ ನಡೆಸಿದ್ದಾರೆ.

ಇವತ್ತಿನ ಯಕ್ಷಗಾನ ರಂಗಭೂಮಿಯಲ್ಲಿ ಹವ್ಯಾಸಿಗಳು ನಿರ್ಣಾಯಕರಾಗುತ್ತಿ ದ್ದಾರೆ. ಹವ್ಯಾಸಿಗಳಿಗೆ ಕಡಿಮೆ ಪಾತ್ರವಿರುವ, ಸ್ತ್ರೀ ಪಾತ್ರಗಳು ಕಡಿಮೆ ಇರುವ ಕಿರು ಅವಧಿಯ ಪ್ರಸಂಗಗಳು ಯೋಗ್ಯವಾಗಬಲ್ಲವು. ಹಳೆಯ ಪ್ರಸಂಗಗಳ ಸಂಕಲನ, ಸಂಪಾದನೆ ಈ ನಿಟ್ಟಿನಲ್ಲಿ ನಡೆದರೆ ಉತ್ತಮ. ಅದೇರೀತಿ ಇವತ್ತಿನ ಯಕ್ಷಗಾನ ಕವಿಗಳು ಹವ್ಯಾಸಿಗಳಿಗೆ ಒದಗಬಲ್ಲ ಪ್ರಸಂಗ ರಚನೆಗೆ ಕೈಯಿಕ್ಕಿದರೆ ಅನುಕೂಲ. ಮಾತು, ಕುಣಿತ ಕಡಿಮೆ ಇರುವ ಕಥೆಯ ಓಟ ಹೆಚ್ಚಿರುವ ಪ್ರಸಂಗಗಳು ನಗರದ ಜನರನ್ನು ತಟ್ಟಬಲ್ಲವು ಅಂತಹವುಗಳ ರಚನೆ ಇಂದಿನ ತುರ್ತು ಅಗತ್ಯ. ಇವತ್ತು ಯಕ್ಷಗಾನದಲ್ಲಿ ಎರಡು ಸೀಳು ಎದ್ದುಕಾಣುತ್ತದೆ. ಹರಕೆ ಹೊತ್ತ ಮಂದಿಗಾಗಿ ದೇವಸ್ಥಾನಗಳವರು ನಡೆಸುವ ವ್ಯವಸಾಯೀ ಹರಕೆ ಮೇಳಗಳ ಆಟ ಒಂದೆಡೆಯಾದರೆ ಯಕ್ಷಗಾನ ಕಲೆಗೆ ಹೆಚ್ಚು ಒತ್ತುಕೊಟ್ಟು ನಗರ ಪ್ರದೇಶದ ಜನರನ್ನು ಸಂಪರ್ಕಿಸುತ್ತಿರುವ ಹವ್ಯಾಸಿ ಹಾಗೂ ಕೆಲವು ಹಿರಿಯ ಕಲಾವಿದರ ತಂಡಗಳು ನೀಡುತ್ತಿರುವ ಕಾಲಮಿತಿಯ ಯಕ್ಷಗಾನ ಪ್ರದರ್ಶನಗಳು. ನೂತನ ಪ್ರಸಂಗಕಾರರು ಹರಕೆಮೇಳಕ್ಕೆ ಹಾಗೂ ಡೇರೇ ಮೇಳಗಳಿಗೆ ಅಂದರೆ ವ್ಯವಸಾಯೀ ಮೇಳಗಳಿಗೆ ನೂತನ ಪ್ರಸಂಗಗಳ ಕೃಷಿಯನ್ನು ನಡೆಸುತ್ತಲೇ ಇದ್ದಾರೆ. ಅಲ್ಲಿ ರಂಜನೆಯೇ ಪ್ರಧಾನ. ಇವುಗಳ ಬಗ್ಗೆ ಚರ್ಚೆ ಹಾಗೂ ಅವು ಸುಂದರವಾಗುವುದರ ಬಗ್ಗೆ ಅಭಿಮತ ಸೃಷ್ಟಿಯಾಗಬೇಕಾಗಿದೆ. ಇದಕ್ಕೆ ಎಲ್ಲರ ಒಮ್ಮುಖ ದೃಷ್ಟಿ ಅಗತ್ಯ.

ಇವತ್ತು ಯಕ್ಷಗಾನ ಅಕಾಡೆಮಿಕ್ ವಲಯವನ್ನು ಪ್ರವೇಶಿಸುತ್ತಿದೆ. ವಿಶ್ವ ವಿದ್ಯಾಲಯದ ಪಠ್ಯದ ಭಾಗವಾಗಿ ವಿದ್ಯಾರ್ಥಿಗಳ ಓದಿಗೆ ಒದಗುತ್ತಿದೆ. ಈ ಕಾರಣ ನೂತನ ಆವಿಷ್ಕಾರಗಳು, ರಚನೆಗಳು ಅಕಾಡೆಮಿಕ್ ವಲಯಕ್ಕೆ ಪಠ್ಯವಾಗುವಂತೆ ಇರಬೇಕು. ಪುರಾಣಪ್ರಸಂಗಗಳಲ್ಲಿ ಬರುವ ಮೌಲ್ಯಗಳ ಮರುಪರಿಶೀಲನೆಯು ಪ್ರಸಂಗದಲ್ಲಿ ಪಡಿಮೂಡಬೇಕು. ಕವಿಗಳು, ಕಲಾವಿದರು, ವಿಮರ್ಶಕರು ಈ ಬಗ್ಗೆ ಚಿಂತಿಸಬೇಕು. ಯಕ್ಷಗಾನದ ಸ್ವಂತಿಕೆಯನ್ನು ಉಳಿಸಿಕೊಂಡು ಹೊಸ ಆವಿಷ್ಕಾರಗಳನ್ನು ಮಾಡುವ ಸವಾಲನ್ನು ಪ್ರಸಂಗಕಾರರು, ಕಲಾವಿದರು, ಸಂಘಟಕರು ಸ್ವೀಕರಿಸಬೇಕು. ಆಗ ಯಕ್ಷಗಾನ ಸಾಹಿತ್ಯ ಆ ಮೂಲಕ ಯಕ್ಷಗಾನ ಪ್ರದರ್ಶನ ಇನ್ನಷ್ಟು ಶ್ರೀಮಂತವೂ, ಸುಂದರವೂ ಆಗುವುದರಲ್ಲಿ ಅನುಮಾನವಿಲ್ಲ.

■

ಪ್ರಸಂಗಸಾಹಿತ್ಯದಲ್ಲಿ ಕೌಟುಂಬಿಕ ಚಿತ್ರಣ

ಸಾಹಿತ್ಯ ಸಮಾಜದ ಪ್ರತಿಬಿಂಬ. ಸಮಾಜದ ಓರೆಕೋರೆಗಳು, ರೀತಿ ನಡವಳಿಕೆಗಳು, ವ್ಯಕ್ತಿಗತ ಸಂಬಂಧ ಸಂಘರ್ಷಗಳು ಈ ಪ್ರತಿಬಿಂಬದಲ್ಲಿ ತಮ್ಮ ಛಾಯೆಯನ್ನು ಬಿಂಬಿಸುತ್ತವೆ. ಸಾಹಿತ್ಯದ ಉಗಮ ವಿಕಾಸದಲ್ಲಿ ಜನಾಂಗಿಕ ಪ್ರಭಾವ, ಪರಿಸರ ಪ್ರಜ್ಞೆ ಮತ್ತು ಯುಗಧರ್ಮಗಳು ಪ್ರೇರಕವಾಗುತ್ತವೆ ಎಂಬ ಟೇನನನ ಸೂತ್ರವನ್ನು ಹೆಚ್ಚಿನವರು ಒಪ್ಪುತ್ತಾರೆ. ರಾಜಕೀಯ ಸಂಸ್ಥೆಗಳು, ಸಾಮಾಜಿಕ ವ್ಯವಸ್ಥೆಗಳು, ಆರ್ಥಿಕ ಸಂಗತಿಗಳು, ಸುತ್ತಮುತ್ತಣ ವಾತಾವರಣದಲ್ಲಿ ಕಾಣುವ ಎಲ್ಲ ವಿಚಾರಗಳ ಮೊತ್ತ ಪರಿಸರವಾಗುತ್ತದೆ. ಕವಿ ಆದವನಿಗೆ ಈ ಪರಿಸರದ ಕುರಿತಿರುವ ಪ್ರಜ್ಞೆ ಕಾವ್ಯನಿರ್ಮಿತಿಯಲ್ಲಿ ಸಹಾಯವಾಗುತ್ತದೆ. ಭಾರತೀಯ ಹಾಗೂ ಪಾಶ್ಚಾತ್ಯ ಸಾಹಿತ್ಯಗಳಲ್ಲಿ ಕಂಡುಬರುವ ಸಮಾಜ ವ್ಯವಸ್ಥೆ ತೀರಾ ಭಿನ್ನವಾದದ್ದು. ಇದರಿಂದಾಗಿ ಈ ಎರಡೂ ಸಾಹಿತ್ಯಗಳ ಆಶಯದಲ್ಲಿ ವ್ಯತ್ಯಾಸವಿದೆ. ಅವರಲ್ಲಿ ವ್ಯಕ್ತಿಗತಭಾವಗಳು, ದ್ವಂದ್ವ ಸಂಘರ್ಷಗಳು ಪ್ರಧಾನವಾದರೆ ನಮ್ಮಲ್ಲಿ ಕುಟುಂಬವ್ಯವಸ್ಥೆಯಿಂದ ಚೋದಿತವಾದ ಸಮಷ್ಟಿಪ್ರಜ್ಞೆಗೆ ಹೆಚ್ಚು ಒತ್ತು. ನಮ್ಮ ಎರಡು ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳು ಎರಡು ಕುಟುಂಬಗಳ ಕತೆಯನ್ನೇ ಹೇಳುತ್ತಿವೆ. ಭಾರತೀಯ ಸಾಹಿತ್ಯದಲ್ಲಿ ಪ್ರೀತಿಯಂತಹ ತೀರ ವೈಯಕ್ತಿಕ ಸಂಬಂಧವು ಕೂಡ ದಾಂಪತ್ಯದ ಚೌಕಟ್ಟಿನಲ್ಲಿ ಮಿನುಗುವುದನ್ನು ಕಾಣಬಹುದು. ಈ ಪರಂಪರೆ ಪ್ರಾಚೀನ ಸಾಹಿತ್ಯದಿಂದ ಅರ್ವಾಚೀನ ಸಾಹಿತ್ಯದವರೆಗೆ ಬೆಳೆದು ಬಂದಿದೆ. ಕನ್ನಡದ ಸಂದರ್ಭದಲ್ಲಂತೂ ನವ್ಯಸಾಹಿತ್ಯ ಬರುವವರೆಗೆ ಈ ಕೇಂದ್ರವು ಬದಲಾವಣೆ ಆದುದು ಕಾಣುವುದಿಲ್ಲ.

ಕೈಗಾರಿಕೀಕರಣದ ಫಲವಾಗಿ ನಮ್ಮ ಸಮಾಜದ ವ್ಯವಸ್ಥೆಯಲ್ಲಾದ ಏರುಪೇರು ಸಾಹಿತ್ಯದಲ್ಲೂ ವ್ಯಕ್ತಿಪ್ರಧಾನ ಸಾಹಿತ್ಯ ಮೊದಲಾಗಲು ಕಾರಣವಾಯಿತು.

ಭಾರತೀಯ ಕಾವ್ಯಮೀಮಾಂಸೆ ಜಾಗತಿಕ ಜ್ಞಾನಭಂಡಾರಕ್ಕೆ ಧ್ವನಿ, ರಸ, ಅಲಂಕಾರ ಗಳಂತಹ ಉಪಯುಕ್ತ ಸಿದ್ಧಾಂತಗಳನ್ನು ನೀಡಿದ್ದರೂ ಜನಪರ ಕಾವ್ಯ ಕಥೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ಮಾಡಿರುವುದು ಗಮನೀಯ. ಭಾರತೀಯ ಶಿಷ್ಟ ಭಾಷಾ ಸಾಹಿತ್ಯಗಳು ಹೆಚ್ಚಾಗಿ ಸಂಸ್ಕೃತದ ಪಡಿನೆಳಲಿನಲ್ಲೇ ಸಾಗಿ ವರ್ಣನೆ, ಅಲಂಕಾರ, ರಸಗಳೇ ಮುಂತಾದ ಲಕ್ಷಣಶಾಸ್ತ್ರಗಳಿಗೆ ಹೆಚ್ಚಿನ ಒತ್ತನ್ನು ಕೊಟ್ಟವು. ಆದರೆ ಜಾನಪದ ಸಾಹಿತ್ಯ ಈ ಕಟ್ಟುಗಳಿಗೆ ಬದ್ಧವಾಗದೇ ಜನಪರ ನಿಲುವನ್ನು ಪ್ರತಿಪಾದಿಸಿತು. ನಾಡಿನ ನಿಜವಾದ ಸಂಪತ್ತುಗಳಾದ ಜನಪದ ಕಾವ್ಯ ಕತೆಗಳ ಸಂಗ್ರಹ, ಅಧ್ಯಯನ ಪರಾಮರ್ಶೆಯಾಗುತ್ತಿರುವುದು ಈಚಿನ ದಶಕಗಳಲ್ಲೇ. ಈ ಮಣ್ಣಿನೊಂದಿಗಿರಿಸಿಕೊಂಡ ಅಪೂರ್ವ ಸಂಬಂಧದಿಂದಲೇ ಜಾನಪದ ಸಾಹಿತ್ಯಕ್ಕೆ ವಿಶಿಷ್ಟತೆ ಲಭಿಸಿದೆ. ಇಲ್ಲಿ ಕಾಣುವ ಸಾಮಾನ್ಯ ಅಂಶಗಳು ಸಣ್ಣ ಸಣ್ಣ ವಿವರಣೆಗಳು, ದೈನಿಕ ವಿಚಾರಗಳು ನಮ್ಮ ನೆಲದ ಸಂಸ್ಕೃತಿಯನ್ನು ಪರಿಚಯಿಸುತ್ತವೆ. ತೀರಾ ಸರಳವಾಗಿ ಕಾಣುವ ಸಂಗತಿಗಳಲ್ಲೂ ಜನರ ಬದುಕಿನ ವಿವರಗಳು ಮನೋಧರ್ಮಗಳು, ಆಶೋತ್ತರಗಳು ತಿಳಿದುಬರುತ್ತವೆ. ಕಾವ್ಯಮೀಮಾಂಸೆಯ ದೃಷ್ಟಿಕೋನದಿಂದ ಮಾತನಾಡುವ ಲಾಕ್ಷಣಿಕರು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಅಳತೆಗೋಲಿನಿಂದ ಅಳೆಯ ಹೊರಟಿ ರುವ ಆಧುನಿಕ ವಿಮರ್ಶಕರು ಈ ಸಾಹಿತ್ಯವನ್ನು ಕಡೆಗಣಿಸಿದರೆಂದರೆ ತಪ್ಪಾಗಲಾರದು. ಇದರ ಫಲವಾಗಿ ನಿಜವಾದ ಅರ್ಥದಲ್ಲಿ ಭಾರತೀಯ ಕಾವ್ಯವಿಮರ್ಶಾದೃಷ್ಟಿ ನಮ್ಮ ವಿಮರ್ಶಾಪರಂಪರೆಗೆ ಒಗ್ಗಲಿಲ್ಲ. ಈ ಕಾರಣ ಪ್ರಸಂಗಸಾಹಿತ್ಯದ ಸ್ಥಾನನಿರ್ದೇಶ ಇದುವರೆಗೆ ಸಮರ್ಪಕವಾಗಿ ನಡೆದಿಲ್ಲ.

ಕನ್ನಡ ಯಕ್ಷಗಾನ ಪ್ರಸಂಗಸಾಹಿತ್ಯಕ್ಕೆ ಸುಮಾರಾಗಿ ಐದು ಶತಕಗಳ ಇತಿಹಾಸವಿದೆ. ರಾಮಾಯಣ, ಭಾರತ, ಭಾಗವತಾದಿ ಕಾವ್ಯಪುರಾಣಗಳ ವಸ್ತುವನ್ನೇ ಆಧರಿಸಿ ರಚಿಸಿದ ಪ್ರಸಂಗಗಳೇ ಇಲ್ಲಿ ಪ್ರಧಾನ. ಹೆಚ್ಚಾಗಿ ಕನ್ನಡದ ಗದುಗುಭಾರತ, ಜೈಮಿನಿಭಾರತ, ತೊರವೆ ರಾಮಾಯಣಗಳ ಪ್ರಭಾವ ಇಲ್ಲಿ ಸ್ಪಷ್ಟವಾಗಿ ಮೂಡಿದೆ. 200 ರಿಂದ 400 ಪದ್ಯಗಳಲ್ಲಿ ಕಥಾಭಾಗವನ್ನು ನಿರೂಪಿಸಲಾಗಿದೆ. ಹೆಚ್ಚಾಗಿ ನಡುಗನ್ನಡ ಭಾಷಾಶೈಲಿಯು ಈ ಕಿರುಕಾವ್ಯಗಳಲ್ಲಿ ಬಂದಿದೆ. ಪಾರ್ತಿಸುಬ್ಬ, ಹಳೆಮಕ್ಕಿರಾಮ, ದೇವಿದಾಸ, ಮಧ್ವಮುನಿಪತಿದಾಸ, ಹೆಳವನಕಟ್ಟೆ ಗಿರಿಯಮ್ಮ, ಧ್ವಜಪುರದ ನಾಗಪ್ಪಯ್ಯ, ಭಾಳಾಕ್ಷ, ಕೆಂಪಯ್ಯ, ವಿಷ್ಣು, ಹಟ್ಟಿಯಂಗಡಿ ರಾಮಭಟ್ಟ, ಅಳಿಯ ಲಿಂಗರಾಜ, ಸಂಕಯ್ಯ ಭಾಗವತ ಮುಂತಾದ ಉತ್ತಮ ಕವಿಗಳು ಇಲ್ಲಿ ಪ್ರಸಂಗ ರಚನೆ ಮಾಡಿದ್ದಾರೆ. ಕರ್ನಾಟಕ ಯಕ್ಷಗಾನದ ಮುಖ್ಯ ಪ್ರಭೇದಗಳಾದ ಮೂಡಲಪಾಯ ಹಾಗೂ ವಿದ್ವಾಂಸರು ಕರೆಯುವ ಪಡುವಲಪಾಯಕ್ಕೆ ಸಂಬಂಧಿಸಿ ದಂತೆ ಪ್ರಸಂಗ ಸಾಹಿತ್ಯದಲ್ಲಿ ಪ್ರಭೇದಗಳು ಬಂದಿವೆ. ಮೂಡಲಪಾಯದ ಪ್ರಸಂಗಗಳಲ್ಲಿ

ಪದ್ಯಕ್ಕೆ ಹೊಂದಿಕೊಂಡ ಗದ್ಯವಿದೆ. ಈ ಮೂಲಕ ನಾಟಕರೂಪಕ್ಕೆ ತೀರಾ ಸಮೀಪವಾಗುತ್ತದೆ. ಕರಾವಳಿ ಹಾಗೂ ಮಲೆನಾಡಿನ ಯಕ್ಷಗಾನ ಕೃತಿಗಳು ಗೇಯ ರೂಪದಲ್ಲಿ ಮಾತ್ರವಿದ್ದು ಕಲಾವಿದರ ಆಶುಭಾಷಣಕ್ಕೆ ಅವಕಾಶ ಮಾಡಿಕೊಟ್ಟಿವೆ. ಪ್ರಕೃತ ಪ್ರಬಂಧದಲ್ಲಿ ಕರಾವಳಿ ಹಾಗೂ ಮಲೆನಾಡಿನಲ್ಲಿ ಪ್ರಚಲಿತವಿರುವ ಯಕ್ಷಗಾನ ಕೃತಿಗಳನ್ನು ಮಾತ್ರ ಗಮನಿಸಲಾಗಿದೆ. ಈ ಭೌಗೋಳಿಕ ಪ್ರದೇಶದ ಸಾಮಾಜಿಕ ಪರಿಕಲ್ಪನೆ ಹಾಗೂ ಕೌಟುಂಬಿಕ ವ್ಯವಸ್ಥೆಯ ಖಚಿತ ಸ್ವರೂಪವನ್ನು ಅರಿಯಲು ಈ ಮಿತಿ ತೀರಾ ಅಗತ್ಯವಿದೆ. ಮಾತ್ರವಲ್ಲದೆ ಈ ಯಕ್ಷಗಾನ ಸಾಹಿತ್ಯದ ಎರಡು ಅಂಗಗಳಾದ ಹಾಡುವ ಪದ್ಯ ಆಡುವ ಗದ್ಯಗಳಲ್ಲಿ ಮೊದಲನೆಯದನ್ನು ಮಾತ್ರ ಆಧಾರವಾಗಿ ಇಟ್ಟುಕೊಳ್ಳಲಾಗಿದೆ. ಆಡುವ ಗದ್ಯಕ್ಕಿಲ್ಲದ ದಾಖಲೆಯ ಸ್ವರೂಪವೇ ಇದಕ್ಕೆ ಕಾರಣ.

ಯಕ್ಷಗಾನ ಕವಿಗಳು ಹಳ್ಳಿಗಾಡುಗಳಲ್ಲಿದ್ದು, ವ್ಯವಸಾಯವನ್ನು ಜೀವನೋಪಾಯವಾಗಿ ಮಾಡಿಕೊಂಡು ಬಿಡುವಿನ ವೇಳೆಯಲ್ಲಿ ಭಾಗವತ, ಭಾರತ, ರಾಮಾಯಣಗಳನ್ನು ಓದಿಕೊಂಡವರು. ತಾವು ಓದಿ ತಿಳಿದುಕೊಂಡದ್ದನ್ನು ಓದು ಬಾರದ ಹಳ್ಳಿಗರಿಗೆ ಪುರಾಣ ಪ್ರವಚನಗಳ ಮೂಲಕ ಹೇಳುತ್ತಾ ಬಂದವರು. ಹೆಚ್ಚಿನವರು ವೃತ್ತಿಯಲ್ಲಿ ಭಾಗವತರಾಗಿದ್ದು ಸಂಸಾರದ ಸಿಹಿಕಹಿಯನ್ನು ಉಂಡವರು ಹಾಗೂ ಮೇಳದ ಉಳಿದ ಕಲಾವಿದರ ಗುಣಶೀಲಗಳನ್ನು ಕಂಡವರು. "ಸಾಮಾನ್ಯ ಜನತೆಯ ಮಧ್ಯೆಯೇ ಬದುಕಿ ಅವರಿಗೋಸ್ಕರವೇ ಪ್ರಸಂಗ ಸೃಷ್ಟಿಸಿ, ಅವರ ಬದುಕನ್ನೇ ಕಲಾಕೃತಿಯಾಗಿ ಸೃಷ್ಟಿಸಿದವರಾಗಿದ್ದಾರೆ. ಈ ದೃಷ್ಟಿಯಿಂದ ಯಕ್ಷಗಾನ ಪ್ರಸಂಗಗಳು ಸಾಮಾಜಿಕ ಬದುಕಿನ ದಾಖಲೆಯಾಗಿವೆ."

ಪ್ರಸಂಗಸಾಹಿತ್ಯದಲ್ಲಿ ಮುಖ್ಯವಾಗಿ ಕಂಡು ಬರುವುದು ಅವಿಭಕ್ತ ಕುಟುಂಬದ ಚಿತ್ರಣ. ವ್ಯಕ್ತಿಗಳಿಂದ ಕುಟುಂಬ, ಕುಟುಂಬಗಳಿಂದ ಸಮಾಜ. ಹೀಗಿರುವ ವ್ಯವಸ್ಥೆಯಲ್ಲಿ ಕುಟುಂಬವು ವ್ಯಕ್ತಿತ್ವದ ವಿಕಸನಕ್ಕೆ ಹಾಗೂ ಸಮಾಜದ ಆರೋಗ್ಯಕ್ಕೆ ಸಂಬಂಧವನ್ನು ಕಲ್ಪಿಸುತ್ತದೆ. ನಮ್ಮ ಕುಟುಂಬದ ರಾಚನಿಕ ಸ್ವರೂಪವು ಸಮಾಜದ ಅನೇಕ ದೈನಿಕಗಳ, ರೀತಿ ರಿವಾಜುಗಳ ನಿರ್ಧಾರಕ ಅಂಶವಾಗಿದೆ. ಖ್ಯಾತ ಸಮಾಜಶಾಸ್ತ್ರಜ್ಞ ಏಂಡ್ರೆ ಬೆಟಲಿ 'In the midst of great social, economic and political changes over the centuries India has a long heritage of stable family life and family structure and the spirit of family solidarity has remained a sustaining power which was provided meaning to the daily lives of the Indian people" ಎಂದು ಹೇಳುವ ಮೂಲಕ ಭಾರತೀಯವಾದ ಕುಟುಂಬಪ್ರಧಾನ ಸಮಾಜ ವ್ಯವಸ್ಥೆಯ ವಿಶಿಷ್ಟತೆಯನ್ನು ತಿಳಿಸಿದ್ದಾನೆ. ಪ್ರಸಂಗಸಾಹಿತ್ಯವನ್ನು ಅಧ್ಯಯನ ಮಾಡುವಾಗ ನಮ್ಮ ಕಳೆದ ಶತಮಾನಗಳಲ್ಲಿ ಇದ್ದಿರಬಹುದಾದ ಕುಟುಂಬವ್ಯವಸ್ಥೆಯ ಈ ಬಗೆಯ ಚಿತ್ರಣ ದೊರೆಯುತ್ತದೆ.

ಸಂಬಂಧ ಸಾಮರಸ್ಯಗಳು :

ಕುಟುಂಬದಲ್ಲಿ ತಂದೆ, ತಾಯಿ, ಮಕ್ಕಳು ಮುಖ್ಯವಾದ ಘಟಕವಾಗುತ್ತಾರೆ. ಇವರಲ್ಲಿನ ಪರಸ್ಪರ ಸಂಬಂಧಗಳ ಚಿತ್ರಣವು ಕೌಟುಂಬಿಕ ಬದುಕಿನ ಚಿತ್ರಣವೇ ಆಗಿರುತ್ತದೆ. ಗಂಡ-ಹೆಂಡತಿ, ತಂದೆ-ಮಗ, ಅಣ್ಣ-ತಮ್ಮ, ಅತ್ತೆ-ಸೊಸೆ, ಅತ್ತಿಗೆ-ನಾದಿನಿ, ಭಾವ-ನೆಂಟ ಹೀಗೆ ಮುಂತಾದವರ ನಡುವಿನ ಪ್ರೀತಿ ಕಲಹಗಳು ಪ್ರಸಂಗಸಾಹಿತ್ಯದಲ್ಲಿ ಸಾಕಷ್ಟು ಕಥಿತವಾಗಿವೆ. ಪಾರ್ತಿಸುಬ್ಬನಂತಹ ಪ್ರತಿಭಾವಂತ ಕವಿಗಳು ಕೆಲವು ಸಣ್ಣ ವಿವರಗಳ ಮೂಲಕವೇ ಕುಟುಂಬದೊಳಗಣ ಸಾಮರಸ್ಯವನ್ನು ಅರುಹಿದ್ದಾರೆ. ನಿದರ್ಶನಕ್ಕೆ 'ಪಂಚವಟಿ ಪಟ್ಟಾಭಿಷೇಕ'ದಲ್ಲಿ ಬರುವ :

"ಅಣ್ಣ ನೀವ್ ಮೂವರಾ । ರಣ್ಯ ದೊಳಿರುವಾಗ
ಬಣ್ಣವೇ ತನಗೆ ರಾಜ್ಯ ॥
....
ಸಮ್ಮತ । ವಲ್ಲದಿ । ದ್ದರೆ ನಾ ಅ । ಯೋಧ್ಯೆಗೆ
ಜನ್ಮಾಂತ । ರಕೂ ಪೋಗೆ । ನು"

ಎಂಬ ಭರತನ ಮಾತುಗಳಲ್ಲಿ ಸಹೋದರ ಪ್ರೇಮದ ಕಠಿಣ ನಿರ್ಧಾರವಿದೆ.

ಮನೆಯ ದೊಡ್ಡ ಮಗನ ಗುಣಶೀಲಗಳನ್ನೆಲ್ಲ ಕವಿ ರಾಮನಲ್ಲಿ ಕಾಣಿಸಿದ್ದಾನೆ. ತಾಯಿಯೊಂದಿಗೆ ರಾಮನಾಡುವ ಮಾತುಗಳಲ್ಲಿ ಈ ಅಂಶ ಗೋಚರವಾಗುತ್ತದೆ.

ಬಣ್ಣಗಾ । ರಿಕೆಯಲ್ಲ । ತಾಯಿ ತಂ । ದೆಯ ಮಾತ
ನುಣ್ಣಗ । ಳೆಯ ಬಾರ । ದು-
ಜಾನಕಿ । ಲಕ್ಷ್ಮಣ । ರರಿಯರು । ಬುದ್ಧಿಯ ।
ನೀನಿದ್ದು । ಸಲಹೆಯ । ವ್ವ ॥
ತಾವ್ ನೊಂದು । ಕೊಂಬರ । ರಿತರೆ ಪೋ । ಗುವ ಸುದ್ದಿ ।
ನೀನಾಗಿ ಅರಹುಬೇಡ ॥

ತಾನು ಕಾಡಿಗೆ ಹೋಗುವ ಸುದ್ದಿ ತಿಳಿದರೆ ಹೆಂಡತಿ, ತಮ್ಮ ನೊಂದುಕೊಳ್ಳುವರೆಂಬ ಯೋಚನೆ ಆತನಿಗೆ. ಮುಂದೆ ಶೂರ್ಪನಖಿ ಎದುರಾದಾಗ ಸೀತೆಗೆ ಕಣ್ಣು ಮುಚ್ಚಿಕೋ ಎಂದು ಹೇಳಿ ಧೈರ್ಯಕೊಡುತ್ತಾನೆ. ಅದೇ ರೀತಿ ಸೀತೆ ಕೂಡ ಅಷ್ಟೇ ಗಂಡನ ಬಗ್ಗೆ ಪ್ರೀತಿಯುಳ್ಳವಳಾಗಿದ್ದು ವಂಚಿಸಿ ಹೋದರೆ ವಿಷವ ಕುಡಿದು ಸಾಯುತ್ತೇನೆ ಎನ್ನುತ್ತಾಳೆ.

ಯಕ್ಷಗಾನದ ಪಾತ್ರಗಳು ಪೌರಾಣಿಕ ಪ್ರಪಂಚದವುಗಳಾದರೂ ನಮ್ಮ ಸಮಾಜದಿಂದ ಚೋದಿತವಾದ ಭಾವಸೂಕ್ಷ್ಮಗಳನ್ನೆಲ್ಲಾ ಹೊಂದಿವೆ. ಸಮಾಜದ ಒಳಮರ್ಮಗಳು ಸಾಹಿತ್ಯದ ಒಂದು ಅಂಗವೆಂಬುದನ್ನು ಪ್ರಸಂಗಕಾರರೂ ಅರಿತಂತಿದೆ.

'ದೇವಯಾನಿಕಲ್ಯಾಣ'ದಲ್ಲಿ ಯಯಾತಿ ಮತ್ತು ದೇವಯಾನಿಯ ದಾಂಪತ್ಯ ಜೀವನದಲ್ಲಿ ಪ್ರಸಂಗಕಾರ ತೀರಾ ಸ್ವಾಭಾವಿಕ ಅಂಶಗಳನ್ನು ತಂದಿದ್ದಾನೆ. ಮುದುಕನಾದ ಯಯಾತಿ ತೌರುಮನೆಯ ಬಗಲ ಪಾಥೇಯವನ್ನು ಕೇಳುವ ಅಂಶ ಸ್ವಾರಸ್ಯ ಪೂರ್ಣವಾಗಿದೆ. "ಅಭಿಮನ್ಯು ಕಾಳಗ"ದಲ್ಲಿ ಸುಭದ್ರೆ, ಮಗನಾದ ಅಭಿಮನ್ಯು ಯುದ್ಧಕ್ಕೆ ಹೊರಟ ವಿಚಾರ ಕೇಳಿ ನೊಂದುಕೊಳ್ಳುತ್ತಾ ತಡೆಯುವಲ್ಲಿ ತಾಯಿ ಕರುಳಿನ ವ್ಯಥೆಯಿದೆ. ಧರ್ಮಜನಲ್ಲಿ ಧೃತರಾಷ್ಟ್ರನು ಆಡುವ :

ತರಳರು । ನೀವೆನ್ನ । ತಮ್ಮ ಹೋ । ದಾಗ ನಿಮ್ಮ ।
ಪರಿಪರಿ । ಕಷ್ಟದಿ । ಪೊರೆದಳು । ಕುಂತಿ...."

ಎಂಬಲ್ಲಿ ಸಾಮಾನ್ಯವಾಗಿ ಗಂಡ ತೀರಿಹೋದ ಹೆಂಗಸು ಮಕ್ಕಳನ್ನು ಕಷ್ಟದಿಂದ ಸಾಕಿದಾಗ, ನಂಟರಿಷ್ಟರು ಆಡುವ ಮಾತಿನ ಧಾಟಿಯಲ್ಲಿ ಬಂದಿದೆ.

ಕೌಟುಂಬಿಕ ಮೌಲ್ಯಗಳು :

ಪ್ರಸಂಗಸಾಹಿತ್ಯದಲ್ಲಿ ಚಿತ್ರಿತವಾದ ಕೌಟುಂಬಿಕವ್ಯವಸ್ಥೆ ನಮ್ಮ ಹಿಂದಿನ ಸಮಾಜ ಜೀವನದ ಅನೇಕ ಮೌಲಿಕ ವಿಚಾರಗಳನ್ನು ಪರಿಚಯಿಸುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ 'ಪಂಚವಟಿ'ಯಲ್ಲಿ ಸೀತೆಯಾಡುವ ಮಾತುಗಳು. ಪ್ರಸಂಗದಲ್ಲಿ ಬರುವ ಸೀತೆ-ದಶರಥರ ನಡುವಿನ ಸಂಬಂಧ, ಒಬ್ಬ ಚಕ್ರವರ್ತಿ ಮತ್ತು ಆತನ ಜೇಷ್ಠ ಸೊಸೆಯ ನಡುವಿನ ಬಿಗುಮಾನಪೂರಿತ ಸಂಬಂಧದಂತಿಲ್ಲ. ಬದಲು ಒಬ್ಬ ಹಳ್ಳಿಯ ಹಿರಿಯ ಮತ್ತು ಆತನನ್ನು ಗೌರವಿಸಿ ಪ್ರೀತಿಸುವ ಹಿರಿಯ ಸೊಸೆಯೊಬ್ಬಳ ಸಂಬಂಧದಂತಿದೆ. ದಶರಥನ ಸಾವಿನ ಕುರಿತು ಸೀತೆಯಾಡುವ ಶೋಕದ ಮಾತುಗಳು ಹೀಗಿವೆ :

ಇನ್ನಾರೆನ್ನನು ಗುಣದಲಿ । ಮನ್ನಿಸಿ ಮನ್ನಿಸಿ ಕರೆವರು ।
ಕಣ್ಣಲಿ ಕಾ । ಣದೆ ಹೋಯಿತೆ । ಪುಣ್ಯವೆ ಹಾ । ವಿಧಿಯೇ ।
ಮಾವನ ಗುಣ । ವರ್ಣಿಸುವೆಡೆ । ಸಾವಿರ ಬಾ । ಯಿರಬೇಕು ।
ಯಾವರಿಗಿಂ । ಥಾ ಮನಸಿದೆ । ದೇವರಿಗೆ ಸ । ಮಾನ
ಎಷ್ಟರ ಸಂಕಟ ಪಟ್ಟನೊ । ಮಕ್ಕಳ ನೋಡುವೆನೆನುತಲಿ ।
ಎಷ್ಟೆಮ್ಮನು । ಕರೆ ಕರೆದು । ಬಿಟ್ಟನೊ ಪ್ರಾ । ಣವನು
ಒಂದೇ ದಿನ । ವಾದರು ಮನ । ನೊಂದೆನ್ನೊಳು । ನುಡಿದರಿಯಾ
ತಂದೆ ತಾಯ್ಗ । ಳಾರಾದವರು ಬಂದಪರೇ । ಹೀಗೆ
ಹೊತ್ತಲ್ಲದ । ಹೊತ್ತಿನಲಿ ನೃಪೋತ್ತಮನಳಿ । ದನೆ ಹಾಯೆನು
ತತ್ತೆಯ ಮೊಗ । ನೋಡುತ ಬಲು । ಅತ್ತಳು ಜನ । ಕಸುತೆ
ಒದಗುವರಾ । ಪತ್ತಿಗೆಂದು । ಮದುವೆಯ ಮಾ । ಡಿದ ಮಗನಿಗೆ
ತುದಿಗಾಲಕೆ । ನಾವಿದ್ದಿ । ಲ್ಲದ ಹಾಗಾ । ಯ್ತಲ್ಲ ॥

ಇಲ್ಲಿ ಸೀತೆ ಕುಟುಂಬದಲ್ಲಿ ಮಕ್ಕಳನ್ನು ಸಾಕುವುದರ ಹಿನ್ನೆಲೆಯಲ್ಲಿರುವ ಭಾವವನ್ನು ತಿಳಿಸಿದ್ದಾಳೆ. ಭಾರತೀಯ ಕುಟುಂಬಗಳಲ್ಲಿ ಮಕ್ಕಳನ್ನು ಸಾಕುವುದು ತಂದೆ ತಾಯಿಯರ ಕರ್ತವ್ಯ. ಅಂತೆಯೇ ತಂದೆ ತಾಯಿಯರ ಕೊನೆಗಾಲಕ್ಕೆ ಅವರನ್ನು ನೋಡಿಕೊಳ್ಳುವುದು ಮಕ್ಕಳ ಕರ್ತವ್ಯ. ಈ ಮೌಲ್ಯ ವ್ಯವಸ್ಥೆಯ ಬಗ್ಗೆ ಹೇಳುವ ಮಾತು ತೀರಾ ಸರಳವಾದರೂ ಸಮಾಜವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಕರ್ನಾಟಕದ ಹಳ್ಳಿಯೊಂದರ ಸಮಾಜಶಾಸ್ತ್ರೀಯ ಅಧ್ಯಯನ ನಡೆಸಿದ ಶ್ರೀ ಎಂ.ಎನ್. ಶ್ರೀನಿವಾಸ್ ತಮ್ಮ "ರಿಮೆಂಬರಡ್ ವಿಲೇಜ್"ನಲ್ಲಿ ಕೌಟುಂಬಿಕ ವ್ಯವಹಾರಗಳ ಕುರಿತು "Wealth and poverty were both transitory while moral rules were permanent" ಎನ್ನುತ್ತಾರೆ. ಪ್ರಸಂಗದ ಕವಿಗಳು ಇದೇ ಭಾವವನ್ನು ತಮ್ಮ ಪಾತ್ರಗಳ ಮೂಲಕ ಪ್ರಕಟಿಸಿದ್ದಾರೆ. 'ಸುಭದ್ರಾಕಲ್ಯಾಣ'ದಲ್ಲಿ ಸುಭದ್ರೆಯನ್ನು ಕೊಡುವ ವಿಚಾರದಲ್ಲಿ ವಸುದೇವ ದೇವಕಿಯರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

"ಸಹಜಾತೆಯಣುಗನಿಗೀಯದೆ ಮಿಕ್ಕಿನ
ಕುಹಕಿಗಳಿಗೆ ಹೆಣ್ಣ ಕೊಡುವೆವೆ ಮಗನೆ"

ಎಂಬಲ್ಲಿ ನೈತಿಕ ನಿಯಮಕ್ಕೆ ಒತ್ತು ಇದೆ. ಬಲರಾಮ "ಕುಲವಂತ, ಬಲವಂತ, ಸಿರಿವಂತ, ಕುರುಕುಲ ತಿಲಕನಿಗೆಣೆಯಹರಾರು? ಎಂದರೂ ವಾಸುದೇವ ಒಪ್ಪುವುದಿಲ್ಲ. "ತಿಳಿದು ಸೋದರಿಕೆಗೀವೆನು ಹೆಣ್ಣನು" ಎನ್ನುತ್ತಾನೆ.

ಇದೇ ರೂಢಿಕ್ರಮದ ಪ್ರಸ್ತಾಪ 'ರತಿಕಲ್ಯಾಣ'ದಲ್ಲಿ ಬಂದಿದೆ. ಅಲ್ಲಿ ಕೌಂಡ್ಲಿಕ :

ಸೋದರಳಿಯ ತಾನಿರಲು ಬಿ । ಟ್ಟಾದರಿಸಿದೆ ನೀ ಬದಲು
ಮಾಧವನಣುಗಗೆರತಿಯ ನೀ । ಮೋದದೊಳೀವೆಯ ಜೀಯ ।
ನಡವಳಿಕೆ ಪದ್ಧತಿಯನೀ । ಬಿಡಬಹುದೆ ಸನ್ಮತಿಯ ॥

ಎನ್ನುವ ಮೂಲಕ ಈ ಪ್ರದೇಶದ ಕೌಟುಂಬಿಕ ಸಂಬಂಧಗಳ ವಿಶ್ಲೇಷಣೆ ಇದೆ. ಹೆಣ್ಣುಗಳನ್ನು ಕೊಡುವ ಹಾಗೂ ತರುವಲ್ಲಿ ರೂಢಿಗತವಾದ ಸಂಪ್ರದಾಯವನ್ನು ಈ ಪೌರಾಣಿಕ ಪ್ರಸಂಗಗಳಲ್ಲಿ ಪ್ರಸ್ತಾಪಿಸುವ ಮೂಲಕ ಸಮಕಾಲೀನ ಕೌಟುಂಬಿಕ ಚಿತ್ರಣಗಳನ್ನು ನಮ್ಮ ಕವಿಗಳು ನೀಡಿದ್ದಾರೆ. ಮನೆಗೆ ಬಂದ ಹೆಣ್ಣಿಗೆ ಕಷ್ಟ ಕೊಡಬಾರದೆಂಬ ವಿಚಾರವು ಪ್ರಸಂಗದಲ್ಲಿ ವ್ಯಕ್ತವಾಗುತ್ತದೆ. ರಾಮ ಕಾಡಿಗೆ ಹೋಗುವುದರಿಂದ ಸೀತೆಗೆ ಆಗುವ ಅಪಚಾರವನ್ನು ಕೌಸಲ್ಯ ಹೀಗೆ ಹೇಳುತ್ತಾಳೆ :

"ತಂದು ಕಂಡವರ ಮಗಳ ।
ನಂಬಿಸಿಯವರನಿಂದು ಕೊರಳ ಕೊಯ್ವುದೇನೊ"

ಎಂದು. ಹೀಗೆ ಕೆಲವು ರೂಢಿಗತ ಮೌಲ್ಯಗಳು ಪ್ರಸಂಗಸಾಹಿತ್ಯದಲ್ಲಿ ದೊರೆಯುತ್ತವೆ.

ರೀತಿ-ರಿವಾಜುಗಳು :

ಭಾರತೀಯ ಕುಟುಂಬವ್ಯವಸ್ಥೆಯಲ್ಲಿ ರೂಢಿಗತವಾದ ಕೆಲವು ರೀತಿರಿವಾಜುಗಳಿವೆ. ಇವುಗಳ ಅನುಸರಣೆ ಪ್ರಸಂಗಸಾಹಿತ್ಯದಲ್ಲಿ ವಿಫುಲವಾಗಿ ಉಲ್ಲೇಖಿತವಾಗಿದೆ. ಇದರಿಂದಾಗಿ ಕಳೆದ ನಾಲ್ಕು ಶತಕಗಳ ಈಚಿನ ನಮ್ಮ ಕೌಟುಂಬಿಕ ವ್ಯವಸ್ಥೆಯ ಸಾಂಪ್ರದಾಯಿಕ ವಿಚಾರಗಳು ತಿಳಿದುಬರುತ್ತವೆ. ಉದಾಹರಣೆಗೆ ಗುರುಹಿರಿಯರನ್ನು ಗೌರವಿಸಬೇಕು, ತಾಯಿಯನ್ನು ಪೂಜಿಸಬೇಕು, ವಿಶೇಷದ ಸಂದರ್ಭದಲ್ಲಿ ಕುಟುಂಬದವರೆಲ್ಲ ಒಂದೆಡೆ ಸೇರಬೇಕು. ದೊಡ್ಡವರಲ್ಲಿಗೆ ಹೋಗುವಾಗ ಕಾಲುನಡಿಗೆಯಲ್ಲಿ ಹೋಗಬೇಕು ಮುಂತಾದ ಪ್ರಾಥಮಿಕ ಸಾಂಪ್ರದಾಯಿಕ ವಿಚಾರಗಳು ಲಭ್ಯವಾಗುತ್ತವೆ. ಪಾರ್ತಿಸುಬ್ಬ 'ಐರಾವತ'ದಲ್ಲಿ ಭೀಷ್ಮನ ಮೂಲಕ ಹೀಗೆ ಹೇಳಿಸುತ್ತಾನೆ :

ಹಿರಿಯ ತಂದೆಯ ಮೊದಲ ಮನ್ನಿಸಿ ಕರೆಯಬೇಕು । – ನೀತಿಗೆ
ಬರಲಿ ಬಾರದೆ ಕುಳಿತನಾದರೆ । ತನ್ನ ಮನಸು
ಮರೆಯಲಾಗದು । ನಾವು ನೀತಿಯ । ಮಾತು ಕೇಳು । – ಬಾಲಕ
ಗುರು ಲಘುತ್ವದ । ಮೀರಬಾರದು । ಗ್ರಹಿಸಿ ನೋಡು ॥[11]

ಇದೇ ರೀತಿ 'ಪಂಚವಟಿ ಪಟ್ಟಾಭಿಷೇಕ'ದಲ್ಲಿ ಪಟ್ಟಾಭಿಷಕ್ತನಾಗಲು ಹೊರಟ ರಾಮ ಹಿರಿಯರಿಗೆಲ್ಲ ನಮಸ್ಕರಿಸಿ ಕೈಕೆಗೆ ನಮಸ್ಕರಿಸಬೇಕೆಂದು ನೋಡಲು "ಜನನಿ ಕೈಕೆಯು ಕಾಣದಿರೆ ಲಕ್ಷ್ಮಣನನೀಕ್ಷಿಸಿ..... ಬಲುಬೇಗ ಕರೆಕೊಂಡು ಬಾರಯ್ಯ" ಎನ್ನುತ್ತಾನೆ. ಕೃಷ್ಣಾರ್ಜುನಕಾಳಗದಲ್ಲಿ 'ಗಯನ ಹಗರಣ' ಸುಖಾಂತ್ಯವಾಗಿ ಪರಿಣಮಿಸಿದ್ದಕ್ಕೆ ಧರ್ಮಜ ಪಂಕ್ತಿ ಊಟ ಏರ್ಪಡಿಸುತ್ತಾನೆ. ಅದರಲ್ಲಿ ಭಾಗವಹಿಸಲು ಒಪ್ಪದ ಕೃಷ್ಣ :

"ಅಳಿಯ ತಂಗಿಯರಮ್ಮ ನಿಳಯದೊಳಗೆ ಬಿಟ್ಟು ।
ಇಳೆಯೊಳು ಮತವಲ್ಲ ಕೇಳು"

ಎಂದು ಹೇಳಿ ಅವರು ಬಂದನಂತರವೇ ಸಡಗರದಲ್ಲಿ ಪಾಲ್ಗೊಳ್ಳುತ್ತಾನೆ. ದಾಯಾದಿ ಮಾತ್ಸರ್ಯವೆಷ್ಟಿದ್ದರೂ ಕೌರವ ಹಾಗೂ ಅವನ ಕಡೆಯವರು ಪಾಂಡವರು ನಡೆಸುವ ರಾಜಸೂಯದಲ್ಲಿ ಪಾಲ್ಗೊಳ್ಳುತ್ತಾರೆ. ಹೀಗೆ ನಮ್ಮ ಪ್ರಸಂಗಕಾರರು ಕುಟುಂಬದ ರೀತಿರಿವಾಜುಗಳಿಗೆ ಬೆಲೆ ಕೊಟ್ಟದ್ದನ್ನು ಅರಿಯಬಹುದು.

ಕುಟುಂಬದಲ್ಲಿ ಹೆಣ್ಣಿನ ಸ್ಥಾನಮಾನ :

ನಮ್ಮ ಗ್ರಾಮೀಣ ಕುಟುಂಬವ್ಯವಸ್ಥೆಯಲ್ಲಿ ಹೆಣ್ಣಿನ ಸ್ಥಾನ ತೀರ ಶೋಚನೀಯವಾದದ್ದು. ಆಕೆ ಪಡುವ ಬವಣೆಗಳು, ಕಷ್ಟಸಂಕಷ್ಟಗಳು ಕಡಿಮೆಯೇನಲ್ಲ. ಇದನ್ನು ಕಂಡ ಯಕ್ಷಗಾನ ಕವಿಗಳು ತಮ್ಮ ಸ್ತ್ರೀಪಾತ್ರಗಳ ಮೂಲಕ ವಿಷಾದದ ಉದ್ಗಾರಗಳನ್ನು ಹೊರಡಿಸಿದ್ದಾರೆ :

ಹೆಣ್ಣು ಜನ್ಮ ಸಾಕು । ಎನ್ನ ಕಂಡು ಮರೆಯಿರೋ । ರಾಮ ರಾಮಾ ॥
ಕಣ್ಣಾರೆ ಕಾಣಬಾರದೆ ಯೆನ್ನ । ವಿಧಿಯೆನ್ನ । ವಿಧಿಯನು । ರಾಮ ರಾಮಾ ॥

ಎಂಬುದರ ಒಳಧ್ವನಿ ಹಲವು ಪ್ರಸಂಗಗಳಲ್ಲಿ ಮಾರ್ಮೊಳಗುತ್ತದೆ. ವಿರಾಟಪರ್ವ, ಸುಭದ್ರಾಕಲ್ಯಾಣ, ಶ್ರೀಕೃಷ್ಣ ಸಂಧಾನ, ಭೀಷ್ಮ ವಿಜಯಗಳೆಲ್ಲೆಲ್ಲಾ ಕುಟುಂಬದ ಕಣ್ಣಾದ ಹೆಣ್ಣು ಕಣ್ಣೀರು ಸುರಿಸುವುದನ್ನು ಕಾಣಬಹುದು. ಅಂತೆಯೇ ಹೆಣ್ಣು ಹೆತ್ತ ತಂದೆಯ ಸ್ಥಿತಿಯು ದೀನವಾದದ್ದೇ ಆಗಿದೆ.

'ಕೃಷ್ಣಾರ್ಜುನರ ಕಾಳಗ'ದಲ್ಲಿ ಬರುವ ಅತ್ತಿಗೆ ನಾದಿನಿಯರ ಜಗಳವೊಂದರ ಮೂಲಕ ಕುಟುಂಬದಲ್ಲಿ ಹೆಣ್ಣಿನ ಸ್ಥಾನಮಾನ ಹಾಗೂ ಆಶ್ರಯಕ್ಕಾಗಿ ತವರಿಗೆ ಬಂದರೆ ಅವಳಿಗೊದಗುವ ದುರವಸ್ಥೆಯನ್ನು ಉದಾಹರಿಸಬಹುದು.

"ರೋಷದಿ ರುಕ್ಮಿಣಿ ಝುಡಿದು ಪೇಳಿದಳಿಂದು । ದೇಶಾಧಿಪರ ಗೆಲಿದು ತಂದ ॥
ಭೂಷಣಂಗಳ ತಂಗಿ ಭಾವಗಿತ್ತುದರಿಂದ । ಲೇಸ ಮಾಡಿದಿರಿಂದು ನಮಗೆ ॥
ವಲ್ಲಭರಿಗೆ ವನವಾಸವು ತೌರ್ಮನೆ । ಯಲ್ಲಿ ನಿನಗೆ ಸಾವಕಾಶ
ಚೆಲ್ವ ಷಡ್ರಸ ಭಕ್ಷ್ಯ ಭೋಜನಂಗಳ ಮಾಡಿ । ನಾಲ್ವರೊಡನೆ ಮಾತ ಕಲಿತೆ ॥"

ಇಲ್ಲಿ ಹಳೆಮಕ್ಕಿ ರಾಮ ತೌರಿಗೆ ಆಶ್ರಯಕ್ಕೆ ಬಂದ ಹೆಣ್ಣಿಗೆ ಮನೆಯ ಅತ್ತಿಗೆಯರು ಆಡುವ ಮಾತುಗಳನ್ನೇ ರುಕ್ಮಿಣಿಯ ಬಾಯಿಂದ ಆಡಿಸಿದ್ದಾನೆ. ಇಲ್ಲಿನ ಮಾತುಗಳು ಸರಳವಾಗಿದ್ದು ವಿವರಣೆ ಬಯಸುವುದಿಲ್ಲ. ದೊಡ್ಡ ಕುಟುಂಬ ಗಳಲ್ಲಿ ಅತ್ತಿಗೆ ನಾದಿನಿಯರು ಜಗಳಾಡುವಂತೆ ರುಕ್ಮಿಣಿ ಸುಭದ್ರೆಯರು ಜಗಳಾಡು ತ್ತಾರೆ. ನಮ್ಮ ಹಳ್ಳಿಗಾಡಿನ ಸಮೀಪದಲ್ಲಿ ಇದೆಲ್ಲಾ ಸಾಮಾನ್ಯವಾದ್ದರಿಂದಲೇ ಜಾನಪದ ಗೀತೆಯೊಂದರಲ್ಲಿ "ಗಂಜೀಯ ಕುಡಿದರೂ ಗಂಡನ ಮನೆ ಲೇಸು । ಅಂದಣದ ಮೇಲೆ ಚೌರಿಯ । ಬೀಸಿದರೂ । ಹಂಗಿನ ತವರ ಮನೆ ಬೇಡ" ಎಂದಿರುವುದು.

ಊಳಿಗಮಾನ್ಯ ವ್ಯವಸ್ಥೆಯ ಪ್ರಭಾವ :

ಹಿಂದಿನ ಕಾಲದ ಭಾರತೀಯ ಕೌಟುಂಬಿಕ ವ್ಯವಸ್ಥೆಯ ಬಗ್ಗೆ ಸಮಾಜಶಾಸ್ತ್ರಜ್ಞ ಇ. ಹೋಚ್ ಹೇಳಿರುವ ಮಾತು ಮನನೀಯವಾಗಿದೆ. "In the old Indian setting the family functions as a kind of clan. Within it, particular degrees of kinship were designated by a variety of special terms much more neatly than is usually the case in the west. Formally mode of address, priorities. Scales of authority were more or less strictly regulated. Though this may have produced an appearance of "personal relationship" it is more likely that communications along these prescribed ones were merely functional meaning the other

family member in his or her role and not as an individual with his or her distinctive features."

ಪ್ರಸಂಗದಲ್ಲಿ ಕಂಡುಬರುವ ಕುಟುಂಬವ್ಯವಸ್ಥೆಯಲ್ಲಿ ಈ ಅಂಶಗಳು ಗೋಚರವಾಗುತ್ತವೆ. ಇಲ್ಲಿನ ಪಾತ್ರಗಳ ನಿಲುವುಗಳು ಯಜಮಾನ್ಯ ಧೋರಣೆಯ ಪರಿಪೋಷಣೆಗೆ ತೀರಾ ಸಹಾಯಕವಾಗಿವೆ. ಊಳಿಗಮಾನ್ಯ ಸಮಾಜದಲ್ಲಿ ಕಂಡುಬರುವ ಕುಟುಂಬ ವ್ಯವಸ್ಥೆಯನ್ನು ನಾವು ಪ್ರಸಂಗಗಳಲ್ಲೂ ಕಾಣಬಹುದು. ಮುಖ್ಯವಾಗಿ ಬಲರಾಮ, ಕಂಸ, ಜರಾಸಂಧ, ಕೌರವ, ರಾವಣ ಮುಂತಾದ ಪಾತ್ರಗಳ ನಡೆನುಡಿಗಳಲ್ಲಿ ಯಜಮಾನಿಕೆಯ ಠೀವಿ ಎದ್ದು ಕಾಣುತ್ತದೆ. ಸಮರ್ಥನೆಗಾಗಿ 'ಸುಭದ್ರಾಕಲ್ಯಾಣ'ದಲ್ಲಿ ಬಲರಾಮನ ಠೀವಿಯನ್ನು ಗಮನಿಸಬಹುದು:

ಬರಲಿಲ್ಲ ರಾಜಮಂದಿರದಿ ಮುರಹರ ನಿಲ್ಲ । ದಿರೆ ಕಾಣುತಾಗ ಹಲಧರನು ।
ಉರಿಮಸಗಿ ಖತಿಯೊಳಬ್ಬರಿಸಿ ರೋಮಂಗಳ । ಲ್ಲಿರುವವರಾರೇಳ್ದು ಇಂತೆಂದ ॥
ಎಲ್ಲಿ ಪೋದನು ಕೃಷ್ಣನಿಲ್ಲ ಕಾಣಿಸನು ಯತಿವಲ್ಲಭರು ಬಂದಿರ್ಪರವರ ।
ಎಲ್ಲವರು ಕಂಡು ಪದಪಲ್ಲವಕೆ ವಂದಿಸಿದ । ರಲ್ಲಿ ಬಂದುದ ಕಾಣೆನವ ॥[16]

ಎಂದು ತಮ್ಮನ ಬಗ್ಗೆ ಬಿರುನುಡಿಯುತ್ತಾನೆ.

ಮುಂದೆ ತಂದೆತಾಯಿಯರಲ್ಲಿ :

ತೆಗೆತೆಗೆ ಪಾಂಡವ ಮುಗಧರ ನಡತೆಯು.....
ವೃದ್ಧರು ನೀವೇನ್ ಮುಂದರಿಯಿ ಪರರಿದ್ದುದ ಪೇಳ್ದರೆ ಕೈಗೊಳಿರಿ ॥
ಬುದ್ಧಿ ಬಂದಂತೆ ನಾ ವಿರಚಿಸುತಿಹೆನದ ।
ಸದ್ದಿಲ್ಲದೆ ನೀವು ಭವನಕೆ ತೆರಳ್ವದು ॥

ಎಂದು ಹೇಳಿ ಕುರುಕುಲ ತಿಲಕನಿಗೆ ಅನುಜೆಯನ್ನು ಕೊಡುವ ನಿರ್ಧಾರವನ್ನು ಖಚಿತಗೊಳಿಸುತ್ತನೆ. "ಶ್ರೀಕೃಷ್ಣ ವಿವಾಹ" ಪ್ರಸಂಗದಲ್ಲೂ ಆತನಾಡುವ ಮಾತಾದ "ಬರದಿರು ಎನ್ನಿದಿರೆಲೆಲೇಕೃಷ್ಣನೆ" ಎಂಬುದು ಇದೇ ಬಗೆಯ ಯಜಮಾನಿಕೆಯ ಧೋರಣೆಯಿಂದ ಕೂಡಿದೆ. 'ಜಗಜಟ್ಟಿ ಜರಾಸಂಧ' ಪ್ರಸಂಗದಲ್ಲಿನ ಜರಾಸಂಧನು ಇದೇ ಬಗೆಯ ದರ್ಪವನ್ನು ತೋರ್ಪಡಿಸುತ್ತಾನೆ.

ಆರ್ಥಿಕ ಸಂಗತಿಗಳು :

ಮೊದಲೇ ಹೇಳಿದಂತೆ ನಮ್ಮ ರಾಮಾಯಣ, ಮಹಾಭಾರತಗಳು, ಎರಡು ಕುಟುಂಬಗಳ ಕತೆಯನ್ನೇ ಹೇಳುತ್ತವೆ. ಮಹಾಭಾರತದ ಮೂಲಬೀಜವಾದ ದಾಯಾದಿ ಮಾತ್ಸರ್ಯವನ್ನು ಅರಿತ ನಮ್ಮ ಕವಿಗಳು ಸಾಕಷ್ಟು ಕಡೆಯಲ್ಲಿ ಈ ವಿಷಬೀಜದ ಪ್ರಭಾವವನ್ನು ಪ್ರಸ್ತಾಪಿಸುತ್ತಾರೆ. ಆ ಸಂದರ್ಭದಲ್ಲೆಲ್ಲ ದಾಯಾದಿಯೊಳಗಣ ಆರ್ಥಿಕ ಅಸಮಾನತೆ ನಮ್ಮ ಕವಿಗಳಿಗೆ ಮುಖ್ಯವಾಗುತ್ತದೆ. ಗಾಂಧಾರಿಯು ಐರಾವತ ನೋಂಪಿಗೆ

ಕರೆಯದೇ ಇದ್ದುದಕ್ಕೆ, ಕುಂತಿ ಮರುಗುವಲ್ಲಿ ಆರ್ಥಿಕ ಅಸಮಾನತೆ ಕುಟುಂಬ ವ್ಯವಸ್ಥೆಯಲ್ಲಿ ಉಂಟುಮಾಡುವ ಪರಿಣಾಮದ ಚಿತ್ರಣವಿದೆ.

ಅಕ್ಕನ । ವರಿಗೆ ನಾ । ನೇನಮಾ । ಡಿದಿನೊ ಶ್ರೀ ।
ಮುಕ್ಕಣ । ಶಿವನೊಬ್ಬ । ಬಲ್ಲ ॥
ಮಕ್ಕಳು । ಕುಡಿವಂಥ । ಹಾಲೊಳು । ವಿಷವ ತಂ ।
ದಿಕ್ಕಿದಂ । ತಾಯ್ತೆನ್ನ । ಬದುಕು ।
ವಾಸಿ ಪಂ । ಥಗಳೆಮ್ಮ । ಮೇಲಿದ್ದ । ರೇನಾಯ್ತು ॥
ಲೇಸು ಕ । ಟ್ಟಿಗೆ ನಮ್ಮ । ಹೊರತೆ ॥
ಭಿನ್ನಗ । ಳುಂಟು ದಾ । ಯಾದ್ಯಮ । ತ್ಸರ ವೆಂಬು ।
ದಿನ್ನೆಂಥ । ಪಾಪಿಯೊ । ಶಿವನೆ ॥
ದೊರೆತನ । ವವರಲ್ಲಿ । ರಾಜ್ಯಕೋ । ಶಗಳಲ್ಲಿ ।
ಸಿರಿ ಸೆರೆ । ಸಿಕ್ಕಿಹ । ಳಲ್ಲಿ ॥
ಪರದೇಶಿಗ । ಳಾದರೂ ಪಾಂಡು ಭೂ । ಪತಿ ಹೋದ ।
ಮರುದಿನ । ಎನ್ನ ಬಾ । ಲಕರು ॥

ಕುಂತಿಯ ಮರುಗುವಿಕೆಯಲ್ಲೆಲ್ಲ ಅನಾಥ ಸ್ತ್ರೀಯೊಬ್ಬಳು ತನ್ನ ಅಂತಸ್ತಿಗೆ ದುಃಖಿಸುವ ಅಸಹಾಯಕತೆ ಇದೆ. ಈ ಪ್ರಸಂಗಗಳಲ್ಲೇ ಬರುವ ಕುಂತಿ ಗಾಂಧಾರಿಯರ ಸಂವಾದದಲ್ಲೂ[19] ಆರ್ಥಿಕ ಅಸಮಾನತೆಯ ಪ್ರಸ್ತಾಪವಿದೆ. ನಮ್ಮ ಹಿಂದಿನ ಸಮಾಜಜೀವನದಲ್ಲಿ ಕುಟುಂಬಗಳ ಗೌರವ ಘನತೆಯನ್ನು ಅಳೆಯುವಾಗ ಆರ್ಥಿಕ ವಿಚಾರದಷ್ಟೇ ಪರಾಕ್ರಮ ಹಾಗೂ ಸತ್ಕಾರ್ಯಗಳನ್ನು ಗಮನಿಸುತ್ತಿದ್ದರು. ತೌರುಮನೆಯವರ ಅಸಹಾಯಕತೆಯನ್ನು ಗಂಡನ ಮನೆಯವರು ಆಡಿಕೊಳ್ಳುವುದು ಇಂದಿಗೂ ಇರುವಂತಹದ್ದೆ. ಸುಧನ್ವನ ಸಹೋದರಿ ಕುವಲೆ :

ಅಣ್ಣ ಕೇಳ ಅಚ್ಯುತಾರ್ಜುನಂಗೆ ರಣದಿ ನೀ ।
ಬೆನ್ನ ತೋರುತ ಹಿಮ್ಮೆಟ್ಟಿದರೆ
ಎನ್ನಯ್ಯ ಮಾವ ಮೈದುನ ನಾದಿನಿಯರ್ಮುಂದೆ
ಇನ್ನೆಂದು ತಲೆಯೆತ್ತಿ ನಡೆವೆ ॥

ಎನ್ನುವ ಮೂಲಕ ಹೆಣ್ಣು ತವರಿನ ಮರ್ಯಾದೆಯ ಬಗ್ಗೆ ಲಕ್ಷ್ಯವಿರಿಸಿಕೊಂಡಿರುವುದನ್ನು ಗಮನಿಸಬಹುದು.

ವಿಶೇಷ ಸಮಾರಂಭಗಳು :

ನಮ್ಮ ಗ್ರಾಮೀಣ ಕುಟುಂಬಗಳಲ್ಲಿ ಎಷ್ಟೇ ಒಳಜಗಳಗಳಿದ್ದರೂ ಒಂದು ವಿಶೇಷ ಕಟ್ಟಳೆಗಳಿಗೆ ಎಲ್ಲರೂ ಒಂದಾಗುತ್ತಾರೆ. ತಮ್ಮ ಅಸಮಾಧಾನಗಳನ್ನು ಮರೆತು ಒಂದೊಂದು ಕಾರ್ಯಗಳನ್ನು ಕೈಗೆತ್ತಿಕೊಂಡು ಸಮಾರಂಭ ಸುಸೂತ್ರವಾಗಿ ನಡೆಯುವಂತೆ

ನೋಡಿಕೊಳ್ಳುತ್ತಾರೆ. ರಾಜಸೂಯಕ್ಕೆ ಬಂದ ಕೌರವರು ಒಂದೊಂದು ಕೆಲಸವನ್ನು ಹಂಚಿಕೊಳ್ಳುವ ಬಗೆ ಹೀಗಿದೆ.

"............ ಬಹುಭೋಜನಧಿಕಾರ ವಾಯುಯುತ್ಸುವಿಗೆ ।
ಭೂಸುರರ ವ್ಯವಹರಣೆಯಾ ವಿಕರ್ಣನೊಳು ।
ದುಶ್ಯಾಸನಗೆ ವೀಳ್ಯ ಗಂಧಾಕ್ಷತೆಗಳು ।
ಆದ್ಯಂತ ನೃಪರಿಗುಡುಗೊರಕರ್ಣ ಕೊಡಲಾ ।
ಮಾದ್ರೇಶ ಋಷಿಗಳಿಗೆ ಕೊಡುವನುಚಿತಗಳ ।
ಸಕಲಮಣಿ ಕಾಂಚನವು ಕೌರವಾಧೀನ ।
ನಕುಲಗವರವರುಚಿತಮಧುರತರ ವಚನ ॥"

ಇದೇ ರೀತಿ ವಿಶೇಷ ಸಮಾರಂಭಗಳಲ್ಲಿ ನಂಟರನ್ನು ಆದರಿಸುವ ಬಗೆ ಕುಟುಂಬದ ಹಿರಿಯನಾದವನು ನಡೆದುಕೊಳ್ಳುವ ರೀತಿ ಅಲ್ಲಿನ ಸಾಮಾನ್ಯ ವ್ಯವಹಾರ ಗಳೆಲ್ಲ ಸಹಜವಾಗಿ ಪ್ರಸಂಗಸಾಹಿತ್ಯದಲ್ಲಿ ಚಿತ್ರಿತವಾಗಿವೆ. ರತಿಕಲ್ಯಾಣ, ರಾಜಸೂಯ, ದ್ರೌಪದೀಸ್ವಯಂವರಗಳಲ್ಲಿ ಕುಟುಂಬದಲ್ಲಿ ನಡೆಯುವ ವಿಶೇಷ ಸಮಾರಂಭಕ್ಕೆ ಸಜ್ಜಾಗುವ ವರ್ಣನೆಯನ್ನು ಕಾಣಬಹುದು.

ದೈನಂದಿನ ವಿಚಾರಗಳು :

ಯಕ್ಷಗಾನ ಪ್ರಸಂಗಸಾಹಿತ್ಯದಲ್ಲಿ ಕಂಡುಬರುವ ದೈನಂದಿನ ವಿಚಾರಗಳು ಮೇಲುನೋಟಕ್ಕೆ ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಈ ದೈನಿಕಗಳ ಮೂಲಕ ನಮ್ಮ ಗ್ರಾಮೀಣ ಸಂಸ್ಕೃತಿಯ ಪರಿಚಯವಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯ ದಲ್ಲೂ ಕೂಡ ಕಾರಂತ ಮಾಸ್ತಿಯಂತಹವರ ಕೃತಿಗಳಲ್ಲಿ ದೈನಂದಿನಗಳ ಮೂಲಕ ಸಂಸ್ಕೃತಿಯ ಒಳನೋಟ ದೊರೆಯುವುದನ್ನು ಇಲ್ಲಿ ನೆನೆಯಬಹುದು. ಹೆಚ್ಚಾಗಿ ಯಕ್ಷಗಾನ ಕವಿಗಳು ಈ ದೈನಂದಿನಗಳ ಮೂಲಕ ಪೌರಾಣಿಕ ಪ್ರಪಂಚಕ್ಕೆ ಸಮಕಾಲೀನ ಬದುಕಿನ ಸಂಬಂಧವನ್ನು ಕಲ್ಪಿಸಿದ್ದಾರೆ. ಸಾಹಿತ್ಯಿಕ ದೃಷ್ಟಿಯಿಂದ ಈ ದೈನಂದಿನಗಳ ಚಿತ್ರಣ ಮುಖ್ಯ. 'ಕುಶಲವರ ಕಾಳಗ'ದಲ್ಲಿ ಪುಷ್ಪವತಿಯಾದ ಸೀತೆ 'ದೂರದಿ ನಿಂತ ರೀತಿಯರಿತ ರಾಮ ಬೇಟೆಯನ್ನು ನಿಲ್ಲಿಸಿ ಹಿಂದಿರುಗುತ್ತಾನೆ.

'ಐರಾವತ'ದಲ್ಲಿ ತಾಯಿಯನ್ನು ಕಾಣದ ಪಾಂಡವರು :

"ಎಂದು ನಾವ । ಬರುವಾಗ । ಮಿಂದು ಮ । ಡಿಯನುಟ್ಟು ।
ಚಂದದೊ । ಳಡಿಗೆಯ । ಮಾಡಿ.......॥
ಕರೆದರು । ಣ್ಣಲು ಬರ । ಲಿಲ್ಲ ವೆಂ । ದಿದಿರ್ ನೋಳ್ಪ ।
ಳಿಂದೇತ । ಕಿಲ್ಲ ಈ । ಗೃಹದಿ........" ॥

ಎಂದು ಅರಸುತ್ತಾರೆ. ನೊಂದು ಮಲಗಿದ ತಾಯಿಯಲ್ಲಿ ಅವರು

"ಹಸಿದು ಬಂದೆವು ನಾವೆ । ಲ್ಲ...... ಮ । ಧ್ಯಾಹ್ನದ ।
ಬಿಸಿಲೊಳು । ದಣಿದೆವ । ಮ್ಮ........ । .... ॥
ಬಿಸಿನೀರ । ನೆರೆ ನಮ । ಗೆ............. ಬ । ಟ್ಟಲನಿಟ್ಟು ।
ಮೊಸರನ್ನ । ಬಡಿಸು ತಾ । ಯೆ......... । ....॥

ಎನ್ನುವಲ್ಲಿ ಮಕ್ಕಳ ಲಾಲನೆ, ಪೋಷಣೆಯಲ್ಲಿ ತಾಯಿ ಆರೈಕೆಯ ವಿವರವಿದೆ. ಇದೇ ರೀತಿ 'ಕೃಷ್ಣಾರ್ಜುನ ಕಾಳಗ'ದಲ್ಲಿ ಮನೆಗೆ ಬಂದ ಸೌಭದ್ರೆಯನ್ನು ಅಕ್ಕ ದ್ರೌಪದಿ ಉಪಚರಿಸುವ ಬಗೆಯನ್ನು ಕಾಣಬಹುದು :

"ಶಾಲೆ ಸೀರೆಯನುಡಿಸಿ ।
ಸೋಲ್ಮುಡಿಗೆ ಪೂ । ಮಾಲೆ ಜಲ್ಲಿಯ ಮೂಡಿಸಿ ॥
ನೀಲ ಕಸ್ತೂರಿ ಚಂದ್ರಕುಂಕುಮಗಳನ್ನಿಟ್ಟು ।
ಕೋಮಲ ತರದ ತಾಂಬುಲಗಳನು ಕೊಟ್ಟು" ॥

ತಂಗಿಯನ್ನು ಆದರಿಸುವಲ್ಲಿನ ಅಕ್ಕರೆ ದೊಡ್ಡದು. ಮನೆಗೆ ಬಂದವರನ್ನು ಪ್ರೀತಿಯಿಂದ ಕರೆದು ಆದರಿಸುವ, ಸತ್ಕರಿಸುವ ನಮ್ಮ ಕುಟುಂಬಗಳ ಮಾದರಿಯನ್ನು ಇಲ್ಲಿ ಗುರುತಿಸಬಹುದು. ಈ ಬಗೆಯ ವಿವರಗಳ ಮೂಲಕ ಪ್ರಸಂಗ ಸಾಹಿತ್ಯ ನಮ್ಮ ಸಂಸ್ಕೃತಿಯ ಒಳನೋಟವನ್ನು ಪರಿಚಯಿಸುತ್ತದೆ.

ದೈವದೇವರುಗಳು :

ಕರಾವಳಿ ಜಿಲ್ಲೆಗಳಲ್ಲಿ ಕುಟುಂಬದ ದೈವಗಳ ಮೇಲೆ, ಮನೆಯ ದೇವರುಗಳ ಮೇಲೆ ಅಪಾರ ನಂಬಿಕೆ. ವಿಶೇಷ ಸಮಾರಂಭಗಳ ಮೊದಲು ಮನೆಯ ದೈವದೇವರುಗಳ ಪ್ರಾರ್ಥನೆ ಸಾಮಾನ್ಯ. ಕುಟುಂಬದ ಹಿರಿಯರು ಈ ಬಗ್ಗೆ ವಿಶೇಷ ಗಮನ ಕೊಡುತ್ತಾರೆ. ಪ್ರಸಂಗದ ರಾಮ ಪಟ್ಟಾಭಿಷೇಕಕ್ಕೆ ಸಿದ್ಧನಾಗುವ ಮೊದಲು "ತನ್ನಯ ಮನೆಯ ದೇವರುಗಳ ಬೇಡಿ ಗುರುಹಿರಿಯರಿಗೆ ತಲೆಬಾಗುತ್ತಾನೆ" ಯಾವುದೇ ವಿಶೇಷ ಕಾರ್ಯದ ಮೊದಲು ವಿಘ್ನೇಶನ ಪೂಜೆಯಂತು ನಮ್ಮಲ್ಲಿ ರೂಢಿಯಾಗಿದೆ. 'ಸೇತುಬಂಧನ'ದಲ್ಲಿ ಸಮುದ್ರಕ್ಕೆ ಸೇತುವೆ ಕಟ್ಟಲೆಂದು ತಂದು ಹಾಕಿದ ಕಲ್ಲುಗಳನ್ನು ಮೀನುಗಳೇ ನುಂಗಿಹಾಕುತ್ತವೆ. ಕೊನೆಗೆ ಹೇರಂಬನ ಪ್ರಾರ್ಥನೆ ಮಾಡಿ ವಿಘ್ನಗಳನ್ನು ಪರಿಹರಿಸೆಂದು ಕೋರಿಕೊಂಡ ನಂತರ ವಿಘ್ನಗಳು ಬರುವುದಿಲ್ಲ. ಐರಾವತದಲ್ಲಿ ಕುಂತಿ ಗೋಳಾಡುತ್ತಿರುವುದನ್ನು ಕಂಡ ಪಾಂಡವರು ಇದು ಭೂತ, ದೈವಗಳ ಉಪದ್ರವ ಇರಬಹುದೆಂದು ಭ್ರಮಿಸುತ್ತಾರೆ.

ನಾಡಿನ ಭೂತಗಳು...... ನಿಮ್ಮನ್ನು ಸೋಂಕಿ ।
ಪೀಡಿಸುತ್ತೈದವೇ ನಮ್ಮ ।
ಮೂಢ ಬೊಮ್ಮ ರಕ್ಕಸಗೆ........ ಹರಕೆಯ ಕೊಡದೆ ।
ಕಾಡುತ್ತಲಿಹುದೇ ನಮ್ಮ ।

ದಾಯಾದ್ಯರ್ನಮ್ಮ ಕಂಡು.......... ಸೈರಿಸದಲೆ ।
ಮಾಯ ಮಂತ್ರ ಮಾಡಿದರೊ ।
ಪ್ರಿಯದ ಮನೆ ದೇವರು....... ಮನಸು ನೊಂದು ।
ಕಾಯವ ದಣಿಸುವರೊ ॥

ದಕ್ಷಿಣ ಕನ್ನಡ ಜಿಲ್ಲೆಯ ಕುಟುಂಬಗಳಲ್ಲಿ ಹೆಚ್ಚಾಗಿ ಕಂಡುಬರುವ ನಂಬಿಕೆಗಳೇ ಈ ಪದ್ಯಭಾಗದಲ್ಲಿ ಬಂದಿವೆ. ನಮ್ಮ ಕೌಟುಂಬಿಕ ಜೀವನದ ಬಗ್ಗೆ ಒಳನೋಟ ನೀಡುವ ಈ ಪದ್ಯದಲ್ಲಿ ಆಪತ್ತು ಅಡರಿದಾಗ ನಮ್ಮ ಜನತೆ ಯೋಚಿಸುವ, ಸ್ಪಂದಿಸುವ ಬಗೆಯನ್ನು ಕಾಣಬಹುದು. ಪ್ರಸಂಗಸಾಹಿತ್ಯದಲ್ಲಿ ಈ ರೀತಿಯ ಉದಾಹರಣೆಗಳು ಸಾಕಷ್ಟು ದೊರೆಯುತ್ತವೆ.

ಹೀಗೆ ಚಿತ್ರಿತವಾಗಿರುವ ಕೌಟುಂಬಿಕ ವ್ಯವಸ್ಥೆಯ ಮೂಲಕ ನಮ್ಮ ಪ್ರಸಂಗಕಾರರು ಪ್ರಸಂಗಗಳು ಪ್ರಸ್ತುತವಾಗುವಂತೆ ಮಾಡಿದ್ದಾರೆ. ಅವರು ಆರಿಸಿಕೊಂಡ ವಸ್ತುಗಳು ಮಹಾಕಾವ್ಯ, ಪುರಾಣಗಳಿಗೆ ಸಂಬಂಧಿಸಿದ್ದು. ರಂಗದಲ್ಲಿನ ಪಾತ್ರಗಳು ಪೌರಾಣಿಕ ಲೋಕದವುಗಳಾದರೂ ಅವುಗಳ ನಡವಳಿಕೆ, ಮನೋಧರ್ಮ ಸ್ವಭಾವಗಳಲ್ಲೆಲ್ಲ ಸಮಕಾಲೀನ ಅಂಶಗಳನ್ನು ತರಲಾಗಿದೆ. ಇದರಿಂದಾಗಿಯೇ ಎಷ್ಟೋ ಪಾತ್ರಗಳು ಜನಸಾಮಾನ್ಯರ ಪಡಿಯಚ್ಚಿನಂತೆ ಕಾಣಿಸುತ್ತವೆ. ಯಕ್ಷಗಾನದ ಪಾತ್ರಗಳು ನಮ್ಮ ಬದುಕಿನಲ್ಲಿ ಸೇರಿಹೋಗಿರಲು ಇದೂ ಒಂದು ಕಾರಣವಾಗಿರಬಹುದು. ಗ್ರಾಮೀಣ ಸಂಸ್ಕೃತಿಯ ಪ್ರತಿನಿಧಿಗಳಂತಿರುವ ವಿಶಿಷ್ಟ ಬಗೆಯ ಪಾತ್ರಗಳನ್ನು ನೀಡಿರುವುದು ಪ್ರಸಂಗಸಾಹಿತ್ಯದ ವೈಶಿಷ್ಟ್ಯವಾಗಿದೆ.

ನಮ್ಮ ಸಂಸ್ಕೃತಿಯ ಬೇರುಗಳು ಅಡಗಿರುವುದು ಹಳ್ಳಿಗಳಲ್ಲಿ. ಗ್ರಾಮೀಣ ಜನರ ಜೀವನದ ವಿವೇಕ, ಸತ್‌ಸದ್ವಿಚಾರ, ಧರ್ಮಪೂರಕವಾದ ನಡೆನುಡಿಗಳ ಹಿಂದೆ ಮಹಾಕಾವ್ಯಗಳ, ದರ್ಶನಗ್ರಂಥಗಳ ಸಾರವಿದೆ. ಈ ಸಾರವನ್ನು ದೊರಕಿಸಿಕೊಟ್ಟವರು ಪ್ರಸಂಗಕಾರರು. ಗುರುಹಿರಿಯರಲ್ಲಿ ಗೌರವ, ಆದರ, ವಿಧೇಯತೆ, ನೆರವು, ಸೇವಾಮನೋಭಾವ, ಮೈತ್ರಿ, ವಿನಯವೇ ಮುಂತಾದ ಒಳ್ಳೆಯ ಗುಣ ಸಮಾಜದಲ್ಲಿ ಬೇರೂರಲು, ಬೆಳೆಯಲು ಜನತೆಯ ಸಂಸ್ಕೃತಿ ಸಂವರ್ಧನೆ ಮಾಡಲು ಈ ಪ್ರಸಂಗ ಕೃತಿಗಳು ಸಹಾಯಕವಾಗಿವೆ. ಈ ಕಾರಣಕ್ಕಾಗಿಯೇ ಸಂಸ್ಕೃತಿಯ ಅಧ್ಯಯನದಲ್ಲಿ ಪ್ರಸಂಗ ಕೃತಿಗಳು ಬಹುಮುಖ್ಯವಾಗುತ್ತವೆ. ಇಂದು ನಮಗೆ ತೀರಾ ಅಗತ್ಯ ಇರುವುದು ಈ ನೆಲಸಂಸ್ಕೃತಿ 'ನೇಟಿವ್ ಕಲ್ಚರ್'ನ ಧೋರಣೆಗಳೇ ಆಗಿವೆ. ನಮ್ಮ ನೇಟಿವ್ ಕಲ್ಚರ್‌ನಲ್ಲಿ ಅನೇಕ ಮಿತಿಗಳಿದ್ದರೂ ಅದರಲ್ಲಿ ಅಡಗಿರುವ ಸತ್ವಶಾಲಿ ಅಂಶಗಳು ವರ್ತಮಾನದ ಬದುಕಿಗೆ ಚೈತನ್ಯವನ್ನು ಕೊಡಬಲ್ಲವು. ಭಾರತೀಯ ಬದುಕನ್ನು ನಿರಂತರ ಹಸಿರು ಮಾಡುವ ಸೆಲೆ ಜೀವನಧಾತು ನಮ್ಮ ಜಾನಪದ ಸಂಸ್ಕೃತಿಯಲ್ಲಿ ಅಡಗಿದೆ. (ಗಾಂಧೀಜಿ ಕೂಡ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದೇ ಮಾತುಗಳನ್ನು ಆಡಿರುವುದು ಗಮನೀಯ. ಹಾಗೆ ನೋಡಿದರೆ ಇಂದು

ಮೂರನೆಯ ಜಗತ್ತಿನ ಅಭಿವೃದ್ಧಿಯಲ್ಲಿ ಜಾನಪದ ಸಂಸ್ಕೃತಿಯ ಪುನರುತ್ಥಾನ ಅವಶ್ಯವೆನಿಸುತ್ತದೆ. ಚೀನಾದಂತಹ ದೇಶ ಹೊರಗಿನ ಪ್ರಭಾವಕ್ಕೆ ಒಳಗಾಗದೆ ಪ್ರಗತಿ ಸಾಧಿಸಿರುವುದನ್ನು ನೆನೆಯಬಹುದು.) ಈ ಹಿನ್ನೆಲೆಯಿಂದ ಯಕ್ಷಗಾನದಂತಹ ಜೀವಂತ ಪ್ರದರ್ಶನ ಕಲೆಗೆ ನೆಲೆಯಾಗುವ ಪ್ರಸಂಗಸಾಹಿತ್ಯವು ಅತ್ಯಂತ ಪ್ರಸ್ತುತ ವೆನಿಸುತ್ತದೆ.

ಈ ಪ್ರಬಂಧದಲ್ಲಿ ನಮ್ಮ ನೆಲಸಂಸ್ಕೃತಿ 'ನೇಟಿವ್ ಕಲ್ಚರ್'ನ ಒಂದು ಅಂಶವಾದ ಕೌಟುಂಬಿಕ ವ್ಯವಸ್ಥೆಯ ಬಗ್ಗೆ ಹಾಗೂ ಅಲ್ಲಿ ಅಂತರ್ಗತವಾದ ಜೀವನಮೌಲ್ಯಗಳ ಬಗ್ಗೆ ಹೆಚ್ಚು ಗಮನವನ್ನು ಕೊಡಲಾಗಿದೆ. ಪ್ರಸಂಗಕಾರರು ಕೃತಿಗಳ ಮೂಲಕ ಕಟ್ಟಿಕೊಟ್ಟ ಜನಸಾಮಾನ್ಯರ ಮನೋಧರ್ಮಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಇವುಗಳು ಗ್ರಾಮೀಣ ಸಂಸ್ಕೃತಿಯನ್ನು ಅರಿಯುವಲ್ಲಿ ಇತ್ಯಾತ್ಮಕ ಅಂಶಗಳಾಗುವುದರಿಂದ ಆ ದಿಸೆಯಲ್ಲಿ ಪರಿಭಾವಿಸಲಾಗಿದೆ. ಪ್ರದರ್ಶನಗಳ ಮೂಲಕ ಇಂದಿಗೂ ಜೀವಂತವಾಗಿರುವ ಪ್ರಸಂಗಸಾಹಿತ್ಯ ಸಾಮಾನ್ಯರ ಬದುಕಿಗೆ ತೀರ ಸಮೀಪವಾಗಿದ್ದು ಜೀವಶಕ್ತಿಯನ್ನು ಹೊಂದಿದೆ. ದೇಸಿಸಾಹಿತ್ಯದ ಮಹತ್ವದ ಘಟಕವಾದ ಯಕ್ಷಗಾನ ಸಾಹಿತ್ಯದ ಬಗ್ಗೆ ಇರುವ ಅವಜ್ಞೆಯನ್ನು ಹೋಗಲಾಡಿಸುವುದು, ಆ ಮೂಲಕ ಪ್ರಸಂಗಸಾಹಿತ್ಯದ ಅಧ್ಯಯನ ವಿಶ್ಲೇಷಣೆಗೆ ಗಮನವೀಯುವ ಕಾಲ ಬಂದಿದೆ. ಸಾಹಿತ್ಯ ಚರಿತ್ರೆಕಾರರು, ವಿಮರ್ಶಕರು, ಕಾವ್ಯ ಅಭ್ಯಾಸಿಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸ ಬೇಕೆಂಬುದೇ ನನ್ನ ವಿನಮ್ರ ವಿನಂತಿ.

■

ಯಕ್ಷಗಾನ ಪ್ರಸಂಗಗಳ ಸಾಹಿತ್ಯಕ ಮಹತ್ವ

ಯಕ್ಷಗಾನವು ದೃಶ್ಯ ರೂಪಕವಾಗಿದ್ದು ರಂಗತಂತ್ರದ ಅಂಶಗಳು ಪ್ರಧಾನವಾಗಿರುತ್ತವೆ. ಈ ಕಾರಣ ಪ್ರಸಂಗಕಾರನ ಹೊಣೆ ಅಧಿಕ. ಕಾವ್ಯಾನುಭೂತಿಯೊಂದಿಗೆ ರಂಗತಂತ್ರ ಸಮನ್ವಯವನ್ನು ಪ್ರಸಂಗಗಳಲ್ಲಿ ರೂಢಿಸಬೇಕಾಗುತ್ತದೆ. ಶಿಷ್ಟ ಓದುಗರಿಗಿಂತ ಮುಗ್ಧ ಪ್ರೇಕ್ಷಕ ಇಲ್ಲಿ ಹಿರಿದಾಗುತ್ತಾನೆ. ಇದರಿಂದಾಗಿ ಶಿಷ್ಟ ಸಾಹಿತ್ಯದಲ್ಲಿ ಮುಖ್ಯವಾಗುವ ಧ್ವನಿ, ವಕ್ರೋಕ್ತಿ, ಪ್ರತಿಮೆ ಮುಂತಾದವುಗಳ ಬದಲಿಗೆ ಸರಳತೆ, ನೇರ ನಿರೂಪಣೆ, ಸ್ವಭಾವೋಕ್ತಿಗಳೇ ಮೇಲುಗೈಯನ್ನು ಪಡೆಯುತ್ತವೆ. ಪ್ರಸಂಗಗಳಲ್ಲಿ ಪದ್ಯಗಳು ಸರಳವಾಗಿರಬೇಕು. ಕಿವಿಗೆ ಬಿದ್ದೊಡನೆ ಅರ್ಥ ಸ್ಫುರಿಸುವಂತಿರಬೇಕು. ನುಡಿಕಟ್ಟುಗಳು, ಗಾದೆ ಮಾತುಗಳು, ವಿಶಿಷ್ಟ ಪ್ರಚಲಿತ ಪದಗಳ ಬಳಕೆಯಿಂದ ಸಂವಹನ ಸುಲಭವಾಗುತ್ತದೆ.

ಉತ್ತಮ ಪ್ರಸಂಗಗಳಲ್ಲಿ ಸರಳತೆ, ಸುಲಭತೆಗೆ ಪಟ್ಟಕಟ್ಟಲಾಗಿದೆ. ಕೃಷ್ಣಾರ್ಜುನರ ಕಾಳಗ, ಐರಾವತ, ಪಂಚವಟಿ, ಚೂಡಾಮಣಿ, ಸುಭದ್ರಾ ಕಲ್ಯಾಣ, ಅಂಗದ ಸಂಧಾನ ಮುಂತಾದೆಲ್ಲ ಪ್ರಸಂಗಗಳಲ್ಲಿ ಸರಳತೆಯೇ ಪ್ರಧಾನ. ಇಲ್ಲಿ ಭಾಗವತ ಹಾಡುವಾಗಲೇ ಪದ್ಯದ ಅರ್ಥ ಸ್ಫುರಿಸಿ ಭಾವ ಹೊಮ್ಮುತ್ತವೆ. ಸರಳತೆಗೆ ದೂರವಾದ ಪ್ರಸಂಗಗಳು ಕಾಲ ಪ್ರವಾಹದಲ್ಲಿ ಕೊಚ್ಚಿ ಹೋದ ಉದಾಹರಣೆಗಳು ಸಾಕಷ್ಟಿವೆ.

ಯಕ್ಷಗಾನ ಪ್ರದರ್ಶನಗಳು ಆಕರ್ಷಕವಾಗುವಲ್ಲಿ ಉತ್ತಮ ಸಂಭಾಷಣೆಗಳಿರಬೇಕು. ಪ್ರಸಂಗಸಾಹಿತ್ಯದಲ್ಲಿ ಇದಕ್ಕೆ ಅವಕಾಶವನ್ನು ಪ್ರಸಂಗಕಾರನು ಸೃಷ್ಟಿಸಬೇಕು. ಅದರಲ್ಲೂ ತಾಳಮದ್ದಲೆಯಲ್ಲಿ ಒಂದು

ಪ್ರಸಂಗ 'ಸೈ' ಎನ್ನಿಸಿಕೊಳ್ಳಲು ಆಶುವಾಚನಗಳ ಮೂಲಕ ಸಂಭಾಷಣೆ ಬೆಳೆಯುವ ಅವಕಾಶದ ಸೃಷ್ಟಿಯಾಗಿರಬೇಕು. ಯಕ್ಷಗಾನ ಕವಿಯಾದವನು ಅವನೇ ವಾದ-ವಿವಾದವನ್ನು ತರಬೇಕಾಗಿಲ್ಲ. ಬದಲು ವಾದದ ಹುಟ್ಟಿಗೆ ಕಾರಣವಾಗುವ ಅಂಶಗಳನ್ನು ಪದ್ಯದಲ್ಲಿ ತರಬೇಕು. ನಮ್ಮ ಅನೇಕ ಹಿರಿಯ ಯಕ್ಷಗಾನ ಕವಿಗಳಿಗೆ ಇದು ಕರಗತವಾಗಿದೆ. ರಸಪುಷ್ಟಿಯಾಗುವ ಸಂಭಾಷಣೆಗಾಗಿ ಆಧ್ಯಾತ್ಮಿಕ ವಿಚಾರಗಳ ಸಂಘರ್ಷವೋ, ವೀರರಿಬ್ಬರ ವಾಕ್‌ಪ್ರಹಾರದ ಹೊಡೆತವೋ, ತಾಯಿಮಕ್ಕಳ ವಾತ್ಸಲ್ಯ ಪುಟಿಯುವ ಹೃದಯಸ್ಪರ್ಶಿ ಮಾತುಗಳೋ, ಸತಿಪತಿಯರ ಶೃಂಗಾರಭರಿತ ಲಲ್ಲೆಯೋ ಮುಂತಾದವುಗಳನ್ನು ಕವಿ ತರುತ್ತಾನೆ. ಅಭಿಮನ್ಯು ಕಾಳಗದಲ್ಲಿ ಬರುವ

"ಏತಕಿಂಥ ಬುದ್ಧಿ ಬಂತು ಕಂದ ಕಂದ ನಿನಗೆ
ಪ್ರೀತಿಯೇನೋ ಮರಣದೊಸಗೆ ಕಂದ ಕಂದ"

ಎಂದು ಪ್ರಾರಂಭವಾಗುವ ಪದ್ಯಭಾಗದಲ್ಲಿ ಕವಿ ಸುಭದ್ರೆಯ ಮಾತನ್ನು ವಿಲಂಬಿತಗತಿಯ ರಾಗ ಕಾಂಭೋಜ ಏಕತಾಳದಲ್ಲಿ ತಂದಿದ್ದರೆ ಅಭಿಮನ್ಯುವಿನ ಮಾತನ್ನು ದುಡುಕಿನ ರಾಗ ಕೇದಾರ ಗೌಳ ಅಷ್ಟತಾಳದಲ್ಲಿ ತಂದಿದ್ದಾನೆ. ಎರಡು ಭಾವನೆಗಳನ್ನು ವಿಭಿನ್ನರಾಗಗಳಲ್ಲಿ ಮುಂದುವರಿಸಿಕೊಂಡು ಹೋಗುವ ತಂತ್ರಗಾರಿಕೆ ಇಲ್ಲಿ ಇದೆ.

ಭಾವನಾತ್ಮಕ ಅಂಶಗಳು ಜನಪದರಲ್ಲಿ ಹಾಗೂ ಜಾನಪದ ಕಲೆಗಳಲ್ಲಿ ವಿಶಿಷ್ಟ ಮೆರುಗನ್ನು ಪಡೆಯುತ್ತವೆ. ಪ್ರಸಂಗಸಾಹಿತ್ಯವು ಜನಪದರ ಸಾಂಸ್ಕೃತಿಕ ದಾಖಲೆಯಾದ್ದರಿಂದ ಪ್ರಸಂಗಗಳ ಪದ್ಯಗಳು ಹೆಚ್ಚಾಗಿ ಹೃದಯಸ್ಪರ್ಶಿಯಾಗಿದ್ದು ಭಾವಸ್ಫುರಣೆಗೆ ಕಾರಣವಾಗುತ್ತವೆ. ಮೇಲ್ನೋಟಕ್ಕೆ ಸಾಮಾನ್ಯವಾಗಿ ಕಂಡರೂ ಆಟದಲ್ಲಿ ಈ ಭಾಗಗಳು ರಸಘಟ್ಟಿಯಾಗಿರುತ್ತವೆ. ಇದಕ್ಕೆ ಉತ್ತಮ ಉದಾಹರಣೆಗಳೆಂದರೆ;

ಕೃಷ್ಣಸಂಧಾನದ – "ನಡೆಯಲೋ ಮುರಾರಿ ಸುಖದೊಳು......."
ರಾಜಸೂಯದ – "ಈತನಾರೆಂದರಿವಿರ್ಸೈ ನಮ್ಮಾತ ಮೊಮ್ಮನು ನನಗೆ"
ರಾಮಪಟ್ಟಾಭಿಷೇಕದ – "ಚಿತ್ತವಿಸೈ ದೇವ ಚಿತ್ತದ ವ್ಯಥೆಯ.........."
ಕರ್ಣಾರ್ಜುನ ಕಾಳಗದ – "ಯಾದವೋತ್ತಮ ಲಾಲಿಸಿ ಕೇಳು.........."
ಭೀಷ್ಮ ಪರ್ವದ – " ಶ್ರೀಮನೋಹರ ಸ್ವಾಮಿ ಪರಾಕು...."

ಇಲ್ಲೆಲ್ಲಾ ತತ್ಕಾಲೀನವಾದ ಭಾವವೊಂದು ಉದಿಸಿ ಪ್ರೇಕ್ಷಕನಲ್ಲಿ ಸ್ಥಾಯಿಯಾರ ರಸೋತ್ಕರ್ಷ ಉಂಟು ಮಾಡುವುದನ್ನು ಕಾಣಬಹುದು. ಯಕ್ಷಗಾನ ಸಾಹಿತ್ಯದ ಚರ್ಚೆ ಮಾಡುವಾಗೆಲ್ಲ ಇಂತಹ ರಸಜಾಗರಗಳು ಗಣನೀಯವಾಗುತ್ತವೆ. ಇವುಗಳು ಕಾಲದ ಪರಿವೆಯಿಲ್ಲದೆ ಪ್ರೇಕ್ಷಕನಲ್ಲಿ ಬೇರೂರಿರುವುದನ್ನು ಕಂಡಾಗ ಸಾಹಿತ್ಯಕವಾಗಿ ಇವು ಮಹತ್ವದೆನ್ನಬೇಕಾಗುತ್ತದೆ. ಈ ದೃಷ್ಟಿಯಿಂದ ಶಿಷ್ಟಸಾಹಿತ್ಯದ ಮಾನದಂಡಗಳು ಪ್ರಸಂಗ ಸಾಹಿತ್ಯದ ಬೆಲೆ ಕಟ್ಟುವಲ್ಲಿ ಉಪಯುಕ್ತವಾಗುವುದಿಲ್ಲ.

ಭಾವಸ್ಫುರಣೆಯ ಆದರ್ಶಗಳನ್ನು ಜನಸಾಮಾನ್ಯರಿಗೆ ತಟ್ಟುವ ರೀತಿಯಲ್ಲಿ ಹೇಳಬೇಕಾದ ಜಾಣ್ಮೆ ಯಕ್ಷಗಾನ ಕವಿಗೆ ಇರಬೇಕಾಗುತ್ತದೆ. ಪಂಚವಟಿ ವಾಲಿ ಸಂಹಾರದಲ್ಲಿ ಬರುವ "ಅಡವಿ ಗಿಡಮರ ಕಲ್ಲುಗಳು ನೋಡೆ ಅರಸಿನ ಪುಡಿಯಂತೆ ತೋರುತ್ತಿದೆತಮ್ಮಾ" ಎಂಬ ಪದ್ಯದಲ್ಲಿ ಕವಿ ಆಡುಮಾತಿನ ಮೂಲಕ ರಾಮನು ಪಡುವ ದುಃಖದ ವರ್ಣನೆಯನ್ನು ಸಹಜವಾಗಿ ಬಣ್ಣಿಸಿದ್ದಾನೆ. ಮುಂದೆ ಇದೇ ಕವಿ ಅದೇ ರೀತಿ "ಅಂಥ ಚೆಲುವೆಯೇನೆ ಜಾನಕಿದೇವಿ...... ತೋರುವಳೇನೆ" (ಪುಟ 136) ಎಂದು ಶಂಕರಾಭರಣ ಅಷ್ಟತಾಳದಲ್ಲಿ ತಂದಿರುವ ಹಾಡು ಪ್ರತಿಭಾ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಪಲ್ಲವಿಯ ವಿಸ್ಮಯಕ್ಕೆ ಅನುಪಲ್ಲವಿಯ ಪ್ರಶ್ನೆಗಳು ಪೋಷಕವಾಗಿವೆ. ಪುಂಖಾನುಪುಂಖವಾದ ಭಾವಗಳು ಇಲ್ಲಿ ಹೊಮ್ಮುತ್ತವೆ. ಸೊಲ್ಲಿನ ತರಂಗಿತ ರೂಪದಿಂದಾಗಿ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ. ಈ ಬಗೆಯ ಹಾಡುಗಳು ಯಕ್ಷಗಾನ ಸಾಹಿತ್ಯದ ಅಮೂಲ್ಯ ಸಂಪತ್ತಾಗಿವೆ.

ವಸ್ತುದೃಷ್ಟಿಯಿಂದ ಯಕ್ಷಗಾನ ಪ್ರಸಂಗಗಳು ಕನ್ನಡ ಸಾಹಿತ್ಯ ಕೃತಿಗಳಿಗೆ ಋಣಿಯಾಗಿವೆ. ನಮ್ಮ ಶಿಷ್ಟ ಸಾಹಿತ್ಯದ ಮೌಲಿಕ ಕೃತಿಗಳನ್ನು, ಅಲ್ಲಿ ಸಾರವಾದ ಜೀವನ ಮೌಲ್ಯಗಳನ್ನು ಪ್ರಸಂಗಕಾರರು ಜನತೆಗೆ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಈಚಿನ ಪ್ರಸಂಗಗಳು ಇದಕ್ಕೆ ಹೊರತಾಗಿಲ್ಲ. ಇದೊಂದು ಬಗೆಯ ಸಂಸ್ಕೃತಿಯ ಸಂವರ್ಧನೆಯ ಕಾರ್ಯವಾಗಿದೆ. ಉತ್ಕೃಷ್ಟ ಸಾಹಿತ್ಯ ನಾಡಿಗೆ ತನ್ನನ್ನು ಒಡ್ಡಿ ಕೊಳ್ಳುವುದರಲ್ಲಿ ಅನೇಕ ಸ್ತರಗಳಿರುತ್ತವೆ. ವಿದ್ಯಾವಂತ ಸಹೃದಯರಲ್ಲಿ ಅದು ಸಂವಹಿಸಲು ಉಪಕ್ರಮಿಸಿ ತನ್ನ ವಲಯವನ್ನು ವಿಸ್ತರಿಸುತ್ತಾ ಹೋಗುತ್ತದೆ. ಮುಂಬರುವ ಕವಿಗಳ ಮೇಲೂ ಒಮ್ಮೊಮ್ಮೆ ಶ್ರೇಷ್ಠ ಸಾಹಿತ್ಯ ಪ್ರಭಾವ ಬೀರಿ ಇಣುಕುವುದೂ ಉಂಟು. ಅದೇ ರೀತಿ ಬೇರೆ ಪ್ರಾಕಾರಕ್ಕೆ ರೂಪಾಂತರ ಹೊಂದಿ ಚಿಗುರೊಡೆಯುತ್ತಾ, ಬೆಳೆಯುತ್ತಾ ಹೋಗುತ್ತದೆ. ಹೀಗೆ ವಿಸ್ತರಿಸುವ, ಪ್ರವೃದ್ಧಿಸುವ, ಆ ಮೂಲಕ ಜನಾಂಗಕ್ಕೆ ಪ್ರವಹಿಸುವ ಅಂತಃಪ್ರವಾಹ ಕ್ರಿಯೆಯು (Raspiration) ಸಾಹಿತ್ಯಕ್ಕೆ ತೀರಾ ಅಗತ್ಯ. ಯಕ್ಷಗಾನ ಪ್ರಸಂಗಗಳು ಇಂತಹ ಒಂದು ಕೈಂಕರ್ಯವನ್ನು ಕನ್ನಡದಲ್ಲಿ ಕಳೆದ ಐದು ಶತಮಾನಗಳಿಂದ ನಡೆಸಿಕೊಂಡು ಬಂದಿವೆ.

ಯಕ್ಷಗಾನ ಕವಿಗಳ ಮನಸ್ಸುಗಳು ಮುಖ್ಯವಾಗಿ ಜನಪದದ ಜೈವಿಕ, ಸಾಂಸ್ಕೃತಿಕ ಹಾಗೂ ಮಾನಸಿಕ ಪ್ರಕ್ರಿಯೆಯಿಂದ ಸಿದ್ಧವಾಗಿದೆ. ಜನಪದ ಮನಸ್ಸುಗಳು ಪುರಾಣಗಳಲ್ಲಿ ನೀಡಿರುವಷ್ಟಕ್ಕೆ ತೃಪ್ತವಾಗುವುದಿಲ್ಲ. ಪುರಾಣದ ಕಥೆಗಳಿಗೆ ತಮ್ಮ ಎಳೆಯನ್ನು ಪ್ರತಿಕ್ರಿಯೆಯ ರೀತಿಯಲ್ಲಿ ಸೇರಿಸಿರುವುದುಂಟು. ಪ್ರಸಂಗಸಾಹಿತ್ಯದಲ್ಲಿ ಕಂಡುಬರುವ ಅನೇಕ ಕಲ್ಪಿತ ಪ್ರಸಂಗಗಳಲ್ಲಿ ಈ ಅಂಶವನ್ನು ಗುರುತಿಸಬಹುದು. ಕನಕಾಂಗಿ ಕಲ್ಯಾಣ, ದ್ರೌಪದಿ ಪ್ರತಾಪ, ರತಿಕಲ್ಯಾಣ, ಚಕ್ರಚಂಡಿಕಾ ಮುಂತಾದವುಗಳಲ್ಲಿ ಜನಸಾಮಾನ್ಯರ ನಂಬಿಕೆಗಳು, ಆಶಯಗಳು, ಕಥೆಯಾಗಿ ಬಂದಿವೆ. ಯಕ್ಷಗಾನ ಕವಿಗಳು ಇಲ್ಲೆಲ್ಲಾ ಮಹಾಕಾವ್ಯಗಳಲ್ಲಿ ಬಂದಿರುವ ಮೂಲ ಆಶಯಕ್ಕೆ ಪ್ರತಿರೂಪವೊಂದನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಯಕ್ಷಗಾನ ಕವಿಗಳು ಹೊಸ ಪ್ರಸಂಗಗಳ ಮೂಲಕ ದುರ್ಯೋಧನನ್ನು ಸಾಕಷ್ಟು ಭಂಗಿಸುತ್ತಾರೆ. ಅವನ ಅಸೂಯೆಗೆ ತಕ್ಕಷ್ಟು ಹೊಸಶಾಸ್ತಿಗಳಾಗುತ್ತವೆ. ದ್ರೌಪದಿ ತನ್ನ ವಿಶೇಷ ಶಕ್ತಿಯನ್ನು ಮೆರೆಯುತ್ತಾಳೆ. ಸೀತೆ ತನ್ನ ಪಾತಿವ್ರತ್ಯ ಮಹಿಮೆಯಿಂದ ಬೆಳಗುತ್ತಾಳೆ. ಹನುಮನ ಸೇವೆಗೆ ಕೋಡು ಮೂಡುತ್ತದೆ. ನಾರದನ ಕಲಹಪ್ರಿಯತೆಯಂತು ಅಸಂಖ್ಯವಾಗಿವೆ. ಈ ಎಲ್ಲಾ ವಿಶೇಷಗಳು ಯಕ್ಷಗಾನ ಸಾಹಿತ್ಯದ ವಿಶಿಷ್ಟತೆಯಾಗಿವೆ.

ಕನ್ನಡ ಸಾಹಿತ್ಯದಲ್ಲಿ 5000ಕ್ಕೂ ಹೆಚ್ಚಿನ ಯಕ್ಷಗಾನ ಪ್ರಸಂಗಗಳಿದ್ದರೂ ಯಕ್ಷಗಾನ ಕವಿಗಳ ಬಗ್ಗೆ ಹಾಗೂ ಪ್ರಸಂಗಗಳ ಬಗ್ಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಿಖರವಾದ ಸ್ಥಾನ ಲಭ್ಯವಾಗಿಲ್ಲ. ಅತ್ತ ಶಿಷ್ಟಸಾಹಿತ್ಯವೂ ಅಲ್ಲದೆ ಇತ್ತ ಜಾನಪದವೂ ಅಲ್ಲದೇ ನಡುವಿನ ನೆಲೆಯಲ್ಲಿ ನಿಲ್ಲುವ ಈ ಯಕ್ಷಗಾನ ಸಾಹಿತ್ಯದ ಬೆಲೆ ಕಟ್ಟುವ ಕಾರ್ಯವಾಗಬೇಕಾಗಿದೆ. ಆ ಮೂಲಕ ಪ್ರಸಂಗಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಿರ್ದಿಷ್ಟ ಸ್ಥಾನ ನಿರ್ದೇಶವಾಗಲು ಸಾಧ್ಯ.

■

ಯಕ್ಷಗಾನದ ನೂತನ 'ಮೋಹಮೇನಕೆ'

ಯಕ್ಷಗಾನ ರಂಗಭೂಮಿಯಲ್ಲಿ ಎರಡು ಪ್ರತ್ಯೇಕ ಸೀಳುಗಳು ಇಂದು ಎದ್ದುಕಾಣುತ್ತಿವೆ. ಕರಾವಳಿ ಹಾಗೂ ಮಲೆನಾಡುಗಳಲ್ಲಿ ಪರಂಪರಾಗತ ಪ್ರದರ್ಶನಗಳನ್ನು ನೀಡುವ ಹರಕೆಮೇಳ ಹಾಗೂ ಡೇರೆಮೇಳಗಳು ಒಂದೆಡೆಯಾದರೆ, ಗ್ರಾಮ ನಗರ ಭೇದವಿಲ್ಲದೆ, ವಿದ್ಯಾವಂತ ಅವಿದ್ಯಾವಂತರೆಂಬ ವ್ಯತ್ಯಾಸವಿಲ್ಲದೆ, ಮಳೆಗಾಲ ಉಳಿದ ಕಾಲವೆಂಬ ಪರಿವಿಲ್ಲದೆ ತಮ್ಮ ಯಕ್ಷಗಾನದ ಮೇಲಿನ ಅಭಿಮಾನವನ್ನು ಕಿರುಪ್ರದರ್ಶನಗಳ ಮೂಲಕ ನೀಡುತ್ತಿರುವ ಹವ್ಯಾಸಿ ಯಕ್ಷಗಾನ ರಂಗಭೂಮಿ ಇನ್ನೊಂದೆಡೆ. ಮೊದಲ ವರ್ಗಕ್ಕೆ ಆರಾಧನೆಯ ಅಂಗವಾಗಿ ಪ್ರೋತ್ಸಾಹಿಸುವ ಭಕ್ತರು ಹಾಗೂ ದುಡ್ಡುಕೊಟ್ಟು ನೋಡುವ ಪ್ರೇಕ್ಷಕರೇ ಶ್ರೀರಕ್ಷೆ. ಹವ್ಯಾಸಿ ಯಕ್ಷಗಾನ ರಂಗಭೂಮಿಯ ಗಟ್ಟಿಯಾದ ಆಸ್ತಿಭಾರವೆಂದರೆ ಅವರಲ್ಲಿರುವ ಅದಮ್ಯ ಯಕ್ಷಗಾನ ಆಸಕ್ತಿ. ಅದಕ್ಕೆ ನೀರೆರೆದು ಪ್ರೋತ್ಸಾಹಿಸುವವರು ಉತ್ತಮ ಸಂಘಟಕರು ಮತ್ತು ಅನುಭವಿ ಮಾರ್ಗದರ್ಶಕರು. ಈ ಮಾರ್ಗದರ್ಶಕರು ಒಂದು ರೀತಿಯಲ್ಲಿ ಅನುಭವಿ ನಿರ್ದೇಶಕರಂತೆ ಕೆಲಸ ಮಾಡುತ್ತ ಪ್ರದರ್ಶನ ಅಚ್ಚುಕಟ್ಟಾಗುವಂತೆ ನೋಡಿಕೊಳ್ಳುತ್ತಾರೆ. ಈ ಅನುಭವಿ ನಿರ್ದೇಶಕರು ಒಂದೋ ವೃತ್ತಿ ರಂಗಭೂಮಿಯಲ್ಲಿದ್ದು ಸಾಕಷ್ಟು ಅನುಭವಗಳಿಸಿ ಅದು ಸಾಕೆಂದು ಬಿಟ್ಟು ಬಂದವರು. ಇಲ್ಲವೇ ಯಕ್ಷಗಾನದ ಹಿನ್ನೆಲೆ ಇದ್ದು ಯಕ್ಷಗಾನ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು, ನಿಪುಣತೆಯನ್ನು ಹೊಂದಿ ವೃತ್ತಿ ಮೇಳಕ್ಕೆ ಹೋಗದೆ ಹವ್ಯಾಸಿಗಳಿಗೆ ಯಕ್ಷಗಾನ ಕಲೆಯನ್ನು ಧಾರೆಯೆರೆಯುತ್ತಿರುವವರು. ಇವರಿಬ್ಬರೂ ವೃತ್ತಿ ಕಲಾವಿದರಲ್ಲಿ ಕಾಣುವ ಏಕಮುಖದೃಷ್ಟಿಯಿಂದ

ಮುಕ್ತರಾದವರು. ಹೆಚ್ಚಾಗಿ ವಿದ್ಯಾವಂತರ ಸಹಚರ್ಯ ಹೊಂದಿ, ಉಳಿದ ಕಲಾಪ್ರಕಾರಗಳ ಅರಿವನ್ನು ಪಡೆದು, ವಿಶಾಲ ತಳಹದಿಯ ಮೇಲೆ ಯಕ್ಷಗಾನವನ್ನು ಪ್ರದರ್ಶಿಸಬೇಕೆಂಬ ಹಂಬಲದವರು. ಪ್ರತಿಭಾವಂತ ಹವ್ಯಾಸಿಗಳಿಗೆ, ಮಹಿಳೆಯರಿಗೆ, ಮಕ್ಕಳಿಗೆ ಯಕ್ಷಗಾನವನ್ನು ಕಲಿಸುತ್ತಾ, ತಮ್ಮ ಅನುಭವಗಳನ್ನು ಧಾರೆಯೆರೆಯುತ್ತಾ ಹೊಸ ಸಾಧ್ಯತೆಗಳನ್ನು ಪ್ರಸ್ತುತ ಪಡಿಸಲು ಹೆಣಗುತ್ತಿರುವವರು. ಡಾ॥ ಶಿವರಾಮ ಕಾರಂತರಿಂದ ಮೊದಲಗೊಂಡು ಇಂದಿನ ವರೆಗೂ ಯಕ್ಷಗಾನದಲ್ಲಿ ಅನೇಕ ಹೊಸಪ್ರಯೋಗಗಳು ಬಂದಿರುವುದು ಇಂತಹವರಿಂದಲೇ. ಸಂಪ್ರದಾಯವನ್ನು ಬಿಟ್ಟುಕೊಡದೆ ಹೊಸ ಅವಿಷ್ಕಾರಗಳನ್ನು ಮಾಡಲು ಇಲ್ಲಿ ವಿಪುಲ ಅವಕಾಶವಿದೆ. ಇಂತಹ ಒಂದು ಹೊಸ ಅವಿಷ್ಕಾರವೆಂದರೆ 20ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿರುವ ಮಂಟಪ ಮತ್ತು ಪಾಠಕರ ಜೋಡಿಯ 'ಮೋಹಮೇನಕೆ'.

ಮಂಟಪ ಪ್ರಭಾಕರ ಉಪಾಧ್ಯರು ವೃತ್ತಿಮೇಳದಲ್ಲಿದ್ದು ಸ್ತ್ರೀವೇಷಧಾರಿಯಾಗಿ ಹೆಸರು ಗಳಿಸಿದವರು. ಅತಿಥಿ ಕಲಾವಿದರಾಗಿ ಚಿಟ್ಟಾಣಿ ಯವರೊಂದಿಗೆ ಭಾಗವಹಿಸಿ ತಾರಾ ಮೌಲ್ಯವನ್ನು, ಅಭಿಮಾನಿಬಳಗವನ್ನು ಸೃಷ್ಟಿಸಿಕೊಂಡವರು. ಎಲ್ಲದಕ್ಕೂ ಮಿಗಿಲಾಗಿ ಶತಾವಧಾನಿ ಡಾ॥ ಆರ್. ಗಣೇಶ್ ಅವರಂತಹ ಉದ್ದಾಮ ಚಿಂತಕರ ಮೂಸೆಯಲ್ಲಿ ಹೊರಬಂದ 'ಏಕವ್ಯಕ್ತಿ ಯಕ್ಷಗಾನ'ವನ್ನು ಸಾವಿರಕ್ಕೂ ಮೀರಿದ ಪ್ರದರ್ಶನಗಳ ಮೂಲಕ ನಾಡಿನ ಒಳಹೊರಗೆ ನೀಡಿ 'ಏಕವ್ಯಕ್ತಿ ಮಂಟಪ'ರೆಂದೇ ಖ್ಯಾತರಾದವರು. ತಾವೊಬ್ಬರೇ ರಂಗದಲ್ಲಿ ಮಿಂಚುವುದಕ್ಕಿಂತ ಉಳಿದ ಕಲಾವಿದರಲ್ಲೂ ಅಡಗಿರುವ ನರ್ತನದ ಸೊಬಗನ್ನು ತೋರಿಸುವ ಮೂಲಕ ಕಲೆಗೆ, ಕಲಾವಿದರಿಗೆ, ಪ್ರೇಕ್ಷಕರಿಗೆ ಕೊಡುಗೆ ನೀಡಬೇಕೆಂಬ ಸದಾಶಯವೇ ಇವರ ಉದ್ದೇಶ. ಸದಾ ಹೊಸತನಕ್ಕೆ ತುಡಿಯುವ ಮನೋಭಾವವೂ ಈ ಆಶಯಕ್ಕೆ ಹಿಮ್ಮೇಳವಾಗಿದೆ. ಆದ್ದರಿಂದಲೇ ಅವರಷ್ಟೇ ಪ್ರತಿಭಾವಂತರಾದ ಘಾಟಕರ ಸಹಯೋಗದೊಂದಿಗೆ ಈ ಹೊಸ ಪ್ರಸಂಗದ ಪ್ರದರ್ಶನ ಮೈದಾಳಿದೆ.

ಅನಂತಪದ್ಮನಾಭ ಘಾಟಕರು ಇವತ್ತಿನ ಖ್ಯಾತ ಮೃದಂಗ ವಾದಕರು. ಉಡುಪಿ ಯಕ್ಷಗಾನ ಕೇಂದ್ರದಲ್ಲಿ ತರಬೇತಿಯನ್ನು ಹೊಂದಿ, ಅಲ್ಲೇ ಶಿಕ್ಷಕರಾಗಿ, ಮುಂದೆ ಶ್ರೀಮಯ ಯಕ್ಷಗಾನ ತರಬೇತಿ ಕೇಂದ್ರ ಗುಣವಂತೆಯಲ್ಲಿ ಯಕ್ಷಗಾನ ಶಿಕ್ಷಕರಾಗಿ ದುಡಿದವರು. ಯಕ್ಷಗಾನದ ಎಲ್ಲ ಅಂಗಗಳಲ್ಲೂ ಪರಿಣತಿಯನ್ನು ಪಡೆದವರಲ್ಲದೆ ಸಮಗ್ರ ತಿಳಿವನ್ನು ಹೊಂದಿದವರು. ಇದೀಗ ಬೆಂಗಳೂರಿನಲ್ಲಿ ನೆಲೆಸಿ ಹವ್ಯಾಸಿಗಳಿಗೆ, ಮಕ್ಕಳಿಗೆ ಮಹಿಳೆಯರಿಗೆ ಯಕ್ಷಗಾನವನ್ನು ಕಲಿಸುತ್ತಾ ಪ್ರದರ್ಶನಗಳಲ್ಲಿ ಭಾಗವಹಿಸುತ್ತಾ ತಮ್ಮ ಅನುಭವಗಳನ್ನು ಹರಿತಗೊಳಿಸಿಕೊಂಡವರು. ಮಂಟಪರು ಅದಕ್ಕಾಗಿಯೇ ನಿರ್ದೇಶನಕ್ಕಾಗಿ ಪಾಠಕರನ್ನು ಜೊತೆಯಲ್ಲಿರಿಸಿಕೊಂಡು 'ಮೋಹ ಮೇನಕೆ'ಯನ್ನು ಪ್ರಸ್ತುತ ಪಡಿಸಿದ್ದಾರೆ. ಘಾಟಕರು ಇಲ್ಲಿ ಭಾಗವತಿಕೆಯನ್ನು ನಿರ್ವಹಿಸುತ್ತಿದ್ದಾರೆ. ಮಂಟಪ ಘಾಟಕದ್ವಯರು ಉದಯೋನ್ಮುಖ ಪ್ರತಿಭಾವಂತ ಕಲಾವಿದರನ್ನು ಆರಿಸಿಕೊಂಡು

ತಮ್ಮ ಕಲ್ಪನಾ ವಿಲಾಸವನ್ನು ಸೂಕ್ತ ತರಬೇತಿಯ ಮೂಲಕ ಸಾಕ್ಷಾತ್ಕರಿಸಲು ಹೊರಟಿದ್ದಾರೆ. ಈ ಸಾಂಘಿಕ ಪ್ರಯತ್ನದಲ್ಲಿ ಇವರಿಬ್ಬರೂ ಜಯಶೀಲರಾಗಿರುವುದರಿಂದ 'ಮೋಹಮೇನಕೆ' ಯಕ್ಷಗಾನ ರಂಗದ ನೂತನ ಸಾಧನೆಯಾಗಿದೆ.

ಹಿಂದೆಲ್ಲಾ 'ವಿಶ್ವಾಮಿತ್ರ ಮೇನಕೆ' ಎಂಬ ಹೆಸರಿನಿಂದ ಡೇರೆ ಮೇಳಗಳ ಮೂಲಕ ಜಯಭೇರಿ ಭಾರಿಸಿದ ಕಥಾನಕವಿದು. ಸಾಂಪ್ರದಾಯಿಕ ಕತೆಯಾದ ಯಕ್ಷಗಾನದಲ್ಲಿ ಕಾಳಗವೇ ಹೆಚ್ಚು. ಕಾಳಗದ ನಂತರ ಕಲ್ಯಾಣ ನಡೆಯುತ್ತದೆ. ಹಿಂದೆ ಬಂದ 'ವಿಶ್ವಾಮಿತ್ರ ಮೇನಕೆ' ಕಾಳಗದಿಂದ ಕೂಡಿದ್ದು, ವಿಶ್ವಾಮಿತ್ರನ ಅನೇಕ ವಿಚಾರಗಳಿಂದ ಅಡಕಿರಿದಿದೆ. ಆದರೆ 'ಮೋಹಮೇನಕೆ' ಇದರಿಂದ ಮುಕ್ತಳಾಗಿದ್ದಾಳೆ. ಐನೂರು ವರ್ಷಗಳ ಪ್ರಸಂಗ ಸಾಹಿತ್ಯದ ಇತಿಹಾಸದಲ್ಲಿ ಈ ಬಗೆಯ ಹೊರಳುಗಳನ್ನು ಕಾಣಬಹುದು. ಇವತ್ತಿನ ಯುಗಧರ್ಮಕ್ಕೆ ಅನುಗುಣವಾಗಿ ಈ ಪ್ರಸಂಗದಲ್ಲಿ ಬದಲಾವಣೆ ಬಂದಿದೆ. ಧಾರವಾಡ ಆಕಾಶವಾಣಿಯಲ್ಲಿ ಕಾರ್ಯನಿರ್ವಹಣಾಧಿಕಾರಿಯಾಗಿರುವ ಪ್ರಸಿದ್ಧ ಅರ್ಥಧಾರಿ ಮತ್ತು ಸಾಹಿತಿಯಾಗಿರುವ 'ಏಕವ್ಯಕ್ತೀ ಅರ್ಥಧಾರಿ'ಯೆಂಬ ಹೆಸರುಗಳಿಸಿರುವ ದಿವಾಕರ ಹೆಗಡೆ ಕೆರೆಹೊಂಡ ಈ ಪ್ರಸಂಗವನ್ನು ಹೊಸದೃಷ್ಟಿಕೋನದಿಂದ ರಚಿಸಿದ್ದಾರೆ. ಯಕ್ಷಗಾನದ ಹೊಸಸಾಧ್ಯತೆಯ ಮೇಲೆ ಗಮನಹರಿಸಿರುವ ಅವರು ಕಾಳಗ, ಹಾಸ್ಯ ಯಾವುದೂ ಇಲ್ಲದೇ ಕತೆಯ ನಿಜ ಸತ್ವದ ಮೂಲಕ ಪ್ರೇಕ್ಷಕರನ್ನು ಗೆಲ್ಲಲು ಸಾಧ್ಯ ಎಂಬುದನ್ನು ಸಾಬೀತುಪಡಿಸಿದ್ದಾರೆ. ಹೊಸ ಪಾತ್ರಗಳನ್ನು ಸೃಷ್ಟಿಸಿ, ನರ್ತನಕ್ಕೆ ಅವಕಾಶವನ್ನು ಕಲ್ಪಿಸಿ, ಭಾವವಿಲಾಸಕ್ಕೆ ಆದ್ಯತೆ ನೀಡಿ, ಮನದಲ್ಲಿ ನಿಲ್ಲುವಂತಹ ಹಾಡುಗಳನ್ನು ತಂದು 'ಮೋಹಮೇನಕೆ' ಎಲ್ಲವರವಳಾಗುವಂತೆ ನೋಡಿಕೊಂಡಿದ್ದಾರೆ.

ಕಲಾವಿದರಲ್ಲಿ, ಸಂಘಟಕರಲ್ಲಿ, ಪ್ರೇಕ್ಷಕರಲ್ಲಿ ಶಿಸ್ತು, ಸಮಯ ಪ್ರಜ್ಞೆ, ಬದುಕಿನ ಔನ್ನತ್ಯದ ಬಗ್ಗೆ ಗೌರವ, ಎಲ್ಲವನ್ನು ಶುದ್ಧವಾಗಿ ನೀಡಬೇಕೆಂಬ ಹಂಬಲದ ಹಿನ್ನೆಲೆಯಲ್ಲಿ ನಿರ್ದೇಶಕರು ಈ ಪ್ರಸಂಗವನ್ನು ಎರಡು ತಾಸಿಗೆ ಮೊಟಕುಗೊಳಿಸಿದ್ದಾರೆ. ಇದಕ್ಕಾಗಿಯೇ ಪ್ರದರ್ಶನದಿಂದ ಪ್ರದರ್ಶನಕ್ಕೆ ಉತ್ತಮಿಕೆಯ ಕಡೆಗೆ ಸಾಗುವ ಪ್ರಯತ್ನವಿದೆ. ಇದೇ ಜೂನ್ 21ರಂದು ಬೆಂಗಳೂರಿನ ಬಸವನಗುಡಿ ಗುರುನರಸಿಂಹ ಸಭಾಭವನದಲ್ಲಿ ನಡೆದ 20ನೇ ಪ್ರದರ್ಶನ ಬಹು ಅಚ್ಚುಕಟ್ಟಾಗಿತ್ತು. ಕೌಶಿಕನೊಬ್ಬನೇ ರಂಗಕ್ಕೆ ಪ್ರವೇಶಿಸಿ, ತನಗಾದ ಅವಮಾನದ ಸುರುಳಿ ಬಿಚ್ಚಿ ಬ್ರಹ್ಮರ್ಷಿಯಾಗಬೇಕೆಂಬ ಹಠದಿಂದ ರಾಜ್ಯತ್ಯಜಿಸಿ ತಪಸ್ಸಿಗೆ ಹೊರಡುತ್ತಾನೆ. ಕೌಶಿಕನಾಗಿ ಶ್ರೀ ಪ್ರಶಾಂತವರ್ಧನರವರ ಅಭಿನಯ ಪ್ರಬುದ್ಧವಾಗಿತ್ತು ರಾಜನ ವೇಷದಲ್ಲಿರುವ ಎಲ್ಲ ಗಾಂಭೀರ್ಯಗಳು ಅವರಲ್ಲಿತ್ತು. ಮುಂದೆ ಕೆಂಪುಶಿಖೆಯೊಂದಿಗೆ ವೇಷಮಾಡಿ ಮುನಿಯಾಗಿ ಕಾಣಿಸಿಕೊಂಡ ಅವರು ನಾರದನೊಂದಿಗೆ ನಡೆದುಕೂಂಡ ರೀತಿಯಲ್ಲಿ ಮೃದು ಹಾಸ್ಯ ಇಣುಕುತ್ತಿತ್ತು. ಮೇನಕೆ ಪಾತ್ರವನ್ನು ಸ್ವತಃ ಮಂಟಪರೇ ವಹಿಸಿದ್ದರು. ಇಲ್ಲಿ ಸ್ತ್ರೀವೇಷದಲ್ಲಿರಬೇಕಾದ ಬಿಂಕು-ಬಿಗುಮಾನಗಳನ್ನೆಲ್ಲ ಸಮರ್ಥವಾಗಿ ತೋರಿಸಿದರು. ಮೇನಕೆಯ

ಪ್ರವೇಶ, ಅವಳ ಉದ್ದೇಶದ ಅನಿವಾರ್ಯತೆಯ ವಿವರಣೆ, ತಪೋಭಂಗಕ್ಕೆ ಅಗತ್ಯವಾದ ವಿಚಾರಗಳ ಪ್ರತಿಪಾದನೆಯನ್ನು ನರ್ತನ ಹಾಗೂ ಮಿತವಾದ ಮಾತುಗಳ ಮೂಲಕ ತೋರಿಸಿಕೊಟ್ಟರು.

ಇಡೀ ಪ್ರಸಂಗದ ರಸೋತ್ಕರ್ಷವಾದ ಭಾಗವೆಂದರೆ ಮೇನಕೆ ಯೊಂದಿಗೆ ಮನ್ಮಥ ಮತ್ತು ವಸಂತರು ಸೇರಿ ತಪೋವನಕ್ಕೆ ತೆರಳುವಾಗಿನ ನರ್ತನದ ಭಾಗ. ಇಲ್ಲಿ ಮನ್ಮಥನಾಗಿ ಮಂಜು ಹವ್ಯಕ ಬಹಳ ಉತ್ಸಾಹದಿಂದ ಕಾಣಿಸಿಕೊಂಡಿದ್ದಾರೆ. ಹೆಜ್ಜೆಗಾರಿಕೆಯಲ್ಲಿನ ಚುರುಕು, ಅಭಿನಯದಲ್ಲಿನ ತಾಜಾತನ, ನಿರಾಯಾಸವಾದ ಕುಣಿತ ಇವರ ಶಕ್ತಿಯಾಗಿದೆ. ವಸಂತನಾಗಿ ಕಾಣಿಸಿಕೊಂಡ ವಿನಯಭಟ್ ಅವರು ಕೂಡ ಆಕರ್ಷಿತ ಭಂಗಿಗಳ ಮೂಲಕ ಪ್ರದರ್ಶನ ಕಳೆಕಟ್ಟುವಂತೆ ಮಾಡಿದ್ದಾರೆ. ಈ ಇಬ್ಬರು ಪ್ರತಿಭಾವಂತ ಉದಯೋನ್ಮುಖರನ್ನು ಸಮರ್ಥವಾಗಿ ದುಡಿಸಿಕೊಳ್ಳುವಲ್ಲಿ ಮಂಟಪ ಮತ್ತು ಘಾಟಕರ ಶ್ರಮ ಸಾರ್ಥಕವಾಗಿದೆ. ಸಹಕಲಾವಿದರ ಶಕ್ತಿಯನ್ನು, ಪ್ರತಿಭೆಯನ್ನು ಪ್ರೇಕ್ಷಕರು ನೋಡಿ ಮೆಚ್ಚಬೇಕೆಂಬ ಉದಾರತೆ ಮಂಟಪರಂತಹ ಹಿರಿಯ ಪ್ರಬುದ್ಧ ಕಲಾವಿದರಲ್ಲಿರುವುದು ಮೆಚ್ಚಬೇಕಾದ ಅಂಶ. ಏಕವ್ಯಕ್ತಿಯಲ್ಲಿ ಅವರೊಬ್ಬರದ್ದೇ ಪ್ರತಿಭಾವಿಲಾಸವಿದ್ದರೆ ಇಲ್ಲಿ ಅವರ ಜೊತೆಯಲ್ಲಿ ಈ ಇಬ್ಬರು ಕಲಾವಿದರ ಕಲಾ ಶಕ್ತಿ ಸಮ್ಮಿಳಿತವಾಗಿದೆ. ಪ್ರಸಂಗದಲ್ಲಿ ಬರುವ 'ಕೋಕಿಲ ಕೂಜನ ಕೇಳುತಿದೆ, ಅದು ಕೇಳುತಿದೆ' ಎಂಬ ಪದ್ಯ ರಂಗದಲ್ಲಿ ಸ್ವಪ್ನಲೋಕವನ್ನು ಸಾಕಾರ ಗೊಳಿಸುತ್ತದೆ. ಇಲ್ಲಿ ಭಾಗವತರಾದ ಅನಂತಪದ್ಮನಾಭ ಘಾಟಕರ ಪ್ರತಿಭೆಯು ಸೇರಿ ಕೊಂಡಿದೆ. 30-40 ವರ್ಷಗಳ ಕೆಳಗೆ ಕಿವಿಗೆ ಬೀಳುತ್ತಿದ್ದ ಸಂಪ್ರದಾಯಬದ್ಧ ಭಾಗವತಿಕೆ ಅಲ್ಲಿತ್ತು. ಅವರು ಹಾಡಿದ ಇನ್ನೆರಡು ಪದ್ಯಗಳಾದ 'ಹೀಗೆ ನೋಡುವರೆ ಎನ್ನ' ಮತ್ತು 'ಚಿಂತಿಸುವುದೇಕೆ ಅರಸು'ಗಳ ಹಾಡುಗಾರಿಕೆಯಲ್ಲಿ ಸಂಪ್ರದಾಯ ಬದ್ಧ ಭಾಗವತಿಕೆ ಇತ್ತು. ಖ್ಯಾತ ಚಿಂತಕರಾದ ವೀಣಾಬನ್ನಂಜೆಯವರು ಹೇಳಿದಂತೆ ಈ ಪ್ರಸಂಗದ ಮೂಲಕ ಯಕ್ಷಗಾನ ಲೋಕಕ್ಕೆ ಒಬ್ಬ ಉತ್ತಮ ಭಾಗವತರನ್ನು ಮಂಟಪರು ಶೋಧಿಸಿದ್ದಾರೆ. ಈಗಾಗಲೇ ಖ್ಯಾತ ಮೃದಂಗ ವಾದಕರಾಗಿರುವ ಘಾಟಕರು ಭಾಗವತಿಕೆ ಯಲ್ಲಿ ಸೈ ಎನಿಸಿಕೊಂಡಿರುವುದು ಮಾತ್ರವಲ್ಲದೆ ಸಾಂಪ್ರದಾಯಿಕ ಭಾಗವತಿಕೆ ಹೇಗಿರಬೇಕು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ನುರಿತ ಕಲಾವಿದ ಕೃಷ್ಣಯಾಜಿಯವರ ಅನುಪಸ್ಥಿತಿಯಲ್ಲಿ ಮದ್ದಲೆ ನುಡಿಸಿದ ನಾರಾಯಣ ಹೆಬ್ಬಾರ್ ಅವರ ಮೃದಂಗವಾದನ ಹಾಗೂ ಗುರುರಾಜ ಐತಾಳ್ ಅವರ ಚಂಡೆವಾದನ ಪ್ರದರ್ಶನದ ಇನ್ನೆರಡು ಮೆಚ್ಚುವ ಅಂಶಗಳು. ಹಿಮ್ಮೇಳದವರು ಬ್ಯಾಲೆ ಪ್ರದರ್ಶನದಲ್ಲಿರುವಂತೆ ವೇದಿಕೆಯ ಮೇಲೆ ಪಕ್ಕದಲ್ಲಿ ಕುಳಿತಿದ್ದರು. ಇದರಿಂದ ಕಲಾವಿದರ ರಸಾಭಿವ್ಯಕ್ತಿಯ ನೇರ ನೋಟ ಪ್ರೇಕ್ಷಕನಿಗೆ ಲಭಿಸುತ್ತಿತ್ತು. ವೇಷ-ಭೂಷಣಗಳನ್ನು ಸಿದ್ಧಪಡಿಸುವಲ್ಲಿ ರಾಜಶೇಖರ ಹಂದೆಯವರ ಶ್ರಮ ಮೆಚ್ಚುವಂತಹದು. ಇಡೀ ಪ್ರಸಂಗದಲ್ಲಿ ಕೇವಲ ನಾಲ್ಕೇ ವೇಷಧಾರಿಗಳಿದ್ದು ನಾರದನಾಗಿ ಮಂಜು

ಹವ್ಯಕ ಅವರು, ಕಣ್ವನಾಗಿ ಶ್ರೀ ವಿನಯಭಟ್ ಅವರು ನಿರ್ವಹಿಸಿದರು. ಕೌಶಿಕ ಹಾಗೂ ಮೇನಕೆಯ ಪಾತ್ರ ರಂಗದಲ್ಲಿ ಮನಸೂರೆಗೊಂಡವು.

ಎಲ್ಲಕ್ಕಿಂತ ಹೃದಯ ಸ್ಪರ್ಶಿಯಾದ ಭಾಗವೆಂದರೆ ಮೇನಕೆ ಮರ್ತ್ಯ ಲೋಕದ ಮಗುವನ್ನು ಭೂಲೋಕದಲ್ಲೇ ಬಿಟ್ಟು ಹೋಗಬೇಕಾದಾಗ ಪಡುವ ವೇದನೆ. ಇಡೀ ಹೆಣ್ಣು ಕುಲದ ಸಂಕಟವನ್ನು, ನೋವನ್ನು ತಾವೇ ಹೊತ್ತಿದ್ದಾರೋ ಎಂಬ ರೀತಿಯಲ್ಲಿ ಮಂಟಪರು ಅಭಿವ್ಯಕ್ತಿಸಿದರು. ಭೂಮಿಗೆ ಬಂದಾಗಿನ ಮೇನಕೆಗೂ ಭೂಮಿಯನ್ನು ಬಿಟ್ಟು ತೆರಳುವ ಮೇನಕೆಯ ಸ್ಥಿತಿಗೂ ಎಂತಹ ಅಂತರ! ಪ್ರಸಂಗದಲ್ಲಿ ಬರುವ ಮೊದಲ ಮೇನಕೆಯ ಉದ್ದೇಶ ಕೌಶಿಕನನ್ನು ಮೋಹದ ಬಲೆಯಲ್ಲಿ ಕೆಡಹುವುದಾದರೆ, ಕೊನೆಯಲ್ಲಿ ಆ ಮೇನಕೆಯೇ ಮಗುವಿನ ಮೋಹಪಾಶಕ್ಕೆ ಒಳಗಾಗುತ್ತಾಳೆ. ಈ ಎರಡು ಭಾವೋತ್ಕರ್ಷವನ್ನು ಮಂಟಪರು ತಮ್ಮ ಅಭಿನಯ ಸಾಮರ್ಥ್ಯದ ಮೂಲಕ, ನರ್ತನ ರೂಪದ ಮೂಲಕ ತೋರಿಸಿಕೊಟ್ಟಿದ್ದಾರೆ. "ನಡೆದಳು ಮೇನಕೆ ಬಿಡುಗಡೆಯನು" ಎಂಬ ಪದ್ಯಭಾಗದ ಅಭಿವ್ಯಕ್ತಿಯು ಅಸಾಧಾರಣವಾದದ್ದು.

ಹೀಗೆ 'ಮೋಹಮೇನಕೆ'ಯ 20ನೇ ಪ್ರದರ್ಶನ ಜನರನ್ನು ಮಂತ್ರಮುಗ್ಧರನ್ನಾಗಿಸಿತು. ವೃತ್ತಿಕಲಾವಿದರು ಇಂತಹ ವಿನೂತನ ಪ್ರಯೋಗಗಳನ್ನು ನೋಡುವ ಮೂಲಕ ತಮ್ಮ ಪ್ರದರ್ಶನವನ್ನು ಕಲಾಸಂಪನ್ನಗೊಳಿಸಬಹುದು. ಇದಕ್ಕಾಗಿಯೇ ಪ್ರದರ್ಶನ ಸ್ಥಳದಲ್ಲಿ ಮಂಟಪರು ಎರಡು ಫಲಕಗಳನ್ನು ಇರಿಸಿ ಅಲ್ಲಿ ಸಂಘಟಕರ, ಕಲಾವಿದರ, ಪ್ರೇಕ್ಷಕರ ಜವಾಬ್ದಾರಿ ಏನು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇದನ್ನು ಅಳವಡಿಸಿಕೊಂಡರೆ ನಮ್ಮ ಇಂದಿನ ಯಕ್ಷಗಾನ ಪ್ರದರ್ಶನಗಳು ನೋಡಲು ಸಹ್ಯವಾಗುತ್ತವೆ. ನಮ್ಮ ಕಲೆಯೊಂದಿಗೆ ನಮ್ಮ ಬದುಕು ಕೂಡ ಸಾಂಸ್ಕೃತಿಕವಾಗಿ ಶ್ರೀಮಂತವಾಗುತ್ತದೆ.

■

ಯಕ್ಷಗಾನದ ಸೌರಭವನ್ನು ಪಸರಿಸುತ್ತಿರುವ ಬೇಗಾರ್

ಜಾಗತೀಕರಣದ ಫಲವಾದ ನಗರೀಕರಣದಿಂದ ಜಗತ್ತಿನಾದ್ಯಂತ ಜನಪದ ಸಂಸ್ಕೃತಿ, ಜೀವನ ಶೈಲಿ, ಆಚಾರ-ವಿಚಾರಗಳು ಕಣ್ಮರೆಯಾಗಲು ಪ್ರಾರಂಭಿಸಿವೆ. ಹಸನಾದ ಬದುಕನ್ನು ಹುಡುಕಿ ಗ್ರಾಮೀಣರು ನಗರಕ್ಕೆ ವಲಸೆ ಬರುತ್ತಿರುವುದು ಎಲ್ಲೆಡೆ ಕಾಣುತ್ತಿರುವ ವಿದ್ಯಮಾನ. ಇಂದು ನಗರಗಳು ಸಮಸ್ಯೆಗಳ ಕೂಪಗಳಾಗುತ್ತಿರುವಂತೆ ಗ್ರಾಮಾಂತರ ಪ್ರದೇಶಗಳು ಎಲ್ಲ ಅರ್ಥದಲ್ಲಿಯೂ ಸೊರಗುತ್ತಿವೆ. ಇಷ್ಟೇ ಅಲ್ಲ ಗ್ರಾಮೀಣರು ಕೂಡ ನಗರ ಜೀವನಶೈಲಿಯನ್ನು ಯಥವತ್ತಾಗಿ ಅನುಕರಿಸ ಹೊರಟಿರುವುದರಿಂದ ನಮ್ಮ ಪರಂಪರಾಗತ ಕಲೆ, ಆಟಕೂಟಗಳು, ಸಂಸ್ಕೃತಿಗಳಲ್ಲಿ ಅವನತಿಯೆಡೆಗೆ ಸಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ದೇಸಿಯ ಉಡುಗೆ ತೊಡುಗೆ, ಆಹಾರ ವಿಹಾರ, ಆಚಾರ ವಿಚಾರ ಕಲೆ ಸಂಸ್ಕೃತಿಗಳನ್ನೆಲ್ಲಾ ನಗರದವರಿಗೆ ಪರಿಚಯಿಸುವ, ಆ ಮೂಲಕ ಅವರಲ್ಲಿ ಪಾರಂಪರಿಕ ತಿಳಿವಿನ ಬಗ್ಗೆ ಅರಿವು ಮೂಡಿಸುವ ಕಾರ್ಯ ಕೆಲವರಿಂದ ನಡೆಯುತ್ತಿದೆ. ಅನೇಕ ವಿಚಾರವಂತರು, ವಿದ್ವಾಂಸರು, ಬುದ್ಧಿಜೀವಿಗಳು ಜನರನ್ನು 'ಮರಳಿಮಣ್ಣಿಗೆ' ಕರೆ ಕೊಡುತ್ತಾ ನೆಲಸಂಸ್ಕೃತಿಯ ಉಳಿವಿಗೆ ಹೋರಾಡುತ್ತಿದ್ದಾರೆ. ಅಂತಹವರು ಆಧುನಿಕ ವಿದ್ಯಾವಂತರಿಗೆ ಹಳ್ಳಿಯ ಸೊಗಡನ್ನು ಪರಿಚಯಿಸುತ್ತಾ ನಮ್ಮ ಮಣ್ಣಿನ ಕಲಾಶ್ರೀಮಂತಿಕೆನ್ನು ನಗರದಲ್ಲಿ ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ದೇಸಿತನ ಉಳಿಯುವಲ್ಲಿ ಹಾಗೂ ಮುಂದಿನ ಜನಾಂಗಕ್ಕೆ ತಲುಪಿಸುವಲ್ಲಿ ಅವರ ಕಾಯಕ ಮಹತ್ವಪೂರ್ಣವಾದದ್ದು. ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ದಾಖಲಾಗುವಂತಹ ವಿಚಾರವಿದು. ಯಕ್ಷಗಾನ ಈ

ಮಣ್ಣಿನಲ್ಲಿ ಹುಟ್ಟಿದ ಶ್ರೀಮಂತ ಕಲಾಸಂಪತ್ತಿನ ಆಗರ. ಐದುನೂರು ವರ್ಷಗಳಿಂದ ಕರ್ನಾಟಕದ ಗ್ರಾಮೀಣ ಜೀವನವನ್ನು ಸುಂದರ ಗೊಳಿಸಿದ ಪರಂಪರಾಗತ ಕಲೆ. ಇಂತಹ ಕಲೆ ನಗರೀಕರಣದಿಂದ ಮಸುಕಾಗುತ್ತಿರುವ ಈ ಸಂದರ್ಭದಲ್ಲಿ ಇದನ್ನು ಉಳಿಸಲು, ಬೆಳೆಸಲು ಅನೇಕರು ಕ್ರಿಯಾಶೀಲರಾಗಿದ್ದಾರೆ. ನಗರ ಪ್ರದೇಶದಲ್ಲಿ ಈ ಗ್ರಾಮೀಣ ಕಲೆ ಅರಳಬೇಕು, ಆ ಮೂಲಕ ಅದು ಎಲ್ಲರ ಸ್ವತ್ತಾಗಬೇಕು ಎಂಬುದು ಇವರ ಅಭಿಲಾಷೆ. ಇಂತಹವರಲ್ಲಿ ಮುಖ್ಯರಾದವರು ಹಾಗೂ ಯಶಸ್ವಿಯಾದವರು ಯಕ್ಷಗಾನದ ಖ್ಯಾತ ಸ್ತ್ರೀ ವೇಷಧಾರಿಗಳಾದ ಶ್ರೀ ಬೇಗಾರು ಶಿವಕುಮಾರ್ ಅವರು.

ನಾಲ್ಕೈದು ದಶಕಗಳ ಕೆಳಗೆ ಬೆಂಗಳೂರಿನಂತಹ ನಗರದಲ್ಲಿ ಯಕ್ಷಗಾನದ ಚಂಡೆಯ ಸದ್ದು ಅಪರೂಪಕ್ಕೊಮ್ಮೆ ಕೇಳಿಬರುತ್ತಿತ್ತು. ಯಕ್ಷಗಾನವನ್ನು ನೋಡಬೇಕಾದರೆ ಮಳೆಗಾಲಕ್ಕಾಗಿ ಕಾಯಬೇಕಾಗುತ್ತಿತ್ತು. ಆದರೆ ಕಾಲ ಈಗ ಬದಲಾಗಿದೆ. ಈ ಜನ ವರ್ಷಗಳಲ್ಲಿ ಅದರಲ್ಲೂ ಈ ಇಪ್ಪತ್ತೊಂದನೆಯ ಶತಮಾನದಲ್ಲಿ ಬೆಂಗಳೂರು ಮಹಾನಗರದಲ್ಲಿ ಯಕ್ಷಗಾನದ ಚಂಡೆಯ ಸದ್ದು ನಿರಂತರವಾಗಿ ಕೇಳಿಬರುತ್ತಿದೆ. ಶನಿವಾರ, ಭಾನುವಾರವಂತೂ ನಗರದ ಮೂರು ನಾಲ್ಕು ಬಡಾವಣೆಗಳಲ್ಲಿ ಒಂದಿಲ್ಲೊಂದು ಬಗೆಯ ಯಕ್ಷಗಾನ ಪ್ರದರ್ಶನವಿರುತ್ತದೆ. ಅಸಂಖ್ಯ ಹವ್ಯಾಸಿಗಳು, ಮಕ್ಕಳು, ಮಹಿಳೆಯರು ತಾವು ಕಲಿತ ಯಕ್ಷಗಾನವನ್ನು ರಂಗದಲ್ಲಿ ಪ್ರದರ್ಶಿಸುವ ಮೂಲಕ ಅಭಿಮಾನಿಗಳ ಮನತಣಿಸುತ್ತಿದ್ದಾರೆ. ಕರಾವಳಿ, ಮಲೆನಾಡು ಮೂಲವಲ್ಲದ ಮಕ್ಕಳನ್ನು ಕೂಡ ನಮ್ಮ ಯಕ್ಷಗಾನ ಸೆಳೆಯುತ್ತಿರುವುದು ವಿಶೇಷ. ಇದಕ್ಕೆಲ್ಲ ಬೆನ್ನೆಲುಬಾಗಿ ನಿಂತ ಯಕ್ಷಗಾನ ಕಲಾ ಶಾಲೆಗಳು ವಿದ್ಯಾರ್ಥಿಗಳಿಗೆ, ಹವ್ಯಾಸಿಗಳಿಗೆ, ಮಹಿಳೆಯರಿಗೆ ವರದಾನವಾಗಿ ಪರಿಣಮಿಸಿವೆ. ಇಂತಹ ಕಲಾಶಾಲೆಗಳಲ್ಲಿ ಕಳೆದ ಹತ್ತು ವರ್ಷಗಳಿಂದ ಕ್ರಿಯಾಶೀಲವಾಗಿರುವ ಬೆಂಗಳೂರು ನಗರದ 'ಗಾನಸೌರಭ ಯಕ್ಷಗಾನ ಕಲಾಶಾಲೆ' ಬಹುಮುಖ್ಯವಾದುದು. ಅಸಂಖ್ಯ ಅಭಿಮಾನಿಗಳನ್ನು, ಹಿತೈಷಿಗಳನ್ನೂ, ವಿದ್ಯಾರ್ಥಿಗಳನ್ನೂ, ಕಲಾಪೋಷಕರನ್ನೂ ಹೊಂದಿರುವ ಈ ಕಲಾಶಾಲೆಗಳ ರೂವಾರಿಗಳು ಬೇಗಾರ್ ಶಿವಕುಮಾರ್ ಅವರು.

ಇಂತಹ 'ಗಾನಸೌರಭ ಯಕ್ಷಗಾನ ಕಲಾಶಾಲೆ'ಯನ್ನು ಕಟ್ಟಿ ಬೆಳೆಸುವ ಹಿನ್ನೆಲೆಯಲ್ಲಿ ಬೇಗಾರ್ ಚಿಂತನೆ ಕಾರ್ಯಪ್ರವೃತ್ತವಾಗಿದೆ. ಯಕ್ಷಗಾನದ ಮೇರು ಸ್ತ್ರೀಪಾತ್ರಧಾರಿಗಳಲ್ಲಿ ಒಬ್ಬರಾದ ಇವರು ಯಕ್ಷಗಾನ ವಿಶ್ವಗಾನವಾಗಬೇಕೆಂಬ ಹಂಬಲದವರು. 'ಯಕ್ಷಗಾನಂ ವಿಶ್ವಗಾನಂ' ಎಂಬುದು ಈ ಕಲಾಶಾಲೆಯ ಧ್ಯೇಯ ವಾಕ್ಯ. ಕರಾವಳಿ ಮಲೆನಾಡಿಗೆ ಮಾತ್ರವಲ್ಲದೇ ಕರ್ನಾಟಕದ ಎಲ್ಲೆಡೆಗೆ ಅದರಲ್ಲೂ ನಗರ ಪ್ರದೇಶದಲ್ಲಿ ಯಕ್ಷಗಾನ ಹೆಚ್ಚು ಪ್ರಚಲಿತವಾಗಬೇಕೆಂದು ಇವರ ಆಸೆ. ಈಗ ಗಾನಸೌರಭ ಸಂಸ್ಥೆಗೆ ಹತ್ತು ವರ್ಷಗಳು ತುಂಬಿವೆ. ಈ ಸಂಸ್ಥೆಗೆ ಸಂಬಂಧಿಸಿದವರಿಗೆಲ್ಲ 2014ರ ಜುಲೈ 20ರಂದು ದಶಮಾನೋತ್ಸವದ ಸಂಭ್ರಮವಾದರೆ ಬೇಗಾರರ ಪಾಲಿಗೆ ಸಂತೃಪ್ತಿಯ, ಸಮಾಧಾನದ ಘಳಿಗೆ. ಈ ಹತ್ತರ ಹಬ್ಬ ಸವೆದ ಹಾದಿಯ

ಅವಲೋಕನ ದೊಂದಿಗೆ ಮುಂದೆ ಕ್ರಮಿಸಬೇಕಾದ ದುರ್ಗಮ ಮಾರ್ಗಗಳ ಬಗ್ಗೆ ಚಿಂತನೆಗೆ ಹಚ್ಚುವ ಸಮಯ. ಯಕ್ಷಗಾನ ಕಲಾವಿದರಾಗಿ, ಸಂಘಟಕರಾಗಿ, ಶಿಕ್ಷಕರಾಗಿ, ಮಾರ್ಗ ದರ್ಶಕರಾಗಿ ಬೇಗಾರರ ಬೆಳವಣಿಗೆಯ ಪರಿ ಆಶ್ಚರ್ಯದಾಯಕವಾದುದು. ಆಸಕ್ತ ಮನಸ್ಸುಗಳಿಗೆ ಬೆರಗನ್ನು ತರುವಂತಹದು.

ನಲವತ್ತೈದರ ಹರೆಯದ ಶಿವಕುಮಾರರು ಜನ್ಮತಳೆದದ್ದು ಪ್ರಕೃತಿ ಸೌಂದರ್ಯದ ನೆಲೆವೀಡಾದ ಮಲೆನಾಡಿನ ಬೇಗಾರಿನಲ್ಲಿ. ತಂದೆ ಹಿರಿಯಣ್ಣ ಮತ್ತು ತಾಯಿ ತುಂಗಮ್ಮನವರು. ಮೂಲತಃ ಕರಾವಳಿಯ ಕೊಕ್ಕರ್ಣೆ ಹಾಗೂ ಪೇತ್ರಿಯವರಾದರೂ ಜೀವನೋಪಾಯಕ್ಕಾಗಿ ಘಟ್ಟಕ್ಕೆ ಬಂದು ನೆಲೆಸಿದವರು. ಬಡತನವೇ ಹಾಸಿಹೊದೆಯುವಷ್ಟಿದ್ದ ಆ ಕುಟುಂಬಕ್ಕೆ ಮಗನನ್ನು ಪ್ರಾಥಮಿಕ ವಿದ್ಯಾಭ್ಯಾಸಕ್ಕಿಂತ ಹೆಚ್ಚು ಓದಿಸುವ ಶಕ್ತಿ ಇರಲಿಲ್ಲ. ಕುಣಿತದಲ್ಲಿ ಆಸಕ್ತಿಯಿದ್ದ ಬಾಲಕ ಶಿವಕುಮಾರನ ಮನಸೆಳೆದದ್ದು ಉಡುಪಿಯ ಡಾ. ಶಿವರಾಮ ಕಾರಂತರ ನಿರ್ದೇಶಕತ್ವದಲ್ಲಿ ಪ್ರಾರಂಭವಾಗಿದ್ದ 'ಯಕ್ಷಗಾನ ಕೇಂದ್ರ'. ಈ ಸ್ಫುರದ್ರೂಪಿ ಹುಡುಗ ಯಕ್ಷಗಾನದ ಹೆಜ್ಜೆ ಹಾಕಲು ಕಲಿತದ್ದು ಈ ಯಕ್ಷಗಾನ ಕೇಂದ್ರದ ಗುರುಗಳಾಗಿದ್ದ ಹೆರಂಜಾಲು ವೆಂಕಟರಮಣ ಗಾಣಿಗರಿಂದ. ಬೇಗಾರರ ಕಲಿಕೆಯ ಆಸಕ್ತಿಯನ್ನು ಮೆಚ್ಚಿಕೊಂಡವರು ಗುರು ನೀಲಾವರ ರಾಮಕೃಷ್ಣಯ್ಯ ಮತ್ತು ಗುರು ಮಣೂರು ಮಹಾಬಲ ಕಾರಂತರು. ಕೇಂದ್ರ ಬಿಡುವಿನ ಸಂದರ್ಭದಲ್ಲಿ ಊರಿಗೆಂದು ಬಂದಿದ್ದಾಗ, ಸಮೀದಲ್ಲೇ ನಡೆಯಲಿದ್ದ ಪೆರ್ಡೂರು ಮೇಳದ ಆಟಕ್ಕೆ ಅತಿಥಿ ಕಲಾವಿದರಾಗಿ ಕರೆ ಬರುತ್ತದೆ. ಅಂದಿನ ಪ್ರಸಂಗ ರತಿಕಲ್ಯಾಣ, ಯುವಕ ಶಿವಕುಮಾರ್ ಮನ್ಮಥ ಪಾತ್ರಧಾರಿಯಾಗಿ ಬಡಗು ತಿಟ್ಟಿನ ಮೇಳದಲ್ಲಿ ಮೊದಲಿಗೆ ಪಾದಾರ್ಪಣೆ ಮಾಡುತ್ತಾರೆ. ಮುಂದೆ ಅದೇ ಮೇಳದ ಹತ್ತೆಂಟು ಪ್ರದರ್ಶನಗಳಲ್ಲೂ ಭಾಗಿಯಾಗುತ್ತಾರೆ.

ಮುಂದಿನ ವರ್ಷ ಅರಾಟೆ ಮಂಜುನಾಥ ಅವರ ಒತ್ತಾಸೆಗೆ ಕಟ್ಟುಬಿದ್ದು ಅವರಿದ್ದ ಮೂಲ್ಕಿ ಮೇಳ ಸೇರಿಕೊಂಡು ಪೂರ್ಣ ಪ್ರಮಾಣದ ತಿರುಗಾಟದ ಜೀವನಕ್ಕೆ ನಾಂದಿ ಹಾಡುತ್ತಾರೆ. ಮುಂದಿನ ಮಳೆಗಾಲದಲ್ಲಿ ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳಲಾಗದೇ ಉಡುಪಿಯ ಹಣ್ಣಿನ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದು ಅಲ್ಲಿ ಪಡೆದ ಅನುಭವ ಅವರಿಗೆ ಕಠಿಣ ದುಡಿಮೆಗೆ ಸದಾ ಹೊಂದಿಕೊಳ್ಳುವ ಮನೋಭೂಮಿಕೆಯನ್ನು ಒದಗಿಸಿಕೊಟ್ಟಿತು. ಹೀಗೆ ಎಳೆಯ ಹರೆಯದಲ್ಲೇ ದುಡಿಮೆಯ ಮಂತ್ರ ಅವರಿಗೆ ಸಿದ್ದಿಸಿತು. ಈ ಕಠಿಣ ಪರಿಶ್ರಮಕ್ಕೆ ಸಿದ್ಧವಾಗಿರುವ ಮನೋಧರ್ಮವೇ ಬೇಗಾರ್ ಶಿವಕುಮಾರ್ ಅವರ ಕಲಾಬೆಳವಣಿಗೆಯ ಹಿಂದಿನ ರಹಸ್ಯವಾಗಿದೆ.

ಮೂಲ್ಕಿ ಮೇಳದಲ್ಲಿ ಒಂದು ವರ್ಷದ ಸೇವೆ ಸಲ್ಲಿಸಿದ ನಂತರ ಸಂಜೀವ ಶೆಟ್ಟರ ಪ್ರೇರಣೆಯಿಂದ ಮುಂದಿನ ತಿರುಗಾಟಕ್ಕೆ ಕಮಲಶಿಲೆ ಮೇಳವನ್ನು ಸೇರಿಕೊಳ್ಳ ಬೇಕಾಗುತ್ತದೆ. ಕೇದಗೆ ಮುಂದಲೆ ವೇಷದ ಬಗ್ಗೆ ಅಪಾರ ಒಲವಿದ್ದ ಶಿವಕುಮಾರರಿಗೆ

ಅಲ್ಲಿ ಅದು ದೊರೆಯದೇ ಸ್ತ್ರೀ ವೇಷ ನಿರ್ವಹಿಸಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಒಮ್ಮೆ ಅಸಮಾಧಾನ ನೀಡಿದರೂ ಸುಂದರ ಕಾಯದ ಬೇಗಾರ್ ಸ್ತ್ರೀ ವೇಷದಲ್ಲಿ ಮಿಂಚುತ್ತಾರೆ. ಅಪಾರ ಅಭಿಮಾನಿಗಳನ್ನು ಸಂಪಾದಿಸುತ್ತಾರೆ. ಸ್ತ್ರೀ ವೇಷ ಅವರ ಪಾಲಿಗೆ ಬ್ರಾಂಡ್ ಆಗುತ್ತದೆ. ಆ ಮೇಳದಲ್ಲಿ ನಾಲ್ಕು ವರ್ಷಗಳ ಕಾಲ ಮುಖ್ಯ ಸ್ತ್ರೀ ವೇಷಧಾರಿಯಾಗಿ ಹೆಸರು ಗಳಿಸುತ್ತಾರೆ. ಇದು ಬದುಕಿನ ಇನ್ನೊಂದು ಪಾಠವನ್ನು ಅವರಿಗೆ ಕಲಿಸುತ್ತದೆ. ಸಂದರ್ಭಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುವುದೇ ಯಶಸ್ಸಿನ ಮೆಟ್ಟಿಲೆಂದು ಅರಿತುಕೊಳ್ಳುತ್ತಾರೆ. ಈ ಮನೋಭಾವದಿಂದ ಹಿಂದೆ ಸರಿಯದೇ ಯಕ್ಷಗಾನ ರಂಗಭೂಮಿಯಲ್ಲಿ ತಮ್ಮದೇ ಆದ ವರ್ಚಸ್ಸು ಪಡೆದು ಗೆಲುವು ಸಾಧಿಸುತ್ತಾರೆ. ಅಲ್ಲಿದ್ದಾಗ ಮೋಹಿನಿ, ದಮಯಂತಿ, ಸುಭದ್ರೆ, ಶ್ರೀದೇವಿ ಮುಂತಾದ ಪಾತ್ರಗಳನ್ನು ಮಾಡಿ ಅಭಿಮಾನಿಗಳ ಮನ ಗೆಲ್ಲುತ್ತಾರೆ. ಮಾತ್ರವಲ್ಲ, ಮೃದು ಹೃದಯದವರಾದ ಶಿವಕುಮಾರ್ ಸಹಕಲಾವಿದರ ಪ್ರೀತಿ, ವಿಶ್ವಾಸವನ್ನು ಗೆಲ್ಲುತ್ತಾರೆ.

ಮುಂದಿನ ಎರಡು ವರ್ಷಗಳ ಕಾಲ ಕೋಟ ಅಮೃತೇಶ್ವರಿ ಮೇಳದ ತಿರುಗಾಟದಲ್ಲಿ ವೈವಿಧ್ಯಮಯ ಪಾತ್ರಗಳಾದ ಮೇನಕೆ, ದಾರಿಕೆ, ನಾಗಶ್ರೀ, ಚಿತ್ರಾವತಿ ಮುಂತಾದ ಪಾತ್ರವಹಿಸಿ ಖ್ಯಾತರಾಗುತ್ತಾರೆ. ಅವರ ಅನುಭವದ ಹರವು ವಿಸ್ತಾರವಾಗುತ್ತದೆ. ಕಿಶನ್ ಹೆಗ್ಡೆಯವರು ನಡೆಸುತ್ತಿದ್ದ ಸೌಕೂರು ಮೇಳದಲ್ಲಿ ಒಂದು ವರ್ಷ ತಿರುಗಾಟದ ನಂತರ ತೆಂಕುತಿಟ್ಟಿನ ಧರ್ಮಸ್ಥಳ ಮೇಳವನ್ನು ಸೇರುತ್ತಾರೆ. ಇದುವರೆಗೆ ಬಡಗುತಿಟ್ಟಿನಲ್ಲಿ ಖ್ಯಾತರಾಗಿದ್ದ ಶಿವಕುಮಾರರು ತೆಂಕುತಿಟ್ಟಿನಲ್ಲಿ ಮೊದಲ ಬಾರಿಗೆ 'ರತಿ ಕಲ್ಯಾಣ'ದ ರತಿಯಾಗಿ ಕಾಣಿಸಿಕೊಳ್ಳುತ್ತಾರೆ. ಹೀಗೆ ರತಿ ಕಲ್ಯಾಣದ ಮನ್ಮಥ ಹಾಗೂ ರತಿ ಪಾತ್ರಗಳು ಅವರ ಬಡಗು ಹಾಗೂ ತಂಕು ತಿಟ್ಟಿನ ಮೇರು ವೇಷವಾಗಿರುವುದು ವಿಶೇಷ. ಸಮಯಪ್ರಜ್ಞೆ, ರಂಗಪ್ರಜ್ಞೆ, ಕಥಾಪ್ರಜ್ಞೆಯನ್ನು ಮುಪ್ಪರಿಸಿ ಕೊಂಡಿರುವ ಬೇಗಾರರು ರಂಗಸ್ಥಳದ ಉತ್ತಮ ಕಲಾವಿದರೆಂಬ ಅಭಿದಾನಕ್ಕೆ ಪಾತ್ರರಾಗುತ್ತಾರೆ. ಧರ್ಮಸ್ಥಳ ಮೇಳದಲ್ಲಿ ಹನ್ನೆರಡು ವರ್ಷಗಳ ಕಾಲ ನಿರಂತರವಾಗಿ ಪ್ರಧಾನ ಸ್ತ್ರೀ ವೇಷಧಾರಿಯಾಗಿ ಕಾಣಿಸಿಕೊಂಡದ್ದು ಇವರ ಹೆಗ್ಗಳಿಕೆ. ಅಲ್ಲಿ ಚಂದ್ರಮತಿ, ದ್ರೌಪದಿ, ಸೀತೆ, ಅಮ್ಮುಬಲ್ಲಾಳ್ತಿ ಮುಂತಾದ ಪಾತ್ರ ನಿರ್ವಹಣೆಯನ್ನು ಬೇಗಾರರು ಸೊಗಸಾಗಿ ಮಾಡುತ್ತಾರೆ. ಇಪ್ಪತ್ತು ವರ್ಷಗಳ ವೃತ್ತಿಮೇಳದ ತಿರುಗಾಟ ಸಾಕೆನಿಸಿದಾಗ ಧರ್ಮಸ್ಥಳ ಮೇಳಕ್ಕ ಗೌರವದಿಂದ ವಿದಾಯ ಹೇಳಿ ಬೇರೆ ವೃತ್ತಿಯನ್ನೂ ಅವಲಂಬಿಸುತ್ತಾರೆ. ಕೋಟದಲ್ಲಿ ಬದುಕಿಗಾಗಿ ಲೈಟಿಂಗ್ ಮತ್ತು ಮೈಕ್ ಸೆಟ್ ಅಂಗಡಿ, ಕೆಲವೊಮ್ಮೆ ತರಕಾರಿ ಅಂಗಡಿ, ಬಟ್ಟೆ ಮಾರಾಟ ಮುಂತಾದ ವಿವಿಧ ವೃತ್ತಿಗಳನ್ನು ಅವಲಂಬಿಸುತ್ತಾರೆ. 1995ರಲ್ಲಿ ಶೋಭಾ ಎನ್ನುವವರನ್ನು ಮದುವೆಯಾದ ಇವರು ವೃತ್ತಿ ಮೇಳದ ಕಲಾಜೀವನವನ್ನು ಬಿಟ್ಟು ಅತಿಥಿ ಕಲಾವಿದರಾಗಿ ಆಟಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಕಲಾರಾಧನೆಯನ್ನು ಮುಂದುವರಿಸುತ್ತಾರೆ. ಈಗಾಗಲೇ ಹತ್ತು ವರ್ಷಗಳಷ್ಟು ಕಾಲ ಅಮೃತೇಶ್ವರ ಪ್ರವಾಸೀ ಯಕ್ಷಗಾನ ಮಂಡಳಿಯ

ವ್ಯವಸ್ಥಾಪಕರಾದ ಅವರಿಗೆ ವೃತ್ತಿ ಮೇಳದಲ್ಲಿ ಇಲ್ಲದೆಯೂ ಯಕ್ಷಗಾನದಲ್ಲಿ ಭಾಗಿಯಾಗಿ ಬದುಕಬಹುದೆಂಬ ನಂಬಿಕೆಯಿತ್ತು. ಆ ಪ್ರವಾಸೀ ಮೇಳ ಆ ಕಾಲಕ್ಕಾಗಲೇ 800ಕ್ಕೂ ಹೆಚ್ಚು ಪ್ರದರ್ಶನ ನೀಡಿ ನಗರ ಪ್ರದೇಶದಲ್ಲಿ ಹೆಸರು ಗಳಿಸಿತ್ತು. ಇದೇ ಅವರು ಬೆಂಗಳೂರಿಗೆ ಬರುವ ಕಾರಣವೂ ಆಯಿತು. ಬೆಂಗಳೂರಿನಲ್ಲಿ ಇದ್ದು ಯಾವುದಾದರೂ ವೃತ್ತಿ ಮಾಡುತ್ತಾ ಯಕ್ಷಗಾನ ಪ್ರಸರಣದ ಕಾರ್ಯದಲ್ಲಿ ತೊಡಗಬೇಕೆಂಬ ಆಸೆಯಿಂದ 2003ರಲ್ಲಿ ಬೆಂಗಳೂರೆಂಬ 'ಮಾಯಾನಗರಿ'ಯನ್ನೂ 'ಐಟಿಪುರ'ವನ್ನೂ ಸೇರಿದ್ದು ಈಗ ಇತಿಹಾಸ.

ವೃತ್ತಿಗಾಗಿ ಮೊದಲಿಗೆ ಬೆಂಗಳೂರಿನಲ್ಲಿ ಅಂಗಡಿಯೊಂದನ್ನು ಇಟ್ಟುಕೊಂಡು ಪ್ರವೃತ್ತಿಯಾಗಿ ಯಕ್ಷಗಾನ ಪ್ರಸರಣದಲ್ಲಿ ಭಾಗಿಯಾಗುತ್ತಾರೆ. ಎರಡು ಮಕ್ಕಳ ತಂದೆಯಾದ ಇವರ ಸಂಸಾರ ನಿರ್ವಹಣೆಯಲ್ಲಿ ಮಡದಿ ಶೋಭಾಳ ಟೈಲರಿಂಗ್ ಕೂಡ ಸಹಾಯಕವಾಗುತ್ತದೆ. ಗ್ರಾಮೀಣ ಪರಿಸರದಲ್ಲಿ ಬೆಳೆದ ಯುವಕನಿಗೆ ಬೆಂಗಳೂರಿನಂತಹ ಸ್ಪರ್ಧಾ ಕಣಜದಲ್ಲಿ ಹೆಗಡೆಮನೆಯ ದಿ.ವಿ.ಆರ್. ಹೆಗಡೆ, ಕಲಾದರ್ಶಿನಿಯ ಶ್ರೀನಿವಾಸ ಸಾಸ್ತಾನ ಮುಂತಾದವರು ಸಹಾಯ ಹಸ್ತ ನೀಡುತ್ತಾರೆ. ಅತಿಥಿ ಕಲಾವಿದರಾಗಿ ಅನೇಕ ಪ್ರದರ್ಶನಗಳಲ್ಲಿ ಭಾಗಿಯಾದದ್ದೇ ಅಲ್ಲದೇ ಹವ್ಯಾಸಿಗಳಿಗೆ ಯಕ್ಷಗಾನದ ಒಳಹೊರಗು ತೋರಿಸಿಕೊಡುತ್ತಾರೆ. ಆಗ ಅಭಿಮಾನಿಗಳ, ಗೆಳೆಯರ, ಹಿತೈಶಿಗಳ ಒತ್ತಾಸೆಯಿಂದ 2004ರಲ್ಲಿ ಜನ್ಮ ತಳೆದದ್ದೇ 'ಗಾನಸೌರಭ ಕಲಾಶಾಲೆ'.

ಬೇಗಾರು ಶಿವಕುಮಾರ್ ಅವರ ಪರಿಕಲ್ಪನೆಯಾದ 'ಯಕ್ಷಗಾನಂ ವಿಶ್ವಗಾನಂ' ಎಂಬ ಗುರಿಯೊಂದಿಗೆ ಸಾಕಾರಗೊಂಡ ಈ ಯಕ್ಷಗಾನ ಶಾಲೆ ಅನೇಕ ಬಗೆಯ ವಿಶಿಷ್ಟತೆಯಿಂದ ಕೂಡಿದೆ. ಇಲ್ಲಿ ತೆಂಕುತಿಟ್ಟು ಬಡಗುತಿಟ್ಟು ಎಂಬ ಭೇದವಿಲ್ಲದೇ ಯಕ್ಷಶಿಕ್ಷಣ ವ್ಯವಸ್ಥೆ ಇದೆ. ಅದೇ ರೀತಿ ಮುಮ್ಮೇಳ, ಹಿಮ್ಮೇಳಗಳೆರಡರಲ್ಲೂ ಇಲ್ಲಿ ತರಬೇತಿ ನೀಡಲಾಗುತ್ತದೆ. ಇಷ್ಟೇ ಅಲ್ಲದೇ ಬೆಂಗಳೂರಿನ ಒಂದು ಪ್ರದೇಶಕ್ಕೆ ಸೀಮಿತವಾಗದೇ ಉತ್ತರ, ದಕ್ಷಿಣ, ಪಶ್ಚಿಮ ಭಾಗಗಳಲ್ಲೆಲ್ಲ ಈ ಶಾಲೆಯ ತರಗತಿ ನಡೆಯುತ್ತದೆ. ಹೀಗೆ ವೈವಿಧ್ಯಮಯತೆಯನ್ನು ಈ ಶಾಲೆ ರೂಢಿಸಿಕೊಂಡಿದೆ. ಇದಕ್ಕೆಲ್ಲ ಮೂಲ ಪ್ರೇರಣೆ ಬೇಗಾರರ ಪರಿಕಲ್ಪನೆಯಾದ ಯಕ್ಷಗಾನವು ವಿಶ್ವವ್ಯಾಪಿಯಾಗಬೇಕೆಂಬುದು. ಈ ನಿಟ್ಟಿನಲ್ಲಿ ಸ್ವತಃ ಅವರೇ ದುಡಿಯುತ್ತಾರೆ. ಬೆಂಗಳೂರಿನಿಂದ ದೂರವಿರುವ ಸೈಂಟ್ ಮೈಕೆಲ್ ಸ್ಕೂಲ್‌ಗೆ ಯಕ್ಷಗಾನದ ಪರಿಚಯ ಮಾಡಿಕೊಡುತ್ತಿದ್ದಾರೆ. ಅದೇ ರೀತಿ ತದ್ವಿರುದ್ಧ ದಿಕ್ಕಿನಲ್ಲಿರುವ ಬೆಂಗಳೂರಿನಿಂದ ಬಹಳಷ್ಟು ದೂರವಿರುವ ಮುದ್ದೇನಹಳ್ಳಿಗೆ ಪ್ರತಿ ಗುರುವಾರ ಬೆಳಿಗ್ಗೆ ತೆರಳಿ ಮಕ್ಕಳಿಗೆ ಯಕ್ಷಗಾನದ ಹೆಜ್ಜೆಗಾರಿಕೆ ಹೇಳಿಕೊಡುತ್ತಿದ್ದಾರೆ. ಹೀಗೆ ಯಕ್ಷಗಾನದ ಪ್ರಸರಣವನ್ನು ಎಲ್ಲ ಆಯಾಮಗಳಲ್ಲೂ ವಿಸ್ತರಿಸುತ್ತಿದ್ದಾರೆ.

ಬೇಗಾರರ ಗಾನಸೌರಭ ಯಕ್ಷಗಾನ ಶಾಲೆಯ ಇನ್ನೊಂದು ವೈಶಿಷ್ಟ್ಯವೆಂದರೆ ಇಲ್ಲಿ ವಯಸ್ಸಿನ ಭೇದವಿಲ್ಲ. ಎಳೆಯರು, ಹರೆಯದವರು, ವಯಸ್ಸಾದವರು,

ಮಹಿಳೆಯರು, ವಿದ್ಯಾರ್ಥಿಗಳು, ಐಟಿ ಸಂಸ್ಥೆಯಲ್ಲಿನ ಉದ್ಯೋಗಿಗಳು, ಬ್ಯಾಂಕ್ ನೌಕರರು – ಹೀಗೆ ವೈವಿಧ್ಯಮಯವಾದ ಶಿಷ್ಯವೃಂದ ಇವರದು. ಹಿಮ್ಮೇಳವನ್ನು ಕಲಿಸಲು ಖ್ಯಾತ ಮೃದಂಗವಾದಕರಾದ ಅನಂತ ಪದ್ಮನಾಭ ಪಾಠಕರಿದ್ದರೆ, ತೆಂಕುತಿಟ್ಟಿನ ಹೆಜ್ಜೆಗಾರಿಕೆ ಕಲಿಸಲು ಧರ್ಮಸ್ಥಳ ಯಕ್ಷಗಾನ ಕೇಂದ್ರದಲ್ಲಿ ಶಿಕ್ಷಣ ಪಡೆದಿರುವ ಲಕ್ಷ್ಮೀನಾರಾಯಣ ಕಲ್ಚಾರ್ ಅವರು ಇದ್ದಾರೆ. ಈ ಶಾಲೆಯ ಆಶ್ರಯದಲ್ಲಿ ನಡೆಯುತ್ತಿರುವ ಗಾನಸೌರಭ ಯಕ್ಷಗಾನ ಮೇಳವು ತೆಂಕು–ಬಡಗುತಿಟ್ಟುಗಳೆಡರಲ್ಲೂ ಪ್ರದರ್ಶನ ನೀಡುವಷ್ಟು ಕಲಾವಿದರನ್ನು ಒಳಗೊಂಡಿದೆ. ಹದಿನೈದು ವೇಷಗಳಿಗಾಗುವಷ್ಟು ವೇಷಭೂಷಣ ಸಾಮಗ್ರಿಗಳನ್ನು ಈ ಮೇಳ ಹೊಂದಿರುವುದು ವಿಶೇಷ. ಬೇಗಾರರ ನೇತೃತ್ವದ ಈ ತಂಡ ಈಗಾಗಲೇ 600ಕ್ಕೂ ಹೆಚ್ಚು ಪ್ರದರ್ಶನವನ್ನು ನೀಡಿ ಬೆಂಗಳೂರು ಮಹಾನಗರದ ಜನರಿಗೆ ಯಕ್ಷಗಾನದ ಸವಿಯನ್ನು ಉಣಬಡಿಸಿದೆ. ಇದರಿಂದಾಗಿ ಬೇಗಾರರಿಗೆ ಕರಾವಳಿ, ಮಲೆನಾಡಲ್ಲದೇ ಬೇರೆ ಪ್ರದೇಶದಲ್ಲಿಯೂ ಅಭಿಮಾನಿ ಗಳಿದ್ದಾರೆ.

ಯಕ್ಷಶ್ರೀ, ಕಲಾಭೂಷಣ, ಯುವಚೇತನ, ವಾಹಿನಿಪ್ರತಿಭಾ ಪುರಸ್ಕಾರ ಮೊದಲಾದ ಪ್ರಶಸ್ತಿಗಳನ್ನು ಬೇಗಾರರಿಗೆ ಇತ್ತು ನಾಡಿನ ಅನೇಕ ಸಂಘಸಂಸ್ಥೆಗಳು ಗೌರವಿಸಿವೆ. ಗಾನಸೌರಭದ ಮೂಲಕ ಬೇಗಾರರು ಕೂಡ ಯಕ್ಷಗಾನದಲ್ಲಿ ಮತ್ತು ಬೇರೆ ಕಲೆಗಳಲ್ಲಿ ದುಡಿದವರನ್ನು ಗುರುತಿಸಿ ಗಾನಸೌರಭ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಾ ಬಂದಿದ್ದಾರೆ. ವೃತ್ತಿ ಬದುಕಿನ ಕಷ್ಟಕಾರ್ಪಣ್ಯಗಳನ್ನು ಕಂಡುಂಡ ಬೇಗಾರರು ವೃತ್ತಿಕಲಾವಿದರಲ್ಲಿ ಅಸಹಾಯಕರನ್ನು ಗುರುತಿಸಿ ಸಹಾಯಧನವನ್ನು ನೀಡುವ ಆದರ್ಶ ಪರಂಪರೆಯನ್ನು ಇಟ್ಟುಕೊಂಡಿದ್ದಾರೆ. ಎಲ್ಲ ಸಹಕಲಾವಿದರೂ ಇತರರ ಕಷ್ಟಕ್ಕೆ ಸ್ಪಂದಿಸುವ ಅವರ ಗುಣವನ್ನು ಮೆಚ್ಚುತ್ತಾರೆ. ಇದರ ಜೊತೆಗೆ ಕಲಾಪೋಷಕ ಉದಾರಿಗಳನ್ನು ಗುರುತಿಸಿ 'ಕಲಾಪೋಷಕ' ಪ್ರಶಸ್ತಿಯನ್ನು ನೀಡಿ ಗೌರವಿಸುವ ಮೂಲಕ ಪೋಷಕರಲ್ಲಿಯೂ ಇನ್ನೂ ಹೆಚ್ಚು ಕಲಾಸೇವೆಯನ್ನು ಮಾಡುವ ಉತ್ಸಾಹವನ್ನು ತುಂಬುತ್ತಿದ್ದಾರೆ. ಕಲಾವಿದನಾದವನಿಗೆ ಭದ್ರತೆ ಬೇಕೆಂಬುದು ಅವರ ಮನದಾಳದ ಮಾತು.

2014ರ ಜುಲೈ 20ರಂದು ನಡೆಯುವ 'ಗಾನಸೌರಭ ಶಾಲೆಯ ದಶಮಾನೋತ್ಸವ'ದ ಸಂದರ್ಭದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಯಕ್ಷಗಾನ ಅಧ್ಯಯನ ಪೀಠ ಸ್ಥಾಪನೆಗೆ ಕಾರಣರಾದ ದಾನಿ ಡಾ. ಪಿ. ದಯಾನಂದ ಪೈ ಅವರಿಗೆ 'ಕಲಾಪೋಷಕ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದ್ದಾರೆ. ಹತ್ತರ ಗಾನಸೌರಭ ಪ್ರಶಸ್ತಿಯನ್ನು ಚಲನಚಿತ್ರ ನಟಿ ಭಾವನಾ, ರಾಮಣ್ಣ, ತೆಂಕುತಿಟ್ಟಿನ ಯಕ್ಷಗಾನ ಕಲಾವಿದ ಬಿ. ರಾಘವ ದಾಸ್, ಬಡಗುತಿಟ್ಟಿನ ಹವ್ಯಾಸೀ ಕಲಾವಿದ ಸಂಜಯ ಬೆಳೆಯೂರರಿಗೆ ನೀಡಿ ಗೌರವಿಸಲಾಗುತ್ತದೆ. ಗಾನಸೌರಭ ಅಭಿನಂದನೆಯನ್ನು ಪಡೆಯಲಿರುವವರು ಖ್ಯಾತ ಮದ್ದಳೆಗಾರ ಮತ್ತು ಶಾಲೆಯ ಗುರು ಅನಂತಪದ್ಮನಾಭ ಪಾಠಕ್ ದಂಪತಿಗಳು.

ಬೇಗಾರರು ಮತ್ತವರ ಮಿತ್ರರು ಆಯೋಜಿಸುವ ಈ ದಶಮಾನೋತ್ಸವದ ಸಂದರ್ಭದಲ್ಲಿ ಯಕ್ಷಗಾನದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತುಕೊಟ್ಟು ಯಕ್ಷಗಾನದ ಬರಹಗಳನ್ನೊಳಗೊಂಡ 'ಯಕ್ಷಗಾನಂ ವಿಶ್ವಗಾನಂ' ಎಂಬ ಸ್ಮರಣ ಸಂಚಿಕೆಯನ್ನು ಹೊರತರಲಾಗುತ್ತದೆ. ದಿನಪೂರ್ತಿ ಯಕ್ಷಗಾನ, ತಾಳಮದ್ದಳೆ, ಪ್ರಾತ್ಯಕ್ಷಿಕೆ ಮೊದಲಾದ ರಂಗಚಟುವಟಿಕೆಗಳಿಂದ ರಚನಾತ್ಮಕವಾಗಿ ದಶಮಾನದ ಸಂಭ್ರಮವನ್ನು ಆಚರಿಸಲಾಗುವುದು ವಿಶೇಷ.

ಯಕ್ಷಗಾನ ಕಲಾವಿದರಾಗಿ ತಮ್ಮ ಚುರುಕು ನಡೆ, ಸ್ಪಷ್ಟ ಭಾಷಾ ಬಳಕೆ, ಆಕರ್ಷಕ ನಿಲ್ಲುವ ಭಂಗಿ, ಹದವರಿತು ಪಾತ್ರನಿರ್ವಹಿಸುವ ವಿಧಾನಗಳಿಂದ ತೆಂಕು-ಬಡಗುತಿಟ್ಟುಗಳೆರಡರಲ್ಲಿಯೂ ಖ್ಯಾತಿಯನ್ನು ಗಳಿಸಿರುವ ವಿರಳ ಕಲಾವಿದರಲ್ಲಿ ಒಬ್ಬರಾದ ಬೇಗಾರರ ಯಕ್ಷಗಾನದ ಕಾಳಜಿಗೆ ಈ ಹತ್ತರ ಹಬ್ಬ ಸಾಕ್ಷಿಯಾಗಲಿದೆ. ತಮ್ಮ ಯಕ್ಷಗಾನ ಕಲಾಶಾಲೆಯ ಮೂಲಕ ಯಕ್ಷಗಾನವನ್ನು ಉಳಿಸಬೇಕೆಂಬ ಬೇಗಾರರ ಪ್ರಯತ್ನ ಅಭಿನಂದನಾರ್ಹ. ವೃತ್ತಿ ಬದುಕಿನಿಂದ ವಿಮುಖರಾದರೂ ಯಕ್ಷಗಾನ ಕಲಾಪ್ರಸರಣದಲ್ಲಿಯೇ ಬದುಕನ್ನು ಕಟ್ಟಿಕೊಳ್ಳುವ ಬೇಗಾರರ ಮಾರ್ಗ ಇತರ ಕಲಾವಿದರಿಗೆ ಮಾದರಿಯೂ ಹೌದು.

■

ಹಾಸ್ಯಕ್ಕೆ ಮನ್ನಣೆ ತಂದ ಕುಂಜಾಲು

ಯಕ್ಷಗಾನ ಪ್ರಾಚೀನ ಕಾಲದ ಪುರಾಣಗಳ ಆಧಾರದ ಮೇಲೆ ಸೃಷ್ಟಿಗೊಳ್ಳುವ ದೃಶ್ಯಕಾವ್ಯವಾದರೂ ಸಮಕಾಲೀನ ಹಾಗೂ ಸಾಮಾಜಿಕ ಅಂಶಗಳು ಇಲ್ಲಿ ಬರುವುದರ ಮೂಲಕ ಅದು ಸಾರ್ವಕಾಲಿಕವಾಗುತ್ತದೆ. ಇಂತಹ ಸಾರ್ವಕಾಲಿಕತೆ ಯಕ್ಷಗಾನಕ್ಕೆ ಲಭಿಸುವುದು ಹಾಸ್ಯಗಾರ (ವಿದೂಷಕ)ನ ಪಾತ್ರದ ಮೂಲಕ. ಹಾಸ್ಯಗಾರ ಒಮ್ಮೆ ಝುಗ್ಗನೆ ಎದ್ದು ವರ್ತಮಾನಕ್ಕೆ ಜೀಕುತ್ತಾನೆ. ಆತನ ವೇಷಭೂಷಣ, ಹಾವಭಾವ, ಕುಣಿತ ಮಣಿತ, ಮಾತು ಪದ್ಯಗಳೆಲ್ಲವೂ ಯಕ್ಷಗಾನ ರಂಗಸ್ಥಳದಲ್ಲಿ ವಿಭಿನ್ನವಾಗಿ ವಿಶಿಷ್ಟವಾಗಿ ಬರುತ್ತದೆ. ಇಂತಹ ಹಾಸ್ಯಗಾರ ಪಾತ್ರದ ಉದ್ದೇಶವನ್ನು, ಔಚಿತ್ಯವನ್ನು, ಕಲಾತ್ಮಕ ವಿಸ್ತಾರವನ್ನು ಅರಿತು ಪ್ರದರ್ಶನದಲ್ಲಿ ಅಳವಡಿಸಿಕೊಂಡಿರುವ ಕಲಾವಿದರು ಬೆರಳೆಣಿಕೆಯಷ್ಟು ಜನ. ಅಂತಹವರಲ್ಲಿ ಈಚೆಗೆ ನಿಧನರಾದ (13.06.2014) ಕುಂಜಾಲು ರಾಮಕೃಷ್ಣ ನಾಯಕರು ಒಬ್ಬರು. ಬಡಗುತ್ತಿಟ್ಟಿನಲ್ಲಿ ಎರಡು–ಮೂರು ದಶಕಗಳ ಕಾಲ ಹಾಸ್ಯಕ್ಕೆ 'ಕುಂಜಾಲು' ಎಂಬ ಪದ ಪರ್ಯಾಯವೋ ಎಂಬಷ್ಟು ಹೆಸರುವಾಸಿ ಯಾಗಿದ್ದರು. ಯಕ್ಷಗಾನದ 'ತೆನಾಲಿ', 'ಹಾಸ್ಯ ಚಕ್ರವರ್ತಿ', 'ಹಾಸ್ಯರತ್ನ' ಎಂದೆಲ್ಲ ಅಭಿಮಾನಿಗಳಿಂದ ಕರೆಸಿಕೊಂಡಿದ್ದ ರಾಮಕೃಷ್ಣ ಅವರ ನಿಧನದಿಂದ ಹಳೆಯ ತಲೆಮಾರಿನ ಹಾಸ್ಯ ಪರಂಪರೆಯ ಕೊಂಡಿಯೊಂದು ಕಳಚಿಹೋದಂತಾಗಿದೆ.

ಕುಂಜಾಲು ರಾಮಕೃಷ್ಣಯ್ಯ ಅವರ ದೈಹಿಕ ಸೌಷ್ಟವ ಹಾಗೂ ಮನೋವೃತ್ತಿಗಳೆರಡೂ ಹಾಸ್ಯಕ್ಕೆ ಹೇಳಿ ಮಾಡಿಸಿದಂತಹುದು.

ಉಡುಪಿ ತಾಲ್ಲೂಕಿನ ಬ್ರಹ್ಮಾವರ ಸಮೀಪದ ಕುಂಜಾಲುವಿನ ಪದ್ಮನಾಭ ನಾಯಕ್ ಹಾಗೂ ಶಾರದಾಬಾಯಿಯವರ ಮಗನಾಗಿ 1945ರಲ್ಲಿ ಜನಿಸಿದ ರಾಮಕೃಷ್ಣಯ್ಯ ಅವರು ಓದಿದ್ದು 8ನೆಯ ತರಗತಿಯವರೆಗೆ. ಆದರೆ ಖ್ಯಾತ ಮದ್ದಲೆಗಾರ ವಿ. ತಿಮ್ಮಪ್ಪ ನಾಯಕರ ಮೂಲಕ 13ನೆಯ ವಯಸ್ಸಿನಲ್ಲೇ ಕೊಲ್ಲೂರು ಮೂಕಾಂಬಿಕಾ ಯಕ್ಷಗಾನ ಮಂಡಳಿಗೆ ಸೇರಿದ ಇವರು ಅಲ್ಲಿ ಕಲಿತದ್ದು ಅಪಾರ. ಮೊದಮೊದಲಿಗೆ ಕೋಡಂಗಿ ವೇಷ, ಬಾಲಗೋಪಾಲವೇಷ ಒತ್ತು ಹಾಸ್ಯಗಾರ ವೇಷಗಳನ್ನು ಧರಿಸುತ್ತ ಸಂಗೀತಗಾರರ ಚಿಕ್ಕಪ್ಪ ನೀರಬಚ್ಚಲು ನಾರಾಯಣ ನಾಯಕ್ ಹಾಗೂ ಮುಖ್ಯ ಹಾಸ್ಯಗಾರ ಹಾರಾಡಿ ಕೊರಗಪ್ಪನವರ ಮಾರ್ಗದರ್ಶನದಲ್ಲಿ ಅನುಭವ ಗಳಿಸಿ ದರು. ಪ್ರಪ್ರಥಮ ಬಾರಿಗೆ 'ಬೇಡರ ಕಣ್ಣಪ್ಪ'ದ 'ಕಾಶಿಮಾಣಿ' ಪಾತ್ರವನ್ನು ವಹಿಸಿ ಹಾಸ್ಯದಲ್ಲಿ ತಮಗಿರುವ ಕೌಶಲವನ್ನು ಸಾಬೀತುಪಡಿಸಿದರು. ಇದೇ ಪಾತ್ರ ಮುಂದೆ ಅವರ 'ಬ್ರಾಂಡ್' ಪಾತ್ರವಾಯಿತು. ಇಂದಿಗೂ ರಸಿಕರು ನೆನೆಯುವುದು ಅವರ 'ಕಾಶಿಮಾಣಿ' ಯನ್ನೇ. ಅವರ 'ಕಾಶಿಮಾಣಿ' ಜನಮಾನಸದಲ್ಲಿ ಚಿರಕಾಲವೂ ಉಳಿಯುವ ಪಾತ್ರ.

ಕುಂಜಾಲು ಅವರು ನಾಲ್ಕು ದಶಕಗಳ ಕಾಲ ಬಡಗುತಿಟ್ಟು ಯಕ್ಷಗಾನದ ಹಾಸ್ಯ ಚಕ್ರವರ್ತಿಯಾಗಿ ಮೆರೆದವರು. ಕೊಲ್ಲೂರು, ಮಾರಣಕಟ್ಟೆ, ಅಮೃತೇಶ್ವರಿ, ಸಾಲಿಗ್ರಾಮ, ಮಂದರ್ತಿ, ಇಡಗುಂಜಿ, ಪಂಚಲಿಂಗೇಶ್ವರ, ಶಿರಸಿಯ ಮಾರಿಕಾಂಬಾ ಮೇಳಗಳಲ್ಲಿ ಅವರು ದುಡಿದಿದ್ದಾರೆ. ಡಾ. ಶಿವರಾಮ ಕಾರಂತರ ಯಕ್ಷರಂಗ ತಂಡದಲ್ಲಿ ಭಾಗವಹಿಸಿದ್ದ ಅವರು ವಿಶಿಷ್ಟ ಬಗೆಯ ಕುಣಿತಕ್ಕೆ ಮೊನಚನ್ನು ಕಾರಂತ ರಿಂದಲೇ ಪಡೆದವರು. ಬಯಲಾಟದ ಕಲಾವಿದರಲ್ಲಿ ಹಾಸ್ಯಗಾರನಿಗೆ ತಾರಾ ಮೌಲ್ಯವನ್ನು ತಂದುಕೊಟ್ಟವರು ಕುಂಜಾಲು ರಾಮಕೃಷ್ಣ ನಾಯಕರು. ಕರಾವಳಿ ಮಲೆನಾಡು ಹಾಗೂ ಬೆಂಗಳೂರಿನಲ್ಲಿ ಇವರ ಅಭಿಮಾನಿ ಬಳಗ ಅಪಾರ. ಹಾಸ್ಯ ತಮ್ಮ ಮನೋವೃತ್ತಿಗೆ ಅಂಟಿಕೊಂಡಿದೆ ಎಂದು ದೃಢವಾಗಿ ನಂಬಿದ್ದರು. ಹೀಗಾಗಿ ಪಾತ್ರಾಭಿ ವ್ಯಕ್ತಿಯ ಸಮಯದಲ್ಲಿ ಮನಸ್ಸಿಗೆ ಹೊಳೆದದ್ದನ್ನು ಹಾಸ್ಯ ಮುಖೇನ ವ್ಯಕ್ತಪಡಿಸುವ ಶಕ್ತಿ ಇವರಿಗಿತ್ತು. ಪ್ರಮುಖ ವೇಷಧಾರಿಗಳ ಕುಣಿತ ಹಾಗೂ ಮಾತನ್ನು ಹಾಸ್ಯಕ್ಕೆ ಹೊರಳಿಸುವ ಕುಂಜಾಲರ ಬಗೆಯೂ ವಿನೂತನ ವಾಗಿದೆ. ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ಪದ್ಮಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ, ಗೋಡೆ ನಾರಾಯಣ ಹೆಗಡೆ, ಶಿರಿಯಾರು ಮಂಜುನಾಯ್ಕ, ಉಡುಪಿ ಬಸವ, ಐರೋಡಿ ಗೋವಿಂದಪ್ಪ, ಕೋಟ ವೈಕುಂತ, ಅರಾಟೆ ಮಂಜು ಮುಂತಾದವರೆಲ್ಲರ ಎದುರಿಗೆ ಸಮರ್ಥ ಹಾಸ್ಯಗಾರರಾಗಿ ಮಿಂಚಿದವರು.

ಕುಂಜಾಲು ಅವರು 'ಕಾಶಿಮಾಣಿ'ಯಲ್ಲದೆ ಇನ್ನಿತರ ಪಾತ್ರಗಳನ್ನು ಯಶಸ್ವಿ ಯಾಗಿ ನಿರ್ವಹಿಸಿದ್ದಾರೆ. ಭಾಸವತಿಯ ವಿಲಕ್ಷಣ, ಸುಹಾಸಿನಿ ಪರಿಣಯದ ವಿಡೂರಥ,

ನಳದಮಯಂತಿಯ ಬಾಹುಕ, ಗುರುಮಠದ ದಡ್ಡ, ಗದಾಯುದ್ಧದ ಬೇಹಿನ ಚರ, ಪಟ್ಟಾಭಿಷೇಕದ ಮಂಥರೆ, ಭೀಷ್ಮವಿಜಯದ ಬ್ರಾಹ್ಮಣ, ವಿರಾಟಪರ್ವದ ವಿಜಯ, ಉತ್ತರನ ಪೌರುಷದ ಉತ್ತರಕುಮಾರ ಮುಂತಾದ ಪಾತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಎದುರು ಪಾತ್ರಗಳ ದೌರ್ಬಲ್ಯವನ್ನು ಹಾಸ್ಯಕ್ಕೆ ವಸ್ತುವಾಗಿಸುವುದು, ಕುಣಿತದ ಹೊಸತನದ ಮೂಲಕ ಹಾಸ್ಯ ಹೊಮ್ಮಿಸುವುದು ಅವರ ಶೈಲಿ. ಹಾಸ್ಯಗಾರ ನಾದವನು ಹೊಸ ಕೊಡುಗೆ ನೀಡಲು ಸದಾ ಬದ್ಧನಾಗಬೇಕೆಂಬುದು ಇವರ ನಿಲುವು. ಭಾಷೆಯ ಬಳಕೆಯಲ್ಲೂ ಕುಂಜಾಲು ಅವರಿಗೆ ಸ್ಪಷ್ಟ ಅಭಿಪ್ರಾಯ ವಿತ್ತು. ಆಯಾಯ ಪಾತ್ರದ 'ಘನತೆ'ಯನ್ನು ಹೊಂದಿಸಿಕೊಂಡು ತಕ್ಕ ಭಾಷೆ ಬಳಸಿ ಹಾಸ್ಯ ಮೂಡಿಸುತ್ತಿದ್ದರು. ಅಶ್ಲೀಲವಾಗದಂತೆ ಹಾಸ್ಯವನ್ನು ಸುಸಂಸ್ಕೃತ ವಾಗಿ ತೋರ್ಪಡಿ ಸುತ್ತಿದ್ದುದು ಇವರ ಹೆಗ್ಗಳಿಕೆ. ಹಾಸ್ಯ ಕೇವಲ ಹಾಸ್ಯಕ್ಕಾಗಿ ಬಾರದೇ ಅದರ ಹಿಂದಿರುವ ಸತ್ಯವನ್ನು ಬಿಂಬಿಸಲು, ಸಮಾಜದ ವಕ್ರತೆಯನ್ನು ತೋರಿಸಲು ಸಹಕಾರಿಯಾಗ ಬೇಕೆಂಬುದೇ ಅವರ ದೃಷ್ಟಿಕೋನವಾಗಿತ್ತು. ಪಾತ್ರದ ಆಳಕ್ಕೆ ಇಳಿದು, ಸಾಮಾಜಿಕ ಸಂವಹನದ ನೆಲೆಯಲ್ಲಿ ವ್ಯಂಗ್ಯವಾದ ಮಾತುಗಳಿಂದ, ಚಾಟೂಕ್ತಿಗಳ ಮೂಲಕ, ಭಾವಪೂರ್ಣವಾಗಿ ಪಾತ್ರವನ್ನು ರಂಗದಲ್ಲಿ ಕಡೆದು ನಿಲ್ಲಿಸುವುದು ಇವರ ವಿಶೇಷತೆ. ಕುಂಜಾಲು ಅವರ ಕುಣಿತ, ಭಾಷೆ, ಅಭಿನಯ, ಅಂಗಚಲನೆ, ರಂಗದುಡಿಮೆ, ವೇಷಗಾರಿಕೆಯಲ್ಲೆಲ್ಲ ಹಾಸ್ಯಗಾರಿಕೆಯ ಅನನ್ಯತೆಯನ್ನು ಕಾಣಬಹುದಿತ್ತು.

ಪಾರ್ಶ್ವವಾಯು ಪೀಡಿತರಾಗಿ 17 ವರ್ಷಗಳಿಂದ ರಂಗದಿಂದ ದೂರ ಸರಿ ದಿದ್ದರೂ ರಂಗಧರ್ಮದ ಬಗ್ಗೆ ಅವರು ಚಿಂತಿಸುತ್ತಲೇ ಇದ್ದರು. ಹಾಸ್ಯಗಾರನಾದವನು ಸಭ್ಯತೆಯೊಂದಿಗೆ ಪಾತ್ರನಿರ್ವಹಿಸಬೇಕೆಂದು ಬಯಸುತ್ತಿದ್ದರು. ಹಾಸ್ಯಗಾರನಿಗೆ ಔಚಿತ್ಯ ಪ್ರಜ್ಞೆ ಇರಬೇಕೆಂಬುದು ಅವರ ಅಭಿಮತ. ಈಚೆಗೆ ಗುಣವಂತೆಯಲ್ಲಿ ಶ್ರೀ ಇಡಗುಂಜಿ ಯಕ್ಷಗಾನ ಮಂಡಳಿಯಿಂದ 'ಕರೆಮನೆ ಗಜಾನನ ಹೆಗಡೆ ಪ್ರಶಸ್ತಿ' ಸ್ವೀಕರಿಸುತ್ತ ಅವರು ಆಡಿದ ಮಾತುಗಳು ಮನ ಕಲುಕುವಂತಹುದು. ಅವರ ಮಾತು ಗಳಲ್ಲಿ ಒಬ್ಬ ಮಾಗಿದ ಕಲಾವಿದನ ದನಿ ಇತ್ತು. ನಾಲ್ಕು ಜನರ ಚಪ್ಪಾಳೆಗೋಸ್ಕರ ದೂತನಾದ ವನು ರಾಜನನ್ನು ಮೀರಿಸುವುದು ಸರಿಯಲ್ಲ ಎನ್ನುವ ಮೂಲಕ ಇಂದು ರಂಗದಲ್ಲಿ ನಡೆಯುತ್ತಿರುವ ಅಸಂಗತಗಳನ್ನು ಬಿಚ್ಚಿಟ್ಟಿದ್ದರು. ಇಂದಿನ ಪ್ರೇಕ್ಷಕರಿಂದ ಕೆಲವು ಹಾಸ್ಯ ಪಾತ್ರಧಾರಿಗಳು ದಾರಿ ತಪ್ಪುತ್ತಿರುವುದರ ಬಗ್ಗೆ ಅವರಿಗೆ ವಿಷಾದವಿತ್ತು. ಹಾಸ್ಯ ಎಂದೂ ಅಪಹಾಸ್ಯ ಆಗಬಾರದು ಎಂದು ಹೇಳಿದ ಅವರು ಅದರಂತೆ ನಡೆದುಕೊಂಡವರು.

ಕುಂಜಾಲು ರಾಮಕೃಷ್ಣ ನಾಯಕರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಉಡುಪಿ ಕಲಾರಂಗದ ಬಿ.ಬಿ. ಶೆಟ್ಟಿ ಪ್ರಶಸ್ತಿ, ಸಾಲಿಗ್ರಾಮ ಮೇಳದ ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ, ಮಂದರ್ತಿ ಕ್ಷೇತ್ರ ಪ್ರಶಸ್ತಿ, ಬೆಂಗಳೂರಿನ 'ಯಕ್ಷ

ದೇಗುಲ' ಪ್ರಶಸ್ತಿ, ರಾಜ್ಯೋತ್ಸವ ಪುರಸ್ಕಾರ, ಇಡಗುಂಜಿ ಮೇಳದ ಶ್ರೀ ಕೆರೆಮನೆ ಗಜಾನನ ಹೆಗಡೆ ಪ್ರಶಸ್ತಿ ಮುಂತಾದ ಅನೇಕ ಗೌರವಗಳು ಸಂದಿವೆ. ಪತ್ನಿ ಜಲಜಾ, ಮಕ್ಕಳಾದ ಪ್ರಕಾಶ, ಶಿಶಿಕಲಾ ಅವರನ್ನು ಅಗಲಿರುವ ಕುಂಜಾಲು ಅವರು ಬಹಳ ಕಾಲದಿಂದ ರಂಗದಲ್ಲಿ ನಟಿಸದೆ ಇದ್ದರೂ ಯಕ್ಷಗಾನ ರಸಿಕರ ಕಣ್ಮಣಿಯಾಗಿ ನೆನಕೆಯ ವ್ಯಕ್ತಿಯಾಗಿ ಬಾಳಿದ್ದು ಅವರ ಕಲಾರಾಧನೆಗೆ ಸಂದ ಗೌರವ. ■

ಯಕ್ಷಗಾನದ ಒಳನೋಟ ನೀಡುವ 'ಒಡ್ಡೋಲಗ'

ಕನ್ನಡ ಸಾರಸ್ವತ ಲೋಕದಲ್ಲಿ ಸಂಸ್ಮರಣ ಗ್ರಂಥಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಕಳೆದ ನೂರು ವರ್ಷಗಳಲ್ಲಿ ಅಸಂಖ್ಯ ಸಂಸ್ಮರಣ ಗ್ರಂಥಗಳು ಪ್ರಕಟಗೊಂಡಿವೆ. ಅವುಗಳ ರಚನೆಯ ಹಿನ್ನೆಲೆ ಭಿನ್ನಭಿನ್ನವಾಗಿದ್ದರೂ ಅವು ಕಟ್ಟಿಕೊಡುವ ಸಾಂಸ್ಕೃತಿಕ ಲೋಕದ ಪರಿಚಯ ಮಹತ್ವವಾದುದು. ಈ ಬಗೆಯ ಗ್ರಂಥಗಳಲ್ಲಿ ಎರಡು ಪ್ರಕಾರಗಳಿದ್ದು ಕೆಲವು ಸಂಸ್ಮರಣ ಗ್ರಂಥಗಳಾಗಿಯೇ ಉಳಿದುಬಿಡುತ್ತವೆ. ಮತ್ತೆ ಕೆಲವು ಸೀಮಿತ ಉದ್ದೇಶದ ವ್ಯಾಪ್ತಿಯನ್ನು ಮೀರಿ ಸಾಂಸ್ಕೃತಿಕ ದಾಖಲೆಯಾಗಿ ಮೆರೆಯುತ್ತವೆ. ಬಂಟರ ಯಕ್ಷಗಾನ ಕಲೋತ್ಸವದ ಸ್ಮರಣೆಗಾಗಿ ಹೊರತಂದ "ಒಡ್ಡೋಲಗ" ಎರಡನೆಯ ವರ್ಗಕ್ಕೆ ಸೇರಿದಂತಾದ್ದಾಗಿದೆ. ಇದು ಕೇವಲ ಬಂಟರ ಸಮಾಜದ ಕಲಾಚರಿತ್ರೆಯಾಗಿಲ್ಲ. ಬದಲು ಬಂಟರು ಯಕ್ಷಗಾನ ಕಲಾಪ್ರಕಾರಕ್ಕೆ ನೀಡಿದ ಕೊಡುಗೆಯ ದಾಖಲೆಯು ಮಾಹಿತಿಯ ಕೋಶವೂ ಆಗಿದೆ. ಅಷ್ಟೇ ಅಲ್ಲದೇ ಪಾರಂಪರಿಕ ಯಕ್ಷಗಾನದ ಬೆಳವಣಿಗೆಯ ಮಜಲುಗಳ ವಿಹಂಗಮ ನೋಟ ಇಲ್ಲಿ ಲಭ್ಯವಾಗಿದ್ದು ಆ ಬೆಳವಣಿಗೆಯಲ್ಲಿ ಬಂಟರ ಸಮಾಜದ ಕಲಾವಿದರ ಕಾಣ್ಕೆಯ ವಿಮರ್ಶೆಯೂ ಸುದೀರ್ಘವಾಗಿ ಬಂದಿದೆ.

ಒಡ್ಡೋಲಗದಲ್ಲಿರುವ ಲೇಖನಗಳಲ್ಲಿ ಎರಡು ಪ್ರಧಾನ ಎಳೆಗಳು ಕಂಡುಬರುತ್ತವೆ. ಮೊದಲಭಾಗವಾದ ಯಕ್ಷ ಪ್ರಸಂಗಗಳಲ್ಲಿ 58 ಲೇಖನಗಳಿದ್ದು ಯಕ್ಷಗಾನದ ಕುರಿತಾದ ಪ್ರೌಢ ಜಿಜ್ಞಾಸೆಗಳ ಮಹಾಪೂರವೇ ಇದೆ. ಉಳಿದ 32 ಲೇಖನಗಳಲ್ಲಿ ಯಕ್ಷಗಾನ

ಮೇಳಗಳನ್ನು ಕಟ್ಟಿ ಬೆಳೆಸಿದ, ಯಕ್ಷಗಾನ ಕಲಾವಿದರಾಗಿ ಮೆರೆದ ಬಂಟ ಜನಾಂಗದ ಮಹನೀಯರ ಪರಿಚಯ ಹಾಗೂ ಕೊಡುಗೆಯ ವಿವರಗಳು ಸುದೀರ್ಘವಾಗಿ ಬಂದಿವೆ. ಮೂಲತಃ ಬಂಟರು ವ್ಯವಸಾಯವನ್ನು ಮೂಲ ಕಸುಬಾಗಿ ಉಳ್ಳವರು. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ, ಸಾಹಿತ್ಯಕ, ರಾಜಕೀಯ, ಶೈಕ್ಷಣಿಕ ಲೋಕದಲ್ಲಿ ಅವರು ಮೂಡಿಸಿರುವ ಛಾಪು ಅನನ್ಯವಾದದು. ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಈ ಸಮುದಾಯ ಮಾಡಿರುವ ಕೈಂಕರ್ಯ ವಿಶಿಷ್ಟವಾದುದು. ಕಳೆದ ನೂರು ವರ್ಷಗಳಲ್ಲಿ ಅಸಂಖ್ಯ ಬಂಟರು ಯಕ್ಷಗಾನ ಕಲೆಯ ನಾನಾ ಪ್ರಾಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಈ ಕೃತಿಯ ಸುಮಾರು 200 ಪುಟಗಳಲ್ಲಿ ಈ ಕಲಾಸಾಧಕರ ಪರಿಚಯ, ಸಾಧನೆಗಳ ಚಿತ್ರಣ ಬಂದಿದ್ದು ಅವು ಸಮಗ್ರ ಹಾಗೂ ಸಮರ್ಪಕವಾಗಿವೆ.

ಈ ಕಲಾಸಾಧಕರ ಕುರಿತಾದ ಲೇಖನಗಳಲ್ಲಿ ಬಹುಮುಖ್ಯವಾದುವೆಂದರೆ ವಿದ್ವಾನ್ ಕಾಂತರೈ, ಶ್ರೀ ಎನ್.ಪಿ.ಶೆಟ್ಟಿ, ರಾಮಚಂದ್ರ ಉಜ್ಜಿಲ, ಡಾ|| ವೈ. ಚಂದ್ರ ಶೇಖರ ಶೆಟ್ಟಿ ಅವರು ಬರೆದಿರುವ ಲೇಖನಗಳಾಗಿವೆ. ಕವಿಭೂಷಣ ವೆಂಕಪ್ಪ ಶೆಟ್ಟಿಯವರ ಬದುಕು ಮತ್ತು ಸಾಧನೆಯ ವಿವರ ಸುದೀರ್ಘವಾಗಿ ಬಂದಿದೆ. ಅಳಿಕೆ ರಾಮರೈ, ನಾರಾಯಣ ಶೆಟ್ಟಿ ಹಾಗೂ ನಗರ ಜಗನ್ನಾಥ ಶೆಟ್ಟಿಯವರ ಕಲಾ ಪ್ರೌಢಿಮೆಯ ಚಿತ್ರಣ ಹೃದಯಂಗಮವಾಗಿ ಚಿತ್ರಿತವಾಗಿದೆ. ಕೋಟೆಕಾರು ದೇರಣ್ಣರೈ ಗಳ ಮದ್ದಲೆಯ ವೈಭವದೊಂದಿಗೆ ಹಿಮ್ಮೇಳದ ಸ್ವಾರಸ್ಯಕರ ಅಂಶಗಳು ಬಂದಿವೆ. ಡಾ|| ಎಂ.ಪ್ರಭಾಕರ ಜೋಷಿಯವರು 'ಉದಯವಾಣಿ'ಯ ಮೂಲಕ ಪರಿಚಯಿಸಿರುವ ಅಸಂಖ್ಯ ಬಂಟ ಸಮುದಾಯದ ಕಲಾವಿದರ ಪರಿಚಯವೂ ಇಲ್ಲಿದೆ. ಹೀಗೆ ಈ ಎರಡನೇ ಭಾಗದಲ್ಲಿ ಈ ರೀತಿಯ ವ್ಯಕ್ತಿ ಚಿತ್ರಣಕ್ಕೆ ಮೀಸಲಾಗಿದ್ದರೂ ಆ ಮೂಲಕ ಯಕ್ಷಗಾನ ಕಲೆಯ ಬೆಳವಣಿಗೆ ಈ ಕಲಾಪ್ರಾಕಾರದ ಏರುಪೇರುಗಳ ಚಿತ್ರಣ, ಕಾಲದೊಂದಿಗೆ ಈ ಕಲೆಯ ಕೊಳು ಕೊಡುವಿಕೆಯ ವಿವರಗಳೆಲ್ಲ ಬಂದಿರುವುದು ವಿಶೇಷವಾಗಿದೆ.

'ಒಡ್ಡೋಲಗ' ಕನ್ನಡದ ಸಂದರ್ಭದಲ್ಲಿ ಮುಖ್ಯವಾಗುವುದು ಅದರ ಮೊದಲ ಭಾಗದಿಂದಾಗಿ. ಯಕ್ಷಗಾನ ಕಲೆ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬಂದಿರುವ 350 ಪುಟಗಳಷ್ಟಿರುವ 58 ಲೇಖನಗಳು ವೈವಿಧ್ಯಮಯವಾಗಿದ್ದು ಶ್ರೀಮಂತವಾಗಿವೆ. ಶ್ರೀ ಕೈಯಾರ ಕಿಞ್ಞಣ್ಣರೈಗಳು ಯಕ್ಷಗಾನ ಸೃಷ್ಟಿಸಿದ ಸಂಸ್ಕೃತಿಯನ್ನು ಹಾಗೂ ಅದು ರೂಪಿಸಿದ ಸಮಾಜವನ್ನು ಬಹುರಸವತ್ತಾಗಿ ವರ್ಣಿಸಿದ್ದಾರೆ. ಜನಸಾಮಾನ್ಯರ ಬದುಕಿನಲ್ಲಿ ಯಕ್ಷಗಾನದ ಹಾಸುಹೊಕ್ಕನ್ನು ಎಳೆಎಳೆಯಾಗಿ ಬಿಡಿಸಿ ತೋರಿಸಿ ಕೊಟ್ಟಿದ್ದಾರೆ. ಅದೇರೀತಿ ಉದ್ಯಾವರ ಮಾಧವ ಆಚಾರ್ಯರು ಬರೆದಿರುವ "ಕಮಲ ಮುಂದಲೆಗೊಂದು ಹಿನ್ನೆಲೆ" ಎಂಬ ಲೇಖನ ಅತ್ಯಂತ ಸಂಶೋಧನಾತ್ಮಕವಾಗಿದೆ. ಪುರುಷ ವೇಷದ 'ಕೇದಗೆ ಮುಂದಲೆ'ಯ ಪರಿಕಲ್ಪನೆಯ ಹಿನ್ನೆಲೆ ವಿವರಿಸಿ ಸ್ತ್ರೀವೇಷಕ್ಕೆ

ಪೂರಕವಾಗಬಲ್ಲ 'ಕಮಲಮಂದಲೆ' ವಿನ್ಯಾಸದ ವಿವರಗಳನ್ನು ಸಚಿತ್ರವಾಗಿ, ಸ್ವಾರಸ್ಯವಾಗಿ ಹಾಗೂ ಸಮರ್ಪಕವಾಗಿ ವಿವರಿಸಿದ್ದಾರೆ. ಯಕ್ಷಗಾನದ ವೇಷಭೂಷಣಗಳ ಸಂಶೋಧನಾತ್ಮಕ ಅಧ್ಯಯನಕ್ಕೆ ಇದೊಂದು ಮಹತ್ವದ ಪ್ರೇರಣೆ ಹಾಗೂ ಚಾಲನೆ ನೀಡಲಿದೆ. ಯಕ್ಷಗಾನ ಶಿರೋಭೂಷಣ ನಿರ್ಮಾಣಗೊಂಡ ಬಗೆ, ಪ್ರದರ್ಶನದಲ್ಲಿ ಅವುಗಳ ಪ್ರಭಾವದ ಪರಿ, ಅವುಗಳ ನಿರ್ಮಾಣದ ಹಿನ್ನೆಲೆ ಎಲ್ಲವೂ ಇಲ್ಲಿ ಸಮಗ್ರವಾಗಿ ಬಂದಿದೆ. ಶ್ರೀ ಸುಬ್ಬಣ್ಣ ಭಟ್ಟರ ವೇಷಭೂಷಣಗಳ ಕುರಿತಾದ ಲೇಖನವೂ ಇದೇ ಬಗೆಯ ಒಳನೋಟವನ್ನು ನೀಡುವಂತಾದ್ದಾಗಿದೆ.

ಈ ರೀತಿ ಶಾಸ್ತ್ರೀಯ ಪರಂಪರೆಯ ಲೇಖನಗಳು ಈ ಭಾಗದಲ್ಲಿ ಬಂದಿವೆ. ಡಾ॥ ಎನ್.ನಾರಾಯಣಶೆಟ್ಟಿಯವರು ಯಕ್ಷಗಾನ ಛಂದಿಸ್ಸಿನ ಬಗ್ಗೆ ಸಾಕಷ್ಟು ಸಂಶೋಧನೆ ನಡೆಸಿದವರು. ಇಲ್ಲಿ ಅವರ 'ಸಮೃದ್ಧವಾದ ಯಕ್ಷ ಸಾಹಿತ್ಯ ಸ್ಥಾಲೀಪುಲಾಕಗಳು' ಎಂಬ ಲೇಖನದಲ್ಲಿ ಯಕ್ಷಗಾನದಲ್ಲಿ ವಿಶಿಷ್ಟವಾಗಿ ಕಾಣುವ ಕೆಲವು ಛಂದೋಪ್ರಕಾರ ಗಳನ್ನು ಕುರಿತು ಚರ್ಚಿಸಿದ್ದಾರೆ. ಗೇಯಸಾಹಿತ್ಯ ಪ್ರಕಾರದಲ್ಲಿ ಬರುವ ತಾಳಾವರ್ತಗಳಲ್ಲಿ ಹುದುಗಿರುವ ಮಾತ್ರಾ ಗಣಗಳ ಪದ್ಯಗಳ ಪಟ್ಟಿಯನ್ನು ನೀಡಿದ್ದಾರೆ. ಬೇರೆ ಬೇರೆ ತಾಳಗಳಲ್ಲಿ ಬರುವ ಮಾತ್ರ ವಿನ್ಯಾಸಕ್ರಮವನ್ನು ಅವುಗಳಲ್ಲಿ ಅಡಗಿರುವ ಚಿಂತನೀಯ ಅಂಶಗಳನ್ನು ತಿಳಿಸಿಕೊಟ್ಟಿದ್ದಾರೆ. ಇಷ್ಟೇ ಪ್ರೌಢವಾದ ಇನ್ನೊಂದು ಬರೆಹವೆಂದರೆ ಹೊಸ್ತೋಟ ಮಂಜುನಾಥ ಭಾಗವತರ "ತಾಳಮೇಳದ ಯಕ್ಷಗಾನ ತಾಳೆಗರಿಗಳಲ್ಲಿ" ಎಂಬುದಾಗಿದೆ. ಧಾರವಾಡ, ಮೈಸೂರು, ಮಂಗಳೂರು, ಉಡುಪಿ, ಮೇಲುಕೋಟೆ, ಹಂಪಿ ಮುಂತಾದೆಡೆಯಲ್ಲಿರುವ ಸಂಗ್ರಹಾಲಯಗಳನ್ನು ಸಂಪರ್ಕಿಸಿ ಸುಮಾರು 500ರಷ್ಟು ತಾಳೆಗರಿಗಳನ್ನೂ, 800ರಷ್ಟು ಕೈಬರಹದ ಕಾಗದಪ್ರತಿಗಳನ್ನು ಪರಿಶೀಲಿಸಿ ಯಕ್ಷಗಾನ ಸಾಹಿತ್ಯದ ದಿಕ್ಕುದೆಸೆಯ ಬಗ್ಗೆ 'ಅಥೆಂಟಿಕ್' ಆಗಿ ಮಾತನಾಡಬಲ್ಲ ಈ ಹೊಸ್ತೋಟರ ಲೇಖನ ಬಹು ಗಮನಾರ್ಹವಾದುದು. "ಯಕ್ಷಗಾನ ಕನ್ನಡ ಭಾಷೆಗೆ ಹೊಂದಿದ ಸಾಹಿತ್ಯದ ಒಂದು ಮಗ್ಗಲು ಅದನ್ನು ಸಾಹಿತ್ಯದ ವಲಯದಿಂದ ತಪ್ಪಿಸಿ ರಂಗ ವಲಯಕ್ಕೆ ತಂದು ಪ್ರಾದೇಶಿಕ ಕಚ್ಚಾಟದಲ್ಲಿ ಸಿಲುಕಿಸಿದ್ದರಿಂದ ಇಂದು ಸಾಹಿತ್ಯ ವೇದಿಕೆಯಲ್ಲಿ ಅದು ಸ್ಥಾನವನ್ನೇ ಕಳೆದುಕೊಂಡಿದೆ" ಎಂಬ ಅವರ ಮಾತು ಯಥಾರ್ಥವಾಗಿದೆ.

ವಿದ್ವಾನ್ ಕೊರ್ಗಿ ವೆಂಕಟೇಶ ಉಪಾಧ್ಯಾಯರ 'ಔಚಿತ್ಯಮೀಮಾಂಸೆ', ಡಾ॥ ಕಬ್ಬಿನಾಲೆ ವಸಂತ ಭಾರದ್ವಾಜರ 'ಯಕ್ಷಗಾನ ನಾಟ್ಯದಲ್ಲಿ ಹಸ್ತಾಭಿನಯ', ಶೇಣಿ ಗೋಪಾಲಕೃಷ್ಣ ಭಟ್‌ರ 'ರಂಗತಂತ್ರಜ್ಞ ಭಾಗವತ.....', ಅಂಬಾತನಯ ಮುದ್ರಾಡಿಯವರ 'ಯಕ್ಷಗಾನ : ಹಿಮ್ಮೇಳ-ಮುಮ್ಮೇಳಗಳ ಸಾಂಗತ್ಯ', ಅಮೃತ ಸೋಮೇಶ್ವರರ 'ಯಕ್ಷಗಾನ ತುಳುತಿಟ್ಟು' ಮುಂತಾದವುಗಳು ಅನೇಕ ಬಗೆಯ ಜಿಜ್ಞಾಸೆಗಳನ್ನು, ಚಿಂತನೆಗಳನ್ನು ತೆರೆದಿಡುವಂತಹ ಲೇಖನಗಳಾಗಿದ್ದು ಸಾರ್ವಕಾಲಿಕ ವಾಗಿ ಉಳಿಯಬಲ್ಲಂತವುಗಳಾಗಿವೆ.

ಶ್ರೀ ಭಾಸ್ಕರರೈ ಕುಕ್ಕುವಳ್ಳಿ ಅವರು ಬರೆದಿರುವ 'ಹಾಸ್ಯವೇಷ ಸ್ವರೂಪ ಮತ್ತು ಚಿಂತನೆ' ಇನ್ನೊಂದು ಚಿಂತನಾತ್ಮಕವಾದ ಲೇಖನವಾಗಿದೆ. ಯಕ್ಷಗಾನದಲ್ಲಿ ಹಾಸ್ಯದ ಸ್ವರೂಪ, ಹಾಸ್ಯವೇಷದ ಪ್ರಾಕಾರಗಳು, ಅವುಗಳ ವೇಷಭೂಷಣಗಳ ವಿವರಣೆ ಬಹುವಿವರವಾಗಿವೆ. ಇಲ್ಲಿ ಹಾಸ್ಯಪರಂಪರೆಯ ವೈವಿಧ್ಯವನ್ನು ಸುದೀರ್ಘವಾಗಿ ಚರ್ಚಿಸಿದ್ದಾರೆ. ಕೊಳ್ಯೂರು ರಾಮಚಂದ್ರರಾವ್ ಅವರು ಸ್ವಯಂ ಪ್ರಸಿದ್ಧ ಸ್ತ್ರೀವೇಷಧಾರಿಗಳು, 'ಸ್ತ್ರೀವೇಷದ ಸ್ವರೂಪ ಮತ್ತು ಅನ್ವೇಷಣೆ' ಅವರ ಪ್ರಬುದ್ಧ ಚಿಂತನೆಯ ಸಾಕಾರವಾಗಿದೆ. ತಾಳಮದ್ದಳೆ ಕುರಿತಾಗಿ ಶ್ರೀ ವೆಂಕಟರಾಜ ಪುಣಿಂಚಿತ್ತಾಯ, ಡಾ॥ ರಮಾನಂದ ಬನಾರಿ, ಸತ್ಯಮೂರ್ತಿ ದೇರಾಜೆ, ನಿತ್ಯಾನಂದ ಕಾರಂತರು ಲೇಖನಗಳನ್ನು ಬರೆದಿದ್ದು ಇವೆಲ್ಲವುಗಳ ಮೂಲಕ ತಾಳಮದ್ದಲೆಯ ಸ್ವರೂಪ, ಬೆಳವಣಿಗೆ ಹಾಗೂ ಹೊಸ ಆಯಾಮಗಳ ಬಗ್ಗೆ ಒಳನೋಟ ಲಭಿಸುತ್ತದೆ. ಡಾ॥ ಜೋಷಿಯವರು ಯಕ್ಷಗಾನ ಗದ್ಯಸಾಹಿತ್ಯದ ಸ್ವರೂಪವನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಯಕ್ಷಗಾನದ ಬೇರೆ ಬೇರೆ ಅಂಶಗಳ ಕುರಿತಾಗಿ ಅನೇಕ ಹಿರಿಯ ವಿದ್ವಾಂಸರಾದ ಡಾ॥ ಶಿಶಿಲ, ಪ್ರೊ॥ ಕೇಶವಭಟ್ಟ, ಡಾ॥ ಸಂಜೀವಶೆಟ್ಟಿ, ಡಾ॥ ರಾಮಕೃಷ್ಣ ಆಚಾರ್, ಶ್ರೀ ಗುಡ್ಡಪ್ಪ ಶೆಟ್ಟಿ ಮುಂತಾದವರು ವಿಶ್ಲೇಷಣಾತ್ಮಕ ಲೇಖನಗಳನ್ನು ಇಲ್ಲಿ ನೀಡಿದ್ದಾರೆ. ಈ ಕಲೆಯ ಒಳಹೊರಗಿನ ಕುರಿತಾಗಿ ಕ್ಷಕಿರಣ ಬೀರಬಲ್ಲ ಲೇಖನಗಳು ಇಲ್ಲಿವೆ. ಯಕ್ಷಗಾನ ಕಲೆಯ ಇಂದಿನ ಸ್ಥಿತಿಗತಿಯ ಬಗ್ಗೆ ಇಲ್ಲಿ ಚಿಂತನೆಗಳು ಇವೆ. ಶ್ರೀ ರಾಘವ ನಂಬಿಯಾರ್, ಶ್ರೀ ಶ್ರೀಧರ ಹಂದೆ, ಶ್ರೀ ಎಂ.ಎಂ. ಹೆಗ್ಡೆ, ಕುಂಬ್ಳೆ ಸುಂದರರಾವ್, ಅಡ್ಡೆ ವಾಸು ಶೆಟ್ಟಿ ಮುಂತಾದವರ ಲೇಖನಗಳು ಈ ಮಾದರಿ ಯದ್ದಾಗಿವೆ. ಹೀಗೆ ಇಲ್ಲಿನ 58 ಲೇಖನಗಳು ವೈವಿಧ್ಯಮಯವಾಗಿದ್ದು ಯಕ್ಷಗಾನ ಕಲೆಗೆ ಸಂಬಂಧಿಸಿದಂತೆ ಉಪಯುಕ್ತ ಮಾಹಿತಿಯನ್ನು ಹಾಗೂ ಚಿಂತನಾ ಪೂರ್ಣ ವಿಚಾರಗಳನ್ನು ಓದುಗರಿಗೆ ನೀಡುತ್ತವೆ. ಇದರಿಂದಾಗಿಯೇ "ಒಡ್ಡೋಲಗ" ಕೇವಲ ಸಂಸ್ಮರಣ ಸಂಪುಟವಾಗದೇ ಸಾರಸ್ವತಲೋಕದ ಮಹತ್ವದ ಕೃತಿಗಳಲ್ಲಿ ಒಂದಾಗುತ್ತದೆ.

ಮಂಗಳೂರಿನ ಬಂಟರ ಸಂಘದವರು ಅದರಲ್ಲೂ ಸಂಪಾದಕ ವರ್ಗದ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ಹಾಗೂ ಶ್ರೀ ಭಾಸ್ಕರ ರೈ ಕುಕ್ಕುವಳ್ಳಿಯವರು ಈ ಗ್ರಂಥದ ಮೂಲಕ ಅನನ್ಯವಾದ ಸಾಧನೆಯನ್ನು ಮಾಡಿದ್ದಾರೆ. ಒಂದು ಕಲೆಯ ಕುರಿತಾದ ಸಮಗ್ರ ಚಿಂತನೆ ಹಾಗೂ ಒಂದು ಸಮುದಾಯದ ಕಲಾವಿದರ ಕುರಿತಾದ ಸಮಗ್ರ ಮಾಹಿತಿಯನ್ನು ಒಂದೆಡೆ ಕಲೆ ಹಾಕಿ ಕೊಟ್ಟಿದ್ದಾರೆ. ಈ ಕೈಂಕರ್ಯಕ್ಕಾಗಿ ಅವರು ಅಭಿನಂದನಾರ್ಹರು.

■

ಅಪೂರ್ವ ದಾಖಲೆಗಳ ಅಧ್ಯಯನ

ಕಳೆದ ಏಳೆಂಟು ದಶಕಗಳಿಂದ ಯಕ್ಷಗಾನ ರಂಗಭೂಮಿಯಲ್ಲಾಗುತ್ತಿರುವ ಸ್ಥಿತ್ಯಂತರಗಳು ಗಮನಾರ್ಹವಾದುದು. ಭಾರತೀಯ ರಂಗ ಪರಂಪರೆಯ ಏಳುಬೀಳಿನೊಂದಿಗೆ ತಳಕು ಹಾಕಿಕೊಂಡಿರುವ ಯಕ್ಷಗಾನ ಕಲೆ ಉಳಿದ ಕಲೆಗಳಂತೆ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಜನಮನ್ನಣೆಯ ಮೆಟ್ಟಿಲನ್ನು ಏರುತ್ತಿದೆ. ಆರಾಧನೆಯ ಅಂಗವಾಗಿ ಹುಟ್ಟಿಕೊಂಡ ಈ ಕಲೆ ರಂಗಭೂಮಿಯ ಕೂಸಾಗಿ ಬೆಳೆದು ಪ್ರೌಢಾವಸ್ಥೆಯಲ್ಲಿ ನಿಂತಿದೆ. ಮೂಲತಃ ಕರ್ನಾಟಕದ ಸಾಂಪ್ರದಾಯಿಕ ಕಲೆಯಾದ ಯಕ್ಷಗಾನ ಇಂದು ಕರಾವಳಿ ಹಾಗೂ ಮಲೆನಾಡಿನಲ್ಲಿ ಜನಾದರಣೀಯವಾಗಿದ್ದು ಜೀವಂತ ಕಲೆಯಾಗಿದೆ. ಡಾ॥ ಶಿವರಾಮ ಕಾರಂತರ ಅವಿರತ ಶ್ರಮದ ಫಲವಾಗಿ ಯಕ್ಷಗಾನ ವಿಶ್ವದ ಗಮನವನ್ನು ಸೆಳೆಯುವಂತಾಯಿತು. ಅವರ ಪ್ರಯೋಗ, ಚಿಂತನೆ ಹಾಗೂ ಬರವಣಿಗೆಗಳು ಈ ಕಲೆಗೆ ಹೊಸ ಆಯಾಮವನ್ನು ದೊರಕಿಸಿ ಕೊಟ್ಟಿತು. ಇಂದಿಗು ಅದಕ್ಕಿರುವ ಅಪಾರ ಜನಮನ್ನಣೆ, ವಿದ್ವಾಂಸರ ವಲಯದಲ್ಲಿ ಈ ಕಲೆಯ ಕುರಿತು ನಡೆಯುತ್ತಿರುವ ಜಿಜ್ಞಾಸೆ, ಪ್ರಬುದ್ಧ ಕಲಾವಿದರಿಂದ ರಂಗದಲ್ಲಿ ಮೂಡುತ್ತಿರುವ ಹೊಸ ಹೊಸ ಕಾಣ್ಕೆಗಳು ಹಾಗೂ ರಂಗಪರಂಪರೆಯಾಗಿ ಅದು ಪಡೆದುಕೊಳ್ಳುತ್ತಿರುವ ಭದ್ರ ನೆಲೆಗಟ್ಟುಗಳು ಮೆಚ್ಚುಗೆಗೆ ಅರ್ಹವಾದುದು. ಈಗ ಇದೆಲ್ಲದಕ್ಕೆ ಕೋಡು ಮೂಡುವಂತೆ ಯಕ್ಷಗಾನ ಕಲಾವಿದನೊಬ್ಬನ ಕುರಿತಾದ ಪ್ರೌಢ ಪ್ರಬಂಧವೊಂದು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ಬಂದಿದೆ. ಅದೇ ಡಾ॥ ಜಿ.ಎಸ್.ಭಟ್ಟ ಅವರ "ಕೆರೆಮನೆ ಶಂಭು ಹೆಗಡೆ ಅಧ್ಯಯನ." ಯಕ್ಷಗಾನ ಕಲಾವಿದರೊಬ್ಬರ ಸಮಗ್ರ ಸಾಧನೆಯ

ಪರಿಚಯದೊಂದಿಗೆ ಅವರ ಕಲಾಭಿಜ್ಞತೆಯ ಕುರಿತಾದ ಸಮಗ್ರ ವಿಶ್ಲೇಷಣೆ, ಸಂಘಟಕರಾಗಿ ಅವರು ಮಾಡಿದ ಸಾಧನೆ ಹಾಗೂ ಅದರ ಫಲಶ್ರುತಿಯ ವಿವರಣಾತ್ಮಕವಾದ ನೋಟವೇ ಈ ಕೃತಿಯ ಹಿರಿಮೆಯಾಗಿದೆ.

ಡಾ॥ ಜಿ.ಎಸ್.ಭಟ್ಟ ಅವರು ಅಧ್ಯಯನಕ್ಕೆ ಎತ್ತಿಕೊಂಡಿರುವ ವಿಷಯ ಅತ್ಯಂತ ಸೂಕ್ಷ್ಮವೂ, ವಿಸ್ತಾರವೂ ಆದದ್ದಾಗಿದೆ. ಯಕ್ಷಗಾನ ರಂಗದಲ್ಲಿ ನಟನಾಗಿ, ಸಂಘಟಕರಾಗಿ ಸವ್ಯಸಾಚಿಯೆನಿಸಿಕೊಂಡ ಶ್ರೀ ಶಂಭು ಹೆಗಡೆಯವರೊಬ್ಬ 'ಸೃಜನಶೀಲ ಕಲಾವಿದ. ನಾಲ್ಕು ದಶಕಗಳ ಕಾಲ ಈ ಕಲೆಯಲ್ಲಿ ತನ್ನ ಅಸಾಧಾರಣ ಪ್ರತಿಭೆಯಿಂದ ಅದ್ವಿತೀಯ ರಾಗಿ ಕಾಣಿಸಿಕೊಂಡ ಶ್ರೀ ಹೆಗಡೆಯವರ ಸಾಧನೆಯ ವಿಶ್ಲೇಷಣೆಗೆ ಅಸಾಧಾರಣ ಸಿದ್ಧತೆಗಳು ಬೇಕಾಗುತ್ತದೆ. ಈಗಾಗಲೇ ರಾಷ್ಟ್ರಪ್ರಶಸ್ತಿ ವಿಜೇತ ಶ್ರೀ ಕೆರೆಮನೆ ಶಿವರಾಮ ಹೆಗಡೆಯವರ ಆತ್ಮಕಥೆಯನ್ನು ಬರೆದು, ಕೆರೆಮನೆಯ ಒಳಹೊರಗನ್ನು ಅರಿತಿರುವ ಭಟ್ಟರು ಇದಕ್ಕೆ ಸಮರ್ಥರೇ ಆಗಿದ್ದಾರೆ. ಕೆರೆಮನೆ ಶಿವರಾಮ ಹೆಗಡೆಯವರಲ್ಲಿ ಮೊಗ್ಗಾಗಿ ಕಾಣಿಸಿಕೊಂಡ ಸೃಜನಶೀಲತೆ ಶಂಭು ಹೆಗಡೆಯವರಲ್ಲಿ ಹೇಗೆ ಹೂವಾಗಿ ಅರಳಿತು ಎಂಬುದನ್ನು ಗ್ರಂಥದುದ್ದಕ್ಕೂ ಸಮರ್ಪಕವಾಗಿ ಸಾಧಿಸಿ ತೋರಿಸಿದ್ದಾರೆ.

ಗ್ರಂಥದ ಪ್ರಾರಂಭದಲ್ಲಿ ಡಾ॥ ಭಟ್ಟರು ತಮ್ಮ ಅಧ್ಯಯನದ ವ್ಯಾಪ್ತಿ, ಅದಕ್ಕಿರುವ ಮಿತಿಗಳ ಪರಿಚಯ, ಉತ್ತರ ಕನ್ನಡದ ಯಕ್ಷಗಾನ ಕಲಾವಿದರ ಕುರಿತಾಗಿರುವ ಕುರುಹು, ಈ ಭಾಗದ ಅನೇಕ ಶೈಲಿಗಳ ಕಿರುನೋಟ ನೀಡಿ ಅಧ್ಯಯನಕ್ಕೊಂದು ಭದ್ರ ಬುನಾದಿಯನ್ನು ಹಾಕಿಕೊಂಡಿದ್ದಾರೆ. ಶಂಭು ಹೆಗಡೆಯವರ ಸೃಜನಶೀಲತೆಯ ಒರತೆಗೆ ಹೇಗೆ ವಾಂಶಿಕ ನೆಲೆ ಕಾರಣವಾಯಿತು ಎಂಬುದನ್ನು ಮೊದಲಿನ ಪುಟಗಳಲ್ಲಿ ಪ್ರಸ್ಥಾಪಿಸಲಾಗಿದೆ. ತಂದೆ ಶಿವರಾಮ ಹೆಗಡೆ, ಅಜ್ಜ ಶಂಭು ಹೆಗಡೆ, ಮುತ್ತಜ್ಜ ರಾಮಹೆಗಡೆ, ಮರಿಮುತ್ತಜ್ಜ ನಾರ್ಣಪ್ಪ ಹೆಗಡೆ ಈ ನಾಲ್ಕು ತಲೆಮಾರುಗಳ ಮಾಹಿತಿ ಕಲೆಹಾಕಿ ಕೆರೆಮನೆ ವಂಶದೊಂದಿಗೆ ಯಕ್ಷಗಾನ ಹೇಗೆ ತಳಕು ಹಾಕಿದೆ ಎಂಬುದರ ವಿವರಣೆ ಸುದೀರ್ಘವಾಗಿದೆ. ಅನುವಂಶಿಕ ಉಜ್ವಲ ಪರಂಪರೆಯೊಂದಿಗೆ 'ಅಣ್ಣಯ್ಯ'ನಾದ ಕೆರೆಮನೆ ಮಹಾಬಲ ಹೆಗಡೆಯವರ ಒಡನಾಟ, ಮಾರ್ಗದರ್ಶನ, ಸಹಚರ್ಯಗಳಿಂದ ಇವರ ಪ್ರತಿಭೆ ಅರಳಲು ಕಾರಣವಾಯಿತು. ಕೆರೆಮನೆಯ ನಾಲ್ಕು ತಲೆಮಾರುಗಳ ಕಲಾವಿದರನ್ನು ರಂಗದಲ್ಲಿ ಕುಣಿಸಿದ ಹೆಗ್ಗಳಿಕೆ ಉಳ್ಳ ನೆಬ್ಬೂರರ ಭಾಗವತಿಕೆ ಇವರ ಕಲಾಭಿವ್ಯಕ್ತಿಗೆ ದಕ್ಕಿದ್ದು ಶಂಭು ಹೆಗಡೆಯವರ ಪ್ರತಿಭೆಗೆ ಪುಟವಿಟ್ಟಂತಾಯಿತು. ತಂದೆಗೆ ಮಗ ಯಕ್ಷಗಾನದಲ್ಲಿ ಮುಂದುವರಿಯುವುದು ಇಷ್ಟವಿಲ್ಲವಾಗಿದ್ದರೂ, ಸುಲಭವಾಗಿ ಸಿಕ್ಕಿದ ಶಿಕ್ಷಕ ಹುದ್ದೆಯ ಆಮಿಷವಿದ್ದರೂ ಅದನ್ನೆಲ್ಲ ಭೇದಿಸಿಕೊಂಡು ಹೆಗಡೆಯವರ ಅಂತರಂಗದ ಚೇತನ ಯಕ್ಷಗಾನಕ್ಕೆ ಧುಮುಕಿದ್ದು ಈ ಕಲೆಯ ಭಾಗ್ಯವಾಗಿದೆ. ಕೋರಿಯೋಗ್ರಫಿ ರಂಗಶಿಕ್ಷಣವನ್ನು ಮಾಯಾರಾವ್, ಆನಿಲ್‌ಬಿಶ್ವಾಸ್, ಇಂದರ್ ರಾಜಧನ್ ಮುಂತಾದ ಪ್ರಸಿದ್ಧರಿಂದ ಪಡೆದು

ಈ ಕಲೆಗೆ ಬಂದದ್ದರಿಂದ ಹೊಸ ಆಯಾಮವೊಂದನ್ನು ಯಕ್ಷಗಾನಕ್ಕೆ ನೀಡಲು ಸಾಧ್ಯವಾಯಿತು.

ಡಾ॥ ಭಟ್ಟರ ಈ ಪುಸ್ತಕದ ಇನ್ನೊಂದು ಹಿರಿಮೆಯೆಂದರೆ ಎಲ್ಲಾ ಮಗ್ಗಲಗಳಿಂದಲೂ ಇದೊಂದು ಸಾಂಸ್ಕೃತಿಕ ದಾಖಲೆಯಾಗುವ ಅಂಶವನ್ನು ಒಳಗೊಂಡಿದೆ. ಶಂಭು ಹೆಗಡೆ ವೃತ್ತಿಮೇಳವನ್ನು 1969ರಲ್ಲಿ ಪ್ರವೇಶಿಸುವ ಸಂದರ್ಭದ ವಿವರಣೆ, ಬಡಗುತಿಟ್ಟಿನ ಮೇಳಗಳು ಪಡೆಯುತ್ತಿದ್ದ ತಿರುವುಗಳ ವಿವರಣೆ ಎಲ್ಲವೂ ಇಲ್ಲಿ ದಾಖಲಾಗಿದೆ. ಶ್ರೀ ಶ್ರೀಧರ ಹಂದೆಯವರ ನೇತೃತ್ವದಲ್ಲಿ ಸಾಲಿಗ್ರಾಮ ಮೇಳ 70ರ ದಶಕದಲ್ಲಿ ಕಂಡ ಉಚ್ಛ್ರಾಯ ಕಾಲದಲ್ಲೇ ಈ ಮೇಳದ ವೃತ್ತಿ ಕಲಾವಿದರಾಗಿ ಪಾದಾರ್ಪಣೆ ಮಾಡಿದ ಶಂಭು ಹೆಗಡೆ ಅಲ್ಲಿ ಭೀಷ್ಮವಿಜಯದ 'ಸಾಲ್ವ', ಚಂದ್ರಾವಳಿಯ ರಾಧೆ, ಕೃಷ್ಣಾರ್ಜುನರ ರುಕ್ಮಿಣಿ, ಸುಧನ್ವಾರ್ಜುನರ ಕೃಷ್ಣ ಪಾತ್ರಗಳ ಮೂಲಕ ಬೇರೂರಿದರು. 3–4 ತಿರುಗಾಟದಲ್ಲೇ ಅನ್ಯಮೇಳಗಳ ಸಹವಾಸ ಸಾಕೆನಿಸಿ ತಮ್ಮ ತಂದೆಯವರು ನಡೆಸಿ ನಿಲ್ಲಿಸಿದ ಇಡಗುಂಜಿ ಮೇಳದ ಪುನಃ ಸಂಘಟನೆಯನ್ನು 1973ರಲ್ಲಿ ಕೈಗೊಳ್ಳುತ್ತಾರೆ. ಮುಂದಿನ ಅಧ್ಯಾಯಗಳಲ್ಲಿ ಭಟ್ಟರು ಶಂಭು ಹೆಗಡೆಯವರು ನಿರ್ವಹಿಸಿದ ಪಾತ್ರಗಳ ವಿಶ್ಲೇಷಣೆಗೆ ತೊಡಗಿಕೊಳ್ಳುತ್ತಾರೆ. 68 ಪ್ರಸಂಗಗಳ 160ಕ್ಕೂ ಮಿಕ್ಕಿದ ಪಾತ್ರಗಳನ್ನು ನಿರ್ವಹಿಸಿರುವ ಹೆಗಡೆಯವರ ಪಾತ್ರ ವೈಶಿಷ್ಟ್ಯವೇನು ಎಂಬುದನ್ನು ಪಟ್ಟಿ ಮಾಡಿದ್ದಾರೆ. ಅವರ ನೃತ್ಯ ಶೈಲಿಯ ವೈವಿಧ್ಯ, ಅವರ ಪೀಠಿಕೆಯ ವಿಧಾನ, ಹಾಕುವ ವೇಷಭೂಷಣದ ಪರಂಪರೆ, ಮುಖವರ್ಣಿಕೆಯ ಬಗೆ, ಪ್ರವೇಶಕ್ರಮದ ಪರಿ, ಹಳೆಯದರಲ್ಲೇ ಹೊಸ ಅರ್ಥವನ್ನು ಹುಡುಕುವ ರೀತಿ, ಲಯಗತಿಗಳಲ್ಲಿ ಅವರ ಪರಿಣತಿ, ಅರ್ಥಗಾರಿಕೆಯ ಕ್ರಮ, ಧರ್ಮ ಹಾಗೂ ದೈವಗಳ ಬಗ್ಗೆ ಹೆಗಡೆಯವರ ದೃಷ್ಟಿಕೋನ, ರಂಗ ಸಾಮಾಗ್ರಿಗಳನ್ನು ಬಳಸುವ ವ್ಯವಸ್ಥೆಗಳನ್ನು ಆಧರಿಸಿ ಅವರ ಪಾತ್ರಗಳನ್ನು ತಿಕ್ಕಿ ತೀಡಿ ಅದರಲ್ಲಿರುವ ಹೊಳಪನ್ನು ಸತ್ವವನ್ನು ಓದುಗರಿಗೆ ತೋರಿಸಿಕೊಟ್ಟಿದ್ದಾರೆ.

ಪ್ರಾರಂಭಿಕ ದಿನಗಳಲ್ಲಿ ಪೋಷಕ ಪಾತ್ರಗಳೆನಿಸಿದ ಚಂದ್ರಹಾಸದ 'ಮದನ', ಭೀಷ್ಮವಿಜಯದ 'ಸಾಲ್ವ', ಕೃಷ್ಣಸಂಧಾನದ 'ಕೃಷ್ಣ' ಮುಂತಾದವುಗಳಲ್ಲಿ 'ಸೈ' ಎನಿಸಿಕೊಂಡ ಹೆಗಡೆಯವರು, ಆ ಪಾತ್ರಗಳಲ್ಲೂ ಹೊಸತನವನ್ನು ಮಿಂಚಿಸಿದ್ದಾರೆ. ಸಾಮಾನ್ಯವಾಗಿ ಯಕ್ಷಗಾನ ಪ್ರಸಂಗಗಳಲ್ಲಿ ಕಂಡು ಬರುವುದೆಂದರೆ ಮೊದಲಿಗೆ ಕಾಳಗ ಆಮೇಲೆ ಕಲ್ಯಾಣ, ವೀರ ಹಾಗೂ ಶೃಂಗಾರ ರಸಕ್ಕೆ ಯಕ್ಷಗಾನದಲ್ಲಿ ಮಣೆ. ಆದರೆ ಕೃಷ್ಣಸಂಧಾನದಲ್ಲಿ ಇವೆರಡೂ ಇಲ್ಲ. ತಾಳಮದ್ದಲೆಗೆ ಹೆಚ್ಚು ಯೋಗ್ಯವಾಗುವಂತಿರುವ ಈ ಪ್ರಸಂಗವನ್ನು ಆಟದಲ್ಲೂ ಸಮರ್ಥವಾಗಿ ನಿರೂಪಿಸಬಹುದೆಂಬುದನ್ನು ತೋರಿಸಿಕೊಟ್ಟವರು ಶಂಭುಹೆಗಡೆಯವರು. ಇದು ಇಡಗುಂಜಿ ಮೇಳದ ಹೆಗ್ಗಳಿಕೆಯೂ ಆಗಿದೆ. ಹೆಗಡೆಯವರ ಕೃಷ್ಣಪಾತ್ರ ಅತ್ಯಂತ ಆಕರ್ಷಣೀಯ. ಇದರಿಂದಾಗಿ ಅನೇಕ ಗ್ರಂಥಗಳಲ್ಲಿ, ಪತ್ರಿಕೆಗಳಲ್ಲಿ, ಕ್ಯಾಲೆಂಡರ್‌ಗಳಲ್ಲಿ ಭಾವಚಿತ್ರವಾಗಿ ಮೂಡಿಬಂದಿದೆ.

ಮುಖವರ್ಣಿಕೆ ಮಾತ್ರವಲ್ಲ ನೃತ್ಯ ವಿಧಾನದಲ್ಲೂ ಹೆಗಡೆಯವರು ಹೊಸತನ ಮೆರೆದಿದ್ದಾರೆ. ಶ್ರೀ ಜಿ.ಎಸ್.ಭಟ್ಟ ಅವರು ಈ ಪ್ರಸಂಗದ ನಿರೂಪಣೆಯನ್ನು ಕೂಲಂಕಷವಾಗಿ ವಿವರಿಸಿ, ಹೆಗಡೆಯವರ ಹೆಚ್ಚುಗಾರಿಕೆಯನ್ನು ತೋರಿಸಿಕೊಟ್ಟಿದ್ದಾರೆ. ಸಂಧಾನದ ಕೃಷ್ಣ ಒಬ್ಬ ಚಾಣಕ್ಯ ರಾಜತಾಂತ್ರಿಕನಾಗಿ, ಮುತ್ಸದ್ಧಿಯಾಗಿ ಕಾಣುವಂತೆ ಪಾತ್ರ ನಿರ್ವಹಿಸುತ್ತಾರೆ. ವ್ಯಂಗ್ಯ, ಶ್ಲೇಷೆ, ವಿಡಂಬನೆಗಳೆಲ್ಲ ಅವರ ನೃತ್ಯಗಳಲ್ಲಿ ವಿಜೃಂಭಿಸುತ್ತವೆ. 'ಅರಸು ಮಕ್ಕಳ ಸಭೆಯ ಹೊಕ್ಕರಿಯ' ಹಾಗೂ 'ಏನಯ್ಯ ಇಂಥಾದ್ದೇನಯ್ಯ......' ಪದ್ಯಗಳಿಗೆ ಹೆಗಡೆಯವರು ಮಾಡುವ ನೃತ್ಯ ಹಾಗೂ ಅಭಿನಯಗಳು ಈ ಪ್ರಸಂಗವನ್ನು ಉತ್ತಮ ರಂಗಕೃತಿಯಾಗಿ ಪರಿವರ್ತಿಸಿವೆ ಎಂಬ ತೀರ್ಮಾನಕ್ಕೆ ಬಂದಿರುವುದು ಸರಿಯಾಗಿಯೇ ಇದೆ.

ಶ್ರೀ ಶಂಭು ಹೆಗಡೆಯವರು ಅಸಂಖ್ಯ ಧೀರನಾಯಕ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಐರಾವತದ ಅರ್ಜುನ, ಲಂಕಾದಹನದ ಹನುಮಂತ, ಕಾರ್ತವೀರ್ಯಾರ್ಜುನ ಮುಂತಾದವುಗಳು. ಭಟ್ಟರು ಈ ಪಾತ್ರಗಳ ನಿರ್ವಹಣೆಗಳನ್ನು ಪ್ರಾಯೋಗಿಕವಾಗಿ ವಿಮರ್ಶಿಸಿದ್ದಾರೆ. ಅವರು ಹೇಳುವ "ಹೆಗಡೆಯವರ ಹನುಮಂತ ಪ್ರೌಢ ಮತ್ತು ಗಂಭೀರ. ಹುಡುಗಾಟ, ತುಂಟತನ, ಕಪಿಚೇಷ್ಟೆಗಳನ್ನು ಮಾಡಿದರೂ ನಿಶ್ಚಿತ ಸಂದರ್ಭಗಳಲ್ಲಿ ನಿಶ್ಚಿತ ಉದ್ದೇಶ ಗಳಿಗಾಗಿ ಮಾತ್ರ ಅವರ ಹನುಮಂತ ಹೆಚ್ಚು ವೈಚಾರಿಕ ನೆಲೆಗಟ್ಟಿನ ಮೇಲೆ ನಿಂತಿವೆ. ಹಾಗೆಂದು ಭಾವುಕತೆಯ ಸಂಪರ್ಕವೇ ಇಲ್ಲವೆಂದಲ್ಲ. ಬುದ್ಧಿಭಾವಗಳ ಸಂತುಲನದಿಂದ ವಿಚಾರಶೀಲನಾಗಿಯೂ, ಸಹೃದಯಿಯಾಗಿಯೂ ಆಗುವ ಹಾಗೆ ಹನುಮಂತನನ್ನು ಪ್ರತ್ಯಕ್ಷೀಕರಿಸುತ್ತಾರೆ" ಎಂಬುದು ಅಕ್ಷರಶಃ ಸತ್ಯ.

ಹೆಗಡೆಯವರು ಪಾತ್ರದ ವ್ಯಕ್ತಿತ್ವವನ್ನು ಅರಿತು, ಅಂಗದ ಅಭಿವ್ಯಕ್ತಿ ತಂತ್ರಕ್ಕೆ ಅದನ್ನು ಒಗ್ಗಿಸಿ ಅಪಾರ ಜನಮೆಚ್ಚುಗೆ ಗಳಿಸಿಕೊಡುವ ತಂತ್ರದಲ್ಲಿ ನಿಷ್ಣಾತರು. ಹಾಗಾಗಿಯೇ ಹರಿಶ್ಚಂದ್ರ, ನಳ, ಬ್ರಹ್ಮಕಪಾಲರ ಈಶ್ವರ ಮುಂತಾದ ಪಾತ್ರಗಳ ಒಳಗನ್ನು ರಂಗದಲ್ಲಿ ತೆರೆದಿಡುತ್ತಾರೆ. ಈ ಕೃತಿಯಲ್ಲಿ ಈ ಮೂರು ಪಾತ್ರಗಳ ಅಭಿವ್ಯಕ್ತಿಯ ಪ್ರಾಯೋಗಿಕ ವಿಮರ್ಶೆ ಇದೆ. ನೃತ್ಯದ, ಮಾತುಗಾರಿಕೆಯ, ಅಭಿನಯದ, ಒಳತೋಟಿಯ ಅಭಿವ್ಯಕ್ತಿಯನ್ನು ಭಟ್ಟರು ವಿವರಿಸಿದ್ದಾರೆ. ಈ ಪಾತ್ರಗಳಲ್ಲೆಲ್ಲಾ ಭಾವವೇ ಪ್ರಧಾನವಾದ್ದರಿಂದ ಭಾವಾಭಿವ್ಯಕ್ತಿಯನ್ನು ಪಾತ್ರಧಾರಿಯಾದವನು ಹೇಗೆ ಅತ್ಯುತ್ತಮ ವಾಗಿ ಮಾಡಬಹುದೆಂಬ ಮಾದರಿಯನ್ನು ಕೆರೆಮನೆಯವರು ಇಲ್ಲಿ ನಿರ್ಮಿಸಿಕೊಟ್ಟಿ ದ್ದಾರೆ. ಅವರ ನಳನ ಪಾತ್ರದ ಬಗ್ಗೆ ಶ್ರೀ ಭಟ್ಟರು ಹೇಳುವ 'ವೇಷಭೂಷಣ, ಅಭಿನಯ ಮತ್ತು ಪಾತ್ರ ನಿರೂಪಣ ಕ್ರಮವನ್ನು ನೃತ್ಯೀಕರಣಗೊಳಿಸಿ ಪಾತ್ರದ ಯಕ್ಷಗಾನೀಯ ಕ್ರಮವನ್ನು ಸ್ಥಾಪಿಸಿದರು' ಎಂಬುದು ಸರಿಯಾಗಿದೆ.

ಯಕ್ಷಗಾನ ರಂಗದಲ್ಲಿ ಇನ್ನು ಹಲವು ಪಾತ್ರಗಳ ಮೂಲಕ ಶಂಭು ಹೆಗಡೆ ಯವರು ಅಭಿಮಾನಿಗಳ ಮನಸ್ಸಿನಲ್ಲಿ ಮನೆ ಮಾಡಿದ್ದಾರೆ. ಭೀಷ್ಮಪರ್ವದ ಭೀಷ್ಮ, ಕರ್ಣಪರ್ವದ ಕರ್ಣ, ಗದಾಪರ್ವದ ಕೌರವ, ಪಟ್ಟಾಭಿಷೇಕದ ದಶರಥ, ಸೀತಾ

ವಿಯೋಗದ ರಾಮ, ಜರಾಸಂಧ, ಕಂಸ, ಭಸ್ಮಾಸುರ, ದುಷ್ಟಬುದ್ಧಿ ಮುಂತಾದ ಪಾತ್ರ ನಿರೂಪಣೆಯಲ್ಲಿ ಹೆಗಡೆಯವರು ತಮ್ಮದೇ ಆದ ಛಾಪನ್ನು ಒತ್ತಿದ್ದಾರೆ. ಜಿ.ಎಸ್.ಭಟ್ಟರು ಈ ಎಲ್ಲಾ ಪಾತ್ರಗಳ ನಿರೂಪಣೆಯನ್ನು ವಿಶ್ಲೇಷಿಸುತ್ತಾ ಉಳಿದ ಕಲಾವಿದರಿಗಿಂತ ಇವರು ಹೇಗೆ ಭಿನ್ನರು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರ ಕರ್ಣನ ಬಗ್ಗೆ ಬರೆಯುತ್ತಾ 'ಶಂಭು ಹೆಗಡೆಯವರ ನೃತ್ಯತಂತ್ರ, ಕರುಣರಸ ನಿರೂಪಣೆಗೆ ನೃತ್ಯ ಸಂಯೋಜನೆ, ಮನಮಿಡಿಯುವ ಸಂಭಾಷಣೆಗೆ ಅವರದೇ ಆದ ಧ್ವನಿ ವ್ಯವಸ್ಥೆ, ಎಲ್ಲಿಯೂ ಪಾತ್ರ ಗೌರವಕ್ಕೆ ಕಿಂಚಿತ್ತು ಕುಂದು ಬಾರದ ಎಚ್ಚರಿಕೆ ಉಳ್ಳ ವಾಚಿಕ ಸಾತ್ವಿಕ ಅಭಿನಯ ಇವು ಪ್ರತಿಭಾಜನ್ಯ ಕೌಶಲವಾಗುತ್ತದೆ' ಎಂಬುದು ಒಪ್ಪತಕ್ಕದ್ದೆ. ಹಾರಾಡಿ ರಾಮಗಾಣಿಗ ವೀರಭದ್ರನಾಯಕ, ಶಿವರಾಮ ಹೆಗಡೆಯವರ ಕರ್ಣನನ್ನು ನೆನೆಯುಷ್ಟೇ ಶಂಭು ಹೆಗಡೆಯವರ ಕರ್ಣನನ್ನು ಜನ ನೆನೆಯುತ್ತಾರೆ.

ಹೊಸ ಪ್ರಸಂಗವಾಗಿರುವ ಸತಿಸುಶೀಲೆ 1965ರ ಹೊತ್ತಿಗೆ ರಚಿತವಾಗಿದ್ದರೂ ಸಾಲಿಗ್ರಾಮ ಮೇಳದ ಮೂಲಕ ಮೊದಲಿಗೆ ರಂಗದಲ್ಲಿ ಬೆಳಕು ಕಂಡದ್ದು 1972-73ರ ತಿರುಗಾಟದಲ್ಲಿ. ಇದರಲ್ಲಿ ದುರ್ಜಯನ ಪಾತ್ರವೊಂದು ವಿಶಿಷ್ಟಮಯವಾದುದು. ಅದನ್ನು ನಿರ್ವಹಿಸಿ ಶಂಭು ಹೆಗಡೆಯವರು ಜನಾನುರಾಗಿಗಳಾದರು. ಹೊಸ ಪ್ರಸಂಗವಾದರೂ ಯಕ್ಷಗಾನೀಯ ವಾತಾವರಣದಲ್ಲಿ ರೂಪುಗೊಂಡು ಈ ಪ್ರಸಂಗ ಮುಂದೆ ಇಡಗುಂಜಿ ಮೇಳದಲ್ಲಿ ಆಕರ್ಷಿಸಲ್ಪಟ್ಟು ಬಹು ಖ್ಯಾತಿ ಪಡೆಯಿತು. ಇದಕ್ಕೆ ಮುಖ್ಯ ಕಾರಣ ಹೆಗಡೆಯವರ ನೂತನ ತಂತ್ರಗಳು. ಅವರ ಸೃಜನಶೀಲತೆಯು ದುರ್ಜಯನ ಪಾತ್ರದ ಮೂಲಕ ಸಾಕ್ಷಾತ್ಕಾರಗೊಂಡಿದೆ. ಬೇರೆಲ್ಲಾ ಉದಾತ್ತ ಪಾತ್ರಗಳಲ್ಲಿ ಕಾಣಿಸಿಕೊಂಡ ಹೆಗಡೆಯವರು ದುರ್ಜಯನಂತಹ ನೀಚ, ಕುಡುಕ, ಕಾಮುಕನ ಪಾತ್ರವನ್ನು ವಹಿಸುವ ಮೂಲಕ ಪಾತ್ರ ವೈವಿಧ್ಯವನ್ನು ಸಾಧಿಸಿದ್ದೇ ಅಲ್ಲದೆ ಪ್ರತಿಭಾವಂತ ಕಲಾವಿದನಿದ್ದರೆ ಸಾಮಾನ್ಯವಾದ, ಸಿನೀಮಾಯವಾಗಿರುವ ವಸ್ತುವೊಂದನ್ನು ಕೂಡ ಕಲಾತ್ಮಕವಾಗಿಸಬಹುದೆಂಬುದನ್ನು ಸಾಕ್ಷೀಕರಿಸಿದ್ದಾರೆ.

ಈ ಅಧ್ಯಯನದಲ್ಲಿ ಹೆಗಡೆಯವರ ಕಲಾಭಿವ್ಯಕ್ತಿಯ ಇನ್ನೊಂದು ಮಗ್ಗುಲಾದ ಕಲಾ ಸಂಘಟನೆಯನ್ನು ಸುದೀರ್ಘವಾಗಿ ಚರ್ಚಿಸಲಾಗಿದೆ. ಒಬ್ಬ ಮೇಳದ ವ್ಯವಸ್ಥಾಪಕರಾಗಿಯೂ ಅವರು ಹೇಗೆ ಸೃಜನಶೀಲರಾಗಿ ನಡೆದುಕೊಂಡರೆಂಬುದು ಮುಖ್ಯ. ಡಾ॥ ಕಾರಂತರ ಪ್ರಯೋಗಗಳಲ್ಲಿರುವಷ್ಟು ಹೊಸತನಗಳು ಹೆಗಡೆಯವರ ಆವಿಷ್ಕಾರಗಳಲ್ಲಿ ಎದ್ದು ಕಾಣಿಸದಿರುವುದು ನಿಜ" ಎಂದು ಒಪ್ಪಿಕೊಳ್ಳುವ ಭಟ್ಟರು ಸಂಪ್ರದಾಯ, ಸೃಜನಶೀಲತೆ ಮತ್ತು ವೃತ್ತಿ ಈ ಮೂರನ್ನು ಸಮತೋಲನಗೊಳಿಸುವುದರ ಕಡೆ ಹೆಗಡೆಯವರ ಗಮನವಿದೆ ಎನ್ನುತ್ತಾರೆ. ಇದಕ್ಕಾಗಿ ಅವರ ಆವಿಷ್ಕಾರಗಳ ಚರ್ಚೆ ನಡೆಸುತ್ತಾರೆ. ಅರ್ಧ ಚಂದ್ರಾಕೃತಿಯ ರಂಗಸ್ಥಳದ ನಿರ್ಮಾಣ ಇವರ ಕೊಡುಗೆಯಾಗಿದ್ದು ಕಲಾವಿಮರ್ಶಕರ ಮನ್ನಣೆಗೆ ಪಾತ್ರವಾಗಿದೆ ಎನ್ನುತ್ತಾರೆ. ಶ್ರೀ ಶಂಭು ಹೆಗಡೆಯವರು ಇಂದಿನ ಯಕ್ಷಗಾನ ರಂಗಭೂಮಿಯ ಕುರಿತು

ಇಟ್ಟುಕೊಂಡಿರುವ ಅಭಿಪ್ರಾಯಗಳನ್ನೆಲ್ಲಾ ಲೇಖಕರು ಇಲ್ಲಿ ದಾಖಲಿಸಿದ್ದಾರೆ. ಯಕ್ಷಗಾನ ವೃತ್ತಿ ರಂಗಭೂಮಿಯ ಕುರಿತಿರುವ ಕಲಾವಿದನೊಬ್ಬನ ಕಲಾಜೀವನದ ಉತ್ತಮ ದಾಖಲೆ ಇದಾಗಿದೆ. ಹೊಸ ಪ್ರಸಂಗಗಳ ಬಗ್ಗೆ, ಯಕ್ಷಗಾನದಲ್ಲಿ ನಿರ್ದೇಶನದ ಬಗ್ಗೆ ಸಮಯಮಿತಿ ಪ್ರದರ್ಶನಗಳ ಬಗ್ಗೆ ಶ್ರೀ ಹೆಗಡೆಯವರಿಗೆ ನಿರ್ದಿಷ್ಟವಾದ ಖಚಿತವಾದ ನಿಲುವಿದೆ. ಅದು ಸಮರ್ಪಕವಾಗಿ ಈ ಗ್ರಂಥದಲ್ಲಿ ಹೊರಬಂದಿದೆ.

ಯಕ್ಷಗಾನ ರಂಗಭೂಮಿಯ ಬೆಳವಣಿಗೆಯ ಬಗ್ಗೆ ಹೆಗಡೆಯವರ ನಿಲುವುಗಳನ್ನು ಶ್ರೀ ಭಟ್ಟರು ಇಲ್ಲಿ ವಿವರಿಸಿದ್ದಾರೆ. ಯಕ್ಷಗಾನ ಮಾಧ್ಯಮದ ಮೂಲಕ ಹೊಸ ಆಶಯಗಳನ್ನು ನೀಡಲು ಸಾಧ್ಯ ಎಂಬುದು ಅವರ ಅಭಿಮತ. "ಸಾಮಾಜಿಕ ಪ್ರಜ್ಞೆಯನ್ನು ಕೆಡಿಸದೆ ಯಕ್ಷಗಾನದ ಆವರಣವನ್ನು ಭಂಗಗೊಳಿಸದೆ, ಈ ಮಾಧ್ಯಮದ ಮೂಲಕ ಬದುಕನ್ನು ಅರ್ಥೈಸಿ ಹೊಸ ಆಶಯಗಳನ್ನು ಬಿಂಬಿಸಬಹುದು" ಎಂಬುದು ಅವರ ದೃಢ ನಂಬಿಕೆ. ಅಧ್ಯಯನದ ಒಟ್ಟಾರೆ ಫಲಿತವನ್ನು ಶ್ರೀ ಭಟ್ಟರು "ಶಂಭು ಹೆಗಡೆಯವರ ಸೃಜನಶೀಲ ಸಾಧನೆಗಳ ಪ್ರಮುಖ ಲಕ್ಷಣ ಸಮನ್ವಯಶೀಲತೆ" ಎನ್ನುತ್ತಾರೆ. "ವರ್ತಮಾನದ ಪರಿಸ್ಥಿತಿಯೊಂದಿಗೆ ವ್ಯವಹರಿಸುತ್ತಾ, ಸಾಂಪ್ರದಾಯಿಕ ಪ್ರೇಕ್ಷಕರಿಗೆ ಸ್ಪಂದಿಸುತ್ತಾ ವ್ಯವಸಾಯಿಕ ಪೈಪೋಟಿಗಳನ್ನೆಲ್ಲಾ ಎದುರಿಸುತ್ತಾ ತನ್ನ ಒಳಗಿನ ಕಲಾವಿದತನವನ್ನು ಕಾಯ್ದುಕೊಳ್ಳಬೇಕಾದ ಅನಿವಾರ್ಯ ಬಂದುದರಿಂದ ಸಂಪ್ರದಾಯ, ವ್ಯವಸಾಯ ಹಾಗೂ ಸೃಜನಶೀಲತೆ ಮೂರನ್ನೂ ಸಮತೋಲನ ಮಾಡಿಕೊಂಡರು" ಎಂಬ ನಿರ್ಧಾರಕ್ಕೆ ಬರುತ್ತಾರೆ.

'ಕೆರೆಮನೆ ಶಂಭು ಹೆಗಡೆ ಅಧ್ಯಯನ' ಯಕ್ಷಗಾನ ಸಾಹಿತ್ಯ ಪ್ರಪಂಚಕ್ಕೆ ಒಂದು ಹೊಸ ಕೊಡುಗೆಯಾಗಿದ್ದು. ಹೀಗೆ ಕಲಾವಿದನೊಬ್ಬನ ಸಮಗ್ರ ಪರಿಶೀಲನೆ ನಡೆದಿರುವುದು ಇದೇ ಮೊದಲ ಬಾರಿಯಾಗಿದೆ. ಶ್ರೀ ಭಟ್ಟರ ಈ ಪ್ರಯತ್ನ ಸಾರ್ಥಕ ವಾಗಿದೆ. ಅವರು ಎತ್ತಿಕೊಂಡಿರುವ ವಿಷಯ ಕೇವಲ ಶಂಭು ಹೆಗಡೆಯವರೊಬ್ಬರ ಕಲಾಭಿವ್ಯಕ್ತಿಯ ಅಧ್ಯಯನವಾಗದೇ ಸಮಕಾಲೀನ ಬಡಗುತಿಟ್ಟಿನ ರಂಗಭೂಮಿಯ ಒಳಹೊರಗಿನ ವಿಶ್ಲೇಷಣೆಯೂ ಆಗಿರುವುದು ಈ ಗ್ರಂಥದ ಹೆಚ್ಚುಗಾರಿಕೆಯಾಗಿದೆ. ಅನುಬಂಧದಲ್ಲಿ ಬಂದಿರುವ ಹೆಗಡೆಯವರ ಪಾತ್ರಗಳ ಪಟ್ಟಿ ಆಧಾರ ಗ್ರಂಥಗಳ ಪಟ್ಟಿ, ಪ್ರಸಂಗಗಳ ಪಟ್ಟಿ, ಪತ್ರಿಕಾ ಲೇಖನಗಳ ಪಟ್ಟಿ, ಕ್ಯಾಸೆಟ್ ಹಾಗೂ ಕರಪತ್ರಗಳ ಪಟ್ಟಿಗಳೆಲ್ಲ ಅವರ ಅಧ್ಯಯನದ ಹರವುವನ್ನು ತೋರಿಸುತ್ತವೆ. ಒಟ್ಟಿನಲ್ಲಿ ನಾಲ್ಕು ದಶಕಗಳ ಕಲಾ ವ್ಯವಸಾಯದಿಂದ ಬಡಗುತಿಟ್ಟಿನ ಅತ್ಯುನ್ನತ ಕಲಾವಿದರಲ್ಲಿ ಒಬ್ಬರೆಂದು ಖ್ಯಾತರಾದ ಕೆರೆಮನೆ ಶಂಭು ಹೆಗಡೆಯವರ ಸೃಜನಶೀಲ ಪ್ರತಿಭೆ, ಸಂಘಟನಾ ಸಾಮರ್ಥ್ಯ, ಅಪ್ರತಿಮ ಕಲೆಗಾರಿಕೆಯ ಪರಿಚಯ ಈ ಗ್ರಂಥದಿಂದ ಆಗುತ್ತದೆ. ಯಕ್ಷಗಾನ ಪ್ರಪಂಚಕ್ಕೆ ಇದೊಂದು ಅಪೂರ್ವ ದಾಖಲೆ.

■

ಭಾಗ–2

ಶ್ರೀ ಸೇಡಿಯಾಪು ಅವರ ಕಾವ್ಯ

ಶ್ರೀ ಸೇಡಿಯಾಪು ಕೃಷ್ಣಭಟ್‌ರ ಜನ್ಮಶತಮಾನೋತ್ಸವದ ಕಾರ್ಯಕ್ರಮ ನಿಜವಾಗಿಯೂ ಶ್ಲಾಘನೀಯವಾದುದು. ಕನ್ನಡದ ಹಳೆಯ ತಲೆಮಾರಿನ ವಿದ್ವಾಂಸರಲ್ಲಿ ಅಗ್ರಗಣ್ಯರಾಗಿರುವ ಶ್ರೀ ಸೇಡಿಯಾಪು ಅವರು ಕವಿಗಳಾಗಿಯೂ ಖ್ಯಾತನಾಮರು. ಕನ್ನಡ ಛಂದಸ್ಸಿನ ಹಿರಿಮೆ ಗರಿಮೆ ಬಗ್ಗೆ ಸದಾ ಚಿಂತನಮಗ್ನರಾಗಿದ್ದ ಭಟ್ಟರು ಕಾವ್ಯರಂಗದಲ್ಲೂ ಕೈಯಾಡಿಸಿ ತಮ್ಮ ವಿಶಿಷ್ಟತೆಯನ್ನು ಸಾಧಿಸಿದ್ದಾರೆ. ಬರವಣಿಗೆಯ ಗಾತ್ರದಲ್ಲಿ ಅವರು ಕಾವ್ಯ ಬರೆದದ್ದು ಕಡಿಮೆಯಾದರೂ ಮೌಲ್ಯ ದಲ್ಲಿ ಹಿರಿಯದ್ದಾಗಿದೆ. ಶ್ರೀ ಸೇಡಿಯಾಪು ಅವರ ಜೀವನ ಮತ್ತು ಸಾಧನೆ ಬಗ್ಗೆ ವಿದ್ವಾಂಸರು ಸಾಕಷ್ಟು ವಿಚಾರಗಳನ್ನು ಪ್ರಸ್ತುತ ಪಡಿಸಿದ್ದಾರೆ. ಅವರ ಕಾವ್ಯಗಳ ಕುರಿತು ತಿಳಿದುಕೊಳ್ಳುವುದು ಇಂದಿನ ಅಗತ್ಯ.

ಶ್ರೀ ಸೇಡಿಯಾಪು ಅವರು ಮುಖ್ಯವಾಗಿ 4 ಸಣ್ಣಕಾವ್ಯಗಳನ್ನು ಹಲವು ಭಾವಗೀತೆಗಳನ್ನು ಬರೆದಿದ್ದಾರೆ. 1949ರಲ್ಲಿ ಬಂದ ಕೆಲವು ಸಣ್ಣಕಾವ್ಯಗಳು ಅವರ ಪ್ರಕಟಿತ ಮೊದಲ ಕವನ ಸಂಕಲನ. 1969ರಲ್ಲಿ ಅವರ ಚಂದ್ರಖಂಡ ಮತ್ತು ಸಣ್ಣಕಾವ್ಯಗಳು ಕವನ ಸಂಕಲನ ಪ್ರಕಟವಾಯಿತು. 1971ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಅವರು ಪುರಸ್ಕೃತರಾದರು. "ಚಂದ್ರಖಂಡ"ದಲ್ಲಿ ತರುಣಧಮನಿ, ಅಶ್ವಮೇಧ, ಪುಣ್ಯಲಹರಿ, ಕೃಷ್ಣಕುಮಾರಿ ಎಂಬ ನಾಲ್ಕು ಸಣ್ಣ ಕಾವ್ಯಗಳೊಂದಿಗೆ 18 ಬಿಡಿಗವನಗಳು ಸೇರಿಕೊಂಡಿವೆ. ಹೊಸಗನ್ನಡ ಕಾವ್ಯಲೋಕದಲ್ಲಿ ಶ್ರೀ ಸೇಡಿಯಾಪು ಅವರು ಹಳತು ಮತ್ತು ಹೊಸತರ ನಡುವಿನ ಕೊಂಡಿಯಂತೆ ಕಂಡುಬಂದಿದ್ದಾರೆ. ಹೊಸ

ಭಾವನೆಗಳನ್ನು ಹಳೆಯ ಚೌಕಟ್ಟಿನಲ್ಲಿ ಪ್ರಚುರಪಡಿಸುವುದರಲ್ಲಿ ಅವರದ್ದು ಎತ್ತಿದ ಕೈ. ದಕ್ಷಿಣ ಕನ್ನಡದ ನವೋದಯ ಕಾವ್ಯ ಸಂಪ್ರದಾಯದಲ್ಲಿ ಸೇಡಿಯಾಪು ಕೃಷ್ಣ ಭಟ್ಟರಿಗೆ ಹಿರಿಯ ಸ್ಥಾನವಿದೆ. ಪಂಜೆಯವರ ನಂತರದ ಅಗ್ರಗಣ್ಯರಲ್ಲಿ ಶ್ರೀ ಸೇಡಿಯಾಪು ಅವರು ಒಬ್ಬರು. ಅವರ ಸಣ್ಣ ಕಾವ್ಯಗಳಲ್ಲಿ ಸನ್ನಿವೇಶ ಚಿತ್ರಣವೇ ಕಾವ್ಯದ ಕೇಂದ್ರ ಆಶಯವಾಗುತ್ತದೆ. ಇದನ್ನು ಮುಖ್ಯವಾಗಿ ಅವರ ಕಥನ ಕವನಗಳಲ್ಲಿ ಗಮನಿಸಬಹುದು.

ಸೇಡಿಯಾಪು ಅವರ ಸಣ್ಣ ಕಾವ್ಯಗಳಲ್ಲಿ ಅತ್ಯುತ್ತಮವಾದದ್ದು 'ಶಬರಿ'. ಇಲ್ಲಿ ಅವರು ಪಿರಿಯಕ್ಕರದ ಜಾನಪದ ನಡೆ ಕಥನಕಾವ್ಯಕ್ಕೆ ಸೊಗಸಾಗಿ ಹೊಂದುವುದನ್ನು ತೋರಿಸಿಕೊಟ್ಟಿದ್ದಾರೆ. 41 ಪದ್ಯಗಳ ಈ ಖಂಡಕಾವ್ಯದ ಮೂಲವಸ್ತು ರಾಮಾಯಣ ದಲ್ಲಿ ಬರುವ ಶಬರಿಯ ಕತೆ. ಆದರೆ ಸನ್ನಿವೇಶ ಹಾಗೂ ಸಂಗತಿಗಳಲ್ಲಿ ಸಾಕಷ್ಟು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ವಿಂಧ್ಯಾಟವಿಯ ಬಿಲ್ಲರೊಡೆಯನ ಮಗಳಾದ ಶಬರಿಯ ವಿವಾಹದ ಸಂಭ್ರಮದ ವರ್ಣನೆಯೊಂದಿಗೆ ಕಾವ್ಯ ಪ್ರಾರಂಭ ವಾದರೂ ಕೆಲವೇ ಕ್ಷಣಗಳಲ್ಲಿ ಆ ಸಂತೋಷ ಮಾಯವಾಗುತ್ತದೆ. ಮದುವೆಯ ಭೋಜನ ವ್ಯವಸ್ಥೆಯಾಗಿ ಸಾಕಿದ ಮೇಕೆ, ಕುರಿ, ಹೋತಗಳ ಕೊಲೆ ನಡೆಯುತ್ತದೆ.

ಬಾಳು ಮಿಂಚಿತು, ತೋಳು ಮೇಲೆತ್ತಿತ್ತು
ಕೇಳಿತು ಕೀಳಾಳುಗಳ ಹುಂಕೃತ
ಹಾರುತಿರೆ ರಕ್ತ ಚೀರುತಲಿರೆ ಮೊತ್ತ
ತಾಳಲಾರದೆ ಬಾಲೆ ಕಂಗೆಡುತ
'ಹಾಳು ಮದುವೆ'ಯೆಂದುಲಿದೊಳಸಾರ್ದಳು

ಇದೇ ಅವಳ ಜೀವನದ ತಿರುವಿಗೆ ಕಾರಣವಾಗುತ್ತದೆ. ಅದೇ ರಾತ್ರಿ ಆಕೆ ಮನೆ ಬಿಟ್ಟು ಕಾಡು ಸೇರಿ ತುಂಗಭದ್ರೆಯ ತಟದಲ್ಲಿ ತಂಗುತ್ತಾಳೆ. ಮುನಿಯೊಬ್ಬನಿಂದಾದ ರಾಮನಾಮದ ಉಪದೇಶ "ಜೀವಿತಕೆ ಹೊಸ ಹೊಗರಾಯ್ತು ಶಬರಿಯ ಹೃದಯದ ರಿಕ್ತತೆ ಹರಿದೋಡಿತು". ಉದುರಿದ ಹಣ್ಣುಗಳನ್ನು ಮಾತ್ರ ಮೆಲ್ಲುತ್ತಾ ದಯಾನಿಧಿಯಾದ ಶಬರಿ ಬದುಕನ್ನು ಸಾಗಿಸುತ್ತಾಳೆ.

'ಕಾಂತಾರವ ಹೊಕ್ಕ ತ್ರೇತಾಯುಗದ ಭಾಗ್ಯವಾದ' ರಾಮ ಶಬರಿಯ ಆಶ್ರಮಕ್ಕೆ ಬಂದಾಗ ಪುಳಕಿತಳಾಗುತ್ತಾಳೆ. ಇದನ್ನು ಕವಿ;

ರಾಮರಾಮೆಂಬ ನಾದದಿ ವನವೆಲ್ಲ
ಲೀನವಾಯಿತು; ರಾಮಚಂದಿರನ
ಶ್ರೀ ಮುಖದ ಮಂದಹಾಸದಲುಕ್ಕಿತು
ಕ್ಷೀರಸಾಗರ । ಭಿಲ್ಲ ನಂದಿನಿಯ

ಎನ್ನುತ್ತಾರೆ. 'ಶಬರಿಯ ಜೀವ ಜಳಜಳಿಸಿತು, ದೇಹಕರ್ಪೂರವಾಗಿದೆ, ಮಂಗಳಾರತಿ–ಯೊಪ್ಪಿತು' ಎಂದು ಕಾವ್ಯ ಮುಗಿಸುತ್ತಾರೆ. ಇಲ್ಲಿ ದೇಹ ಕರ್ಪೂರವಾಗಿದೆ.

ಮಂಗಳಾರತಿಯೊಪ್ಪಿತು ಎಂಬಲ್ಲಿನ ಧ್ವನಿಪೂರ್ಣ ಸಾಲುಗಳಲ್ಲಿ ಸೇಡಿಯಾಪು ಅವರ ಕಾವ್ಯಶಕ್ತಿಯನ್ನು ಕಾಣಬಹುದು. ಹೂಹಣ್ಣುಗಳನ್ನು ಕೊಯ್ಯುವಾಗ ಮೇಕೆ ಕುರಿಗಳನ್ನು ಕಡಿಯುವುದು ಕಣ್ಣಿಗೆ ಕಟ್ಟಿದಂತಾಗಿ ಆಕೆ ಹೂ, ಹಣ್ಣುಗಳನ್ನು ಕೊಯ್ಯುವುದನ್ನೇ ಬಿಟ್ಟು ಬಿಡುತ್ತಾಳೆ. ಹೀಗೆ ಬಿದ್ದಿರುವ ಹಣ್ಣುಗಳನ್ನೇ ಆಯ್ದು ತಿನ್ನುವ ಶಬರಿಯ ಪಾತ್ರದ ಚಿತ್ರಣ ವಿಶಿಷ್ಟವಾಗಿದೆ. ಈ ಕಥನಕವನದಲ್ಲಿ ವರ್ಣನಾಮದ ನಿರೂಪಣೆ ಇದ್ದು ನೂತನ ಕಲ್ಪನಾ ವಿಲಾಸವನ್ನು ಕಾಣಬಹುದು. ಭಕ್ತನ ಕಲ್ಪನೆಯಂತೆ ಭಗವಂತನ ಅಸ್ತಿತ್ವ ಎಂಬ ದಾರ್ಶನಿಕ ಚಿಂತನೆಯನ್ನು ಇಲ್ಲಿ ಶ್ರೀ ಸೇಡಿಯಾಪು ಅವರು ಪಡಿಮೂಡಿಸಿದ್ದಾರೆ. ಹೊಸಗನ್ನಡ ಕಾವ್ಯಪಂಕ್ತಿಯಲ್ಲಿ ಚಿಕ್ಕದಾದರೂ ಮನೋಜ್ಞವಾದ ಈ ಖಂಡಕಾವ್ಯಕ್ಕೆ ಸನ್ಮಾನಿತ ಸ್ಥಾನವಿದೆ ಎಂಬ ಕಡೆಂಗೊಡ್ಲು ಅವರ ಮಾತು ಸತ್ಯವಾದುದು.

ಸೇಡಿಯಾಪು ಅವರ ಖಂಡಕಾವ್ಯಗಳಲ್ಲೆಲ್ಲ ಕಿರಿದಾದ್ದೆಂದರೆ 17 ಭಾಮಿನಿ ಷಟ್ಪದಿಗಳಲ್ಲಿ ರಚಿತವಾಗಿರುವ ಕೃಷ್ಣಕುಮಾರಿ. ಇಲ್ಲಿ ಕತೆ ಅತ್ಯಂತ ಗೌಣ. ರಜಪೂತ ದೊರೆಯ ಹೇಡಿತನ, ಕೃಷ್ಣಾಕುಮಾರಿಯ ನೆಚ್ಚುಕೆಚ್ಚುಗಳು ಪರಿಣಾಮಕಾರಿಯಾಗಿ ಮೂಡಿವೆ. ಕೃಷ್ಣಾಕುಮಾರಿ ಅತ್ಯಂತ ಚೆಲುವೆ. ಅವಳನ್ನು ಮದುವೆಯಾಗಲು ಅನೇಕ ರಜಪೂತ ರಾಜಕುಮಾರರು ಆಕೆಯ ತಂದೆಯ ಕೋಟೆಗೆ ಮುತ್ತಿಗೆ ಹಾಕುತ್ತಾರೆ. ಮಗಳು ಸಾಯದೇ ಯುದ್ಧ ಬಗೆಹರಿಯದು ಎಂದು ಬಗೆದ ತಂದೆ

ಹೆಣದ ಹುಗಿಯದೆ ಹದ್ದುಗಳ ಹಾ
ರಿಕೆಯ ತಡೆಯಲಿಕಹುದೆ? ವಿಷತನು
ಕುಡಿದು ಮಡಿ! ಮರು ನುಡಿಯದಿರು ಮಗಳಾದೊಡೆನಗೆಂದ

ಮುಂದೆ ಆತ ಕುಂಪನಿಯವರಿಗೆ ಶರಣಾಗಿ ಉಂಬಳಿಯ ಅಂಬಲಿಯ ಉಣ್ಣುವ ವಿಚಾರ ಸೇಡಿಯಾಪು ಅವರ ರಾಷ್ಟ್ರೀಯ ಚೈತನ್ಯದ ಗುರುತಾಗುತ್ತದೆ. ಇಲ್ಲಿ ಕತೆ ತುಂಬಾ ವೇಗವಾಗಿ ಸಾಗಿದ್ದರೂ ಅಲ್ಲಲ್ಲಿ ಬಂದ ವರ್ಣನಾ ವೈಖರಿ ಮನೋಜ್ಞವಾಗಿದೆ.

1934ರಲ್ಲಿ ರಚಿತವಾದ ತರುಣ ಧಮನಿ ಮಧುಸ್ಯಂದಿಯಾದ ಕಾವ್ಯಖಂಡ. ದೊಡ್ಡದೊಂದು ಐತಿಹಾಸಿಕ ಕಾವ್ಯ ರಚನೆಯ ಪೂರ್ವಭಾಗ. ಸ್ವರ್ಗೀಯ ಗಳಗನಾಥರ ಕರ್ಮಕಥೆಯ ಒಂದು ಪ್ರಸಂಗದ ರೂಪಾಂತರ. ಆದ್ದರಿಂದಲೇ ಇದು ಖಂಡಕಾವ್ಯವಲ್ಲ ಕಾವ್ಯದ ಖಂಡ ಎಂದೇ ಓದಬೇಕಾಗಿ ಅರಿಕೆ ಎಂದು ತರುಣ ಧಮನಿಯ ಬಗ್ಗೆ ಕೃಷ್ಣಭಟ್ಟರು ಹೇಳಿಕೊಂಡಿದ್ದಾರೆ. 100 ಪದ್ಯಗಳ ಕಾವ್ಯಖಂಡದಲ್ಲಿ ವಿದ್ಯಾನಗರದ ರಾಮದೊರೆ ಬೇಟೆಗೆ ಹೋಗಿದ್ದಾಗ ಮಿಹಿರೆ ಎಂಬ ನತದೃಷ್ಟ ಯವನ ಸುಂದರಿಯನ್ನು ಹುಲಿಯ ಬಾಯಿಂದ ರಕ್ಷಿಸಿ ಅವಳನ್ನೇ ಪ್ರೀತಿಸಿ ಮದುವೆಯಾಗುವುದು ಚಿತ್ರಿತವಾಗಿದೆ. ಇಲ್ಲಿ ಕೂಡ ಶ್ರೀ ಸೇಡಿಯಾಪು ಅವರು ನವನವೀನವಾದ ವರ್ಣನಾಸಾಮರ್ಥ್ಯವನ್ನು

ಮೆರೆದಿದ್ದಾರೆ. ಕತೆಯ ಓಟಕ್ಕೆ ತಡೆಯಾಗದ ರೀತಿ ವರ್ಣನಾಸಂಯೋಜನೆ ತಂದಿದ್ದಾರೆ. ಬೇಟೆಗೆ ಹೊರಟ ಸಂದರ್ಭವನ್ನು –

ಮೊಗ ಕುಟ್ಟಿದ ಮೈ, ಮೈಗುಟ್ಟಿದ ಕೈ
ಕೈಗುಟ್ಟಿದ ಕೈದು
ತೊಡೆಗುಟ್ಟಿದ ಹಯ, ಹಯ ಕುಟ್ಟಿದ ತೊಡೆ
ನಡೆಗುಟ್ಟಿದ ವನವೇ !

ಎಂಬುದು ಸಹಜವಾಗಿದೆ ಹಾಗೂ ಸುಂದರವಾಗಿದೆ. ಕಾವ್ಯಮೀಮಾಂಸಕರು ಕಾವ್ಯದ ಸೊಗಸಿಗೆ ನಿಮಿತ್ತವಾಗಿ ಯಾವ ಯಾವ ಶಬ್ದಗುಣ ಅರ್ಥಗುಣಗಳನ್ನು ವಿವರಿಸಿದರೋ ಅವೆಲ್ಲವನ್ನು ಈ ಕಾವ್ಯ ಖಂಡದಲ್ಲಿ ಕಾಣಬಹುದು ಎಂದಿರುವ ವಿದ್ವಾನ್ ರಂಗನಾಥ ಶರ್ಮರು ತರುಣ ಧಮನಿಯಲ್ಲಿ ವ್ಯಕ್ತವಾಗಿರುವ ಕಾವ್ಯ ನಿರ್ಮಾಣ ಚಾತುರಿಯನ್ನು ಮನಸಾರೆ ಹೊಗಳಿದ್ದಾರೆ.

563 ಸಾಲುಗಳ "ಶ್ವಮೇಧ" ಕನ್ನಡ ಕಥನ ಕಾವ್ಯಪರಂಪರೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಗಳಿಸಿದೆ. ಶ್ರೀ ಸೇಡಿಯಾಪು ಅವರು ಇದನ್ನು ಕ್ಷುದ್ರಕಾವ್ಯ ಎಂದು ಕರೆದಿದ್ದಾರೆ. ಇದನ್ನು 'ಬೆಸ್ಟ್ ಎಪಿಕ್' ಎಂದಾಗಲಿ 'ಮೊಕ್ ಎಪಿಕ್' ಎಂದಾಗಲಿ ಗ್ರಹಿಸಿದರೂ ತಪ್ಪಾಗುವುದಿಲ್ಲ. ಮಹಾಭಾರತದ ಅಶ್ವಮೇಧದ ಪ್ರಸಂಗವನ್ನು ಉಲ್ಲೇಖಿಸಿ ಅಲ್ಲಿರುವ ಧರ್ಮರಾಯನಿಗಿಂತ ನರಿಮೊಗರಿನ ಧರ್ಮರಾಯ ಸೆಟ್ಟ ಮಿಗಿಲು ಎಂದು ತಿರುಗಿಸಿ ಹೇಳಲಾಗಿದೆ. ಭಾರತದ ಧರ್ಮರಾಯ ಅಶ್ವಮೇಧದಲ್ಲಿ ಕೊಂದಕುದುರೆಗಾಗಿ ಎರಡು ಹನಿ ಕಣ್ಣೀರು ಸುರಿಸಲಿಲ್ಲ. ಆದರೆ ಇಲ್ಲಿನ ಧರ್ಮರಾಯ ಸತ್ತ ತನ್ನ ನಾಯಿಗಾಗಿ ಕೊನೆಯ ವರೆಗೂ ಪಶ್ಚಾತ್ತಾಪದ ಕಣ್ಣೀರು ಸುರಿಸುತ್ತಾನೆ, ಜಾನಪದದಲ್ಲಿ ಬರುವ ಮುಂಗುಸಿ ಮಗುವನ್ನು ರಕ್ಷಿಸಿದ ಕತೆ, ಮುಳಬಾಗಲಿನಲ್ಲಿ ದೊರೆತ ಶಾಸನದಲ್ಲಿ ಉಕ್ತವಾಗಿರುವ ನಾಯಿಗಾಗಿ ಕಟ್ಟಿಸಿದ ವೀರಗಲ್ಲುಗಳನ್ನು ನೆನಪಿಸುವ ಈ ಸಣ್ಣ ಕಾವ್ಯ "ಕನ್ನಡದಲ್ಲಿ ಒಂದು ಮಹತ್ವದ ಕಥನ ಕವನವಾಗಿದೆ."

ಜೈನ ಧರ್ಮರಾಯ ಸೆಟ್ಟಿಗೆ ಮಕ್ಕಳಿರುವುದಿಲ್ಲ. ನಾಯಿಮರಿಯೊಂದನ್ನು ತಂದು ಚಂದುವೆಂದು ಹೆಸರಿಟ್ಟು ಸಾಕುತ್ತಾನೆ. ಪಕ್ಕದ ಊರಿನ ಗುಮ್ಮನಾಳ್ವ ಎಂಬ ಗರ್ವಿಷ್ಠನಾದ ಶ್ರೀಮಂತ ತನ್ನ ಮನೆಯ ಮೂಲದಾಳಾದ ಕುಡಿಯರನನ್ನು ಹೊಡೆದು ಹಿಂಸಿಸುತ್ತಾನೆ. ಇದನ್ನು ಸಹಿಸಲಾರದೆ ಧರ್ಮರಾಯ ಆಕ್ಷೇಪಿಸುತ್ತಾನೆ. ಅವರಿಬ್ಬರೊಳಗೆ ಮಾತಾಗಿ ಆಳನ್ನು ಬಿಡಿಸಿಕೊಳ್ಳಲು ಹತ್ತು ವರಹಕ್ಕಾಗಿ ತನ್ನ ನೇವಳದೊಂದಿಗೆ ನಾಯಿ ಚಂದುವನ್ನು ಗುಮ್ಮನಾಳ್ವನಲ್ಲಿ ಒತ್ತೆ ಇಡಬೇಕಾದ ಪ್ರಸಂಗ ಬರುತ್ತದೆ. ಧರ್ಮರಾಯ ದಂಪತಿಗಳಿಗೆ ಇದು ದೊಡ್ಡ ವೇದನೆಯಾಗುತ್ತದೆ. ಕ್ರೂರಿ ಗುಮ್ಮನಾಳ್ವ ಚಂದುವಿಗೆ ವಿಪರೀತ ಹಿಂಸೆ ಕೊಟ್ಟರೂ ಸೆಟ್ಟಿಯ ಮಾತನ್ನು ಮೀರದೆ ಅದು

ಸಹಿಸಿ ಕಾಲಕಳೆಯುತ್ತದೆ. ಒಂದು ದಿನ ಆಳ್ವನ ಮನೆಗೆ ಬೆಂಕಿ ಬಿದ್ದು ಉಳಿದವರೆಲ್ಲ ಹೊರಗೆ ಓಡಿ ಬಂದರೂ ಮಗುವೊಂದು ಮಾತ್ರ ಒಳಗೆ ಉಳಿಯುತ್ತದೆ. ಆಗ ಚಂದು ತನ್ನ ಪ್ರಾಣವನ್ನು ಲೆಕ್ಕಿಸದೆ ಬೆಂಕಿಯೊಳಗೆ ನುಗ್ಗಿ ಮಗುವನ್ನು ಎತ್ತಿ ಹೊರಗೆ ತರುತ್ತದೆ. ಇದರಿಂದಾಗಿ ಆಳ್ವನಲ್ಲಿ ಪಶ್ಚಾತ್ತಾಪ ಉಕ್ಕಿ ಮನಃಪರಿವರ್ತನೆಯಾಗುತ್ತದೆ. ನಾಯಿಯನ್ನು ಮುತ್ತಿನ ಹಾರದಿಂದ ಅಲಂಕರಿಸಿ ಪತ್ರ ಒಂದನ್ನು ಬರೆದು ಚಂದುವನ್ನು ಬಿಡುಗಡೆ ಮಾಡಿ ಕಳಿಸಿಕೊಡುತ್ತಾನೆ. ಇತ್ತ ಧರ್ಮರಾಯ ಸೆಟ್ಟಿ ಮನೆಗೆ ಬಂದ ಚಂದುವನ್ನು ತಪ್ಪಾಗಿ ತಿಳಿದು, ನೀತಿ ಮಾತನ್ನು ಕೆಡಿಸಿಬಂತೆಂದು ಶಂಕಿಸಿ ಮುಷ್ಟಿಯಿಂದ ಗುದ್ದಿ ಸಾಯಿಸುತ್ತಾನೆ. ಹೆಂಡತಿ ಬಂದು ಪರಾಮರ್ಶಿಸಿ ನೋಡಿದಾಗ ಸತ್ಯ ತಿಳಿದು ತಹತಹಿಸುತ್ತಾನೆ. ಅವಿವೇಕಕ್ಕೆ ಮರುಗಿ ಚಂದುವಿಗೊಂದು ಸಮಾಧಿ ಮಾಡಿ ನಿತ್ಯವೂ ಹೂ ಇಟ್ಟು ಸಂಜೆ ಹಣತೆ ಹಚ್ಚಿ ತನ್ನ ಪಶ್ಚಾತ್ತಾಪದ ಕಣ್ಣೀರು ಕೊನೆಯವರೆಗೂ ಹಾಕುತ್ತಾನೆ.

ಈ ಕಥಾಹಂದರದ ಮೇಲೆ ಶ್ರೀ ಸೇಡಿಯಾಪು ಅವರು ವಿಶಿಷ್ಟ ಪ್ರಭೆಯಿಂದ ಮಿರುಗುವ ಕಾವ್ಯ ರಚಿಸಿದ್ದಾರೆ. ಮನುಷ್ಯನ ಸ್ವಭಾವಗಳನ್ನು ತೀರ ಹತ್ತಿರದಿಂದ ಕಂಡು ಕಡೆದಿರಿಸಿದ್ದಾರೆ. ಧರ್ಮರಾಯನ ಮಾನವೀಯ ಮೌಲ್ಯಗಳು, ದೌರ್ಬಲ್ಯ ಗಳು, 'ಮನುಜನೆಂಬ ಹೆಮ್ಮೆ, ಒಡೆಯನೆಂಬ ದುಡುಕು'ಗಳು ಒಂದೆಡೆಯಾದರೆ ಹಣದಿಂದಲೇ ಎಲ್ಲವನ್ನು ಸಾಧಿಸಬಹುದೆಂಬ ಗರ್ವದಿಂದ ಬೀಗುವ, ಎಲ್ಲರನ್ನು ಹಿಂಸಿಸಿಯೇ ಸಂತೋಷಿಸುವ ಗುಮ್ಮನಾಳ್ವ ಇನ್ನೊಂದೆಡೆ. ಒಡೆಯನ ನೀತಿಮಾತಿಗಾಗಿ ಯಜ್ಞಪಶುವಾಗಿ ಚಂದುವಿನ ಹಿರಿಮೆ ಮನುಷ್ಯನ ಅಹಂಕಾರವನ್ನು ಅಣಕಿಸುವಂತಿದೆ. ಅದೃಷ್ಟದ ಆಟವನ್ನು ನಾಲ್ಕು ಸಾಲುಗಳಲ್ಲಿ ಶ್ರೀ ಸೇಡಿಯಾಪು ಅವರು ಕಡೆದಿರಿಸಿರುವ ಪರಿಯನ್ನು ಇಲ್ಲಿ ನೋಡಿ –

ದೈವ । ನಿನ್ನ ಮನದ ಮೋಡಿ ಬಹು ವಿಚಿತ್ರವಲ್ತೆ । ಒಮ್ಮೆ
ಹೂವಿನಂತೆ ನಗುವೆ ಒಮ್ಮೆ ಹಾವಿನಂತೆ ಆಗಿವೆ; ಧರ್ಮ
ಬೀರುವೆಂದು ತೋರಿಸುತ್ತಾ ದಾರಿ ಕೊಡುವೆಯೊಮ್ಮೆ, ಒಮ್ಮೆ
ನೀರನಂತೆ ಬಳಿಗೆ ಬಂದು ಚೂರಿಯಿಡುವೆ ಎದೆಯೊಳಕ್ಕೆ !

ಕಾಲ ಒಳ್ಳೆದಿದ್ದಾಗ ಎಲ್ಲವೂ ಒಳ್ಳೆಯದಾಗುತ್ತದೆ. ಕೆಟ್ಟಾಗ ಅದೇ ತಿರುಗು ಮುರುಗು ಆಗುತ್ತದೆ. ಈ ಕಥನಕವನದಲ್ಲಿ ಸರಳವಾದ ಕತೆ, ನಾಟಕೀಯ ಸಂಭಾಷಣೆ ಹಾಗೂ ಸಂಯಮಪೂರ್ಣ ವರ್ಣನೆಗಳ ಮುಪ್ಪುರಿಯನ್ನು ಕಾಣಬಹುದು. ನಾಯಿಯ ಅಗಲಿಕೆಯ ನೋವನ್ನು ಸರಳವಾಗಿ ಅಷ್ಟೇ ಸಮರ್ಥವಾಗಿ ಹೇಳಿರುವ ಪರಿ ನೋಡಿ –

ಸದ್ದು ಇಲ್ಲ ಗಾಳಿಯಲ್ಲಿ, ಮುದ್ದು ಇಲ್ಲ ಹೂಗಳಲ್ಲಿ
ಕುಂಕುಮಕ್ಕೆ ಬಣ್ಣವಿಲ್ಲ, ಕನ್ನಡಿಯಲ್ಲಿ ಕಾಂತಿಯಿಲ್ಲ
ತಂಬುಲಕ್ಕೆ ರಸವೆ ಇಲ್ಲ, ಕಂಕಣಕ್ಕೆ ದನಿಯೆ ಇಲ್ಲ

ಹೀಗೆ "ಶ್ವಮೇಧ" ಕನ್ನಡ ಕಥನ ಕಾವ್ಯ ಸಂದರ್ಭದಲ್ಲೇ ವಿಶಿಷ್ಟವಾದುದು. ಎಸ್.ಅನಂತ ನಾರಾಯಣ ಹೇಳಿರುವಂತೆ ಇದೊಂದು ಕನ್ನಡದ ಮಹತ್ವದ ಕಥನಕವನವಾಗಿದೆ.

ನವೋದಯ ಕಾಲದ ಉತ್ತಮ ರಮ್ಯಗೀತೆಗಳಲ್ಲಿ ಒಂದಾದ 'ಕಾರ ಸಂಪಗೆ' ಅವರ ಬಿಡಿಗವನಗಳಲ್ಲೆಲ್ಲಾ ತುಂಬಾ ಮೆಚ್ಚುಗೆಯಾಗುವ ಕವಿತೆ. ಹೆಂಡತಿಯ ಅಗಲಿಕೆಯ ನೋವು, ಬೇಗುದಿಯನ್ನು ಹಾಗೂ ಅಗಲಿಕೆಯಿಂದ ಆಕೆ ಪಡಬಹುದಾದ ಯಾತನೆ ದುಃಖಗಳನ್ನು ಕವಿ ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ಮೂಲೆಯಲ್ಲಿ ಕುಳಿತು ರಾಮಾಯಣವ ನೆಲಕಿಟ್ಟು
ತಲೆಬಾಗಿ ಸಣ್ಣದನಿಯಿಂದೋದುವೆಡೆಯಲ್ಲಿ
ಕಾರಿರುಳು ಮರವಿನನನೆಂತಂತೆನೆನದೆನ್ನ
ಹಾರಯಿಸಿ ಕಣ್ಣೀರ ಹನಿಹನಿಸಿ ಕೊರಗುವೆಯೊ?

ಮತ್ತೆ

ಕಣ್ಣದಾರಿಯ ನೋಡಿ ಬಳಲಿ ಒಳಸರಿದಿಹುದೆ
ಕದಪು ಕೈಯೊತ್ತಿ ಬೆಳ್ಕರಿಸಿಹುದೆ ಮಾಸಿಹುದೆ
ಶೋಕಭಾರದಿನಿಂದು ಕಾಲುಳುಕಿ ನೋಯುವುದೆ
ಕುದಿವೆದೆಯ ನಿಡುಸುಯ್ಗೆ ಸುಗಿದು ಬಾಯೊಣಗಿಹುದೆ ?

ಎಂಬುದರಲ್ಲೆಲ್ಲ ವಿರಹದ ವ್ಯಥೆ ಇದೆ. ಅನಂತರ ಬಂದಿರುವ ಕೆ.ಎಸ್.ನರಸಿಂಹ ಸ್ವಾಮಿಯವರ 'ಅಕ್ಕಿಯಾರಿಸುವಾಗ' ಕವನದಷ್ಟೇ ಈ ಕವಿತೆ ಮನೋಜ್ಞವಾಗಿದೆ. ಮುಂದೆ ಸೇಡಿಯಾಪು ಅವರು "ಅಳಲದಿರು ಬಾಲೆ ನಿನಗೆ ಸಂಗಡವೆ ಊರ್ಮಿಳೆ ಇಹಳು" ಎಂದು ಹೇಳಿ ವಿರಹದ ಸಾರ್ವಕಾಲಿಕತೆಯನ್ನು ಸಾರುತ್ತಾರೆ.

'ಹಣದಾಸೆ, ಹೆಸರಾಸೆ, ಬಹುಮಾನದಾಸೆಗಳ ಸೆಳೆವಿಂದ' ದೂರ ಹೋಗಿರುವ ಪತಿಯ ದುಃಖವನ್ನು ಕೂಡ ಕವಿ ಅಷ್ಟೇ ಹೃದಯಂಗಮವಾಗಿ ಹೇಳುತ್ತಾರೆ.

ಹಗಲು ನಿನ್ನೆರಕದಲ್ಲಿ ಮುಳುಗಿಮೀಯುವ ಬಯಕೆ
ನಡುಗವೆನ್ನೆದೆಗಿರುಳು ನಿನ್ನನೆನಹೇ ಹೊದಕೆ

ಎನ್ನುತ್ತಾ

ಕಣ್ಣಲ್ಲಿ ನಿದ್ದೆ ಕನಸಿನಲಿ ನಿನ್ನಯ ಕಾಣ್ಕೆ
ಮೈಯ್ಯಲ್ಲಿ ಉಸಿರು, ನಿನ್ನಲ್ಲಿ ಎನ್ನಯ ಜೀವ

ಎನ್ನುತ್ತಾರೆ. ಉದ್ಯೋಗಸ್ಥರಾಗಿ ಮನೆಯವರನ್ನು ಬಿಟ್ಟು ಪರ ಊರುಗಳಲ್ಲಿ ಇರುವವರಿಗಂತೂ ಈ ಕವನ ಖಂಡಿತವಾಗಿಯೂ ಮೆಚ್ಚುಗೆ ಆಗುತ್ತದೆ. ವರ್ಗಾವಣೆಯ ಬೇಗುದಿಯಲ್ಲಿ ಬೇಯುವವರ ಅಳಲನ್ನೇ ಕವಿ ಇಲ್ಲಿ ತೋಡಿಕೊಂಡಂತಿದೆ.

'ಜಗದೊಡೆಯನೊಲುಮೆಯಿಂ ಸುಖವಾರ್ತೆಗಳನೊರೆವೆ'

ಎಂಬ ಭರವಸೆಯೊಂದಿಗೆ ಕವನ ಕೊನೆಗೊಳ್ಳುತ್ತದೆ. ಇದೇ ಬಗೆಯಾಗಿ ಮುಗುದೆ, ಮದಾಲಸೆಯ ಜೋಗುಳ ಮುಂತಾದ ಉತ್ತಮ ರಮ್ಯಗೀತೆಗಳನ್ನು ಶ್ರೀ ಸೇಡಿಯಾಪು ಅವರು ಸೊಗಸಾಗಿ ರಚಿಸಿದ್ದಾರೆ. 'ಖಂಡಚಂದ್ರ', 'ಬೆಳಗಿನ ತಂಗಾಳಿ'ಯಲ್ಲಿ ಪ್ರಕೃತಿಯ ರಮ್ಯ ವರ್ಣನೆ ಇದೆ.

ಸಾಮಾಜಿಕ ಚಿಂತನೆಗಳನ್ನು ವಸ್ತುವಾಗಿ ಉಳ್ಳ ಕೆಲವು ಕವನಗಳನ್ನು ಶ್ರೀ ಸೇಡಿಯಾಪು ಅವರು ಬರೆದಿದ್ದು ಅಲ್ಲೆಲ್ಲಾ ಸಾಮಾಜಿಕ ಕಳಕಳಿ ಇದೆ. 1960ರ ಮಣಿಪಾಲ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ 'ಎಣ್ಣೆ ಹೊಯ್ಯಮ್ಮ ದೀಪಕ್ಕೆ' ಹಾಡಿ ಸಹೃದಯರಲ್ಲಿ ವಿದ್ಯುತ್ ಸಂಚಾರಗೊಳಿಸಿದರು. ಸಂಸ್ಕೃತಿಯ ದೀಪ ನಂದುವ ಸಂದರ್ಭದಲ್ಲಿ ಅದಕ್ಕೆ ಎಣ್ಣೆ ಹೊಯ್ದು ಪುನರಪಿ ಬೆಳಗುವಂತೆ ಮಾಡಲು ಕವಿ ಅಮ್ಮನಲ್ಲಿ ಆರ್ತಧ್ವನಿಯಿಂದ ಪ್ರಾರ್ಥಿಸಿಕೊಳ್ಳುವುದೇ ಈ ಕವನದ ವಸ್ತು. ಕಂಡಿಯ ಮೂಲಕ ನುಗ್ಗುವ ಪರಸಂಸ್ಕೃತಿಯ ಅತಿಕ್ರಮಣ ಹಸಿರುಗಣ್ಣಿನ ಭೂತವಾಗಿ ಕಾಡುವ ಬಗೆ, ಗೂಡಿನ ಗಿಳಿಯಂತಹ ಚಿಂತಕರು ಇಡುವ ಮೊರೆ, ಹಸಿದ ಮಕ್ಕಳು ಬಟ್ಟಲನ್ನೇ ಹಿಡಿದು ಹೊಡೆದಾಡುವ ಪರಿಯೆಲ್ಲವು ಸುಂದರವಾಗಿ ಚಿತ್ರಿತವಾಗಿದೆ. ಸರ್ವಭಾಷಾ ಸಮಾನತೆಯನ್ನು "ಜಯಭಾರತ ಪುತ್ರ"ದಲ್ಲಿ ಹೇಳಿ "ನಾಲ್ಮೊಲೆಯ ಹಾಲನುಂಡು ಕುಣಿಕಂದನೆ" ಎನ್ನುತ್ತಾರೆ. "ಇಷ್ಟು ಬೇಕು ಇಷ್ಟು ಸಾಕು" ಎನ್ನುವ ಕವನದಲ್ಲಿ

ಕನ್ನಡ ನುಡಿಯಲಿ ಕಂಡುದ ನುಡಿಯುವ
ಪುಣ್ಯವಿರಲು ಸಾಕೆನಗೆ ಹರಿ ।

ಜನ್ಮಜನ್ಮದಲಿ ಭಾರತ ಭೂಮಿಯ
ಮಣ್ಣಿ ನೀರೆ ಸಾಕೆನಗೆ ಹರಿ ।

ಎಂದಿದ್ದಾರೆ. ಶ್ರೀ ಸೇಡಿಯಾಪು ಅವರು 40 ವರ್ಷಗಳ ಕೆಳಗೆ ಬರೆದ ಪದ್ಯವೊಂದರಲ್ಲಿ ಇದೇ ಸಪ್ಟೆಂಬರ್ 11 ರಿಂದ ದಿನವೂ ನಾವು ಟಿವಿಯಲ್ಲಿ ಕಾಣುವ ಚಿತ್ರದ ಯಥಾವತ್ತಾದ ವರ್ಣನೆ ಇದೆ. ಅವರ 'ಯುಗಪುರುಷ ಬರುವನೇ'ಯಲ್ಲಿ ಯುದ್ದ ನಡೆದರೆ ಹೇಗೆ ಭೀಕರವಾಗುತ್ತದೆ, ಅದರ ಪರಿಣಾಮಗಳೇನು ಎಂಬುದು ಸಮರ್ಥವಾದ ಶಬ್ದಗಳಲ್ಲಿ ಸಮಗ್ರವಾಗಿ ಚಿತ್ರಿಸಿದ್ದಾರೆ. ಡಬ್ಲ್ಯೂ.ಟಿ.ಸಿ.ಯು ಧರೆಗೆ ಉರುಳಿದಾಗ ಉಂಟಾದ ಹೊಗೆಯ ಚಿತ್ರವೇ ಇಲ್ಲಿ ಬಂದಂತಿದೆ.

ನಗರಾಗ್ರ ಸೌಧಗಳು ಗಗನಾಗ್ರ ಚುಂಬಿಗಳು
ಘನಸೇತು ಬಂಧಗಳು, ಜಲಮಹಾಬಂಧಗಳು
ಕವಿಮನೋಮುಕುರಗಳು ವಾಸ್ತುಕೃತಿರತ್ನಗಳು
ತುಮುರುತುಮುರಾಗಿ ಹುಡಿಹುಡಿಯಾಗಿ ಹೊಗೆಯಾಗಿ
ಜನಪದಾರಾಮಗಳು ಧಗಧಗಿಸಿ ಹೊತ್ತುತಿರೆ.

ಅದರ ಫಲವಾಗಿ ಜನಜೀವನದ ಮೇಲೆ ಏನೆಲ್ಲಾ ಪರಿಣಾಮವಾಗುತ್ತದೆ. ನೋಡಿ;

"ಮಗು ತಾಯ ಕರೆಯುತ್ತ, ತಾಯ್ ಮಗುವನರುಸುತ್ತ
ನಡನಡುಗಿ ನುಡಿಯುತಿರೆ ಸಕಲ ಪ್ರಪಂಚದೆದೆ
ಬಿಡುವನೇ ಹಣೆಗಣ್ಣ ಇನ್ನೊಮ್ಮೆ ರಣರುದ್ರ
ತಡೆವರಿಲ್ಲವೇ?"

ಎಂದು ಕವಿ ಪ್ರಶ್ನಿಸುತ್ತಾರೆ. ಸೆಡಿಯಾಪು ಅವರ ಸಹಜ ವರ್ಣನಾಶಕ್ತಿಗೆ ಇದು ಸಾಕ್ಷಿ.

ಶ್ರೀ ಸೇಡಿಯಾಪು ಕೃಷ್ಣಭಟ್ಟರು ತಮ್ಮ ಆಧ್ಯಾತ್ಮಿಕ ಚಿಂತನೆಗಳನ್ನು ಹಲವು ಕವನಗಳಲ್ಲಿ ಹರಿಯಬಿಟ್ಟಿದ್ದಾರೆ. ಬದುಕಿನ ಬಗ್ಗೆ ಅವರ ಚಿಂತನೆ, ಜೀವನ ಸಾರ್ಥಕ್ಯದ ಬಗೆಗಿನ ಅವರ ದರ್ಶನಗಳು ಹಲವು ಕಿರುಕವನಗಳಲ್ಲಿ ಪ್ರತಿಬಿಂಬಿತವಾಗಿವೆ. 1962ರಲ್ಲಿ ಬರೆದ "ಏನಿದು ಚಿತ್ರ"ದಲ್ಲಿ ಜೀವವೃಕ್ಷ ನ್ಯಾಯದ ಮೀಮಾಂಸೆ ಇದ್ದರೆ "ಪ್ರಶ್ನೋತ್ತರ" ದಲ್ಲಿ "ಈಶ್ವರನಿರುವನೋ ಇಲ್ಲವೋ ಎಂಬುದು ಗೊತ್ತಾಗುವುದಿಲ್ಲ. ಈಶ್ವರ ಸಂಕಲ್ಪ ವೆಂಬುದೊಂದಿದೆ ಗೊತ್ತಾಗುವುದಲ್ಲ" ಎಂಬ ಕಾಣ್ಕೆಯನ್ನು ಸಾದರ ಪಡಿಸಿದ್ದಾರೆ. ಪ್ರತಿಯೊಬ್ಬರು ತಮ್ಮ ಅಚ್ಚಿನಲ್ಲಿ ಪಡಿಮೂಡಿ ಬರಬೇಕು ಎಂಬುದು ಶ್ರೀ ಸೇಡಿಯಾಪು ಅವರ ನಿಲುವು ಅದನ್ನೇ

ನೀನು ನೀನಾಗಿರುವುದಕ್ಕೆ ಸಂತೋಷ ಪಡು
ಬೇರೊಬ್ಬನಾಗಿದ್ದರೊಳ್ಳಿತಂದೆಣಿಸದಿರು
ಒತ್ತಿರುವ ಮುದ್ರೆ ಹತ್ತೋ ನೂರೋ ಸಾವಿರವೋ
ಎಷ್ಟಾದರೇನು ಬೇಡಾದ ನೋಟು ಯಾವುದಿದೆ ?

ಎನ್ನುತ್ತಾರೆ. ಹೀಗೆ ಬಿಡಿಗವನಗಳಲ್ಲಿ ರಮ್ಯತೆಯನ್ನು ಪ್ರಕೃತಿ ವರ್ಣನೆಯನ್ನು ದೇಶಭಾಷಾಪ್ರೇಮವನ್ನು, ಸಾಮಾಜಿಕ ಅರಿವನ್ನು, ಆಧ್ಯಾತ್ಮಿಕ ಚಿಂತನೆಯನ್ನು ಕಾಣಬಹುದು. ಅವರ ಕಾವ್ಯದಲ್ಲಿ ಅನಗತ್ಯ ಪದಗಳ ಬಳಕೆಯಾಗಲಿ ಶಬ್ದಗಳ ದುಂದುಗಾರಿಕೆಯಾಗಲಿ ಕಂಡುಬರುವುದಿಲ್ಲ. ಭಾಷೆ ಹಾಗೂ ಭಾವಗಳಲ್ಲಿ ಶ್ರೀ ಸೇಡಿಯಾಪು ಸಾಮರಸ್ಯವನ್ನು ಸಾಧಿಸಿದ್ದಾರೆ. ದೇಶಿ ಶೈಲಿಗೆ ಅವರ ಕಾವ್ಯಗಳಲ್ಲಿ ಒತ್ತು ಜಾಸ್ತಿ. ಛಂದಃಶಾಸ್ತ್ರದಲ್ಲಿ ಅಗ್ರಣಿಗಳಾಗಿರುವ ಅವರು ತಮ್ಮ ಶಬರಿಯಲ್ಲಿ

ಪಿರಿಯಕ್ಕರವನ್ನು ವಿಜಯನಗರ ಧ್ವಂಸದಲ್ಲಿ ಭೋಗಷಟ್ಪದಿಯನ್ನು, ಕೃಷ್ಣಕುಮಾರಿಯಲ್ಲಿ ಭಾಮಿನಿಷಟ್ಪದಿಯನ್ನು, ಶ್ವಮೇಧದಲ್ಲಿ ಉತ್ಸಾಹ ರಗಳೆಯನ್ನೂ ತರುಣ ಧಮನಿಯಲ್ಲಿ ಸಾಂಗತ್ಯಕ್ಕೆ ಸಮೀಪವಾದ ಛಂದಸ್ಸನ್ನು ಬಳಸಿ ವೈವಿಧ್ಯವನ್ನು ಮೆರೆದಿದ್ದಾರೆ. ಈ ಎಲ್ಲಾ ಛಂದೋಬಂಧಗಳ ಪ್ರಯೋಗಗಳಲ್ಲಿ ಎಲ್ಲೂ ಕೃತಕತೆ ಕಾಣದಿರುವುದೇ ಅವರ ಹೆಚ್ಚುಗಾರಿಕೆ. ಕನ್ನಡ ಕಾವ್ಯ ಪ್ರಪಂಚಕ್ಕೆ ಶ್ರೀ ಸೇಡಿಯಾಪು ಅವರ ಕೊಡುಗೆ ಗಾತ್ರದಲ್ಲಿ ಕಡಿಮೆಯಾದರೂ ಮೌಲ್ಯದಲ್ಲಿ ಹಿರಿದಾಗಿದೆ. ತಮ್ಮ ಸಹಜ ಸುಂದರ ಕಾವ್ಯಪ್ರತಿಭೆಯ ಮೂಲಕ ಅವರು ನವೋದಯ ಸಂಪ್ರದಾಯದ ಕವಿಗಳಲ್ಲಿ ಉನ್ನತ ಸ್ಥಾನ ಗಳಿಸಿದ್ದಾರೆ.

ಅವರ ಜನ್ಮ ಶತಾಬ್ಧಿಯ (2001) ಸಂದರ್ಭದಲ್ಲಿ ಅವರ ಕಾವ್ಯ ಕುರಿತ ಈ ಅಧ್ಯಯನ ಶ್ರೀ ಸೇಡಿಯಾಪು ಅವರ ಕಾವ್ಯಶಕ್ತಿಯ ಕಿರುಪರಿಚಯ ಮಾಡಿದ್ದರೆ ನನ್ನ ಈ ಪ್ರಯತ್ನ ಸಾರ್ಥಕ.

■

ವಿ.ಕೃ. ಗೋಕಾಕರ ಸಾಹಿತ್ಯ

ಎರಡು ಸಹಸ್ರ ವರ್ಷಗಳ ಇತಿಹಾಸವಿರುವ ಕನ್ನಡ ಕಾವ್ಯ ಪರಂಪರೆಯು ಭಾರತೀಯ ಭಾಷೆಗಳಲ್ಲಿ ಅತ್ಯಂತ ಸಮೃದ್ಧವಾದದ್ದು. ಹೆಚ್ಚಿನ ಜ್ಞಾನಪೀಠ ಪ್ರಶಸ್ತಿಗಳನ್ನು ಗಳಿಸಿಕೊಂಡಿರುವ ಕನ್ನಡ ಸಾಹಿತ್ಯ ಆಧುನಿಕತೆಯನ್ನು ಮೈಗೂಡಿಸಿಕೊಂಡಿರುವ ಸಾಹಿತ್ಯವೆಂದೇ ಪರಿಗಣಿತವಾಗಿದೆ. ಈ ಬಗೆಯ ಗಣನೆಗೆ ಕಾರಣರಾದವರು ಮತ್ತು ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ಗರಿಗಳಲ್ಲಿ ಒಂದನ್ನು ತೊಡಿಸಲು ಕಾರಣರಾದವರು ಡಾ॥ ವಿನಾಯಕ ಕೃಷ್ಣ ಗೋಕಾರರು.

ಡಾ॥ ಗೋಕಾಕರದು ವಿಶಿಷ್ಟಮಯವಾದ ವ್ಯಕ್ತಿತ್ವ, ಉತ್ತಮ ಅಧ್ಯಾಪಕರಾಗಿ, ದಕ್ಷ ಆಡಳಿತಗಾರರಾಗಿ, ಖ್ಯಾತ ಶಿಕ್ಷಣವೇತ್ತರಾಗಿ, ದಾರ್ಶನಿಕ ವ್ಯಕ್ತಿಯಾಗಿ, ಆಧ್ಯಾತ್ಮಿಕ ಪ್ರಜ್ಞೆವುಳ್ಳವರಾಗಿ, ಗದ್ಯಪದ್ಯ ಗಳೆರಡಲ್ಲೂ ಕೈಯಾಡಿಸಿದ ಸಾಹಿತಿಯಾಗಿ ಪ್ರಖ್ಯಾತರಾದವರು. ಮಾತೃಭಾಷೆಯ ಶಿಕ್ಷಣಕ್ಕೆ ಒತ್ತುಕೊಟ್ಟು ಅದರ ಅನುಷ್ಠಾನದ ಕುರಿತಾದ 'ಗೋಕಾಕ ವರದಿ'ಯನ್ನು ನೀಡಿ ಆ ಮೂಲಕ ಉಂಟಾದ ಚಳುವಳಿ ಯಿಂದಾಗಿ ಕರ್ನಾಟಕದ ಉದ್ದಗಲಕ್ಕೂ ಮನೆಮಾತಾದವರು. ಶ್ರೀ ಗೋಕಾಕರ ಬಾಳಿನ ಪರಿಚಯ, ಸಾಧನೆಯ ನೋಟ, ಸಿದ್ಧಿಯಹರವು ಅಭ್ಯಾಸಯೋಗ್ಯ. ಬಡತನದಲ್ಲಿ ಹುಟ್ಟಿ, ತಮ್ಮ ಸ್ವಂತಶಕ್ತಿಯಿಂದಲೇ ಉತ್ತುಂಗಕ್ಕೇರಿ, ಜೊತೆಯಲ್ಲಿ ಗೆಳೆಯರ ಗುಂಪನ್ನು ಬೆಳೆಸಿ, ಅದಮ್ಯ ಉತ್ಸಾಹದಿಂದ ಕನ್ನಡದ ತೇರನ್ನು ಎಳೆದು, ಅರವಿಂದರ ದಿವ್ಯ ಪ್ರಭೆಗೆ ಒಳಗಾಗಿ, ಸಾಯಿಬಾಬಾರ ಅನುಗ್ರಹಕ್ಕೆ ಪಾತ್ರರಾಗಿ ಭವ್ಯಜೀವನವನ್ನು ಸಾಗಿಸಿದವರು. 1990ರಲ್ಲಿ "ಭಾರತ

ಸಿಂಧುರಶ್ಮಿ" ಮಹಾಕಾವ್ಯಕ್ಕೆ ಬಂದ ಜ್ಞಾನಪೀಠ ಪ್ರಶಸ್ತಿಯಿಂದಾಗಿ ಇವರು ಭಾರತ ದಾದ್ಯಂತ ಹೆಸರುವಾಸಿಯಾದರು.

ಶ್ರೀ ವಿನಾಯಕ ಕೃಷ್ಣ ಗೋಕಾಕರು ಹುಟ್ಟಿದ್ದು 1909ರಲ್ಲಿ. ಅವರ ತಂದೆ ಶ್ರೀ ಕೃಷ್ಣರಾಯರು ಸವಣೂರಿನಲ್ಲಿ ವಕೀಲರಾಗಿಯೂ ಜ್ಯೋತಿಷಿಯಾಗಿಯೂ ನೆಲೆಸಿದವರು. ಬಾಲ್ಯವನ್ನು ಸವಣೂರಿನಲ್ಲೇ ಕಳೆದ ಗೋಕಾಕರು, ಹೈಸ್ಕೂಲ್ ನಲ್ಲಿರುವಾಗಲೇ ಗಳಗನಾಥರ ಕಾದಂಬರಿಗಳಿಂದ ಪ್ರಭಾವಿತರಾಗಿದ್ದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗ ಬೇಂದ್ರೆಯವರ ಚುಂಬಕ ಶಕ್ತಿಗೆ ಒಳಗಾದರು. ಧಾರವಾಡದ ಗೆಳೆಯರ ಗುಂಪಿನಲ್ಲಿ ಒಬ್ಬರಾಗಿ ಸಾಹಿತ್ಯಕ ಚಟುವಟಿಕೆಗಳಲ್ಲಿ ಪಾಲ್ಗೊಂಡರು. ಇಂಗ್ಲೀಷ್‌ನಲ್ಲಿ ಅಪಾರ ಪ್ರೌಢಿಮೆ ತೋರಿದ ಅವರು ಮೊದಮೊದಲಿಗೆ ಆಂಗ್ಲಭಾಷೆಯಲ್ಲಿ ಕವನ ರಚಿಸಿದರು. ಪ್ರೊ. ತಾಬಾಖಾಲ್ ಅವರ ಮಾರ್ಗದರ್ಶನದಲ್ಲಿ ಪ್ರಕಾಂಡ ಪಾಂಡಿತ್ಯ ಗಳಿಸಿದರು. ಮೊದಲ ಎಂ.ಎ. ಯಲ್ಲಿರುವಾಗಲೇ ಶಾರದಾದೇವಿಯವರೊಂದಿಗೆ ಇವರ ವಿವಾಹವಾಯಿತು. ಮದುವೆ ವಿದ್ಯೆಗೆ ಮುಳುವಾಗಲಿಲ್ಲ. ಎಂ.ಎ.ಯಲ್ಲಿ ಪ್ರಥಮದಲ್ಲಿ ಪ್ರಥಮರಾದದ್ದರಿಂದ ಪುಣೆಯ ಖ್ಯಾತ ಪರ್ಗುಸನ್ ಕಾಲೇಜಿನಲ್ಲಿ ಪ್ರಾಧ್ಯಾಪಕ ವೃತ್ತಿ ದೊರೆಯಿತು. ಇದರಿಂದಾಗಿ ಪತ್ನಿಯೊಂದಿಗೆ ಪುಣೆಯಲ್ಲಿ ನೆಲೆಸಬೇಕಾಗಿ ಬಂದಿತು.

ಆ ಸಂದರ್ಭದಲ್ಲೇ ವರಕವಿ ಬೇಂದ್ರೆಯವರು, ಕತೆಗಾರ ಅನಂದರು ಪುಣೆ ಯಲ್ಲಿ ವಾಸವಾಗಿದ್ದು ವಿನಾಯಕರ ಸಾಹಿತ್ಯ ಚಟುವಟಿಕೆ ಬೆಳೆಯಲು ಕಾರಣವಾಯಿತು. ಮರಾಠಿ ಕವಿ ಗಿರೀಶ, ಸಾಹಿತಿ ಖಾಂಡೇಕರರ ಗೆಳೆತನವೂ ಲಭ್ಯವಾಯಿತು. ಇದೆಲ್ಲದರ ಫಲವಾಗಿ ಅನೇಕ ಕವನಗಳನ್ನು ಬರೆದರು. ಇಲ್ಲಿದ್ದಾಗಲೇ ಇಜ್ಜೋಡು ಕಾದಂಬರಿ, ಜನನಾಯಕ ಎಂಬ ದುರಂತ ನಾಟಕ, 'ಕಲೋಪಾಸಕ' ಎಂಬ ನೀಳ್ಗವನಗಳ ಸಂಕಲನ ಹೊರಬಂದವು. ಇವರ ಪ್ರೌಢಿಮೆಯನ್ನು ಗುರುತಿಸಿದ ಫರ್ಗುಸನ್ ಕಾಲೇಜಿನ ಆಡಳಿತ ಮಂಡಳಿ ಇವರನ್ನು ಪ್ರೌಢ ವ್ಯಾಸಂಗಕ್ಕಾಗಿ ಆಕ್ಸ್‌ಫರ್ಡ್‌ಗೆ ಕಳುಹಿಸಿತು. ಎರಡು ವರ್ಷಗಳ ಕಾಲದ ವಿದೇಶವಾಸ ಅವರನ್ನು ಮಾನಸಿಕವಾಗಿ ಕುಂದಿಸಿದರೂ ವೈಚಾರಿಕವಾಗಿ ಮೇಲ್ಮೆಗೆ ತಂದಿತು. ಇಲ್ಲಿನ ಅವರ ಅನುಭವಗಳೇ "ಸಮುದ್ರಗೀತಗಳು" ಹಾಗೂ "ಸಮುದ್ರದಾಚೆಯಿಂದ" ಕೃತಿಗಳಲ್ಲಿ ಪಡಿಮೂಡಿವೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಭಾರತಕ್ಕೆ ಮರಳಿದ ಶ್ರೀ ವಿ.ಕೆ. ಗೋಕಾಕರಿಗೆ ಬಡ್ತಿ ದೊರೆತು ಸಾಂಗ್ಲಿಯ ವೆಲ್ಲಿಂಗ್‌ಟನ್ ಕಾಲೇಜಿಗೆ ವರ್ಗವಾಯಿತು. ಸಾಂಗ್ಲಿಯಲ್ಲಿ ನಾಲ್ಕು ವರ್ಷಗಳ ಕಾಲ ಪ್ರಿನ್ಸಿಪಾಲರಾಗಿ ಆಡಳಿತದಲ್ಲಿ ದಕ್ಷತೆ ಹಾಗೂ ಕರ್ತವ್ಯ ಕ್ಷಮತೆಯನ್ನು ಮೆರೆದರು. ಕಹಿಪ್ರಸಂಗ ವೊಂದರಿಂದಾಗಿ ರಾಜೀನಾಮೆಯಿತ್ತ ಗೋಕಾಕರು ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ವಿಜಯನಗರ ಕಾಲೇಜಿನ ಸ್ಥಾಪಕ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ ಖ್ಯಾತರಾದರು. ಇಲ್ಲಿರುವಾಗಲೇ ವಿ.ಕೃ.ಗೋಕಾಕರು ಅರವಿಂದರ ದಿವ್ಯ ಪ್ರಭಾವಕ್ಕೆ

ಒಳಗಾದರು. ಸಾವಿತ್ರಿ, ದಿವ್ಯಜೀವನ ಪೂರ್ಣಯೋಗವನ್ನು ಅಭ್ಯಾಸ ಮಾಡಿದರು. ಮುಂದೆ ಸ್ವಲ್ಪ ಕಾಲ ಕೊಲ್ಹಾಪುರ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಮತ್ತೆ ತಾವೇ ಓದಿದ ಧಾರವಾಡದ ಕರ್ನಾಟಕ ಕಾಲೇಜಿನ ಪ್ರಾಂಶುಪಾಲರಾಗಿಯೂ ನಿಯುಕ್ತ ರಾದರು. ಗೋಕಾಕರು ಹೋದಲ್ಲೆಲ್ಲಾ ಅಪಾರ ಶಿಷ್ಯ ಸಂಪತ್ತನ್ನು ಅದಮ್ಯ ಅಭಿಮಾನಿ ಬಳಗವನ್ನು ಹೊಂದಿದ್ದರು. ಧಾರವಾಡವು ಅವರ ಕ್ರಿಯಾಶಕ್ತಿಯ ಸೆಲೆಯಾಗಿ ಕನ್ನಡ ಕಾವ್ಯಲೋಕಕ್ಕೆ ಚಿರಪರಿಚಿತರಾದರು.

ಜಪಾನಿನಲ್ಲಿ ನಡೆದ ಪಿ.ಇ.ಎನ್. ಸಮ್ಮೇಳನಕ್ಕಾಗಿ 3 ತಿಂಗಳು ಪ್ರವಾಸ ಕೈಗೊಂಡ ಗೋಕಾಕರು ಅಲ್ಲಿನ ತಮ್ಮ ಅನುಭವವನ್ನು 'ಸಮುದ್ರದಾಚೆಯಿಂದ' ಪ್ರವಾಸ ಸಾಹಿತ್ಯದಲ್ಲಿ ಪ್ರಸ್ತುತಪಡಿಸಿದ್ದಾರೆ. ಹೈದರಾಬಾದ್‌ನ 'ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್'ನ ಡೈರೆಕ್ಟರಾಗಿ 7 ವರ್ಷಗಳ ಕಾಲ ಸೇವೆ ಸಲ್ಲಿಸಿದ ಡಾ॥ ಗೋಕಾಕರು ಇಲ್ಲಿದ್ದಾಗಲೇ ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದರು. (ಈ ಸಂದರ್ಭದಲ್ಲೇ ಅವರಿಗೆ ಪುತ್ರಿ ವಿಯೋಗವಾಗಿ ಅನಿರೀಕ್ಷಿತವಾದ ದುಃಖ ಬಂದರೂ ಭಗವಾನ್ ಸತ್ಯಸಾಯಿಬಾಬಾ ಆಶೀರ್ವಾದದಿಂದ ದೈವದ ಕೃಪೆಯಿಂದ ಅವರ ಬೌದ್ಧಿಕ ಬೆಳವಣಿಗೆಗೆ ಇದು ಮಾರಕವಾಗಲಿಲ್ಲ.)

ಬೆಂಗಳೂರು ವಿಶ್ವವಿದ್ಯಾಲಯದ 2ನೇ ಉಪಕುಲಪತಿಗಳಾಗಿ ಆಯ್ಕೆಯಾದ ಗೋಕಾಕರು 3 ವರ್ಷಗಳಲ್ಲಿ ಆ ವಿಶ್ವವಿದ್ಯಾಲಯಕ್ಕೆ ಭದ್ರಬುನಾದಿ ಹಾಕಿದರು. ಡಿವಿಜಿ, ಮಾಸ್ತಿ, ವಿ.ಸೀ. ಮುಂತಾದವರ ನಿಕಟ ಗೆಳೆತನ ದೊರೆತು ಗೋಕಾಕರು ಸಾಹಿತ್ಯ ಸಂಪನ್ನರಾದರು. ದಕ್ಷ ಆಡಳಿತದಿಂದ, ಉದಾರ ಧೋರಣೆಯಿಂದ, ಚುರುಕು ನಿರ್ಧಾರದಿಂದ ಸರ್ಕಾರದ ಹಾಗೂ ವಿದ್ಯಾರ್ಥಿಗಳ ಮನಗೆದ್ದರು. ಸಿಮ್ಲಾದ "Indian Institute of Advance Studies"ನಲ್ಲಿದ್ದಾಗ ಅವರ "ಸಿಮ್ಲಾ ಸಿಂಫನಿ" ಪ್ರಕಟವಾಯಿತು. ಪ್ರಕೃತಿಯ ಅನನ್ಯ ರಮಣೀಯ ಸೊಬಗಿನ ವಿಶ್ವವಿದ್ಯಾಲಯದ ಕುಲಪತಿಗಳಾಗಿ "ಪ್ರಶಾಂತಿ ನಿಲಯ"ಕ್ಕೆ ಬಂದರು. ಅವರ ಮಾರ್ಗದರ್ಶನದಲ್ಲಿ ಈ "Deemed University" ಖ್ಯಾತವಾಯಿತು. ಶ್ರೀ ಗೋಕಾಕರು ತಮ್ಮ ಜೀವಿತದ ಹೆಚ್ಚು ಕಾಲವನ್ನು ಈ ಸಂಸ್ಥೆಯ ಉನ್ನತಿಗಾಗಿ ಶ್ರಮಿಸಿದರು. ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿ, ಜ್ಞಾನಪೀಠ ಪ್ರಶಸ್ತಿ ಆಯ್ಕೆ ಮಂಡಳಿ ಮುಂತಾದ ಹತ್ತುಹಲವು ಸಂಘಸಂಸ್ಥೆಗಳ ಪದಾಧಿಕಾರಿಯಾಗಿ ಶ್ರೀ ಗೋಕಾಕರು ಸಾರ್ವಜನಿಕ ಜೀವನದಲ್ಲಿ ಖ್ಯಾತರಾಗಿದ್ದಾರೆ. ಇವರ ಸಾಹಿತ್ಯಕ ಸಾಧನೆಯ ಗುರುತಾಗಿ 1958ರ ಬಳ್ಳಾರಿಯಲ್ಲಿ ನಡೆದ 40ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಲಭಿಸಿತು. ತಮ್ಮ 83ನೇ ವಯಸ್ಸಿನಲ್ಲಿ ಅಂದರೆ 20.4.92ರಲ್ಲಿ ಇಹಲೋಕ ತ್ಯಜಿಸಿದರು.

ಇದು ಅವರ ವೃತ್ತಿಜೀವನದ ಸ್ಥೂಲಪರಿಚಯ. ಗೋಕಾಕರ ನಿಜಪರಿಚಯ ವಾಗುವುದು ಅವರ ಸಾಹಿತ್ಯಕ ಸಾಧನೆಗಳಿಂದ ಹಾಗೂ ದಾರ್ಶನಿಕ ನಿಲುವುಗಳಿಂದ.

ಅವರು ಓರ್ವ ವ್ಯಕ್ತಿ ಬಾಳನ್ನು ಬಾಳುವುದು ಬರಿ ವ್ಯಕ್ತಿಯಾಗಿ ಅಲ್ಲ. ಅವನೊಡನೆ ಅವನ ದೈವವೂ ಬಾಳುತ್ತದೆ ಎಂದು ನಂಬಿದವರು. ಅಂತಹ ಗೋಕಾಕರು ಕನ್ನಡ ಸಾರಸ್ವತಲೋಕಕ್ಕೆ ನೀಡಿದ ಕೊಡುಗೆಗಳೇನು ಎಂಬುದನ್ನು ತಿಳಿಯುವುದು ಅವರ ಸಿದ್ಧಿಸಾಧನೆಯ ಸಂಪೂರ್ಣ ಪರಿಚಯವಾಗುತ್ತದೆ.

ವಿನಾಯಕ ಕೃಷ್ಣ ಗೋಕಾಕರದು ಪದ್ಯಗದ್ಯಗಳೆರಡರಲ್ಲೂ ವೈವಿಧ್ಯಮಯ ಬರವಣಿಗೆ. ಭಾವಗೀತೆ, ನೀಳ್ಗವನ, ಚಂಪೂಕಾವ್ಯ, ಕಥನಕವನ, ಗದ್ಯಕವನ, ನವ್ಯಕಾವ್ಯಗಳನ್ನ ಬರೆದ ಗೋಕಾಕರೇ ಕೊನೆಯಲ್ಲಿ ಮಹಾಕಾವ್ಯವನ್ನು ಬರೆದು ಸಾರ್ಥಕರಾದರು. ಅಂತೆಯೇ ಗದ್ಯದಲ್ಲೂ ಹರಟೆ, ಪ್ರಬಂಧ, ವ್ಯಕ್ತಿಚಿತ್ರ, ಪ್ರವಾಸಸಾಹಿತ್ಯಗಳನ್ನು ರಚಿಸಿ ಮುಂದೆ ಮಹಾಕಾದಂಬರಿಯನ್ನೇ ಕೊಡುಗೆಯಾಗಿ ನೀಡಿದರು. ಆಂಗ್ಲ ಭಾಷೆಯಲ್ಲೂ ಅನೇಕ ಕೃತಿಗಳನ್ನು ರಚಿಸಿರುವ ಶ್ರೀಯುತರು ಅಲ್ಲೂ ಸಿದ್ಧಿಯನ್ನು ಗಳಿಸಿದ್ದಾರೆ. ಹೀಗೆ ಸಂಕೀರ್ಣತೆ ಅವರ ಬಾಳಿನ ಹಾಗೂ ಕಾವ್ಯದ ಜೀವಾಳ. ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಆಡಳಿತಗಾರರಾಗಿ, ಕುಲಪತಿಗಳಾಗಿ, ನಿರ್ದೇಶಕರಾಗಿ, ಅಧ್ಯಕ್ಷರಾಗಿ ವೈವಿಧ್ಯಮಯ ಬಾಳನ್ನು ನಡೆಸಿದವರು. ಬಾಳೆಕುಂದ್ರಿ ಸ್ವಾಮಿಗಳ ಭಕ್ತರಾಗಿ, ಸರದಾರ ಸವಾನ ಸಿಂಗ್‌ರ ಅನುಯಾಯಿಯಾಗಿ, ಸತ್ಯಸಾಯಿಬಾಬಾರ ಆಪ್ತರಾಗಿ, ಅರವಿಂದರ ದರ್ಶನಾಸಕ್ತರಾಗಿ ಶ್ರದ್ಧೆ, ನಂಬಿಕೆಗಳಲ್ಲೂ ಸಂಕೀರ್ಣತೆಯನ್ನು ತೋರಿದ್ದಾರೆ.

ಅವರ ಮೊದಲ ಬರೆವಣಿಗೆಗಳು ಆಂಗ್ಲ ಭಾಷೆಯಲ್ಲಿದ್ದವು. ಕನ್ನಡದ ಅವರ ಮೊದಲ ಕೃತಿಗಳೆಂದರೆ, ಪಯಣ ಹಾಗೂ ಕಲೋಪಾಸಕ. 1934ರಲ್ಲಿ ಬೆಳಕು ಕಂಡ ಕಲೋಪಾಸಕದಲ್ಲಿ ಆರು ಉತ್ತಮ ನೀಳ್ಗವನಗಳಿವೆ. ವಿನಾಯಕ ಎಂಬ ಕಾವ್ಯನಾಮದಿಂದ ಮೊದಲಡಿ ಇಟ್ಟ ಇಲ್ಲಿನ ಕವನಗಳಲ್ಲಿ ಕಲ್ಪನಾವಿಲಾಸವನ್ನು, ದೈವಪರ ಚಿಂತನೆಗಳನ್ನು ಕಾಣಬಹುದು. ಹೊಸಗನ್ನಡ ಕಾವ್ಯಶೈಲಿಯ ಹೆಜ್ಜೆ ಗುರುತುಗಳನ್ನು 'ಪಯಣ'ದ ಕವನಗಳಲ್ಲಿ ಕಾಣಬಹುದು. ಈ ಕಾಲದಲ್ಲೇ ಪ್ರಕಟಗೊಂಡ ಅವರ ಇಂಗ್ಲಿಷ್ ಕೃತಿಗಳು "By the Skyline" ಎಂಬ ಕವನ ಸಂಗ್ರಹ ಹಾಗೂ "The Saint in Woman" ಎಂಬ ದೀರ್ಘ ನಾಟಕ.

1940ರ ದಶಕದಲ್ಲಿ ಪ್ರಕಟಗೊಂಡ "ಸಮುದ್ರ ಗೀತಗಳು" ಡಾ॥ ಗೋಕಾಕರ ಸಾಮಾಜಿಕ ಪ್ರಜ್ಞೆಯ ಪ್ರತೀಕವಾಗಿದೆ. 2 ವರ್ಷಗಳ ವಿದೇಶ ವಾಸದಲ್ಲಿ ಅನುಭವಿಸಿದ ಯಾತನೆ, ನೋವುಗಳೆಲ್ಲ ಇಲ್ಲಿ ಚಿತ್ರವತ್ತಾಗಿ ಪಡಿಮೂಡಿದೆ. 'ಕಡಲತೀರ', 'ಹಡಗು', 'ಬ್ರಿಟನ್ನಿನ ದ್ವೀಪದಲ್ಲಿ' ಎಂಬಲ್ಲೆಲ್ಲಾ ನವ್ಯದ ಹುಟ್ಟನ್ನು ಕಾಣಬಹುದು. ಇದರಿಂದಾಗಿಯೇ ವಿನಾಯಕ ಕೃಷ್ಣ ಗೋಕಾಕರು ನವ್ಯಕಾವ್ಯದ ಮೊದಲ ಹರಿಕಾರರಾದರು. ನವೀನ ಪ್ರತಿಮೆ, ಸಾಮ್ರಾಜ್ಯವಾದಿತ್ವ ಧೋರಣೆಯ ಖಂಡನೆ, ಐತಿಹಾಸಿಕ ಪ್ರಜ್ಞೆ, ಅಸಹಾಯ ಪರದೇಶಿ ತನಗಳೆಲ್ಲಾ ಇಲ್ಲಿ ಮೇಳೈಸಿ ಈ ಸಂಗ್ರಹಕ್ಕೆ ವಿಶಿಷ್ಟ ಸ್ಥಾನವನ್ನು ಕನ್ನಡ ಸಾಹಿತ್ಯ ಲೋಕದಲ್ಲಿ ದೊರಕಿಸಿಕೊಟ್ಟಿದೆ.

1946ರಲ್ಲಿ ಪ್ರಕಟವಾದ ಇವರ 'ಅಭ್ಯುದಯ' ಕವನಸಂಕಲನದಲ್ಲಿ ಸಾಮಾಜಿಕ ಪ್ರಜ್ಞೆಯ ಛಾಳು ಎದ್ದುಕಾಣುತ್ತದೆ. ಈ ಸಮಯಕ್ಕಾಗಲೇ ವಿನಾಯಕರು ಅರವಿಂದರ "Life Divine" ಓದಿ ಅರವಿಂದರಿಂದ ಪ್ರಭಾವಿತರಾಗಿದ್ದರು. ಭೋಂಗನಾದ, ಚಂದ್ರಗ್ರಹಣ, ಗುಬ್ಬಿಯಮರಿ, ಬೇಡತಿ ಮುಂತಾದ ಕವಿತೆಗಳಲ್ಲಿ ಸಮರ್ಥವಾದ ಪ್ರತೀಕಗಳನ್ನು ಕಾಣಬಹುದು. 70ರಷ್ಟು ಸಾನೆಟ್ಟುಗಳು ಇಲ್ಲಿದ್ದು, ಅವು ಕನ್ನಡ ಸಾರಸ್ವತಲೋಕಕ್ಕೆ ಹೊಸ ಕಾಣ್ಕೆಯಾಗಿದೆ. ಈ ಕಾಲದಲ್ಲೇ ಬಂದ "The Poetic approachs to language" ಅವರ ಸಂಶೋಧನಾತ್ಮಕ ವಿವೇಚನೆಗೆ ನೆಲೆಯಾಗಿದೆ.

ಅರವಿಂದರ ಪ್ರಜ್ಞಾ ಪ್ರಭಾವದ ಫಲವಾದ 'ಹಿಗ್ಗು' ಕವನಸಂಕಲನ 1949ರಲ್ಲಿ ಪ್ರಕಟಗೊಂಡಿತು. ವೀಸ ನಗರದಲ್ಲಿ ಕಳೆದ ಸಂಭ್ರಮದ ದಿನಗಳ ಪ್ರತಿಧ್ವನಿ ಇಲ್ಲಿದೆ. 1952ರಲ್ಲಿ ಕರ್ನಾಟಕ ಕಾಲೇಜಿನ ಪ್ರಾಂಶುಪಾಲರಾಗಿ ಹುಟ್ಟೂರಿಗೆ ಬಂದು ಗೆಳೆಯರ ಗುಂಪಿನೊಂದಿಗೆ ಬೆರೆತದ್ದು ಇವರ ಕಾವ್ಯಕೃಷಿಗೇ ಸುಗ್ಗಿಯ ಸಮೃದ್ಧಿಯನ್ನು ತಂದಿತು. Sri Aurbindo Second Poet ಗ್ರಂಥದಲ್ಲಿ ಅರವಿಂದರ ದರ್ಶನ, ಸಾವಿತ್ರಿ ಕುರಿತ ವಿಚಾರ, ದಿವ್ಯಜೀವನ ಕುರಿತ ಪ್ರಬಂಧಗಳಿವೆ.

1950ರಲ್ಲಿ ನಡೆದ ಮುಂಬಯಿ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ನವ್ಯಕಾವ್ಯ ಪ್ರಯೋಗದ ಕರೆಯನ್ನು ಅಧ್ಯಕ್ಷ ಪೀಠದಿಂದ ಕೊಟ್ಟ ಗೋಕಾಕರು 15 ವರ್ಷಗಳ ಕಾಲ ವಿವಿಧ ಪ್ರಯೋಗಗಳನ್ನು ಇದರಲ್ಲಿ ನಡೆಸುತ್ತಾರೆ. ಮೊದಲಿಗೆ ನವ್ಯಕವಿತೆಗಳು, ಆಮೇಲೆ 'ಊರ್ಣನಾಭ', 'ದ್ಯಾವಾ ಪೃಥಿವಿ"ಗಳು ಹೊರಬಂದವು. ದ್ಯಾವಾಪೃಥಿವಿಗೆ 1960ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಇದೊಂದು ಖಂಡಕಾವ್ಯ. ನವ್ಯಮಾರ್ಗದಲ್ಲಿ ಬಂದ, ಉತ್ಕೃಷ್ಟ ಕಾವ್ಯ. ಸಮರ್ಥವಾದ ಪ್ರತಿಮೆ, ನವೀನ ಕಲ್ಪನೆ, ಅರವಿಂದರ ದರ್ಶನ, ಶೆಲ್ಲಿಯ ಪ್ರೇರಣೆ ಎಲ್ಲಾ ಇಲ್ಲಿ ಒಂದೆಡೆ ಸೇರಿದೆ. ವಿನಾಯಕರ ನೋಟ ಭೂಮಿ ಮತ್ತು ಆಕಾಶವನ್ನು ತಬ್ಬಿಕೊಂಡಿದೆ. ಗೋಕಾಕರ ಚಂಪೂ ಕಾವ್ಯ ಪ್ರಯೋಗ "ತ್ರಿವಿಕ್ರಮ ಆಕಾಶಗಂಗೆ"ಯಲ್ಲಿ ಪ್ರಾರಂಭವಾದ 'ಇಂದಿಲ್ಲ ನಾಳೆ'ಯಲ್ಲಿ ಕೂಡುತ್ತದೆ. ಅದೇ ರೀತಿ ತ್ರಿಶಂಕುವಿನ ಪ್ರಜ್ಞೆ ಪ್ರಭಾತವೆಂಬ ಖಂಡಕಾವ್ಯ 'ಭಾರತ ಸಿಂಧುರಶ್ಮಿ'ಯ ಕಾವ್ಯದಲ್ಲಿ ಅರಳುತ್ತದೆ. ಇಲ್ಲಿನ ಮುಕ್ತ ಛಂದದ ಗದ್ಯದ ಲಯ, ಉತ್ಕೃಷ್ಟ ಭಾಷಾ ಶೈಲಿ, ಬದುಕಿನ ಕುರಿತ ದೃಷ್ಟಿಕೋನ, ವಿಫುಲವಾದ ಪ್ರತಿಮಾ ಸಂಪತ್ತು ವಿ.ಕೃ.ಗೋಕಾಕರಿಗೆ ಹೆಸರನ್ನು ತಂದಿತು. 1973ರಲ್ಲಿ ಪ್ರಕಟವಾದ 'ಸಿಮ್ಲಾ ಸಿಂಫನಿ', ವಿನಾಯಕರ ಪ್ರಕೃತಿ ಪ್ರೇಮದ ಹಾಗೂ ದಾಂಪತ್ಯ ಪ್ರೇಮದ ಫಲವಾಗಿದೆ. ಇವೆಲ್ಲವುಗಳ ಮಕುಟವಿಟ್ಟಂತಿರುವ 'ಭಾರತ ಸಿಂಧುರಶ್ಮಿ' ಶ್ರೀ ವಿ.ಕೃ. ಗೋಕಾಕರ ಮಹಾಕಾವ್ಯ. ಇದಕ್ಕೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಋಗ್ವೇದದ ವಸ್ತುವನ್ನು ಆರಿಸಿಕೊಂಡಿರುವ ಗೋಕಾಕರು ತಮ್ಮ ಕಾವ್ಯಪ್ರಜ್ಞೆಯ ಪರಾಕಾಷ್ಠೆಯನ್ನು ಇಲ್ಲಿ ದಾಖಲಿಸುತ್ತಾರೆ. ಕ್ಷಾತ್ರರಕ್ತದಲ್ಲಿ ಬ್ರಹ್ಮತೇಜಸ್ಸನ್ನು ಕಾಣಿಸಿದ ವಿಶ್ವಾಮಿತ್ರ ನಿಜಜೀವನದಲ್ಲಿ ಸಂಕೀರ್ಣವಾದ ಬದುಕನ್ನು ಬಾಳಿದವನು. ಅವನ ಪಾತ್ರದ ಮೂಲಕ

ವಿನಾಯಕರು ಕನ್ನಡ ವಾಙ್ಮಯಕ್ಕೆ ಮಹಾದರ್ಶನವೊಂದನ್ನು ನೀಡುತ್ತಾರೆ. ಪೌರುಷ ಅಪೌರುಷಯೇಗಳ ಸಮನ್ವಯವನ್ನು, ಆಧುನಿಕ ಸಂವೇದನೆಯನ್ನು ಪ್ರತಿಮಾಶಕ್ತಿಗಳ ಮಹಾಪೂರವನ್ನು ಮಹೋಪಮೆಗಳ ಬಳಕೆಯಲ್ಲಿ ನಾವೀನ್ಯವನ್ನು ಸ್ವಕಲ್ಪನೆಯಿಂದ ಕೂಡಿದ ವರ್ಣನಾ ವೈಖರಿಯನ್ನು ಈ ಕಾವ್ಯದಲ್ಲಿ ಕಾಣಬಹುದು. "ಮಾನವನು ವಿಶ್ವಮಾನವನಾಗಿ ಬೆಳೆಯಲು ಈ ಮಹಾಕಾವ್ಯ ಒಂದು ವೇದದ ದರ್ಪಣವಾಗಿದೆ" ಎಂಬ ಶ್ರೀ ಎನ್ಕೆಯವರ ಮಾತು ಸಮರ್ಪಕವಾಗಿದೆ. ಶ್ರೀ ವಿನಾಯಕರ ಕಾವ್ಯ ತಪಸ್ಸಿನ ಫಲವಾಗಿ ಬಂದ ಮೇರುಕೃತಿ ಇದು.

ಕೇವಲ ಕಾವ್ಯ ಮಾತ್ರವಲ್ಲದೆ, ವಿಮರ್ಶಾ ಶಾಸ್ತ್ರದಲ್ಲಿ ವಿ.ಕೃ.ಗೋಕಾಕರು ಅಪಾರ ಕಾಣಿಕೆ ನೀಡಿದ್ದಾರೆ. ಅವರ "ಇಂದಿನ ಕನ್ನಡ ಕಾವ್ಯದ ಗೊತ್ತು-ಗುರಿಗಳು", ವಿಮರ್ಶಾ ತತ್ತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ, ಕವಿಕಾವ್ಯ ಮಹೋನ್ನತಿ, Collridge's Astheties An integral view of Poetry. ನವ್ಯತೆ ಮುಂತಾದವುಗಳು ಅವರ ಕಾವ್ಯವಿಮರ್ಶಾ ನಿಲುವಿಗೆ ಸಾಕ್ಷಿಯಾಗಿವೆ. ಬೇಂದ್ರೆ ಕುರಿತಾದ, ಅಪಾರ ಆಸ್ಥೆ ಹೊಂದಿದ ಗೋಕಾಕರು 'Bendre Poet and Seer' ಎಂಬ ವಸ್ತುನಿಷ್ಠ ವಿಮರ್ಶಾ ಗ್ರಂಥವನ್ನು ರಚಿಸಿದ್ದಾರೆ. (ಆಂಗ್ಲಭಾಷೆಯಲ್ಲಿ 3 ಕವನಸಂಗ್ರಹಗಳನ್ನು ಪ್ರಕಟಿಸಿರುವುದೇ ಅಲ್ಲದೆ, ಸತ್ಯಸಾಯಿಬಾಬಾರ ಮೇಲೆ, ಅರವಿಂದರ ದರ್ಶನದ ಮೇಲೆ, ದಾರ್ಶನಿಕ ವಚನಗಳ ಮೇಲೆ ಇಂಗ್ಲಿಷಿನಲ್ಲಿ ಅನೇಕ ಕೃತಿ ರಚಿಸಿದ್ದಾರೆ.)

ಪ್ರವಾಸ ಸಾಹಿತ್ಯದಲ್ಲಿ ಸಾಕಷ್ಟು ಕೃಷಿ ಮಾಡಿರುವ ಗೋಕಾಕರು 'ಪಯಣಿಗ', 'ಸಮುದ್ರದೀಚೆ'ಯಿಂದ ಕೃತಿಗಳಲ್ಲಿ ತಮ್ಮ ಅನುಭವವನ್ನು ಸಮರ್ಥವಾಗಿ ಪಡಿ ಮೂಡಿಸಿದ್ದಾರೆ. 'ಜನನಾಯಕ' ಗೋಕಾಕರ ದೀರ್ಘ ನಾಟಕವಾದರೆ, ಯುಗಾಂತರ ವೈಚಾರಿಕ ನಾಟಕವಾಗಿದ್ದು, ವಿಮರ್ಶಕ ವೈದ್ಯ ಲಘು ನಾಟಕವಾಗಿದೆ. ಇಂದಿನ ಕರ್ನಾಟಕ, ಚೆಲುವು ನಿಲುವು ವಿನಾಯಕರ ಗದ್ಯಕೃತಿಗಳು. ಇದರಲ್ಲಿ ಶಿಖರಪ್ರಾಯ ವಾದುದೆಂದರೆ ಅವರ "ಸಮರಸವೇ ಜೀವನ" ಕಾದಂಬರಿ. 1935ರಲ್ಲಿ ಪ್ರಕಟವಾದ 'ಇಜ್ಜೋಡು'ವಿನ ಮುಂದುವರಿದ ಭಾಗವಾಗಿ 1320 ಪುಟಗಳ ಬೃಹದ್ ಕಾದಂಬರಿ ಯಾಗಿ ಹೊರಹೊಮ್ಮಿದೆ. ವೈವಿಧ್ಯಮಯವಾದ ವರ್ಣನೆಯಿಂದ, ಹೃದಯ ತಾಕುವ ಚಿತ್ರಣದಿಂದ, ಸನ್ನಿವೇಶಕ್ಕೆ ಬರುವ ಅನಿರೀಕ್ಷಿತ ತಿರುವುಗಳಿಂದ, ಮಿಡಿಯುವ ಮಾನವೀಯ ಅಂಶಗಳಿಂದ ಮಿಂಚುವ ಭಾರತೀಯ ದೃಷ್ಟಿಕೋನದಿಂದ ಕಾದಂಬರಿ ಗೊಂದು ಮಹತ್ವ ಬಂದು ಕನ್ನಡದ ಮಹೋನ್ನತ ಕಾದಂಬರಿಯೆಂದು ಕರೆಸಿ ಕೊಂಡಿದೆ.

ಹೀಗೆ ಕನ್ನಡ ಸಾರಸ್ವತಲೋಕಕ್ಕೆ ವಿನಾಯಕರ ಕೊಡುಗೆ ವೈವಿಧ್ಯಮಯ ಹಾಗೂ ವೈಶಿಷ್ಟವಾದುದು. ತಮ್ಮ ಅಪಾರ ಅನುಭವ ಹಾಗೂ ಚಿಂತನ ಕ್ರಮದ ಪಡಿ ನೆರಳಾಗಿ ಅವರ ಸಾಹಿತ್ಯ ಸೃಷ್ಟಿಯಾಗಿದೆ. ಅವರ ಜೀವನಶೈಲಿ, ಕಾವ್ಯಶೈಲಿ ಎರಡೂ

ಕೂಡ ವಿಶಿಷ್ಟವಾದದ್ದು. ಬೌದ್ಧಿಕವಾಗಿ ಉತ್ತುಂಗಕ್ಕೇರಿದ ಗೋಕಾಕರು ತಮ್ಮ ಸಾಹಿತ್ಯ ಕೃತಿಗಳಲ್ಲೂ ಈ ದರ್ಶನವನ್ನು ನೀಡಿ ಸಾರ್ಥಕರಾಗಿದ್ದಾರೆ. ಆಧುನಿಕ ಕನ್ನಡ ನಾಡು ಕಂಡ ವಿಶಿಷ್ಟ ವ್ಯಕ್ತಿ, ಶಕ್ತಿಗಳಲ್ಲಿ ಒಬ್ಬರಾಗಿ ಶ್ರೀ ವಿನಾಯಕ ಕೃಷ್ಣ ಗೋಕಾಕರು ಮಿಂಚಿದ್ದಾರೆ. ನಾಡಿಗೆ ಜ್ಞಾನಪೀಠದ ಗರಿಯೊಂದನ್ನು ತೊಡಿಸಲು ಕಾರಣರಾಗಿದ್ದಾರೆ.

■

ಕನ್ನಡ ಸಾಹಿತ್ಯ ಹಾಗೂ ಕರ್ನಾಟಕ ಸಂಸ್ಕೃತಿ

ಸಾವಿರಾರು ವರ್ಷಗಳ ನಡವಳಿಕೆ ತಿಳುವಳಿಕೆಗಳ ಫಲವಾಗಿ ಸಮಾಜಕ್ಕೆ ಕೂಡಿಬರುವ ಸಂಸ್ಕಾರವಿಶೇಷವನ್ನು 'ಸಂಸ್ಕೃತಿ' ಎಂದು ಕರೆಯುತ್ತಾರೆ. ಇವತ್ತು ನಾವು ಇಂಗ್ಲೀಷ್‌ನ "Culture" ಪದಕ್ಕೆ ಸಂವಾದಿಯಾಗಿ ಸಂಸ್ಕೃತಿಯನ್ನು ಬಳಸುತ್ತಿದ್ದೇವೆ. ಪಾಶ್ಚಾತ್ಯರಲ್ಲಿ ಈ ಪದದ ಬಳಕೆಯ ಬಗ್ಗೆ ಸಾಕಷ್ಟು ಚಿಂತನ ಮಂಥನಗಳು ನಡೆದಿವೆ. ಪ್ರಸಿದ್ಧ ಚಿಂತಕ ಮ್ಯಾಥ್ಯೂ ಅರ್ನಾಲ್ಡ್‌ನು "ಮನುಷ್ಯರ ಸ್ವಭಾವಕ್ಕೆ ಸೌಂದರ್ಯವನ್ನು, ಸೊಗಸನ್ನು, ಗೌರವವನ್ನು ಕೊಡುವ ಎಲ್ಲ ಶಕ್ತಿಗಳು ಸುಸಂಗತವಾಗಿ ಕಂಡುಬರುವುದೇ – ಸಂಸ್ಕೃತಿ" ಎನ್ನುತ್ತಾನೆ. ಸಂಸ್ಕೃತಿ ಎಂಬುದು ಮುಖ್ಯವಾಗಿ ಆಂತರಂಗಿಕ ವಿಕಾಸಕ್ಕೆ ಸಂಬಂಧಿಸಿದ ವಿಚಾರ. ಒಂದು ಜನಾಂಗದ ಸಮಸ್ತ ನಡವಳಿಕೆಗಳನ್ನು, ಅಭಿರುಚಿಗಳನ್ನು ಕಂಡುಕೊಳ್ಳುವ ಬಗ್ಗೆ ಸಂಸ್ಕೃತಿಯಾಗಿದೆ. ಇದನ್ನೇ ಟಿ.ಎಸ್. ವಿಲಿಯಟ್ ಒಬ್ಬ ವ್ಯಕ್ತಿಯಲ್ಲಿ ಕಂಡುಬರುವುದಕ್ಕಿಂತ ಒಂದು ಸಮಾಜದ ಜನವರ್ಗದ 'ಜೀವನ ವಿಧಾನ'ದಲ್ಲಿ ಇದು ಕಂಡುಬರುತ್ತದೆ. ಧಾರ್ಮಿಕ ನಂಬಿಕೆಗಳೇ ಸಂಸ್ಕೃತಿಯ ತಳಹದಿ" ಎಂದು ಹೇಳಿರುತ್ತಾನೆ. ಇವತ್ತು ಕರ್ನಾಟಕ ಒಂದು ಜನವರ್ಗವಾಗಿ ಕಾಣಿಸಿಕೊಂಡಿದೆ. ಈ ಜನ ವರ್ಗ ಎಂತಹ ಸಂಸ್ಕೃತಿಯನ್ನು ರೂಢಿಸಿಕೊಂಡಿದೆ. ಇಂತಹ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯದ ಕೊಡುಗೆ ಏನು? ಎಂಬುದೇ ಇಲ್ಲಿನ ಮುಖ್ಯ ವಿಷಯವಾಗಿದೆ. ಇದನ್ನು ಅರಿಯಲು ಕರ್ನಾಟಕದ ಇತಿಹಾಸದ ಬಗ್ಗೆ ಅದರಲ್ಲೂ ಆ ಕಾಲದ ಜೀವನ ಮೌಲ್ಯವಾದ ಧಾರ್ಮಿಕ ವಿಚಾರಗಳ ಬಗ್ಗೆ ಮೊದಲಿಗೆ ತಿಳಿದುಕೊಳ್ಳುವುದು ಒಳ್ಳೆಯದು.

ಐತಿಹಾಸಿಕವಾಗಿ ನೋಡ ಹೋದರೆ 2500 ವರ್ಷಗಳಷ್ಟು ಭವ್ಯ ಪರಂಪರೆ ಉಳ್ಳ ಕರ್ನಾಟಕವು ಧಾರ್ಮಿಕವಾಗಿ ಸರ್ವಧರ್ಮಗಳ ಆಡುಂಬೊಲವಾಗಿತ್ತು. ಇಲ್ಲಿ ಎಲ್ಲ ಧರ್ಮದ ಗೋವುಗಳು ಸ್ವೇಚ್ಛೆ ಯಾಗಿ ಮೇವುಂಡು ಸಮೃದ್ಧವಾಗಿ ಬೆಳೆದಿವೆ.

ಕ್ರಿಪೂ. 3ನೇ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯನು ಜೈನಮುನಿ ಭದ್ರಬಾಹುವಿನೊಡನೆ ಬರಗಾಲದ ಕಾರಣದಿಂದಾಗಿ ಬೆಳಗೊಳದಲ್ಲಿ ಬಂದು ನೆಲೆಸಿದ. ಅದೇ ಮುಂದೆ ಶ್ರವಣಬೆಳುಗೊಳವಾಯಿತು. ಇವನ ಮೊಮ್ಮಗ ಅಶೋಕನ (ಕ್ರಿ.ಪೂ.274 ರಿಂದ 235) ಶಾಸನಗಳು ಕರ್ನಾಟಕದಲ್ಲಿ ಲಭ್ಯವಿವೆ. ಬನವಾಸಿ, ಮಹಿಷ ಮಂಡಲದ ಮೂಲಕವೇ ಬೌದ್ಧಧರ್ಮ ಹಾದು ಶ್ರೀಲಂಕೆಗೆ ಹೋಗಿದೆ. ಬ್ರಹ್ಮಗಿರಿ, ಸಿದ್ಧಾಪುರ, ಮಸ್ಕಿಗಳಲ್ಲಿ ದೊರೆತ ಶಾಸನಗಳು, ಮಂಗಳೂರಿನ ಕದ್ರಿಯ ಮಂಜುನಾಥ ದೇವಸ್ಥಾನದಲ್ಲಿರುವ ಬುದ್ಧನ ವಿಗ್ರಹಗಳು ಬೌದ್ಧಧರ್ಮದ ಕುರುಹುಗಳನ್ನು ನೀಡುತ್ತವೆ. ಜೈನಧರ್ಮ 9–10–11ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಜೈನ ಕವಿಗಳು ಜಿನಧರ್ಮದ ಜೊತೆಯಲ್ಲಿ ಲೌಕಿಕ ಕಾವ್ಯಗಳನ್ನು ರಚಿಸಿ ಸರ್ವಧರ್ಮ ಸಮಭಾವವನ್ನು ಇಲ್ಲಿ ಬೆಳೆಸಿದರು. ಮುಂದೆ 11ನೇ ಶತಮಾನದಲ್ಲಿ ಕಾಣಿಸಿಕೊಂಡ ಲಿಂಗಾಯಿತ ಧರ್ಮವು ಕೂಡ ಕರ್ನಾಟಕದ ಹಿರಿಮೆಗರಿಮೆಯ ಲಾಂಛನವಾಗಿದೆ. ಸನಾತನ ಧರ್ಮದ ಎಲ್ಲಾ ಶಾಖೆಗಳು ಇಲ್ಲಿ ಹರಡಿವೆ. ಶಂಕರರ ಅದ್ವೈತ, ಮಧ್ವಾಚಾರ್ಯರ ದ್ವೈತ, ಶ್ರೀ ರಾಮಾನುಜರ ವಿಶಿಷ್ಟಾದ್ವೈತ, ಬಸವಣ್ಣನವರ ಶಕ್ತಿ ವಿಶಿಷ್ಟಾದ್ವೈತ ಎಲ್ಲಕ್ಕೂ ಕರ್ನಾಟಕ ಆಶ್ರಯಸ್ಥಾನವಾಗಿದೆ. ಇದು ಸೂಫಿ ಸಂತರ ನೆಲೆವೀಡು ಆಗಿದೆ. ಸಿಖ್ ಧರ್ಮಗುರುಗಳಾದ ನಾನಕ್‌ರು ಬೀದರ್‌ನಲ್ಲಿ ಸಾಕಷ್ಟು ಕಾಲ ಇದ್ದು, ಸಿಖ್ ಪಂಥೀಯರಿಗೂ, ಕರ್ನಾಟಕದ ಬೀದರ್ ಪವಿತ್ರ ಸ್ಥಳವಾಗಿದೆ. ಕ್ರೈಸ್ತ ಮಿಶನರಿಗಳು ಇಲ್ಲಿ ಸಾಕಷ್ಟು ವಿದ್ಯಾಲಯಗಳನ್ನು ತೆರೆದು, ಸಾಹಿತ್ಯ ಸೇವೆಯನ್ನು ಮಾಡಿ ಕರ್ನಾಟಕ ಸಂಸ್ಕೃತಿಗೆ ತಮ್ಮ ಕಾಣಿಕೆಯನ್ನು ನೀಡಿದ್ದಾರೆ.

ಸಂಸ್ಕೃತಿಯು ಸಾಕಾರವಾಗುವುದು ಕಲೆಗಳಲ್ಲಿ. ಅದರಲ್ಲೂ ಅಕ್ಷರ ಮಾಧ್ಯಮ ವಾಗಿರುವ ಸಾಹಿತ್ಯದಲ್ಲಿ ಇದು ಇನ್ನಷ್ಟು ಪ್ರಖರವಾಗಿ ಗೋಚರಿಸುತ್ತದೆ. ಸಾಹಿತ್ಯ ಭಾವ ಸೃಷ್ಟಿಯಾಗಿದ್ದರೂ ಕೇವಲ ಮನರಂಜನೆಯಲ್ಲ. ಅದು ಗುಪ್ತಗಾಮಿನಿಯಾಗಿ ಹರಿದು ಜನರಿಗೆ ಜೀವನ ದರ್ಶನವನ್ನು ಉಂಟುಮಾಡುತ್ತದೆ. ಅದನ್ನೇ ಕನ್ನಡದ ಮೊದಲ ಲಕ್ಷಣ ಗ್ರಂಥವಾಧ 'ಕವಿರಾಜ ಮಾರ್ಗ'ದಲ್ಲಿ ಹೀಗೆ ಹೇಳಲಾಗಿದೆ –

"ಪಾಪಮಿದು ಪುಣ್ಯಮಿದು ಹಿತ ।
ರೂಪಮಿದಹಿತ ಪ್ರಕಾರಮಿದು ಸುಖಮಿದು ದುಃ ।
ಖೋಪಾತ್ತಮಿದೆಂದರಿಪುಗು ।
ಮಾ ಪರಮ ಕವಿ ಪ್ರಧಾನರಾ ಕಾವ್ಯಂಗಳ್" –

ಒಳ್ಳೆಯ ಕಾವ್ಯದಲ್ಲಿ ಯಾವುದು ಯೋಗ್ಯ, ಯಾವುದು ಅಯೋಗ್ಯ ಎಂದು ತಿಳಿವಳಿಕೆ ಹೇಳುವುದರೊಂದಿಗೆ ಜನವರ್ಗಕ್ಕೆ ಸಭ್ಯತೆ, ನಾಗರೀಕತೆ, ಗುಣಗ್ರಾಹಕತೆ,

ವಿನಯಶೀಲತೆ, ವಿಚಾರಪರತೆ, ರಸಿಕತೆ, ಸ್ನೇಹಪರತೆ ಮುಂತಾದ ಸದ್ಗುಣಗಳ ಸಂಪತ್ತನ್ನು ತಿಳಿಸಿ ಆ ಮೂಲಕ ಸಂಸ್ಕೃತಿಯ ಸಂವರ್ಧನೆಯನ್ನು ಮಾಡುತ್ತದೆ. ಕನ್ನಡ ನಾಡಿನ ಜನರು ಹೇಗಿದ್ದರು, ಅವರ ಬದುಕು ಹೇಗಿತ್ತು ಎಂಬುದರ ಬಗ್ಗೆ ಕೂಡ ಈ ಕಾವ್ಯ ಬೆಳಕು ಚೆಲ್ಲುತ್ತದೆ.

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್.

ಸಾವಿರ ವರ್ಷದ ಕೆಳಗೆ ಕರ್ನಾಟಕದ ಜನರು ಎಂತಿದ್ದರು ಎಂಬುದು ಈ ಸಾಲುಗಳಿಂದ ತಿಳಿಯುತ್ತದೆ. ಇಂತಹ ವ್ಯಕ್ತಿಗಳೇ ಸಂಸ್ಕೃತಿಯನ್ನು ಮುಂದಿನ ಜನಾಂಗಕ್ಕೆ ಹರಿಯಿಸುತ್ತಾರೆ. ಕರ್ನಾಟಕ ಸಂಸ್ಕೃತಿಯ ವಾಖ್ಯಾನವೇ ಆಗಿದೆ.

ಕನ್ನಡ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದವರು ಜೈನಕವಿಗಳು. ಜೈನ ಧರ್ಮದ ಬೆಳವಣಿಗೆಯಲ್ಲಿ, ಪ್ರಸಾರದಲ್ಲಿ ಕರ್ನಾಟಕದ ಪಾಲು ಹಿರಿದು. ಅಹಿಂಸೆ, ಪರಮತ ಸಹಿಷ್ಣುತೆ, ತ್ಯಾಗ, ಶುಚಿತ್ವ ಮುಂತಾದ ಉದಾತ್ತ ಗುಣಗಳನ್ನು ಅವರ ಕಾವ್ಯಗಳು ಸಾರಿದವು. ವೈದಿಕ ಧರ್ಮ ಹಾಗೂ ಜೈನಧರ್ಮಗಳು ಪರಸ್ಪರ ಕೊಳುಕೊಡೆಯಲ್ಲಿ ಇದ್ದದ್ದನ್ನು ಗಮನಿಸಬಹುದು. ಕನ್ನಡದ ಆದಿಕವಿ ಪಂಪನ ತಂದೆ ಜೈನಧರ್ಮವನ್ನು ಅಪ್ಪಿಕೊಂಡವನು. ಅವನ 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನವಿಜಯ' ಗಳೆರಡರಲ್ಲೂ ಸುಸಂಸ್ಕೃತ ಸಮಾಜದ ಚಿತ್ರಣ ದೊರೆಯುತ್ತದೆ. ಉತ್ತಮಿಕೆಯ ಬದುಕಿನ ಹೆಚ್ಚುತನ, ನಡೆವಳಿಕೆಯಲ್ಲಿ ಹಿರಿಯತನ, ಸರ್ವರಲ್ಲೂ ಹೊಂದಾಣಿಕೆಯ ಗುಣ ಆ ಕಾಲಖಂಡದ ಗುಣವಿಶೇಷಗಳಾಗಿದ್ದವು. ಸಂಸ್ಕೃತಿಯೆಂದರೆ ಈ ಮೂರರ ಮುಪ್ಪುರಿಯೇ ಆಗಿದೆ. ಆದಿಪುರಾಣದಲ್ಲಿ ಬರುವ ಭರತ ಬಾಹುಬಲಿಯ ಕಥೆ ಹೇಗೆ ಮನುಷ್ಯರು ಬಾಳಬೇಕೆಂಬುದರ ಬಗ್ಗೆ ಒಳನೋಟ ನೀಡುತ್ತದೆ. ಬಾಹುಬಲಿ ಹೇಳುವ ಈ ಮಾತು ನಮ್ಮ ಜೀವನ ವಿಧಾನವೇ ಆಗಿದೆ –

"ಪಿರಿಯಣ್ಣಂ ಗುರುತಂದೆಯೆಂದೆರುಗುವಂ ಮುನ್ನೆಲ್ಲಮಿಂತೀಗಳಾ
ಳರಸೆಂಬೊಂದು ವಿಭೇದ ಮಾದೊಡೆರಕಂ ಚೀಃ ಕಷ್ಟಮಲ್ತೆ ॥"

ಇಲ್ಲಿ ಆತ್ಮಗೌರವ ಹಾಗೂ ಸಹೋದರ ಪ್ರೇಮದ ವ್ಯಾಖ್ಯೆ ಇದೆ. ಜನತೆ ಅಣ್ಣನೆಂಬುದಕ್ಕೆ ಗೌರವ ಕೊಡಲು ಸಿದ್ಧರಿರುತ್ತಾರೆ ಆದರೆ ಆಳು-ಅರಸು ಎಂಬ ಭೇದಭಾವ ಅವರ ನಡುವೆ ಬಂದಾಗ ಅದಕ್ಕೆ ಅವರು ಸಿದ್ಧರಿರುವುದಿಲ್ಲ. "ಮನುಷ್ಯ ಜಾತಿ ತಾನೊಂದೇ ವಲಂ" ಎಂದು ಪಂಪ ಸಾರಿರುವುದು ಇಂದಿಗೂ ಖ್ಯಾತವಾಗಿದೆ. ಬಾಹುಬಲಿಯ ಕತೆ ಕನ್ನಡಿಗರನ್ನು ಗಾಢವಾಗಿ ಸೆಳೆದಿದೆ. ಅದಕ್ಕಾಗಿಯೇ ಇಂದು 4 ಗೊಮ್ಮಟಗಳ ನೆಲೆವೀಡಾಗಿದೆ.

ಇನ್ನು ಪಂಪನ 'ವಿಕ್ರಮಾರ್ಜುನವಿಜಯ'ವು ವಿಭಿನ್ನ ಮನುಷ್ಯ ಸ್ವಭಾವಗಳ ಚಿತ್ರಣವನ್ನು ಸೊಗಸಾಗಿ ನೀಡುತ್ತದೆ. ಮಹಾಭಾರತದ ಪಾತ್ರಗಳ ಗುಣಸ್ವಭಾವವನ್ನು ಪಂಪ –

"ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶಂ ಅತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ।
ರ್ಮಲ ಚಿತ್ತಂ ಧರ್ಮತನಯಂ ಮಿಗಿಲಿವರ್ಗಳಿಂ ಭಾರತಂ ಲೋಕಮಾನ್ಯಂ"

ಎಂದು ಹೇಳಿರುವುದಲ್ಲದೆ ಕರ್ಣನ ವಿಷಯದಲ್ಲಂತೂ ಬಹು ಆರ್ದ್ರವಾಗಿ,

"ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ"

ಎಂದು ಹೇಳಿ ಕಡೆಯಲ್ಲಿ,

ಕರ್ಣನೊಳಾರ್ದೊರೆ, ಕರ್ಣನೇರು, ಕರ್ಣನಕಡುನನ್ನಿ............
ಕರ್ಣನ ಚಾಗಲ್ತೆ ಕರ್ಣರಸಾಯನಮಮೆಂದು...... ಭಾರತಂ"

ಎಂದು ಕೈವಾರಿಸಿದ್ದಾನೆ. ತ್ಯಾಗಕ್ಕೆ ಆ ಕಾಲದಲ್ಲಿದ್ದ ವಿಶಿಷ್ಟ ಸ್ಥಾನವನ್ನು ಇದು ತೋರಿಸುತ್ತದೆ.

ಕನ್ನಡ ನಾಡಿನ ಹಿರಿಮೆಯ ಬಗ್ಗೆ, ಇಲ್ಲಿನ ಜನರ ಶ್ರೀಮಂತ ಸಾಂಸ್ಕೃತಿಕ ಬದುಕಿನ ಬಗ್ಗೆ ಪಂಪ ಮಹಾಕವಿ ಆಡಿರುವ ಮಾತುಗಳಂತು ಜನಜನಿತವಾಗಿದೆ.

"ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರ ಮಾದಮಾನಿಸರೆ ಮಾನಿಸರ್"

ಎಂದು ಹೇಳಿರುವುದಲ್ಲೆ 'ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ತಾಯ್ನಾಡ ಪ್ರೀತಿ ತೋರಿದ್ದಾನೆ.

12ನೇ ಶತಮಾನದಲ್ಲಿ ಕಾಣಿಸಿಕೊಂಡ ವಚನ ಚಳುವಳಿಯು ಕರ್ನಾಟಕದ ಹಿರಿಮೆಗರಿಮೆಯ ಲಾಂಛನವಾಗಿದೆ. ಆ ಕಾಲಕ್ಕಾಗಲೇ ಕಾಯಕದ ಮಹತ್ವವನ್ನು ಸಾರಿದ ವಚನಕಾರರು ಅಂಧಶ್ರದ್ಧೆಗಳನ್ನು, ಮೂಢನಂಬಿಕೆಗಳನ್ನು ವಚನಗಳ ಮೂಲಕ ಪ್ರಶ್ನಿಸಿದರು. ಎಲ್ಲಾ ಜಾತಿಯ ಜನರನ್ನು ಸಮಾನ ನೆಲೆಯಲ್ಲಿ ಪರಿಭಾವಿಸಿದ ವಚನಕಾರರ ವಚನಗಳು ಕನ್ನಡ ಭಾಷೆಯ ಕಸುವನ್ನು ಹೀರಿಕೊಂಡು ಜನಮಾನಸದಲ್ಲಿ ಹೊಸ ಚಿಂತನೆಯನ್ನು ಹುಟ್ಟುಹಾಕಿದವು. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಸಿದ್ಧಾಂತದೊಂದಿಗೆ ಬಂದ ಈ ನೂತನ ವಿಚಾರಧಾರೆ ಅನೇಕ ಜನ ಅನುಭಾವಿಗಳನ್ನು ಪರಿಚಯಿಸಿತು. ಬಸವಣ್ಣ, ಅಲ್ಲಮಪ್ರಭು, ದೇವರದಾಸಿಮಯ್ಯ, ಅಕ್ಕಮಹಾದೇವಿ, ಸಿದ್ಧರಾಮಯ್ಯ, ಅಂಬಿಗರ ಚೌಡಯ್ಯ ಮುಂತಾದ ವಚನಕಾರರು

ಸಹಬಾಳ್ವೆಯ ಹರಿಕಾರರಾದರು. ವಚನಗಳು ಕನ್ನಡ/ಕರ್ನಾಟಕ ಸಂಸ್ಕೃತಿಯ ಪ್ರತಿರೂಪಗಳಂತಿವೆ. ಕಾಯಕಯೋಗದ ಮಹತ್ವ, ಏಕೋಪಾಸನೆಯ ಹಿರಿಮೆ, ಸಮಾಜ ದರ್ಶನದ ಸಾಕಾರತೆ, ದಾಸೋಹ ಸಿದ್ಧಾಂತದ ನಿರೂಪಣೆ, ಅಂಧ ಆಚರಣೆಗಳ ಟೀಕೆ, ಜಾತಿಪದ್ಧತಿಯ ಬಗೆಗಿನ ಅಸಹನೆ ಮುಂತಾದವುಗಳು ವಚನ ಸಾಹಿತ್ಯದಲ್ಲಿ ಕಂಡುಬರುವ ವಿಶೇಷತೆಯಾಗಿದೆ. ಕರ್ನಾಟಕ ಸಂಸ್ಕೃತಿಗೆ ಕನ್ನಡದ ನೆಲಸಂಸ್ಕೃತಿಗೆ ಹೊಸ ಬೆಳಕನ್ನು ಹರಿಸಿದ ಕೀರ್ತಿಗೆ ವಚನಕಾರರು ಭಾಗಿಗಳಾಗಿದ್ದಾರೆ. ಈ ಕೆಳಗಿನ ವಚನಗಳನ್ನು ಈ ಮಾತಿಗೆ ಸಾಕ್ಷಿಯಾಗಿ ಕಾಣಬಹುದು.

1. ಹೊನ್ನಿಗೊಳಗೊಂದೊರೆಯ, ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ, ನಿಮ್ಮ ಪುರಾತನರಾಣೆ ।

2. ಏನ ಬಂದಿರಿ ಹದುಳವಿದ್ದಿರೆ
ಎಂದಡೆ ನಿಮ್ಮೈಸಿರಿ ಹಾರಿಹೋಹುದೆ
ಕುಳ್ಳಿರೆಂದೊಡೆ ನೆಲ ಕುಳಿಹೋಹುದೆ

3. ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ.

3. ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಹೊನ್ನು ಮಾಯೆಯೆಂಬರು ಹೊನ್ನೂ ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣೂ ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ.

ಇದನ್ನೇ

'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ'

ಎನ್ನಲಾಗಿದೆ.

5. ದಯೆಯಿಲ್ಲದ ಧರ್ಮ ಯಾವುದಯ್ಯ ದಯೆಯಿರಬೇಕು ಸಕಲ ಪ್ರಾಣಿಗಳಲ್ಲಿ
ದಯೆಯೇ ಧರ್ಮದ ಮೂಲವಯ್ಯ

6. ಲೋಕದಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳಿಗೆ ಅಂಜಬಾರದು
ಅಳುಕಬಾರದು ಸಮಾಧಾನಿಯಾಗಿರಬೇಕು.

7. ಕಾಯಕದಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು.

8. ಕಾಗೆಯೊಂದಗುಳ ಕಂಡರೆ ಕರೆಯದೇ ತನ್ನ ಬಳಗವನು ?
ಕೋಳಿಯೊಂದು ಗುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ ?

9. ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ
.......ಭಕ್ತಿಯೆಂಬುದು ತೋರುಂಬ ಲಾಭ, ಗುಹೇಶ್ವರನೆಂಬುದು ಮೀರಿದ ಘನವು.

10. ಬೆಟ್ಟದಲ್ಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ.

11. ಬಾಗಿ ಬೆಳೆದ ಗೊನೆ ಬಾಳೆಯಂತೆ ಬಾಗಿಕೊಂಡಿದ್ದರೆ
ಬೇಡಿದ ಪದವಿಯನೀವ ಕೂಡಲ ಸಂಗಮದೇವ

12. ಅಂದಣವನೇರಿದ ಸೊಣಗನಂತೆ ಕಂಡೊಡನೆ ಬಿಡದು
ಮುನ್ನಿನ ಸ್ವಭಾವವನು....
ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆ ನಾಯಿತನವ
ಮಾಣಿಸು ನಿಮ್ಮ ಧರ್ಮ.

ಇಡೀ ವಿಶ್ವವೇ ಮಹಿಳೆಯರಿಗೆ ಸಮಾನತೆಯನ್ನು ಕೊಡದ ಕಾಲದಲ್ಲಿ ಬಸವಣ್ಣನವರು ಸ್ತ್ರೀಯರಿಗೆ ಲಿಂಗದೀಕ್ಷೆ ಕೊಡಿಸಿ ಎಲ್ಲ ವಿಚಾರದಲ್ಲೂ ಪುರುಷರಿಗೆ ಸಮಾನರೆಂದು ಸಾರಿದರು. ಒಂಬೈನೂರು ವರ್ಷಗಳ ಕೆಳಗೆ ಇಂತಹ ಒಂದು ವಿಚಾರಕ್ರಾಂತಿ ನಡೆಯಿತೆಂಬುದು ಕರ್ನಾಟಕ ಸಂಸ್ಕೃತಿಯ ಹೆಚ್ಚುಗಾರಿಕೆಯಾಗಿದೆ. ಅದೇ ರೀತಿ ಜಾತಿ, ಸ್ಥಾನ, ವರ್ಗಭೇದವಿಲ್ಲದೆ ಎಲ್ಲರೂ ಸಮಾನರಾಗಿ ಅನುಭವ ಮಂಟಪದಲ್ಲಿ ಕಲೆತದ್ದು ಕೂಡ ಒಂದು ವಿಶಿಷ್ಟ ಸಾಧನೆಯೇ ಆಗಿದೆ. ಇವರೆಲ್ಲ ಅಜ್ಞಾನ ಮೌಢ್ಯದ ವಿರುದ್ಧ ಸಮರ ಸಾರಿದರು. ಕಲ್ಲನಾಗರ ಪೂಜೆ ಮಾಡುತ್ತಾ ದಿಟದನಾಗರ ಕೊಲ್ಲುವ ವಿರೋಧಾಭಾಸವನ್ನು ತೋರಿಸಿಕೊಟ್ಟರು. ನುಡಿಯೊಂದು ಪರಿ, ನಡೆಯೊಂದು ಪರಿಯಾಗುವುದನ್ನು ತಪ್ಪು ಎಂದರು. ನುಡಿ ಹಾಗೂ ನಡೆಯಲ್ಲಿ ವ್ಯತ್ಯಾಸವಿರಬಾರದೆಂಬುದೇ ಇವರ ಅಭಿಮತ. ರಾಸಿ, ಕೂಟ, ಋಣ, ಸೂತಕ ಮುಂತಾದ ಪರಂಪರಾಗತ ವಿಚಾರಗಳನ್ನು ಪ್ರಶ್ನಿಸಿದರು. ಸಹಬಾಳ್ವೆಯ ಮಹತ್ವವನ್ನು ಸಾರಿದರು. ವಚನಸಾಹಿತ್ಯದಲ್ಲಿ ಪ್ರತಿಪಾದಿತವಾದದ್ದು ವಿಚಾರಶೀಲ ಬದುಕು. ಇದು ಆ ಕಾಲದ ಕನ್ನಡ ಸಂಸ್ಕೃತಿಯ ಚಿತ್ರಣವೇ ಆಗಿದೆ.

ಈ ವಚನಕಾರರ ಪ್ರಭಾವ ಮುಂದಿನ ಕವಿಗಳ ಮೇಲೂ ನಿಚ್ಚಳವಾಗಿ ಬೀರಿತು. ಹರಿಹರನೇ ಮುಂತಾದವರು ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ ಕಾವ್ಯ ಬರೆಯಬಾರದೆಂಬ ಎಚ್ಚರಿಕೆ ತಳೆದರು. ರಾಘವಾಂಕನಂತೂ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ 'ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು' ಎಂದು ಎಂಟುನೂರು ವರ್ಷಗಳ ಹಿಂದೆಯೇ ಸಾರಿದನು. ನಮ್ಮ ಗ್ರಾಮೀಣರ ಬದುಕನ್ನು ಸಂಸ್ಕೃತಿ ಭರಿತವಾಗಿ ಮಾಡಿದ ಇನ್ನೊಬ್ಬ ಮಹಾಕವಿಯೆಂದರೆ ನಾರಣಪ್ಪ. ಆತನ 'ಕರ್ಣಾಟ ಭಾರತ ಕಥಾಮಂಜರಿ' ಕರ್ನಾಟಕದ ಮನೆ, ಮನಗಳಲ್ಲೂ ಅನುರಣನ ಗೊಂಡು ಸೊಗಸಾದ ಬಾಳಿನ ದಾರಿಯನ್ನು ತೋರಿಸಿಕೊಟ್ಟಿತು. ಹಳ್ಳಿಯ ಜನರು ತಮ್ಮ ಬಿಡುವಿನ ವೇಳೆಯಲ್ಲಿ ಒಂದೆಡೆ ಕುಳಿತು ಗಮಕದ ಮೂಲಕ ಈ ಕಾವ್ಯದ ಸ್ವಾದವನ್ನು ಅರಿತರು. ಈ ಕಾವ್ಯವೂ ಕೂಡ ಅವರ ಬಾಳಿನ, ದಿನನಿತ್ಯದ

ನಡೆನುಡಿಯ ಚಿತ್ರವಾಗಿಯೇ ರೂಪುಗೊಂಡಿದೆ. ಆದ್ದರಿಂದಲೇ 'ಗದುಗುಭಾರತ' ಜನತೆಗೆ ಅಷ್ಟು ಸನಿಹವಾದದ್ದು. ಪ್ರಕೃತಿ ಸೌಂದರ್ಯಕ್ಕಿಂತಲೂ ಘನವಾದದ್ದು ಮಾನವ ಜೀವನದ ಸೌಂದರ್ಯ. ನಾರಣಪ್ಪ ಪ್ರಪಂಚದಲ್ಲಿರುವ ಈ ಮಾನವ ಜೀವನ ಸೌಂದರ್ಯಕ್ಕೆ ಚೌಕಟ್ಟು ಹಾಕಿ ನಮ್ಮ ಗಮನ ಅಲ್ಲಿ ನಿಲ್ಲುವಂತೆ ಮಾಡಿದ್ದಾನೆ.

ವಚನ ಸಾಹಿತ್ಯದಂತೆ ಕನ್ನಡ ನೆಲದಲ್ಲಿ ಹುಟ್ಟಿ ಸಮೃದ್ಧಿಯಾಗಿ ಬೆಳೆದ ಇನ್ನೊಂದು ಸಾಹಿತ್ಯ ಪ್ರಕಾರವೆಂದರೆ ದಾಸಸಾಹಿತ್ಯ. ಈ ಸಾಹಿತ್ಯದ ಎರಡು ಮೇರು ಶಿಖರಗಳೆಂದರೆ ಪುರಂದರದಾಸರು ಹಾಗೂ ಕನಕದಾಸರು. ಅವರಿಬ್ಬರ ಕೀರ್ತನೆಗಳಲ್ಲಿ ಸಾಮಾಜಿಕ ಬದುಕಿನ ಚಿತ್ರಣದ ಜೊತೆಯಲ್ಲಿ ತಮ್ಮ ಬದುಕು ಹೇಗಿರಬೇಕೆಂಬ ಚಿತ್ರಣವಿದೆ. ದಾಸರ ಕೀರ್ತನೆಗಳಲ್ಲಿ ಬಂದಿರುವ ಕೆಳಗಿನ ಸಾಲುಗಳು ಕರ್ನಾಟಕ ಸಂಸ್ಕೃತಿಯನ್ನು ರೂಪಿಸುವಲ್ಲಿ ಮಹತ್ತರ ಪಾತ್ರವಹಿಸಿವೆ.

1. ಸ್ನಾನ ಮಾಡಿರಿ ಜ್ಞಾನ ತೀರ್ಥದಲ್ಲಿ ನಾನು ನೀನೆಂಬ ಅಹಂಕಾರ ಬಿಟ್ಟು ।
2. ಪಾಪಿಬಲ್ಲನೆ ಪರರ ಸುಖದುಃಖವ, ಕೋಪಿ ಬಲ್ಲನೆ ಸತಿಯಶೀಲ ಗುಣವ ।
3. ಈಸಬೇಕು ಇದ್ದು ಜೈಸಬೇಕು । ಹೇಸಿಕೆ ಸಂಸಾರದಲ್ಲಿ ಆಶಾಲೇಶ ಮಾಡದ್ಹಾಂಗೆ ।
4. ಮಾನವ ಜನ್ಮ ದೊಡ್ಡದು । ಇದ ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ ।
5. ನಾನಾ ಪರಿಯಲಿ ಸಂತೆ ನೆರೆದಂತೆ । ನಾನಾ ಪಂಥವ ಹಿಡಿದು ಹೋದಂತೆ ।

ದಾಸ ಸಾಹಿತ್ಯ ಪೌರಾಣಿಕ ಕಥಾಸಂಪತ್ತಿನಿಂದ ತುಂಬಿ ತುಳುಕಿ ಸಾಮಾನ್ಯರಿಗೆ ಸ್ವಾರಸ್ಯವಾಗಿ, ಸರಳವಾಗಿ, ಜೀವನ ಮೌಲ್ಯವನ್ನು ತಿಳಿಸಿ ಅವರ ಬದುಕನ್ನು ರೂಪಿಸುವ ಶಕ್ತಿಯನ್ನು ಹೊಂದಿತ್ತು. ವ್ಯಕ್ತಿಗಳಲ್ಲಿ, ಕುಟುಂಬದಲ್ಲಿ, ಸಮಾಜದಲ್ಲಿ ಸುಸಂಸ್ಕೃತಿ ಉಳಿಯುವಂತೆ ಮಾಡುವಲ್ಲಿ ಈ ಕೀರ್ತನೆಗಳ ಪಾತ್ರ ಹಿರಿದು. ಹೂವಿಗೆ ವಾಸನೆ ಹೇಗೆ ಮುಖ್ಯವೋ, ಹಾಡಿಗೆ ಮಾಧುರ್ಯ ಹೇಗೆ ಮುಖ್ಯವೋ, ಊಟಕ್ಕೆ ರುಚಿ ಹೇಗೆ ಮುಖ್ಯವೋ, ಹಾಗೆ ಸಂಸ್ಕೃತಿ ಬದುಕಿಗೆ ಮುಖ್ಯ. ಇದೇ ರೀತಿ ಪಾಲ್ಕುರಿಕೆ ಸೋಮನಾಥನ ಸೋಮೇಶ್ವರ ಶತಕ, ಸರ್ವಜ್ಞ ಕವಿಯ ತ್ರಿಪದಿಗಳು ಬಾಳನ್ನು ಉದಾತ್ತವಾಗಿ ನಡೆಸಲು ಸಹಕಾರಿಯಾಗಿವೆ. ರತ್ನಾಕರ ವರ್ಣಿಯ 'ಭರತೇಶ ವೈಭವ'ದಲ್ಲೂ ಕನ್ನಡಿಗರ ಸುಸಂಸ್ಕೃತಮಯ ಬದುಕಿನ ಚಿತ್ರಣ ದೊರೆಯುತ್ತದೆ. ಯೋಗಭೋಗಗಳ ಸಮನ್ವಯದ ಸಿದ್ಧಾಂತವಿದೆ.

ಆಧುನಿಕ ಕನ್ನಡ ಸಾಹಿತ್ಯ ಸಂಖ್ಯೆಯಲ್ಲಿ, ಗುಣದಲ್ಲಿ, ಮೌಲ್ಯದಲ್ಲಿ ಮತ್ತು ವೈವಿಧ್ಯದಲ್ಲಿ ಬೃಹದಾಕಾರವಾಗಿ ಬೆಳೆದಿದೆ. ಇವತ್ತು ಭಾರತೀಯ ಸಾಹಿತ್ಯದಲ್ಲಿ ಕನ್ನಡದ ಸ್ಥಾನ ಅತ್ಯುಚ್ಚವಾಗಿದೆ. ಎಂಟು ಜ್ಞಾನಪೀಠ ಪ್ರಶಸ್ತಿಗಳ ಗರಿ ಅದರ ಮುಕುಟದಲ್ಲಿದೆ. ಕರ್ನಾಟಕ ಸಂಸ್ಕೃತಿಯ ಸ್ಪಷ್ಟ ಚಿತ್ರಣವನ್ನು ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿಕೊಟ್ಟು, ಕನ್ನಡದ ಮೇರುಕವಿ ಕುವೆಂಪುರವರು

ಬರೆದಿರುವ ಕವನಗಳಲ್ಲಿ, ಕಾದಂಬರಿಗಳಲ್ಲಿ, ಮಹಾಕಾವ್ಯ 'ರಾಮಾಯಣ ದರ್ಶನಂ'ನಲ್ಲಿ ಕಂಡುಬರುತ್ತದೆ. ವಿಶ್ವಮಾನವ ಪ್ರಜ್ಞೆ ಅವರ ಕಾವ್ಯದ ಅಂತರಾಳದಲ್ಲಿ ಪ್ರವಹಿಸುತ್ತಿದ್ದು 'ಸಮ್ಯಕ್ ಕಾರಯತಿ ಇತಿ ಸಂಸ್ಕೃತಿ' ಎಂಬ ವ್ಯಾಖ್ಯೆಯ ಪ್ರತಿಫಲವಾಗಿದೆ. ಅವರು ರಚಿಸಿರುವ ನಾಡಗೀತೆಯಾದ 'ಜಯಭಾರತ ಜನನಿಯ ತನುಜಾತೆ'ಯ ಸಾಲುಗಳು ನಿಜವಾದ ಅರ್ಥದಲ್ಲಿ ಕರ್ನಾಟಕ ಸಂಸ್ಕೃತಿಯ ಹೆಗ್ಗಳಿಕೆಯನ್ನು ಬಿಂಬಿಸುತ್ತದೆ. 'ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ' ಎಂಬ ಸಾಲು ಮನನೀಯ.

ದಿ॥ ಎ.ಎನ್. ಮೂರ್ತಿರಾವ್ ಅವರು ಹೇಳುವಂತೆ 'ಸಾಹಿತ್ಯದ ಸಂಗದಿಂದ ನಮ್ಮ ಹೃದಯ ಮೃದುವಾಗಿ ಪ್ರಪಂಚದಲ್ಲಿರುವ ವೈವಿಧ್ಯದ ಮತ್ತು ಮಾನವ ಜೀವನದ ಜಟಿಲತೆಯ ಅರಿವಾಗಿ ಒಂದು ವಿಷಯವನ್ನು ಹತ್ತಾರು ದೃಷ್ಟಿಕೋನಗಳಿಂದ ಪರಿಶೀಲಿಸುವ ಅಭ್ಯಾಸವಾಗುತ್ತದೆ. ಅಲ್ಪವಾದದ್ದರಲ್ಲಿ ದೊಡ್ಡತನವು, ದೊಡ್ಡದರಲ್ಲಿ ಅಲ್ಪತೆಯು ಬೆರೆತಿರುವುದನ್ನು ತಿಳಿಯುತ್ತೇವೆ. ಮಾನವನಿಗೆ ಬೇಕಾದ್ದು ಸ್ನೇಹಪ್ರೇಮ. ಅವಿಲ್ಲವಾದರೆ ಬದುಕಲಾರೆವು. ನಾನು ಎಲ್ಲ ಮಾನವರಂತೆ ಎಂಬ ತಿಳಿವು ಬಂದು ಮರುಕವು, ಪ್ರೇಮವು ವಿಶ್ವವ್ಯಾಪಿಯಾಗುತ್ತದೆ' ಎಂಬುದು ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲೂ ಸತ್ಯವಾದ ಮಾತು. ಡಿವಿಜಿಯವರ ಕಗ್ಗದಲ್ಲಿ, ಮಾಸ್ತಿಯವರ ಕತೆಗಳಲ್ಲಿ, ಕಾರಂತರ ಕಾದಂಬರಿಗಳಲ್ಲಿ, ಬೇಂದ್ರೆಯವರ ಕವನಗಳಲ್ಲಿ ಇಂತಹ ಸಂಸ್ಕಾರಯುತ ಜೀವನದ ಚಿತ್ರಣ ದೊರೆಯುತ್ತದೆ. 'ಪದ ಕುಸಿಯೆ ನೆಲವಿಹುದು' ಎಂಬ ಸಾಲುಗಳು ಧೈರ್ಯವನ್ನು, ಸಮಾಧಾನವನ್ನು, ಆತ್ಮವಿಶ್ವಾಸವನ್ನು ಗಳಿಸಿ ಕೊಡುತ್ತವೆ. ಜೀವನಪ್ರೀತಿಯ ಚಿತ್ರಣವನ್ನು ಎಲ್ಲಾ ಕವಿಗಳ, ಸಾಹಿತಿಗಳ ಕೃತಿಗಳಲ್ಲಿ ಕಾಣಬಹುದು.

ಕನ್ನಡ ಸಾಹಿತ್ಯದ ಇನ್ನೆರಡು ಪ್ರಕಾರಗಳಲ್ಲಿ ಕರ್ನಾಟಕ ಸಂಸ್ಕೃತಿ ಹೇಗೆ ಬಿಂಬಿತವಾಗಿದೆ ಎಂಬುದನ್ನು ಗಮನಿಸೋಣ. ಕನ್ನಡದ ಜನಪದ ಸಾಹಿತ್ಯದಲ್ಲಿ ಕರ್ನಾಟಕ ಸಂಸ್ಕೃತಿಯ ಹಲವು ಹೊಳವುಗಳು ದೊರೆಯುತ್ತವೆ. ಸಾಮಾನ್ಯ ಜನರು ತಮ್ಮ ದೈನಂದಿನ ಬದುಕಿನ ಚಿತ್ರಣಗಳನ್ನು ಇಲ್ಲಿ ನೀಡುವುದರೊಂದಿಗೆ ಮಾನವ ಬಾಳಿನ ಮುಖ್ಯ ಸ್ರೋತ ಯಾವುದು ಎಂಬುದನ್ನು ಕಥೆ, ಹಾಡು, ಪಾಡ್ದನ, ಒನಕೆ ಹಾಡು, ಸುಗ್ಗಿಪದ, ಲಾವಣಿ, ಮಾರನವಮಿ ಪದ, ಹುತ್ತರಿಹಾಡು ಮುಂತಾದ ವೈವಿಧ್ಯಮಯ ಪ್ರಕಾರಗಳಲ್ಲಿ ತೋಡಿಕೊಂಡಿದ್ದಾರೆ. ಸತ್ಯದ ಪ್ರತಿಪಾದನೆ ಗೋವಿನ ಹಾಡಿನಲ್ಲಿದ್ದರೆ, ಸಮಷ್ಟಿ ಹಿತ ಹಾಗೂ ತ್ಯಾಗದ ಹಿರಿಮೆ ಕೆರೆಗೆಹಾರ ಕಥನಗೀತೆಯಲ್ಲಿದೆ. 'ಸತ್ಯವೆಂಬುದು ತಾಯಿತಂದೆ, ಸತ್ಯವೆಂಬುದು ಬಂಧು-ಬಳಗ, ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಜಗದೀಶ'ನೆಂಬ ಸಾಲುಗಳಂತೂ ಜನಮಾನಸದಲ್ಲಿ ಅಚ್ಚೊತ್ತಿದೆ. ಪುಣ್ಯಕೋಟಿ ಕನ್ನಡದ ಮನೆಮಗಳಾಗಿದ್ದಾಳೆ. ಇಲ್ಲಿನ ಮಾಸ್ತಿಗಲ್ಲುಗಳ, ವೀರಗಲ್ಲುಗಳಲ್ಲಿ ಇಣುಕುವ ಕಿರು ಸಾಹಿತ್ಯ ಕನ್ನಡಿಗರ ವೀರ ಜೀವನವನ್ನು ತ್ಯಾಗ ಮನೋಭಾವ

ವನ್ನು ಪ್ರಾಣಕ್ಕಿಂತ ಒಡೆಯನ ಹಿತ ದೊಡ್ಡದೆಂದು ಬಗೆಯುವ ಸ್ವಾಮಿನಿಷ್ಠೆಯ ಧೋರಣೆಯನ್ನು ತಿಳಿಸುತ್ತವೆ.

ಇಲ್ಲಿ ಪ್ರಸ್ತಾಪಿಸಬೇಕಾದ ಇನ್ನೊಂದು ಪ್ರಕಾರವೆಂದರೆ ಶಾಸನ ಸಾಹಿತ್ಯ. ಅನೇಕ ಶಾಸನಗಳಲ್ಲಿ ಕರ್ನಾಟಕ ಸಂಸ್ಕೃತಿಯ ಚಿತ್ರಣ ಕಂಡುಬರುತ್ತದೆ. ಆಡಳಿತ ನಡೆಸುವವರು ಹೇಗಿರಬೇಕು, ಹೇಗಿದ್ದಾರೆಂಬುದಕ್ಕೆ ಕ್ರಿ.ಶ.1411ರ ಹಂಪೆಯ ಶಾಸನವು ಸಾಕ್ಷಿಯಾಗಿದೆ. ಪ್ರೌಢ ದೇವರಾಯನ ಮಂತ್ರಿಯಾಗಿದ್ದ ಲಕ್ಷ್ಮೀಧರಾಮಾತ್ಯನ ಕುರಿತಾದ ಈ ಶಾಸನದ ಸಾಲುಗಳನ್ನು ಗಮನಿಸಿ,

ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ದೇವಾಗಾರಮಂ ಮಾಡಿಸ ।
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ
ರ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆ ಯೆನುತಿಂತೆಲ್ಲಮಂ ಪಿಂದೆತಾ
ಯೆರೆದಳ್ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ

ಇದು ಕನಾಟಕದ ಸಂಸ್ಕೃತಿ. ಒಳ್ಳೆಯ ಕೆಲಸ ಮಾಡಬೇಕೆಂಬುದನ್ನು ತಾಯಿ ಮಗುವಾಗಿದ್ದಾಗಲೇ ಕಿವಿಯಲ್ಲಿ ಉಸುರಿ ಬೆಳೆಸಿದ್ದಳು. ಬಾದಾಮಿಯ ಕಪ್ಪೆ ಅರಭಟ್ಟನ ಕುರಿತಾದ 7ನೇ ಶತಮಾನದ ಶಾಸನದ ತ್ರಿಪದಿಯ ಸಾಲುಗಳು ಕನ್ನಡಿಗರ ಶೌರ್ಯವಂತ ಬದುಕಿಗೆ ಸಾಕ್ಷಿಯಾಗಿದೆ. ಇದೇ ರೀತಿ ಪ್ರಾಣಿಗಳ ಮೇಲಿನ ಪ್ರೀತಿಯ ಕುರಿತಾದ ಶಾಸನಗಳೂ ಕಾವ್ಯಾತ್ಮಕವಾಗಿ ಬಂದಿದೆ. ಪ್ರಾಣಿದಯೆ ನಮ್ಮ ಸಂಸ್ಕೃತಿಯೇ ಆಗಿದೆ.

ಹೀಗೆ ಸುಮಾರು ಸಾವಿರದ್ಯೆನೂರು ವರ್ಷಗಳ ಕಾಲ ಹರವು ಉಳ್ಳ ಕನ್ನಡ ಸಾಹಿತ್ಯ ಇಲ್ಲಿನ ಜನರು ಹೇಗೆ ಉದಾತ್ತ ಬಾಳನ್ನು ನಡೆಸಿದರೆಂಬುದರ ಬಗ್ಗೆ ಕ್ಷಕಿರಣ ಬೀರುತ್ತದೆ. ನಮ್ಮ ಇತಿಹಾಸ ತಿಳಿಸುವಂತೆ ಸಮನ್ವಯತೆಯೇ ಕರ್ನಾಟಕ ಸಂಸ್ಕೃತಿಯ ಲಕ್ಷಣವಾಗಿದೆ ಎಂಬುದನ್ನು ಕನ್ನಡ ಸಾಹಿತ್ಯ ಕೃತಿಗಳು ಪ್ರತಿಫಲಿಸುತ್ತವೆ. ಮೊದಲ ಕಾಲದ ಜೈನಕವಿಗಳು ತಮ್ಮ ಧರ್ಮದ ಕೃತಿಗಳನ್ನು ರಚಿಸಿರುವುದರ ಜೊತೆಗೆ ಲೌಕಿಕ ಕೃತಿಯೊಂದನ್ನು ರಚಿಸಿ ಸಮನ್ವಯತೆಯನ್ನು ಮೆರೆದಿದ್ದಾರೆ. ಪಂಪನೇ ಇದನ್ನು ಮೇಲ್ಪಂಕ್ತಿಯಾಗಿ ಹಾಕಿಕೊಟ್ಟಿದ್ದಾನೆ. ಅವನನ್ನು ಅನುಸರಿಸಿದ ಇತರ ಜೈನ ಕವಿಗಳು ತಮ್ಮ ಕಾವ್ಯದಲ್ಲಿ ಧಾರ್ಮಿಕ ಸಮನ್ವಯತೆಗೆ ಪೂರಕವಾಗುವ ಅಂಶಗಳನ್ನು ಪ್ರತಿಪಾದಿಸಿದ್ದಾರೆ.

ಇಹಪರಗಳೆರಡರಲ್ಲೂ ಸಮನ್ವಯವನ್ನು ಸಾಧಿಸಬೇಕೆಂಬುದನ್ನು ವಚನಕಾರರು ತಮ್ಮ ವಚನಗಳಲ್ಲಿ ಸಾರಿದರು. 'ಇಲ್ಲಿ ಇದ್ದೆ ಅಲ್ಲಿ ಸಲ್ಲಬೇಕೆಂಬುದೇ' ಅವರ ದೃಷ್ಟಿಯಾಗಿತ್ತು. ದೇಹ'ದಂಡನೆ'ಗೆ ಗುರಿಯಾಗುವಂತಹದ್ದಲ್ಲ. ಅದೇ ದೇವಾಲಯ. ಪ್ರಪಂಚದಲ್ಲಿ ಇದ್ದೆ ಚಿತ್ತಶುದ್ಧಿಯಿಂದ ಪಾರಮಾರ್ಥಿಕ ಸಾಧನೆ ಮಾಡುವುದೇ ಅವರ ಧೋರಣೆಯಾಗಿತ್ತು. ಈ ಜೀವನ ಪ್ರೀತಿಯೇ ಮುಂದಿನ ಸಾಹಿತ್ಯ ಕೃತಿಗಳಲ್ಲೂ

ಹರಿದುಬಂದಿದೆ. ವಸ್ತು ಪುರಾಣದಿದ್ದರೂ ಅದರ ಒಳಗಿನ ಹೂರಣ ಈ ನೆಲದ್ದೇ ಆಗಿದೆ. ಬದುಕನ್ನು ಆಪ್ತವಾಗಿ ನೋಡುವ ಅನೇಕ ಪಾತ್ರಗಳನ್ನು ನಮ್ಮ ಕವಿಗಳು ಸೃಷ್ಟಿಸಿದ್ದಾರೆ. ಮಾನವೀಯತೆಯನ್ನು ಸ್ಥಾಪಿಸುವುದೇ ಸಂಸ್ಕೃತಿ ಎಂಬ ಮ್ಯಾಥ್ಯು ಅರ್ನಾಲ್ಡ್ ಮಾತನ್ನು ನಮ್ಮ ಕನ್ನಡ ಸಾಹಿತ್ಯವು ನಿಜ ಮಾಡಿದೆ.

ಪರಂಪರೆಯ ಬಗ್ಗೆ ಗೌರವದೊಂದಿಗೆ ಹೊಸತಿಗೆ ತುಡಿಯುವುದನ್ನು ನಮ್ಮ ಕನ್ನಡ ಸಾಹಿತ್ಯದಲ್ಲೂ ಕಾಣಬಹುದು. ಅನೇಕ ಹೊಸ ಪ್ರಯೋಗಗಳು ಈ ನೆಲೆಯಲ್ಲಿ ಹುಟ್ಟಿಕೊಂಡಿವೆ. ಹಳತು ಹಾಗೂ ಹೊಸತರ ನಡುವಿನ ಸಂಘರ್ಷಕ್ಕಿಂತ ಸಮನ್ವಯವೇ ಇಲ್ಲಿ ಹೆಚ್ಚು. ಅದೇ ರೀತಿ ವ್ಯಕ್ತಿ ಹಾಗೂ ಸಮಾಜದ ನಡುವಿನ ಸಮನ್ವಯವನ್ನು ಇಲ್ಲಿನ ಕೃತಿಗಳು ತೋರಿಸಿವೆ. ವ್ಯಕ್ತಿಗಾಗಿ ಸಮಾಜ, ಸಮಾಜಕ್ಕಾಗಿ ವ್ಯಕ್ತಿಯೆಂಬ ದನಿ ಕನ್ನಡ ಸಾಹಿತ್ಯದಲ್ಲಿ ಮಾರ್ದನಿಗೊಂಡಿದೆ. ಈ ನೆಲದ ಸಂಸ್ಕೃತಿ ಇದೆಂಬುದು ನಮ್ಮ ಜಾನಪದ ಸಾಹಿತ್ಯ ಎಷ್ಟೋ ವರ್ಷಗಳ ಹಿಂದೆಯೇ ತೋರಿಸಿಕೊಟ್ಟಿದೆ. ಅದು ಶಿಷ್ಟ ಸಾಹಿತ್ಯದಲ್ಲೂ ಬಂದಿದೆ. ಒಟ್ಟಿನಲ್ಲಿ ನೆಲಸಂಸ್ಕೃತಿಯ ಚಿತ್ರಣ ಕನ್ನಡ ಸಾಹಿತ್ಯದಲ್ಲಿ ಢಾಳಾಗಿ ಕಾಣಿಸುತ್ತದೆ.

■

ಸಾಮಾನ್ಯರ ಒಲವಿನ ಕೆ.ಎಸ್.ಎನ್ ಅಡಿಗರು - ನೂರರ ನೆನಪು

ಭಾರತದಲ್ಲಿ ಆಧುನಿಕತೆಯ ಗಾಳಿಯು ಇಪ್ಪತ್ತನೇ ಶತಮಾನದಲ್ಲಿ ಬೀಸಲು ಪ್ರಾರಂಭಿಸಿತ್ತು. ಬ್ರಿಟಿಷರಿಂದಾಗಿ ಇಂಗ್ಲೀಷ್ ಶಿಕ್ಷಣವು ನವ ವಿದ್ಯಾವಂತರ ಪೀಳಿಗೆಯೊಂದನ್ನು ಹುಟ್ಟುಹಾಕಿತು. ಕಳೆದ ಶತಮಾನದ ಸ್ವಾತಂತ್ರ ಚಳುವಳಿಗೆ ಹೊಸದಿಕ್ಕನ್ನು ತೋರಿದವರು ಮಹಾತ್ಮ ಗಾಂಧಿಯವರು. ಗಾಂಧೀಪ್ರಣೀತ ಸಾಮಾಜಿಕ ವ್ಯವಸ್ಥೆಗೆ ಹಾಗೂ ಆರ್ಥಿಕ ಸಿದ್ಧಾಂತಕ್ಕೆ ಈ ನವವಿದ್ಯಾವಂತರ ಪೀಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಅವರಿಂದಾಗಿಯೇ ದೇಶಪ್ರೇಮ, ಕರ್ತವ್ಯನಿಷ್ಠೆ, ಸರಳಬದುಕು, ಗ್ರಾಮೀಣಪರ ಒಲವು ಮುಂತಾದ ಮೌಲ್ಯಗಳು ಯುವಕರಿಗೆ ಆದರ್ಶಗಳಾದವು. ಗಾಂಧೀಜಿ ಸಾರಿದ ತತ್ವಗಳಿಗೆ ಬದ್ಧರಾಗಿ ಸರಳಜೀವನ ನಡೆಸುತ್ತಾ, ಎಲೆಮರೆಯ ಕಾಯಿಯಂತಿದ್ದು ಸಮಾಜಮುಖಿಕಾರ್ಯಗಳಿಗೆ ತಮ್ಮ ಬದುಕನ್ನು ಸಮರ್ಪಿಸಿಕೊಂಡ ಹಲವರನ್ನು ಕಳೆದ ಶತಮಾನದಲ್ಲಿ ಕಾಣಬಹುದು. ಇಂತಹ ಪ್ರಾತಃ ಸ್ಮರಣೀಯರಲ್ಲಿ ಒಬ್ಬರೆಂದರೆ ಶ್ರೀ ಕೆ. ಸೂರ್ಯನಾರಾಯಣ ಅಡಿಗರು. ಅವರ ಬದುಕು ಅವರು ತೊಡುತ್ತಿದ್ದ ಬಿಳಿಖಾದಿಯಷ್ಟೇ ಶುಭ್ರ, ಅವರ ವ್ಯಕ್ತಿತ್ವ ಅವರ ನೀಳಕಾಯದಷ್ಟೇ ಬಹು ಎತ್ತರ. ಅವರ ಸಾಧನೆ ಅವರು ಬೆಳೆಸಿದ ಸಂಸ್ಥೆಯಷ್ಟೇ ಚಿರಕಾಲ ಉಳಿಯುವಂತಹದು.

ಅಂದಿನ ದಕ್ಷಿಣ ಕನ್ನಡ ಜಿಲ್ಲೆಯ ಬಡಗುಭಾಗದ ಆಢ್ಯ ಮನೆತನಗಳಲ್ಲಿ ಕುಕ್ಕುಂಜೆ ಅಡಿಗರ ಮನೆತನವೂ ಒಂದು. 20ನೇ ಶತಮಾನದ ಆದಿಭಾಗದಲ್ಲಿ ಆ ಮನೆತನದ ಶ್ರೀ ಸದಾಶಿವ ಅಡಿಗರು ವಕೀಲ ವೃತ್ತಿಯನ್ನು ಕೈಗೊಂಡು ಮಂಗಳೂರಿಗೆ ಬಂದು ನೆಲೆಸಿದ್ದರು. ಆ ಭಾಗದ ಇನ್ನೊಂದು ಆಢ್ಯ ಮನೆತನವಾದ ಹಲ್ಸನಾಡು ಮನೆತನದ ಶ್ರೀ ಮಹಾಲಕ್ಷ್ಮಿ ಅವರು ಅವರ ಪತ್ನಿ. ಶ್ರೀ ಸದಾಶಿವ ಅಡಿಗರು ನಗರಸಭೆ ಸದಸ್ಯರಾಗಿ, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಸದಸ್ಯರಾಗಿ, ಮದರಾಸ್ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ಕರ್ಣಾಟಕ ಬ್ಯಾಂಕಿನ ಸ್ಥಾಪಕ ನಿರ್ದೇಶಕರಾಗಿ ಸಾರ್ವಜನಿಕ ಜೀವನದಲ್ಲಿ ಹೆಸರುಗಳಿಸಿದವರು. ಇವರ ಮೊದಲನೆಯ ಮಗನಾಗಿ ಶ್ರೀ ಕೆ. ಸೂರ್ಯ ನಾರಾಯಣ ಅಡಿಗರ ಜನನ (ಅನಂದ ಸಂವತ್ಸರದ) 1914ರ ನವೆಂಬರ್ 5 ರಂದು ನೆಡದಿದ್ದು ಕೂಡು ಕುಟುಂಬದ ಎಲ್ಲ ಸಕಾರಾತ್ಮಕ ಅಂಶಗಳು ತಂದೆಯಿಂದಾಗಿ ಅವರಿಗೆ ರಕ್ತಗತವಾದವು.

ಕೆ.ಎಸ್.ಎನ್ ಅಡಿಗರ ಬಾಲ್ಯದ ಶಿಕ್ಷಣ ಮಂಗಳೂರಿನ ಸ್ಯೆಂಟ್ ಸೆಬಾಸ್ಟಿಯನ್ ಶಾಲೆ ಹಾಗೂ ಕೆನರಾ ಹೈಸ್ಕೂಲ್‌ನಲ್ಲಿ ನಡೆದರೆ, ಕಾಲೇಜು ವಿದ್ಯಾಭ್ಯಾಸ ಸೆಂಟ್ ಅಲೋಶಿಯಸ್ ಕಾಲೇಜಿನಲ್ಲಿ ನಡೆಯಿತು. ಉನ್ನತ ಶಿಕ್ಷಣಕ್ಕಾಗಿ ಮದರಾಸಿಗೆ ತೆರಳಿದ ಅವರು 1937ರಲ್ಲಿ ಬಿ.ಎಲ್. ಪದವಿಪಡೆದು ತಂದೆಯ ವೃತ್ತಿಯಾದ ವಕೀಲ ವೃತ್ತಿ ಪ್ರಾರಂಭಿಸಿ, ತಂದೆಯಂತೆ ಸಾರ್ವಜನಿಕ ಜೀವನಕ್ಕೆ ಧುಮುಕಿದರು. ಮಂಗಳೂರು ನಗರ ಸಭೆಯ ಸದಸ್ಯರಾಗಿ 1947ರಲ್ಲಿ ಆಯ್ಕೆಯಾದ ಅವರು 1952–1955ರ ವರೆಗೆ ನಗರ ಸಭೆಯ ಅಧ್ಯಕ್ಷರಾಗಿ ಅನೇಕ ಜನಹಿತ ಕಾರ್ಯಕೈಗೊಂಡರು. ಸ್ವಾತಂತ್ರ ಬಂದ ಹೊಸದಿನಗಳವು. ರಸ್ತೆಗಳ ಅಗಲೀಕರಣ, ಡಾಮರೀಕರಣಗಳಿಗೆ ಆದ್ಯತೆ ಕೊಟ್ಟರು. ಪ್ರತಿವಾರ್ಡ್‌ಗಳಲ್ಲಿ ವಾಚನಾಲಯ ಸ್ಥಾಪನೆ, ಆಟದ ಬಯಲುಗಳ ನಿರ್ಮಾಣ, ರೇಡಿಯೋ ಪೆವಿಲಿಯನ್ ನಿರ್ಮಾಣ ಮುಂತಾದ ಆ ಕಾಲಕ್ಕೆ ನವೀನವಾದ ವಿಚಾರಗಳನ್ನು ಜಾರಿಗೆ ತಂದರು. ನಗರ ಸಭೆಯ ವತಿಯಿಂದ ಹೆರಿಗೆ ಆಸ್ಪತ್ರೆ ಸ್ಥಾಪನೆ ಮಾಡಿದ್ದೆ ಅಲ್ಲದೆ ತಾನೇ ಖುದ್ದಾಗಿ ನಿಂತು ಮಲೇರಿಯಾ ಫೈಲೇರಿಯಾ (ಆನೆಕಾಲು) ಕಾಯಿಲೆಗಳ ನಿಯಂತ್ರಣಕ್ಕೆ ಜನಾಂದೋಲನ ಕೈಗೊಂಡರು. ದೂರದ ತುಂಬೆಯ ನೀರನ್ನು ಮಂಗಳೂರಿಗೆ ತರುವಲ್ಲಿ ಅಡಿಗರ ಭಗೀರಥ ಪ್ರಯತ್ನವಿದೆ. ಸರಕಾರದ ವಿಳಂಬನೀತಿಗೆ ಸೊಪ್ಪು ಹಾಕದೇ ಸಾರ್ವಜನಿಕರಿಂದ ಡಿಬೆಂಚರ್ ಮೂಲಕ ಹಣ ಸಂಗ್ರಹಿಸುವ ಸಾಹಸ ಮಾಡಿದರು ಹೀಗೆ ಇವತ್ತಿನ ಮಂಗಳೂರಿನ ಸರ್ವತೋಮುಖ ಬೆಳವಣಿಗೆಗೆ 60 ವರ್ಷಗಳ ಕೆಳಗೆ ಭದ್ರಬುನಾದಿ ಹಾಕಿದವರು ಕೆ.ಎಸ್.ಎನ್. ಅಡಿಗರು. ಅಡಿಗರು ದಕ್ಷಿಣ ಕನ್ನಡ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ 1966ರಲ್ಲಿ ಗೆದ್ದು ವಿಧಾನಪರಿಷತ್ ಸದಸ್ಯರಾದರು. ವಿಧಾನಪರಿಷತ್‌ನಲ್ಲಿ ಮೊನಚು ಮಾತು, ತೀಕ್ಷ್ಣ ವಿಚಾರಧಾರೆ, ಸ್ವಚ್ಛವಾದ ಕನ್ನಡ ನುಡಿ, ಅಸ್ಖಲಿತವಾದ ಮಾತುಗಾರಿಕೆಯಿಂದ ಅಡಿಗರು ಎಲ್ಲರ ಮೆಚ್ಚಿನವರಾದರು. ಶಿಕ್ಷಣ ಕ್ಷೇತ್ರಕ್ಕೂ

ಅಡಿಗರ ಕೊಡುಗೆ ಅಪಾರ. 1965ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಸಿಂಡೀಕೇಟ್ ಸದಸ್ಯರಾಗಿ ಆಯ್ಕೆಗೊಂಡರು. ಅವರ ಪ್ರಯತ್ನದ ಫಲವಾಗಿ ಮಂಗಳೂರಿಗೆ ಸ್ನಾತಕೋತ್ತರ ಕೇಂದ್ರವು ಲಭಿಸಿತು. ಮುಂದೆ ಅದೇ ಮಂಗಳ ಗಂಗೋತ್ರಿಯಾಗಿ ಕೋಣಾಜೆ ಪರಿಸರದಲ್ಲಿ ದೊಡ್ಡ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಲು ಕಾರಣ ವಾಯಿತು. 1973ರಲ್ಲಿ ನಡೆದ ಕಾಮನ್‌ವೆಲ್ತ್ ವಿಶ್ವವಿದ್ಯಾಲಯಗಳ ಸಮ್ಮೇಳನಕ್ಕೆ ಮೈಸೂರು ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಭಾಗವಹಿಸಿದ್ದು ಅವರ ಹೆಚ್ಚುಗಾರಿಕೆ. ಮಂಗಳೂರು ವಿಶ್ವವಿದ್ಯಾಲಯದ ಪ್ರಾರಂಭಿಕ ದಿನಗಳಲ್ಲಿ ಅಡಿಗರ ಮಾರ್ಗದರ್ಶನ ದೊರೆತದ್ದು ಉಲ್ಲೇಖಾರ್ಹ. ಮಣಿಪಾಲದ ಕಸ್ತೂರ್‌ಬಾ ಮೆಡಿಕಲ್ ಕಾಲೇಜು. ಸುರತ್ಕಲಿನ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾಗಿ ಕೂಡ ಕೆ.ಎಸ್.ಎನ್. ಅಡಿಗರು ಸೇವೆ ಸಲ್ಲಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಸೂರ್ಯನಾರಾಯಣ ಅಡಿಗರನ್ನು ನೆನೆಯು ವುದು ಮುಖ್ಯವಾಗಿ ನೆರೆ ಪರಿಹಾರ ಸಮಿತಿಯ ಅಧ್ಯಕ್ಷರಾದಾಗಿನ ಅವರ ಕಾರ್ಯ ವೈಖರಿಯಿಂದ. 1974 ರಲ್ಲಿ ದ.ಕ. ಜಿಲ್ಲೆ ನೆರೆಹಾವಳಿಯಿಂದ ತತ್ತರಿಸಿತು. ಅಡಿಗರ ಅಧ್ಯಕ್ಷತೆಯಲ್ಲಿ ಪರಿಹಾರ ಸಮಿತಿ ನೇಮಕವಾಯಿತು. ಸ್ವತಃ ಅಡಿಗರೇ ಅವಿರತವಾಗಿ ಜಿಲ್ಲೆಯಾದ್ಯಂತ ಸಂಚರಿಸಿ ನಿರಾಶ್ರಿತ ಕುಟುಂಬಗಳಿಗೆ ಆರ್ಥಿಕ ಸಹಾಯ, ಬಟ್ಟೆ ಬರೆ, ಜೀವನಾವಶ್ಯಕ ವಸ್ತುಗಳನ್ನು ನೀಡುವ ಮೂಲಕ 'ಜನಸೇವೆಯೇ ಜನಾರ್ಧನ ಸೇವೆ' ಎಂಬುದನ್ನು ಶ್ರುತಪಡಿಸಿದರು. ಹಾಗೆ ಜಿಲ್ಲೆಯ ಜನತೆಯ ಪ್ರೀತಿ ಆದರಗಳಿಗೆ ಅಡಿಗರು ಪಾತ್ರರಾದರು.

ಶ್ರೀ ಕೆ.ಎಸ್.ಎನ್. ಅಡಿಗರ ಹೆಸರು ಚಿರಸ್ಥಾಯಿಯಾಗಿ ತಳಕುಹಾಕಿ ಕೊಂಡಿರುವುದು ಕರ್ಣಾಟಕ ಬ್ಯಾಂಕಿನೊಂದಿಗೆ. ಅನೇಕ ಬ್ಯಾಂಕುಗಳ ಹುಟ್ಟಿಗೆ ಕಾರಣವಾಗಿರುವ ದಕ್ಷಿಣಕನ್ನಡ ಜಿಲ್ಲೆಯ ಪ್ರಮುಖ ಬ್ಯಾಂಕುಗಳಲ್ಲಿ ಕರ್ನಾಟಕ ಬ್ಯಾಂಕು ಒಂದು. 18-2-1924 ರಂದು ಜನ್ಮತಳೆದ ಈ ಬ್ಯಾಂಕಿನ ಸ್ಥಾಪಕ ನಿರ್ದೇಶಕರಲ್ಲಿ ಅಡಿಗರ ತಂದೆಯವರೊಬ್ಬರು. ಹೀಗಾಗಿ ತಮ್ಮ 31ನೇ ವಯಸ್ಸಿನಲ್ಲೇ ಈ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆ ಆಗಿ 13 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಮುಂದೆ ಮತ್ತೆ 13 ವರ್ಷಗಳ ಅರೆಕಾಲಿಕ ಅಧ್ಯಕ್ಷರಾದರು ಅವರ ಅಧಿಕಾರ ಅವಧಿ ಯಲ್ಲಿ ಮೂರು ಬ್ಯಾಂಕುಗಳು ಕರ್ಣಾಟಕ ಬ್ಯಾಂಕಿನೊಂದಿಗೆ ವಿಲೀನಗೊಂಡವು. 1971 ರಲ್ಲಿ ಕರ್ಣಾಟಕ ಬ್ಯಾಂಕಿನ ಪೂರ್ಣಾವಧಿ ಅಧ್ಯಕ್ಷರಾಗಿ ಆಯ್ಕೆಯಾಗಿ ಇದಕ್ಕಾಗಿ ತಮ್ಮ ಶಾಸಕತ್ವವನ್ನು ಹಾಗೂ ವಕೀಲಿ ವೃತ್ತಿಯನ್ನು ತ್ಯಜಿಸಿದರು. ಇದು ಅಡಿಗರಿಗೆ ಬ್ಯಾಂಕಿನ ಮೇಲಿನ ಇರುವ ಪ್ರೀತಿ ತೋರಿಸುತ್ತದೆ. 8 ವರ್ಷಗಳ ಅಧಿಕಾರಾವಧಿಯಲ್ಲಿ ಬ್ಯಾಂಕಿಗೆ ಹೊಸ ದಿಕ್ಕನ್ನು ತೋರಿಸಿಕೊಟ್ಟರು. ನೇರ ಅಧಿಕಾರಿಗಳನ್ನು ನೇಮಿಸುವ ಮೂಲಕ ಹೊಸ ರಕ್ತ ಸೇರ್ಪಡೆಯಾಗುವಂತೆ ನೋಡಿಕೊಂಡರು. ಬ್ಯಾಂಕಿಗೆ ನೂತನ ಬೃಹತ್ ಪ್ರಧಾನ ಕಚೇರಿ ಕಟ್ಟಡವನ್ನು ನಗರದ ಕೇಂದ್ರ ಭಾಗದಲ್ಲಿ ಕಟ್ಟಿದರು.

ಪ್ರಾದೇಶಿಕ ಕಛೇರಿಗಳು ಅಸ್ತಿತ್ವಕ್ಕೆ ಬಂದವು. ಕರ್ನಾಟಕದ ಹೊರಗೆ ಬ್ಯಾಂಕಿನ ಅಸಂಖ್ಯೆ ಶಾಖೆಗಳನ್ನು ಪ್ರಾರಂಭಿಸಿದರು.


ಕರ್ಣಾಟಕ ಬ್ಯಾಂಕನ್ನು ರಾಜ್ಯದ ಜನತೆ ಅಡಿಗರ ಬ್ಯಾಂಕೆಂದೇ ಗುರುತಿಸುತ್ತಾರೆ. ಸಣ್ಣ ಹೋಟೆಲ್‌ಗಳಿಗೆ ಸಣ್ಣ ಕೃಷಿಕರಿಗೆ, ಸಣ್ಣ ವ್ಯಾಪಾರಸ್ಥರಿಗೆ, ಅಡಿಕೆ ಮಂಡಿಯವರಿಗೆ ಬ್ಯಾಂಕಿನ ಸಾಲವು ಹರಿಯುವಂತೆ ನೋಡಿಕೊಂಡರು. ಅಡಿಗರದ್ದು ಗಾಂಧಿಪ್ರಣೀತ ಅರ್ಥವ್ಯವಸ್ಥೆಗೆ ಬದ್ಧವಾದ ದೃಷ್ಟಿಕೋನ. ಬೇರೆ ಬ್ಯಾಂಕುಗಳು ಶ್ರೀಮಂತ ಉದ್ದಿಮೆದಾರರ ಪರವಾಗಿದ್ದರೆ ಅಡಿಗರು ಬ್ಯಾಂಕು ಸಾಮಾನ್ಯರಿಗೆ ಹತ್ತಿರವಾಗುವುದನ್ನೇ ನೋಡಿ ಕೊಂಡರು. ದೊಡ್ಡ ಬ್ಯಾಂಕುಗಳು ಕೃಷಿಕರ ಸಹಾಯಕ್ಕೆ ಬಾರದ ಸಂದರ್ಭದಲ್ಲಿ ಅಡಿಗರು ಬ್ಯಾಂಕಿನ ಸಾಲದ ಶೇ.29ರಷ್ಟನ್ನು ಕೃಷಿರಂಗಕ್ಕೆ ನೀಡಿದ್ದು ಆ ಕಾಲಕ್ಕೆ ಹೆಗ್ಗಳಿಕೆಯಾಗಿದ್ದಾಗಿತ್ತು. ಇದು ಬ್ಯಾಂಕಿನ ಪ್ರಗತಿಗೆ ಮಾರಕವಾದರೂ ಆ ಬಗ್ಗೆ ಚಿಂತಿಸಲಿಲ್ಲ. ಇದರಿಂದಾಗಿಯೇ ಸಾಮಾನ್ಯ ಜನರು ಅಡಿಗರನ್ನು ನೆನೆಯುತ್ತಾರೆ. ಅವರಿಗೆ ಅಂಕೆ ಸಂಖ್ಯೆಗಳಲ್ಲಿ ಬ್ಯಾಂಕು ದೊಡ್ಡದಾಗಿ ಮೆರೆಯುವುದು ಬೇಕಿರಲಿಲ್ಲ. ನಿಜವಾದ ಅರ್ಥದಲ್ಲಿ ಸೇವೆ ಸಲ್ಲಿಸಬೇಕಾಗಿತ್ತು.

ರಾಜಕೀಯ ಧುರೀಣರಿಗಂತೂ ಶ್ರೀ ಅಡಿಗರು ಅಚ್ಚುಮೆಚ್ಚಿನವರಾಗಿದ್ದರು. ಶ್ರೀ ಬಿ.ಡಿ. ಜತ್ತಿ, ಶ್ರೀ ನಿಜಲಿಂಗಪ್ಪ, ಶ್ರೀ ವೀರೇಂದ್ರ ಪಾಟೀಲರು, ಶ್ರೀ ದೇವರಾಜ ಅರಸು, ಶ್ರೀ ವೈಕುಂಠ ಬಾಳಿಗ, ಶ್ರೀ ಟಿ.ಎ. ಪೈ, ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಬ್ಲೆಸಿಯಸ್ ಡಿಸೋಜ, ಶ್ರೀ ಜನಾರ್ದನ ಪೂಜಾರಿ ಮುಂತಾದವರ ಒಡನಾಟ ಅಡಿಗರಿಗಿತ್ತು. ಸರಳ ಬದುಕು, ಅಪರಿಗ್ರಹಗುಣ, ಶಿಸ್ತುಬದ್ಧನಡೆ ನಿರರ್ಗಳವಾದ ಮಾತುಗಾರಿಕೆಯಿಂದ ರಾಜಕೀಯ ವಲಯದಲ್ಲಿ ಪಕ್ಷಾತೀತವಾಗಿ ಮೆಚ್ಚುಗೆಗೆ ಗುರಿಯಾಗಿದ್ದರು. ಎಲ್ಲರೂ ಮುನ್ನುಗುವ ಪೈಪೋಟಿಯಲ್ಲಿದ್ದಾಗ ಹಿಂದೆ ಸರಿದು ನಿಲ್ಲುವುದು ಇವರ ವೈಶಿಷ್ಟವೆಂದು ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಹೇಳಿದ ಮಾತು ಸರ್ವದಾ ಸತ್ಯ. ತಾನೇ ಬಯಸಿ ಬೇಡಿ ಪಡೆಯುವುದು ಇವರ ವ್ಯಕ್ತಿತ್ವಕ್ಕೆ ವಿರುದ್ಧ.

ಶ್ರೀ ಸೂರ್ಯನಾರಾಯಣ ಅಡಿಗರಿಗೆ ಸಾಹಿತಿಗಳ ಬಗ್ಗೆ ಅಪಾರ ಗೌರವ. 1941 ರಲ್ಲಿ ಸಹಲೇಖಕನಾಗಿ 'ಆಕಾಶವಾಣಿ' ಎಂಬ ಗ್ರಂಥ ರಚನೆಯನ್ನು ಮಾಡಿದ್ದರು. ಕನ್ನಡದ ಬಗ್ಗೆ, ಕರ್ನಾಟಕದ ಏಕೀಕರಣದ ಬಗ್ಗೆ ಶ್ರೀ ಅಡಿಗರ ದುಡಿಮೆ ಅಪಾರ. ಗಡಿನಾಡ ಕುರಿತಾದ ನಿಯೋಗದ ಸದಸ್ಯರಾಗಿ 2 ಬಾರಿ ದೆಹಲಿಗೆ ಪಯಣಿಸಿದ್ದೇ ಅಲ್ಲದೆ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಬಯಕೆ ಹೊಂದಿದ್ದರು. ಕಾಸರಗೋಡು ಜಿಲ್ಲೆಯಲ್ಲೂ ಅವರಿಗೆ ಅಪಾರ ಅಭಿಮಾನಿಗಳು ಇದ್ದರು. ಶಿವರಾಮ ಕಾರಂತ, ಹಾ.ಮಾ. ನಾಯಕ, ವಿ. ಸೀತಾರಾಮಯ್ಯ, ಎಸ್.ವಿ. ಪರಮೇಶ್ವರ ಭಟ್, ಕಯ್ಯಾರ್ ಕಿಞ್ಞಣ್ಣರೈ, ದೇ. ಜವರೇಗೌಡ, ಸೇವ ನೇಮಿರಾಜ ಮಲ್ಲ ಮುಂತಾದವರ

ಸಂಪರ್ಕ ಅವರಿಗಿತ್ತು. ಅವರ ಮೊಮ್ಮಗ ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಶ್ರೀ ಅರವಿಂದ ಅಡಿಗರು 2008 ರಲ್ಲಿ ತಮ್ಮ 'ವೈಟ್ ಟೈಗರ್'ಗಾಗಿ ಬೂಕರ್ ಪ್ರಶಸ್ತಿಯನ್ನು ಗಳಿಸಿ ಅಜ್ಜನ ಸಾಹಿತ್ಯ ಪ್ರೇಮಕ್ಕೆ ತಮ್ಮ ಕಾಣಿಕೆ ನೀಡಿರುವುದು ಉಲ್ಲೇಖನೀಯ. ಸ್ವಹಿತಾಸಕ್ತಿಯಿಂದ ವೇದಿಕೆಯ ಮೇಲೆ ವಿಜೃಂಭಿಸದೇ ಸೇವಾಮನೋಭಾವದಿಂದ ದುಡಿಯುತ್ತ ಜನತೆಯ ಕಷ್ಟಗಳಿಗೆ ಸ್ಪಂದಿಸುತ್ತಿದ್ದ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ತಮ್ಮ 75ನೇ ವಯಸ್ಸಿನಲ್ಲಿ 23-04-1989 ರಂದು ಇನ್ನಿಲ್ಲವಾದರು.

ಕೆ.ಎಸ್.ಎನ್. ಅಡಿಗರು ಗತಿಸಿ ಕಾಲು ಶತಮಾನವಾದರೂ ರಾಜ್ಯದ ಜನತೆ ಅದರಲ್ಲೂ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಜನತೆ ಅವರ ಒಳ್ಳೆಯ ಕಾರ್ಯಗಳನ್ನು ನೆನೆಸಿಕೊಳ್ಳುತ್ತಾರೆ. ಸಣ್ಣ ಹೋಟೆಲಿಗರ ಪಾಲಿಗೆ ಇವರು ಸದಾ ಸಹಾಯ ಹಸ್ತ ನೀಡುತ್ತಿದ್ದುದರಿಂದ ಒಂದು ಕಾಲಕ್ಕೆ ಕರ್ಣಾಟಕ ಬ್ಯಾಂಕು ಹೋಟಲಿಗರ ಬ್ಯಾಂಕೆಂದೇ ಕರೆಸಿಕೊಳ್ಳುತ್ತಿತ್ತು. ಡಾ॥ ಹಾ.ಮಾ. ನಾಯಕ್‌ರಂತೂ ಇವರ ಕನ್ನಡ ಪ್ರೀತಿಯನ್ನು ಹಾಗೂ ಬ್ಯಾಂಕಿನ ಪ್ರೀತಿಯನ್ನು ಥಳುಕು ಹಾಕಿ ಅಡಿಗರ ಸ್ವಭಾವ ವೈಶಿಷ್ಟ್ಯವನ್ನು ಹೊಗಳಿದ್ದಾರೆ. ಒಬ್ಬ ಸಜ್ಜನ ರಾಜಕಾರಣಿಯಾಗಿದ್ದ ಅಡಿಗರು ಎಲ್ಲ ಪಕ್ಷದವರಲ್ಲೂ ಎಲ್ಲ ಧರ್ಮದವರಲ್ಲೂ ಅಭಿಮಾನಿಗಳನ್ನು ಪಡೆದಿದ್ದರು. ಖಾಸಗಿ ರಂಗದ ಬ್ಯಾಂಕ್ ಒಂದರ ನೇತಾರರಾಗಿದ್ದು ಸಾರ್ವಜನಿಕರ ಉದ್ಧಾರದ ಕನಸು ಕಂಡ ಮಹನೀಯರೆಂದೇ ಅಡಿಗರನ್ನು ಗುರುತಿಸುತ್ತಾರೆ. ಶ್ರೀ ಕೆ.ಎಸ್.ಎನ್. ಅಡಿಗರು ಜನ್ಮ ತಳೆದು ನೂರು ತುಂಬಿದ ಈ ಸಂದರ್ಭದಲ್ಲಿ ರಾಜ್ಯದ ಜನತೆ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಅವರ ಒಳ್ಳೆಯ ಕಾರ್ಯಗಳನ್ನು ನೆನೆಸಿ ಕೊಳ್ಳುತ್ತಿದ್ದಾರೆ.



ಯಕ್ಷಚಿಂತನೆ, ಡಾ॥ ಆನಂದರಾಮ ಉಪಾಧ್ಯರು ಕರ್ನಾಟಕದ ಹೆಮ್ಮೆಯ ಕಲೆಯಾದ ಯಕ್ಷಗಾನ ನಡೆದು ಬಂದ ಹಾದಿಯ ಭವ್ಯತೆ, ವರ್ತಮಾನದ ಸ್ಥಿತಿಗತಿ ಮತ್ತು ಭವಿಷ್ಯದ ಸಾಧ್ಯತೆಗಳನ್ನು ಕುರಿತು ಬರೆದ ಸವಿವರ ಚಿಂತನೆಯ ಪ್ರಬಂಧಗಳನ್ನೊಳಗೊಂಡ ಅತ್ಯುಪಯುಕ್ತ ಕೃತಿ. ಯಕ್ಷಗಾನ ಪ್ರಯೋಗಗಳನ್ನು ಒಂದು ಖಚಿತವಾದ ಪರಿಪ್ರೇಕ್ಷ್ಯದಲ್ಲಿ ಗ್ರಹಿಸಬೇಕೆನ್ನುವವರಿಗೆ ಇದೊಂದು ಕಡ್ಡಾಯ ಓದಿನ ಕೃತಿ ಕೂಡ ಹೌದು. ಈ ಪುಸ್ತಕದ ಪ್ರಬಂಧಗಳು, ಸಂದರ್ಶನಗಳು ಉಪಾಧ್ಯಾಯರ ಮಾಧ್ಯಮ ಶ್ರದ್ಧೆಯನ್ನು ಮಾತ್ರವಲ್ಲ ಯಕ್ಷಗಾನ ಕಲೆಯ ಬಗ್ಗೆ ಅವರಿಗಿರುವ ತೀವ್ರ ಕಾಳಜಿಯನ್ನು ತೋರಿಸುವಂತಿವೆ. ಕೇವಲ ಅಕಾಡೆಮಿಕ್ ಆಸಕ್ತಿಗಿಂತ ಭಿನ್ನವಾದ ಕರುಳಬಳ್ಳಿ ಸಂಬಂಧವು ಈ ಕೃತಿಯ ವೈಚಾರಿಕ ಮತ್ತು ಭಾವಜಗತ್ತನ್ನು ನಿರ್ಮಿಸಿದೆ. ಇಂಥ ಉಪಯುಕ್ತ ಗ್ರಂಥದ ರಚನೆಗಾಗಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

– ಡಾ॥ ಎಚ್.ಎಸ್. ವೆಂಕಟೇಶಮೂರ್ತಿ

Design: Godavari

ಗೀತಾಂಜಲಿ ಪಬ್ಲಿಕೇಷನ್ಸ್

ನಂ. 60, 2ನೇ 'ಡಿ' ಅಡ್ಡರಸ್ತೆ, 2ನೇ ಹಂತ, 3ನೇ ಬ್ಲಾಕ್,
ನಾಗರಬಾವಿ, ಬೆಂಗಳೂರು–560 072.